ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ
ಸಂಖ್ಯೆ— ೪೨



ಶ್ರೀಮದಾದಿಕವಿವಾಲ್ಮೀಕಿ ವಿರಚಿತ

ಶ್ರೀ

ಆನಂದರಾಮಾಯಣಂ

ಮೂರನೆಯ ಭಾಗ

(ಸಂಸ್ಕೃತ ಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಯಾಗಕಾಂಡ (೧—೯ ಸರ್ಗಗಳು)
ವಿಲಾಸಕಾಂಡ (೧—೯ ಸರ್ಗಗಳು)
ಜನ್ಮಕಾಂಡ (೧—೯ ಸರ್ಗಗಳು)

ಅನುವಾದಕ :
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ
ಸಾಹಿತ್ಯ ವಿದ್ವಾನ್
ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

ಶ್ರೀ ಹನುಮಾನ್ ಪವರ್ ಪ್ರೆಸ್, ಮೈಸೂರು.
೧೯೪೭

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ— ೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಮೂರನೆಯ ಭಾಗ

(ಸಂಸ್ಕೃತ ಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಯಾಗಕಾಂಡ (೧—೯ ಸರ್ಗಗಳು)

ವಿಲಾಸಕಾಂಡ (೧—೯ ಸರ್ಗಗಳು)

ಜನ್ಮಕಾಂಡ (೧—೯ ಸರ್ಗಗಳು)

ಅನುವಾದಕ:

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

೧೯೪೭

॥ ಶ್ರೀರಸ್ತು ॥

ಪೀಠಿಕೆ

ಶ್ರೀಮದಾನಂದರಾಮಾಯಣವನ್ನು ಓದುಗರ ಅನುಕೂಲಕ್ಕೋಸ್ಕರವಾಗಿ ಭಾಗಗಳನ್ನಾಗಿ ಪ್ರಕಟಿಸಲು ಆರಂಭಿಸಿ "ಯಾತ್ರಾಕಾಂಡ, ಯಾಗಕಾಂಡ, ಜನ್ಮಕಾಂಡಗಳನ್ನು" ಸೇರಿಸಿ ಮೂರನೆಯ ಭಾಗವನ್ನಾಗಿ ಪ್ರಕಟಿಸಲಾಗಿದೆ.

ಈ ಭಾಗದಲ್ಲಿ ಶ್ರೀರಾಮನು ಯಾಗಮಾಡಲುದ್ದೇಶಿಸಿ ಅದಕ್ಕೆ ಬೇಕಾದ ಸಲಕರಣೆಗಳನ್ನು ಅಳವಡಿಸಿಕೊಂಡು ಯಾಗದ ಕುದುರೆಯನ್ನು ಭೂಪ್ರದಕ್ಷಿಣೆಗೆ ಬಿಡುವನು. ಆ ಕುದುರೆಯು ಹೋದ ಸ್ಥಳಗಳಲ್ಲೆಲ್ಲಾ ಅದರ ಅಂಗರಕ್ಷಕರೂ ಹೋಗಿ ಬರುವರು. ರಾಮನು ಯಜ್ಞವನ್ನು ಕೈಗೊಂಡಾಗ ದೇವತೆಗಳೆಲ್ಲರೂ ಬಂದು ಆ ಶ್ರೀರಾಮನನ್ನು ಸ್ತುತಿಸುವರು.

ಶ್ರೀರಾಮನು ಅನೇಕ ದಾನಗಳನ್ನು ಕೊಟ್ಟು ಎಲ್ಲರನ್ನೂ ತೃಪ್ತಿಪಡಿಸಿದ ವಿಷಯವು ಬಹು ಚೆನ್ನಾಗಿ ವರ್ಣಿತವಾಗಿದೆ. ವಸಿಷ್ಠನ ಮಾತಿನಂತೆ ಸೀತೆಯನ್ನು ಕೂಡ ದಾನಮಾಡುವನು.

ಶ್ರೀರಾಮನೇ ಪರಮಾತ್ಮನು ಎಂಬುದನ್ನು ಅಗಸ್ತ್ಯನು ಎಲ್ಲರಿಗೂ ಬೋಧಿಸುವುದು ಬಹು ಹೃದಯಂಗಮವಾಗಿದೆ. ಮತ್ತು ಆ ರಾಮನು ಸೀತೆಗೆ ದೇಹರಾಮಾಯಣವನ್ನು ಉಪದೇಶಿಸಿ ಅವಳ ಅಜ್ಞಾನವನ್ನು ನಾಶಪಡಿಸುವುದು ರಾಮಾಯಣದ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ.

ರಾಮನು ಪ್ರತಿದಿನವೂ ಮಾಡುವ ದಿನಚರ್ಯೆಯು ಎಲ್ಲರಿಗೂ ಆದರ್ಶಪ್ರಯವಾಗಿದೆ. ಸೀತೆಯು ತಾನು ರಾಣಿಯೆಂದು ಹೆಮ್ಮೆಪಡದೆ ಎಲ್ಲರಿಗೂ ಬೇಕಾದ ಪದಾರ್ಥಗಳನ್ನೊದಗಿಸುತ್ತ ಅವರ ಕಷ್ಟಸುಖಗಳಲ್ಲಿ ಭಾಗಿನಿಯಾಗಿರುತ್ತಿದ್ದುದು ಸ್ತ್ರೀಯರಿಗೆ ಗಮನಾರ್ಹವಾದ ವಿಷಯವಾಗಿದೆ.

ಶ್ರೀರಾಮನು ಏಕಪತ್ನೀವ್ರತದಲ್ಲಿದ್ದು ಅದಕ್ಕೆ ಎಷ್ಟು ಅಡ್ಡಿಬಂದರೂ ಬಿಡದಿರುವುದು ದಾರ್ಢ್ಯದ್ಯೋತಕವಾದ ವಿಷಯ. ಇವೆಲ್ಲವೂ ಮುಂದಕ್ಕೆ ಅವನಿಗೆ ಫಲವನ್ನು ಕೊಡುವುದು ಮನುಷ್ಯನ ಭಾವನೆಯಿಂದ ಗಮನಿಸ ತಕ್ಕುದಾಗಿದೆ.

ಲೋಪಾಮುದ್ರೆಗೂ ಸೀತೆಗೂ ನಡೆದ ಸಂವಾದದಲ್ಲಿ ಸೀತೆಯು ಅನೇಕ ಯುಕ್ತಿಗಳಿಂದ ಲೋಪಾಮುದ್ರೆಯನ್ನು ತಿರಸ್ಕರಿಸಿದರೂ "ರಾಮನಿಗೆ ಈ ಶಕ್ತಿಗಳೆಲ್ಲವೂ ಬಂದಿರುವುದು ನಿನ್ನ ಪತಿಯ ಅನುಗ್ರಹದಿಂದಲೇ ಎಂಬುದನ್ನು ನಾನು ಬಲ್ಲೆನು" ಎಂದು ಹೇಳುವುದು ಉತ್ತಮಕುಲದಲ್ಲಿ ಹುಟ್ಟಿದವರ ಸೌಜನ್ಯವನ್ನು ವ್ಯಕ್ತಪಡಿಸುವುದು.

ಸೀತೆಯ ಕೈಯ್ಯಿಂದ ರಾವಣನ ಹೆಬ್ಬೆರಳನ್ನು ಬರೆಸಿ ಕೈಕೇಯಿಯು ಅದಕ್ಕನುಗುಣವಾಗಿ ಅವನ ಆಕಾರವನ್ನು ಚಿತ್ರಿಸಿ ರಾಮನಲ್ಲಿ ದುರ್ಬೋಧನೆಯನ್ನು ಮಾಡುವುದು ದುಷ್ಟರು ಎಷ್ಟೇ ಅನುಬಂಧಿಗಳಾದರೂ ಅವರನ್ನು ದೂರವಿಡಬೇಕೆಂಬುದನ್ನು ವ್ಯಕ್ತಪಡಿಸುತ್ತದೆ.

ರಾಮನು ಲೋಕಾಪವಾದಕ್ಕೆ ಅಂಜಿ ಸೀತೆಯನ್ನು ಕಾಡಿಗೆ ಕಳುಹಿಸುವಾಗ ಅಲ್ಲಿ ಮೊದಲೇ ಆಕೆಗೆ ಅನುಕೂಲಗಳನ್ನು ಕಲ್ಪಿಸಿ "ಅಗಸನ ಮಾತಿನಂತೆ ಬಿಟ್ಟಿದ್ದೇನೆ." ಎಂದು ಜನರಿಗೆ ತೋರ್ಪಡಿಸುವಿಕೆಯು "ಜನಾಪವಾದವು ಬಹು ಪಾಪಕರವು" ಎಂದು ವ್ಯಕ್ತಪಡಿಸುವುದಾದರೂ ಅಷ್ಟು ತೃಪ್ತಿಕರವಾಗಿರುವುದಿಲ್ಲ.

ಕುಶಲವರು ಚಿಕ್ಕಪ್ಪಂದಿರೊಡನೆ ಯುದ್ಧಮಾಡಿ ಅವರನ್ನು ಗೆಲ್ಲುವುದು ವಾಲ್ಮೀಕಿಯ ಮಂತ್ರದ ಶಕ್ತಿಯನ್ನು ತೋರ್ಪಡಿಸುವುದಾದರೂ "ಅರ್ಹರಾದವರಲ್ಲಿ ಮಂತ್ರವು ಫಲಕಾರಿಯಾಗುವುದು" ಎಂಬುದನ್ನು ವ್ಯಕ್ತಪಡಿಸುತ್ತದೆ.

ರಾಮನು ತನ್ನ ಮಕ್ಕಳಿಗೂ ತಮ್ಮಂದಿರ ಮಕ್ಕಳಿಗೂ ಆಯಾಕಾಲದಲ್ಲಿ ಆಯಾ ಕರ್ಮಗಳನ್ನು ಮಾಡಿ ಎಲ್ಲರೊಡನೆಯೂ ಹಾಸ್ಯದಿಂದಿದ್ದುಕೊಂಡು ಆನಂದಪಡುತ್ತಿರುವುದು ಅವರ ಸೌಭ್ರಾತ್ರವನ್ನು ಎತ್ತಿತೋರಿಸುತ್ತದೆ.

ವಿಷಯಗಳು ಬೇರೆ ಬೇರೆಯ ಭಾಷೆಗಳಲ್ಲಿ ಅನೇಕವಾಗಿದ್ದು ಅವು ಹಳೆಯವಾಗಿದ್ದರೂ ನಮಗೆ ತಿಳಿಯದವುಗಳವೆ. ಇಂತಹವುಗಳು ಕನ್ನಡಿಗರಿಗೆ ತಿಳಿಯುವುದಕ್ಕೆ ಕನ್ನಡದಲ್ಲಿ ಅನುವಾದಿಸುವಂತೆ ಪ್ರೋತ್ಸಾಹಿಸುತ್ತಿರುವ ನಮ್ಮ ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರನು ಪುತ್ರಪೌತ್ರಾಭಿವೃದ್ಧಿಯನ್ನೂ ಇತರ ಸನ್ಮಂಗಳಗಳನ್ನೂ ದಯಪಾಲಿಸಿ ಕಾಪಾಡಲೆಂದು ಅನನ್ಯಮನಸ್ಕನಾಗಿ ಪ್ರಾರ್ಥಿಸುತ್ತೇನೆ.

ಮೈಸೂರು,
24—10—1947

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದಲ್ಲಿ ಯಾಗಕಾಂಡದ

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಪುಟಸಂಖ್ಯೆ

ಎಂಟನೆಯ ಸರ್ಗವು

ಒಂಭತ್ತನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದಲ್ಲಿ ವಿಲಾಸಕಾಂಡದ

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ನಾಲ್ಕನೆಯ ಸರ್ಗವು

ಐದನೆಯ ಸರ್ಗವು

ಆರನೆಯ ಸರ್ಗವು

ಪುಟಸಂಖ್ಯೆ

ಏಳನೆಯ ಸರ್ಗವು

ಎಂಟನೆಯ ಸರ್ಗವು

ಒಂಭತ್ತನೆಯ ಸರ್ಗವು

‖ ಶ್ರೀರಸ್ತು ‖

ಶ್ರೀಮದಾನಂದರಾಮಾಯಣದಲ್ಲಿ ಜನ್ಮಕಾಂಡದ ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

|| ಶ್ರೀಃ ||

|| ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ||

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

ತೃತೀಯಃ ಯಾಗಕಾಂಡಃ

|| ಪ್ರಥಮಸ್ಸರ್ಗಃ ||

|| ಶ್ರೀರಾಮ ಉವಾಚ ||

ಅಥ ರಾಮಸ್ಸಭಾಮಧ್ಯೇ ಏಕದಾ ಗುರುಮಬ್ರವೀತ್ ।
ಕುಂಭೋದರಮುನೇರ್ವಾಕ್ಯಾತ್ತೀರ್ಥಯಾತ್ರಾ ಮಯಾ ಕೃತಾ || ೧ ||

ಇದಾನೀಂ ತಸ್ಯ ವಾಕ್ಯೇನ ವಾಜಿಮೇಧಂ ಕರೋಮ್ಯಹಂ ।
ಯಜ್ಞೋಪಕರಣಾನಿ ತ್ವಂ ಲಕ್ಷ್ಮಣಾಯ ವದಸ್ವ ಹಿ || ೨ ||

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಮೊದಲನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ರಾಮನು ಸಭಾಮಧ್ಯದಲ್ಲಿ ಕುಳಿತಿರುವಾಗ ಗುರುವಾದ ವಸಿಷ್ಠನನ್ನು ಕುರಿತು ಅವನು ಇಂತೆಂದನು. ಎಲೈ ಗುರುವೇ ! ಕುಂಭೋದರನ ಹೇಳಿಕೆಯಂತೆ ತೀರ್ಥಯಾತ್ರೆಗಳನ್ನು ಮಾಡಿದೆನು.

೨. ಅವನ ಮಾತಿನಂತೆಯೇ ಈಗ ಅಶ್ವಮೇಧಯಾಗವನ್ನೂ ಮಾಡಬೇಕೆಂದಿದ್ದೇನೆ. ಯಜ್ಞಕ್ಕೆ ಆಗಬೇಕಾಗುವ ಪದಾರ್ಥಗಳನ್ನು ಲಕ್ಷ್ಮಣನಿಗೆ ಹೇಳು.

ಸುಮುಹೂರ್ತೇ ಶುಭೇ ಲಗ್ನೇ ಶ್ಯಾಮಕರ್ಣಾಂಘ್ರಿಪುಚ್ಛಕಃ |
ತುರಂಗೋ ದಿವ್ಯವಸ್ತ್ರಾದ್ಯೈರ್ಭೂಷಯಿತ್ವಾ ವಿಮುಚ್ಯತಾಂ ॥ ೩ ॥

ಪೃಥಿವೀಪ್ರದಕ್ಷಿಣಾರ್ಥಂ ಹಿ ತ್ವೃಷ್ಠೇಽಯುತಸಂಖ್ಯಯಾ |
ಸೇನಯಾ ಯಾತು ಶತ್ರುಘ್ನಸ್ಸುಮಂತ್ರೇಣ ಸಹಾಚಿರಾತ್ ॥ ೪ ॥

ತದ್ರಾಮವಚನಂ ಶ್ರುತ್ವಾ ವಸಿಷ್ಠೋ ಮುನಿಸತ್ತಮಃ |
ಜ್ಯೋತಿರ್ವಿತ್ಸಹಿತೋ ದೃಷ್ಟ್ವಾ ಸುಮುಹೂರ್ತಂ ಶುಭೋದಯಂ ॥ ೫ ॥

ಆಜ್ಞಾಪಯತ್ಸ ಸೌಮಿತ್ರಿಂ ಸಭಾಯಾಂ ರಾಮಸನ್ನಿಧೌ |
ಸೌಮಿತ್ರೇಽದ್ಯದಿನಾತ್ ಜ್ಞೇಯೋ ಮುಹೂರ್ತಸ್ಸಪ್ತಮೇಽಹನಿ ॥ ೬ ॥

ದೀಕ್ಷಾರ್ಥಂ ರಾಮಚಂದ್ರಸ್ಯ ವಾಜಿಮೇಧಾಖ್ಯಕರ್ಮಣಿ |
ರಾಮತೀರ್ಥೇ ಯಜ್ಞಭೂಮಿಶ್ಶೋಧನೀಯಾ ಹಲಾದಿಭಿಃ ॥ ೭ ॥

---

೩. ಒಳ್ಳೆಯ ಮುಹೂರ್ತದಲ್ಲಿ ಒಳ್ಳೆಯ ಲಗ್ನಗಳಲ್ಲಿ ಕಪ್ಪಾಗಿರುವ ಕಿವಿ ಮತ್ತು ಬಾಲಗಳುಳ್ಳ ಕುದುರೆಯನ್ನು ಬಟ್ಟೆ ಒಡವೆಗಳಿಂದ ಅಲಂಕರಿಸಿ ಬಿಟ್ಟು ಬಿಡು. ಅದು ಭೂಮಿಯನ್ನು ಪ್ರದಕ್ಷಿಣೆ ಮಾಡಲಿ.

೪. ಅದನ್ನು ರಕ್ಷಿಸಲು ಅದರ ಹಿಂದೆ ಹತ್ತುಸಾವಿರ ಸೈನಿಕರೊಡನೆ ಶತ್ರುಘ್ನನು ಸುಮಂತ್ರನನ್ನೂ ಕರೆದುಕೊಂಡು ಬೇಗನೆ ಹೋಗಲಿ ಎಂದನು.

೫. ರಾಮನ ಈ ಮಾತನ್ನು ಕೇಳಿ ವಸಿಷ್ಠನು ಜೋತಿಷ್ಕರೊಡನೆ ಒಳ್ಳೆಯ ದಿನವನ್ನೂ ಒಳ್ಳೆಯ ಮುಹೂರ್ತವನ್ನೂ ಹುಡುಕಿದನು.

೬. ಅನಂತರ ಸಭೆಯಲ್ಲಿ ರಾಮನೆದುರಿಗೆ ಲಕ್ಷ್ಮಣನನ್ನು ಕುರಿತು ಇಂತೆಂದು ಆಜ್ಞಾಪಿಸಿದನು. ಎಲೈ ಸೌಮಿತ್ರಿಯೇ ! ಇಂದಿಗೆ ಏಳನೆಯ ದಿನದಲ್ಲಿ ಒಳ್ಳೆಯ ಮುಹೂರ್ತವಿರುವುದು.

೭. ಅಶ್ವಮೇಧಯಜ್ಞಕ್ಕೋಸ್ಕರ ರಾಮಚಂದ್ರನು ದೀಕ್ಷೆಯನ್ನು ವಹಿಸಲು ರಾಮತೀರ್ಥದ ಬಳಿಯಲ್ಲಿ ಯಜ್ಞಭೂಮಿಯನ್ನು ನೇಗಿಲೇ ಮೊದಲಾದ ಆಯುಧಗಳಿಂದ ಉತ್ತು ಶೋಧಿಸಿರಿ.

ಸುವರ್ಣನಿರ್ಮಿತೈರ್ದಿವ್ಯೈಃ ಬ್ರಾಹ್ಮಣೈಸ್ಸಹ ಸತ್ವರಂ ।
ದಶಕ್ರೋಶಮಿತಾಯೋಧ್ಯಾ ಬಹಿಸ್ಸರ್ವತ್ರ ಲಕ್ಷ್ಮಣ ॥ ೮ ॥

ಸಮಾ ಶರ್ಕರಹೀನಾ ತು ಲಿಪ್ತಾ ಚಂದನಜಾತಿಭಿಃ ।
ಮಂಟಪಶ್ಚ ವಿಧಾತವ್ಯಸ್ಸರ್ವತ್ರಾಖಂಡಿತಶ್ಶುಭಃ ॥ ೯ ॥

ಜಂಬ್ವಾಮ್ರಾದಿನಗಾನಾಂ ಚ ಶಾಖಾಭಿಃ ಕುಸುಮೈರಪಿ ।
ಪಲ್ಲವೈಶ್ಚ ವಿಚಿತ್ರೈಶ್ಚ ಕದಲೀಸ್ತಂಭ ಮಂಡಿತಃ ॥ ೧೦ ॥

ಸಮಂತತಸ್ತೋರಣಾನಿ ಬಂಧನೀಯಾನಿ ಮಂಟಪೇ ।
ಬಂಧನೀಯಾಃ ಪುಷ್ಪಹಾರಾಃ ಫಲಾದ್ಯಾ ವಿಹಿತಾಶ್ಶುಭಾಃ ॥ ೧೧ ॥

ವೇದ್ಯಸ್ಸಹಸ್ರಶಃ ಕಾರ್ಯಾಸ್ಸುಧಾಗ್ರಾವೇಷ್ಟಿಕಾದಿಭಿಃ ।
ಕರಣೀಯಂ ಮಹತ್ಕುಂಡಂ ಮತ್ಸಾನ್ನಿಧ್ಯೇನ ಮೃಣ್ಮಯಂ ॥ ೧೨ ॥

---

೮. ಆ ನೇಗಿಲು ಚಿನ್ನದ ತುದಿಯುಳ್ಳದ್ದಾಗಿರಲಿ. ಬ್ರಾಹ್ಮಣರನ್ನೂ ಕರೆದುಕೊಂಡು ಹೋಗಿ ಶೋಧಿಸಿರಿ. ಅಯೋಧ್ಯೆಗೆ ಹೊರಗಡೆಯಲ್ಲಿ ಹತ್ತು ಕ್ರೋಶಗಳ ಆಗಲಕ್ಕೆ ಯಜ್ಞಭೂಮಿಯು ವಿಸ್ತಾರವುಳ್ಳದ್ದಾಗಿರಲಿ.

೯. ಆ ಪ್ರದೇಶವೆಲ್ಲವೂ ಹಳ್ಳತಿಟ್ಟುಗಳಿಲ್ಲದ್ದಾಗಿಯೂ, ಕಲ್ಲುಗಳಿಲ್ಲದಂತೆಯೂ ಶೋಧಿತವಾಗಿ ಚಂದನದ ನೀರನ್ನು ಚುಮುಕಿಸಿರಲಿ. ಎಲ್ಲಾ ಕಡೆಯುಲ್ಲಿಯೂ ಚೆನ್ನಾಗಿರುವ ಮಂಟಪವನ್ನು ಕಟ್ಟಿರಿ. ಅವು ದೊಡ್ಡ ದೊಡ್ಡದಾಗಿರಲಿ.

೧೦-೧೧. ನೇರಿಳೆ, ಮಾವು ಇವೇ ಮುಂತಾದ ಮರಗಳ ಕೊಂಬೆಗಳಿಂದ ಆ ಮಂಟಪವನ್ನು ಕಟ್ಟಿರಿ. ಹೂವಿನಿಂದಲೂ, ಚಿಗುರಿನಿಂದಲೂ, ಆ ಮಂಟಪವನ್ನು ಕಟ್ಟಬೇಕು. ಹೂವಿನ ಹಾರಗಳನ್ನು ಅಲ್ಲಲ್ಲಿ ಕಟ್ಟಿ ಫಲಗಳನ್ನೂ ಕಟ್ಟಿರಿ.

೧೨ ಇಟ್ಟಿಗೆ, ಸುಣ್ಣ, ಕಲ್ಲುಗಳಿಂದ ಸಾವಿರಾರು ವೇದಿಕೆ (ಜಗಲಿ) ಗಳನ್ನು ನಿರ್ಮಿಸಿರಿ. ನನ್ನ ಎದುರಿಗೆ ಮಣ್ಣಿನ ಒಂದು ದೊಡ್ಡ ಕುಂಡವನ್ನು ಮಾಡಿರಿ.

ಕುಂಡೋಪರಿ ಮಹತ್ಕಾರ್ಯಂ ಗೋಮುಖಂ ಚ ಮನೋರಮಂ ।
ಖಾದಿರಸ್ಯ ವಿಚಿತ್ರಂ ಹಿ ವಸೋರ್ಧಾರಾರ್ಥಮುತ್ತಮಂ ॥ ೧೩ ॥

ಸಿತರಕ್ತಾಸಿತೈಶ್ಚೈವ ನೀಲಪಿತಾದಿಭಿಶ್ಶುಭೈಃ ।
ನಾನಾದೃಷದಚೂರ್ಣೈಶ್ಚ ಹ್ಯುಪಧಾತುವಿನಿರ್ಮಿತೈಃ ॥ ೧೪ ॥

ನಾನಾವರ್ಣೈರ್ವಿಲೇಖ್ಯಾನಿ ಸ್ವಸ್ತಿಕಾನಿ ಸಮಂತತಃ ।
ಕಮಲಾನಿ ವಿಚಿತ್ರಾಣಿ ತಥಾಹ್ಯಷ್ಟದಲಾನಿ ಚ ॥ ೧೫ ॥

ಶಂಖಚಕ್ರಗದಾಪದ್ಮವಲ್ಲಯಶ್ಚ ಸಹಸ್ರಶಃ ।
ಕುಸುಮಾನಿ ವಿಕೀರ್ಣಾನಿ ಯಜ್ಞಭೂಮ್ಯಾಂ ಸಮಂತತಃ ॥ ೧೬ ॥

ಚತುರ್ವಿಂಶಚ್ಛುಭಾಃ ಕಾರ್ಯಾ ಯಜ್ಞಸ್ತಂಭಾ ಮಹೋಚ್ಛ್ರಿತಾಃ ।
ವಿನಿರ್ಮಿತಾಸ್ಸುವರ್ಣೇನ ಮುಕ್ತಾಹಾರವಿಗುಂಫಿತಾಃ ॥ ೧೭ ॥

---

೧೩. ಕುಂಡದಮೇಲೆ ದೊಡ್ಡದಾಗಿರುವಂತೆ ಒಂದು ಗೋಮುಖವನ್ನು ರಚಿಸಿರಿ. ತುಪ್ಪವನ್ನು ಧಾರೆಯಾಗಿ ಸುರಿಯುವಂತೆ ಹಾಕಲು ಕಗ್ಗಲಿಯ ಮರದಲ್ಲಿ ಗೋಮುಖಗಳನ್ನು ಮಾಡಿರಿ.

೧೪-೧೫. ಬಿಳುಪು, ಕೆಂಪು, ಕಪ್ಪು, ನೀಲಿ, ಹಳದಿ ಮುಂತಾದ ಕಲ್ಲಿನ ಚೂರ್ಣಗಳಿಂದಲೂ, ಗೈರಿಕಾದಿಧಾತುವಿನ ಚೂರ್ಣಗಳಿಂದಲೂ ನಾನಾ ವರ್ಣಗಳಿರುವಂತೆ ಸ್ವಸ್ತಿಕ ಭದ್ರಾದಿಗಳನ್ನು ನಿರ್ಮಿಸಿರಿ. ಎಂಟು ದಳಗಳುಳ್ಳ ಕಮಲಗಳನ್ನೂ ಆ ಚೂರ್ಣದಿಂದ ನಿರ್ಮಿಸಿರಿ.

೧೬. ಶಂಖ, ಚಕ್ರ, ಗದೆ, ಪದ್ಮಗಳಿಂದ ಕೂಡಿದ ರಂಗೋಲಿಯ ಸಾಲುಗಳನ್ನು ಉದ್ದಕ್ಕೂ ಸಾವಿರಾರು ಕಡೆ ನಿರ್ಮಿಸಿರಿ. ಹೂವುಗಳನ್ನು ತಂದು ಯಜ್ಞಭೂಮಿಯಲ್ಲಿ ಎಲ್ಲಾ ಕಡೆಗೂ ಎರಚಿರಿ.

೧೭. ಇಪ್ಪತ್ತನಾಲ್ಕು ಯೂಪಕಂಬಗಳನ್ನು ಉದ್ದವಾಗಿ ಚೆನ್ನಾಗಿರುವಂತೆ ನಿರ್ಮಿಸಿರಿ. ಅವುಗಳನ್ನು ಚಿನ್ನದಿಂದಲೇ ಮಾಡಿಸಿ ಮುತ್ತಿನಿಂದ ಅಲಂಕರಿಸಿರಿ.

ಚಿತ್ರತಸ್ಸರ್ವತೋಭದ್ರಂ ಕುಂಡಮಧ್ಯೇಶ್ವದೈವತಂ ।
ಲೇಖನೀಯಂ ತಥಾ ಕುಂಡಂ ನಾನಾವರ್ಣೈರ್ವಿಚಿತ್ರಿತಂ ॥ ೧೮ ॥

ಕಾರ್ಯಂ ಕಾರ್ಯಾಣಿ ಪಾತ್ರಾಣಿ ಯಜ್ಞಾರ್ಥಂ ಮಮ ಪಶ್ಯತಃ ।
ಹೈಮಾಃ ಕಿಲೋಪಕರಣಾ ವರುಣಸ್ಯ ಯಥಾಧ್ವರೇ ॥ ೧೯ ॥

ಆಸನಾನಿ ಋಷೀಣಾಂ ಚ ನಿದ್ರಾರ್ಥಂ ಚ ಸಹಸ್ರಶಃ ।
ವಾಸೋಗೇಹಾನಿ ಕಾರ್ಯಾಣಿ ತೃಣೈಃ ಪರ್ಣೈಶ್ಚ ಖರ್ಪರೈಃ ॥ ೨೦ ॥

ಪಾಕಶಾಲಾ ವಿಧಾತವ್ಯಾಃ ಕಾರ್ಯಾ ಶಾಲಾಶನಸ್ಯ ಚ ।
ಋಷಿಶಾಲಾ ವಿಧಾತವ್ಯಾಃ ಸ್ತ್ರೀಶಾಲಾಶ್ಚ ಶುಭಾವಹಾಃ ॥ ೨೧ ॥

ಯಜ್ಞೋಪಕರಣಾನಾಂ ಚ ಶಾಲಾ ಪರಮಸುಂದರಾ ।
ಸಭಾ ಕಾರ್ಯಾ ನೃಪಾಣಾಂ ಚ ವರವಸ್ತ್ರೈರ್ವಿಚಿತ್ರಿತಃ ॥ ೨೨ ॥

---

೧೮. ಕುಂಡಮಧ್ಯದಲ್ಲಿ ಅಶ್ವದೈವತಾಕವಾದ ಸರ್ವತೋಭದ್ರವನ್ನು ಚಿತ್ರವಿಚಿತ್ರವಾದ ಬಣ್ಣಗಳಿಂದ ಬರೆಯಿರಿ. ಆ ಕುಂಡವೆಲ್ಲವನ್ನೂ ಬಗೆ ಬಗೆಯ ಬಣ್ಣಗಳಿಂದ ಪೂಸಿ ಚಿತ್ರವಾಗಿ ಮಾಡಿರಿ.

೧೯. ಯಜ್ಞಕ್ಕೆ ಬೇಕಾದ ಪಾತ್ರೆಗಳನ್ನು ನನ್ನ ಎದುರಿಗೆ ಮಾಡಿರಿ. ವರುಣನು ತನ್ನ ಯಜ್ಞದಲ್ಲಿ ಮಾಡಿಕೊಂಡಿದ್ದಂತೆ ನಮ್ಮ ಯಜ್ಞದಲ್ಲಿಯೂ ಚಿನ್ನದಿಂದಲೇ ಉಪಕರಣ ಪದಾರ್ಥಗಳನ್ನು ಮಾಡಬೇಕು.

೨೦–೨೧. ಋಷಿಗಳಿಗೆ ಕುಳಿತುಕೊಳ್ಳಲು ಆಸನಗಳನ್ನು ಮಾಡಿರಿ. ಅವರು ಮಲಗಲು ಸಾವಿರಾರು ಡೇರೆಗಳನ್ನು ಹಾಕಿಸಿರಿ. ಹುಲ್ಲಿನಿಂದಲೂ, ಎಲೆಗಳಿಂದಲೂ, ಹೆಂಚುಗಳಿಂದಲೂ ಅಡಿಗೆ ಮನೆಗಳನ್ನೂ ಊಟದ ಮನೆಗಳನ್ನೂ ಮಾಡಿರಿ. ಋಷಿಗಳು ಇರುವುದಕ್ಕೂ ಸ್ತ್ರೀಯರು ಇರುವುದಕ್ಕೂ ಬೇರೆ ಬೇರೆಯಾಗಿ ಮನೆಗಳನ್ನು ಮಾಡಿರಿ.

೨೨. ಯಜ್ಞಶಾಲೆಯೂ ಉಪಕರಣಶಾಲೆಯೂ ಪರಮ ಸುಂದರವಾಗಿರಲಿ ರಾಜರ ಸಭಾಶಾಲೆಯನ್ನು ಉತ್ತಮವಾದ ಬಟ್ಟೆಗಳಿಂದ ಚಿತ್ರವಿಚಿತ್ರವಾಗಿ ಮಾಡಿರಿ.

ಆಸನಾರ್ಥಂ ಮಹಾರ್ಹಾಣಿ ವಸ್ತ್ರಾಣಿ ಚ ಸಮಂತತಃ ।
ಆಸ್ತೀರ್ಯಾಣಿ ತಥಾ ರಾಜಪೃಷ್ಠಭಾಗಾಶ್ರಯಾಣಿ ಚ ॥ ೨೩ ॥

ಪಕ್ಷಿಪಿಚ್ಛೈಸ್ಸುಕಾರ್ಪಾಸಭೇದೈಸ್ಸಂಪೂರಿತಾನಿ ಹಿ ।
ಕಶಿಪೂಪಬರ್ಹಣಾನಿ ವಿಚಿತ್ರಾಣಿ ಮಹಾಂತಿ ಚ ॥ ೨೪ ॥

ಸ್ಥಾಪನೀಯಾನಿ ಸದಸಿ ಮಹಾರ್ಹಾಣಿ ತು ಲಕ್ಷ್ಮಣ ।
ಸ್ಥಾಪನೀಯಾನಿ ಪಾನಾರ್ಥಂ ಪಾತ್ರಾಣಿ ವಿವಿಧಾನಿ ಚ ॥ ೨೫ ॥

ನಾನಾರಸೈಃ ಪೂರಿತಾನಿ ತಥಾ ಪಕ್ವಫಲಾದಿಭಿಃ ।
ನಾನಾಸುಗಂಧದ್ರವ್ಯೈಶ್ಚ ರಾಗೈರ್ನಾನಾವಿಧೈರಪಿ ॥ ೨೬ ॥

---

೨೩. ಎಲ್ಲರೂ ಕುಳಿತುಕೊಳ್ಳುವಂತೆ ಎಲ್ಲಾ ಕಡೆಯಲ್ಲಿಯೂ ಬಟ್ಟೆಗಳನ್ನು (ಜಮಖಾನೆಗಳನ್ನು) ಹಾಸಿರಿ. ಅಂತೆಯೇ ರಾಜರು ಕುಳಿತುಕೊಳ್ಳುವುದಕ್ಕೆ ಅವರಿಗೆ ಅರ್ಹವಾದ ರತ್ನಗಂಬಳಿಗಳನ್ನು ಹಾಸಿರಿ.

೨೪. ಆ ಆಸನಗಳು ಹಕ್ಕಿಗಳ ತುಪ್ಪಟವನ್ನೂ ಒಳ್ಳೆಯ ದೂದಿಹತ್ತಿಯನ್ನೂ ತುಂಬಿ ಮಾಡಿದುವುಗಳಾಗಿರಲಿ. ಅವುಗಳಿಗೆ ತಕ್ಕಂತೆ ದಿಂಬುಗಳೂ ಮಗ್ಗುಲು ಹಾಸಿಗೆಯೂ ಸಿದ್ಧಪಡಿಸಿರಲಿ. ಅವೂ ಕೂಡ ಚಿತ್ರವಿಚಿತ್ರವಾಗಿಯೂ ದೊಡ್ಡವಾಗಿಯೂ ಇರಲಿ.

೨೫. ಇಂತಹ ಉತ್ತಮವಾದ ದಪ್ಪವಾದ ಆಸನಗಳನ್ನು ಸಭೆಯಲ್ಲಿ ಹಾಕಿರಬೇಕು. ನೀರನ್ನು ಕುಡಿಯುವ ಬಗೆ ಬಗೆಯ ಪಾತ್ರೆಗಳನ್ನು ಅಲ್ಲಲ್ಲಿ ಸಿದ್ಧಮಾಡಿಟ್ಟಿರಲಿ.

೨೬. ಅವುಗಳಲ್ಲಿ ಸನ್ನಿವೇಶಗಳಿಗೆ ತಕ್ಕಂತೆ ನೀರು ಪಾನಕ ಮುಂತಾದುವುಗಳನ್ನು ತುಂಬಿಯೂ ಹಣ್ಣುಗಳನ್ನು ತುಂಬಿಯೂ ಇಟ್ಟಿರಲಿ. ಕೆಲವು ಪಾತ್ರೆಗಳಲ್ಲಿ ಸುಗಂಧ ದ್ರವ್ಯಗಳನ್ನೂ ತುಂಬಿರಲಿ. ಮತ್ತೆ ಕೆಲವುಗಳಲ್ಲಿ ಬಣ್ಣಗಳನ್ನು ತುಂಬಿ ಇಟ್ಟಿರಲಿ.

ಮದ್ಯೈರ್ವಿಚಿತ್ರೈರ್ಮಧುರೈಸ್ತಥಾ ಮೋದಕವಸ್ತುಭಿಃ ।
ನಾನಾಸುಗಂಧತೈಲೈಶ್ಚ ಕಾಚಕುಂಭಾಸ್ಸಹಸ್ರಶಃ ॥ ೨೭ ॥

ಸ್ಥಾಪನೀಯಾಶ್ಚಂದನೈಶ್ಚ ಸುಗಂಧೈರಕ್ಷತಾದಿಭಿಃ ।
ನಾನೋಪಸ್ಕರಯುಕ್ತಾನಾಂ ತಾಂಬೂಲಾನಾಂ ಸಹಸ್ರಶಃ ॥ ೨೮ ॥

ಸ್ಥಾಪನೀಯಾನಿ ಪಾತ್ರಾಣಿ ಚಾಮರಾಣಿ ಸಹಸ್ರಶಃ ।
ವ್ಯಂಜನಾನಿ ವಿಚಿತ್ರಾಣಿ ತಥಾದರ್ಶಾ ವಿಚಿತ್ರಿತಾಃ ॥ ೨೯ ॥

ಸ್ಥಾಪನೀಯಾಶ್ಚ ಕ್ರೀಡಾರ್ಥಂ ಕ್ರೀಡೋಪಕರಣಾನಿ ಚ ।
ಸ್ಥಾಪನೀಯಾನಿ ಸದಸಿ ನೃಪಾಣಾಂ ಚಿತ್ರಿತಾನಿ ಚ ॥ ೩೦ ॥

ವೃತಾಪತ್ರಸಂಭವಾಃ ಕಾರ್ಯಾಃ ಶತಶಃ ಪುಷ್ಪವಾಟಿಕಾಃ ।
ಜಲಯಂತ್ರಾಣಿ ಕಾರ್ಯಾಣಿ ಸರ್ವತ್ರ ವಿವಿಧಾನಿ ಚ ॥ ೩೧ ॥

---

೨೭. ನಾನಾಬಗೆಯ ಮಧ್ಯಗಳನ್ನು ಕೆಲವಲ್ಲಿ ತುಂಬಿಯೂ ಕೆಲವುಗಳಲ್ಲಿ ಮಧುರವಾದ ಮದ್ಯಗಳನ್ನು ತುಂಬಿಯೂ ಕೆಲವುಗಳಲ್ಲಿ ಮೋದಕವಸ್ತುಗಳನ್ನು ತುಂಬಿಯೂ ಇಟ್ಟಿರಲಿ. ಬಗೆ ಬಗೆಯಾದ ಸುಗಂಧದ್ರವ್ಯಗಳನ್ನು ತುಂಬಿ ಗಾಜಿನ ಸೀಸೆಗಳನ್ನೂ ಅಲ್ಲಲ್ಲಿ ಇಟ್ಟಿರಲಿ.

೨೮. ಸುಗಂಧಗಳನ್ನೂ, ಚಂದನಗಳನ್ನೂ, ಅಕ್ಷತೆಗಳನ್ನೂ ತುಂಬಿರುವ ಪಾತ್ರೆಗಳನ್ನು ಅಲ್ಲಲ್ಲಿರಿಸಿರಿ. ತಾಂಬೂಲವನ್ನು ಹಾಕಿಕೊಳ್ಳಲು ಬೇಕಾದ ಪದಾರ್ಥಗಳನ್ನು ತುಂಬಿದ ಪಾತ್ರೆಗಳನ್ನು ಅಲ್ಲಿಡಿರಿ.

೨೯. ಸಾವಿರಾರು ಚಾಮರಗಳನ್ನು ತಂದು ಅಲ್ಲಿ ಇಡಿರಿ. ಅನೇಕ ಸಾವಿರ ಬೀಸಣಿಗೆಗಳನ್ನು ತಂದು ಅಲ್ಲಿ ಇಡಿರಿ. ಅನೇಕ ಕನ್ನಡಿಗಳನ್ನೂ ಅಲ್ಲಲ್ಲಿ ಇಡಿರಿ.

೩೦. ಆ ಸಭೆಯಲ್ಲಿ ಬೇಕಾದವರು ಆಟವಾಡಲು ಆಟದ ಸಾಮಾನು ಗಳನ್ನು ಅಲ್ಲಲ್ಲಿ ಇಡಿರಿ. ರಾಜರ ಚಿತ್ರಗಳನ್ನು ಆ ಸದಸ್ಸಿನಲ್ಲಿ ಅಲ್ಲಲ್ಲಿ ತಂದಿಡಿರಿ.

೩೧. ಹೂವಿನ ಕುಂಡಗಳನ್ನು ತಂದು ಎಲ್ಲಾ ಜಾಗದಲ್ಲಿಯೂ ಇಡಿರಿ. ಎಲ್ಲಾ ಕಡೆಯಲ್ಲಿಯೂ ನಾನಾಬಗೆಯಾದ ನಲ್ಲಿಗಳನ್ನಿರಿಸಿರಿ.

ನಾನಾಚಿತ್ರವಿಚಿತ್ರಾಣಿ ವಯಸಾಂ ಪಂಜರಾಣ್ಯಭಾಃ ।
ಹೇಮರತ್ನಮೌಕ್ತಿಕೈಶ್ಚ ಪ್ರವಾಳೈರ್ವಸನೈರ್ವರೈಃ ॥ ೩೨ ॥

ವಿಭೂಷಿತಾಃ ಕಾಮನೀಯಾಸ್ತೋಯಾನ್ನಾದ್ಯೈಃ ಪ್ರಪೂರಿತಾಃ ।
ಮಂಟಪೇಷು ಬಂಧನೀಯಾ ನರ್ತಿತವ್ಯೋಪ್ಸರೋಗಣಃ ॥ ೩೩ ॥

ಧೂಪಯಂತು ಸುಧೂಪಾಶ್ಚ ಸುಗಾಯಂತು ಹಿ ಗಾಯಕಾಃ ।
ವಾದನೀಯಾನಿ ವಾದ್ಯಾನಿ ಬಹೂನಿ ವಿವಿಧಾನಿ ಚ ॥ ೩೪ ॥

ಪೂಜೋಪಕರಣಾದ್ಯೈಶ್ಚ ಪಾತ್ರಾಣಿ ಪೂರಿತಾನಿ ಹಿ ।
ಪೃಥಕ್ಪೃಥಕ್ ಸಭಾಸ್ವೇವ ಸ್ಥಾಪನೀಯಾನಿ ಲಕ್ಷ್ಮಣ ॥ ೩೫ ॥

ತಥಾ ಋಷಿಸಭಾಯಾಂ ತು ದರ್ಭಾಶ್ಚ ಸಮಿಧಸ್ತಥಾ ।
ದಂಡಾಃ ಕಮಂಡಲುಯುತಾಃ ಸ್ಥಾಪನೀಯಾಸ್ಸಹಸ್ರಶಃ ॥ ೩೬ ॥

೩೨–೩೩. ಚಿತ್ರವಿಚಿತ್ರವಾದ ಪಕ್ಷಿಗಳನ್ನಿಟ್ಟ ಪಂಜರಗಳನ್ನು ಅಲ್ಲಲ್ಲೇ ಇಡಿರಿ. ಚಿನ್ನ, ರತ್ನ, ಮುತ್ತು ಬಟ್ಟೆ, ಹವಳಗಳಿಂದ ಅವು ಭೂಷಿತವಾಗಿರಲಿ. ಅನ್ನವನ್ನೂ ನೀರನ್ನೂ ಅದರ ಬಳಿಯಲ್ಲಿ ಸಮೃದ್ಧಿಯಾಗಿಟ್ಟಿರಲಿ. ಮಂಟಪಗಳಲ್ಲಿ ಸೂಳೆಯರು ಕುಣಿಯುತ್ತಿರಲಿ.

೩೪. ಒಳ್ಳೆಯ ಧೂಪಗಳ ಹೊಗೆಯನ್ನು ಹಾಕಿರಲಿ. ಹಾಡುವವರು ಹಾಡುತ್ತಿರಲಿ. ವಿಧ ವಿಧವಾದ ಅನೇಕ ವಾದ್ಯಗಳನ್ನೂ ಬಾಜಿಸುತ್ತಿರಲಿ.

೩೫–೩೬. ಪೂಜೆಗೆ ಬೇಕಾದ ಪದಾರ್ಥಗಳನ್ನು ಬೇರೆ ಬೇರೆ ಪಾತ್ರೆಗಳಲ್ಲಿ ತುಂಬಿ ಅಲ್ಲಲ್ಲಿಯೇ ಇಟ್ಟಿರಬೇಕು. ಅಂತೆಯೇ ಋಷಿಗಳ ಸಭೆಯಲ್ಲಿ ದರ್ಭೆಗಳನ್ನೂ ಸಮಿತ್ತುಗಳನ್ನೂ ದಂಡಕೋಲುಗಳನ್ನೂ ಕಮಂಡಲುಗಳನ್ನೂ ಸಾವಿರಗಟ್ಟಲೆಯಲ್ಲಿ ಇಟ್ಟಿರಬೇಕು.

ಬರ್ಹಿರ್ವಾಸಾಂಶ್ಚ ಕೌಪೀನಾನ್ ವಲ್ಕಲಾನ್ಯಜಿನಾನಿ ಚ ।
ಪೂಜಾದ್ರವ್ಯಾಣಿ ಹವ್ಯಾನಿ ಜಲಕುಂಭಾಸ್ಸಹಸ್ರಶಃ ॥ ೩೭ ॥

ಶೌಚಾರ್ಥಂ ಮೃತ್ತಿಕಾಶ್ಶುದ್ಧಾ ದಂತಕಾಷ್ಠಾನಿ ಪಾದುಕಾಃ ।
ಗೈರಿಕಾ ಮುಖಶುದ್ಧ್ಯರ್ಥಂ ನಾನಾವಸ್ತೂನಿ ಕಲ್ಪಯ ॥ ೩೮ ॥

ತಥಾ ನಾರೀಸಭಾಯಾಂ ತು ಪೂಜಾಪಾತ್ರಾಣ್ಯನೇಕಶಃ ।
ಸೌಭಾಗ್ಯದ್ರವ್ಯಪೂರ್ಣಾನಿ ಸುಗಂಧೈಃ ಪೂರಿತಾನ್ಯಪಿ ॥ ೩೯ ॥

ವಾಯನಾನಿ ವಿಚಿತ್ರಾಣಿ ಸ್ಥಾಪನೀಯಾನಿ ಲಕ್ಷ್ಮಣ ।
ಕಬರ್ಯಃ ಕಜ್ಜಲಾನಾಂ ಚ ಪಾತ್ರಾಣಿ ಕುಂಕುಮಾನಿ ಚ ॥ ೪೦ ॥

ಕರಂಡಸ್ಥಾನಿ ರಮ್ಯಾಣಿ ಭೂಷಣಾನ್ಯುಜ್ಜ್ವಲಾನಿ ಚ ।
ಹರಿದ್ರಾದೀನಿ ವಸ್ತೂನಿ ಕಂಚುಕ್ಯೋ ವಸನಾನಿ ಚ ॥ ೪೧ ॥

೩೭-೩೮. ಮೇಲೆ ಹೊದಿಯುವ ಬಟ್ಟೆ, ಕೃಷ್ಣಾಜಿನ, ಪೂಜೆಯ ದ್ರವ್ಯಗಳು ಹವಿಸ್ಸು ನೀರಿನ ಚಂಬುಗಳು ಶೌಚಕ್ಕೋಸ್ಕರ ಮಣ್ಣು ಹಲ್ಲುಜ್ಜುವ ಕಡ್ಡಿಗಳು ಪಾದುಕೆಗಳು ಮುಖಶುದ್ಧಿಗೆ ಬೇಕಾದ ಗೈರಿಕವಸ್ತುಗಳು ಇನ್ನೂ ಬೇಕಾಗುವ ಇತರ ಪದಾರ್ಥಗಳು ಇವೆಲ್ಲವನ್ನೂ ಬಹುವಾಗಿ ಅಲ್ಲಿಟ್ಟಿರಲಿ.

೩೯-೪೦. ಹೆಂಗಸರ ಸಭೆಯಲ್ಲಿ ಅನೇಕವಾದ ಪೂಜಾಪಾತ್ರೆಗಳು ಸೌಭಾಗ್ಯ ದ್ರವ್ಯಗಳಿಂದ ತುಂಬಿದ ಪಾತ್ರೆಗಳು ಸುಗಂಧದಿಂದ ತುಂಬಿದ ಪಾತ್ರೆಗಳು ವಿಚಿತ್ರವಾದ ಬಾಗಿನಗಳು ಇವೆಲ್ಲವನ್ನೂ ಸಮೃದ್ಧಿಯಾಗಿ ಇಡಿಸಬೇಕು. ಚೌರಿಗಳು ಕಣ್ಣುಕಪ್ಪಿನ ಭರಣಿಗಳು ಕುಂಕುಮ ತುಂಬಿದ ಪಾತ್ರೆಗಳು ಇವುಗಳನ್ನು ಬಹುವಾಗಿ ಇಟ್ಟಿರಲಿ.

೪೧-೪೨. ಚೆನ್ನಾಗಿರುವ ಒಡವೆಗಳು ಅರಶಿನವನ್ನು ತುಂಬಿದ ಪಾತ್ರೆಗಳು ರವುಕೆಗಳು ಸೀರೆಗಳು ಬೀಸಣಿಗೆಗಳು ಚಾಮರಗಳು ಇವೆಲ್ಲವನ್ನೂ ಬಹುವಾಗಿ

ಸ್ಥಾಪನೀಯಾನಿ ವ್ಯಜನಚಾಮರಾದೀನಿ ಸಾದರಂ ।
ಸುಹೃದಾಂ ಲೇಖನೀಯಾನಿ ಪತ್ರಾಣಿ ಚ ಸಮಂತತಃ ॥ ೪೨ ॥

ರಾಮಮುದ್ರಾಂಕಿತಾನ್ಯದ್ಯ ತಥಾ ದೂತಾ ಮಹಾಜವಾಃ ।
ಜನಕಾಯ ಪ್ರೇಷಣೀಯಾಃ ಕೈಕೇಯನೃಪಸನ್ನಿಧೌ ॥ ೪೩ ॥

ಕೌಸಲ್ಯಾಯಾಸ್ಸುಮಿತ್ರಾಯಾಃ ಪಿತರೌ ಪ್ರತಿ ಲಕ್ಷ್ಮಣ ।
ಶ್ಯಾಮಕರ್ಣಶ್ಚ ಶ್ಯಾಂಮಾಂಘ್ರಿಶ್ಶ್ಯಾಮಪುಚ್ಛಸ್ಸಿತಶ್ಶುಭಃ ॥ ೪೪ ॥

ಮಹಾರ್ಹಾಭರಣೈರ್ವಸ್ತ್ರೈರ್ದಿವ್ಯವೀರಾಸನೇನ ಚ ।
ಶೋಭನೀಯಾಶ್ಚಾಮರಾದ್ಯೈರ್ಮುಕ್ತಾಹಾರೈರ್ಮನೋರಮೈಃ ॥ ೪೫ ॥

ಇಡಬೇಕು. ಸ್ನೇಹಿತರಿಗೆ ಕಾಗದ ಬರೆಯಲು ಕಾಗದವೇ ಮುಂತಾದುವುಗಳನ್ನು ಎಲ್ಲಾ ಕಡೆಯಲ್ಲಿಯೂ ಇರಿಸಿರಿ.

೪೩. ಸ್ನೇಹಿತರಿಗೆ ಎಲ್ಲಾ ಕಡೆಗೂ ಕಾಗದವನ್ನು ಬರೆಯಿರಿ. ಅವಕ್ಕೆಲ್ಲಾ ರಾಮನ ಮುದ್ರೆಯಿರಲಿ. ಕಾಗದಗಳನ್ನು ಬರೆದು ಬೇಗನೆ ಹೋಗುವ ದೂತರ ಕೈಯ್ಯಲ್ಲಿ ಕೊಟ್ಟು ಜನಕನಿಗೂ ಕೇಕಯರಾಜನಿಗೂ ಕಳುಹಿಸಿರಿ.

೪೪. ಕೌಸಲ್ಯೆಯ ಮತ್ತು ಸುಮಿತ್ರೆಯ ತಂದೆಯರಿಗೂ ಕಾಗದಗಳನ್ನು ಕಳುಹಿಸಿರಿ. ಒಂದು ಯಜ್ಞದ ಕುದುರೆಯನ್ನು ತರಬೇಕು. ಅದಕ್ಕೆ ಕಿವಿಗಳು ಕಪ್ಪಾಗಿರಬೇಕು. ಕಾಲುಗಳು ಕಪ್ಪಾಗಿರಬೇಕು. ಬಾಲವೂ ಕಪ್ಪಾಗಿರಬೇಕು. ಮೈಯೆಲ್ಲವೂ ಬೆಳ್ಳಗಿರಬೇಕು.

೪೫. ಅದನ್ನು ಉತ್ತಮವಾದ ಆಭರಣಗಳಿಂದ ಅಲಂಕರಿಸಬೇಕು. ವಸ್ತ್ರಗಳನ್ನು ಹೊದ್ದಿಸಬೇಕು. ಮೇಲುಗಡೆಗೆ ವೀರಾಸನದ ಆಸನವನ್ನು ಹಾಕಿ ಕಟ್ಟಿರಬೇಕು. ಚಾಮರಗಳನ್ನು ಕಟ್ಟಿ ಮುತ್ತಿನಹಾರಗಳನ್ನು ಹಾಕಿರಬೇಕು.

ಹೈಮೀಭಿಶ್ಶೃಂಖಲಾಭಿಶ್ಚ ವೇಣೀಬಂಧವಿಭೂಷಣೈಃ ।
ತಸ್ಯ ಫಾಲೇ ಹೇಮಪತ್ರಂ ಲೇಖನೀಯಂ ಸ್ಫುಟಾಕ್ಷರೈಃ ॥ ೪೬ ॥

ಕೋಸಲೇಂದ್ರಸ್ಯ ರಾಮಸ್ಯ ಯಜ್ಞಾಂಗತುರಗೋ ಹ್ಯಯಂ ।
ಜ್ಞೇಯಸ್ಸರ್ವೈರ್ನೃಪೈರ್ಮುಕ್ತಃ ಕರ್ತುಂ ಭೂಮ್ಯಾಃ ಪ್ರದಕ್ಷಿಣಾಂ ॥ ೪೭ ॥

ಯಸ್ಯಾಸ್ತಿ ಸಾರಂ ತೇನಾಶ್ವೋ ಬಂಧನೀಯೋಽಯಮುತ್ತಮಃ ।
ನೋ ಚೇತ್ಕೋಶಾಂಶ್ಚ ನೈರ್ಜಾನ್ ಹಿ ಪುರಸ್ಕೃತ್ಯ ಬಲೈಸ್ಸಹ ॥ ೪೮ ॥

ಸ್ವಕುಟುಂಬೈರ್ನಾಗರೈಶ್ಚ ತಥಾ ಜಾನಪದೈಸ್ಸಹ ।
ಆಗಂತವ್ಯಂ ನೃಪತಿಭಿರ್ಯಜ್ಞಾಂಗಾಶ್ವಾನುವರ್ತಿಭಿಃ ॥ ೪೯ ॥

ಯಜ್ಞಭೂಮಿರ್ಹ್ಯಯೋಧ್ಯಾಯಾಂ ಯುದ್ಧೈರ್ಜಿತ್ವಾ ಮಹೋದ್ಧತಾನ್ ।
ಏವಂ ಪತ್ರಂ ಬಂಧಯಿತ್ವಾ ಮುಕ್ತಾಮಣಿವಿಚಿತ್ರಿತೈಃ ॥ ೫೦ ॥

---

೪೬. ಚಿನ್ನದ ಸರಪಣಿಯನ್ನು ಹಾಕಿರಬೇಕು. ಕೇಸರಗಳನ್ನು ಜಡೆಯಾಗಿ ಕಟ್ಟಿ ಅಲಂಕರಿಸಿರಬೇಕು. ಚಿನ್ನದ ತಗಡಿನಲ್ಲಿ ಈ ಮುಂದೆ ಹೇಳುವಂತೆ ಬರವಣಿಗೆಯನ್ನು ಬರೆದು ಆದರ ಹಣೆಗೆ ಕಟ್ಟಿರಬೇಕು.

೪೭. ಇದು ಕೋಸಲರಾಜನಾದ ರಾಮನ ಯಜ್ಞದ ಕುದುರೆಯು. ಇದನ್ನು ಭೂಪ್ರದಕ್ಷಿಣೆಮಾಡಲು ಬಿಟ್ಟಿರುವನು. ಎಂಬುದಾಗಿ ರಾಜರೆಲ್ಲರೂ ತಿಳಿಯಿರಿ.

೪೮–೪೯. ಬಲವುಳ್ಳವನಾವನಾದರೂ ಸರಿಯೆ. ಈ ಕುದುರೆಯನ್ನು ಕಟ್ಟಬಹುದು. ಹಾಗೆ ಕಟ್ಟಲಾಗದಿದ್ದರೆ ರಾಜರು ತಮ್ಮಕೋಶಗಳನ್ನು ತೆಗೆದುಕೊಂಡು ಸೈನ್ಯಗಳನ್ನೂ ಕುಟುಂಬವನ್ನೂ ಪಟ್ಟಣಿಗರನ್ನೂ ಕರೆದುಕೊಂಡು ಈ ಯಜ್ಞದ ಕುದುರೆಯ ಹಿಂದೆ ಬರಬೇಕು.

೫೦–೫೧. ಕುದುರೆಯ ಹಿಂದೆ ಬರುವಾಗ ನಡುವೆ ಸಿಕ್ಕಿದವರನ್ನು ಯುದ್ಧದಲ್ಲಿ ಜಯಿಸಿ ಅನಂತರ ಅಯೋಧ್ಯೆಯಲ್ಲಿರುವ ಯಜ್ಞಭೂಮಿಗೆ ಬರಬೇಕು. ಈ ರೀತಿಯಾಗಿ ಪತ್ರವನ್ನು ಬರೆದು ಮುತ್ತಿನ ಮಣಿಗಳನ್ನು

ಅವತಂಸ್ತೈಶ್ಚ್ಯೋಭಯಿತ್ವಾ ಸಿದ್ಧಃ ಕಾರ್ಯಶ್ಚ ಮಂಟಪೇ ।
ಸಿದ್ಧಃ ಕಾರ್ಯಸ್ಸ ಶತ್ರುಘ್ನಸ್ಸೈನ್ಯೇನ ಪರಿವೇಷ್ಟಿತಃ ॥ ೫೧ ॥

ರಥಾರೂಢೋಽಶ್ವರಕ್ಷಾರ್ಥಂ ಸುಮಂತ್ರೇಣ ಸಮನ್ವಿತಃ ।
ನಾನಾಪುಣ್ಯನದೀನಾಂ ಚ ಜಲಕುಂಭಾ೯ ಸಹಸ್ರಶಃ ॥ ೫೨ ॥

ನಾನಾದೇಶಾನ್ಮೃದಶ್ಚಾಪಿ ಶತ್ರುಘ್ನೇನಾನಯಸ್ವ ಹಿ ।
ಶೋಭನೀಯಾ ಪುರೀ ರಮ್ಯಾ ಪತಾಕಾಧ್ವಜತೋರಣೈಃ ॥ ೫೩ ॥

ದೇವಾಲಯೇ ಸುಧಾ ದೇಯಾ ತಥಾ ಪ್ರಾಸಾದಮಸ್ತಕೇ ।
ದೇವಾಲಯಾಭ್ಯಂತರೇದ್ಯ ಚಿತ್ರಶಾಲಾ ಮನೋರಮಾ ॥ ೫೪ ॥

ಲೇಖನೀಯಾ ವಿಧಾತವ್ಯಾ ರತ್ನದೀಪಾಸ್ಸದೈವ ಹಿ ।
ಪೂಜೋಪಕರಣಾದೀನಿ ಪ್ರತಿದೇವಾಲಯೇಷ್ವಪಿ ॥ ೫೫ ॥

ಅಲ್ಲಲ್ಲಿಯೇ ಅದಕ್ಕೆ ಸೇರಿಸಿ ಹಣೆಗೆ ಕಟ್ಟಿರಬೇಕು. ತಲೆಗೆ ಒಂದು ಜುಲ್ಪಿಯನ್ನು ಕಟ್ಟಿಸಿ ಮಂಟಪದಲ್ಲಿ ಆ ಕುದುರೆಯನ್ನು ಸಿದ್ಧಮಾಡಿರಬೇಕು. ಶತ್ರುಘ್ನನಿಗೆ ಸೈನ್ಯವನ್ನು ಕೊಟ್ಟು ಸಿದ್ಧಮಾಡಿರಬೇಕು.

೫೨-೫೩. ರಥವನ್ನು ಸಿದ್ಧಮಾಡಿಕೊಂಡು ಸುಮಂತ್ರನು ಇರಲಿ. ಆ ರಥದಲ್ಲಿ ಶತ್ರುಘ್ನನು ಕುಳಿತಿರಲಿ. ಆ ಶತ್ರುಘ್ನನು ಹೋಗುವಲ್ಲಿಂದೆಲ್ಲ ಅವನಿಂದ ಅನೇಕ ಪುಣ್ಯನದಿಗಳ ತೀರ್ಥಗಳನ್ನೂ ಅನೇಕ ದೇಶಗಳ ಮೃತ್ತಿಕೆಗಳನ್ನೂ ತರಿಸು. ಅಯೋಧ್ಯಾಪಟ್ಟಣವನ್ನು ಪತಾಕೆಗಳಿಂದಲೂ ಧ್ವಜಗಳಿಂದಲೂ ತೋರಣಗಳಿಂದಲೂ ಅಲಂಕರಿಸಿರಲಿ.

೫೪-೫೫. ದೇವಸ್ಥಾನಗಳಿಗೆಲ್ಲಾ ಸುಣ್ಣವನ್ನು ಬಳಿಸಲಿ. ಮಹಡಿಯ ಮೇಲುಗಡೆಗೆಲ್ಲಾ ಸುಣ್ಣವನ್ನು ಬಳಿಸಲಿ. ದೇವಾಲಯದೊಳಗೆ ಚಿತ್ರಗಳನ್ನು ಅನೇಕವಾಗಿ ಬರೆಯಲಿ. ರತ್ನದ ದೀಪಗಳನ್ನು ಯಾವಾಗಲೂ ಉರಿಯುವಂತೆ ಇಟ್ಟಿರಬೇಕು. ಎಲ್ಲಾ ದೇವಾಲಯದಲ್ಲಿಯೂ ಪೂಜೋಪಕರಣಗಳನ್ನು ಇಟ್ಟಿರಲಿ.

ಸ್ಥಾಪಯಸ್ವ ಸಮಸ್ತಾನಿ ವಾದ್ಯಾನ್ಯಾಜ್ಞಾಪಯಸ್ವ ಭೋ ।
ರಾಜಮಾರ್ಗಾಶ್ಯೋಧನೀಯಾಸ್ಸೇಚನೀಯಾಶ್ಚ ಚಂದನೈಃ ॥ ೫೬ ॥

ಸೌಧರಾಜಿಷು ಸರ್ವತ್ರ ಚಿತ್ರಾಣಿ ವಿವಿಧಾನಿ ಚ ।
ಲೇಖನೀಯಾನಿ ರಮ್ಯಾಣಿ ಮುಕ್ತಾಹಾರಸ್ಸಮಂತತಃ ॥ ೫೭ ॥

ಪ್ರವಾಳಮಣಿವೈಡೂರ್ಯ ಕಾಶ್ಮೀರಸ್ಫಟಿಕಾದಿಭಿಃ ।
ನಾನಾವಿಧಾಶ್ಚ ಕುಸುಮೈರ್ಹಾರಾಃ ಪಕ್ವಫಲಾದಿಭಿಃ ॥ ೫೮ ॥

ಬಂಧನೀಯಾಶ್ಚ ಸರ್ವತ್ರ ಜಾಲರಂಧ್ರೈರ್ವಿಶೇಷತಃ ।
ಏವಂ ಯದ್ಯನ್ಮಯಾ ಪ್ರೋಕ್ತಂ ತತ್ಕುರುಷ್ವಾಽವಿಚಾರತಃ ॥ ೫೯ ॥

---

೫೬. ವಾದ್ಯಗಳು ಎಲ್ಲಾ ದೇವಾಲಯಗಳಲ್ಲಿಯೂ ಮೊಳಗುವಂತೆ ಮಾಡಿರಲಿ. ರಾಜಮಾರ್ಗಗಳನ್ನು ಗುಡಿಸಲಿ. ಚಂದನದ ನೀರನ್ನು ಅವುಗಳ ಮೇಲೆ ಚುಮುಕಿಸಲಿ.

೫೭. ಮಹಡಿಯಮೇಲೆ ಎಲ್ಲಾ ಕಡೆಯಲ್ಲಿಯೂ ಚಿತ್ರಗಳನ್ನು ಬರೆಯಲಿ. ಎಲ್ಲಾ ಕಡೆಯಲ್ಲಿಯೂ ಮುತ್ತಿನ ಹಾರಗಳನ್ನು ಕಟ್ಟಿ ನೇತುಹಾಕಿರಲಿ.

೫೮. ಹವಳ ವೈಡೂರ್ಯ ಕಾಶ್ಮೀರ ಸ್ಫಟಿಕ ಇವುಗಳಿಂದಲೂ ಬಗೆ ಬಗೆಯ ಹೂಗಳಿಂದಲೂ ಹಾರಗಳನ್ನು ಕಟ್ಟಿ ಎಲ್ಲಾ ಕಡೆಯಲ್ಲಿಯೂ ಅಲಂಕರಿಸಲಿ. ಅಲ್ಲಲ್ಲಿ ಪಕ್ವಫಲಗಳನ್ನು ಕಟ್ಟಿರಲಿ.

೫೯. ಕಿಟಕಿಗಳಲ್ಲಿಯೂ ಅವೆಲ್ಲವನ್ನೂ ನೇತುಬಿಟ್ಟಿರುವಂತೆ ಮಾಡಿರಲಿ. ನಾನು ಹೇಳಿದುದೆಲ್ಲವನ್ನೂ ಸ್ವಲ್ಪವೂ ಯೋಚಿಸದೆ ಮಾಡಿಸು.

ತದ್ಗುರೋರ್ವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ |
ಕಾರಯಾಮಾಸ ತತ್ಸರ್ವಂ ಗುರೋರ್ವಾಕ್ಯಾಚ್ಛತಾಧಿಕಂ ॥ ೬೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಯಾಗೋಪಕರಣ ನಿವೇದನಂ
ನಾಮ ಪ್ರಥಮಸ್ಸರ್ಗಸ್ಸಮಾಪ್ತಃ

---

೬೦. ಲಕ್ಷ್ಮಣನು ಗುರುವು ಹೇಳಿದುದನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ಆ ಗುರುವು ಹೇಳಿದುದಕ್ಕಿಂತಲೂ ನೂರರಷ್ಟು ಹೆಚ್ಚಾಗಿಯೇ ಮಾಡಿಸಿದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಯಾಗೋಪಕರಣ
ನಿವೇದನವೆಂಬ ಮೊದಲನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ

॥ ಮೊದಲನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಅಯೋಧ್ಯೆಯಲ್ಲಿದ್ದಾಗ ಅಗಸ್ತ್ಯರ ಮಾತಿನಂತೆ ತೀರ್ಥ ಯಾತ್ರೆಗಳನ್ನು ಮಾಡಿದನು. ಅನಂತರ ಆ ಅಗಸ್ತ್ಯನ ಮಾತಿನಂತೆಯೇ ಅಶ್ವಮೇಧಯಾಗವನ್ನು ಮಾಡಬೇಕೆಂಬ ಆಲೋಚನೆ ಹುಟ್ಟಿ ಗುರುವಾದ ವಸಿಷ್ಠನೊಡನೆ ಆಲೋಚಿಸಿದನು. ಅದಕ್ಕೆ ಗುರುವು ಒಪ್ಪಿ ಅಂತೆಯೇ ಆಗಲೆಂದು ಹೇಳಲು ರಾಮನು ಆ ಯಜ್ಞಕ್ಕೆ ಆಗಬೇಕಾದುದೆಲ್ಲವನ್ನೂ ಲಕ್ಷ್ಮಣನಿಗೆ ತಿಳಿಸ ಬೇಕು. ಮತ್ತು ಸುಲಕ್ಷಣವುಳ್ಳ ಯಾಗದ ಕುದುರೆಯನ್ನು ಭೂಪ್ರದಕ್ಷಿಣೆಗೆ ಒಳ್ಳೆಯ ದಿನ ಒಳ್ಳೆಯ ಮುಹೂರ್ತದಲ್ಲಿ ಬಿಡಬೇಕು. ಹಾಗೆ ಮಾಡಬೇಕೆಂದನು.

ಶ್ರೀರಾಮನ ಅಪ್ಪಣೆಯಂತೆ ವಸಿಷ್ಠನು ಜೋಯಿಸರನ್ನು ಕರೆಸಿ ಅವರೊಡನೆ ಆಲೋಚಿಸಿ ಒಳ್ಳೆಯ ದಿನವನ್ನು ಗೊತ್ತುಮಾಡಿದನು. ಅನಂತರ ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣನೆ! ಯಾಗಕ್ಕೆ ಇಂದಿಗೆ ಏಳನೆಯ ದಿನವನ್ನು ಗೊತ್ತುಮಾಡಿದ್ದೇನೆ. ಆ ದಿನ ಶ್ರೀರಾಮನು ಅಶ್ವಮೇಧಯಾಗದಲ್ಲಿ ದೀಕ್ಷೆಯನ್ನು ಹೊಂದಬೇಕು. ರಾಮತೀರ್ಥದ ಬಳಿಯಲ್ಲಿ ಯಜ್ಞಭೂಮಿಯನ್ನು ಶೋಧಿಸಿ ಸಿದ್ಧಪಡಿಸು. ಎಲ್ಲಾ ಕಡೆಯಲ್ಲಿಯೂ ನೆಲವನ್ನು ಸಮವಾಗಿ ಮಾಡಿಸಿ ಮಾರ್ಗಗಳನ್ನು ಮಾಡಿಸಿ ಅವುಗಳಿಗೆ ಚಂದನದ ನೀರನ್ನು ಚುಮುಕಿಸಿ ತೋರಣಗಳನ್ನು ಕಟ್ಟಿಸು. ಯಜ್ಞಕುಂಡವನ್ನು ನನ್ನೆದುರಿಗೆ ಕಟ್ಟಿಸಬೇಕು. ಎಲ್ಲಾ ಕಡೆಯಲ್ಲಿಯೂ ಬಣ್ಣಗಳನ್ನು ಬಳಿಸಿ ಅಲಂಕರಿಸಬೇಕು. ಆ ಯಜ್ಞ ಮಂಟಪದಲ್ಲಿ ಆಯಾಯ ಜನಗಳಿಗೆ ತಕ್ಕಂತೆ ಭಾಗಗಳನ್ನು ನಿರ್ಮಾಣಮಾಡಿಸಿ ಅಲ್ಲಿ ಅವರವರಿಗೆ ಬೇಕಾಗುವ ಪದಾರ್ಥಗಳನ್ನಿಡಿಸಿ ಅನುಕೂಲಪಡಿಸು. ಎಲ್ಲಾ

ಕಡೆಯಲ್ಲಿಯೂ ತಾಂಬೂಲದ ಪಾತ್ರೆಗಳನ್ನೂ ನೀರು ಕುಡಿಯುವ ಪಾತ್ರೆಗಳನ್ನೂ ಅನೇಕವಾಗಿ ಇಡಿಸು. ಆಟವಾಡುವವರು ಆಡಲು ಆಟದ ಪದಾರ್ಥಗಳನ್ನು ಇಡಿಸು. ಮಣ್ಣಿನ ಪಾತ್ರೆಗಳಲ್ಲಿ ಗಿಡಗಳನ್ನಿಟ್ಟು ಅದನ್ನು ಚೌಕಗಳಲ್ಲಿಡಿಸು. ಅವುಗಳಿಂದಲೇ ರಮ್ಯವಾಗಿರುವ ಪ್ರದೇಶಗಳಲ್ಲಿ ತೋಟಗಳನ್ನು ನಿರ್ಮಿಸು. ಮತ್ತು ಎಲ್ಲರಿಗೂ ಯಾಗಕ್ಕೆ ಬರುವಂತೆ ಕಾಗದಗಳನ್ನು ಬರೆದು ಕಳುಹಿಸು.

ಎಲ್ಲಾ ಕಡೆಯಲ್ಲಿಯೂ ನಲ್ಲಿಗಳನ್ನು ಇರಿಸಿರಿ. ಪಕ್ಷಿಗಳನ್ನು ಕೂಡಿದ ಉತ್ತಮವಾದ ಪಂಜರಗಳನ್ನು ಇರಿಸಿರಿ. ಎಲ್ಲಾ ಕಡೆಯಲ್ಲಿಯೂ ಸುವಾಸನೆ ಬರುವಂತೆ ಧೂಪವನ್ನು ಹಾಕಿರಿ. ಪೂಜೆಯ ಪದಾರ್ಥಗಳನ್ನು ಬೇರೆ ಬೇರೆಯ ಪಾತ್ರೆಗಳಲ್ಲಿ ಹಾಕಿ ಬೇರೆ ಬೇರೆಯಾಗಿ ಅಲ್ಲಲ್ಲಿಯೇ ಇಟ್ಟಿರಬೇಕು. ಋಷಿಗಳ ಶಾಲೆಯಲ್ಲಿ ದರ್ಭೆ ಸಮಿತ್ತು ದಂಡ ಕಮಂಡಲುಗಳು ಹೊದಿಯುವಬಟ್ಟೆ ಕೌಪೀನಗಳು, ನಾರುಬಟ್ಟೆ ಕೃಷ್ಣಾಜಿನ, ನೀರಿನ ಪಾತ್ರೆ ಇವೇ ಮುಂತಾದ ಅವರಿಗೆ ಬೇಕಾಗುವ ಪದಾರ್ಥಗಳನ್ನು ಇಟ್ಟಿರಬೇಕು. ಅಲ್ಲದೆ ಶೌಚಕ್ಕೆ ಬೇಕಾಗುವ ಒಳ್ಳೆಯ ಮಣ್ಣು, ಹಲ್ಲುಜ್ಜುವ ಕಡ್ಡಿ, ಪಾದುಕೆ ಇವುಗಳನ್ನು ಇರಿಸಬೇಕು.

ನಾರಿಯರ ಶಾಲೆಯಲ್ಲಿ ಪೂಜೆಯ ಪಾತ್ರೆಗಳಲ್ಲಿ ಸೌಭಾಗ್ಯ ದ್ರವ್ಯಗಳನ್ನೂ ಸುಗಂಧಪದಾರ್ಥಗಳನ್ನೂ ತುಂಬಿ ಇರಿಸಬೇಕು. ಅನೇಕವಾಗಿ ಮೊರದ ಬಾಗಿನಗಳನ್ನು ಇಟ್ಟಿರಬೇಕು. ಚೌರಿಗಳನ್ನೂ, ಕಣ್ಣುಕಪ್ಪುಗಳ ಭರಣಿಗಳನ್ನೂ, ಅರಿಶಿನ ಕುಂಕುಮಗಳನ್ನೂ, ಶೀರೆ, ರೌಕೆಗಳನ್ನೂ ಯಥೇಚ್ಛವಾಗಿ ಇಟ್ಟಿರಬೇಕು. ಅಲ್ಲಲ್ಲಿಯೇ ಚಾಮರಗಳನ್ನೂ, ಬೀಸಣಿಗಳನ್ನೂ ಇಟ್ಟಿರಬೇಕು. ಸ್ನೇಹಿತರಿಗೆ ಕಾಗದವನ್ನು ಬರೆಯಲು ಎಲ್ಲಾ ಕಡೆಯಲ್ಲೂ ಕಾಗದ, ಕಡ್ಡಿ, ಶಾಯಿಕುಡಿಕೆಗಳನ್ನಿಟ್ಟಿರಬೇಕು. ಆ ಕಾಗದಗಳಿಗೆ ರಾಮಮುದ್ರೆಯನ್ನು ಹಾಕಿರಲಿ. ಜನಕ ಕೇಕಯ ಮುಂತಾದ ರಾಜರಿಗೆ ಕಾಗದವನ್ನು ಬರೆದು ದೂತರ ಕೈಯ್ಯಲ್ಲಿ ಕಳುಹಿಸು. ಲಕ್ಷ್ಮಣ! ನೀನೇ ಯಾಗದ ಕುದುರೆಯನ್ನು ಅಲಂಕರಿಸಬೇಕು. ಹಣೆಗೆ ಒಂದು ತಗಡನ್ನು ಕಟ್ಟಿರಬೇಕು. ಅದರಲ್ಲಿ “ಇದು ಅಯೋಧ್ಯಾಧಿಪತಿಯಾದ

ಶ್ರೀರಾಮನ ಯಾಗದ ಕುದುರೆಯು. ಇದು ಭೂಪ್ರದಕ್ಷಿಣೆಯನ್ನು ಮಾಡಲು ಬಿಟ್ಟಿದ್ದೇವೆ. ಶಕ್ತನಾದವನು ಈ ಕುದುರೆಯನ್ನು ಕಟ್ಟಬಹುದು. ಕೈಲಾಗದವನು ಶರಣಾಗತನಾಗಿ ತನ್ನ ಸರ್ವಸ್ವವನ್ನೂ ತೆಗೆದುಕೊಂಡು ಇದರ ಹಿಂದೆ ಬರಬೇಕು. ” ಎಂಬುದಾಗಿ ಬರೆದಿರಬೇಕು. ಇಂತಹ ಕುದುರೆಯನ್ನು ಯಜ್ಞಮಂಟಪದಲ್ಲಿ ಸಿದ್ಧಮಾಡಿಟ್ಟಿರಬೇಕು. ಶತ್ರುಘ್ನನು ಕುದುರೆಯನ್ನು ರಕ್ಷಿಸಲು ಸುಮಂತ್ರನ ಸಾರಥ್ಯದಿಂದ ಕೂಡಿದ ರಥದಲ್ಲಿ ಕುಳಿತು ಸಿದ್ಧನಾಗಿರಲಿ. ಕುದುರೆಯ ಹಿಂದೆ ಹೋಗುವ ಶತ್ರುಘ್ನನು ತೀರ್ಥಗಳನ್ನೂ ಅಲ್ಲಿನ ಮೃತ್ತಿಕೆಗಳನ್ನೂ ತರಲಿ.

ಅಯೋಧ್ಯಾಪಟ್ಟಣವನ್ನು ಧ್ವಜ ಮುಂತಾದುವನ್ನು ಕಟ್ಟಿ ಅಲಂಕರಿಸಿರಿ. ದೇವಾಲಯಗಳಿಗೂ, ಮನೆಗಳಿಗೂ ಸುಣ್ಣವನ್ನು ಬಳಿಸಿರಿ. ದೇವಾಲಯಕ್ಕೆ ಪೂಜೆಯ ಸಾಮಗ್ರಿಗಳನ್ನು ಕಳುಹಿಸಿರಿ. ವಾದ್ಯಗಳು ಮೊಳಗುತ್ತಿರಲಿ. ರಸ್ತೆಗಳನ್ನು ಗುಡಿಸಿಸಿ ಸುಗಂಧದ ನೀರನ್ನು ಹಾಕಿಸಿರಿ. ಎಲ್ಲಾ ಕಡೆಗೂ ಮುತ್ತಿನ ಹಾರವನ್ನೂ ತೋರಣಗಳನ್ನೂ ಕಟ್ಟಿಸಿ ಫಲಗಳನ್ನು ನೇತುಹಾಕಿಸಿರಿ. ನಾನು ಹೇಳಿದುದೆಲ್ಲವನ್ನೂ ಬೇಗನೆ ಮಾಡಿಸಬೇಕು. ” ಎಂದನು. ಲಕ್ಷ್ಮಣನು ಆ ಮಾತನ್ನು ಕೇಳಿ ಅಂತೆಯೇ ಆಗಲೆಂದು ಹೇಳಿ ಆ ಗುರುವು ಹೇಳಿದುದಕ್ಕಿಂತಲೂ ನೂರರಷ್ಟು ಹೆಚ್ಚಾಗಿಯೇ ಮಾಡಿಸಿದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

॥ ದ್ವಿತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ರಾಮಸ್ಸಸೀತಸ್ತು ಮುಹೂರ್ತೇ ಸಪ್ತಮೇ ಽಹನಿ ।
ನವನೀತೋದ್ವರ್ತನಾದ್ಯೈಃ ಸ್ನಾತ್ವಾ ಕೃತ್ವಾಂಜನಾದಿಕಂ ॥ ೧ ॥

ತೂರ್ಯನಾದೈರ್ದ್ವಿಜಾನಾಂ ಚ ವೇದಘೋಷೈರ್ವಿಶೇಷತಃ ।
ಪೌರಸ್ತ್ರೀಣಾಂ ಗಾಯನೈಶ್ಚ ಪೌರಾಣಾಂ ಚ ಜಯಸ್ವನೈಃ ॥ ೨ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಎರಡನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಅನಂತರ ಏಳನೆಯ ದಿನದ ಶುಭಮೂಹೂರ್ತದಲ್ಲಿ ಶ್ರೀರಾಮನೂ ಸೀತೆಯೂ ಬೆಣ್ಣೆಯನ್ನು ಹಚ್ಚಿಕೊಂಡು ಸ್ನಾನಮಾಡಿ ಕಣ್ಣುಕಪ್ಪು ಮುಂತಾದುವುಗಳಿಂದ ಅಲಂಕರಿಸಿಕೊಂಡರು.

೨. ಆಗ ಮಂಗಳವಾದ್ಯ ಧ್ವನಿಗಳು ಮೊಳಗುತ್ತಿದ್ದುವು. ದ್ವಿಜರು ವೇದಘೋಷವನ್ನು ಮಾಡುತ್ತಿದ್ದರು. ಪೌರಸ್ತ್ರೀಯರು ಗಾನವನ್ನು ಮಾಡುತ್ತಿದ್ದರು. ಪಟ್ಟಣಿಗರು ಜಯ ಜಯ ಎಂದೆನ್ನುತ್ತಿದ್ದರು.

ಆಗತ್ಯ ಮಂಡಪೇ ರಮ್ಯೇ ತಸ್ಥೌ ಚಿತ್ರಾಸನೋಪರಿ ।
ದದೌ ಕಾಶೇಯವಸ್ತ್ರಾಣಿ ಗುರುಂ ರಾಮಸ್ತ್ವರುಂಧತೀಂ ॥ ೩ ॥

ಪೌರಾಂಶ್ಚ ಪೌರಪತ್ನೀಶ್ಚ ಮಾತೄಶ್ಚಾಥ ಸುವಾಸಿನೀಃ ।
ಶ್ವಶ್ರೂಶ್ಚಾಪಿ ದ್ವಿಜಾ‌ನ್ ಸರ್ವಾ‌ನ್ ಜನಕಂ ಚಾಪಿ ಸೂಹೃದಃ ॥ ೪ ॥

ಬಂಧೂಂಶ್ಚ ಬಂಧುಪತ್ನೀಶ್ಚ ವಯಸ್ಯಾಂಶ್ಚ ತತಃ ಪರಂ ।
ಮಂತ್ರಿಣಶ್ಚಾಥ ವೀರಾಂಶ್ಚ ದಾಸದಾಸೀಜನಾಂಸ್ತಥಾ ॥ ೫ ॥

ನಟನಾಟಕವಂದ್ಯಾದೀ‌ನ್ ವಾರಸ್ತ್ರೀಶ್ಚ ತತಃ ಪರಂ ।
ಆಚಾಂಡಾಲಾದಿಕಾ‌ನ್ ದತ್ವಾ ತತಸ್ಸೀತಾಂ ದದೌ ವರಂ ॥ ೬ ॥

ಹೇಮತಂತುಸಮುದ್ಭೂತಂ ಮುಕ್ತಾಮಾಣಿಕ್ಯಗುಂಫಿತಂ ।
ರತ್ನಕಾಶ್ಮೀರನೀಲಾದ್ಯೈರ್ಮಧ್ಯೇ ಮಧ್ಯೇ ವಿಚಿತ್ರಿತಂ ॥ ೭ ॥

---

೩. ಇಂತಹ ಸಮಯದಲ್ಲಿ ಸೀತಾರಾಮರು ಮನೆಯಿಂದ ಹೊರಟು ಬಂದು ಮಂಟಪದಲ್ಲಿ ರಮ್ಯವಾದ ಆಸನದಮೇಲೆ ಕುಳಿತರು. ಉತ್ತಮವಾದ ರೇಷ್ಮೆಯ ಬಟ್ಟೆಗಳನ್ನು ಗುರುವಿಗೂ ಗುರುಪತ್ನಿಯಾದ ಅರುಂಧತಿಗೂ ಕೊಟ್ಟರು.

೪. ಅನಂತರ ಪಟ್ಟಣಿಗರಿಗೂ ಅವರ ಪತ್ನಿಯರಿಗೂ ತನ್ನ ತಾಯಿಯರಿಗೂ ಸುವಾಸಿನಿಯರಿಗೂ ಅತ್ತೆಯರಿಗೂ ಜನಕನಿಗೂ ಸ್ನೇಹಿತರಿಗೂ ಅಲ್ಲಿದ್ದ ದ್ವಿಜರೆಲ್ಲರಿಗೂ ಉತ್ತಮವಾದ ಬಟ್ಟೆಗಳನ್ನು ಕೊಟ್ಟರು.

೫-೬. ಬಂಧುಗಳಿಗೂ, ಬಂಧು ಪತ್ನಿಯರಿಗೂ, ವಯಸ್ಕರಿಗೂ, ಮಂತ್ರಿಗಳಿಗೂ, ವೀರರಿಗೂ, ದಾಸರಿಗೂ, ದಾಸಿಯರಿಗೂ, ನಟರಿಗೂ, ನಟನ ಮಾಡಿಸತಕ್ಕವರಿಗೂ, ವಂದಿಗಳಿಗೂ, ವಾರಸ್ತ್ರೀಯರಿಗೂ, ಕೊನೆಗೆ ಚಂಡಾಲರೆಲ್ಲರಿಗೂ ಉತ್ತಮವಾದ ಬಟ್ಟೆಗಳನ್ನು ಕೊಟ್ಟರು.

೭-೮. ಅನಂತರ ಚಿನ್ನದ ತಂತುವಿನ ಸರಿಗೆಗಳಿಂದ ಮಾಡಿರುವ ಮುತ್ತು ಮಾಣಿಕ್ಯಗಳಿಂದ ಚಿತ್ರಿಸಿರುವ ರತ್ನಕಾಶ್ಮೀರ ನೀಲಗಳಿಂದ ಮಧ್ಯ ಮಧ್ಯದಲ್ಲಿ

ಮುಕ್ತಾಪ್ರವಾಳಘೋಷಾದ್ಯೈರ್ಮಣಿಭಿಸ್ಸರ್ವತೋ ವೃತಂ ।
ಆದರ್ಶಬಿಂಬಸದೃಶಂ ವಿದ್ಯುತ್ತೇಜೋಪಮಂ ಮಹತ್ ॥ ೮ ॥

ತತಃ ಸ್ವಯಂ ರಾಮಚಂದ್ರಃ ಪೀತಕೌಶೇಯಮುತ್ತಮಂ ।
ಹೇಮತಂತ್ವಂಕಿತಂ ನಾನಾವಲ್ಲೀಪುಷ್ಪವಿಚಿತ್ರಿತಂ ॥ ೯ ॥

ದಧಾರಾನ್ಯತ್ತೂತ್ತರೀಯಂ ನಾಸೋಲಂಕಾರಮಂಡಿತಃ ।
ವ್ಯಂಜಿತಾಶೇಷಗಾತ್ರಶ್ರೀರ್ಮಣಿದ್ವಯವಿರಾಜಿತಃ ॥ ೧೦ ॥

ಕೇಯೂರಕುಂಡಲೈರ್ಮುಕ್ತಾಹಾರೈಶ್ಚ ಕಟಕೈರ್ಯುತಃ ।
ತತೋ ವಸಿಷ್ಠವರ್ಯಸ್ತಂ ಮುಕ್ತಾನಾಂ ಸ್ವಸ್ತಿಕೋಪರಿ ॥ ೧೧ ॥

ಚಿತ್ರಿಸಿರುವ ಮುತ್ತು ಹವಳಗಳನ್ನು ಅಂಚಿನಲ್ಲಿ ಕಟ್ಟಿರುವ ಎಲ್ಲಾ ಕಡೆಯ ತುದಿಗೂ ಮಣಿಗಳನ್ನು ಸೇರಿಸಿರುವ ಕನ್ನಡಿಯಂತೆ ಹೊಳೆಯುತ್ತಿರುವ ಮಿಂಚಿನಂತೆ ಫಳಗುಟ್ಟುತ್ತಿರುವ ಒಂದು ಒಳ್ಳೆಯ ಶೀರೆಯನ್ನು ಸೀತೆಗೆ ಕೊಟ್ಟನು.

೯. ಅನಂತರ ರಾಮಚಂದ್ರನು ಚಿನ್ನದ ಸರಿಗೆಗಳಿಂದ ಕೂಡಿದ ಅನೇಕ ಬಗೆಯಾದ ಹೂಗಳನ್ನೂ ಚಿತ್ರಗಳನ್ನೂ ಚಿತ್ರಿಸಿರುವ ಬಿಳಿಯದಾದ ರೇಷ್ಮೆ ಬಟ್ಟೆಯನ್ನು ತಾನು ಧರಿಸಿಕೊಂಡನು.

೧೦. ಮತ್ತೊಂದು ಉತ್ತಮವಾದ ಬಟ್ಟೆಯನ್ನು ಮೇಲು ಹೊದಕೆಯನ್ನಾಗಿ ಹೊದ್ದುಕೊಂಡು ದೇಹಕ್ಕೆ ಬೇಕಾದ ಅಲಂಕಾರಗಳನ್ನೂ ಮಾಡಿಕೊಂಡನು. ಕೌಸ್ತುಭ ಚಿಂತಾಮಣಿಯೆಂಬ ಎರಡು ಮಣಿಗಳನ್ನೂ ಧರಿಸಿಕೊಂಡನು.

೧೧. ಭುಜಕೀರ್ತಿ ಕರ್ಣಾಭರಣ ಮುತ್ತಿನಹಾರ ಕೈಬಳೆಗಳನ್ನು ಧರಿಸಿಕೊಂಡನು. ಅನಂತರ ವಸಿಷ್ಠನು ಮುತ್ತುಗಳಿಂದ ಮಾಡಿರುವ ಸ್ವಸ್ತಿಕ ಪದ್ಮದಮೇಲೆ ಆ ರಾಮನನ್ನು ಕೂರಿಸಿದನು.

ನಿವೇಶ್ಯ ರಾಘವಂ ಸೀತಾಮಾಹೂಯ ವಟುಕೈರ್ನಿಜೈಃ ।
ನಿವೇಶ್ಯ ರಾಮವಾಮಾಂಗೇ ಮುನಿಭಿಃ ಪರಿವೇಷ್ಟಿತಃ ॥ ೧೨ ॥

ರಾಮೇಣ ಕಾರಯಾಮಾಸ ವಿಘ್ನೇಶಾದಿಪ್ರಪೂಜನಂ ।
ಪುಣ್ಯಾಹಾದಿತ್ರಯಂ ಚಾಪಿ ದದೌ ದೀಕ್ಷಾಂ ತತಸ್ತಯೋಃ ॥ ೧೩ ॥

ಧ್ವಜಾರೋಪವಿಧಾನೇನ ಸ್ಥಾಪಯಿತ್ವಾ ಧ್ವಜೋತ್ತಮಾಂ ।
ರಾಮೇಣ ವರಯಾಮಾಸ ಗುರುಷ್ಷೋಡಶ ಋತ್ವಿಜಃ ॥ ೧೪ ॥

ವಸಿಷ್ಠಸ್ತತ್ರ ಸಂಜಾತೋಧ್ವರ್ಯುಸ್ಸಕಲಕರ್ಮವಿತ್ ।
ಬ್ರಹ್ಮಾಭೂಚ್ಚ ಸ್ವಯಂ ಬ್ರಹ್ಮಾ ಹೋತಾ ಗಾಧಿಸುತೋ ಹ್ಯಭೂತ್ ॥ ೧೫ ॥

೧೨-೧೩. ಅನಂತರ ತನ್ನ ಕಡೆಯ ಶಿಷ್ಯರಿಂದ ಸೀತೆಯನ್ನು ಕರೆಸಿ ರಾಮನ ಬಲಗಡೆಯಲ್ಲಿ ಕೂರಿಸಿದನು. ಅನಂತರ ಮುನಿಗಳೊಡನೆ ಕೂಡಿಕೊಂಡು ವಿಘ್ನೇಶ್ವರ ಪೂಜೆಯನ್ನು ರಾಮನ ಕೈಯ್ಯಿಂದ ಮಾಡಿಸಿದನು. ಅನಂತರ ಪುಣ್ಯಾಹ, ನಾಂದಿ, ನವಗ್ರಹ ಪೂಜೆಗಳನ್ನು ಮಾಡಿಸಿದನು. ಆಮೇಲೆ ಅವರಿಗೆ ದೀಕ್ಷೆಯನ್ನು ಕೊಟ್ಟನು.

೧೪. ಧ್ವಜಾರೋಹವಿಧಿಪ್ರಕಾರವಾಗಿ ಧ್ವಜವನ್ನು ಸ್ಥಾಪಿಸಿದನು. ಆಮೇಲೆ ರಾಮನಿಂದ ಹದಿನಾರು ಜನ ಋತ್ವಿಜರಿಗೆ ವರಣವನ್ನು ಕೊಡಿಸಿದನು.

೧೫. ಆ ಹದಿನಾರು ಜನ ಋತ್ವಿಜರಲ್ಲಿ ಸಕಲ ಕರ್ಮಗಳನ್ನೂ ಬಲ್ಲ ವಸಿಷ್ಠನು ಅಧ್ವರ್ಯುವಾದನು. ಸಾಕ್ಷಾದ್ಬ್ರಹ್ಮನೇ ಬ್ರಹ್ಮನಾದನು. ವಿಶ್ವಾಮಿತ್ರನು ಹೋತೃವಾದನು.

ಉದ್ಗಾತಾಭೂಚ್ಛತಾನಂದೋ ಗುರುರ್ಯೋ ಜನಕಸ್ಯ ಚ |
ಯಮೋ ಬಭೂವ ಶಮಿತಾ ಕಶ್ಯಪಾದ್ಯಾ ಮುನೀಶ್ವರಾಃ || ೧೬ ||

ವೃಣೀತಾ ವಾಜಿಮೇಧೇ ಹಿ ರಾಘವೇಣ ಮಹಾತ್ಮನಾ |
ಋತ್ವಿಜಷ್ಷೋಡಶ ಶುಭಾಸ್ತಥಾನ್ಯೇ ಸರ್ವಕರ್ಮಸು || ೧೭ ||

ಪೃಥಕ್ ಪೃಥಕ್ ಸಂವೃಣೀತಾಶ್ಯಕಶಸ್ತೇ ಮುನೀಶ್ವರಾಃ |
ಕುಂಡೇಗ್ನಿಸ್ಥಾಪನಂ ಕೃತ್ವಾ ಪಾತ್ರಾಣ್ಯಾಸಾದ್ಯ ವಿಸ್ತರಾತ್ || ೧೮ ||

ಶ್ಯಾಮಕರ್ಣಂ ಪೂಜಯಿತ್ವಾ ಮೋಚಯಾಮಾಸ ಭೂತಲೇ |
ಸವ್ಯಾಂ ಪ್ರದಕ್ಷಿಣಾಂ ಕರ್ತುಂ ತಸ್ಯ ಸಂರಕ್ಷಣಾಯ ಹಿ || ೧೯ ||

ರಥಾರೂಢಂ ಸುಮಂತ್ರೇಣ ಸೈನ್ಯೇನಾಯುತಸಂಖ್ಯಯಾ |
ಶತ್ರುಘ್ನಂ ಪ್ರೇಷಯಿತ್ವಾಥ ತೂಷ್ಣೀಂ ತಸ್ಥೌ ದ್ವಿಜೈರ್ಗುರುಃ || ೨೦ ||

೧೬-೧೭. ಜನಕನ ಗುರುವಾದ ಶತಾನಂದನು ಉದ್ಗಾತೃವಾದನು ಯಮನು ಶಮಿತ್ರನಾದನು. ಕಶ್ಯಪನೇ ಮುಂತಾದವರು ಋತ್ವಿಕ್ಕುಗಳಾಗಿ ವರಿಸಲ್ಪಟ್ಟರು. ಈ ರೀತಿಯಾಗಿ ಹದಿನಾರು ಮಂದಿಯನ್ನೂ ವರಿಸಿದನು.

೧೮. ಅನಂತರ ನೂರಾರು ಜನ ಋತ್ವಿಕ್ಕುಗಳನ್ನು ಬೇರೆ ಬೇರೆ ಕೆಲಸಗಳಿಗೆ ಬೇರೆ ಬೇರೆಯಾಗಿ ವರಿಸಿದನು. ಅನಂತರ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠೆಮಾಡಿ ಪಾತ್ರೆಗಳನ್ನು ವಿಸ್ತಾರವಾಗಿ ಆಸಾದನೆ ಮಾಡಿದನು. (ಇಟ್ಟನು.)

೧೯. ಅನಂತರ ಆ ಶ್ಯಾಮಕರ್ಣದ ಕುದುರೆಯನ್ನು ಪೂಜಿಸಿ ಭೂತಲದಲ್ಲಿ ಬಲಗಡೆಯಿಂದ ಪ್ರದಕ್ಷಿಣೆಮಾಡಿ ಬರುವಂತೆ ಬಿಟ್ಟನು.

೨೦. ಆ ಕುದುರೆಯ ರಕ್ಷಣೆಗೆ ರಥದಲ್ಲಿ ಶತ್ರುಘ್ನನನ್ನು ಕೂರಿಸಿ ಸುಮಂತ್ರನನ್ನು ಸಾರಥಿಯನ್ನಾಗಿ ಮಾಡಿ ಹತ್ತುಸಾವಿರ ಸಂಖ್ಯೆಯುಳ್ಳ ಸೈನ್ಯವನ್ನು ಅವನ ಸಹಾಯಕ್ಕೆ ಕೊಟ್ಟು ಅವರನ್ನು ಕುದುರೆಯೊಡನೆ ಕಳುಹಿಸಿ ಗುರುವು ರಾಮನೊಡನೆ ಸುಮ್ಮನೆ ಕುಳಿತನು.

ಯಜ್ಞವಾಟೇ ಮುನಿಗಣಾಪೂರಿತೇ ಸರಯೂತಟೇ ।
ರಾಮೋಽಪಿ ಸೀತಯಾ ತೂಷ್ಣೀಂ ತಸ್ಥೌ ಶೃಣ್ವನ್ ಕಥಾಶ್ಶುಭಾಃ ॥ ೨೧ ॥

ಕೃಷ್ಣಾಜಿನಧರೋ ದಾಂತೋ ಕುಶಪಾಣಿಃ ಕೃತೋಚಿತಃ ।
ಕೋಟಿಸೂರ್ಯ ಪ್ರತೀಕಾಶಸ್ತಸ್ಥೌ ಸ ಗುರುಸನ್ನಿಧೌ ॥ ೨೨ ॥

ತದ್ದೀಕ್ಷಾಯಾಂ ಪ್ರವೃತ್ತಾಯಾಂ ಭ್ರಾತರಃ ಪುಷ್ಕರಸ್ರಜಃ ।
ಸ್ನಾತ್ವಾ ಸುವಾಸಸ್ಸರ್ವೇ ರೇಜಿರೇ ಸುಷ್ಠ್ವಲಂಕೃತಾಃ ॥ ೨೩ ॥

ತನ್ಮಹಿಷ್ಯಶ್ಚ ಮುದಿತಾ ನಿಷ್ಕಕಂಠ್ಯಸ್ಸುವಾಸಸಃ ।
ದೀಕ್ಷಾಶಾಲಾಮುಪಾಜಗ್ಮುಶ್ಚಾಲಿಪ್ತಾ ವಸ್ತುಪಾಣಯಃ ॥ ೨೪ ॥

---

೨೧. ಆ ಸರಯೂನದಿಯ ದಡದಲ್ಲಿರುವ ಯಜ್ಞಮಂಟಪದಲ್ಲಿ ಮುನಿಗಳೆಲ್ಲರೂ ಕುಳಿತರು. ರಾಮನು ಸೀತೆಯೊಡನೆ ಕುಳಿತನು. ಆಗ ಅನೇಕರು ಅನೇಕ ಬಗೆಯ ಪುರಾಣ ಇತಿಹಾಸಗಳನ್ನು ಹೇಳುತ್ತಿರಲು ಅದನ್ನೆಲ್ಲಾ ರಾಮನು ಕೇಳುತ್ತಿದ್ದನು.

೨೨. ಆ ರಾಮನು ಕೃಷ್ಣಾಜಿನವನ್ನು ಧರಿಸಿದ್ದನು. ಇಂದ್ರಿಯ ನಿಗ್ರಹಿಯಾಗಿದ್ದನು. ಪವಿತ್ರವನ್ನು ಇಟ್ಟುಕೊಂಡು ನಿತ್ಯಕರ್ಮಗಳನ್ನು ನೇರವೇರಿಸಿಕೊಂಡು ಕೋಟಿಸೂರ್ಯರಂತೆ ಬೆಳಗುತ್ತಾ ಆ ಗುರುವಿನ ಸನ್ನಿಧಿಯಲ್ಲಿ ಕುಳಿತಿದ್ದನು.

೨೩. ರಾಮನು ಇಂತು ದೀಕ್ಷಿತನಾಗಿರಲು ಅವನ ತಮ್ಮಂದಿರು ಸ್ನಾನಮಾಡಿ ಕಮಲದ ಹಾರವನ್ನು ಹಾಕಿಕೊಂಡು ಒಳ್ಳೆಯ ಬಟ್ಟೆಗಳನ್ನು ಧರಿಸಿ ಚೆನ್ನಾಗಿ ಅಲಂಕೃತರಾಗಿ ಪ್ರಕಾಶಿಸಿದರು.

೨೪. ಅವರ ಹೆಂಡತಿಯರೂ ಕೂಡ ಸಂತೋಷಗೊಂಡು ಕತ್ತಿಗೆ ಚಿನ್ನದ ಆಭರಣಗಳನ್ನು ಹಾಕಿಕೊಂಡು ಒಳ್ಳೆಯ ಬಟ್ಟೆಗಳನ್ನುಟ್ಟು ಗಂಧವನ್ನು ಪೂಸಿಕೊಂಡು ಕೈಗಳಲ್ಲಿ ಮಂಗಳಪದಾರ್ಥಗಳನ್ನು ಹಿಡಿದುಕೊಂಡು ದೀಕ್ಷಾಶಾಲೆಗೆ ಬಂದರು.

ತದಾ ನಿನೇದುರ್ವಾದ್ಯಾನಿ ನನೃತುರ್ವಾರಯೋಷಿತಃ ।
ಏತಸ್ಮಿನ್ನಂತರೇ ತತ್ರ ಸಮಾಯಾತಾ ಮುನೀಶ್ವರಾಃ ॥ ೨೫ ॥

ದಿನೇ ದಿನೇಶ್ವಮೇಧಸ್ಯ ವಾರ್ತಾಂ ಶ್ರುತ್ವಾ ಸಹಸ್ರಶಃ ।
ಕಶ್ಯಪೋತ್ರಿರ್ಭರದ್ವಾಜೋ ವಿಶ್ವಾಮಿತ್ರೋಽಥ ಗೌತಮಃ ॥ ೨೬ ॥

ಮಾರ್ಕಂಡೇಯೋ ಮೃಕಂಡುಶ್ಚ ಚ್ಯವನೋ ಮುದ್ಗಲೋಽಸಿತಃ ।
ಜಾಮದಗ್ನ್ಯೋ ದೇವಲಶ್ಚ ವ್ಯಾಸೋ ನಾರಾಯಣಃ ಕ್ರತುಃ ॥ ೨೭ ॥

ವಿಭಾಂಡಕೋ ನಾರದಶ್ಚ ತುಂಬುರುರ್ಗಾಲವೋ ಮುನಿಃ ।
ಶಿವದಾಸೋ ಭಾನುದಾಸೋ ಹರಿದಾಸೋ ಮಹಾತಪಾಃ ॥ ೨೮ ॥

ಶಿವವರ್ಮಾ ರುದ್ರವರ್ಮಾ ಶಿವಶರ್ಮಾ ಮುನೀಶ್ವರಃ ।
ಏಕಶೃಂಗಶ್ಚತುಶ್ಶೃಂಗಸ್ಸಪ್ತಶೃಂಗಸ್ತ್ರಿಶೃಂಗಕಃ ॥ ೨೯ ॥

ತಿಲಭಾಂಡೋ ಭೃಗುಶ್ಚೈವ ಭಾರ್ಗವೋ ವಾಕ್ಪತಿಸ್ತಥಾ ।
ಧೌಮ್ಯಃ ಕಣ್ವಶ್ಚೈಕಪಾದಸ್ತ್ರಿಪಾದಶ್ಚೋರ್ಧ್ವ ಬಾಹುಕಃ ॥ ೩೦ ॥

---

೨೫. ಆಗ ಒಂದು ಕಡೆಯಲ್ಲಿ ವಾದ್ಯಗಳು ಮೊಳಗುತ್ತಿದ್ದುವು. ಇನ್ನೊಂದು ಕಡೆಯಲ್ಲಿ ಸೂಳೆಯರು ಕುಣಿಯುತ್ತಿದ್ದರು. ಹಿಗಿರುತ್ತಿರಲು ಎಲ್ಲ ಕಡೆಯಿಂದಲೂ ಮುನಿಗಳು ಆ ಯಜ್ಞಶಾಲೆಗೆ ಬರಲು ಮೊದಲಿಟ್ಟರು.

೨೬-೩೩. ಈ ಅಶ್ವಮೇಧವಾರ್ತೆಯನ್ನು ಕೇಳಿ ದಿನ ದಿನವೂ ಗುಂಪು ಗುಂಪಾಗಿ ಸಾವಿರ ಸಂಖ್ಯೆಯಲ್ಲಿ ಆ ಋಷಿಗಳು ಬರುತ್ತಿದ್ದರು. ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಮಾರ್ಕಂಡೇಯ, ಮೃಕಂಡು, ಚ್ಯವನ, ಮುದ್ಗಲ, ಅಸಿತ, ಜಾಮದಗ್ನ್ಯ, ದೇವಲ, ವ್ಯಾಸ, ನಾರಾಯಣ, ಕ್ರತು, ವಿಭಾಂಡಕ, ನಾರದ, ತುಂಬುರು. ಗಾಲವ, ಶಿವದಾಸ, ಭಾನುದಾಸ, ಹರಿದಾಸ, ಶಿವವರ್ಮ, ರುದ್ರವರ್ಮ, ಶಿವಶರ್ಮ, ಏಕಶೃಂಗ, ಚತುಶ್ಶೃಂಗ, ಸಪ್ತಶೃಂಗ, ತ್ರಿಶೃಂಗ, ತಿಲಭಾಂಡ, ಭೃಗು, ಭಾರ್ಗವ, ವಾಕ್ಪತಿ, ಧೌಮ್ಯ, ಕಣ್ವ, ಏಕಪಾದ, ತ್ರಿಪಾದ, ಊರ್ಧ್ವಬಾಹುಕ, ಊರ್ಧ್ವಪಾದ, ಊರ್ಧ್ವನೇತ್ರ,

ಊರ್ಧ್ವಪಾದಶ್ಚೋರ್ಧ್ವನೇತ್ರಶ್ಚೋರ್ಧ್ವಾಸ್ಯ ಸ್ತ್ರಿಶಿರಾಸ್ತಥಾ ।
ವೃದ್ಧಗೌತಮನಾಮಾಥ ಪರ್ಣಾದಶ್ಚಂದ್ರ ಸಂಜ್ಞಕಃ ॥ ೩೧ ॥

ಋಷ್ಯಶೃಂಗೋ ಮತಂಗಶ್ಚ ಜಾಬಾಲಿಃ ಕುಂಭಸಂಭವಃ ।
ದಧೀಚಿಶ್ಶೌನಕಸ್ಸೂತಸ್ಸುತೀಕ್ಷ್ಣೋ ಲೋಮಶಸ್ತಥಾ ॥ ೩೨ ॥

ವಾಲ್ಮೀಕಿಶ್ಚಾಪಿ ದುರ್ವಾಸಾ ಮುನಿರ್ವೇದನಿಧಿರ್ಮಹಾನ್ ।
ಏತೇ ಚಾನ್ಯೇ ಚ ಮುನಯಃ ಸ್ತ್ರೀಶಿಷ್ಯತನಯಾದಿಭಿಃ ॥ ೩೩ ॥

ಕೇಚಿತ್ಪರ್ಣಾಶನಾಃ ಕೇಚಿದ್ವಾಯುಭಕ್ಷಾಸ್ತಥಾಪರೇ ।
ಕುಶಾಗ್ರ ಜಲಪಾನಾಶ್ಚ ಕೇಚಿತ್ತ್ಯಕ್ತಾಶನಾಸ್ತಥಾ ॥ ೩೪ ॥

ಭಿಕ್ಷಾಶನಾಸ್ತಥಾ ಕೇಚಿತ್ಪರದತ್ತಾಶನಾಃ ಪರೇ ।
ಅಯಾಚ್ಞಾವ್ರತಿನಃ ಕೇಚಿತ್ತ್ಯಕ್ತಸಂಭಾಷಣಾಃ ಪರೇ ॥ ೩೫ ॥

ಕೇಚಿದ್ವಲ್ಕಲಸಂವೀತಾಃ ಕೇಚಿತ್ಪಾಷಾಣವಸ್ತ್ರಿಣಃ ।
ಮೃಗಚರ್ಮಧರಾಃ ಕೇಚಿತ್ಕೇಚಿದಾಕಾಶವಸ್ತ್ರಿಣಃ ॥ ೩೬ ॥

ಊರ್ಧ್ವಾಸ್ಯ, ತ್ರಿಶಿರ, ವೃದ್ಧಗೌತಮ, ಪೂರ್ಣಾದ, ಚಂದ್ರ ಋಷ್ಯಶೃಂಗ, ಮತಂಗ, ಜಾಬಾಲಿ, ಕುಂಭಸಂಭವ, ದಧೀಚಿ, ಶೌನಕ, ಸೂತ, ಸುತೀಷ್ಣ, ಲೋಮಶ, ವಾಲ್ಮೀಕಿ, ದುರ್ವಾಸ, ವೇದನಿಧಿ ಇವರೂ ಇನ್ನೂ ಅನೇಕ ಮುನಿಗಳೂ ಹೆಂಡತಿಯರನ್ನೂ, ಮಕ್ಕಳನ್ನೂ, ಶಿಷ್ಯರನ್ನೂ ಕರೆದುಕೊಂಡು ಬಂದರು.

೩೪-೩೬. ಕೆಲವರು ಎಲೆಯನ್ನು ತಿನ್ನುವವರು, ಕೆಲವರು ವಾಯು ಭಕ್ಷಕರು, ಕೆಲವರು ದರ್ಭೆಯ ತುದಿಯ ನೀರನ್ನು ಕುಡಿಯತಕ್ಕವರು, ಕೆಲವರು ಊಟಮಾಡದಿರುವವರು, ಕೆಲವರು ಭಿಕ್ಷಾಶನಿಗಳು, ಕೆಲವರು ಪರರು ಕೊಟ್ಟದ್ದನ್ನೇ ತಿನ್ನುವವರು, ಕೆಲವರು ಯಾಚಿಸದೆ ಸಿಕ್ಕಿದುದನ್ನೇ ತಿನ್ನುವವರು, ಕೆಲವರು ಮಾತನಾಡದ ಮೌನಿಗಳು, ಕೆಲವರು ನಾರುಡೆಯುಟ್ಟವರು, ಕೆಲವರು ಕಾವಿಶಾಟಿಯನ್ನುಟ್ಟವರು, ಕೆಲವರು ಕೃಷ್ಣಾಜಿನವನ್ನೇ ಉಟ್ಟವರು. ಕೆಲವರು ಆಕಾಶವೇ

ವೃಕ್ಷಪಲ್ಲವವಸ್ತ್ರಾಶ್ಚ ಕೇಚಿತ್ಪಂಚಾಗ್ನಿ ಸಾಧಕಾಃ ।
ಧೂಮ್ರಪಾನವ್ರತಾಃ ಕೇಚಿತ್ಕೇಚಿತ್ತ್ಯಕ್ತೈಷಣಾಃ ಪರೇ ॥ ೩೭ ॥

ಏವಂ ನಾನಾವನಾರಾಮಗಿರಿದುರ್ಗಾಶ್ರಮಾದಿಷು ।
ವಾಸಿನಸ್ತೇ ಸಮಾಯಾತಾಸ್ಸದಾರಾಶ್ಚ ಸಬಾಲಕಾಃ ॥ ೩೮ ॥

ಸಶಿಷ್ಯಾ ರಾಮಚಂದ್ರಸ್ಯ ದ್ರಷ್ಟುಂ ಯಜ್ಞೋತ್ಸವಂ ವರಂ ।
ದಶದಿಗ್ಭ್ಯೋ ಮುನಿಶ್ರೇಷ್ಠಾಃ ಕೋಟಿಶಶ್ಚ ದಿನೇ ದಿನೇ ॥ ೩೯ ॥

ತಾನ್ಸರ್ವಾನ್ ರಾಮಚಂದ್ರೋಪಿ ಪ್ರತ್ಯುತ್ಥಾನಾಸನಾದಿಭಿಃ ।
ಮಧುಪರ್ಕಾದಿಪೂಜಾಭಿಸ್ತೋಷಯಾಮಾಸ ಸಾದರಂ ॥ ೪೦ ॥

ಯಜ್ಞವಾಟೇ ಮಹಾರಮ್ಯೇ ಕಾಮಧೇನುಂ ರಘೂತ್ತಮಃ ।
ಪೂಜಯಾಮಾಸ ವಿಧಿವದ್ವಸ್ತ್ರೈರಾಭರಣೈರಪಿ ॥ ೪೧ ॥

ಬಟ್ಟೆಯಾಗಿ ಉಳ್ಳವರು (ದಿಗಂಬರರು), ಕೆಲವರು ಮರದ ಚಿಗರನ್ನು ಉಟ್ಟವರು, ಕೆಲವರು ಪಂಚಾಗ್ನಿಸಾಧಕರು, ಕೆಲವರು ಹೊಗೆಯನ್ನು ಕುಡಿಯುವವರು ಕೆಲವರು ಈಷಣಾತ್ರಯವನ್ನು ಬಿಟ್ಟವರು. ಇಂತಹವರೆಲ್ಲರೂ ಅಲ್ಲಿಗೆ ಬರುತ್ತಿದ್ದರು.

೩೮. ವನಗಳು, ಆರಾಮಗಳು, ಗಿರಿಗಳು, ದುರ್ಗಗಳು, ಆಶ್ರಮಗಳು, ಇವುಗಳಲ್ಲಿದ್ದವರೆಲ್ಲರೂ ಹೆಂಡತಿ ಮಕ್ಕಳೊಡನೆ ಅಲ್ಲಿಂದ ಹೊರಟು ಆ ರಾಮನ ಯಜ್ಞವನ್ನು ನೋಡಲು ಬಂದರು.

೩೯. ಈ ರೀತಿಯಾಗಿ ರಾಮನ ಯಜ್ಞದರ್ಶನಾಕಾಂಕ್ಷೆಯಿಂದ ಹತ್ತು ದಿಕ್ಕಿನಿಂದಲೂ ಶಿಷ್ಯರೊಡಗೂಡಿ ಋಷಿಗಳು ಬಂದರು.

೪೦. ರಾಮಚಂದ್ರನು ಅವರೆಲ್ಲರನ್ನೂ ಪ್ರತ್ಯುತ್ಥಾನ ಆಸನ ಮಧುಪರ್ಕ ಮುಂತಾದ ಪೂಜೆಗಳಿಂದ ಸತ್ಕರಿಸುತ್ತಿದ್ದನು. ಆದರಿಂದ ಅವರು ಸಂತೋಷ ಪಡುತ್ತಿದ್ದರು.

೪೧–೪೩. ಆ ಮಹಾರಮ್ಯವಾದ ಯಜ್ಞಮಂಟಪದಲ್ಲಿ ರಾಮನು ಕಾಮಧೇನುವನ್ನು ವಸ್ತ್ರ ಆಭರಣಗಳಿಂದ ಪೂಜಿಸಿದನು. ಅದರ ಕೊಂಬಿಗೆ

ಸುವರ್ಣಶೃಂಗಭೂಷಾಭಿಃ ಕಿಂಕಿಣೀನೂಪರಾದಿಭಿಃ ।
ಏವಂ ತಾಂ ಶೋಭಯಿತ್ವಾಥ ಪ್ರಾರ್ಥಯಾಮಾಸ ರಾಘವಃ ॥ ೪೨ ॥

ಧೇನೋ ಸಾಗರಸಂಭೂತೇ ತ್ವಮನ್ನಾನಿ ದ್ವಿಜಾದಿಕಾ ।
ದಾತುಮರ್ಹಸ್ಯಧ್ವರೇ ಮೇ ಪ್ರಸೀದ ಜಗದಂಬಿಕೇ ॥ ೪೩ ॥

ಏವಂ ಸಂಪ್ರಾರ್ಥ್ಯ ತಾಂ ಕಾಮಧೇನುಂ ರಾಮಃ ಪ್ರಣಮ್ಯ ಚ ।
ಬಬಂಧ ಪಾಕಶಾಲಾಯಾಂ ಪಟ್ಟಕೂಲಾಸನೋಪರಿ ॥ ೪೪ ॥

ಅಥ ಸಾ ಸುರಭಿಸ್ತುಷ್ಟಾ ಷಡ್ರಸಾನ್ನಾನಿ ಸಾದರಾತ್ ।
ದದೌ ಜನಕನಂದಿನ್ಯೈ ಸದೈವಾಧ್ವರಕರ್ಮಣಿ ॥ ೪೫ ॥

ನಾಗ್ನಿಕಾರ್ಯಂ ಚ ತತ್ರಾಸೀತ್ಪಾಕಶಾಲಾಸು ವೈ ಕದಾ ।
ಇಚ್ಛಾಭಕ್ಷ್ಯೈಸ್ಸದಾ ತುಷ್ಟಾ ಬಭೂವುರ್ಮುನಿಸತ್ತಮಾಃ ॥ ೪೬ ॥

ಚಿನ್ನದ ಗೊಣಸನ್ನು ಹಾಕಿಸಿದನು. ಕಾಲಿಗೆ ಗೆಜ್ಜೆಗಗ್ಗರಗಳನ್ನು ಹಾಕಿಸಿದನು. ಈ ರೀತಿಯಾಗಿ ಅದನ್ನು ಅಲಂಕರಿಸಿ ಇಂತೆಂದು ಪ್ರಾರ್ಥಿಸಿದನು.

೪೩. ಸಮುದ್ರದಲ್ಲಿ ಹುಟ್ಟಿದ ಎಲೈ ಕಾಮಧೇನುವೇ ! ಇಲ್ಲಿಗೆ ಯಾಗಕ್ಕೆ ಬಂದಿರುವ ಬ್ರಾಹ್ಮಣರಿಗೆಲ್ಲರಿಗೂ ಅನ್ನ ಮುಂತಾದುವುಗಳನ್ನು ಕೊಡು. ಎಲೈ ಜಗದಂಬಿಕೆಯೇ ! ಪ್ರಸನ್ನಳಾಗು ಎಂದನು.

೪೪. ಆ ಕಾಮಧೇನುವನ್ನು ಹೀಗೆ ಪ್ರಾರ್ಥಿಸಿ ನಮಸ್ಕರಿಸಿ ಪಾಕಶಾಲೆಯಲ್ಲಿ ಒಂದು ರೇಷ್ಮೆಯ ಬಟ್ಟೆಯನ್ನು ಮೆತ್ತಗೆ ಹಾಸಿ ಅದರಮೇಲೆ ಕಟ್ಟಿದನು.

೪೫. ಇದರಿಂದ ಆ ಕಾಮಧೇನುವು ಸಂತೋಷಪಟ್ಟುಕೊಂಡು ಆದರದಿಂದ ಷಡ್ರಸಾನ್ನವನ್ನು ಆ ಜನಕನಂದಿನಿಯಾದ ಸೀತೆಗೆ ಯಾಗದಲ್ಲಿ ಯಾವಾಗಲೂ ಕೊಡುತ್ತಿದ್ದಿತು.

೪೬. ಆ ಪಾಕಶಾಲೆಯಲ್ಲಿ ಅಗ್ನಿಗೆ ಕೆಲಸವೇ ಇಲ್ಲದೆ ಹೋಯಿತು. ಋಷಿಗಳೆಲ್ಲರೂ ಕಾಮಧೇನುವು ಕೊಟ್ಟ ತಮತಮಗೆ ಬೇಕಾದ ಭಕ್ಷ್ಯಭೋಜ್ಯಗಳನ್ನು ಊಟಮಾಡುತ್ತ ಸಂತುಷ್ಟರಾಗುತ್ತಿದ್ದರು.

ಯಾನ್ಯಾನ್ಯಾಕಾಮಾನ್ರಾಮಚಂದ್ರಶ್ಚಿಂತಯಾಮಾಸ ಚೇತಸಿ ।
ತಾವುಭೌ ಗೌರ್ಮಣಿಶ್ಶೀಘ್ರಂ ಕಲ್ಪಯಾಮಾಸತುರ್ಮಖೇ ॥ ೪೭ ॥

ತಥಾ ಸೀತಾಪಿ ಯಾನ್ ಕಾಮಾನ್ ಚಿಂತಯಾಮಾಸ ಚೇತಸಿ ।
ಕಾಮಧೇನುರ್ದದೌ ತಾಂಸ್ತಾನ್ ಶೀಘ್ರಂ ತ್ರೈಲೋಕ್ಯದುರ್ಲಭಾನ್ ॥ ೪೮ ॥

ಸರ್ವತ್ರ ಯಜ್ಞವಾಟೇ ಹಿ ದ್ವಿಜಾದ್ಯೈಶ್ಚ ಸಮಂತತಃ ।
ಪಙ್ಕ್ತಿಕಷು ಭೂಮಿಜಾದೀನಾಂ ಪರಿವೇಷಣ ಕರ್ಮಣಿ ॥ ೪೯ ॥

ಸ್ತ್ರೀಣಾಂ ಕಂಕಣನಾದ್ಯೈಶ್ಚ ಶುಶ್ರುವೇ ನೂಪುರಧ್ವನಿಃ ।
ಅಥ ರಾಮಶ್ಚ ಸೌಮಿತ್ರಿಂ ಸಮಾಹೂಯ ವಚೋಽಬ್ರವೀತ್ ॥ ೫೦ ॥

ಸೀಮಾಚಾರಾನ್ ಸಮಾಹೂಯ ಮಮ ವಾಕ್ಯಾಚ್ಚ ಸಾದರಂ ।
ಆಜ್ಞಾಪಯಸ್ವ ಶೀಘ್ರಂ ತ್ವಂ ಶಾಸನಂ ಯನ್ಮಯೋಚ್ಯತೇ ॥ ೫೧ ॥

---

೪೭. ರಾಮಚಂದ್ರನು ಯಾವು ಯಾವುಗಳನ್ನು ಬೇಕೆಂದು ಮನಸ್ಸಿನಲ್ಲಿ ಅಪೇಕ್ಷಿಸುತ್ತಿದ್ದನೋ ಅವೆಲ್ಲವನ್ನೂ ಕಾಮಧೇನು ಕೌಸ್ತುಭಮಣಿ ಚಿಂತಾಮಣಿಗಳು ಆ ಯಾಗದಲ್ಲಿ ಉಂಟುಮಾಡಿ ಕೊಡುತ್ತಿದ್ದುವು.

೪೮. ಅದರಂತೆಯೇ ಸೀತೆಯೂ ಯಾವು ಯಾವುಗಳನ್ನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳುತ್ತಿದ್ದಳೋ ಅವೆಲ್ಲವನ್ನೂ ಕಾಮಧೇನುವು ದುರ್ಲಭವಾದುದಾದರೂ ಒಡನೆಯೇ ಕೊಡುತ್ತಿದ್ದಿತು.

೪೯-೫೦. ಆ ಯಜ್ಞಮಂಟಪದಲ್ಲಿ ಎಲ್ಲಾ ಕಡೆಯಲ್ಲಿಯೂ ಬ್ರಾಹ್ಮಣರ ಪಂಕ್ತಿಯಲ್ಲಿ ಪದಾರ್ಥಗಳನ್ನು ಬಡಿಸುವಾಗ ಹೆಂಗಸರ ಕೈಬಳೆ ಮತ್ತು ಕಾಲುಮಿಂಚು ಬಳೆಗಳ ಶಬ್ದವೇ ಕೇಳಿಬರುತ್ತಲಿದ್ದಿತು. ಹೀಗಿರಲು ರಾಮನು ಸೌಮಿತ್ರಿಯನ್ನು ಕರೆದು ಇಂತೆಂದು ಆಜ್ಞಾಪಿಸಿದನು.

೫೧. ಎಲೈ ಸೌಮಿತ್ರಿಯೇ ! ಈ ಯಜ್ಞದ ಎಲ್ಲೆಯ ತುದಿಯಲ್ಲಿರುವ ಆಳುಗಳನ್ನು ಕರೆದು ನಾನು ಹೇಳಿದಂತೆ ಅವರಿಗೆ ಅಪ್ಪಣೆಮಾಡು.

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥಾಶ್ರಮೀ ಯತಿಃ ।
ಯಃ ಕಶ್ಚಿದ್ವಾ ಸಮಾಯಾತಿ ಪಥಿಕಸ್ಸ ಮಮಾಜ್ಞಯಾ ॥ ೫೨ ॥

ನಿವಾರಣೀಯೋ ಯುಷ್ಮಾಭಿರ್ನ ಕದಾಪ್ಯದ್ವರೇ ಮಮ ।
ಮಮಾಜ್ಞಾಂ ನ ಪ್ರತೀಕ್ಷಧ್ವಂ ಕೋಪಃ ಕಾರ್ಯೋ ನ ಕಸ್ಯ ಚಿತ್ ॥ ೫೩ ॥

ಇತಿ ರಾಮವಚಃ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ ।
ಸೀಮಾಚಾರಾನ್ ಸಮಾಹೂಯ ರಾಘವೋಕ್ತಂ ನ್ಯವೇದಯತ್ ॥ ೫೪ ॥

ತತೋ ರಾಮಃ ಪುನಃ ಪ್ರಾಹ ಸಮಾಹೂಯಾಥ ಲಕ್ಷ್ಮಣಂ ।
ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥಾಶ್ರಮೀ ಯತಿಃ ॥ ೫೫ ॥

ಮುನೀನಾಂ ದಯಿತಾ ಬಾಲಾಶ್ಶಿಷ್ಯಾಸ್ಸಂಬಂಧಿನಸ್ತಥಾ ।
ಪೌರಾ ಜಾನಪದಸ್ಥಾಸ್ತು ತೇಷಾಂ ಸಂಬಂಧಿನಃ ಸ್ತ್ರಿಯಃ ॥ ೫೬ ॥

೫೨–೫೩. ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲೀ, ಯತಿಯೇ ಆಗಲಿ ಯಾವನು ಬಂದರೂ ದಾರಿಯಲ್ಲಿ ನೀವು ತಡೆಯಕೂಡದು. ಅವನು ಯಜ್ಞಕ್ಕೆ ಬರಲಿ. ಈ ವಿಷಯದಲ್ಲಿ ನನ್ನ ಅಪ್ಪಣೆಯನ್ನು ಕೇಳಬೇಕಾದುದಿಲ್ಲ. ಒಬ್ಬನ ಮೇಲೆಯೂ ಕೋಪವೆಂಬುದನ್ನು ಮಾಡಲೇ ಕೂಡದು.

೫೪. ರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಎಲ್ಲೆಕಟ್ಟನ್ನು ಕಾಯುವವರನ್ನು ಕುರಿತು ರಾಮನು ಹೇಳಿದುದನ್ನು ಅವರಿಗೆ ಹೇಳಿದನು.

೫೫–೫೭. ರಾಮನು ಮತ್ತೆಯೂ, ಲಕ್ಷ್ಮಣನನ್ನು ಕರೆದು ಬ್ರಹ್ಮಚಾರಿಯಾಗಲೀ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲೀ, ಯತಿಯಾಗಲೀ, ಮುನಿಗಳ ಹೆಂಡಿರಾಗಲಿ, ಮಕ್ಕಳಾಗಲಿ, ಶಿಷ್ಯರಾಗಲಿ. ಬಂಧುಗಳಾಗಲಿ, ಪಟ್ಟಣಿಗರಾಗಲಿ, ದೇಶದವರು ಯಾರೇ ಆಗಲಿ ಅವರ ಬಂಧುಗಳಾಗಲಿ, ಹೆಂಡರಾಗಲಿ, ದಾಸರಾಗಲಿ, ದಾಸಿಯರಾಗಲಿ, ಯಾರೇ ಆಗಲಿ ಯಾವು

ದಾಸೀದಾಸಜನಾಸ್ಸರ್ವೇ ಯದ್ಯದ್ವಾಂಛಂತಿ ಲಕ್ಷ್ಮಣ ।
ಮಾಮಪೃಷ್ಟ್ವಾ ತು ತತ್ತೇಷಾಂ ದಾತವ್ಯಂ ಹ್ಯವಿಚಾರಿತಂ ॥ ೫೭ ॥

ಅಂತ್ಯಜಾವಧಿ ಸರ್ವಾಣಿ ಹಿ ತೋಷಯಧ್ವಂ ನಿರಂತರಂ ।
ನ ಕೇಷಾಮಭಿಲಾಷಾಶ್ಚ ವಿಫಲಾ ಹಿ ವಿಧೀಯತಾಂ ॥ ೫೮ ॥

ಅಯೋಧ್ಯಾಂ ಕಾಮಧೇನುಂ ಚ ಜಾನಕೀಂ ಕೌಸ್ತುಭಂ ಮಣಿಂ ।
ಚಿಂತಾಮಣಿಂ ಪುಷ್ಪಕಂ ಚ ರಾಜ್ಯಂ ಕೋಶಾದಿಕಂ ಚ ಮೇ ॥ ೫೯ ॥

ಏತೇಷ್ವಪಿ ಚ ಯೋ ಯಾಚ್ನಾಂ ಯಾಚಯಿಷ್ಯತಿ ತತ್ತ್ವಯಾ ।
ನ ದತ್ತಂ ಚೇತಿ ವೈ ಶ್ರುತ್ವಾ ಮಮಾತೋಷೋ ಭವೇತ್ತ್ವಯಿ ॥ ೬೦ ॥

ಅತೋ ಜ್ಞಾತ್ವಾ ಭಯಂ ಮತ್ತೋ ದದಸ್ವ ಹ್ಯವಿಚಾರತಃ ।
ಯಾಚ್ನಾಭಂಗಃ ಕೃತಶ್ಚೇದ್ಧಿ ಮಚ್ಛಿರೋಹಾ ಭವಿಷ್ಯಸಿ ॥ ೬೧ ॥

ಯಾವುದನ್ನು ಅಪೇಕ್ಷಿಸುತ್ತಾರೆಯೋ ಅದೆಲ್ಲವನ್ನೂ ಅವರಿಗೆ ಸ್ವಲ್ಪವೂ ಹಿಂದು ಮುಂದು ನೋಡದೆ ನನ್ನನ್ನು ಕೇಳದೆ ಕೊಡತಕ್ಕದ್ದು.

೫೮. ಉತ್ತಮ ಜಾತಿಯಿಂದ ಮೊದಲುಮಾಡಿಕೊಂಡು ಅಂತ್ಯಜರವರೆಗೂ ಎಲ್ಲರನ್ನೂ ಯಾವಾಗಲೂ ಸಂತೋಷಪಡಿಸಿರಿ. ಯಾರ ಅಪೇಕ್ಷೆಯನ್ನೂ ಕೂಡ ಈಡೇರದಂತೆ ಮಾಡಬೇಡಿರಿ. ಖಂಡಿತವಾಗಿಯೂ ಅವರು ಕೇಳಿದುದನ್ನು ಕೊಡಿರಿ.

೫೯-೬೦ ಅಯೋಧ್ಯೆ, ಕಾಮಧೇನು, ಜಾನಕಿ, ಕೌಸ್ತುಭಮಣಿ ಚಿಂತಾಮಣಿ, ಪುಷ್ಪಕ, ರಾಜ್ಯ, ಕೋಶ, ಇನ್ನೂ ಏನೇನಿವೆಯೋ ಅವುಗಳಲ್ಲಿ ಯಾವುದನ್ನು ಯಾವನು ಕೇಳಿದರೂ ಕೊಟ್ಟುಬಿಡಿ. ಕೊಡಲಿಲ್ಲವೆಂದು ನನಗೆ ತಿಳಿದರೆ ಬಹುದುಃಖವಾಗುತ್ತದೆ. ನಿನ್ನ ಮೇಲೆ ಕೋಪವೂ ಬರುತ್ತದೆ.

೬೧-೬೨. ನನ್ನಿಂದ ಈ ಹೆದರಿಕೆಯನ್ನು ಇಟ್ಟುಕೊಂಡು ನೀನು ಯೋಚನೆ ಮಾಡದೆ ದಾನಮಾಡು. ಯಾವನ ಇಷ್ಟವಾದರೂ ನೆರವೇರದೆ ಹೋದರೆ ಆಗ

ಸದಾ ಸ್ಮರ ಗಿರಂ ಮೇ ತ್ವಮಿಮಾಂ ಲಕ್ಷ್ಮಣ ಸಾದರಂ ।
ಇತಿ ರಾಮಕೃತಾಂ ಶಿಕ್ಷಾಮಂಗೀಕೃತ್ಯ ಸ ಲಕ್ಷ್ಮಣಃ ।
ತಥಾ ಚಕಾರ ತತ್ಸರ್ವಂ ಯಥಾ ರಾಮೇಣ ಶಿಕ್ಷಿತಂ ॥ ೬೨ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಲಕ್ಷ್ಮಣಾಜ್ಞಾಕರಣಂ
ನಾಮ ದ್ವಿತೀಯಸ್ಸರ್ಗಸ್ಸಮಾಪ್ತಃ

ನಿನ್ನನ್ನು ಕಡಿದುಹಾಕುತ್ತೇನೆ. ಎಲೈ ಲಕ್ಷ್ಮಣನೇ ! ಈ ಮಾತನ್ನು ಜ್ಞಾಪಕದಲ್ಲಿ ಯಾವಾಗಲೂ ಇಟ್ಟುಕೋ. ಎನ್ನಲು ರಾಮನ ಅಪ್ಪಣೆಯನ್ನು ಒಪ್ಪಿಕೊಂಡು ಲಕ್ಷ್ಮಣನು ರಾಮನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಲಕ್ಷ್ಮಣಾಜ್ಞಾ
ಕರಣವೆಂಬ ಎರಡನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ

॥ ಎರಡನೆಯ ಸರ್ಗದ ಸಾರಾಂಶವು ॥

ಏಳನೆಯ ದಿನದಲ್ಲಿ ಸುಮುಹೂರ್ತವು ಬರಲು ಸೀತಾರಾಮರು ಮಂಗಳ ಸ್ನಾನವನ್ನು ಮಾಡಿ ಗುರುಹಿರಿಯರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದು ಗುರುವಾದ ವಸಿಷ್ಠನ ಮಾತಿನಂತೆ ಹಸೆಯಮೇಲೆ ಕುಳಿತು ಗಣಪತಿಯ ಪೂಜೆಯನ್ನು ಮಾಡಿದರು. ಅನಂತರ ಪುಣ್ಯಾಹವಾಚನವಾದಮೇಲೆ ಗುರುವು ದೀಕ್ಷೆಯನ್ನು ಕೊಟ್ಟನು. ಅನಂತರ ಶ್ರೀರಾಮನು ಆ ಋಷಿಗಳಲ್ಲಿ ಯಾಗಕ್ಕೆ ಬೇಕಾಗುವ ಋತ್ವಿಕ್ಕುಗಳೆಲ್ಲರನ್ನೂ ವರಿಸಿದನು. ಅನಂತರ ಆ ರಾಮನು ಗುರುವಿನ ಬಳಿಯಲ್ಲಿ ಕುಳಿತನು. ತಮ್ಮಂದಿರೂ ಅವರ ಹೆಂಡತಿಯರೂ ಸ್ನಾನಾಲಂಕಾರಗಳನ್ನು ಮಾಡಿಕೊಂಡು ಅಲ್ಲಿಗೆ ಬಂದು ಸೇರಿದರು. ಈ ಅಶ್ವಮೇಧಯಾಗದ ವಿಷಯವನ್ನು ಕೇಳಿ ಋಷಿಗಳೂ ರಾಜರೂ ಇತರರೂ ಬರಲು ಮೊದಲಿಟ್ಟರು. ಬಂದವರೆಲ್ಲರನ್ನೂ ರಾಮಚಂದ್ರನು ಅರ್ಘ್ಯಾದಿಗಳನ್ನು ಕೊಟ್ಟು ಗೌರವಿಸುತ್ತಿದ್ದನು.

ಬಂದವರೆಲ್ಲರಿಗೂ ಸುಖಭೋಜನವಾಗಲು ಕಾಮಧೇನುವನ್ನು ಅಲಂಕರಿಸಿ ಅದನ್ನು ರಾಮನು ಪ್ರಾರ್ಥಿಸಿದನು. ಅದು ಕೇಳಿದುದೆಲ್ಲವನ್ನೂ ಕೊಡುತ್ತಿದ್ದಿತು. ಅದರ ಜೊತೆಗೆ ಕೌಸ್ತುಭಚಿಂತಾಮಣಿಗಳೆರಡೂ ಸೇರಿಕೊಂಡು ಜನಗಳಿಗೆ ಯಾವ ವಿಷಯದಲ್ಲಿಯೂ ಕೊರತೆಯಿಲ್ಲದಂತೆ ಮಾಡಿದುವು. ಆ ಯಜ್ಞದಲ್ಲಿ ಬೆಂಕಿಯ ಕೆಲಸವಿಲ್ಲದೇನೆಯೇ ಬೇಕಾದ ಆಹಾರಗಳು ಒದಗುತ್ತಿದ್ದುವು.

ಎಲ್ಲರೂ ತಮಗೆ ಬೇಕಾದುವನ್ನು ಹೊಂದಿ ಬಹುವಾಗಿ ಸಂತೋಷ ಪಡುತ್ತಿದ್ದರು. ಸೀತೆಯೇ ಮುಂತಾದ ಹೆಂಗಸರು ಎಲ್ಲರಿಗೂ ಯಥೇಚ್ಛವಾಗಿ ಬಡಿಸುತ್ತಿದ್ದರು.

ಯಾವ ಜಾತಿಯವನೇ ಆಗಲಿ ಯಾವ ವಯಸ್ಸಿನವನೇ ಆಗಲಿ ಆ ಎಲ್ಲೆಗೆ ಬಂದವನನ್ನು ಒಬ್ಬರೂ ತಡೆಯಕೂಡದು. ಅವನು ಯಜ್ಞದಲ್ಲಿ ಸುಖವಾಗಿದ್ದು ಕೊಂಡು ಹೋಗಬಹುದು. ಈ ವಿಷಯದಲ್ಲಿ ನನ್ನ ಅಪ್ಪಣೆಯನ್ನು ನಿರೀಕ್ಷಿಸ ಬೇಕೆಂಬುದಲ್ಲ. ಯಾವನೂ ಯಾವನಮೇಲೂ ಕೋಪಮಾಡಕೂಡದು. ಎಂದು ಲಕ್ಷ್ಮಣನಿಗೆ ರಾಮನು ಅಪ್ಪಣೆಮಾಡಿದನು.

ಅಲ್ಲದೆ ನನ್ನಲ್ಲಿರುವ ಪದಾರ್ಥಗಳಲ್ಲಿ ಯಾವನು ಏನನ್ನು ಕೇಳಿದರೂ ಅವನಿಗೆ ಅದನ್ನು ಕೊಡಲೇ ಬೇಕು. ಅದರ ವಿಷಯದಲ್ಲಿ ವಿಚಾರಮಾಡಲೇ ಕೂಡದು. ಕೊನೆಗೆ ಸೀತೆಯನ್ನೂ ಕೊಡಬಹುದು. ಹಾಗೆ ಕೊಡದಿದ್ದರೆ ನನಗೆ ಬಹುವಾದ ಕೋಪವು ಬರುತ್ತದೆ. ಯಾವನಿಗಾದರೂ ಕೇಳಿದುದನ್ನು ಕೊಡದೆ ಹೋದರೆ ಆಗ ನಾನು ನಿನ್ನ ತಲೆಯನ್ನು ಕತ್ತರಿಸಿ ಹಾಕುತ್ತೇನೆ. ಈ ಮಾತನ್ನು ಜ್ಞಾಪಕದಲ್ಲಿಟ್ಟುಕೋ. ಎಂದು ಹೇಳಿದನು.

ರಾಮನ ಈ ಮಾತನ್ನು ಲಕ್ಷ್ಮಣನು ಒಪ್ಪಿಕೊಂಡು ಅದರಂತೆಯೇ ಎಲ್ಲವನ್ನೂ ಮಾಡಿದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

॥ ತೃತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಮುಕ್ತಸ್ತದಾ ವಾಜೀ ರಾಘವೇಣ ಮಹಾತ್ಮನಾ ।
ಯಜ್ಞಾಂಗಶ್ಯಾಮಕರ್ಣಸ್ಸ ಪೂರ್ವದೇಶಂ ಯಯೌ ಜವಾತ್ ॥ ೧ ॥

ಶತ್ರುಘ್ನೇನ ಸಸೈನ್ಯೇನ ಪ್ರಾಪ್ತೋ ಭಾಗೀರಥೀತಟಂ ।
ಏತಸ್ಮಿನ್ನಂತರೇ ರಾಮಃ ಸ್ವಪ್ರತಾಪಂ ಪ್ರದರ್ಶಯನ್ ॥ ೨ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ

ಮೂರನೆಯ ಸರ್ಗವು

೧. ರಾಮದಾಸನು ಹೇಳಿದನು–ಅನಂತರ ರಾಮನಿಂದ ಪೂಜಿಸಿ ಬಿಡಲ್ಪಟ್ಟ ಯಜ್ಞಾಂಗವಾದ ಶ್ಯಾಮಕರ್ಣವುಳ್ಳ ಕುದುರೆಯು ಹೊರಟು ಮೊದಲು ಪೂರ್ವದೇಶಕ್ಕೆ ಹೋಯಿತು.

೨. ಪೂರ್ವದೇಶಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಅಡ್ಡಲಾಗಿ ಕುದುರೆಗೆ ಗಂಗಾನದಿಯು ಸಿಕ್ಕಿತು. ಜೊತೆಯಲ್ಲಿಯೇ ಶತ್ರುಘ್ನನೂ ಸೈನ್ಯದೊಡನೆ ಹೋದನು. ಈ ಸಮಯದಲ್ಲಿ ಶ್ರೀರಾಮನು ತನ್ನ ಮಹಿಮೆಯನ್ನು ತೋರಿಸಲು ಒಂದು ಆಶ್ಚರ್ಯವಾದ ಕೆಲಸವನ್ನು ಮಾಡಿದನು.

ಚಕಾರ ಕೌತುಕಂ ತತ್ರ ಶತ್ರುಘ್ನಸ್ಯ ಪುರೋ ಮಹತ್ ।
ಬ್ರಹ್ಮಾವರ್ತಂ ಮಹಾದೇಶಂ ತ್ಯಕ್ತ್ವಾ ಗಂಗಾತಟಂ ಪ್ರತಿ ॥ ೩ ॥

ಯಾವತ್ಪ್ರಾಪ್ತಶ್ಶ್ಯಾಮಕರ್ಣಸ್ತಾವದಾಸೀತ್ತದದ್ಭುತಂ ।
ಗಂಗಾಯಾಂ ಚ ಮಹಾಪೂರೋ ಯತ್ರ ನೌಕಾಪಿ ಕುಂಠಿತಾ ॥ ೪ ॥

ಶತ್ರುಘ್ನೇನಾಪಿ ತಂ ದೃಷ್ಟ್ವಾ ಕುಂಠಿತಾಂ ಗತಿಮೀಕ್ಷ್ಯ ಚ ।
ಕಾಲಾತಿಕ್ರಮಭೀತ್ಯಾ ಸ ನಿಜಚಿತ್ತೇ ವ್ಯಚಿಂತಯತ್ ॥ ೫ ॥

ಆದಾವೇವಾತ್ರ ಮೇ ವಿಘ್ನಮುತ್ಪನ್ನಂ ಗಮನೇ ಮಹತ್ ।
ಗ್ರಾಸೇ ಪ್ರಾಥಮಿಕೇ ಯದ್ವನ್ಮಕ್ಷಿಕಾಪತನಂ ತಥಾ ॥ ೬ ॥

ತರ್ಹೀದಾನೀಂ ರಾಮಚಂದ್ರಪ್ರತಾಪೇನಾಸ್ತು ಮೇ ಗತಿಃ ।
ನಿಶ್ಚಿತ್ಯೇತ್ಥಂ ಸ ಶತ್ರುಘ್ನೋ ರಥಸ್ಥೋ ಜಾಹ್ನವೀತಟೇ ॥ ೭ ॥

೩–೪. ಬ್ರಹ್ಮಾವರ್ತವನ್ನು ಬಿಟ್ಟು ಆ ಕುದುರೆಯು ಗಂಗಾನದಿಯ ದಡವನ್ನು ಹೊಂದಿದಾಗ ಗಂಗೆಯಲ್ಲಿ ಮಹಾಪ್ರವಾಹವು ಬಂದಿತು. ಆದರಲ್ಲಿ ದೋಣಿಗಳೂ ಕೂಡ ಓಡಾಡದಂತೆ ಪ್ರವಾಹವು ಅಧಿಕವಾಗಿದ್ದಿತು. ಇದು ರಾಮನು ಮಾಡಿದ ತನ್ನ ಮಹಿಮೆಯ ಕೆಲಸವಾಗಿದ್ದಿತು.

೫. ಈ ಪ್ರವಾಹವನ್ನು ನೋಡಿ ಶತ್ರುಘ್ನನು ತನ್ನ ಗತಿಯು ಕುಂಠಿತವಾಯಿತಲ್ಲ! ಎಂದು ಯೋಚಿಸುತ್ತ ಕಾಲವು ಮೀರಿಹೋಗುವುದಲ್ಲ! ಎಂಬ ಹೆದರಿಕೆಯಿಂದ ಇಂತೆಂದುಕೊಂಡನು.

೬. ಊಟಮಾಡಲು ಕುಳಿತಾಗ ಮೊದಲನೆಯ ತುತ್ತಿನಲ್ಲಿಯೇ ನೊಣವು ಬಿದ್ದಂತೆ ಮೊದಲಿನ ಸಾರಿಯೇ ನನ್ನ ಪ್ರಯಾಣಕ್ಕೆ ಇಂತಹ ಮಹಾವಿಘ್ನವು ಬಂದಿತಲ್ಲ!

೭. ಆದರೂ ಬಾಧಕವಿಲ್ಲ. ಆ ರಾಮಚಂದ್ರನ ಪ್ರತಾಪದಿಂದಲೇ ನಾನು ಹೊರಗೆ ಹೋಗಬೇಕು. ಎಂದು ನಿಶ್ಚಯಿಸಿಕೊಂಡು ಜಾಹ್ನವಿಯ ದಡದಲ್ಲಿ ರಥವನ್ನು ನಿಲ್ಲಿಸಿಕೊಂಡನು.

ಸ್ಥಿತ್ವಾ ಪ್ರೋವಾಚ ಗಂಗಾಂ ತಾಂ ಪರಿಪೂಜ್ಯ ಸವಿಸ್ತರಾತ್ ।
ಶೃಣ್ವತ್ಸು ಸರ್ವಲೋಕೇಷು ಮುನಿದೇವಗಣೇಷು ಚ ॥ ೮ ॥

ದೇವಿ ಗಂಗೇ ಮಹಾಪುಣ್ಯೇ ಯದಿ ಸತ್ಯಂ ರಘೂತ್ತಮೇ ।
ದೀಯತಾಂ ತರ್ಹಿ ಪಂಥಾ ಮೇ ಶೀಘ್ರಂ ಸೈನ್ಯಯುತಸ್ಯ ಚ ॥ ೯ ॥

ಇತಿ ಶತ್ರುಘ್ನವಚನಂ ಶ್ರುತ್ವಾ ಸಾ ಜಾಹ್ನವೀ ತಥಾ ।
ಸ್ವವೇಗಂ ಖಂಡಯಾಮಾಸ ಸ್ವೋದರಂ ತಂ ಪ್ರದರ್ಶಯತ್ ॥ ೧೦ ॥

ಪದ್ಭಿರ್ವಾಜೀ ತಥಾ ಶೀಘ್ರಂ ಪರಂ ತೀರಂ ಯಯೌ ಕ್ಷಣಾತ್ ।
ತಥಾ ಸೈನ್ಯೇನ ಶತ್ರುಘ್ನಸ್ಸುಮಂತ್ರಸ್ಸಮಾಯಯೌ ॥ ೧೧ ॥

ಮಾಗಧಾಖ್ಯಂ ಮಹಾದೇಶಂ ಸ ಏವ ಕೀಕಟಃ ಸ್ಮೃತಃ ।
ಪೂರ್ವವಚ್ಚ ಮಹಾಪೂರೋ ಜಾಹ್ನವ್ಯಾಂ ಸ ಬಭೂವ ಹ ॥ ೧೨ ॥

---

೮. ಆಗ ಗಂಗೆಯನ್ನು ಕುರಿತು ವಿಧಿಕ್ರಮದಂತೆ ಪೂಜಿಸಿದನು. ಎಲ್ಲರೂ ಕೇಳುನಂತೆ ಮುನಿ ದೇವಗಣಗಳೆದುರಿಗೆ ಇಂತೆಂದನು.

೯. ದೇವಿಯಾದ ಗಂಗೆಯೇ ರಾಮಚಂದ್ರನಲ್ಲಿ ಸತ್ಯವಿದ್ದರೆ ಬೇಗನೆ ನನಗೂ ನನ್ನ ಸೈನ್ಯಕ್ಕೂ ದಾರಿಯನ್ನು ಕೊಡು. ಎಂದನು.

೧೦. ಶತ್ರುಘ್ನನ ಈ ಮಾತನ್ನು ಕೇಳಿ ಜಾಹ್ನವಿಯು ತನ್ನ ಪ್ರವಾಹವನ್ನು ಕಡಿಮೆಮಾಡುತ್ತ ತನ್ನಲ್ಲಿ ಮರಳು ಕಾಣುವಂತೆ ಮಾಡಿ ಹೋಗುವಂತಾಯಿತು.

೧೧. ಒಡನೆಯೇ ಆ ಕುದುರೆಯು ನಡೆದುಕೊಂಡೇ ಗಂಗೆಯನ್ನು ದಾಟಿ ಆಚೆಯ ದಡಕ್ಕೆ ಹೋಯಿತು. ಅನಂತರ ಶತ್ರುಘ್ನನೂ ಸುಮಂತ್ರನೊಡನೆ ಆಚೆಯ ದಡಕ್ಕೆ ಹೋದನು.

೧೨. ಇವರು ಹೋದುದೇ ಮಗಧದೇಶವು. ಅದಕ್ಕೆ ಕೀಕಟದೇಶವೆಂದೂ ಹೆಸರಿದ್ದಿತು. ಇವರು ಆಚೆಯ ದಡವನ್ನು ಹೊಂದಿದ ಒಡನೆಯೇ ಗಂಗೆಯಲ್ಲಿ ಮಹಾಪ್ರವಾಹವು ಮತ್ತೆ ಹರಿಯಿತು.

ಪ್ರತಾಪಂ ರಾಮಚಂದ್ರಸ್ಯ ಸರ್ವೈರ್ಬುದ್ಧ್ವಾ ಮಹಾದ್ಭುತಂ ।
ಚಕ್ರುಸ್ತೇ ಜಯಶಬ್ದಾಂಶ್ಚ ಸೀತಾರಾಮಾಖ್ಯಯಾ ಮುಹುಃ ॥ ೧೩ ॥

ಶ್ಯಾಮಕರ್ಣಸ್ತತಶ್ಶೀಘ್ರಂ ಯಯೌ ಪೂರ್ವ ದಿಶಂ ಪ್ರತಿ ।
ಮಾಗಧೇಶೋ ನೃಪಶ್ಚಾಥ ಶ್ರುತ್ವಾ ತುರಗಮಾಗತಂ ॥ ೧೪ ॥

ಪ್ರತ್ಯುಜ್ಜಗಾಮ ಸೈನ್ಯೇನ ಪುರಸ್ಕೃತ್ವಾಥ ವಾರಣಂ ।
ನಿನಾಯಾಶ್ವಂ ಪಠಿತ್ವಾ ತತ್ಫಾಲಪತ್ರಂ ಪುರಂ ನಿಜಂ ॥ ೧೫ ॥

ಪೂಜ್ಯಾದರಾತ್ತತ್ರಸೈನ್ಯಂ ಶತ್ರುಘ್ನಂ ವಿಭವೈರ್ನಿಜೈಃ ।
ಸಮಸ್ತಂ ನಿಜಕೋಶಾದಿ ಸಮರ್ಪ್ಯ ಮಗಧಾಧಿಪಃ ॥ ೧೬ ॥

ಪೌರಾನ್ ಜಾನಪದಾನ್ ಸ್ವಸ್ತ್ರೀಸ್ಸುಹೃತ್ತನಯ ಮಂತ್ರಿಣಃ ।
ಪೌರಪತ್ನೀರ್ಜಾನಪದ ಪತ್ನೀರ್ವಿಪ್ರಾನ್ ಪುರೋಧಸಂ ॥ ೧೭ ॥

---

೧೩. ಆಗ ಈ ರಾಮಚಂದ್ರನ ಮಹಿಮೆಯನ್ನು ಎಲ್ಲರೂ ತಿಳಿದು ಜಯ ಜಯ ಎಂಬುದಾಗಿ ಸೀತಾರಾಮನ ಹೆಸರನ್ನು ಹೇಳುತ್ತ ಕೂಗುತ್ತಿದ್ದರು.

೧೪. ಅನಂತರ ಆ ಯಾಗದ ಕುದುರೆಯು ಪೂರ್ವದಿಕ್ಕಿಗೆ ಹೊರಟಿತು. ಮಗಧರಾಜನಿಗೆ ಈ ಯಜ್ಞದ ಕುದುರೆಯು ಬಂದುದು ತಿಳಿಯಿತು.

೧೫. ಅವನು ಅದರ ಹಣೆಯಲ್ಲಿರುವ ಓಲೆಯನ್ನು ಓದಿ ಆನೆ ಸಹಿತವಾಗಿ ಸೈನ್ಯದೊಡನೆ ಬಂದು ಎದುರುಗೊಂಡು ಮನೆಗೆ ತೆಗೆದುಕೊಂಡು ಹೋದನು.

೧೬. ಆ ಕುದುರೆಯನ್ನು ಪೂಜಿಸಿ ಸೈನ್ಯಸಹಿತನಾದ ಶತ್ರುಘ್ನನನ್ನು ಗೌರವಿಸಿ ಪೂಜಿಸಿ ತನ್ನಲ್ಲಿದ್ದ ಕೋಶವೇ ಮುಂತಾದುವನ್ನು ಅವನಿಗೆ ಒಪ್ಪಿಸಿದನು.

೧೭. ಪಟ್ಟಣಿಗರು, ದೇಶದವರು, ತನ್ನ ಅಂತಃಪುರದವರು, ಸ್ನೇಹಿತರು, ಮಕ್ಕಳು, ಮಂತ್ರಿಗಳು, ಪಟ್ಟಣದ ಸ್ತ್ರೀಯರು, ಬ್ರಾಹ್ಮಣರು ಮುಂತಾದವರನ್ನು ವಾಹನಗಳೊಡನೆ ಅಯೋಧ್ಯೆಯಲ್ಲಿ ನಡೆಯುತ್ತಿದ್ದ ಯಾಗಕ್ಕೆ ಕಳುಹಿಸಿದನು.

ಪ್ರೇಷಯಾಮಾಸ ಸಾಕೇತೇ ನಾಹನ್ಯೈರಧ್ವರಂ ಪ್ರತಿ ।
ಸ್ವಯಂ ಸೈನ್ಯೇನ ತುರಗಚರಣಾನನುವೀಕ್ಷ್ಯ ಚ ॥ ೧೮ ॥

ಶತ್ರುಘ್ನಾಜ್ಞಾನುವರ್ತೀ ಬದ್ಧಹಸ್ತಪುಟೋ ಯಯೌ ।
ಏವಂ ಸರ್ವೇಽಪಿ ರಾಜಾನೋ ಜ್ಞಾತವ್ಯಾಸ್ಸರ್ವದಿಕ್ ಸ್ಥಿತಾಃ ॥ ೧೯ ॥

ನ ಕೇನಾಪಿ ಶ್ಯಾಮಕರ್ಣೋ ಬದ್ಧೋ ನೃಪತಿನಾ ಭುವಿ ।
ಇಂದ್ರಾದ್ಯೈರ್ನಿರ್ಜರೈರ್ನಾಪಿ ನಾಸುರಾದ್ಯೈಃ ಕದಾಚನ ॥ ೨೦ ॥

ತತೋ ವಾಜೀ ಪೂರ್ವದೇಶಾನಂಗವಂಗಕಲಿಂಗಕಾನ್ ।
ತಥಾ ನಾನಾವಿಧಾನನ್ಯಾನ್ವಿಲಂಘ್ಯ ಜಲಧೇಸ್ತಟಂ ॥ ೨೧ ॥

ದೃಷ್ಟ್ವಾ ನೃಪಕುಲೈರ್ಯುಕ್ತೋ ದಕ್ಷಿಣಾಭಿಮುಖೋ ಯಯೌ ।
ಗೋದಾವರೀಂ ನದೀಂ ತೀರ್ತ್ವಾ ದೇಶಮಾಂಧ್ರಂ ಚ ದ್ರಾವಿಡಂ ॥ ೨೨ ॥

೧೮-೧೯. ತಾನು ಸೈನ್ಯದೊಡನೆ ಆ ಕುದುರೆಯ ಹೆಜ್ಜೆಗಳನ್ನು ಅನುಸರಿಸಿ ಕೊಂಡು ಶತ್ರುಘ್ನನ ಅಪ್ಪಣೆಯನ್ನು ನಡಸುತ್ತ ಕೈಕಟ್ಟಿಕೊಂಡು ಹೊರಟನು. ಇದೇ ರೀತಿಯಾಗಿ ಎಲ್ಲಾ ದಿಕ್ಕುಗಳ ರಾಜರೂ ಮಾಡಿದರೆಂದು ತಿಳಿಯಬೇಕು.

೨೦. ಆ ಶ್ಯಾಮಕರ್ಣ ಕುದುರೆಯನ್ನು ಭೂಮಿಯಲ್ಲಿ ಒಬ್ಬನೂ ಕಟ್ಟಲೇ ಇಲ್ಲ. ಇಂದ್ರಾದಿದೇವತೆಗಳಾಗಲಿ ಅಸುರರಾಗಲಿ ಯಾರೂ ಕೂಡ ಕಟ್ಟಲೇ ಇಲ್ಲ.

೨೧. ಅನಂತರ ಆ ಕುದುರೆಯು ಪೂರ್ವದೇಶಗಳಾದ ಅಂಗ, ವಂಗ, ಕಳಿಂಗ ಮೊದಲಾದುವನ್ನೂ ಇನ್ನೂ ಅನೇಕ ಬಗೆಯಾದ ದೇಶಗಳನ್ನೂ ದಾಟಿ ಸಮುದ್ರದದಡಕ್ಕೆ ಹೋಯಿತು.

೨೨. ಶತ್ರುಘ್ನನು ಅಲ್ಲಿ ಸಮುದ್ರವನ್ನು ಕಂಡು ಅಲ್ಲಿಂದ ತಿರುಗಿ ಬಂದ ರಾಜರೊಡನೆ ದಕ್ಷಿಣಕ್ಕೆ ಹೊರಟನು. ಅಲ್ಲಿಂದ ಗೋದಾವರಿನದಿಯನ್ನು ದಾಟಿ ಆಂಧ್ರ ದ್ರಾವಿಡ ದೇಶಗಳನ್ನೂ ದಾಟಿದನು.

ಅತಿಕ್ರಮ್ಯಾರವಾರಾಖ್ಯಂ ದೇಶಂ ಸಮತಿಕ್ರಮ್ಯ ಚ ।
ಕಾಂಚೀಪ್ರದೇಶಾನ್ ಸಕಲಾನ್ ಪಶ್ಯನ್ನಾನಾವಿಧಾನ್ ಶುಭಾನ್ ॥ ೨೩ ॥

ಕಾವೇರೀಂ ಸಮತಿಕ್ರಮ್ಯ ಚೋಲದೇಶಂ ವಿಲಂಘ್ಯ ಚ ।
ಸೇತುಬಂಧಂ ತತೋ ದೃಷ್ಟ್ವಾ ಪಶ್ಚಿಮಾಭಿಮುಖೋ ಯಯೌ ॥ ೨೪ ॥

ತಾಮ್ರಪರ್ಣೀಂ ವಿಲಂಘ್ಯಾಥ ಸಮತಿಕ್ರಮ್ಯ ಕೇರಲಾನ್ ।
ದ್ವಿಷಟ್ ಪ್ರಕಾರಾನ್ ದೇಶಾಂಶ್ಚ ಗೋಕರ್ಣಂ ಚ ತತೋ ಯಯೌ ॥ ೨೫ ॥

ಕೃಷ್ಣಾತೀರಪ್ರದೇಶಾಂಶ್ಚ ಸಮತಿಕ್ರಮ್ಯ ಘೋಟಕಃ ।
ಕರ್ಣಾಟಕಂ ಮಹಾದೇಶಂ ಸಮತಿಕ್ರಮ್ಯ ಸತ್ವರಂ ॥ ೨೬ ॥

ಕೊಂಕಣಂ ಸಮತಿಕ್ರಮ್ಯ ತತ್ತದ್ದೇಶನೃಪೈಸ್ಸಹ ।
ಭೀಮಾಪ್ರದೇಶಾನ್ ಸಕಲಾನ್ ಶ್ಯಾಮಕರ್ಣಶ್ಶುಭಾವಹಃ ॥ ೨೭ ॥

೨೩–೨೪. ಆ ಕುದುರೆಯು ಆರವಾರಾಖ್ಯ ದೇಶವನ್ನೂ ದಾಟಿತು. ಕಾಂಚಿ ಪ್ರದೇಶಗಳನ್ನು ದಾಟುತ್ತಾ ಅಲ್ಲಿ ನಾನಾ ಬಗೆಯಾದ ವಿಷಯುಗಳನ್ನು ನೋಡುತ್ತ ಕಾವೇರಿಯನ್ನು ದಾಟಿ ಚೋಲದೇಶಕ್ಕೆ ಬಂದು ಅದನ್ನು ದಾಟಿ ಸೇತುಬಂಧಕ್ಕೆ ಬಂದು ಅವನ್ನು ನೋಡಿ ಪಶ್ಚಿಮಕ್ಕೆ ತಿರುಗಿತು.

೨೫. ಅಲ್ಲಿಂದ ಮುಂದೆ ತಾಮ್ರಪರ್ಣಿಯನ್ನು ದಾಟಿ ಕೇರಳದೇಶವನ್ನು ದಾಟಿ ಹನ್ನೆರಡು ಪ್ರಾಕಾರವಾದ ದೇಶಗಳನ್ನೂ ದಾಟಿ ಅನಂತರ ಗೋಕರ್ಣಕ್ಕೆ ಬಂದಿತು.

೨೬–೩೦. ಮುಂದೆ ಕೃಷ್ಣಾತೀರ ಪ್ರದೇಶಗಳನ್ನು ದಾಟಿ ಕರ್ಣಾಟಕ ಮಹಾದೇಶವನ್ನು ದಾಟಿ, ಕೊಂಕಣವನ್ನು ದಾಟಿ, ಆಯಾದೇಶದ ರಾಜರನು ಹಿಂದಿಟ್ಟುಕೊಂಡು ಬಂದಿತು. ಭೀಮಾ ಪ್ರದೇಶವನ್ನು ದಾಟಿತು. ಮುಂದೆ

ಪಶ್ಚಾದ್ ಯಯೌ ಮಹಾರಾಷ್ಟ್ರಾನ್ ಗೌತಮೀಂ ತಾಂ ವಿಲಂಘ್ಯ ಚ ।
ವಿದರ್ಭಂ ಸಮತಿಕ್ರಮ್ಯ ಯಯಾವಾಭೀರಮಂಡಲಂ ॥ ೨೮ ॥

ಮಾಲವಂ ಸಮತಿಕ್ರಮ್ಯ ತೀರ್ತ್ವಾ ಪುಣ್ಯಾಂ ಮಹಾನದೀಂ ।
ತೀರ್ತ್ವಾ ಸಾಭ್ರಮತೀಂ ಪುಣ್ಯಾಂ ಸಮತಿಕ್ರಮ್ಯ ಗುರ್ಜರಂ ॥ ೨೯ ॥

ಪ್ರಭಾಸಂ ಚ ತತೋ ಗತ್ವಾ ಯಯಾವಾನರ್ತಮುತ್ತಮಂ ।
ಸೌವೀರಾನ್ ಸಮತಿಕ್ರಮ್ಯ ಮರುದೇಶಂ ಯಯೌ ಹಯಃ ॥ ೩೦ ॥

ಧನ್ವದೇಶಮತಿಕ್ರಮ್ಯ ಯಯೌ ಸಾರಸ್ವತಾನಥ ।
ಮತ್ಸ್ಯಾನ್ ದೇಶಾನತಿಕ್ರಮ್ಯ ಯಯೌ ವಾಜೀ ಸ ಮಾಥುರಾನ್ ॥ ೩೧ ॥

ಶೂರಸೇನಾನತಿಕ್ರಮ್ಯ ಪಂಚಾಲಾನ್ ತುರಗೋ ಯಯೌ ।
ಕುರುಕ್ಷೇತ್ರಂ ತತೋ ಗತ್ವಾತಿಕ್ರಮ್ಯ ಕುರುಜಾಂಗಲಾನ್ ॥ ೩೨ ॥

ದೇಶಂ ಕೈಕೇಯಮುಲ್ಲಂಘ್ಯ ಯಯೌ ಕಾಶ್ಮೀರಮುತ್ತಮಂ ।
ಭಿಲ್ಲದೇಶಂ ಗೌಡದೇಶಂ ಶಕದೇಶಂ ಯಯೌ ಹಯಃ ॥ ೩೩ ॥

ಮಹಾರಾಷ್ಟ್ರಕ್ಕೆ ಹೋಯಿತು. ಗೌತಮಿಯನ್ನು ದಾಟಿತು. ವಿದರ್ಭವನ್ನು ದಾಟಿ ಆಭೀರಮಂಡಲಕ್ಕೆ ಹೋಯಿತು. ಮಾಲವದೇಶವನ್ನು ದಾಟಿತು. ಪ್ರಭಾಸಕ್ಕೆ ಹೋಗಿ ಅನಂತರ ಆನರ್ತಕ್ಕೆ ಹೋಯಿತು. ಮುಂದೆ ಸೌವೀರ ದೇಶವನ್ನು ದಾಟಿ ಮರುದೇಶಕ್ಕೆ ಹೋಯಿತು.

೩೧-೩೩. ಧನ್ವದೇಶವನ್ನು ದಾಟಿ ಸಾರಸ್ವತದೇಶಕ್ಕೆ ಹೋಯಿತು. ಮತ್ಸ್ಯದೇಶವನ್ನು ದಾಟಿತು. ಮಥುರೆಗೆ ಹೋಯಿತು. ಅಲ್ಲಿಂದ ಶೂರಸೇನ ದೇಶವನ್ನು ದಾಟಿ ಪಾಂಚಾಲಕ್ಕೆ ಹೋಯಿತು. ಕುರುಕ್ಷೇತ್ರಕ್ಕೆ ಹೋಗಿ ಕುರು ಜಾಂಗಲವನ್ನು ದಾಟಿತು. ಕೇಕಯ ದೇಶವನ್ನು ದಾಟಿ ಕಾಶ್ಮೀರಕ್ಕೆ ಹೋಯಿತು ಭಿಲ್ಲದೇಶ, ಗೌಡದೇಶಗಳನ್ನೂ, ಶಕದೇಶಗಳನ್ನೂ ಹೊಂದಿತು.

ಯವನಾಂಸ್ತಾಮ್ರದೇಶಾಂಶ್ಚ ಸಮತಿಕ್ರಮ್ಯ ವೇಗತಃ ।
ಪಶ್ಯನ್ ನಾನಾವಿಧಾನ್ ದೇಶಾನ್ ಕರತೋಯಾತಟೇನ ವೈ ॥ ೩೪ ॥

ಯಯೌ ವಾಜೀ ವಾಯುಗತ್ಯಾ ಶೀಘ್ರಂ ಜ್ವಾಲಾಮುಖೀಂ ಪ್ರತಿ ।
ದೋಷಭೀತ್ಯಾ ಕರತೋಯಾಂ ತೀರ್ತ್ವಾ ನೈವಾಗ್ರತೋ ಗತಃ ॥ ೩೫ ॥

ಕರ್ಮನಾಶಾನದೀಸ್ಪರ್ಶಾತ್ ಕರತೋಯಾವಿಲಂಘನಾತ್ ।
ಗಂಡಕೀ ಬಾಹುತರಣಾತ್ ಧರ್ಮಃ ಸ್ಖಲತಿ ಕೀರ್ತನಾತ್ ॥ ೩೬ ॥

ಹರಿದ್ವಾರಂ ಯಯೌ ವಾಜೀ ತತೋ ಗಂಗಾತಟೇನ ಹಿ ।
ಹಿಮಾದ್ರೇಃ ಸನ್ನಿಧಾನ್ ದೇಶಾನ್ ಸಮತಿಕ್ರಮ್ಯ ವೇಗತಃ ॥ ೩೭ ॥

ಬದರಿಕಾಶ್ರಮಮಾಲೋಕ್ಯ ಕಲಾಪಗ್ರಾಮವಾಸಿಭಿಃ ।
ಸಂಮಾನಿತಸ್ತದಾ ವಾಜೀ ಗತ್ವಾ ತನ್ಮಾನಸಂ ಸರಃ ॥ ೩೮ ॥

೩೪–೩೫. ಯವನದೇಶವನ್ನೂ, ತಾಮ್ರದೇಶವನ್ನೂ ದಾಟಿ ನಾನಾವಿಧವಾದ ದೇಶಗಳನ್ನು ನೋಡುತ್ತ ಕರತೋಯಾ ನದಿಯ ದಡದಲ್ಲಿ ಹೋಯಿತು. ಅಲ್ಲಿಂದ ಮುಂದೆ ಜ್ವಾಲಾಮುಖಿಗೆ ಹೋಯಿತು. ದೋಷಭೀತಿಯಿಂದ ಕರತೋಯಾನದಿಯನ್ನು ದಾಟಿ ಮುಂದಕ್ಕೆ ಹೋಗಲಿಲ್ಲ.

೩೬. ಕರ್ಮನಾಶ ನದಿಯನ್ನು ಸ್ಪರ್ಶಿಸುವುದರಿಂದಲೂ, ಕರತೋಯಾ ನದಿಯನ್ನು ದಾಟುವುದರಿಂದಲೂ, ಗಂಡಕಿಯನ್ನು ಈಜಿದಾಡುವುದರಿಂದಲೂ ತಾನು ಮಾಡಿದ ಧರ್ಮವನ್ನು ಬಾಯಲ್ಲಿ ಹೇಳುವುದರಿಂದಲೂ ಅವನು ಮಾಡಿದ ಧರ್ಮಗಳೆಲ್ಲಾ ನಾಶವಾಗುತ್ತದೆ.

೩೭. ಅನಂತರ ಕುದುರೆಯು ಹರಿದ್ವಾರಕ್ಕೆ ಹೋಯಿತು. ಅಲ್ಲಿಂದ ಮುಂದೆ ಗಂಗೆಯ ದಡದಲ್ಲಿಯೇ ಹಿಮವತ್ಪರ್ವತವಿರುವ ದೇಶಗಳನ್ನು ದಾಟಿತು.

೩೮–೪೧. ಮುಂದೆ ಬದರಿಕಾಶ್ರಮಕ್ಕೆ ಹೋಯಿತು. ಅಲ್ಲಿ ಕಲಾಪ ಗ್ರಾಮನಿವಾಸಿಗಳು ಅದನ್ನು ಗೌರವಿಸಿದರು. ಮುಂದಕ್ಕೆ ಮಾನಸಸರೋವರಕ್ಕೆ

ದೃಷ್ಟ್ವಾ ಹರಿಹರಕ್ಷೇತ್ರಂ ಮಿಥಿಲಾಂ ಪ್ರಾಪ ಸೇನಯಾ ।
ನಾನಾದೇಶಾನತಿಕ್ರಮ್ಯ ಹ್ಯಾರ್ಯಾವರ್ತಂ ಯಯೌ ಹಯಃ ॥ ೩೯ ॥

ದೃಷ್ಟ್ವಾ ಕಾಶೀಂ ತ್ರಿವೇಣೀಂ ಚ ಹ್ಯಂತರ್ವೇದೀಂ ಯಯೌ ಜವಾತ್ ।
ಶೃಂಗಬೇರಪುರಂ ಗತ್ವಾ ತಮಸಾಂ ತಾಂ ವಿಲಂಘ್ಯ ಚ ॥ ೪೦ ॥

ಗತ್ವಾ ಸ ನೈಮಿಷಾರಣ್ಯಂ ಸಮುಲ್ಲಂಘ್ಯಾಥ ಗೋಮತೀಂ ।
ಬ್ರಹ್ಮಾವರ್ತಂ ಸರೋ ಗತ್ವಾ ಪಶ್ಯನ್ ದೇಶಾನ್ ಮನೋರಮಾನ್ ॥ ೪೧ ॥

ಕೋಸಲಾಖ್ಯಂ ಮಹಾದೇಶಂ ದೃಷ್ಟ್ವಾ ವಾಜೀ ಮನೋರಮಂ ।
ತತಸ್ಸಾಕೇತವಿಷಯೇ ಷಣ್ಮಾಸೈಃ ಪ್ರಾಪ ಚಾಧ್ವರಂ ॥ ೪೨ ॥

ನಾನಾದೇಶನೃಪೈಸ್ಸಾರ್ಧಂ ಶತ್ರುಘ್ನೇನಾಭಿರಕ್ಷಿತಃ ।
ಆಗತಂ ಶ್ಯಾಮಕರ್ಣಂ ತಂ ಜ್ಞಾತ್ವಾ ಸೀತಾಪತಿಸ್ತದಾ ॥ ೪೩ ॥

ಹೋಯಿತು. ಹರಿಹರ ಕ್ಷೇತ್ರಕ್ಕೆ ಹೋಗಿ ಮಿಥಿಲೆಗೆ ಹೋಯಿತು. ಹೀಗೆ ನಾನಾ ದೇಶಗಳನ್ನು ದಾಟಿ ಆರ್ಯಾವರ್ತಕ್ಕೆ ಹೋಯಿತು. ಕಾಶಿಯನ್ನು ನೋಡಿ ತ್ರಿವೇಣಿಗೆ ಹೋಗಿ ಅಂತರ್ವೇದಿಗೆ ಹೋಯಿತು. ಶೃಂಗಬೇರಪುರಕ್ಕೆ ಹೋಗಿ ತಮಸೆಯನ್ನು ದಾಟಿತು. ನೈಮಿಷಾರಣ್ಯಕ್ಕೆ ಹೋಗಿ ಗೋಮತಿಯನ್ನು ದಾಟಿ ಬ್ರಹ್ಮಾವರ್ತಕ್ಕೆ ಹೋಗಿ ಮನೋಹರವಾದ ದೇಶಗಳನ್ನು ನೋಡುತ್ತ ಕೈವಲ್ಯಕ್ಕೆ ಹೋಯಿತು. ಅನಂತರ ಆರನೆಯ ತಿಂಗಳಲ್ಲಿಯೇ ಅಯೋಧ್ಯೆಗೆ ಬಂದಿತು. ಯಾಗಕ್ಕೂ ಸಿದ್ಧವಾಯಿತು.

೪೩. ಅನೇಕ ದೇಶದ ರಾಜರೊಡನೆ ಶ್ಯಾಮಕರ್ಣನಾದ ಯಾಗದ ಕುದುರೆಯು ಶತ್ರುಘ್ನನಿಂದ ರಕ್ಷಿತವಾಗಿ ಬಂದುದನ್ನು ಕೇಳಿ ಸೌಮಿತ್ರಿಯು ಅದನ್ನು ಎದುರುಗೊಳ್ಳುವಂತೆ ರಾಮನು ಹೇಳಿದನು.

ಆಜ್ಞಾಪಯಚ್ಚ ಸೌಮಿತ್ರಿಂ ಸೋಽಪಿ ಪ್ರತ್ಯುಜ್ಜಗಾಮ ತಂ ।
ವಾರಣೇಂದ್ರಂ ಪುರಸ್ಕೃತ್ಯ ಭೇರೀದುಂಧುಭಿನಿಸ್ವನೈಃ ॥ ೪೪ ॥

ವಾರಸ್ತ್ರೀಣಾಂ ನೃತ್ತಗೀತೈರ್ವೇದಘೋಷೈರ್ದ್ವಿಜೇರಿತೈಃ ।
ಸಂಪೂಜ್ಯಾಥ ಶ್ಯಾಮಕರ್ಣಂ ನೃಪತೀಂಶ್ಚ ಸವಿಸ್ತರಂ ॥ ೪೫ ॥

ಆನಯಾಮಾಸ ಸೌಮಿತ್ರಿಶ್ಶನೈರಧ್ವರಮಂಟಪಂ ।
ಮಹೋತ್ಸವೋ ಮಹಾನಾಸೀತ್ತದಾ ತುರಗದರ್ಶನೇ ॥ ೪೬ ॥

ದಶಯೋಜನಪರ್ಯಂತಂ ಸರ್ವತ್ರ ಜಗತೀತಲಂ ।
ವ್ಯಾಪ್ತಂ ಸಮಭೂತ್ತತೋಽಯೋಧ್ಯಾ ಬಹಿರ್ನೃಪಗಣೈಸ್ತದಾ ॥ ೪೭ ॥

---

೪೪. ಆ ಸೌಮಿತ್ರಿಯು ಆನೆಯನ್ನು ತೆಗೆದುಕೊಂಡು ಅನೇಕವಾದ ಸೈನ್ಯವನ್ನು ಕರೆದುಕೊಂಡು ಮಂಗಳವಾದ್ಯವನ್ನು ಮಾಡಿಸುತ್ತ ಎದುರುಗೊಂಡನು.

೪೫. ಸೂಳೆಯರು ಕುಣಿಯುತ್ತಿದ್ದರು. ವಾದ್ಯಗಾರರು ವಾದ್ಯವನ್ನು ಬಾಜಿಸುತ್ತಿದ್ದರು. ಆ ಸಮಯದಲ್ಲಿ ಸೌಮಿತ್ರಿಯು ಯಜ್ಞದ ಕುದುರೆಯನ್ನೂ ಅದರ ಹಿಂದಿದ್ದ ರಾಜರನ್ನೂ ಪೂಜಿಸಿದನು.

೪೬. ಅನಂತರ ಅವರನ್ನು ಮೆಲ್ಲಗೆ ಯಾಗಮಂಟಪಕ್ಕೆ ಕರೆತಂದನು. ಆಗ ಆ ಯಾಗದ ಕುದುರೆಯನ್ನು ನೋಡುವುದಕ್ಕೆ ಗಲಭೆಮಾಡುತ್ತ ಜನರು ಆತುರಪಡುತ್ತಿದ್ದರು.

೪೭. ಆ ಅಯೋಧ್ಯೆಯ ಸುತ್ತಲೂ ಹತ್ತುಯೋಜನಗಳವರೆಗೆ ಭೂಮಿಯು ರಾಜರ ಗುಂಪಿನಿಂದಲೇ ಕಿಕ್ಕಿರಿದಿದ್ದಿತು.

ತತ್ರ ಸರ್ವತ್ರ ರಾಜಾನಃ ಪೂರ್ವಂ ಸಂಪ್ರೇಷಿತಾರ್ನ ಜನಾರ್ನ ।
ಪೌರಾರ್ನ ಜಾನಪದಾರ್ನ ಸ್ತ್ರೀಶ್ಚ ಪಶ್ಯಂತೋ ಭ್ರಮರೋಪಮಾರ್ನ ॥ ೪೮ ॥

ಸೈನ್ಯೇನ ಬಭ್ರಮುಸ್ಸರ್ವೇ ಸ್ವೀಯದರ್ಶನಲಾಲಸಾಃ ।
ನ ಪ್ರಾಪುರ್ದರ್ಶನಂ ತೇಷಾಂ ಜನೌಘೇಧ್ವರಮಂಟಪೇ ॥ ೪೯ ॥

ಕೇಚಿತ್ತ್ರೇ ದರ್ಶನಂ ಸ್ವಾನಾಂ ಪ್ರಾಪುಸ್ತತ್ರ ಪರೇऽಹನಿ ।
ಕೇಚಿತ್ತೃತೀಯದಿವಸೇ ಪಂಚಮೇ ಸಪ್ತಮೇಥ ವಾ ॥ ೫೦ ॥

ಕೇಚಿದ್ದುಂದುಭಿಘೋಷೇಣ ಪ್ರಾಪುಃ ಸ್ವಾನಾಂ ಪ್ರದರ್ಶನಂ ।
ಕೇಚಿತ್ಪಕ್ಷಾನಂತರಂ ಹಿ ಮಾಸೇನಾನಂತರಂ ಜನಾಃ ॥ ೫೧ ॥

---

೪೮. ಆಗ ಆ ಕುದುರೆಯ ಹಿಂದೆ ಬಂದಿದ್ದ ರಾಜರು ತಾವು ಮೊದಲೇ ಕಳುಹಿಸಿದ್ದ ತಮ್ಮ ತಮ್ಮ ಪಟ್ಟಣಿಗರನ್ನೂ, ಆಳುಗಳನ್ನೂ, ಹೆಂಗಸರನ್ನೂ ಜೇನುನೊಣಗಳಂತೆ ಹುಡುಕುತ್ತಾ ತಮ್ಮ ಸೈನ್ಯವನ್ನು ಹಿಂದೆ ಕರೆದುಕೊಂಡು ಓಡಾಡುತ್ತಿದ್ದರು.

೪೯. ಎಷ್ಟು ಸುತ್ತುತ್ತಿದ್ದರೂ ಆ ಜನಗಳ ಸಮೂಹದಲ್ಲಿ ಆ ಮಂಟಪದೊಳಗೆ ತಮ್ಮವರನ್ನು ಕೊನೆಗೂ ಕಾಣಲೇ ಇಲ್ಲ.

೫೦. ಕೆಲವರು ತಮ್ಮವರನ್ನು ಮಾರನೆಯದಿನ ಕಂಡರು ಕೆಲವರಿಗೆ ತಮ್ಮವರು ಮೂರನೆಯದಿನ ಸಿಕ್ಕಿದರು. ಕೆಲವರು ಐದನೆಯದಿನದಲ್ಲಿಯೂ ಮತ್ತೆ ಕೆಲವರು ಏಳನೆಯದಿನದಲ್ಲಿಯೂ ಕಂಡರು.

೫೧. ಕೆಲವರು ದುಂಧುಭಿಯನ್ನು ಬಡಿದು ಆ ಸಂಜ್ಞೆಯಿಂದ ತಮ್ಮವರನ್ನು ಹೊಂದಿದರು. ಕೆಲವರು ಹದಿನೈದು ದಿನಗಳ ಮೇಲೆಯೂ, ಕೆಲವರು ತಿಂಗಳಮೇಲೆಯೂ ತಮ್ಮವರನ್ನು ಸೇರಿದರು.

ಕೇಷಾಂ ವಿಯೋಗ ಏವಾಸೀಚ್ಚಿರಕಾಲಂ ತದಾಧ್ವರೇ ।
ತತ್ ಜ್ಞಾತ್ವಾ ರಾಮಚಂದ್ರೋಽಪಿ ಲಕ್ಷ್ಮಣಂ ಪ್ರಾಹ ಸಾದರಂ ॥ ೫೨ ॥

ಪರಸ್ಪರಂ ವಿಯೋಗೋಽತ್ರ ಸಮ್ಮರ್ದೇನ ತು ಲಕ್ಷ್ಮಣ ।
ಜಾಯತೇ ತತ್ರ ಯುಕ್ತಿಂ ತ್ವಂ ಮತ್ತಶ್ಶ್ರುತ್ವಾ ಕುರುಷ್ವ ತಾಂ ॥ ೫೩ ॥

ತಮಸಾಯಾಸ್ತಟೇ ಶಾಲಾಂ ಕೃತ್ವಾದ್ಯ ಮಹತೀಂ ಶುಭಾಂ ।
ಘೋಷಂ ವಿಶ್ರುತ್ಯ ಸರ್ವತ್ರ ಮಹಾಂತಂ ದುಂದುಭಿಸ್ವನಂ ॥ ೫೪ ॥

ಯೇಷಾಂ ವಿಯೋಗಸ್ತೈರ್ಗತ್ವಾ ತಮಸಾತಟೇ ಶೋಭಿತಾಂ ।
ಶಾಲಾಂ ಪ್ರವೇಶಯಧ್ವಂ ಹಿ ಸ್ವಾನಾಂ ಯೋಗೋಽಸ್ತು ತತ್ರ ಹಿ ॥ ೫೫ ॥

---

೫೨. ಕೆಲವರು ಬಹುಕಾಲದವರೆಗೆ ಆ ಯಾಗದಲ್ಲಿ ತಮ್ಮ ಕುಟುಂಬದವರನ್ನು ನೋಡಲೇ ಇಲ್ಲ. ಇದನ್ನು ತಿಳಿದು ರಾಮಚಂದ್ರನು ಲಕ್ಷ್ಮಣನಿಗೆ ಇಂತೆಂದು ಹೇಳಿದನು.

೫೩. ಎಲೈ ಲಕ್ಷ್ಮಣನೇ ! ಈ ಗುಂಪಿನಲ್ಲಿ ಬಂಧುಗಳ ವಿಯೋಗವು ಒಬ್ಬರಿಗೊಬ್ಬರಿಗೆ ಬಹಳವಾಗಿರುವಂತೆ ಕಾಣುತ್ತದೆ. ಇದರ ವಿಷಯದಲ್ಲಿ ಒಂದು ಯುಕ್ತಿಯನ್ನು ಹೇಳುತ್ತೇನೆ ಕೇಳು. ಅದರಂತೆ ಮಾಡು.

೫೪. ತಮಸಾನದಿಯ ದಡದಲ್ಲಿ ಒಂದು ದೊಡ್ಡಶಾಲೆಯನ್ನು ಮಾಡು. ದುಂದುಭಿಯನ್ನು ಬಡಿಸಿ ದೊಡ್ಡದಾಗಿ ಎಲ್ಲಾ ಕಡೆಯಲ್ಲಿಯೂ ಸಾರಿಸು.

೫೫. ಯಾರಿಗೆ ಯಾರು ಸಿಕ್ಕಬೇಕೋ ಅವರು ಅವರನ್ನು ನೋಡಲು ತಮಸಾನದಿಯ ದಡದಲ್ಲಿರುವ ಶಾಲೆಗೆ ಹೋಗಿ. ಅಲ್ಲಿ ಅವರು ಸಿಕ್ಕುತ್ತಾರೆ.

ಚತುಷ್ಪದಾದಿವಸ್ತೂನಿ ಜ್ಞಾತ್ವಾನ್ಯಸ್ಯ ಲಘೂನ್ಯಪಿ ।
ತತ್ರೈವ ಸ್ಥಾಪನೀಯಾನಿ ಸ್ವಂ ಸ್ವಂ ಗೃಹ್ಣಂತು ತೇ ಜನಾಃ ॥ ೫೬ ॥

ಇತಿ ರಾಮವಚಃ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ ।
ತಥಾ ಚಕಾರ ತತ್ಸರ್ವಂ ಯೇನ ಯೋಗಃ ಪರಸ್ಪರಂ ॥ ೫೭ ॥

ಸರ್ವೇ ತತ್ರ ಜನಾಃ ಪ್ರಾಪುಃ ಸ್ವಾನಾಂ ಸ್ತ್ರೀಬಾಲಮಂತ್ರಿಣಾಂ ।
ಚತುಷ್ಪದಾದಿವಸ್ತೂನಾಂ ತತ್ರ ಲಾಭೋ ಬಭೂವ ಹ ॥ ೫೮ ॥

ಯತ್ಕಿಂಚಿದ್ವಿಸ್ಮೃತಂ ಯೇನ ತದ್ದೃಷ್ಟ್ವಾನ್ಯೇನ ವೈ ತದಾ ।
ಶಾಲಾಯಾಂ ಸ್ಥಾಪಿತಂ ದೃಷ್ಟ್ವಾ ಸ್ವೀಯಂ ಜಗ್ರಾಹ ತತ್ರ ಸಃ ॥ ೫೯ ॥

---

೫೬. ಯಾರ ಪದಾರ್ಥಗಳು ಯಾವು ಯಾವುವು ಹೋಗಿರುತ್ತವೆಯೋ ಅವನ್ನೂ, ವಾಹನ ಮುಂತಾದ ನಾಲ್ಕು ಕಾಲುಗಳುಳ್ಳ ಪದಾರ್ಥಗಳನ್ನೂ ಮತ್ತೂ ಯಾವುದನ್ನಾದರೂ ಸರಿಯೇ. ಅಲ್ಲಿ ನೋಡಿ ಅವರವರು ಅವರವರದನ್ನು ತೆಗೆದುಕೊಳ್ಳಬಹುದು.

೫೭. ರಾಮನ ಈ ಮಾತುಗಳನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಒಬ್ಬರಿಗೊಬ್ಬರು ಸಿಕ್ಕುವಂತೆಯೂ, ಅವರವರ ಪದಾರ್ಥಗಳು ಅವರವರಿಗೆ ಸಿಕ್ಕುವಂತೆಯೂ ಶಾಲೆಯನ್ನು ಮಾಡಿಸಿದನು. ಮತ್ತು ಸಾರಿಸಿದನು.

೫೮. ಅನಂತರ ಎಲ್ಲರೂ ಅವರವರ ಹೆಂಡಿರು ಮಕ್ಕಳು, ಮಂತ್ರಿಗಳನ್ನೂ ಪದಾರ್ಥಗಳನ್ನೂ ಚತುಷ್ಪಾದ ವಸ್ತುಗಳನ್ನು ಹೊಂದಿದರು.

೫೯. ಯಾವನಾದರೂ ಯಾವುದನ್ನಾದರೂ ಮರೆತರೆ ಅದನ್ನು ತಿಳಿದ ಮತ್ತೊಬ್ಬನು ಆ ಶಾಲೆಯಲ್ಲಿ ಅದನ್ನು ಇಡುತ್ತಿದ್ದನು. ಅನಂತರ ಆ ಪದಾರ್ಥವನ್ನು ಅವನು ಅಲ್ಲಿ ತೆಗೆದುಕೊಳ್ಳುತ್ತಿದ್ದನು.

ಏವಂ ಶ್ರೀರಾಮಯಜ್ಞೇ ಹಿ ಸಂಮರ್ದಃ ಸಂಬಭೂವ ಹ ।
ನ ತತ್ರ ಶುಶ್ರುವೇ ಶಬ್ದಃ ಕರ್ಣೇಪ್ಯುಕ್ತೋ ಜನೈಸ್ತದಾ ॥ ೬೦ ॥

ತತಸ್ತೇ ಪಾರ್ಥಿವಾಸ್ಸರ್ವೇ ತಸ್ಥುರ್ವಸನಸದ್ಮಸು ॥ ೬೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಅಶ್ವಾಗಮನಂ ನಾಮ
ತೃತೀಯಸ್ಸರ್ಗಸ್ಸಮಾಪ್ತಃ

೬೦-೬೧. ರಾಮಚಂದ್ರನ ಯಜ್ಞದಲ್ಲಿ ಈ ರೀತಿಯಾಗಿ ಕೋಲಾಹಲವು ನಡೆಯುತ್ತಿದ್ದಿತು. ಒಬ್ಬನಿಗೂ ಕೂಡ ಅಲ್ಲಿ ಕಿವಿಯಲ್ಲಿ ಸರಿಯಾದ ಶಬ್ದವು ಕೇಳಿಸುತ್ತಲೇ ಇರಲಿಲ್ಲ. ಹೀಗಿರುತ್ತಿರಲು ರಾಜರೆಲ್ಲರೂ ಅವರವರ ಬಿಡಾರಗಳಲ್ಲಿ ಸುಖವಾಗಿರುತ್ತಿದ್ದರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಅಶ್ವಾಗಮನವೆಂಬ
ಮೂರನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
॥ ಮೂರನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಯಾಗದ ಕುದುರೆಯನ್ನು ಪೂಜಿಸಿ ಭೂಪ್ರದಕ್ಷಿಣೆಯನ್ನು ಮಾಡುವಂತೆ ಅದನ್ನು ಬಿಟ್ಟುಬಿಟ್ಟನು. ಶತ್ರುಘ್ನನು ಸೈನ್ಯದೊಡನೆ ಅದರ ರಕ್ಷಣೆಗೋಸ್ಕರ ಹಿಂಬಾಲಿಸಿದನು.

ಈ ಕುದುರೆಯು ಬ್ರಹ್ಮಾವರ್ತದೇಶವನ್ನು ದಾಟಿ ಗಂಗೆಯ ದಡಕ್ಕೆ ಹೋದೊಡನೆಯೇ ಶ್ರೀರಾಮನು ತನ್ನ ಪ್ರತಾಪವನ್ನು ತೋರ್ಪಡಿಸುವ ಒಂದು ಆಶ್ಚರ್ಯದ ಘಟನೆಯು ನಡೆಯಿತು. ಅದೇನೆಂದರೆ ಆ ಕುದುರೆಯು ಗಂಗಾ ನದಿಯ ದಡಕ್ಕೆ ಹೋದಾಗ ಅದರಲ್ಲಿ ಬಹುವಾಗಿ ಪ್ರವಾಹವು ಬಂದಿತು. ಅದನ್ನು ನೋಡಿ ಕುದುರೆಯು ಮುಂದೆ ಹೋಗಲಾರದೆ ಹೋಯಿತು. ಶತ್ರುಘ್ನನು ಮೊದಲೇ ಈ ರೀತಿಯಾದ ವಿಘ್ನವು ಬಂದಿತಲ್ಲಾ ಎಂದು ಯೋಚಿಸತೊಡಗಿದನು.

ಮನಸ್ಸಿಗೆ ಯಾವ ವಿಧವಾದ ಯುಕ್ತಿಯೂ ತೋರದಿರಲು ಆತನು ಗಂಗೆಯ ದಡಕ್ಕೆ ಹೋಗಿ ಆ ಗಂಗೆಯನ್ನು ಶಾಸ್ತ್ರೋಕ್ತವಿಧಿಯಿಂದ ಪೂಜಿಸಿ ಎಲ್ಲರೆದುರಿಗೂ ನಿಂತುಕೊಂಡು ಎಲ್ಲರಿಗೂ ಕೇಳಿಸುವಂತೆ "ದೇವಿಯಾದ ಗಂಗೆಯೆ! ರಘುರಾಮನಲ್ಲಿ ಸತ್ಯವಿದ್ದರೆ ನನಗೂ ನನ್ನ ಸೈನ್ಯಕ್ಕೂ ಮುಂದೆ ಹೋಗಲು ಬೇಗನೆ ದಾರಿಯನ್ನು ಕೊಡು" ಎಂದನು.

ಶತ್ರುಘ್ನನು ಇಂತೆಂದುದನ್ನು ಕೇಳಿ ಆ ಗಂಗೆಯು ತನ್ನ ವೇಗವನ್ನು ತಡೆದು ನೀರನ್ನು ನಿಲ್ಲಿಸಿ ಭೂಮಿಯು ಕಾಣುವಂತೆ ಮಾಡಿತು. ಅನಂತರ ಕುದುರೆಯೂ ಸೈನ್ಯವೂ ಶತ್ರುಘ್ನನೂ ಮುಂದೆ ಹೋದರು.

ಈ ಕುದುರೆಯು ಯಾವ ಯಾವದೇಶಕ್ಕೆ ಹೋಯಿತೋ ಆ ದೇಶದ ರಾಜರೆಲ್ಲರೂ ಶತ್ರುಘ್ನನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಗೌರವಿಸಿ ಕುದುರೆಯ ಹಿಂದೆ ಹೋಗುತ್ತಿದ್ದರು. ಅಲ್ಲದೆ ತಮ್ಮ ಕಡೆಯವರನ್ನು ಮೊದಲೇನೇ ಯಾಗಕ್ಕೆ ಕಳುಹಿಸುತ್ತಿದ್ದರು. ಈ ರೀತಿಯಾಗಿ ಎಲ್ಲ ರಾಜರೂ ಮಾಡುತ್ತ ಬಂದರು. ಈ ಕುದುರೆಯನ್ನು ನರ, ಸುರ, ಅಸುರ, ನಾಗರೇ ಮುಂತಾದವರಲ್ಲಿ ಯಾರೊಬ್ಬರೂ ಕಟ್ಟಿಹಾಕಲಿಲ್ಲ.

ರಾಜರಿಂದಲೂ ಶತ್ರುಘ್ನನಿಂದಲೂ ಅನುಸರಿಸಲ್ಪಟ್ಟು ರಕ್ಷಿತವಾಗಿರುವ ಈ ಕುದುರೆಯು ದಕ್ಷಿಣದ ಕಡೆಗೆ ಹೊರಟು ಗೋದಾವರಿಯನ್ನು ದಾಟಿ ಆಂಧ್ರ ದೇಶಕ್ಕೆ ಹೋಯಿತು. ಅನಂತರ ಆರವಾರ, ಕಾಂಚಿ, ಚೋಳ, ಸೇತುಬಂಧ, ಗೋಕರ್ಣ, ಕರ್ಣಾಟಕ, ಕೊಂಕಣ, ಭೀಮಾಪ್ರದೇಶ, ಮಹಾರಾಷ್ಟ್ರ, ವಿದರ್ಭ, ಆಭೀರಮಂಡಲ, ಮಾಲವ, ಗುರ್ಜರ, ಆನರ್ತ, ಸೌವೀರ, ಮಾಥುರ, ಸೌರಾಷ್ಟ್ರ, ಮರುಧನ್ವ, ಸಾರಸ್ವತ, ಮತ್ಸ್ಯ, ಮಾಠರ, ಶೂರಸೇನ, ಪಾಂಚಾಲ, ಕುರುಕ್ಷೇತ್ರ, ಕುರುಜಾಂಗಲ, ಕೈಕೇಯ, ಕಾಶ್ಮೀರ, ಭಿಲ್ಲ, ಗೌಡ, ಶಕ, ಯವನ, ತಾಮ್ರ ಇವೇ ಮುಂತಾದ ದೇಶಗಳನ್ನು ದಾಟುತ್ತ ಕರತೋಯಾ ನದಿಯ ದಡದಲ್ಲಿಯೇ ಹೊರಟು ಜ್ವಾಲಾಮುಖಿಗೆ ಹೋಯಿತು. ಆದರೆ ಈ ಕರತೋಯಾ ನದಿಯನ್ನು ದಾಟಿ ಮುಂದೆ ಹೋಗಲೇ ಇಲ್ಲ.

" ಕರ್ಮನಾಶನದೀಸ್ಪರ್ಶಾತ್ ಕರತೋಯಾವಿಲಂಘನಾತ್ ।
ಗಂಡಕೀಬಾಹುತರಣಾತ್ ಧರ್ಮಃಸ್ಖಲತಿಕೀರ್ತನಾತ್ ॥ "

ಕರ್ಮನಾಶನದಿಯನ್ನು ಮುಟ್ಟಿದರಾಗಲಿ, ಕರತೋಯಾನದಿಯನ್ನು ದಾಟಿದರಾಗಲಿ, ಗಂಡಕಿಯನ್ನು ಈಜಿಕೊಂಡು ದಾಟಿದರಾಗಲಿ, ತಾನು ಮಾಡಿದ ಧರ್ಮವನ್ನು ಬಾಯಲ್ಲಿ ಹೇಳಿದರಾಗಲಿ ತಾನು ಮಾಡಿದ ಧರ್ಮವು ನಾಶವಾಗುತ್ತದೆ. ಈ ಕಾರಣದಿಂದ ಆ ಕುದುರೆಯು ಆ ಕರತೋಯಾನದಿಯನ್ನು ದಾಟಿ ಹೋಗಲಿಲ್ಲವೆಂದು ತಿಳಿಯಬೇಕು

ಅನಂತರ ಹರಿದ್ವಾರಕ್ಕೆ ಹೋಗಿ ಗಂಗೆಯ ದಡದಲ್ಲಿಯೇ ಹಿಮವತ್ಪರ್ವತದ ದಡದ ದೇಶಗಳಲ್ಲಿ ಸಂಚರಿಸಿತು. ಅನಂತರ ಆರ್ಯಾವರ್ತಕ್ಕೆ ಹೋಗಿ ಕಾಶಿ, ತ್ರಿವೇಣಿ, ಅಂತರ್ವೇದಿಗಳನ್ನು ಹೊಂದಿ ಶೃಂಗಬೇರಕ್ಕೆ ಬಂದು ತಮಸೆಯನ್ನು ದಾಟಿ ನೈಮಿಷಾರಣ್ಯದಲ್ಲಿ ಹೊಕ್ಕು ಕೋಸಲಕ್ಕೆ ಹೋಗಿ ಅಯೋಧ್ಯೆಯನ್ನು ಹೊಂದಿತು. ಇಷ್ಟರವೇಳೆಗೆ ಆರುತಿಂಗಳಕಾಲವು ಕಳೆದಿದ್ದಿತು ಕುದುರೆಯು ಬಂದುದನ್ನು ತಿಳಿದು ರಾಮನ ಅಪ್ಪಣೆಯಂತೆ ಲಕ್ಷ್ಮಣನು ಅದನ್ನು ಎದುರುಗೊಂಡು ಅದನ್ನೂ ಅದರ ಹಿಂದೆ ಬರುತ್ತಿದ್ದ ರಾಜರನ್ನೂ ಪೂಜಿಸಿ ಗೌರವಿಸಿದನು. ಆನಂತರ ಉತ್ಸವದಿಂದ ಯಾಗಮಂಟಪಕ್ಕೆ ಕರೆತಂದನು.

ಅನಂತರ ಅದರ ಜೊತೆಯಲ್ಲಿ ಬಂದಿದ್ದ ರಾಜರು ತಾವು ಮುಂಚೆಯೇ ಯಾಗಕ್ಕೆ ಕಳುಹಿಸಿದ್ದ ತಮ್ಮ ಜನರನ್ನು ಹುಡುಕಿದರು. ಕೆಲವರಿಗೆ ಅವರ ಕಡೆಯವರು ಒಂದು ದಿನ, ಎರಡು ದಿನ, ಮೂರು ದಿನ, ನಾಲ್ಕು ದಿನ, ಐದು ದಿನ, ಆರುದಿನ, ಏಳು ದಿನಗಳಮೇಲೆ ಹೀಗೆ ತಡವಾಗಿ ಸಿಕ್ಕುತ್ತಿದ್ದರು. ಕೆಲವರಿಗೆ ತಮ್ಮವರು ಸಿಕ್ಕಲೇ ಇಲ್ಲ. ಆಗ ರಾಮನ ಮಾತಿನಂತೆ ಲಕ್ಷ್ಮಣನು ಸರಯೂ ನದಿಯ ದಡದಲ್ಲಿ ಒಂದು ಮನೆಯನ್ನು ಕಟ್ಟಿಸಿ ಅದನ್ನು ಎಲ್ಲ ಕಡೆಯಲ್ಲಿಯೂ ಡಂಗೂರ ಹಾಕಿಸಿ ತಿಳಿಯುವಂತೆ ಮಾಡಿ ಅಲ್ಲಿ ಒಬ್ಬರನ್ನೊಬ್ಬರು ನೋಡುವಂತೆ ಮಾಡಿದನು. ಅಲ್ಲದೆ ಕಳೆದುಹೋದ ಪದಾರ್ಥವೂ ಅಲ್ಲಿ ಅವರವರಿಗೆ ದೊರಕುವಂತೆ ಮಾಡಿದನು. ಆ ಶ್ರೀರಾಮನ ಯಜ್ಞದಲ್ಲಿ ಈರೀತಿಯಾಗಿ ಜನರ ಗುಂಪು ಸೇರಿದ್ದಿತು. ಒಬ್ಬರಿಗೊಬ್ಬರು ಕಿವಿಯ ಬಳಿ ಕೂಗಿಕೊಂಡರೂ ಕೇಳಿಸದಷ್ಟು ಗಲಭೆಯೂ ಇದ್ದಿತು.

‖ ಶ್ರೀಃ ‖

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

‖ ಚತುರ್ಥಸ್ಸರ್ಗಃ ‖

‖ ಶ್ರೀರಾಮದಾಸ ಉವಾಚ ‖

ಅಥ ತೇ ಋತ್ವಿಜಸ್ಸರ್ವೇ ಮಂಗಲ್ಯೈರ್ವಿವಿಧೈಶ್ಶುಭೈಃ ।
ಸಮ್ಯಕ್ಪ್ರವರ್ತಯಾಮಾಸುರ್ವಾಜಿಮೇಧಂ ಯಥಾವಿಧಿ ‖ ೧ ‖

ತತ್ರರ್ತ್ವಿಜೋ ವಾಜಿಮೇಧೇ ರತ್ನಕೌಶೇಯವಾಸಸಃ ।
ಸಸದಸ್ಯಾ ವಿರೇಜುಸ್ತೇ ಯಥಾ ವೃತ್ರಹಣೋಧ್ವರೇ ‖ ೨ ‖

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
ನಾಲ್ಕನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಅನಂತರ ಋತ್ವಿಜರೆಲ್ಲರೂ ನಾನಾ ವಿಧವಾದ ಮಂಗಳ ಕಾರ್ಯಗಳಿಂದ ಶಾಸ್ತ್ರರೀತಿಯಲ್ಲಿ ಆ ಅಶ್ವಮೇಧವನ್ನು ಚೆನ್ನಾಗಿ ನಡೆಸಿದರು.

೨. ಅಶ್ವಮೇಧದಲ್ಲಿ ಋತ್ವಿಕ್ಕುಗಳು ರತ್ನದ ಸರಿಗೆಯುಳ್ಳ ಮಕುಟಗಳನ್ನುಟ್ಟುಕೊಂಡು ಅವರೂ, ಸದಸ್ಯರೂ, ಇಂದ್ರನ ಯಾಗದಲ್ಲಿದ್ದ ಋತ್ವಿಜರಂತೆ ಪ್ರಕಾಶಿಸಿದರು.

ಏತಸ್ಮಿನ್ನಂತರೇ ತತ್ರ ಸುರೇಶಸಹಿತೈಸ್ಸುರೈಃ ।
ಸ್ವಾಮಿನಾ ವಿಘ್ನರಾಜೇನ ಪಾರ್ವತ್ಯಾ ವೃಷಭಸ್ಥಿತಃ ॥ ೩ ॥

ಮಹೇಶ್ವರೋ ಯಜ್ಞವಾಟಂ ರಾಮಾಹೂತೋ ಯಯೌ ಗಣೈಃ ।
ಶಿವಮಾಗತಮಾಜ್ಞಾಯ ಪ್ರತ್ಯುದ್ಗಮ್ಯಾಥ ಲಕ್ಷ್ಮಣಃ ॥ ೪ ॥

ವಾರಣೇಂದ್ರಂ ಪುರಸ್ಕೃತ್ಯ ಪತಾಕಾಧ್ವಜತೋರಣೈಃ ।
ನಾನಾವಾದ್ಯಸುಘೋಷೈಶ್ಚ ವಾರಸ್ತ್ರೀಣಾಂ ಪ್ರನರ್ತನೈಃ ॥ ೫ ॥

ಸಂಪೂಜ್ಯ ಶಂಕರಂ ಭಕ್ತ್ಯಾ ಚಾನಯಾಮಾಸ ಮಂಟಪಂ ।
ಪಂಚಸಪ್ತ ಪದಾನ್ಯಗ್ರೇ ಗತ್ವಾ ರಾಮೋಽಪಿ ಶಂಕರಂ ॥ ೬ ॥

ನಮಸ್ಕೃತ್ಯ ಸಮಾಲಿಂಗ್ಯ ವಿಶ್ವೇಶಂ ಗಿರಿಜಾಯುತಂ ।
ಹೈಮಾಸನೇ ಸನ್ನಿವೇಶ್ಯ ಹೇಮಪಾತ್ರೇ ಸ್ವಹಸ್ತತಃ ॥ ೭ ॥

೩–೪. ಈ ಸಮಯದಲ್ಲಿ ದೇವತೆಗಳೂ, ಇಂದ್ರನೂ, ವಿಘ್ನರಾಜನೂ ಆ ಯಜ್ಞಕ್ಕೆ ಬಂದರು. ಪಾರ್ವತಿಯೂ, ಪರಮೇಶ್ವರನೂ, ಬಸವನಮೇಲೆ ಕುಳಿತು ಕೊಂಡು ರಾಮನಿಂದ ಕರೆಯಲ್ಪಟ್ಟವರಾಗಿ ಅಲ್ಲಿಗೆ ಬಂದರು. ಅವನ ಗಣಗಳೂ ಅವನ ಜೊತೆಯಲ್ಲಿ ಬಂದರು. ಶಿವನು ಬಂದುದನ್ನು ನೋಡಿ ಲಕ್ಷ್ಮಣನು ಒಡನೆಯೇ ಎದುರುಗೊಂಡನು.

೫. ಆನೆಯನ್ನು ತೆಗೆದುಕೊಂಡು ಹೋಗಿ ಪತಾಕೆ ಧ್ವಜಗಳನ್ನು ಹಾರಿಸುತ್ತ ಅನೇಕ ಬಗೆಯ ವಾದ್ಯಗಳನ್ನು ಬಾರಿಸುತ್ತ ಸೂಳೆಯರು ಕುಣಿಯುತ್ತಿರಲು ಆ ಶಂಕರನನ್ನು ಭಕ್ತಿಯಿಂದ ಪೂಜಿಸಿ ಮಂಟಪಕ್ಕೆ ಕರತಂದನು.

೬–೭. ರಾಮನೂ ಕೂಡ ಐದಾರು ಹೆಜ್ಜೆಗಳನ್ನು ಮುಂದಿಟ್ಟು ಹೋಗಿ ಶಂಕರನಿಗೆ ನಮಸ್ಕರಿಸಿ ಅವನನ್ನು ಆಲಂಗಿಸಿಕೊಂಡನು. ಆ ಪಾರ್ವತಿ ಪರಮೇಶ್ವರರನ್ನು ಹೇಮಾಸನದಲ್ಲಿ ಕೂರಿಸಿ ಹೇಮಪಾತ್ರೆಯಲ್ಲಿ ನೀರಿನಿಂದ ತನ್ನ ಕೈಯ್ಯಿಂದಲೇ ಕಾಲುಗಳನ್ನು ತೊಳೆದನು.

ಪಾದಪ್ರಕ್ಷಾಳನಂ ಶಂಭೋಶ್ಚಕಾರ ಸೀತಯಾ ಪ್ರಭುಃ ।
ಹೇಮನಿರ್ಮಿತಝರ್ಝರ್ಯಾ ಮಣಿರತ್ನಾದಿಚಿತ್ರಯಾ ॥ ೮ ॥

ಜಲಧಾರಾಂ ಯಥಾಯೋಗ್ಯಾಂ ಮುಮುಚೇ ಹ್ಯಥ ಜಾನಕೀ ।
ತತಸ್ತೇ ರಾಘವಂ ಸೀತಾಂ ದೃಷ್ಟ್ವಾ ದೇವಗಣಾಸ್ತದಾ ॥ ೯ ॥

ಅನಿಮೇಷಾಃ ಕಂಜನೇತ್ರಕಟಾಕ್ಷಾ ಸನ್ನಿವೇಶ್ಯ ಹಿ ।
ತಯೋಶ್ಚಿತ್ರೋಪಮಾ ಆಸನ್ ನ ವಿದುಃ ಕೇ ವಯಂ ತ್ವಿತಿ ॥ ೧೦ ॥

ತುಷ್ಟುವುಸ್ತತ್ರ ಕೇಚಿತ್ತೇ ಸುರಾಃ ಶ್ರೀರಾಘವಂ ಮುದಾ ।
ಜಾನಕೀಂ ತುಷ್ಟುವುಃ ಕೇಚಿತ್ ಪ್ರಬದ್ಧಕರ ಸಂಪುಟಾಃ ॥ ೧೧ ॥

ಏವಂ ನಿರ್ಜರಸಂಘಾನಾಂ ಸಂತೋಷಸ್ತತ್ರ ವೈ ಹ್ಯಭೂತ್ ।
ಅನುಪಮ್ಯಂ ತಯೋರ್ದೃಷ್ಟ್ವಾ ರೂಪಂ ಕೋಟಿರವಿಪ್ರಭಂ ॥ ೧೨ ॥

---

೮. ರಾಮನು ಪಾದಪ್ರಕ್ಷಾಳನ ಮಾಡುವಾಗ ಸೀತೆಯು ನೀರನ್ನು ಹಾಕುತ್ತಿದ್ದಳು. ಆ ಸೀತೆಯು ಮಣಿಗಳನ್ನು ಕೆತ್ತಿರುವ ಚಿನ್ನದ ಗಿಂಡಿಯಲ್ಲಿ ನೀರನ್ನು ತುಂಬಿಕೊಂಡು ತೊಳೆಯುವುದಕ್ಕೆ ಅನುಕೂಲವಾಗಿ ನೀರನ್ನು ಹಾಕುತ್ತಿದ್ದಳು.

೯–೧೦. ಆ ದೇವತೆಗಳು ರಾಮನನ್ನೂ ಸೀತೆಯನ್ನೂ ನೋಡುತ್ತ ಕಣ್ಣನ್ನು ಮುಚ್ಚದೆ ಕಮಲದಂತಿರುವ ಆ ಕಣ್ಣಿನಿಂದ ನೋಡುತ್ತ ತಾವು ಯಾರು ಎಂದು ತಾವೇ ತಿಳಿಯದಂತೆ ಆಗಿ ಚಿತ್ರದಲ್ಲಿ ಬರೆದಂತೆ ನಿಶ್ಚೇಷ್ಟಿತರಾಗಿದ್ದರು.

೧೧. ಆ ಯಜ್ಞದಲ್ಲಿ ಕೆಲವು ದೇವತೆಗಳು ರಾಮನನ್ನು ಹೊಗಳಿದರು. ಮತ್ತೆ ಕೆಲವರು ಕೈಮುಗಿದುಕೊಂಡು ಸೀತೆಯನ್ನು ಹೊಗಳಿದರು.

೧೨. ಈ ರೀತಿಯಾಗಿ ದೇವತೆಗಳಿಗೂ ಕೂಡ ಆ ಅಶ್ವಮೇಧಯಾಗದಲ್ಲಿ ಸಂತೋಷವುಂಟಾಯಿತು. ಆ ಸೀತಾರಾಮರ ಅಸದೃಶವಾದ ಕೋಟಿ ಸೂರ್ಯರಂತೆ ತೇಜಸ್ಸುಳ್ಳ ಸೌಂದರ್ಯವನ್ನು ನೋಡಿ ಸಂತೋಷಪಟ್ಟು ಆ ದೇವತೆಗಳು ಹೊಗಳುತ್ತಲಿದ್ದರು.

ಅಥ ರಾಮಸ್ಸೀತಯಾ ಹಿ ಶಂಕರಂ ಗಿರಿಜಾಮಪಿ ।
ಸ್ವಯಂ ಸಂಪೂಜ್ಯ ಸಕಲಾರ್ ದೇವಾರ್ ಸೌಮಿತ್ರಿಣಾ ಕ್ರಮಾತ್ ॥ ೧೩ ॥

ಪೂಜಯಿತ್ವಾಬ್ರವೀದ್ವಾಕ್ಯಂ ಶಂಕರಂ ಲೋಕಶಂಕರಂ ।
ಅದ್ಯ ಧನ್ಯೋಽಸ್ಮ್ಯಹಂ ದೇವ ದರ್ಶನಾತ್ತವ ಸೀತಯಾ ॥ ೧೪ ॥

ಅದ್ಯ ಮೇ ಸೂರ್ಯವಂಶೇಽಸ್ಮಿನ್ ಜನ್ಮ ಸಾಪಲ್ಯತಾಂ ಗತಂ ।
ಇತಿ ರಾಮಸ್ಯ ವಚನಂ ಶ್ರುತ್ವಾ ಸ ಶಶಿಭೂಷಣಃ ॥ ೧೫ ॥

ವಿಹಸ್ಯ ರಾಘವಂ ಪ್ರಾಹ ವೇದ್ಮಿ ಮಾಯಾಂ ಹರೇ ತವ ।
ತ್ವನ್ನಾಭಿಕಮಲೇ ಬ್ರಹ್ಮಾ ಜಾತಸ್ತಸ್ಮಾನ್ಮುನೀಶ್ವರಾಃ ॥ ೧೬ ॥

---

೧೩. ರಾಮನು ತಾನು ಸೀತೆಯೊಡನೆ ಪಾರ್ವತಿ ಪರಮೇಶ್ವರರನ್ನು ಪೂಜಿಸಿ ಅನಂತರ ಸೌಮಿತ್ರಿಯ ಕೈಯ್ಯಲ್ಲಿ ಉಳಿದ ದೇವತೆಗಳನ್ನು ಅವರವರ ಯೋಗ್ಯತಾನುಸಾರದಿಂದ ಪೂಜೆಮಾಡಿಸಿದನು.

೧೪. ಅನಂತರ ಲೋಕಕ್ಕೆಲ್ಲಾ ಸುಖವನ್ನು ಕೊಡುವ ಶಂಕರನನ್ನು ಕುರಿತು ಎಲೈ ದೇವನೇ ! ನಿನ್ನ ದರ್ಶನವಾದುದರಿಂದ ಈಗ ನಾನೂ ಸೀತೆಯೂ ಧನ್ಯರಾದೆವು.

೧೫. ಈಗ ನನಗೆ ನೀನು ದರ್ಶನವನ್ನು ಕೊಟ್ಟುದರಿಂದಲೇ ಈ ಸೂರ್ಯವಂಶವೇ ಧನ್ಯವಾಯಿತು. ನನ್ನ ಜನ್ಮವೂ ಸಫಲವಾಯಿತು. ಎನ್ನಲು ಈ ರಾಮನ ಮಾತನ್ನು ಕೇಳಿ ಆ ಶಶಿಶೇಖರನಾದ ಶಿವನು ನಕ್ಕನು.

೧೬. ಮತ್ತು ರಾಘವನನ್ನು ಕುರಿತು ಎಲೈ ಹರಿಯೇ! ನಿನ್ನ ಮಾಯೆಯನ್ನು ನಾನು ಬಲ್ಲೆನು. ನಿನ್ನ ನಾಭಿಯಲ್ಲಿನ ಕಮಲದಲ್ಲಿ ಈ ಪ್ರಪಂಚವನ್ನು ಸೃಷ್ಟಿಮಾಡುವ ಬ್ರಹ್ಮನು ಹುಟ್ಟಿದನು. ಆ ಬ್ರಹ್ಮನು ಪ್ರಸಿದ್ಧರಾದ ಮುನಿಗಳನ್ನು ಸೃಷ್ಟಿಮಾಡಿದನು.

ಮರೀಚ್ಯಾದ್ಯಾಸ್ಸಂಬಭೂವುಃ ಪೌತ್ರಾ ಸಪ್ತ ಮಹೌಜಸಃ ।
ಮರೀಚೇಃ ಕಶ್ಯಪಃ ಪುತ್ರಃ ಸೃಷ್ಟ್ಯುತ್ಪತ್ತಿವಿಧಾಯಕಃ ॥ ೧೭ ॥

ಕಶ್ಯಪಾತ್ಸವಿತಾ ಜಜ್ಞೇ ಪೌತ್ರಸೂನುಸ್ತವ ಪ್ರಭೋ ।
ರವೇರ್ಜಾತಸ್ಸೂರ್ಯವಂಶಸ್ತದ್ವಂಶೇ ತವ ಜನ್ಮ ವೈ ॥ ೧೮ ॥

ತ್ವದ್ವಂಶಸಂಭವಸ್ಸೂರ್ಯಃ ಕಿಂ ಮಾಂ ಮೋಹಯಸಿ ಪ್ರಭೋ ।
ದೇವಾನಾಂ ಕಾರ್ಯಸಿದ್ಧ್ಯರ್ಥಮವತೀರ್ಣೋಽಸಿ ಮಾಯಯಾ ॥ ೧೯ ॥

ಕುರು ಕ್ರೀಡಾಂ ಯಥೇಚ್ಛಂ ತ್ವಂ ಯಾತ್ರಾಯಜ್ಞಾದಿಕೌತುಕೈಃ ।
ಶಿಕ್ಷಾಂ ಕರೋಷಿ ಲೋಕಾನಾಂ ವೇದ್ಮ್ಯಹಂ ಚೇಷ್ಟಿತಂ ತವ ॥ ೨೦ ॥

---

೧೭. ಮರೀಚಿಯೇ ಮೊದಲಾದ ಮಹಾ ತೇಜಸ್ಸುಳ್ಳ ಸಪ್ತಋುಷಿಗಳೂ ಆ ಬ್ರಹ್ಮನಿಂದ ಹುಟ್ಟಿದರು. ಆ ಮರೀಚಿಗೆ ಕಶ್ಯಪನೆಂಬ ಮಗನು ಹುಟ್ಟಿ ಈ ಸೃಷ್ಟಿಯನ್ನೆಲ್ಲಾ ಮಾಡಿದನು.

೧೮. ಆ ಕಶ್ಯಪನಿಂದ ಸೂರ್ಯನು ಉತ್ಪನ್ನನಾದನು. ಅವನು ನಿನಗೆ ಮೊಮ್ಮಗನ ಮಗನಾಗಬೇಕು. ಆ ರವಿಯ ದೆಸೆಯಿಂದಲೇ ಈ ಸೂರ್ಯವಂಶವು ಬಂದುದು. ಆ ನಿನ್ನ ವಂಶದಲ್ಲಿಯೇ ನೀನು ಹುಟ್ಟಿದ್ದೀಯೆ.

೧೯. ನಿನ್ನ ವಂಶದಲ್ಲಿಯೇ ಆ ಸೂರ್ಯನು ಹುಟ್ಟಿರುವಾಗ ನಾನು ಮಹಾತ್ಮನಾದ ಸೂರ್ಯನವಂಶದಲ್ಲಿ ಹುಟ್ಟಿದೆನೆಂದು ಸೂರ್ಯನಿಗೆ ಮಹತ್ವವನ್ನು ಹೇಳುತ್ತ ನನ್ನನ್ನು ದಡ್ಡನನ್ನಾಗಿ ಮಾಡುತ್ತಿರುವೆಯಲ್ಲ! ಏತಕ್ಕೆ? ದೇವತೆಗಳ ಕಾರ್ಯವನ್ನು ನೆರವೇರಿಸುವುದಕ್ಕೋಸ್ಕರ ಮಾಯೆಯನ್ನಾಶ್ರಯಿಸಿಕೊಂಡು ಭೂಮಿಯಲ್ಲಿ ನೀನು ಹುಟ್ಟಿದ್ದೀಯೆ. ಅಲ್ಲವೆ!

೨೦. ಅಂತಹ ಸ್ವಾಮಿಯಾದ ನೀನು ಯಾತ್ರೆ ಯಜ್ಞ ಇವೇ ಮೊದಲಾದ ಆಟಗಳಿಂದ ನಿನ್ನ ಇಚ್ಛೆಬಂದಂತೆ ಕ್ರೀಡಿಸು. ಆದರೆ ನಿನ್ನ ಈ ಚೇಷ್ಟೆಗಳನ್ನು ನಾನು ಬಲ್ಲೆನು. ನೀನು ಈ ರೀತಿಯಾಗಿ ಚೇಷ್ಟೆಗಳನ್ನು ಮಾಡುತ್ತ ಇವೇ ಲೋಕದ ಜನಗಳಿಗೆ ನಡತೆಯಾಗಿರಲೆಂದು ತೋರಿಸಿ ಕೊಡುತ್ತಿದ್ದೀಯೆ. ಅದನ್ನು ನಾನು ತಿಳಿದಿದ್ದೇನೆ. ಎಂದನು.

ಇತಿ ಶ್ರುತ್ವಾ ಶಂಭುವಾಕ್ಯಂ ಸೀತಾರಾಮೌ ವಿಹಸ್ಯ ಚ |
ಯಜ್ಞಕುಂಡಸಮೀಪೇ ತು ತಸ್ಥತುರ್ಗುರುಸನ್ನಿಧೌ ॥ ೨೧ ॥

ಏತಸ್ಮಿನ್ನಂತರೇ ತತ್ರ ಸಮಾಜಗ್ಮುಸ್ಸಹಸ್ರಶಃ |
ಗಂಧರ್ವಾಃ ಕಿನ್ನರಾಸ್ಸಿದ್ಧಾಸ್ತಥಾ ಚಾಪ್ಸರಸಾಂ ಗಣಾಃ ॥ ೨೨ ॥

ಲೋಕಪಾಲಾಶ್ಚ ದಿಕ್ಪಾಲಾ ರಸಾತಲನಿವಾಸಿನಃ |
ನವಗ್ರಹಾಷ್ಷಡೃತವಷ್ಷಷ್ಟಿಸಂವತ್ಸರಾಣಿ ಚ ॥ ೨೩ ॥

ಋಕ್ಷಾಣಿ ತಿಥಯೋ ಯೋಗಾಃ ಕರಣಾನಿ ಚ ರಾಶಯಃ |
ಪರ್ವತಾಸ್ತರವಸ್ಸರ್ವೇ ಸಾಗರಾಶ್ಚ ನದಾ ಅಪಿ ॥ ೨೪ ॥

ಸರೋವರಾಣಿ ನದ್ಯಶ್ಚ ವಾಪ್ಯಃ ಕೂಪಾಃ ಖಗಾದಯಃ |
ಧೃತ್ವಾ ಜಂಗಮರೂಪಾಣಿ ಯಯುಯುಸ್ತೇ ಯಜ್ಞಮಂಟಪಂ ॥ ೨೫ ॥

ಸಮಾಗತಶ್ಚ ಸಂಪಾತಿರ್ಗುಹಕೋ ಮಕರಧ್ವಜಃ |
ಸಮಾಯಯೌ ಸ ಲಂಕಾಯಾ ರಾಕ್ಷಸೈಶ್ಚ ವಿಭೀಷಣಃ ॥ ೨೬ ॥

---

೨೧. ಶಂಭುವು ಹೀಗೆ ಹೇಳಿದುದನ್ನು ಆ ಸೀತಾರಾಮರು ಕೇಳಿ ನಕ್ಕು ಯಜ್ಞಕುಂಡದ ಹತ್ತಿರ ಗುರುವಿನ ಸಮೀಪಕ್ಕೆ ಹೋಗಿ ಕುಳಿತುಕೊಂಡರು.

೨೨-೨೫. ಇಷ್ಟರಲ್ಲಿ ಅಲ್ಲಿಗೆ ಸಾವಿರಗಟ್ಟಲೆಯ ಗುಂಪಿನಲ್ಲಿ ದೇವತೆಗಳು ಬರುತ್ತಿದ್ದರು. ಗಂಧರ್ವರು, ಕಿನ್ನರರು, ಯಕ್ಷರು, ಸಿದ್ಧರು, ಅಪ್ಸರರು, ಲೋಕಪಾಲರು ದಿಕ್ಪಾಲರು, ಪಾತಾಳದವರು, ನವಗ್ರಹಗಳು, ಷಡೃತುಗಳು. ಅರವತ್ತು ಸಂವತ್ಸರಗಳು, ನಕ್ಷತ್ರಗಳು, ವೆಥಿಗಳು, ಯೋಗಗಳು, ಕಿರಣಗಳು, ರಾಶಿಗಳು, ಪರ್ವತಗಳು, ಮರಗಳು, ಸಾಗರಗಳು ನದಗಳು, ನದಿಗಳು, ಸರೋವರಗಳು, ಕೊಳಗಳು, ಬಾವಿಗಳು, ಪಕ್ಷಿಗಳು, ಇವೆಲ್ಲವೂ ಕೂಡ ಜಂಗಮ ರೂಪವನ್ನು ಹೊಂದಿ ಆ ಯಜ್ಞಮಂಟಪಕ್ಕೆ ಬಂದುವು.

೨೬. ಗುಹನೂ, ಸಂಪಾತಿಯೂ, ಮಕರಧ್ವಜನೂ, ಬಂದರು ಲಂಕೆಯಿಂದ ರಾಕ್ಷಸರೊಡನೆ ವಿಭೀಷಣನೂ ಬಂದನು.

ಮಾನಿತಾ ರಾಘವೇಣಾಪಿ ಸರ್ವೇ ತಸ್ಥುಃ ಪ್ರಪೂಜಿತಾಃ ।
ಸ್ವಾಂತಿಕೇ ಸ್ಥಾಪಿತಾಃ ಪೂರ್ವಂ ತತ್ರೈವಾಸನ್ ಪ್ಲವಂಗಮಾಃ ॥ ೨೭ ॥

ಏತಸ್ಮಿನ್ನಂತರೇ ತತ್ರ ಸಮಾಯಾತೋ ಮುನೀಶ್ವರಃ ।
ಕುಂಭೋದರೋ ಮಹಾತೇಜಾಸ್ಸೀಮಾಚಾರ್ಯೈರ್ವಿಲೋಕಿತಃ ॥ ೨೮ ॥

ತಂ ದೃಷ್ಟ್ವಾ ಭಯಭೀತಾಸ್ತೇ ಸರ್ವೇ ಪ್ರೋಚುಃ ಪರಸ್ಪರಂ ।
ಹಾ ಕಷ್ಟಂ ಪುನರಾಯಾತಸ್ಸೋಽಯಂ ಕುಂಭೋದರೋ ಮುನಿಃ ॥ ೨೯ ॥

ಯಾತ್ರಾಶ್ರಮೋ ರಾಘವಸ್ಯ ಯನ್ನಿಮಿತ್ತೋ ಬಭೂವ ಹ ।
ಯದ್ವಾಕ್ಯಾದಶ್ವಮೇಧೋಽಪಿ ಸರ್ವೇಷಾಂ ಸಂಬಭೂವ ಹ ॥ ೩೦ ॥

---

೨೭. ಅವರೆಲ್ಲರೂ ರಾಮನಿಂದ ಗೌರವಿತರಾಗಿ ಆ ಯಜ್ಞಮಂಟಪದಲ್ಲಿ ಕುಳಿತರು. ಕಪಿಗಳನ್ನು ಮೊದಲಿಂದಲೇ ತನ್ನ ಹತ್ತಿರದಲ್ಲಿ ಇಟ್ಟುಕೊಂಡಿದ್ದನು. ಅವರೆಲ್ಲರೂ ಅಲ್ಲಿಯೇ ಇದ್ದರು.

೨೮. ಇವರೆಲ್ಲರೂ ಬರುತ್ತಿರುವಾಗಲೇ ಹಿಂದೆ ನೋಡಿದ್ದ ಆ ಮುನೀಶ್ವರನಾದ ಕುಂಭೋದರನು ಬಂದನು. ಇವನು ಹಿಂದೆ "ರಾಘವನು ಪಾಪ ಮಾಡಿರುವನು. ಅವನ ಅನ್ನವನ್ನು ಊಟಮಾಡುವುದಿಲ್ಲ" ಎಂದಿದ್ದನು.

೨೯ ಅವನನ್ನು ನೋಡಿ ಉಳಿದ ಋಷಿಗಳೆಲ್ಲರೂ ಹೆದರಿ ಭಯದಿಂದ ಒಬ್ಬರಿಗೊಬ್ಬರು ಅಯ್ಯೋ ಕಷ್ಟವು! ಹಿಂದೆ ನೋಡಿದ್ದ ಆ ಕುಂಭೋದರನು ಮತ್ತೆ ಬಂದನಲ್ಲ! ಎಂದು ಮಾತನಾಡಿಕೊಳ್ಳುತ್ತಿದ್ದರು.

೩೦. ಈ ಋಷಿಯೇ ರಾಮನಿಗೆ ಯಾತ್ರೆ ಮಾಡುವ ಆಯಾಸವನ್ನು ಕೊಟ್ಟವನು. ಇವನ ಮಾತಿನಿಂದಲೇ ಇವರೆಲ್ಲರೂ ಕಷ್ಟಪಟ್ಟು ಅಶ್ವಮೇಧ ಯಾಗವನ್ನು ಮಾಡಬೇಕಾಗಿ ಬಂದಿರುವುದು.

ಮಹಾನ್ ಶ್ರಮೋಽಶ್ವಪೃಷ್ಠೇ ತು ಭ್ರಮತಾಂ ಜಗತೀತಲೇ ।
ಅಧುನಾಪಿ ಸಮಾಯಾತಃ ಕಿಮಗ್ರೇ ವೈ ಪುನಸ್ತ್ವಯಂ ॥ ೩೧ ॥

ಕರಿಷ್ಯತಿ ನ ತದ್ವಿದ್ಮೋ ರಾಘವಸ್ಯಾಪಿ ನಿಂದಕಃ ।
ಏವಂ ನಾನಾವಿಧಾ ವಾಚಸ್ಸೇವಾಚಾರಗಣೇರಿತಾಃ ॥ ೩೨ ॥

ಶೃಣ್ವನ್ ಕುಂಭೋದರಸ್ತೂಷ್ಣೀಂ ಯಯೌ ಯಜ್ಞಭುವಂ ಪ್ರತಿ ।
ತದಾಗಮನಪೂರ್ವಂ ಸ ಸೇವಾಚಾರ್ಯೈರ್ನಿವೇದಿತಃ ॥ ೩೩ ॥

ಧಾವದ್ಭಿರ್ವೇಪಮಾನೈಶ್ಚ ಸ್ಖಲದ್ವಾಗ್ಭಿಸ್ತ್ವರಾನ್ವಿತೈಃ ।
ರಾಮ ರಾಮ ಮಹಾಬಾಹೋ ಹೇ ಲಕ್ಷ್ಮಣ ಶೃಣು ಪ್ರಭೋ ॥ ೩೪ ॥

---

೩೧. ಈ ಯಾಗದ ಕುದುರೆಯ ಹಿಂದೆ ಸುತ್ತುತ್ತ ಬಹು ಶ್ರಮವು ಎಲ್ಲರಿಗೂ ಇವನಿಂದಲೇ ಉಂಟಾದುದು. ಈಗಲೂ ಇವನು ಬಂದನು. ಮುಂದೆ ಇನ್ನೇನನ್ನು ಹೇಳುವನೋ ? ಕಾಣೆವಲ್ಲ ?

೩೨. ಇವನು ಉತ್ತಮನಾದ ರಾಮನನ್ನೂ ನಿಂದಿಸಿರುವನಲ್ಲಾ ! ಈ ರೀತಿಯಾಗಿ ಈ ಗಡಿಯನ್ನು ಕಾಯುತ್ತಿರುವವರು ಮಾತನಾಡಿಕೊಳ್ಳುತ್ತಿದ್ದರು.

೩೩. ಈ ಮಾತೆಲ್ಲವೂ ಆ ಕುಂಭೋದರನ ಕಿವಿಗೆ ಬೀಳುತ್ತಿದ್ದರೂ ಅವನು ಮಾತನಾಡದೆ ಸುಮ್ಮನೆ ಯಾಗದ ಸ್ಥಳಕ್ಕೆ ಹೋಗುತ್ತಿದ್ದನು. ಆ ಕುಂಭೋದರನು ಬಂದ ಸಮಾಚಾರವನ್ನು ಗಡಿಕಾಯುವವರು ಮೊದಲೇನೆ ರಾಮನಿಗೆ ತಿಳಿಸಿದರು.

೩೪. ಆ ಗಡಿಕಾಯುವವರು ಓಡಿಬರುತ್ತ ನಡುಗುತ್ತ ತೊದಲುತೊದಲಾಗಿ ಮಾತನಾಡುತ್ತ ವೇಗದಿಂದ ಓಡಿಬಂದು ಮಹಾಬಾಹುವಾದ ರಾಮನೇ ! ಎಲೈ ಪ್ರಭುವಾದ ಲಕ್ಷ್ಮಣನೇ ! ನೀವು ಕೇಳಿರಿ. ಮನಸ್ಸಿಟ್ಟು ಕೇಳಿರಿ.

ಯಾತ್ರಾ ಯಜ್ಞಶ್ಚ ಯದ್ವಾಕ್ಯಾತ್ಸಮಾಯಾತಸ್ಸ ವೈ ಪುನಃ ।
ಕುಂಭೋದರೋ ಮುನಿಶ್ರೇಷ್ಠೋ ರಾಮ ತ್ವಯ್ಯಪಿ ನಿಷ್ಠುರಃ ॥ ೩೫ ॥

ತದ್ದೂತವಚನಂ ಶ್ರುತ್ವಾ ಸರ್ವೇ ತದ್ದರ್ಶನೋತ್ಸುಕಾಃ ।
ತ್ಯಕ್ತ್ವಾ ಸ್ವೀಯಾನಿ ಕರ್ಮಾಣಿ ಚೋತಸ್ಥುಸ್ತದ್ದಿದೃಕ್ಷಯಾ ॥ ೩೬ ॥

ಋತ್ವಿಜೋ ರಾಘವಸ್ಸೀತಾ ನ ಭಯಂ ಮೇನಿರೇ ಮುನೇಃ ।
ಕುಂಭೋದರೋ ಯಜ್ಞವಾಟಂ ಯಯೌ ಸರ್ವೈರ್ವಿಲೋಕಿತಃ ॥ ೩೭ ॥

ಅತಿಖರ್ವಃ ಸ್ಥೂಲಶಿರಾಃ ಶ್ಯಾಮಕರ್ಣಸ್ಸಪಾದುಕಃ ।
ಸ್ಥೂಲೋದರೋ ಪಿಂಗನೇತ್ರಸ್ಸಕೌಪೀನೋ ಜಟಾಧರಃ ॥ ೩೮ ॥

---

೩೫. ಯಾವನ ತಿರಸ್ಕಾರದಿಂದ ಯಾತ್ರೆಯೂ, ಯಜ್ಞವೂ ಕೂಡ ನಡೆಯಬೇಕಾಗಿ ಬಂದುದೋ, ಎಲೈ ರಾಮನೇ! ಯಾವನ ಮಾತು ನಿನ್ನಲ್ಲಿಯೂ ನಿಷ್ಠುರವಾಗಿ ಹೊರಹೊಮ್ಮಿತ್ತೋ ಅಂತಹ ಕುಂಭೋದರಮುನಿಯು ಬಂದನು ಎಂದರು.

೩೬. ದೂತರು ಹೀಗೆಂದೆನ್ನಲು ಎಲ್ಲರೂ ಅವನನ್ನು ನೋಡಬೇಕೆಂಬ ಆಸೆಯಿಂದ ತಾವು ಮಾಡುತ್ತಿದ್ದ ಕೆಲಸಗಳೆಲ್ಲವನ್ನೂ ಅಷ್ಟಕ್ಕೆ ಬಿಟ್ಟು ಅಲ್ಲಲ್ಲಿಯೇ ಎದ್ದುನಿಂತುಕೊಂಡರು.

೩೭. ಅಲ್ಲಿನ ಋತ್ವಿಕ್ಕುಗಳೂ, ರಾಮನೂ, ಸೀತೆಯೂ ಮಾತ್ರ ಆ ಋಷಿಗೆ ಭಯಪಡಲಿಲ್ಲ. ಎಲ್ಲರೂ ಅವನನ್ನು ಅಂತೆ ನೋಡುತ್ತಿರಲಾಗಿ ಆ ಕುಂಭೋದರನು ಯಜ್ಞಮಂಟಪಕ್ಕೆ ಬಂದನು.

೩೮–೩೯. ಆ ಋಷಿಯು ಬಹು ಕುಳ್ಳನು. ತಲೆಯು ದಪ್ಪವಾಗಿದ್ದಿತು. ಕಿವಿಯು ಕಪ್ಪಗಿದ್ದಿತು. ಕಾಲುಗಳಿಗೆ ಪಾದುಕೆಯನ್ನು ಹಾಕಿಕೊಂಡಿದ್ದನು. ಹೊಟ್ಟೆಯು ದಪ್ಪವಾಗಿದ್ದಿತು. ಕಣ್ಣುಗಳು ಕೆಂಚಗಿದ್ದುವು. ಕೌಪೀನವನ್ನು ಮಾತ್ರ ಕಟ್ಟಿಕೊಂಡಿದ್ದನು. ಜಟೆಯನ್ನು ಬೆಳೆಸಿದ್ದನು. ನಾರುಬಟ್ಟೆಯನ್ನು

ಚೀರವಾಸಾಃ ಖರ್ವಪಾದಃ ಖರ್ವಹಸ್ತೋ ಮಹಾಮುನಿಃ ।
ಯುವಾ ಕಿಂಚಿತ್ ಶ್ಮಶ್ರುಯುಕ್ತೋ ಧೃತದಂಡಕಮಂಡಲುಃ ॥ ೩೯ ॥

ತಂ ದೃಷ್ಟ್ವಾ ಸಕಲಾ ಲೋಕಾ ಭಯಂ ಪ್ರಾಪುಃ ಸ್ವಚೇತಸಿ ।
ಪೂರ್ವಕರ್ಮ ಚ ಸಂಸ್ಕೃತ್ಯ ಸಂಶ್ರುತ್ಯ ಚ ಪರಸ್ಪರಂ ॥ ೪೦ ॥

ಏತಸ್ಮಿನ್ನಂತರೇ ರಾಮಶ್ಶೀಘ್ರಂ ಪ್ರತ್ಯುಜ್ಜಗಾಮ ತಂ ।
ಸಾಷ್ಟಾಂಗಂ ಪ್ರಣಿಪತ್ಯಾಥ ಕರೇ ಧೃತ್ವಾ ತು ಮಂಟಪಂ ॥ ೪೧ ॥

ಆನಯಾಮಾಸ ಶ್ರೀರಾಮಃ ದದೌ ಹೈಮಾಸನಂ ವರಂ ।
ಕುಂಭೋದರೋ ಮುನಿಶ್ಶೀಘ್ರಂ ಭೂಮೌ ದಂಡಕಮಂಡಲೂ ॥ ೪೨ ॥

ಉಟ್ಟಿದ್ದನು. ಕಾಲುಗಳು ಗಿಡ್ಡಾಗಿದ್ದುವು. ಕೈಗಳು ಚಿಕ್ಕವಾಗಿದ್ದುವು. ಯುವಕನಾಗಿದ್ದನು. ಸ್ವಲ್ಪವಾಗಿ ಗಡ್ಡಮೀಸೆಗಳಿದ್ದುವು. ಕಮಂಡಲುವನ್ನೂ, ದಂಡವನ್ನೂ ಹಿಡಿದಿದ್ದನು. ಇವನು ಮಾತ್ರ ಮಹಾಮಹಿಮನಾದ ಋಷಿಯು.

೪೦. ಇಂತಹ ಋಷಿಯು ಬಂದುದನ್ನು ನೋಡಿದೊಡನೆಯೇ ಎಲ್ಲರಿಗೂ ಮನಸ್ಸಿನಲ್ಲಿ ಹೆದರಿಕೆಯಾಯಿತು. ಇವನ ಹಿಂದಿನ ಅಗಾಧವಾದ ಕೆಲಸಗಳನ್ನೂ ರಾಮನಿಗೆ ತೊಂದರೆಕೊಟ್ಟುದನ್ನೂ ನೆನಸಿಕೊಳ್ಳುತ್ತ ಒಬ್ಬರಿಗೊಬ್ಬರು ಅವನ ವಿಷಯವನ್ನು ಹೇಳಿಕೊಳ್ಳುತ್ತಿದ್ದರು.

೪೧. ಅವನು ಬಂದೊಡನೆಯೇ ರಾಮನು ಬೇಗನೆ ಮುಂದೆಬಂದು ಆ ಋಷಿಯನ್ನು ಎದುರುಗೊಂಡನು. ಮತ್ತು ಸಾಷ್ಟಾಂಗವಾಗಿ ನಮಸ್ಕರಿಸಿ ಆ ಋಷಿಯ ಕೈಯನ್ನು ಹಿಡಿದುಕೊಂಡು ಮಂಟಪಕ್ಕೆ ಕರೆತಂದನು.

೪೨-೪೩. ಒಳಕ್ಕೆ ಬಂದಮೇಲೆ ಒಳ್ಳೆಯ ಉತ್ಕೃಷ್ಟವಾದ ಚಿನ್ನದ ಆಸನವನ್ನು ಕೊಟ್ಟನು. ಆ ಕುಂಭೋದರನು ಬೇಗನೆ ದಂಡಕಮಂಡಲುಗಳನ್ನು

ಸ್ಥಾಪಯಾಮಾಸ ಚೀರಾಣಿ ನನಾಮ ರಘುನಾಯಕಂ ।
ಸಾಮುತ್ಥಿತೋ ಕರಾಭ್ಯಾಂ ತಂ ಪ್ರತ್ಯುತ್ಥಾಪ್ಯ ಮುನೀಶ್ವರಂ ॥ ೪೩ ॥

ಗಾಢಮಾಲಿಂಗ್ಯ ಬಾಹುಭ್ಯಾಂ ತತೋ ಮುನಿಮಭಾಷತ ।
ನಾಹಂ ಯೋಗ್ಯೋ ವಂದನಾರ್ಥಂ ತ್ವಯಾ ರಾವಣಘಾತಕಃ ॥ ೪೪ ॥

ಇತಿ ರಾಮವಚೋರೂಪೈರ್ಬಾಣೈಸ್ಸಂತಾಡಿತೋ ಹೃದಿ ।
ಕುಂಭೋದರಸ್ತದೋವಾಚ ಯಜ್ಞವಾಟೇ ರಘೂತ್ತಮಂ ॥ ೪೫ ॥

ರಾಮ ರಾಮ ಮಹೋಬಾಹೋ ನ ಕೋಪಃ ಕ್ರಿಯತಾಂ ಮಯಿ ।
ಅಪರಾಧ್ಯಸ್ಮ್ಯಹಂ ತೇ ಹಿ ಕ್ಷಮಸ್ವ ರಘುನಾಯಕ ॥ ೪೬ ॥

ನೆಲದಮೇಲಿಟ್ಟು ಹೊದ್ದಿದ್ದ ಬಟ್ಟೆಯನ್ನು ತೆಗೆದಿಟ್ಟು ಆ ರಘುನಾಯಕನಾದ ರಾಮನಿಗೆ ನಮಸ್ಕರಿಸಿದನು. ರಾಮನು ಒಡನೆಯೇ ಆ ಋಷಿಯನ್ನು ಹಿಡಿದು ಎಬ್ಬಿಸಿದನು.

೪೪. ರಾಮನು ಆ ಮುನಿಯನ್ನು ಗಟ್ಟಿಯಾಗಿ ಆಲಂಗಿಸಿಕೊಂಡು ಎಲೈ ಋಷಿಯೇ ! ನಾನು ರಾವಣಘಾತಕನು ನಿನ್ನಿಂದ ನಮಸ್ಕರಿಸಿಕೊಳ್ಳಲು ನಾನು ಯೋಗ್ಯನಲ್ಲ. ಎಂದನು.

೪೫. ರಾಮನು ಈ ರೀತಿಯಾಗಿ ಹೇಳಲು ಋಷಿಗೆ ಈ ರಾಮನ ಮಾತುಗಳೆಂಬ ಬಾಣಗಳು ಬಹುವಾಗಿ ನೋವನ್ನುಂಟುಮಾಡಿದುವು. ಆಗ ಆ ಕುಂಭೋದರನು ಆ ಯಜ್ಞಮಂಟಪದಲ್ಲಿ ರಾಮನನ್ನು ಕುರಿತು ಇಂತೆಂದನು.

೪೬. ಎಲೈ ಮಹಾಬಾಹುವಾದ ರಾಮನೇ ! ನನ್ನಮೇಲೆ ಕೋಪವನ್ನು ಮಾಡಬೇಡ. ನಾನು ನಿನ್ನ ವಿಷಯದಲ್ಲಿ ತಪ್ಪುಮಾಡಿದ್ದೇನೆ. ನಾನು ಅಪರಾಧಿಯು. ಎಲೈ ರಘುನಾಯಕನೇ ! ಅದನ್ನು ಕ್ಷಮಿಸು.

ನ ಮಯಾ ಸ್ವಾರ್ಥಸಿದ್ಧ್ಯರ್ಥಂ ದೋಷಾರೋಪಃ ಕೃತಸ್ತ್ವಯಿ ।
ಕೃತಃ ಪರೋಪಕಾರಾರ್ಥಂ ತಥಾ ಕೀರ್ತ್ಯೈ ತವಾಪಿ ಚ ॥ ೪೭ ॥

ಶಿಕ್ಷಾರ್ಥಂ ಸಕಲಾನ್ ಲೋಕಾನ್ ತತ್‌ಜ್ಞಾತಂ ಚ ತ್ವಯಾಪಿ ಹಿ ।
ಯಥೈತೇ ಮುನಯಸ್ಸರ್ವೇ ತವ ಸತ್ರೇನ್ನನಿರ್ಮಿತೇ ॥ ೪೮ ॥

ಶತಶೋ ಭೋಜನಂ ಚಕ್ರುಸ್ತಥಾ ಭುಕ್ತಂ ಮಯಾಪಿ ಚ ।
ತದಾ ಕುತೋ ಮಹತ್ಕೀರ್ತಿಸ್ತವ ಮೇ ರಘುನಂದನ ॥ ೪೯ ॥

ಇತಿ ನಿಶ್ಚಿತ್ಯ ಹೃದಯೇ ಮಯಾ ಪೂರ್ವಂ ಹಿತಾಯ ಹಿ ।
ಲೋಕಾನಾಂ ಚ ಕೃತೋ ಯತ್ನಸ್ತ್ವಯಿ ದೋಷಾನುಕೀರ್ತನೈಃ ॥ ೫೦ ॥

ನೋ ಚೇದ್ಯಾತ್ರಾಸ್ಸಮುದ್ಯೋಗಃ ಕಥಂ ರಾಮ ಭವೇತ್ತವ ।
ಯತ್ರ ಯತ್ರ ಚ ದೇಶೇಷು ತೀರ್ಥೇಷೂಪವನೇಷು ಚ ॥ ೫೧ ॥

---

೪೭. ನಾನು ನನ್ನ ಸ್ವಂತ ಪ್ರಯೋಜನಕ್ಕೋಸ್ಕರವಾಗಿ ನಿನ್ನಮೇಲೆ ದೋಷವನ್ನು ಹೊರಿಸಿದವನಲ್ಲ. ಪರರಿಗೆ ಉಪಕಾರವಾಗಲೆಂದೂ ನಿನಗೆ ಕೀರ್ತಿಯು ಬರಲೆಂದೂ ನಾನು ನಿನ್ನ ಮೇಲೆ ದೋಷಾರೋಪಣೆಯನ್ನು ಮಾಡಿದೆನು.

೪೮–೫೦. ಲೋಕದವರೆಲ್ಲರಿಗೂ ನಡತೆಯನ್ನು ತೋರಿಸಿಕೊಡಲೆಂಬುದೂ ನನ್ನ ಉದ್ದೇಶವಾಗಿದ್ದಿತು. ಅದು ನಿನಗೂ ಕೂಡ ಗೊತ್ತಿರುವುದು. ನೀನು ಇಡಿಸಿದ ಛತ್ರದಲ್ಲಿ ಎಲ್ಲಾ ಋಷಿಗಳೂ ಹೇಗೆ ಊಟಮಾಡಿದರೋ ಹಾಗೆ ನಾನೂ ಭೋಜನವನ್ನು ಮಾಡಿದರೆ ನನಗಾಗಲೀ ನಿನಗಾಗಲೀ ಕೀರ್ತಿಯಾದರೂ ಏನು ಬಂದೀತು? ಎಂಬುದಾಗಿ ನಾನು ನಿಶ್ಚಯಿಸಿಕೊಂಡು ನಿನ್ನ ಹಿತಕ್ಕೋಸ್ಕರವಾಗಿಯೂ ಲೋಕಹಿತಕ್ಕಾಗಿಯೂ ಕೂಡ ನಿನ್ನಲ್ಲಿ ದೋಷವನ್ನು ಹೇಳಿದೆನು.

೫೧–೫೩. ಎಲೈ ರಾಮನೇ! ನಾನು ಹೀಗೆ ಮಾಡದಿದ್ದರೆ ನೀನು ತೀರ್ಥಯಾತ್ರೆಯ ಉದ್ಯೋಗವನ್ನು ಎಲ್ಲಿ ಮಾಡುತ್ತಿದ್ದೆ? ಎಲ್ಲಾ ದೇಶಗಳಲ್ಲಿಯೂ, ಎಲ್ಲಾ ತೀರ್ಥಗಳಲ್ಲಿಯೂ, ಉಪವನಗಳಲ್ಲಿಯೂ, ಆಶ್ರಮಗಳಲ್ಲಿಯೂ,

ಆಶ್ರಮಾರಾಮಗ್ರಾಮೇಷು ನದೀವನಗಿರೀಷು ಚ ।
ಯೇ ಯೇ ಜನಾಶ್ಚ ಸರ್ವತ್ರ ನಾನಾಕರ್ಮಸು ತತ್ಪರಾಃ ॥ ೫೨ ॥

ತವ ದರ್ಶನಲಾಭಸ್ತು ತೇಷಾಂ ಜಾತಸ್ಸುಖಪ್ರದಃ ।
ತತ್ರಾಹಂ ಕಾರಣಂ ಮನ್ಯೇ ಚಾತ್ಮಾನಂ ರಘುನಂದನ ॥ ೫೩ ॥

ಮಾಮಾಯಮುಪಕಾರಸ್ತು ಜನೈಸ್ಸರ್ವತ್ರ ಕೀರ್ತ್ಯತೇ ।
ಕುಂಭೋದರಪ್ರಸಾದೇನ ನಸ್ಸೀತಾರಾಮದರ್ಶನಂ ॥ ೫೪ ॥

ಜಾತಂ ವಿಷಯಲುಬ್ಧಾನಾಮಿತಿ ಮೇ ಕೃತಕೃತ್ಯತಾ ।
ಜಾತಾ ಸಮಂತತಃ ಕೀರ್ತಿಸ್ತ್ವಯಿ ದೋಷಾನುಕೀರ್ತನಾತ್ ॥ ೫೫ ॥

ಕಾಡುಗಳಲ್ಲಿಯೂ, ಗ್ರಾಮಗಳಲ್ಲಿಯೂ, ನದಿಗಳಲ್ಲಿಯೂ, ನದಗಳಲ್ಲಿಯೂ, ಬೆಟ್ಟಗಳಲ್ಲಿಯೂ ಇದ್ದುಕೊಂಡು ಬೇರೆಬೇರೆ ಕೆಲಸಗಳಲ್ಲಿ ಆಸಕ್ತರಾಗಿರುವ ಜನರು ಯಾರು ಯಾರಿರುವರೋ ಅವರಿಗೆಲ್ಲಾ ಸುಖಪ್ರದವಾಗಿ ನಿನ್ನ ದರ್ಶನವು ಹೇಗೆ ತಾನೇ ಪ್ರಾಪ್ತವಾಗುತ್ತಿದ್ದಿತು? ಅವರಿಗೆಲ್ಲರಿಗೂ ಇದ್ದ ಜಾಗದಲ್ಲಿಯೇ ನಿನ್ನ ದರ್ಶನವಾಯಿತು. ಈ ನಿನ್ನ ದರ್ಶನವಾದರೋ ಮೋಕ್ಷವನ್ನು ಕೊಡತಕ್ಕದ್ದು. ಎಲೈ ರಘುನಂದನನೇ! ಅದಕ್ಕೆಲ್ಲಾ ನಾನೇ ಕಾರಣನೆಂದು ತಿಳಿದಿದ್ದೇನೆ.

೫೪. ನನ್ನ ಉಪಕಾರವನ್ನು ಜನಗಳು ಎಲ್ಲಾ ಕಡೆಯಲ್ಲಿಯೂ ಹೊಗಳುತ್ತಾರೆ. ಕುಂಭೋದರನ ಅನುಗ್ರಹದಿಂದ ನಮಗೆ ಸೀತಾರಾಮರ ದರ್ಶನವಾಯಿತು. ಇಲ್ಲದಿದ್ದರೆ ನಾವು ಇವರನ್ನು ಎಲ್ಲಿ ನೋಡಲಾಗುತ್ತಿದ್ದಿತು. ಎನ್ನುತ್ತಿದ್ದಾರೆ.

೫೫. ನಾವು ವಿಷಯಲಂಪಟರಾಗಿ ಎಲ್ಲಿಗೂ ಹೋಗದೆ ಇಲ್ಲಿಲ್ಲಿಯೇ ಇರುತ್ತಿದ್ದೆವು. ಎಂಬುದಾಗಿ ಜನಗಳು ಎನ್ನುವುದಕ್ಕೆ ನಾನು ನಿನ್ನ ಮೇಲೆ ಹೊರಿಸಿದ ದೋಷವೇ ಕಾರಣವಾದುದರಿಂದ ನಾನು ಕೃತ ಕೃತ್ಯನಾದೆನು.

ತವಾಪಿ ಕೀರ್ತಿಸ್ಸರ್ವತ್ರ ಜಾತಾತ್ರ ರಘುನಂದನ ।
ರಾಮೇಶ್ವರಾಶ್ಚ ಸರ್ವತ್ರ ರಾಮತೀರ್ಥಾನ್ಯನೇಕಶಃ ॥ ೫೬ ॥

ಯಾವದ್ಭೂಮ್ಯಾಂ ಪ್ರಗೀಯೇತ ತಾವತ್ಕೀರ್ತಿಸ್ತವಾಪಿ ಚ ।
ಅನ್ಯಚ್ಚ ಲೋಕಶಿಕ್ಷಾಪಿ ಜಾತಾ ಮದ್ವಾಕ್ಯಕಾರಣಾತ್ ॥ ೫೭ ॥

ಕುಂಭೋದರೇಣ ಮುನಿನಾ ರಾಘವಸ್ಯ ಮಹಾತ್ಮನಃ ।
ದೋಷಾರೋಪಃ ಕೃತಃ ಪೂರ್ವಂ ಕಥಂ ನೋ ನ ಭವಿಷ್ಯತಿ ॥ ೫೮ ॥

ಸ್ವದೋಷಪರಿಹಾರಾರ್ಥಂ ರಾಘವೇಣ ಮಹಾತ್ಮನಾ ।
ತೀರ್ಥಯಾತ್ರಾ ಕೃತಾ ಪೂರ್ವಮಸ್ಮಾಕಂ ಕಾ ಕಥಾ ಪುನಃ ॥ ೫೯ ॥

೫೬-೫೭ ಎಲೈ ರಘುನಂದನನೇ! ಕೀರ್ತಿಯು ಎಲ್ಲಾ ಕಡೆಗೂ ಹರಡಿತು. ಆಸೇತುಹಿಮಾಚಲದವರೆಗೂ ಇರುವ ತೀರ್ಥಗಳು ಎಲ್ಲಿಯವರೆಗೂ ಭೂಮಿಯಲ್ಲಿರುತ್ತವೆಯೋ ಅಲ್ಲಿಯವರೆಗೂ ನಿನ್ನ ಕೀರ್ತಿಯೂ ಇರುತ್ತದೆ. ಎಲಾ ಕಡೆಯಲ್ಲಿಯೂ ರಾಮೇಶ್ವರ ದೇವರೂ ರಾಮತೀರ್ಥಗಳೂ ಉಂಟಾದುವು. ಇದೂ ಅಲ್ಲದೆ ನನ್ನ ಮಾತಿನಂತೆ ನಡೆದುದರಿಂದ ಜನಕ್ಕೂ ಒಂದು ಕಲಿಕೆಯನ್ನು ನೆರವೇರಿಸಿದಂತಾಯಿತು.

೫೮. ಮಹಾತ್ಮನಾದ ಕುಂಭೋದರನೇ ಮಹಾತ್ಮನಾದ ರಾಮನ ಮೇಲೆ ಪೂರ್ವದಲ್ಲಿ ದೋಷವನ್ನು ಹೊರಸಿದನೆಂದಮೇಲೆ ನಮಗೆ ಹೇಗೆ ತಾನೇ ದೋಷಾರೋಪವು ಉಂಟಾಗದಿದ್ದೀತು?

೫೯. ಈ ದೋಷಗಳನ್ನು ಕಳೆದುಕೊಳ್ಳಲು ಮಹಾತ್ಮನಾದ ರಾಮನು ತೀರ್ಥಯಾತ್ರೆಯನ್ನು ಮಾಡಿದನು. ನಮ್ಮ ವಿಷಯದಲ್ಲಿ ಬಂದ ಅಂತಹ ದೋಷವು ಹೋಗುವುದಕ್ಕೆ ಏನುಮಾಡಿದರೆ ತಾನೇ ಸಾಕಾದೀತು! ಅದರಲ್ಲಿ ಹೇಳತಕ್ಕದ್ದೇನಿರುವುದು?

ಇತಿ ಸ್ಮೃತ್ವಾ ಭಯಂ ಚಿತ್ತೇ ಸರ್ವತ್ರ ಜಗತೀತಲೇ |
ಕರಿಷ್ಯಂತಿ ಜನಾ ಯಾತ್ರಾಂ ಸ್ವದೋಷಕ್ಷಾಲನಾಯ ಹಿ ॥ ೬೦ ॥

ತ್ವಯಿ ಪೂರ್ಣಂ ಪರಂ ಬ್ರಹ್ಮ ದೋಷಾರೋಪಃ ಕಥಂ ಭವೇತ್ |
ಪದ್ಮಪತ್ರೇ ಜಲಸ್ಪರ್ಶೋ ನ ಘಟೇತ ಯಥಾ ತಥಾ ॥ ೬೧ ॥

ಯಸ್ಯ ಭ್ರೂಭಂಗಮಾತ್ರೇಣ ಬ್ರಹ್ಮಾಂಡಪ್ರಳಯೋ ಭವೇತ್ |
ಬ್ರಹ್ಮಾಂಡಾಂತರ್ಗತಾನ್ ಜೀವಾನ್ ಹರಸಿ ತ್ವಂ ಯದಾ ಮುಹುಃ ॥ ೬೨ ॥

ತದಾ ದೋಷಾನುರೋಪಸ್ತೇ ಕಿಂ ಘಟೇತ ಜನಾರ್ದನ |
ಸರ್ವೇಷಾಂ ಚ ಕ್ಷಯಂ ಮೃತ್ಯುರ್ವಿದಧಾತಿ ತವಾಜ್ಞಯಾ ॥ ೬೩ ॥

---

೬೦. ಎಂದು ಈ ವಿಷಯವನ್ನು ಜ್ಞಾಪಿಸಿಕೊಂಡು ಭೂಮಿಯಲ್ಲಿ ಎಲ್ಲಾ ಜನರೂ ತಮ್ಮ ದೋಷಗಳನ್ನು ನಾಶ ಮಾಡಿಕೊಳ್ಳಲು ಎಲ್ಲಾ ಯಾತ್ರೆಗಳನ್ನೂ ಮಾಡುತ್ತಾರೆ.

೬೧. ಪೂರ್ಣಪರಬ್ರಹ್ಮನಾದ ನಿನ್ನಲ್ಲಿ ದೋಷವು ತಾನೆ ಹೇಗೆ ಬಂದೀತು? ಪದ್ಮದ ಎಲೆಗೆ ನೀರಿನ ಸಂಪರ್ಕವು ಹೇಗೆ ಉಂಟಾಗುವುದಿಲ್ಲವೋ ಹಾಗೆ ನಿನಗೂ ದೋಷದ ಸಂಪರ್ಕವು ಉಂಟಾಗುವುದಿಲ್ಲ.

೬೨–೬೩. ಯಾವ ಸ್ವಾಮಿಯಾದ ನೀನು ಹುಬ್ಬನ್ನು ಅಲ್ಲಾಡಿಸಿದ ಮಾತ್ರದಿಂದಲೇ ಬ್ರಹ್ಮಾಂಡವೇ ನಾಶವಾಗುವುದು. ಆಗ ಆ ಬ್ರಹ್ಮಾಂಡದಲ್ಲಿರುವ ಜೀವಗಳನ್ನು ನಾಶಮಾಡುವುದರಿಂದ ನಿನಗೆ ದೋಷವು ಬರುತ್ತದೆಯೇ? ಇಲ್ಲ. ಹಾಗೆಯೇ ಈಗಲೂ ಬರುವುದಿಲ್ಲ. ಮೃತ್ಯುವೂ ಕೂಡ ನಿನ್ನ ಮಾತಿನಂತೆಯೇ ಜೀವಗಳನ್ನು ಕೊಲ್ಲುತ್ತಾನೆ.

ತತ್ರ ಸಂಖ್ಯಾತ್ರ ಕಿಂ ಕಾರ್ಯಾ ತ್ವಯಾ ದೋಷಃ ಕೃತಸ್ತ್ವಿತಿ ।
ಯಥಾ ಚಿತ್ರಾಣಿ ಕುಡ್ಯೇ ಹಿ ಲಿಖಿತಾನಿ ಸಹಸ್ರಶಃ ॥ ೬೪ ॥

ಸಂಮಾರ್ಜಿತಾನಿ ತೇನೈವ ತತ್ರ ದೋಷೋ ಭವೇತ್ಕಥಂ ।
ತಥಾ ತ್ವಮಪಿ ಶ್ರೀರಾಮ ತ್ರಿಧಾ ಭೂತ್ವಾ ತ್ರಿಭಿರ್ಗುಣೈಃ ॥ ೬೫ ॥

ಸೃಷ್ಟಿಂ ಕರೋಷಿ ರಜಸಾ ಸತ್ವರೂಪೇಣ ಪಾಲನಂ ।
ತಮೋರೂಪೇಣ ಸಂಹಾರಂ ವಿಧಿವಿಷ್ಣುಶಿವಾತ್ಮಕಃ ॥ ೬೬ ॥

ಅಸ್ಮಾಭಿಸ್ತವ ತೋಷಾರ್ಥಂ ತೀರ್ಥಯಾತ್ರಾ ವಿಧೀಯತೇ ।
ತವ ತೀರ್ಥೈಸ್ತು ಕಿಂ ರಾಮ ತೀರ್ಥಭೂತಗುಣಸ್ಯ ಚ ॥ ೬೭ ॥

---

೬೪. ಈಗ ನಿನಗೆ ಈ ರಾವಣನನ್ನು ಕೊಂದ ದೋಷವನ್ನು ಹೊರಿಸುವು ದಾದರೆ ಆಗ ಎಷ್ಟು ದೋಷಗಳನ್ನು ನಿನ್ನ ಮೇಲೆ ಹೊರಿಸಬೇಕಾದೀತು?

೬೫. ಚಿತ್ರಗಾರನು ಗೋಡೆಯಲ್ಲಿ ಚಿತ್ರವನ್ನು ಬರೆದು ಅಳಿಸುತ್ತಿದ್ದರೆ ಅವನಿಗೆ ದೋಷವು ಬರುತ್ತದೆಯೇನು? ಇಲ್ಲ. ಎಲೈ ರಾಮನೆ! ನೀನು ಸತ್ವ ರಜಸ್ತಮೋಗುಣಗಳಿಂದ ಮೂರುಭಾಗವಾಗಿ ಆಗುತ್ತೀಯೆ.

೬೬. ಅವುಗಳಲ್ಲಿ ಸತ್ವರೂಪದ ಗುಣದಿಂದ ಪಾಲನವನ್ನೂ, ರಜೋಗುಣ ದಿಂದ ಸೃಷ್ಟಿಯನ್ನೂ, ತಮೋಗುಣದಿಂದ ಸಂಹಾರವನ್ನೂ ಮಾಡುತ್ತೀಯೆ. ಸತ್ವರೂಪದಿಂದ ಬ್ರಹ್ಮನಾಗಿಯೂ, ರಜೋಗುಣದಿಂದ ವಿಷ್ಣುವಾಗಿಯೂ, ತಮೋ ಗುಣದಿಂದ ಶಿವನಾಗಿಯೂ ಆಗುತ್ತೀಯೆ.

೬೭. ಋಷಿಗಳಾದ ನಾವುಗಳೂ ಕೂಡ ನಿನ್ನ ತೃಪ್ತಿಗೋಸ್ಕರ ತೀರ್ಥ ಯಾತ್ರೆಗಳನ್ನು ಮಾಡುತ್ತೇವೆ. ಎಲೈ ರಾಮನೇ! ತೀರ್ಥದ ರೂಪವಾಗಿ ತೀರ್ಥ ಗಳ ಗುಣಗಳೆಲ್ಲವೂ ನಿನ್ನಲ್ಲಿಯೇ ಇರುತ್ತಿರುವಾಗ ನಿನಗೆ ತೀರ್ಥಯಾತ್ರೆ ಎಂದರೇನು?

ಸರ್ವತೀರ್ಥೇಷು ಮುಖ್ಯಾ ಯಾ ಕೀರ್ತ್ಯತೇ ಸ್ವರ್ಧುನೀ ಭುವಿ |
ತವ ದಕ್ಷಿಣಪಾದಸ್ಯಾಂಗುಷ್ಠಾಗ್ರಾಜ್ಜನಿತಾ ತು ಸಾ || ೬೮ ||

ತವಾಂಘ್ರಿರಜಸಸ್ಪರ್ಶಾತ್ಪವಿತ್ರಾ ಕೀರ್ತಿತಾ ಭುವಿ |
ತವ ಪಾದರಜೋಮಿಶ್ರಾ ದೃಶ್ಯತೇದ್ಯಾಪಿ ಸಾ ಸಿತಾ || ೬೯ ||

ರಜಾಂಸ್ಯಪಿ ಪ್ರದಶ್ಯಂತೇದ್ಯಾಪಿ ಭಾಗೀರಥೀ ಜಲೇ |
ಇತಿ ನಾನಾವಿಧೈರ್ವಾಕ್ಯೈಸ್ತೋಷಯಾಮಾಸ ರಾಘವಂ || ೭೦ ||

ಅಷ್ಟೋತ್ತರಶತಶ್ರೀರಾಮುದ್ರಾಮನಾಮಸ್ತವೇನ ಚ |
ಸ್ತುತ್ವಾ ರಾಮಂ ರಾಘವೇಣ ಪೂಜಿತಃ ಸ್ಥಿತವಾನ್ಮುನಿಃ || ೭೧ ||

---

೬೮. ಎಲ್ಲಾ ತೀರ್ಥಗಳಿಗಿಂತಲೂ ಗಂಗಾತೀರ್ಥವು ಬಹು ಶ್ರೇಷ್ಠವಾದುದೆಂದು ಲೋಕದಲ್ಲಿ ಪ್ರಖ್ಯಾತವಾಗಿದೆ. ಅಂತಹ ಗಂಗೆಯು ನಿನ್ನ ಬಲಗಾಲಿನ ಅಂಗುಷ್ಠದಿಂದಲೇ ಹುಟ್ಟಿತು.

೬೯. ನಿನ್ನ ಪಾದದ ಧೂಳಿನ ಸ್ಪರ್ಶದಿಂದ ಆ ನದಿಯು ಭೂಮಿಯಲ್ಲಿ ಪವಿತ್ರವೆಂದೆನ್ನಿಸಿಕೊಳ್ಳುತ್ತಿದೆ. ಆ ನಿನ್ನ ಪಾದದ ಧೂಳು ಆ ನದಿಯ ನೀರಿನಲ್ಲಿ ಸೇರಿಕೊಂಡಿರುವುದರಿಂದಲೇ ಈಗಲೂ ಅದು ಬೆಳ್ಳಗೆ ಕಾಣುತ್ತಿರುವುದು.

೭೦. ಆ ಭಾಗೀರಥಿಯ ನೀರಿನಲ್ಲಿ ನಿನ್ನ ಪಾದದ ರಜಸ್ಸಿನ ಕಣಗಳೂ ಕೂಡ ಈಗಲೂ ಕಾಣುತ್ತಿವೆ. ಇವೇ ಮುಂತಾದ ಸ್ತುತಿವಾಕ್ಯಗಳಿಂದ ರಾಮನನ್ನು ಆ ಕುಂಭೋದರನು ಸಂತೋಷಪಡಿಸಿದನು.

೭೧. ನೂರೆಂಟು ರಾಮನಾಮಗಳನ್ನು ಹೇಳಿ ಆ ಸ್ವಾಮಿಯನ್ನು ಆ ಮುನಿಯು ಸ್ತುತಿಸಿ ಸಂತೋಷಪಡಿಸಿ ಆ ರಾಮನಿಂದ ತಾನೂ ಪೂಜಿತನಾಗಿ ಕುಳಿತನು.

ರಾಮೋಽಪಿ ಗುರುಸಾನ್ನಿಧ್ಯೇ ತಸ್ಥೌ ಸೀತಾಸಮನ್ವಿತಃ ।
ನಿಜಾಸನೇಷು ಸರ್ವತ್ರ ತಸ್ಥುಸ್ತೇ ಸಕಲಾ ಜನಾಃ ॥ ೭೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಕುಂಭೋದರ ದರ್ಶನಂ ನಾಮ
ಚತುರ್ಥಸ್ಸರ್ಗಸ್ಸಮಾಪ್ತಃ

---

೭೨. ರಾಮನೂ ಕೂಡ ಗುರುವಿನ ಸಮೀಪದಲ್ಲಿಯೇ ಸೀತೆಯೊಡನೆ ಕುಳಿತುಕೊಂಡನು. ಮಿಕ್ಕವರೆಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಕುಂಭೋದರ
ದರ್ಶನವೆಂಬ ನಾಲ್ಕನೆಯ ಸರ್ಗವು ಸಮಾಪ್ತವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
|| ನಾಲ್ಕನೆಯ ಸರ್ಗದ ಸಾರಾಂಶವು ||

ಋತ್ವಿಕ್ಕುಗಳೆಲ್ಲರೂ ಯಾಗವನ್ನು ಸರಿಯಾದ ರೀತಿಯಲ್ಲಿ ನಡೆಸಿದರು. ರಾಮನಿಂದ ಕರೆಯಲ್ಪಟ್ಟ ದೇವತೆಗಳೆಲ್ಲರೂ ಆ ಯಾಗಕ್ಕೆ ಬಂದರು. ಶಂಕರನು ಬಂದುದನ್ನು ನೋಡಿ ಲಕ್ಷ್ಮಣನು ಎದುರುಗೊಂಡು ಪೂಜಿಸಿದನು. ರಾಮನೂ ಕೂಡ ಒಂದೆರಡು ಹೆಜ್ಜೆ ಮುಂದೆ ಹೋಗಿ ಆ ಶಿವನಿಗೆ ನಮಸ್ಕರಿಸಿ ಆಸನದಲ್ಲಿ ಕೂರಿಸಿದನು. ಸೀತೆಯು ನೀರನ್ನು ಧಾರೆಯಾಗಿ ಬಿಡುತ್ತಿರಲು ರಾಮನು ಆ ಶಂಕರನ ಪಾದಗಳನ್ನು ತೊಳೆಯುತ್ತಿದ್ದನು. ಇದರಿಂದ ಶಿವನು ಸಂತೋಷ ಗೊಂಡನು.

ಆಗ ರಾಮನು ಕೈಮುಗಿದುಕೊಂಡು "ನೀನು ಇಲ್ಲಿಗೆ ಬಂದುದರಿಂದ ನನ್ನ ಜನ್ಮವು ಸಫಲವಾಯಿತು." ಎಂದು ಉಪಚಾರೋಕ್ತಿಗಳನ್ನು ಹೇಳಿದನು. ಆಗ ಶಿವನು "ಎಲೈ ರಾಮನೆ! ನನಗೆ ನಿನ್ನ ಮಾಯೆಯು ಗೊತ್ತು. ನಿನ್ನಿಂದ ಹುಟ್ಟಿದವರೇ ಈ ಪ್ರಪಂಚವನ್ನು ಉತ್ಪತ್ತಿ ಮಾಡುತ್ತಿರುವಾಗ ನಿನ್ನ ಯೋಗ್ಯತೆಯು ಬಹು ಉತ್ತಮವಾದುದು. ಆದರೆ ದೇವತೆಗಳ ಕಾರ್ಯಸಿದ್ಧಿಗೋಸ್ಕರ ಕ್ರೀಡಿಸುತ್ತಿದ್ದೀಯೆ. ಸುಖವಾಗಿ ಕ್ರೀಡಿಸು." ಎಂದನು.

ಇಷ್ಟರಲ್ಲಿ ಕುಂಭೋದರನು ಬಂದುದನ್ನು ನೋಡಿ ಭೀತಿಯಿಂದ ಆ ವಿಷಯವನ್ನು ರಾಮನಿಗೆ ಸೇವಕರು ತಿಳಿಸಿದರು. ಹಿಂದೆ ಇವನೇನೇ ರಾಮನಿಗೆ ತೊಂದರೆಯನ್ನು ಕೊಟ್ಟಿದ್ದುದರಿಂದ ಈಗ ಮತ್ತೇನು ಮಾಡುವನೋ ಎಂದು ಎಲ್ಲರೂ ಹೆದರಿಕೆಯಿಂದಿದ್ದರು. ಆ ಕುಂಭೋದರನು ಯಜ್ಞಮಂಟಪಕ್ಕೆ ಬಂದನು.

ರಾವನು ಬೇಗನೆ ಹೋಗಿ ಅವನನ್ನು ಎದುರುಗೊಂಡು ಪೂಜಿಸಿ ಆಸನದಲ್ಲಿ ಕೂರಿಸಿದನು. ಆಗ ಆ ಕುಂಭೋದರನು ರಾಮನಿಗೆ ನಮಸ್ಕರಿಸಲು ರಾಮನು ಬೇಗನೆ ಅವನನ್ನು ಕೈಗಳಿಂದ ಹಿಡಿದುಕೊಂಡು ಎಬ್ಬಿಸಿ "ಎಲೈ ಮುನಿಯೇ! ನಾನು ರಾವಣಘಾತಕವಾದ ಬ್ರಹ್ಮಹತ್ಯೆಯುಳ್ಳವನು. ನೀನು ನನಗೆ ನಮಸ್ಕರಿಸಬಾರದು." ಎಂದನು.

ಆಗ ಅವನು "ಎಲೈ ರಾಮನೆ! ನನ್ನ ಮೇಲೆ ಕೋಪವನ್ನು ಮಾಡಬೇಡ. ನಾನು ನಿನಗೆ ಅಪರಾಧಿಯು. ನಾನು ನನಗೆ ಬೇಕಾಗಿ ನಿನ್ನಲ್ಲಿ ದೋಷವನ್ನು ಹೊರಿಸಲಿಲ್ಲ. ಪರರಿಗೆ ಉಪಕಾರವಾಗಲೆಂದೂ ಮತ್ತು ನಿನಗೆ ಕೀರ್ತಿಯು ಬರಲೆಂದೂ ಹಾಗೆ ಮಾಡಿದೆನು.

ಈ ಋಷಿಗಳೆಲ್ಲರೂ ನಿನ್ನ ಸತ್ರದಲ್ಲಿ ಊಟಮಾಡಿದಂತೆ ನಾನೂ ಊಟ ಮಾಡಿದರೆ ನಿನಗೆ ಕೀರ್ತಿ ಬರುವುದಿಲ್ಲವೆಂದು ಯೋಚಿಸಿ ಹಾಗೆ ಮಾಡಿದೆನು.

ನಾನು ಹಾಗೆ ಹೇಳದಿದ್ದರೆ ನೀನು ಯಾತ್ರೆಯನ್ನು ಮಾಡುತ್ತಿರಲಿಲ್ಲ. ಎಲ್ಲ ಕಡೆಯಲ್ಲಿಯೂ ಅವರವರ ಕೆಲಸದಲ್ಲಿರುತ್ತಿರುವ ಜನರಿಗೆ ನಿನ್ನ ದರ್ಶನವೂ ಉಂಟಾಗುತ್ತಿರಲಿಲ್ಲ. ಈಗ ಅವರಿಗೆಲ್ಲಾ ನಿನ್ನ ದರ್ಶನವಾದುದರಿಂದ ಅವರೆಲ್ಲರೂ ಕುಂಭೋದರನ ಪ್ರಸಾದದಿಂದ ನಮಗೆ ಈ ಉಪಕಾರವಾಯಿತೆಂದು ಹೊಗಳುತ್ತಿದ್ದಾರೆ. ನೀನು ಯಾತ್ರೆ ಹೋದುದರಿಂದ ಎಲ್ಲ ಕಡೆಯಲ್ಲಿಯೂ ರಾಮೇಶ್ವರ ದೇವರೂ ತೀರ್ಥಗಳೂ ಉಂಟಾದುವು. ಲೋಕಕ್ಕೆ ಒಂದು ಬುದ್ಧಿಯನ್ನೂ ಕಲಿಸಿದಂತಾಯಿತು.

ನೀನಾವರೋ ಪೂರ್ಣಬ್ರಹ್ಮನು. ನಿನ್ನಲ್ಲಿ ದೋಷವೆಲ್ಲಿಂದ ಬಂದೀತು! ಕಮಲದೆಲೆಗೆ ನೀರು ಸೋಕದಂತೆ ಆ ದೋಷವು ನಿನಗೆ ಅಂಟುವುದಿಲ್ಲ. ನೀನು ಹುಬ್ಬನ್ನು ಗಂಟಿಕ್ಕಿಕೊಳ್ಳುವುದರಿಂದಲೇ ಪ್ರಪಂಚವೇ ನಾಶವಾಗುವಾಗ ಆ ದೋಷವು ನಿನಗೆ ಬರುತ್ತದೆಯೇ! ಎಲೈ ರಾಮನೇ! ನೀನೇ ಸತ್ವರಜಸ್ತಮೋ ಗುಣಗಳಿಂದ ಬ್ರಹ್ಮ ವಿಷ್ಣು ಶಿವ ರೂಪನಾಗಿ ಸೃಷ್ಟಿ ಸ್ಥಿತಿ ಸಂಹಾರಗಳನ್ನು

ಮಾಡುತ್ತೀಯೆ. ನಾವೂ ಕೂಡ ನಿನಗೆ ಸಂತೋಷವುಂಟಾಗಲೆಂದೇ ತೀರ್ಥ ಯಾತ್ರೆಗಳನ್ನು ಮಾಡುತ್ತೇವೆ. ತೀರ್ಥಸ್ವರೂಪನಾದ ನಿನಗೆ ಮಿಕ್ಕ ತೀರ್ಥಗಳು ಏನನ್ನು ಮಾಡಬಲ್ಲವು? ಪ್ರಪಂಚದ ತೀರ್ಥಗಳಲ್ಲಿ ಮುಖ್ಯವಾದ ಗಂಗೆಯೇ ನಿನ್ನ ಪಾದದಿಂದ ಹುಟ್ಟಿರುವುದಲ್ಲವೆ!

ನನಗೆ ಅವೆಲ್ಲವೂ ತಿಳಿದಿರುವುದು. ನೀನು ಮನಸ್ಸಿಗೆ ಬೇಸರಮಾಡಿಕೊಳ್ಳ ಬೇಡ." ಎಂದು ರಾಮನನ್ನು ಅಷ್ಟೋತ್ತರ ನಾಮಗಳಿಂದ ಸ್ತುತಿಸಿದನು.

ಆನಂತರ ರಾಮನು ಸಂತೋಷಗೊಂಡು ಮತ್ತೆ ಋಷಿಯನ್ನು ಪೂಜಿಸಲು ಎಲ್ಲರೂ ಆಸನದಲ್ಲಿ ಕುಳಿತುಕೊಂಡರು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ
|| ಪಂಚಮಸ್ಸರ್ಗಃ ||

|| ಶ್ರೀವಿಷ್ಣುದಾಸ ಉವಾಚ ||

ಗುರೋ ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ವದ ಸವಿಸ್ತರಂ ।
ಕುಂಭೋದರೇಣ ಮುನಿನಾ ಯತ್ಸ್ತೋತ್ರಂ ಸಮುದೀರಿತಂ || ೧ ||

ಅಷ್ಟೋತ್ತರಶತಂ ನಾಮ್ನಾಂ ರಾಘವಸ್ಯ ಶುಭಪ್ರದಂ ।
ಶ್ರವಣೇ ತಸ್ಯ ಮೇ ಪ್ರೀತಿರ್ಜಾತಾಸ್ತಿ ಕಥಯಸ್ವ ತತ್ || ೨ ||

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
ಐದನೆಯ ಸರ್ಗವು

೧. ಶ್ರೀವಿಷ್ಣುದಾಸನು ಹೇಳಿದನು–ಎಲೈ ಗುರುವೆ ! ಕೆಲವು ವಿಷಯಗಳನ್ನು ಕೇಳಬೇಕೆಂದು ಇಚ್ಛಿಸುತ್ತೇನೆ. ಅದನ್ನು ವಿಸ್ತಾರವಾಗಿ ಹೇಳು. ಕುಂಭೋದರನು ರಾಮನನ್ನು ಸ್ತುತಿಸಿದನಷ್ಟೆ ! ಅದನ್ನು ಹೇಳು.

೨. ಅವನು ರಾಮನಿಗೆ ನೂರೆಂಟು ನಾಮಗಳನ್ನು ಹೇಳಿ ಸ್ತುತಿಸಿದನಷ್ಟೆ ! ಅದು ಶುಭಪ್ರದವಾದುದೆಂದು ನೀನೂ ಹೇಳಿದೆ. ಅದನ್ನು ಕೇಳಲು ನನಗೆ ಪ್ರೀತಿಯುಂಟಾಗಿದೆ. ಅದನ್ನು ಕೃಪೆಮಾಡಿ ಹೇಳು.

॥ ಶ್ರೀರಾಮದಾಸ ಉವಾಚ ॥

ಶ್ರುಣು ಶಿಷ್ಯ ಮಹಾಬುದ್ಧೇ ಸಮ್ಯಕ್ಪೃಷ್ಟಂ ತ್ವಯಾ ಮಮ ।
ಅಷ್ಟೋತ್ತರಶತಂ ನಾಮ್ನಾಂ ರಾಘವಸ್ಯ ವದಾಮ್ಯಹಂ ॥ ೩ ॥

ಸರ್ವೇಶ್ವರಸ್ಸರ್ವಮಯಸ್ಸರ್ವಭೂತೋಪಕಾರಕಃ ।
ಸರ್ವೇಷಾಮುಪಕಾರಾರ್ಥಂ ದುಸ್ಸಾಕಾರೋ ನಿರಾಕೃತಿಃ ॥ ೪ ॥

ಸಂಭವತ್ಯೇವ ಲೋಕೇಸ್ಮಿನ್ ಸಂಸಾರಭಯನಾಶನ ।
ಯದಾ ಯದಾ ಹಿ ಲೋಕಾನಾಂ ಭಯಮುತ್ಪದ್ಯತೇ ತದಾ ॥ ೫ ॥

ಅವತೀರ್ಯಾಕರೋಚ್ಛ್ರೀಮಾನ್ ದುಷ್ಟದೈತ್ಯವಿಮರ್ದನಂ ।
ಮತ್ಸ್ಯಕೂರ್ಮವರಹಾದಿರೂಪೇಣ ಪರಮಾರ್ಥದೃಕ್ ॥ ೬ ॥

---

೩. ಶ್ರೀರಾಮದಾಸನು ಹೇಳಿದನು–ಎಲೈ ಮಹಾ ಬುದ್ಧಿಯುಳ್ಳ ಶಿಷ್ಯನೆ! ನೀನು ಚೆನ್ನಾಗಿ ಪ್ರಶ್ನಿಸಿದೆ. ಆ ರಾಮನ ನೂರೆಂಟು ನಾಮಗಳನ್ನು ಹೇಳುತ್ತೇನೆ. ಕೇಳು

೪–೫. ಸರ್ವೇಶ್ವರನೂ ಸರ್ವಮಯನೂ ಸರ್ವಪ್ರಾಣಿಗಳಿಗೂ ಉಪಕಾರಕನೂ ಆದ ಸ್ವಾಮಿಯು ತಾನು ನಿರಾಕಾರನಾದರೂ ಆಕಾರವುಳ್ಳವನಾಗಿ ಎಲ್ಲರಿಗೂ ಉಪಕಾರಮಾಡಲು ಆ ಸಂಸಾರಭಯವನ್ನು ನಾಶಮಾಡಲು ಈ ಲೋಕದಲ್ಲಿ ಹುಟ್ಟಿಯೇ ಹುಟ್ಟುತ್ತಾನೆ.

೬. ಯಾವ ಯಾವಾಗ ಲೋಕಕ್ಕೆ ಭಯವು ಬರುವುದೋ ಆಗಲೆಲ್ಲಾ ಆ ಸ್ವಾಮಿಯು ಅವತರಿಸಿ ದುಷ್ಟರಾದ ದೈತ್ಯರನ್ನು ನಾಶಮಾಡುತ್ತಾನೆ. ಮತ್ಸ್ಯ, ಕೂರ್ಮ, ವರಾಹ ಮುಂತಾದ ಅವತಾರಗಳನ್ನು ಆಗಾಗ್ಗೆ ಮಾಡುತ್ತಿರುವನು.

ತತ್ಕಾಲೇಷು ಚ ಸರ್ವೇಷು ಸರ್ವೇಷಾಮುಪಕಾರಕೃತ್ ।
ಸಾಧೂನಾಂ ಸಮಚಿತ್ತಾನಾಂ ಭಕ್ತಾನಾಂ ಭಕ್ತವತ್ಸಲಃ ॥ ೭ ॥

ಉಪಕರ್ತುಂ ನಿರಾಕಾರಸ್ಸದಾಕಾರೇಣ ಜಾಯತೇ ।
ಅಜೋಽಯಂ ಜಾಯತೇಽನಂತೋ ವಿಶ್ರುತೋ ಭೂತಭಾವನಃ ॥ ೮ ॥

ತದಾ ತದಾವತರತಿ ಭಕ್ತಾನಾಮನುಕಂಪಯಾ ।
ಕ್ಷೀರಾಬ್ಧೌ ದೇವದೇವೇಶೋ ಲಕ್ಷ್ಮೀನಾರಾಯಣೋ ವಿಭುಃ ॥ ೯ ॥

ಅಶೇಷೈಶ್ಶಂಖಚಕ್ರಾಭ್ಯಾಂ ದೇವೈಃ ಬ್ರಹ್ಮಾದಿಭಿಸ್ಸಹ ।
ಶೇಷೋಽಭೂಲ್ಲಕ್ಷ್ಮಣೋ ಲಕ್ಷ್ಮೀರ್ಜಾನಕೀ ಶಂಖಚಕ್ರಕೇ ॥ ೧೦ ॥

---

೭. ತಾನು ಅವತರಿಸಿದಾಗಲೆಲ್ಲ ಕಷ್ಟವನ್ನು ನಾಶಮಾಡಿ ಎಲ್ಲರಿಗೂ ಉಪಕಾರವನ್ನು ಮಾಡುತ್ತಾನೆ. ಸಾಧುಗಳಿಗೂ ಸರ್ವರಲ್ಲಿಯೂ, ಸಮಚಿತ್ತರಾದವರಿಗೂ ಆ ಭಕ್ತವತ್ಸಲನು ಉಪಕಾರವನ್ನು ಮಾಡಿಯೇ ಮಾಡುವನು.

೮. ಇವರೆಲ್ಲರಿಗೂ ಉಪಕಾರಮಾಡಲು ತಾನು ಯಾವ ಆಕಾರದಿಂದಿಲ್ಲದಿದ್ದರೂ ಆಕಾರವನ್ನು ಹೊಂದುವನು. ಇವನು ಹುಟ್ಟುವಿಕೆಯಿಲ್ಲದ ಅಜನು. ಆದರೂ ಹುಟ್ಟುವನು. ಇವನು ಕೊನೆಯೇ ಇಲ್ಲದವನು. ಪ್ರಸಿದ್ಧನು. ಹುಟ್ಟಿದವನಾಗಿಯೂ, ಹುಟ್ಟುವನಾಗಿಯೂ ಪ್ರಸಿದ್ಧನಾಗಿರುವನು.

೯. ಭಕ್ತರಲ್ಲಿ ಕೃಪೆಯುಂಟಾದಾಗಲೆಲ್ಲ ಅವತಾರವನ್ನು ಮಾಡುವನು. ಈ ಸ್ವಾಮಿಯು ಲಕ್ಷ್ಮೀನಾರಾಯಣನಾಗಿ ಕ್ಷೀರಸಮುದ್ರದಲ್ಲಿ ಮಲಗಿರುವನು.

೧೦. ತಾನು ಅವತರಿಸುವಾಗ ಎಲ್ಲರೊಡನೆಯೂ ಅವತರಿಸುವನು. ದೇವತೆಗಳೂ ಶಂಕಚಕ್ರಗಳೂ ಅವತರಿಸುವುವು. ಈಗ ಶೇಷನೇ ಲಕ್ಷ್ಮಣನಾದನು. ಲಕ್ಷ್ಮೀಯೇ ಜಾನಕಿಯಾದಳು. ಶಂಕಚಕ್ರಗಳೇ ಭರತ ಶತ್ರುಘ್ನರಾದರು.

ಜಾತೌ ಭರತಶತ್ರುಘ್ನೌ ದೇವಾಸ್ಸರ್ವೇಽಪಿ ವಾನರಾಃ ।
ಆಸನ್ ಪೂರ್ವೈವ ಸರ್ವೇಽಪಿ ದೇವಾನಾಂ ಭಯಶಾಂತಯೇ ॥ ೧೧ ॥

ತತ್ರ ನಾರಾಯಣೋ ದೇವಶ್ಶ್ರೀರಾಮ ಇತಿ ವಿಶ್ರುತಃ ।
ಸರ್ವಲೋಕೋಪಕಾರಾಯ ಭೂಮೌ ಸ್ವಯಮವಾತರತ್ ॥ ೧೨ ॥

ಧ್ಯಾನಮಾತ್ರೇಣ ದೇವೇಶೋ ಮಹಾಪಾತಕನಾಶಕೃತ್ ।
ಕೀರ್ತನಶ್ರವಣಾಭ್ಯಾಂ ಚ ಹತ್ಯಾಕೋಟಿನಿವಾರಣಃ ॥ ೧೩ ॥

ಕಲೌ ಸಂಕೀರ್ತನೇನೈವ ಸರ್ವಪಾಪಂ ವ್ಯಪೋಹತಿ ।
ರಾಮ ರಾಮೇತಿ ರಾಮೇತಿ ಯೇ ವದಂತ್ಯತಿಪಾಪಿನಃ ॥ ೧೪ ॥

ಪಾಪಕೋಟಿಸಹಸ್ರೇಭ್ಯಸ್ತಾನುದ್ಧರತಿ ನಾನ್ಯಥಾ ।
ಅಷ್ಟೋತ್ತರಶತಂ ನಾಮ್ನಾಂ ತಸ್ಯ ಸ್ತೋತ್ರಂ ವದಾಮ್ಯಹಂ ॥ ೧೫ ॥

---

೧೧. ದೇವತೆಗಳೇ ಈ ಎಲ್ಲಾ ಕಪಿಗಳು. ತಮ್ಮ ಭಯವನ್ನು ನಾಶ ಮಾಡಿಕೊಳ್ಳುವುದಕ್ಕೋಸ್ಕರ ಆ ದೇವತೆಗಳೆಲ್ಲರೂ ಮೊದಲೇ ಅವತರಿಸಿದ್ದರು.

೧೨. ಇವರಲ್ಲಿ ಆ ನಾರಾಯಣನೇ ಶ್ರೀರಾಮನೆಂಬ ಹೆಸರಿನಿಂದ ಹುಟ್ಟಿರುವನು ಎಲ್ಲರಿಗೂ ಉಪಕಾರಮಾಡಬೇಕೆಂದೇ ಆ ಸ್ವಾಮಿಯ ಅವತಾರವೆಂದು ತಿಳಿ.

೧೩. ಆ ಸ್ವಾಮಿಯನ್ನು ಧ್ಯಾನಿಸಿದರೇನೇ ಮಹಾಪಾಪಗಳೆಲ್ಲವೂ ಹೋಗುತ್ತವೆ. ಅವನ ಹೆಸರನ್ನು ಕೀರ್ತಿಸಿದರೂ ಅದನ್ನು ಕೇಳಿದರೂ ಕೋಟಿ ಹತ್ಯೆಗಳ ಪಾಪಗಳೂ ಹೋಗುತ್ತವೆ.

೧೪–೧೫. ಕಲಿಯುಗದಲ್ಲಿ ಇವನ ಹೆಸರನ್ನು ಹೇಳಿದರೇನೇ ಎಲ್ಲಾ ಪಾಪಗಳೂ ಹೋಗುತ್ತವೆ. ರಾಮ, ರಾಮ, ರಾಮ ಎಂದು ಯಾರು ಹೇಳುವರೋ ಅವರು ಪಾಪಿಗಳಾದರೂ ಆ ಪಾಪಗಳಿಂದ ಅವರನ್ನು ಉದ್ಧಾರ ಮಾಡುತ್ತವೆ. ಆ ಸ್ವಾಮಿಯ ನೂರೆಂಟು ಸ್ತೋತ್ರವನ್ನು ಹೇಳುತ್ತೇನೆ.

ಅಸ್ಯ ಶ್ರೀರಾಮಚಂದ್ರನಾಮಾಷ್ಟೋತ್ತರಶತಮಂತ್ರಸ್ಯ-ಬ್ರಹ್ಮಾ ಋಷಿಃ—ಅನುಷ್ಟುಪ್ ಛಂದಃ—ಜಾನಕೀ ವಲ್ಲಭಶ್ರೀರಾಮಚಂದ್ರೋ ದೇವತಾ–ಓಂ ಬೀಜಂ–ನಮಃ ಶಕ್ತಿಃ-ಶ್ರೀರಾಮಭಂದ್ರ ಇತಿ ಕೀಲಕಂ-ಶ್ರೀರಾಮಚಂದ್ರಪ್ರೀತ್ಯರ್ಥೇ ಜಪೇ ವಿನಿಯೋಗಃ-ಓಂ ನಮೋ ಭಗವತೇ ರಾಜಾಧಿರಾಜಾಯ ರಾಮಾಯ ಪರಮಾತ್ಮನೇ ಹೃದಯಾಯನಮಃ. ಓಂ ನಮೋ ಭಗವತೇ ರಾಜಾಧಿರಾಜಾಯ ಪಂಚಾಶದ್ವರ್ಣಾತ್ಮನೇ ಶಿರಸೇ ಸ್ವಾಹಾ-ಓಂ ನಮೋ ಭಗವತೇ ವಿದ್ಯಾಧಿರಾಜಾಯ ಹಯಗ್ರೀವಾಯ ಶಿಖಾಯೈ ವಷಟ್-ಓಂ ನಮೋ ಭಗವತೇ ರಘುನಂದನಾಯಾಮಿತ ತೇಜಸೇ ಕವಚಾಯ ಹುಂ-ಓಂ ನಮೋ ಭಗವತೇ ಕ್ಷೀರಾಬ್ಧಿಮಧ್ಯಸ್ಥಾಯ ನಾರಾಯಣಾಯ ನೇತ್ರತಯಾಯ ವೌಷಟ್-ಓಂ ನಮೋ ಭಗವತೇ ಸತ್ಪ್ರಕಾಶಾಯ ರಾಮಾಯ ಅಸ್ತ್ರಾಯ ಫಟ್-ಇತಿ ಷಡಂಗನ್ಯಾಸಃ ಏವ ಮಂಗುಲಿನ್ಯಾಸಃ ಕಾರ್ಯಃ ॥

---

೧೬. ಈ ರಾಮಚಂದ್ರನ ನೂರೆಂಟು ನಾಮದ ಮಹಾ ಮಂತ್ರಕ್ಕೆ ಬ್ರಹ್ಮನು ಋಷಿಯು. ಅನುಷ್ಟುಪ್ ಛಂದ್ರಸ್ಸು. ಜಾನಕೀವಲ್ಲಭನಾದ ಶ್ರೀರಾಮಚಂದ್ರನೇ ದೇವತೆಯು. ಓಂ ಬೀಜವು. ನಮಶ್ಶಕ್ತಿಯು ಶ್ರೀರಾಮಚಂದ್ರನೇ ಕೀಲಕವು. ಶ್ರೀರಾಮಚಂದ್ರನ ಪ್ರೀತಿಗೋಸ್ಕರ ಜಪಮಾಡುವುದರಲ್ಲಿ ವಿನಿಯೋಗವು. ಓಂ ನಮಃ ಭಗವಂತನಾದ ರಾಜಾಧಿರಾಜನಾದ ರಾಮಪರಮಾತ್ಮನು ಹೃದಯದಲ್ಲಿ ನೆಲಸಲಿ. ಓಂ ನಮಃ ಭಗವಂತನಾದ ರಾಜಾಧಿರಾಜನಾದ ಐವತ್ತು ಅಕ್ಷರದ ರೂಪಿನವನು ನನ್ನ ಶಿರಸ್ಸಿನಲ್ಲಿ ನೆಲಸಲಿ. ಓಂ ನಮಃ ಭಗವಂತನಾದ ವಿದ್ಯಾಧಿರಾಜನಾದ ಹಯಗ್ರೀವನು ಶಿಖೆಯಲ್ಲಿ ನೆಲಸಲಿ. ಓಂ ನಮಃ ಭಗವಂತನಾದ ಹೆಚ್ಚಾದ ತೇಜಸುಳ್ಳವನಾದ ರಘುನಂದನನು ಕವಚವಾಗಿ ನಿಲ್ಲಲಿ. ಓಂ ನಮಃ ಭಗವಂತನಾದ ಕ್ಷೀರಾಬ್ಧಿಮಧ್ಯದಲ್ಲಿರುವ ನಾರಾಯಣನು ನೇತ್ರಗಳಲ್ಲಿ ನೆಲಸಲಿ. ಓಂ ನಮಃ ಭಗವಂತನಾದ ಸತ್ಪ್ರಕಾಶನಾದ ರಾಮನು ಅಸ್ತ್ರಗಳಾಗಿ ಆಗಲಿ. ಇದೇ ಆರು ಅಂಗಗಳಲ್ಲಿಯೂ ಮಾಡಿಕೊಳ್ಳುವ ವಿನ್ಯಾಸವು. ಇದೇ ರೀತಿಯಾಗಿ ಬೆರಳುಗಳಲ್ಲಿಯೂ ನ್ಯಾಸವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಮಂದಾರಾಕೃತಿ ಪುಣ್ಯಧಾಮ ವಿಲಸದ್ವಕ್ಷಸ್ಥಲಂ ಕೋಮಲಂ
ಶಾಂತಂಕಾಂತಮಹೇಂದ್ರನೀಲರುಚಿರಾಭಾಸಂ ಸಹಸ್ರಾನನಂ ।
ವಂದೇಹಂ ರಘುನಂದನಂ ಸುರಪತಿಂ ಕೋದಂಡದೀಕ್ಷಾಗುರುಂ
ರಾಮಂ ಸರ್ವಜಗತ್ಸುಸೇವಿತಪದಂ ಸೀತಾಮನೋವಲ್ಲಭಂ ॥ ೧೭ ॥

ಸಹಸ್ರಶೀರ್ಷ್ಣೇ ವೈ ತುಭ್ಯಂ ಸಹಸ್ರಾಕ್ಷಾಯ ತೇ ನಮಃ ।
ನಮಸ್ಸಹಸ್ರಹಸ್ತಾಯ ಸಹಸ್ರಚರಣಾಯ ಚ ॥ ೧೭ ॥

ನಮೋ ಜೀಮೂತವರ್ಣಾಯ ನಮಸ್ತೇ ವಿಶ್ವತೋ ಮುಖ ।
ಅಚ್ಯುತಾಯ ನಮಸ್ತುಭ್ಯಂ ನಮಸ್ತೇ ಶೇಷಶಾಯಿನೇ ॥ ೧೮ ॥

ಧ್ಯಾನವು—ಕಲ್ಪವೃಕ್ಷದ ಆಕಾರವುಳ್ಳ ಪುಣ್ಯಕ್ಕೆ ಮನೆಯಾದ ಪ್ರಕಾಶಮಾನವಾದ ಎದೆಯುಳ್ಳ ಕೋಮಲನಾದ, ಶಾಂತನಾದ, ಚೆನ್ನಾಗಿರುವ ಇಂದ್ರನೀಲ ಮಣಿಯಂತೆ ಕಾಂತಿಯುಳ್ಳ ಸಾವಿರಾರು ಮುಖವುಳ್ಳ ರಘುನಂದನನಾದ, ದೇವತೆಗಳಿಗೆ ಒಡೆಯನಾದ, ಧನುರ್ವಿದ್ಯೆಗೆ ಗುರುವಾದ ಎಲ್ಲಾ ಲೋಕಗಳಲ್ಲಿಯೂ ನಮಸ್ಕೃತವಾದ ಪಾದಗಳುಳ್ಳ ಸೀತೆಗೆ ಮನೋಹರ ಗಂಡನಾದ, ದಶರಥನ ಮಗನಾದ ರಾಮನನ್ನು ವಂದಿಸುತ್ತೇನೆ.

೧೭. ಸಾವಿರ ತಲೆಗಳುಳ್ಳ ಸ್ವಾಮಿಗೆ ನಮಸ್ಕಾರವು. ಸಾವಿರ ಕಣ್ಣುಳ್ಳ ಸ್ವಾಮಿಗೆ ನಮಸ್ಕಾರವು. ಸಾವಿರ ಕೈಗಳುಳ್ಳ ಸ್ವಾಮಿಗೆ ನಮಸ್ಕಾರವು. ಸಾವಿರಕಾಲುಗಳುಳ್ಳ ಸ್ವಾಮಿಗೆ ನಮಸ್ಕಾರವು.

೧೮. ಮೇಘವರ್ಣನಾದ ಸ್ವಾಮಿಗೆ ನಮಸ್ಕಾರವು. ಎಲ್ಲಾ ಕಡೆಯಲ್ಲಿಯೂ ಮುಖವುಳ್ಳ ಸ್ವಾಮಿಗೆ ನಮಸ್ಕಾರವು. ಅಚ್ಯುತನಾದ ಸ್ವಾಮಿಗೆ ನಮಸ್ಕಾರವು. ಶೇಷಶಾಯಿಯಾದ ಸ್ವಾಮಿಗೆ ನಮಸ್ಕಾರವು.

ನಮೋ ಹಿರಣ್ಯಗರ್ಭಾಯ ಪಂಚಭೂತಾತ್ಮನೇ ನಮಃ ।
ನಮೋ ಮೂಲಪ್ರಕೃತಯೇ ದೇವಾನಾಂ ಹಿತಕಾರಿಣೇ ॥ ೧೯ ॥

ನಮಸ್ತೇ ಸರ್ವಲೋಕೇಶ ಸರ್ವದುಃಖನಿಷೂದನ ।
ಶಂಖಚಕ್ರಗದಾಪದ್ಮ ಜಟಾಮುಕುಟಧಾರಿಣೇ ॥ ೨೦ ॥

ನಮೋ ಭರ್ಗಾಯ ತತ್ವಾಯ ಜ್ಯೋತಿಷಾಂ ಜ್ಯೋತಿಷೇ ನಮಃ ।
ಓಂ ನಮೋ ವಾಸುದೇವಾಯ ನಮೋ ದಶರಥಾತ್ಮಜ ॥ ೨೧ ॥

ನಮೋ ನಮಸ್ತೇ ರಾಜೇಂದ್ರ ಸರ್ವಸಂಪತ್ಪ್ರದಾಯ ಚ ।
ನಮಃ ಕಾರುಣ್ಯರೂಪಾಯ ಕೈಕೇಯಿಪ್ರಿಯಕಾರಿಣೇ ॥ ೨೨ ॥

---

೧೯. ಹಿರಣ್ಯಗರ್ಭನಾದ ಸ್ವಾಮಿಗೆ ನಮಸ್ಕಾರವು. ಪಂಚಭೂತಗಳ ಸ್ವರೂಪನಾದ ಸ್ವಾಮಿಗೆ ನಮಸ್ಕಾರವು. ಮೂಲಪ್ರಕೃತಿಯಾದ ಸ್ವಾಮಿಗೆ ನಮಸ್ಕಾರವು. ದೇವತೆಗಳಿಗೆ ಹಿತಕಾರಿಯಾದ ಸ್ವಾಮಿಗೆ ನಮಸ್ಕಾರವು.

೨೦. ಸರ್ವಲೋಕೇಶನಾದ ಸ್ವಾಮಿಗೆ ನಮಸ್ಕಾರವು. ಎಲ್ಲಾ ದುಃಖವನ್ನೂ ನಾಶಮಾಡುವ ಸ್ವಾಮಿಗೆ ನಮಸ್ಕಾರವು. ಶಂಖ, ಚಕ್ರ, ಗದೆ, ಪದ್ಮ, ಜಟೆ, ಮುಕುಟವುಳ್ಳ (ಧರಿಸಿರುವ) ಸ್ವಾಮಿಗೆ ನಮಸ್ಕಾರವು.

೨೧. ಭರ್ಗನಾದ ಸ್ವಾಮಿಗೆ ನಮಸ್ಕಾರವು. ತತ್ವಸ್ವರೂಪನಾದ ನಿನಗೆ ನಮಸ್ಕಾರವು. ಜ್ಯೋತಿಸ್ಸುಗಳಿಗೂ ಜ್ಯೋತಿಸ್ಸಾದ ನಿನಗೆ ನಮಸ್ಕಾರವು. ವಾಸುದೇವನಿಗೆ ನಮಸ್ಕಾರವು. ದಶರಥನ ಮಗನಾದ ನಿನಗೆ ನಮಸ್ಕಾರವು.

೨೨. ರಾಜೇಂದ್ರನಾದ ನಿನಗೆ ನಮಸ್ಕಾರವು. ಎಲ್ಲ ಸಂಪತ್ತುಗಳನ್ನೂ ಕೊಡುವ ನಿನಗೆ ನಮಸ್ಕಾರವು. ಕರುಣಾ ರೂಪನಾದ ನಿನಗೆ ನಮಸ್ಕಾರವು. ಕೈಕೇಯಿಗೆ ಪ್ರಿಯವನ್ನುಂಟುಮಾಡಿದ ನಿನಗೆ ನಮಸ್ಕಾರವು.

ನಮೋ ದಾಂತಾಯ ಶಾಂತಾಯ ವಿಶ್ವಾಮಿತ್ರಪ್ರಿಯಾಯ ತೇ ।
ಯಜ್ಞೇಶಾಯ ನಮಸ್ತುಭ್ಯಂ ನಮಸ್ತೇ ಕ್ರತುಪಾಲಕ ॥ ೨೩ ॥

ನಮೋ ನಮಃ ಕೇಶವಾಯ ನಮೋ ನಾಥಾಯ ಶಾರ್ಙ್ಗಿಣೇ ।
ನಮಸ್ತೇ ರಾಮಚಂದ್ರಾಯ ನಮೋ ನಾರಾಯಣಾಯ ಚ ॥ ೨೪ ॥

ನಮಸ್ತೇ ರಾಮಚಂದ್ರಾಯ ಮಾಧವಾಯ ನಮೋ ನಮಃ ।
ಗೋವಿಂದಾಯ ನಮಸ್ತುಭ್ಯಂ ನಮಸ್ತೇ ಪರಮಾತ್ಮನೇ ॥ ೨೫ ॥

ನಮೋ ವಿಷ್ಣುಸ್ವರೂಪಾಯ ರಘುನಾಥಾಯ ತೇ ನಮಃ ।
ನಮಸ್ತೇ ನಾಥನಾಥಾಯ ನಮಸ್ತೇ ಮಧುಸೂದನ ॥ ೨೬ ॥

---

೨೩. ಇಂದ್ರಿಯ ನಿಗ್ರಹವುಳ್ಳ ನಿನಗೆ ನಮಸ್ಕಾರವು. ಶಾಂತನಾದ ನಿನಗೆ ನಮಸ್ಕಾರವು. ವಿಶ್ವಾಮಿತ್ರನಿಗೆ ಪ್ರಿಯನಾದ ನಿನಗೆ ನಮಸ್ಕಾರವು. ಯಜ್ಞಕ್ಕೆ ಒಡೆಯನಾದ ನಿನಗೆ ನಮಸ್ಕಾರವು. ಯಾಗ ರಕ್ಷಕನಾದ ನಿನಗೆ ನಮಸ್ಕಾರವು.

೨೪. ಕೇಶವನಿಗೆ ನಮಸ್ಕಾರವು. ನಾಥನಾದ ನಿನಗೆ ನಮಸ್ಕಾರವು. ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದಿರುವ ನಿನಗೆ ನಮಸ್ಕಾರವು. ರಾಮಚಂದ್ರನಾದ ನಿನಗೆ ನಮಸ್ಕಾರವು. ನಾರಾಯಣನಾದ ನಿನಗೆ ನಮಸ್ಕಾರವು.

೨೫. ರಾಮಚಂದ್ರನಾದ ನಿನಗೆ ನಮಸ್ಕಾರವು. ಮಾಧವನಾದ ನಿನಗೆ ನಮಸ್ಕಾರವು. ಗೋವಿಂದನಾದ ನಿನಗೆ ನಮಸ್ಕಾರವು. ಪರಮಾತ್ಮನಾದ ನಿನಗೆ ನಮಸ್ಕಾರವು.

೨೬. ವಿಷ್ಣುಸ್ವರೂಪನಾದ ನಿನಗೆ ನಮಸ್ಕಾರವು. ರಘುನಾಥನಾದ ನಿನಗೆ ನಮಸ್ಕಾರವು. ಪ್ರಭುಗಳಿಗೆಲ್ಲಾ ಪ್ರಭುವಾದ ನಿನಗೆ ನಮಸ್ಕಾರವು. ಮಧುಸೂದನನಾದ ನಿನಗೆ ನಮಸ್ಕಾರವು.

ತ್ರಿವಿಕ್ರಮ ನಮಸ್ತೇಽಸ್ತು ಸೀತಾಯಾಃ ಪತಯೇ ನಮಃ ।
ರಾಮಾಯ ನಮಸ್ತುಭ್ಯಂ ನಮಸ್ತೇ ರಾಘವಾಯ ಚ ॥ ೨೭ ॥

ನಮೋ ನಮಃ ಶ್ರೀಧರಾಯ ಜಾನಕೀವಲ್ಲಭಾಯ ಚ ।
ನಮಸ್ತೇಽಸ್ತು ಹೃಷೀಕೇಶ ಕಂದರ್ಪಾಯ ನಮೋ ನಮಃ ॥ ೨೮ ॥

ನಮಸ್ತೇ ಪದ್ಮನಾಭಾಯ ಕೌಸಲ್ಯಾ ಹರ್ಷಕಾರಿಣೇ ।
ನಮೋ ರಾಜೀವನಯನ ನಮಸ್ತೇ ಲಕ್ಷ್ಮಣಾಗ್ರಜ ॥ ೨೯ ॥

ನಮೋ ನಮಸ್ತೇ ಕಾಕುತ್‌ಸ್ಥ ನಮೋ ದಾಮೋದರಾಯ ಚ ।
ವಿಭೀಷಣಪರಿತ್ರಾತರ್ನಮಸ್ಸಂಕರ್ಷಣಾಯ ಚ ॥ ೩೦ ॥

ವಾಸುದೇವ ನಮಸ್ತೇಽಸ್ತು ನಮಸ್ತೇ ಶಂಕರಪ್ರಿಯ ।
ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ ॥ ೩೧ ॥

---

೨೭. ತ್ರಿವಿಕ್ರಮನೇ ನಿನಗೆ ನಮಸ್ಕಾರವು. ಸೀತಾಪತಿಗೆ ನಮಸ್ಕಾರವು ರಾಮನಿಗೆ ನಮಸ್ಕಾರವು. ರಾಘವನಿಗೆ ನಮಸ್ಕಾರವು.

೨೮. ಶ್ರೀಧರನಿಗೆ ನಮಸ್ಕಾರವು. ಜಾನಕೀವಲ್ಲಭನಿಗೆ ನಮಸ್ಕಾರವು ಹೃಷೀಕೇಶನಿಗೆ ನಮಸ್ಕಾರವು. ಕಂದರ್ಪನಿಗೆ ನಮಸ್ಕಾರವು.

೨೯. ಪದ್ಮನಾಭನಿಗೆ ನಮಸ್ಕಾರವು. ಕೌಸಲ್ಯೆಗೆ ಸಂತೋಷವನ್ನುಂಟು ಮಾಡುವವನಿಗೆ ನಮಸ್ಕಾರವು. ರಾಜೀವನಯನನಿಗೆ ನಮಸ್ಕಾರವು. ಲಕ್ಷ್ಮಣಾಗ್ರಜನಿಗೆ ನಮಸ್ಕಾರವು.

೩೦. ಕಾಕುತ್ಸ್ಥನಿಗೆ ನಮಸ್ಕಾರವು. ದಾಮೋದರನಿಗೆ ನಮಸ್ಕಾರವು. ವಿಭೀಷಣನನ್ನು ಕಾಪಾಡಿದವನಿಗೆ ನಮಸ್ಕಾರವು. ಸಂಕರ್ಷಣನಿಗೆ ನಮಸ್ಕಾರವು.

೩೧. ವಾಸುದೇವನಿಗೆ ನಮಸ್ಕಾರವು. ಶಂಕರನಿಗೆ ಪ್ರಿಯನಾದವನಿಗೆ ನಮಸ್ಕಾರವು. ಪ್ರದ್ಯುಮ್ನನಿಗೆ ನಮಸ್ಕಾರವು. ಅನಿರುದ್ಧನಿಗೆ ನಮಸ್ಕಾರವು.

ಸದಸದ್ಭಕ್ತಿರೂಪಾಯ ನಮಸ್ತೇ ಪುರುಷೋತ್ತಮ ।
ಅಧೋಕ್ಷಜ ನಮಸ್ತೇಽಸ್ತು ಸಪ್ತತಾಲಹರಾಯ ಚ ॥ ೩೨ ॥

ಖರದೂಷಣಸಂಹರ್ತ್ರೇ ಶ್ರೀನೃಸಿಂಹಾಯ ತೇ ನಮಃ ।
ಅಚ್ಯುತಾಯ ನಮಸ್ತುಭ್ಯಂ ನಮಸ್ತೇ ಸೇತುಬಂಧಕ ॥ ೩೩ ॥

ಜನಾರ್ದನ ನಮಸ್ತೇಽಸ್ತು ನಮೋ ಹನುಮದಾಶ್ರಯ ।
ಉಪೇಂದ್ರಚಂದ್ರವಂದ್ಯಾಯ ಮಾರೀಚಮಥನಾಯ ಚ ॥ ೩೪ ॥

ನಮೋ ವಾಲಿಪ್ರಹರಣ ನಮಸ್ಸುಗ್ರೀವರಾಜ್ಯದ ।
ಜಾಮದಗ್ನ್ಯಮಹಾದರ್ಪಹರಾಯ ಹರಯೇ ನಮಃ ॥ ೩೫ ॥

---

೩೨. ಸದ್ರೂಪನಾಗಿಯೂ, ಅಸದ್ರೂಪನಾಗಿಯೂ ಭಾಗವಾಗಿರುವ ನಿನಗೆ ನಮಸ್ಕಾರವು. ಪುರುಷೋತ್ತಮನಿಗೆ ನಮಸ್ಕಾರವು. ಅಧೋಕ್ಷಜನಿಗೆ ನಮಸ್ಕಾರವು. ಏಳು ತಾಳೆಯಮರವನ್ನು ಕತ್ತರಿಸಿದವನಿಗೆ ನಮಸ್ಕಾರವು.

೩೩. ಖರದೂಷಣರನ್ನು ಸಂಹರಿಸಿದ ನಿನಗೆ ನಮಸ್ಕಾರವು. ಶ್ರೀನೃಸಿಂಹನಿಗೆ ನಮಸ್ಕಾರವು. ಅಚ್ಯುತನಿಗೆ ನಮಸ್ಕಾರವು. ಸೇತುವೆಯನ್ನು ಕಟ್ಟಿದ ನಿನಗೆ ನಮಸ್ಕಾರವು.

೩೪. ಜನಾರ್ದನನೇ ನಿನಗೆ ನಮಸ್ಕಾರವು. ಹನುಮಂತನಿಗೆ ಆಶ್ರಯವನ್ನು ಕೊಟ್ಟಿರುವ ನಿನಗೆ ನಮಸ್ಕಾರವು. ಉಪೇಂದ್ರನಿಂದಲೂ ಚಂದ್ರನಿಂದಲೂ ನಮಸ್ಕೃತನಾದ ನಿನಗೆ ನಮಸ್ಕಾರವು. ಮಾರೀಚನನ್ನು ಕೊಂದವನಿಗೆ ನಮಸ್ಕಾರವು.

೩೫. ವಾಲಿಯನ್ನು ಕೊಂದ ನಿನಗೆ ನಮಸ್ಕಾರವು. ಸುಗ್ರೀವನಿಗೆ ರಾಜ್ಯವನ್ನು ಕೊಟ್ಟವನಿಗೆ ನಮಸ್ಕಾರವು. ಪರಶುರಾಮನ ದರ್ಪವನ್ನು ನಾಶಮಾಡಿದ ನಿನಗೆ ನಮಸ್ಕಾರವು. ಹರಿಯಾದ ನಿನಗೆ ನಮಸ್ಕಾರವು.

ನಮೋ ನಮಸ್ತೇ ಕೃಷ್ಣಾಯ ನಮಸ್ತೇ ಭರತಾಗ್ರಜ ।
ನಮಸ್ತೇ ಪಿತೃಭಕ್ತಾಯ ನಮಶ್ಶತ್ರುಘ್ನ ಪೂರ್ವಜ ॥ ೩೬ ॥

ಅಯೋಧ್ಯಾಧಿಪತೇ ತುಭ್ಯಂ ನಮಶ್ಶತ್ರುಘ್ನಸೇವಿತ ।
ನಮೋ ನಿತ್ಯಾಯ ಸತ್ಯಾಯ ಬುದ್ಧ್ಯಾವಿಜ್ಞಾನರೂಪಿಣೇ ॥ ೩೭ ॥

ಅದ್ವೈತಬ್ರಹ್ಮರೂಪಾಯ ಜ್ಞಾನಗಮ್ಯಾಯ ತೇ ನಮಃ ।
ನಮಃ ಪೂರ್ಣಾಯ ರಮ್ಯಾಯ ಮಾಧವಾಯ ಚಿದಾತ್ಮನೇ ॥ ೩೮ ॥

ಅಯೋಧ್ಯೇಶಾಯ ಶ್ರೇಷ್ಠಾಯ ಚಿನ್ಮಾತ್ರಾಯ ಪರಾತ್ಮನೇ ।
ನಮೋಽಹಲ್ಯೋದ್ಧಾರಕಾಯ ನಮಸ್ತೇ ಚಾಪಭಂಗಿನೇ ॥ ೩೯ ॥

---

೩೬. ಕೃಷ್ಣನಾದ ನಿನಗೆ ನಮಸ್ಕಾರವು. ಭರತನ ಅಣ್ಣನಿಗೆ ನಮಸ್ಕಾರವು. ಪಿತೃವಿನಲ್ಲಿ ಭಕ್ತಿಯುಳ್ಳ ನಿನಗೆ ನಮಸ್ಕಾರವು. ಶತ್ರುಘ್ನನಿಗಿಂತಲೂ ಮೊದಲು ಹುಟ್ಟಿದ ನಿನಗೆ ನಮಸ್ಕಾರವು.

೩೭. ಅಯೋಧ್ಯಾಧಿಪತಿಗೆ ನಮಸ್ಕಾರವು. ಶತ್ರುಘ್ನನಿಂದ ಸೇವಿತನಾದ ನಿನಗೆ ನಮಸ್ಕಾರವು. ಬುದ್ಧಿರೂಪನಿಗೆ ನಮಸ್ಕಾರವು. ನಿತ್ಯನಿಗೆ ನಮಸ್ಕಾರವು. ಸತ್ಯನಿಗೆ ನಮಸ್ಕಾರವು. ಜ್ಞಾನರೂಪನಿಗೆ ನಮಸ್ಕಾರವು.

೩೮. ಅದ್ವೈತ ಬ್ರಹ್ಮರೂಪಿಯಾದ ನಿನಗೆ ನಮಸ್ಕಾರವು. ಶ್ರೇಷ್ಠನಿಗೆ ನಮಸ್ಕಾರವು. ಜ್ಞಾನದಿಂದ ಸಿಕ್ಕತಕ್ಕ ನಿನಗೆ ನಮಸ್ಕಾರವು. ಪೂರ್ಣನಿಗೆ ನಮಸ್ಕಾರವು. ರಮ್ಯನಿಗೆ ನಮಸ್ಕಾರವು. ಮಾಧವನಿಗೆ ನಮಸ್ಕಾರವು. ಚಿದಾತ್ಮನಿಗೆ ನಮಸ್ಕಾರವು.

೩೯. ಅಯೋಧ್ಯೆಗೆ ಈಶನಾದವನಿಗೆ ನಮಸ್ಕಾರವು. ಶ್ರೇಷ್ಠನಿಗೆ ನಮಸ್ಕಾರವು. ಚಿನ್ಮಾತ್ರನಿಗೆ ನಮಸ್ಕಾರವು. ಪರಮಾತ್ಮನಿಗೆ ನಮಸ್ಕಾರವು. ಅಹಲ್ಯೆಯನ್ನು ಉದ್ಧಾರಮಾಡಿದ ನಿನಗೆ ನಮಸ್ಕಾರವು. ಶಿವಧನುಸ್ಸನ್ನು ಮುರಿದ ನಿನಗೆ ನಮಸ್ಕಾರವು.

ಸೀತಾರಾಮಾಯ ಸೇವ್ಯಾಯ ಸ್ತುತ್ಯಾಯ ಪರಮೇಷ್ಠಿನೇ ।
ನಮಸ್ತೇ ಬಾಣಹಸ್ತಾಯ ನಮಃ ಕೋದಂಡಧಾರಿಣೇ ॥ ೪೦ ॥

ನಮಃ ಕಬಂಧಹಂತ್ರೇ ಚ ವಾಲಿಹಂತ್ರೇ ನಮೋಽಸ್ತು ತೇ ।
ನಮಸ್ತೇಽಸ್ತು ದಶಗ್ರೀವಪ್ರಾಣಸಂಹಾರಕಾರಿಣೇ ॥ ೪೧ ॥

ಅಷ್ಟೋತ್ತರಶತಂ ನಾಮ್ನಾಂ ರಾಮಚಂದ್ರಸ್ಯ ಪಾವನಂ ।
ಏತತ್ಪ್ರೋಕ್ತಂ ಮಯಾ ಶ್ರೇಷ್ಠಂ ಸರ್ವಪಾತಕನಾಶನಂ ॥ ೪೨ ॥

ಪ್ರಚರಿಷ್ಯತಿ ತಲ್ಲೋಕೇ ಪ್ರಾಣ್ಯದೃಷ್ಟವಶಾದ್ದ್ವಿಜ ।
ತಸ್ಯ ಕೀರ್ತನಮಾತ್ರೇಣ ಜನಾ ಯಾಸ್ಯಂತಿ ಸದ್ಗತಿಂ ॥ ೪೩ ॥

---

೪೦. ಸೀತಾರಾಮನಿಗೆ ನಮಸ್ಕಾರವು. ಸೇವಿಸುವುದಕ್ಕೆ ಅರ್ಹನಾದ ನಿನಗೆ ನಮಸ್ಕಾರವು. ಸ್ತುತಿಗೆ ಅರ್ಹನಾದ ನಿನಗೆ ನಮಸ್ಕಾರವು. ಪರಮೇಷ್ಠಿಯಾದ ನಿನಗೆ ನಮಸ್ಕಾರವು. ಬಾಣವನ್ನು ಕೈಯ್ಯಲ್ಲಿ ಹಿಡಿದಿರುವ ನಿನಗೆ ನಮಸ್ಕಾರವು. ಧನುಸ್ಸನ್ನು ಹಿಡಿದಿರುವ ನಿನಗೆ ನಮಸ್ಕಾರವು.

೪೧. ಕಬಂಧನನ್ನು ಕೊಂದ ನಿನಗೆ ನಮಸ್ಕಾರವು. ವಾಲಿಯನ್ನೇ ಕೊಂದ ನಿನಗೆ ನಮಸ್ಕಾರವು. ದಶಗ್ರೀವನ ಪ್ರಾಣಗಳನ್ನು ನಾಶಮಾಡಿದ ನಿನಗೆ ನಮಸ್ಕಾರವು.

೪೨. ರಾಮಚಂದ್ರನ ಈ ನೂರೆಂಟು ನಾಮಗಳು ಪಾವನವಾದುವು. ಎಲ್ಲಾ ಪಾಪಗಳನ್ನೂ ನಾಶಮಾಡತಕ್ಕ ಈ ನಾಮಗಳನ್ನು ನಾನು ಹೇಳಿದ್ದೇನೆ.

೪೩. ಇದು ಪ್ರಾಣಿಗಳ ಅದೃಷ್ಟವಶದಿಂದ ಲೋಕದಲ್ಲಿ ಹರಡುತ್ತದೆ. ಇದನ್ನು ಹೇಳುವುದರಿಂದಲೇ ಜನಗಳು ಸದ್ಗತಿಯನ್ನು ಹೊಂದುತ್ತಾರೆ.

ಶ್ರೀರಾಮಚಂದ್ರಾಷ್ಟೋತ್ತರಶತನಾಮಾವಳಿಃ

ಓಂ ಸಹಸ್ರಶೀರ್ಷ್ಣೇ ನಮಃ
ಸಹಸ್ರಾಕ್ಷಾಯ ನಮಃ
ಸಹಸ್ರಹಸ್ತಾಯ ನಮಃ
ಸಹಸ್ರಚರಣಾಯ ನಮಃ
ಜೀಮೂತವರ್ಣಾಯ ನಮಃ
ವಿಶ್ವತೋಮುಖಾಯ ನಮಃ
ಅಚ್ಯುತಾಯ ನಮಃ
ಶೇಷಶಾಯಿನೇ ನಮಃ
ಹಿರಣ್ಯಗರ್ಭಾಯ ನಮಃ
ಪಂಚಭೂತಾತ್ಮನೇ ನಮಃ ॥ ೧೦ ॥
ಮೂಲಪ್ರಕೃತಯೇ ನಮಃ
ದೇವಾನಾಂ ಹಿತಕಾರಿಣೇ ನಮಃ
ಸರ್ವಲೋಕೇಶಾಯ ನಮಃ
ಸರ್ವದುಃಖನಿಷೂದನಾಯ ನಮಃ
ಶಂಖಚಕ್ರಗದಾಪದ್ಮಜಟಾಮುಕುಟಧಾರಿಣೇ ನಮಃ
ಭರ್ಗಾಯ ನಮಃ
ತತ್ವಾಯ ನಮಃ
ಜ್ಯೋತಿಷಾಂ ಜ್ಯೋತಿಷೇ ನಮಃ
ವಾಸುದೇವಾಯ ನಮಃ
ದಶರಥಾತ್ಮಜಾಯ ನಮಃ ॥ ೨೦ ॥
ರಾಜೇಂದ್ರಾಯ ನಮಃ
ಸರ್ವಸಂಪತ್ಪ್ರದಾಯ ನಮಃ
ಕಾರುಣ್ಯರೂಪಾಯ ನಮಃ
ಕೈಕೇಯಾಪ್ರಿಯಕಾರಿಣೇ ನಮಃ
ದಾಂತಾಯ ನಮಃ
ಶಾಂತಾಯ ನಮಃ
ವಿಶ್ವಾಮಿತ್ರಪ್ರಿಯಾಯ ನಮಃ
ಯಜ್ಞೇಶಾಯ ನಮಃ
ಕ್ರತುಪಾಲಕಾಯ ನಮಃ
ಕೇಶವಾಯ ನಮಃ ॥ ೩೦ ॥
ನಾಥಾಯ ನಮಃ
ಶಾರ್ಙ್ಗಿಣೇ ನಮಃ
ರಾಮಚಂದ್ರಾಯ ನಮಃ
ನಾರಾಯಣಾಯ ನಮಃ
ರಾಮಚಂದ್ರಾಯ ನಮಃ
ಮಾಧವಾಯ ನಮಃ
ಗೋವಿಂದಾಯ ನಮಃ
ಪರಮಾತ್ಮನೇ ನಮಃ
ವಿಷ್ಣುಸ್ವರೂಪಾಯ ನಮಃ
ರಘುನಾಥಾಯ ನಮಃ ॥ ೪೦ ॥
ನಾಥನಾಥಾಯ ನಮಃ
ಮಧುಸೂದನಾಯ ನಮಃ
ತ್ರಿವಿಕ್ರಮಾಯ ನಮಃ
ಸೀತಾಯಾಃ ಪತಯೇ ನಮಃ
ವಾಮನಾಯ ನಮಃ
ರಾಘವಾಯ ನಮಃ
ಶ್ರೀಧರಾಯ ನಮಃ
ಜಾನಕೀವಲ್ಲಭಾಯ ನಮಃ
ಹೃಷೀಕೇಶಾಯ ನಮಃ
ಕಂದರ್ಪಾಯ ನಮಃ ॥ ೫೦ ॥
ಪದ್ಮನಾಭಾಯ ನಮಃ
ಕೌಸಲ್ಯಾಹರ್ಷಕಾರಿಣೇ ನಮಃ
ರಾಜೀವನಯನಾಯ ನಮಃ
ಲಕ್ಷ್ಮಣಾಗ್ರಜಾಯ ನಮಃ
ಕಾಕುತ್ಸ್ಥಾಯ ನಮಃ
ದಾಮೋದರಾಯ ನಮಃ

ವಿಭೀಷಣಪರಿತ್ರಾತ್ರೇ ನಮಃ
ಸಂಕರ್ಷಣಾಯ ನಮಃ
ವಾಸುದೇವಾಯ ನಮಃ
ಶಂಕರಪ್ರಿಯಾಯ ನಮಃ ॥ ೬೦ ॥
ಪ್ರದ್ಯುಮ್ನಾಯ ನಮಃ
ಅನಿರುದ್ಧಾಯ ನಮಃ
ಸದಸಕ್ತಿರೂಪಾಯ ನಮಃ
ಪುರುಷೋತ್ತಮಾಯ ನಮಃ
ಅಧೋಕ್ಷಜಾಯ ನಮಃ
ಸಪ್ತತಾಲಹರಾಯ ನಮಃ
ಖರದೂಷಣಸಂಹರ್ತ್ರೇ ನಮಃ
ಶ್ರೀನೃಸಿಂಹಾಯ ನಮಃ
ಅಚ್ಯುತಾಯ ನಮಃ
ಸೇತುಬಂಧಕಾಯ ನಮಃ ॥ ೭೦ ॥
ಜನಾರ್ದನಾಯ ನಮಃ
ಹನುಮದಾಶ್ರಯಾಯ ನಮಃ
ಉಪೇಂದ್ರವಂದ್ಯಾಯ ನಮಃ
ಮಾರೀಚಮಥನಾಯ ನಮಃ
ವಾಲಿಪ್ರಹರಣಾಯ ನಮಃ
ಸುಗ್ರೀವರಾಜ್ಯದಾಯ ನಮಃ
ಜಾಮದಗ್ನ್ಯಮಹಾದರ್ಪಹರಾಯ ನಮಃ
ಹರಯೇ ನಮಃ
ಕೃಷ್ಣಾಯ ನಮಃ
ಭರತಾಗ್ರಜಾಯ ನಮಃ ॥ ೮೦ ॥
ಪಿತೃಭಕ್ತಾಯ ನಮಃ
ಶತ್ರುಘ್ನಪೂರ್ವಜಾಯ ನಮಃ
ಅಯೋಧ್ಯಾಧಿಪತಯೇ ನಮಃ
ಶತ್ರುಘ್ನಸೇವಿತಾಯ ನಮಃ
ನಿತ್ಯಾಯ ನಮಃ
ಸತ್ಯಾಯ ನಮಃ
ಬುದ್ಧ್ಯಾದಿಜ್ಞಾರೂಪಿಣೇ ನಮಃ
ಅದ್ವೈತಬ್ರಹ್ಮರೂಪಿಣೇ ನಮಃ
ಜ್ಞಾನಗಮ್ಯಾಯ ನಮಃ
ಪೂರ್ಣಾಯ ನಮಃ ॥ ೯೦ ॥
ರಮ್ಯಾಯ ನಮಃ
ಮಾಧವಾಯ ನಮಃ
ಚಿದಾತ್ಮನೇ ನಮಃ
ಅಯೋಧ್ಯೇಶಾಯ ನಮಃ
ಶ್ರೇಷ್ಠಾಯ ನಮಃ
ಚಿನ್ಮಾತ್ರಾಯ ನಮಃ
ಪರಮಾತ್ಮನೇ ನಮಃ
ಅಹಲ್ಯೋದ್ಧಾರಣಾಯ ನಮಃ
ಚಾಪಭಂಗಿನೇ ನಮಃ
ಸೀತಾರಾಮಾಯ ನಮಃ ॥ ೧೦೦ ॥
ಸೇವ್ಯಾಯ ನಮಃ
ಸ್ತುತ್ಯಾಯ ನಮಃ
ಪರಮೇಷ್ಠಿನೇ ನಮಃ
ಬಾಣಹಸ್ತಾಯ ನಮಃ
ಕೋದಂಡಧಾರಿಣೇ ನಮಃ
ಕಬಂಧಹಂತ್ರೇ ನಮಃ
ವಾಲಿಹಂತ್ರೇ ನಮಃ
ದಶಗ್ರೀವಪ್ರಾಣಸಂಹಾರಕಾರಿಣೇ ನಮಃ ॥ ೧೦೮ ॥

ಇತಿ ಶ್ರೀರಾಮಚಂದ್ರಾಷ್ಟೋತ್ತರಶತನಾಮಾವಳಿಃ ಸಮಾಪ್ತಾ

ತಾವದ್ವಿಜೃಂಭತೇ ಪಾಪಂ ಬ್ರಹ್ಮಹತ್ಯಾಪುರಸ್ಸರಂ ।
ಯಾವನ್ನಾಮಾಷ್ಟಕಶತಂ ಪುರುಷೋ ನ ಹಿ ಕೀರ್ತಯೇತ್ ॥ ೪೪ ॥

ತಾವತ್ಕಲೇರ್ಮಹೋತ್ಸಾಹೋ ನಿಶ್ಶಂಕಂ ಸಂಪ್ರವರ್ತತೇ ।
ಯಾಚ್ಛ್ರೀರಾಮಚಂದ್ರಸ್ಯ ಶತನಾಮ್ನಾಂ ನ ಕೀರ್ತನಂ ॥ ೪೫ ॥

ತಾವದ್ಯಮಭಟಾಃ ಕ್ರೂರಾಸ್ಸಂಚರಿಷ್ಯಂತಿ ನಿರ್ಭಯಾಃ ।
ಯಾವಚ್ಛ್ರೀರಾಮಚಂದ್ರಸ್ಯ ಶತನಾಮ್ನಾಂ ನ ಕೀರ್ತನಂ ॥ ೪೬ ॥

ತಾವತ್ಸ್ವರೂಪಂ ರಾಮಸ್ಯ ದುರ್ಬೋಧಂ ಪ್ರಾಣಿನಾಂ ಸ್ಫುಟಂ ।
ಯಾವನ್ನ ನಿಷ್ಠಯಾ ರಾಮನಾಮಮಾಹಾತ್ಮ್ಯಮುತ್ತಮಂ ॥ ೪೭ ॥

ಕೀರ್ತಿತಂ ಪಠಿತಂ ಚಿತ್ತೇ ಧೃತಂ ಸಂಸ್ಮಾರಿತಂ ಮುದಾ ।
ಅನ್ಯತಃ ಶೃಣುಯಾನ್ಮರ್ತ್ಯಸ್ಸೋಽಪಿ ಮುಚ್ಯೇತ ಪಾತಕಾತ್ ॥ ೪೮ ॥

---

೪೪. ಪುರುಷನು ಈ ನೂರೆಂಟು ನಾಮಗಳನ್ನು ಹೇಳದಿರುವವರೆಗೆ ಇವನಲ್ಲಿ ಬ್ರಹ್ಮಹತ್ಯಾದಿ ಪಾಪಗಳು ನಾನು ತಾನೆಂದು ಕೂಗುತ್ತವೆ. ಅನಂತರ ಹೋಗುತ್ತವೆ.

೪೫. ರಾಮಚಂದ್ರನ ನೂರೆಂಟು ನಾಮಗಳನ್ನು ಹೇಳದಿರುವವರೆಗೂ ಕಲಿಯು ಸಂದೇಹಪಡದೆ ಉತ್ಸಾಹದಿಂದ ವ್ಯಾಪಿಸುತ್ತಾನೆ.

೪೬. ರಾಮಚಂದ್ರನ ಈ ನೂರೆಂಟು ನಾಮಗಳನ್ನು ಹೇಳದಿರುವವರೆಗೂ ಇವನಲ್ಲಿ ಕ್ರೂರರಾದ ಯಮಭಟರು ಭಯವಿಲ್ಲದೆ ಸಂಚರಿಸುತ್ತಾ ಇರುತ್ತಾರೆ.

೪೭. ಆ ಶ್ರೀರಾಮ ನಾಮಗಳನ್ನು ಹೇಳದಿರುವವರೆಗೂ ಆ ರಾಮನ ಮಹಿಮೆಯು ಪ್ರಾಣಿಗಳಿಗೆ ತಿಳಿಯುವುದೇ ಇಲ್ಲ. ನಿಷ್ಠೆಯಿಂದ ಹೇಳಿದಮೇಲೆ ಅದರ ಸ್ವರೂಪವು ತಿಳಿಯುತ್ತದೆ.

೪೮. ಓದಿದಮೇಲೆಯೂ, ಹೇಳಿದಮೇಲೆಯೂ, ಚಿತ್ತದಲ್ಲಿ ಧರಿಸಿದಮೇಲೆಯೂ ಸ್ಮರಿಸಿಕೊಂಡಮೇಲೆಯೂ ಅದರ ಮಹಿಮೆಯು ತಿಳಿಯುತ್ತದೆ. ಮತ್ತೊಬ್ಬನಿಂದ ಹೇಳಿಸಿದರೂ ಕೇಳಿಸಿದರೂ ಅವನು ಪಾಪದಿಂದ ಮುಕ್ತನಾಗುತ್ತಾನೆ.

ಬ್ರಹ್ಮಹತ್ಯಾದಿಪಾಪಾನಾಂ ನಿಷ್ಕೃತಿಂ ಯಸ್ತು ವಾಂಛತಿ ।
ರಾಮಸ್ತೋತ್ರಂ ಮಾಸಮೇಕಂ ಪಠಿತ್ವಾ ಮುಚ್ಯತೇ ನರಃ ॥ ೪೯ ॥

ದುಷ್ಪ್ರತಿಗ್ರಹದುರ್ಭೋಜ್ಯದುರಾಲಾಪಾದಿಸಂಭವಂ ।
ಪಾಪಂ ಸಕೃತ್ಕೀರ್ತನೇನ ರಾಮಸ್ತೋತ್ರಂ ವಿನಾಶಯೇತ್ ॥ ೫೦ ॥

ಶ್ರುತಿಸ್ಮೃತಿಪುರಾಣೇತಿಹಾಸಾಗಮಶತಾನಿ ಚ ।
ಅರ್ಹಂತಿ ನಾಲ್ಪಾಂ ಶ್ರೀರಾಮನಾಮಕೀರ್ತಿಕಲಾಮಪಿ ॥ ೫೧ ॥

ಅಷ್ಟೋತ್ತರಶತಂ ನಾಮ್ನಾಂ ಸೀತಾರಾಮಸ್ಯ ಪಾವನಂ ।
ಅಸ್ಯ ಸಂಕೀರ್ತನಾದೇವ ಸರ್ವಾನ್ ಕಾಮಾನ್ ಲಭೇನ್ನರಃ ॥ ೫೨ ॥

---

೪೯. ಬ್ರಹ್ಮಹತ್ಯಾದಿ ಪಾಪಗಳನ್ನು ಹೋಗಲಾಡಿಕೊಳ್ಳಬೇಕೆಂದಿರುವವನು ಈ ರಾಮಸ್ತೋತ್ರವನ್ನು ಒಂದು ತಿಂಗಳವರೆಗೂ ಪಠಿಸಿದರೆ ಅವೆಲ್ಲವೂ ಹೋಗುತ್ತವೆ.

೫೦. ಅಯೋಗ್ಯರಿಂದ ತೆಗೆದುಕೊಂಡ ದಾನದ ದೋಷವಾಗಲಿ, ಅಯೋಗ್ಯರಲ್ಲಿ ಊಟಮಾಡಿದ ದೋಷವಾಗಲಿ, ಕೆಟ್ಟ ಮಾತನ್ನು ಆಡಿದುದರಿಂದ ಬಂದ ದೋಷವಾಗಲಿ, ಈ ರಾಮಸ್ತೋತ್ರವನ್ನು ಒಂದುಬಾರಿ ಹೇಳುವುದರಿಂದಲೇ ಹೋಗುತ್ತದೆ.

೫೧. ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಆಗಮಗಳು ಒಂದೂ ಕೂಡ ಈ ರಾಮನಾಮದ ಸ್ತುತಿಯ ಕಲೆಯ (ಹದಿನಾರನೆಯ) ಒಂದು ಭಾಗವನ್ನು ಸರಿದೂಗುವುದಿಲ್ಲ.

೫೨. ಈ ಸೀತಾರಾಮನ ಈ ಅಷ್ಟೋತ್ತರನಾಮಗಳು ಪಾವನವಾದುವು. ಇದನ್ನು ಹೇಳುವುದರಿಂದಲೇ ಮನುಷ್ಯನು ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ.

ಪುತ್ರಾರ್ಥೀ ಲಭತೇ ಪುತ್ರಾನ್ ಧನಾರ್ಥೀ ಧನಮಾಪ್ನುಯಾತ್ |
ಸ್ತ್ರಿಯಂ ಲಭತಿ ಪತ್ನ್ಯರ್ಥೀ ಸ್ತೋತ್ರಪಾಠಶ್ರವಾದಿನಾ || ೫೩ ||

ಕುಂಭೋದರೇಣ ಮುನಿನಾ ಯೇನ ಸ್ತೋತ್ರೇಣ ರಾಘವಃ |
ಸ್ತುತಃ ಪೂರ್ವಂ ಯಜ್ಞವಾಟೇ ತದೇತತ್ತ್ವಾಂ ಮಯೋದಿತಂ || ೫೪ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಶ್ರೀರಾಮನಾಮಾಷ್ಟೋತ್ತರ
ಶತಸ್ತೋತ್ರಂ ನಾಮ ಪಂಚಮಸ್ಸರ್ಗಸ್ಸಮಾಪ್ತಃ

---

೫೩. ಇದನ್ನು ಹೇಳಿದರೆ ಮಕ್ಕಳನ್ನು ಅಪೇಕ್ಷಿಸತಕ್ಕವನು ಮಕ್ಕಳನ್ನೂ, ಧನವನ್ನು ಅಪೇಕ್ಷಿಸತಕ್ಕವನು ಧನವನ್ನೂ, ಪತ್ನಿಯನ್ನು ಅಪೇಕ್ಷಿಸುವವನು ಕನ್ಯೆಯನ್ನೂ ಹೊಂದುತ್ತಾನೆ.

೫೪. ಕುಂಭೋಧರನು ಯಜ್ಞವಾಟದಲ್ಲಿ ಶ್ರೀರಾಮನನ್ನು ಯಾವ ಸ್ತೋತ್ರದಿಂದ ಸ್ತುತಿಸಿದನೋ ಅದೇ ಸ್ತೋತ್ರವನ್ನು ನಿನಗೆ ನಾನು ಹೇಳಿದ್ದೇನೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಶ್ರೀರಾಮನಾಮಾ
ಷ್ಟೋತ್ತರಶತನಾಮಸ್ತೋತ್ರವೆಂಬ ಐದನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
॥ ಐದನೆಯ ಸರ್ಗದ ಸಾರಾಂಶವು ॥

ಕುಂಭೋದರನು ಹೇಳಿದ ಶ್ರೀರಾಮನ ನೂರೆಂಟು ನಾಮಗಳನ್ನೂ ಈ ಸರ್ಗದಲ್ಲಿ ಹೇಳಿದೆ. ಅವೆಲ್ಲವೂ ಎಲ್ಲ ಅಷ್ಟೋತ್ತರಗಳಂತೆಯೇ ಇರುವುವು. ಇದನ್ನು ಓದಿದರೆ ಪಾಪವೆಲ್ಲವೂ ಹೋಗುವುದು. ಇವೆಲ್ಲವೂ ಪ್ರಾಣಿಗಳ ಅದೃಷ್ಟದಿಂದಲೇ ಲೋಕದಲ್ಲಿ ಪ್ರಖ್ಯಾತವಾಗಿರುವುವು. ಇವನ್ನು ಓದುವುದರಿಂದ ಯಮಭಟರು ಬಾಧಿಸುವುದಿಲ್ಲ. ಇದನ್ನು ಒಂದು ತಿಂಗಳವರೆಗೆ ಪಾರಾಯಣ ಮಾಡಿದರೆ ಬ್ರಹ್ಮಹತ್ಯೆಯೂ ಹೋಗುವುದು. ಶ್ರುತಿ ಸ್ಮೃತಿ ಪುರಾಣಗಳೂ ಕೂಡ ಈ ರಾಮನಾಮದ ಹದಿನಾರನೆಯ ಒಂದು ಭಾಗದ ಯೋಗ್ಯತೆಯನ್ನು ಹೊಂದಲಾರವು. ಇವನ್ನು ಪಾರಾಯಣ ಮಾಡೋಣದರಿಂದ ಧನವೂ ಪುತ್ರರೂ ಎಲ್ಲಾ ಇಷ್ಟಾರ್ಥಗಳೂ ಈಡೇರುತ್ತವೆ.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

|| ಷಷ್ಠಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥ ಕುಂಭೋದರೇ ದಿವ್ಯೇ ಆಸನೋಪರಿಸಂಸ್ಥಿತೇ ।
ಯಜ್ಞಸ್ತಂಭೇ ಶ್ಯಾಮಕರ್ಣಂ ಬಬಂಧುಸ್ತೇ ಹಿ ಋತ್ವಿಜಃ || ೧ ||

ತಸ್ಯಾಂಗಾನಿ ಸಮಸ್ತಾನಿ ಪೃಥಙ್ಮಂತ್ರೈರ್ಯಥಾವಿಧಿ ।
ಸಮ್ಮಂತ್ರ್ಯಾಪಿ ಶಮಿತ್ರಾ ತಂ ನಿಹನ್ಯುರ್ದ್ವಿಜಪುಂಗವಾಃ || ೨ ||

ತನ್ಮಾಂಸಖಂಡೈರಾಜ್ಯಾಕ್ತೈರ್ಹೋಮಂ ಚಕ್ರುಸ್ಸವಿಸ್ತರಂ ।
ತಥಾ ನಾನಾವಿಧೈರ್ದ್ರವ್ಯೈಸ್ಸಕ್ತುಪಾಯಸಗೋಘೃತೈಃ || ೩ ||

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಆರನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಈ ಕುಂಭೋದರನು ದಿವ್ಯವಾದ ಆಸನದಲ್ಲಿ ಕುಳಿತಿರುವಾಗ ಋತ್ವಿಜರು ಆ ಶ್ಯಾಮಕರ್ಣನಾದ ಯಜ್ಞದ ಕುದುರೆಯನ್ನು ಯೂಪಸ್ತಂಭಕ್ಕೆ ಕಟ್ಟಿದರು.

೨. ಆ ಶಮಿತೃವಿನ ಕೈಯಲ್ಲಿ ಆ ಕುದುರೆಯ ಅಂಗಗಳನ್ನು ಬೇರೆ ಬೇರೆಯಾಗಿ ಮಂತ್ರಿಸಿ ಅನಂತರ ಎಲ್ಲರೂ ಸೇರಿಕೊಂಡು ಅದನ್ನು ಕೊಂದರು.

೩-೪. ಅದರ ಮಾಂಸಖಂಡಗಳನ್ನು ತುಪ್ಪದಲ್ಲಿ ಅದ್ದಿಕೊಂಡು ಬೇರೆ ಬೇರೆಯಾಗಿ ಹೋಮಮಾಡಿದರು. ಅನಂತರ ಸಕ್ತು, ಗೋವಿನ ತುಪ್ಪ,

ಮಧ್ವಾಕ್ತತಿಲದೂರ್ವಾದ್ಯೈಸ್ಸಮಿಧಾಭಿಶ್ಚ ಸಾದರಂ ।
ಗೋಘೃತೇನ ವಸೋರ್ಧಾರಾಂ ವಹ್ನೌ ಸ್ಥೂಲಾಮಖಂಡಿತಾಂ ॥ ೪ ॥

ಗೋಮುಖೇನೋರ್ಧ್ವಬದ್ಧೇನ ದದುರ್ಮಂತ್ರೈಸ್ಸವಿಸ್ತರಂ ।
ಚಿರಕಾಲಂ ಹೋಮಕುಂಡೇ ಯಾವದ್ಯಜ್ಞಸಮಾಪನಂ ॥ ೫ ॥

ತದಾ ಧೂಮಚಯೈರ್ವ್ಯಾಪ್ತಮಾಕಾಶಂ ಚ ಸಮಂತತಃ ।
ನಾದ್ಯಾಪಿ ದೃಶ್ಯತೇ ಶುಭ್ರಂ ನೀಲವರ್ಣಂ ಪ್ರದೃಶ್ಯತೇ ॥ ೬ ॥

ಚೈತ್ರಮಾಸೇ ಮಹಾಪುಣ್ಯೇ ವಸಂತರ್ತೌ ಸುಖಾವಹೇ ।
ಏವಂ ಪ್ರವರ್ತಯಾಮಾಸುರ್ವಾಜಿಮೇಧಂ ಮುನೀಶ್ವರಾಃ ॥ ೭ ॥

ಪಾಯಸ, ಜೇನಿನಿಂದ ನೆನೆದ ಎಳ್ಳಿನಿಂದಲೂ, ಗರಿಕೆಯಿಂದಲೂ ಸಮಿತ್ತುಗಳಿಂದಲೂ ಹೋಮಮಾಡಿ ಗೋವಿನ ತುಪ್ಪದಿಂದ ವಸೋರ್ಧರೆ ಎಂಬ ತುಪ್ಪವನ್ನು ದಪ್ಪವಾಗಿ ಹೆಚ್ಚಾಗಿ ಬೀಳುವಂತೆ ಒಂದೇ ಸಮವಾಗಿ ಆ ಬೆಂಕಿಯಲ್ಲಿ ಹೋಮ ಮಾಡಿದರು.

೫. ಗೋಮುಖವನ್ನು ಆ ಹೋಮಕುಂಡದ ಮೇಲುಗಡೆಯಲ್ಲಿ ಕಟ್ಟಿ ಆದರಲ್ಲಿ ತುಪ್ಪವನ್ನು ಹಾಕಿ ವಸುಧಾರೆಯನ್ನು ಬಿಟ್ಟರು. ಯಜ್ಞವು ಪೂರ್ತಿಯಾಗುವವರೆಗೂ ಹಾಗೆಯೇ ಬೀಳುತ್ತಿದ್ದಿತು.

೬. ಆಗ ಆಕಾಶವೆಲ್ಲವೂ ಹೊಗೆಯ ಗುಂಪಿನಿಂದ ಕೂಡಿಕೊಂಡಿತು (ಮುಚ್ಚಿಕೊಂಡಿತು) ಆ ಹೊಗೆಯಿಂದ ಕಪ್ಪಾದ ಆಕಾಶವು ಈಗಲೂ ಕೂಡ ಶುಭ್ರವಾಗಿ ಇನ್ನೂ ಕಾಣುತ್ತಲೇ ಇಲ್ಲ. ನೀಲವರ್ಣವಾಗಿಯೇ ಕಾಣುತ್ತಿರುವುದು.

೭. ವಸಂತ ಋತುವಿನ ಚೈತ್ರಮಾಸದಲ್ಲಿ ಶುಭವಾದ ಮಹಾಪುಣ್ಯಕಾಲದಲ್ಲಿ ಈ ಯಜ್ಞವು ನಡೆಯಿತು. ಈ ರೀತಿಯಾಗಿ ನಡದ ಅಶ್ವಮೇಧದಲ್ಲಿ ಮುನಿಗಳು ಅಗ್ನಿಹೋತ್ರವನ್ನು ಯಥಾವಿಧಿಯಾಗಿ ಮಾಡಿದರು.

ಈಜತುರ್ಯಜ್ಞವಿಧಿನಾ ಹ್ಯಗ್ನಿಹೋತ್ರಾದಿಲಕ್ಷಣೈಃ ।
ಪ್ರಾಕೃತೈರ್ವೈಕೃತೈರ್ಯಜ್ಞೈರ್ದ್ರವ್ಯಜ್ಞಾನಕ್ರಿಯೇಶ್ವರಂ ॥ ೮ ॥

ಪ್ರತ್ಯಹಂ ಪ್ರಾತರುತ್ಥಾಯ ರಾಮಚಂದ್ರಸ್ಸ ಸೀತಯಾ ।
ನತ್ವಾ ಶಂಭುಂ ವಿಧಿಂ ದೇವಾನ್ ಮುನೀಂಶ್ಚಾಪಿ ಪೃಥಕ್ ಪೃಥಕ್ ॥ ೯ ॥

ಕೌಸಲ್ಯಾದೀಶ್ಚ ಮಾತೄಶ್ಚ ಕಾಮಧೇನುಂ ಹೃದಿ ಸ್ಥಿತಂ ।
ಚಿಂತಾಮಣಿಂ ಕೌಸ್ತುಭಂ ಚ ಕಂಠೇ ಬದ್ಧಂ ರವಿಪ್ರಭಂ ॥ ೧೦ ॥

ಪುಷ್ಪಕಂ ಯಜ್ಞವಾಟಸ್ಯ ದೇವತಾಂ ಯಜ್ಞಪೂರುಷಂ ।
ತತೋ ಗತ್ವಾ ರಾಮತೀರ್ಥೇ ಸ್ನಾತ್ವಾ ರಾಮೋ ಯಥಾವಿಧಿ ॥ ೧೧ ॥

ಕೃತ್ವಾ ನಿತ್ಯವಿಧಿಂ ಸರ್ವಂ ಪೂಜಯಾಮಾಸ ಶಂಕರಂ ।
ಉಪಹಾರಾನ್ ಸಮುಪ್ಯಾಥ ಕಾಮಧೇನುಸಮುದ್ಭವಾನ್ ॥ ೧೨ ॥

---

೮. ಅಗ್ನಿಹೋತ್ರದಲ್ಲಿ ಹೇಳಿರುವ ರೀತಿಯಲ್ಲಿ ಪ್ರಾಕೃತ ರೀತಿಯಿಂದಲೂ ವೈಕೃತರೀತಿಯಿಂದಲೂ ದ್ರವ್ಯ, ಜ್ಞಾನ, ಕ್ರಿಯೇಶ್ವರನಾದ ಸ್ವಾಮಿಯನ್ನು ಆರಾಧಿಸಿದರು.

೯. ರಾಮಚಂದ್ರನು ಪ್ರತಿದಿನವೂ ಬೆಳಗ್ಗೆ ಎದ್ದು ಸೀತೆಯೊಡನೆ ಶಂಭುವನ್ನೂ ಬ್ರಹ್ಮನನ್ನೂ, ದೇವತೆಗಳನ್ನೂ ನಮಸ್ಕರಿಸುತ್ತಿದ್ದನು. ಋಷಿಗಳಿಗೂ ಕೂಡ ಬೇರೆ ಬೇರೆಯಾಗಿ ನಮಸ್ಕರಿಸುತ್ತಿದ್ದನು.

೧೦. ಕೌಸಲ್ಯೆಯೇ ಮುಂತಾದ ತಾಯಿಯರನ್ನೂ, ಕಾಮಧೇನುವನ್ನೂ, ತಾನು ಎದೆಯಮೇಲೆ ಕಟ್ಟಿಕೊಂಡಿರುವ ಚಿಂತಾಮಣಿಯನ್ನೂ ಕತ್ತಿನಲ್ಲಿ ಕಟ್ಟಿಕೊಂಡಿರುವ ಕೌಸ್ತುಭವನ್ನೂ ನಮಸ್ಕರಿಸುತ್ತಿದ್ದನು.

೧೧-೧೩. ಪುಷ್ಪಕವನ್ನೂ, ಯಜ್ಞಮಂಟಪದ ದೇವರನ್ನೂ ಯಜ್ಞಪುರುಷನನ್ನೂ ನಮಸ್ಕರಿಸುತ್ತಿದ್ದನು. ಅನಂತರ ರಾಮತೀರ್ಥದಲ್ಲಿ ವಿಧಿವತ್ತಾಗಿ ಸ್ನಾನಮಾಡುತ್ತಿದ್ದನು. ಅಲ್ಲಿ ಆಹ್ನಿಕಗಳೆಲ್ಲವನ್ನೂ ಮಾಡಿಕೊಂಡು ಶಿವಪೂಜೆಯನ್ನು ಮಾಡುತ್ತಿದ್ದನು. ಅನಂತರ ಕಾಮಧೇನುವಿನಿಂದ ಉತ್ಪನ್ನವಾದ

ಸಮಾಸಿರ್ತಾ ರತ್ನಪಾತ್ರೈಸ್ಸೀತಯಾ ರಘುನಂದನಃ ।
ತತಸ್ಸಂಪೂಜ್ಯ ತಾಂ ಧೇನುಂ ವಿಧಿಂ ಪೂಜ್ಯ ಸವಿಸ್ತರಂ ॥ ೧೩ ॥

ಋತ್ವಿಗ್ಜನಂ ತು ಸಂಪೂಜ್ಯ ತಸ್ಥೌ ಸ ಗುರುಸನ್ನಿಧೌ ।
ಪ್ರಭಾತೇ ಋತ್ವಿಜಸ್ಸರ್ವೇ ತಥಾ ದೇವಾ ಮುನೀಶ್ವರಾಃ ॥ ೧೪ ॥

ಸ್ನಾತ್ವಾ ನಿತ್ಯವಿಧಿಂ ಕೃತ್ವಾ ತಸ್ಥುರ್ಯಜ್ಞಸ್ಯ ಮಂಟಪೇ ।
ರಾಮಾಜ್ಞಯಾಥ ಸೌಮಿತ್ರಿಸ್ತೇಷಾಂ ಪೂಜಾಂ ಚಕಾರ ಸಃ ॥ ೧೫ ॥

ದಿವ್ಯೈರ್ರ್ನಾನೋಪಹಾರಾದ್ಯೈಃ ಕಾಮಧೇನುಸಮುದ್ಭವೈಃ ।
ತತಶ್ಚಕಾರ ಸೌಮಿತ್ರಿರ್ನೃಪಾದೀನಾಂ ಪ್ರಪೂಜನಂ ॥ ೧೬ ॥

ವಸ್ತ್ರೈರಾಭರಣೈರ್ದಿವ್ಯೈಃ ಪಕ್ವಾನ್ನೈರ್ವಿವಿಧೈರಪಿ ।
ತಥಾ ಸೀತಾಜ್ಞಯಾ ಸ್ತ್ರೀಣಾಮೂರ್ಮಿಲಾ ಲಕ್ಷ್ಮಣಪ್ರಿಯಾ ॥ ೧೭ ॥

ಪದಾರ್ಥಗಳನ್ನು ರತ್ನದ ಪಾತ್ರೆಯಲ್ಲಿಟ್ಟುಕೊಂಡು ಶಂಕರನಿಗೆ ನಿವೇದನ ಮಾಡುತ್ತಿದ್ದನು. ಅನಂತರ ಆ ಕಾಮಧೇನುವನ್ನೂ ವಿಧಿಯನ್ನೂ ಪೂಜಿಸುತ್ತಿದ್ದನು.

೧೪–೧೫. ಅನಂತರ ಋತ್ವಿಜರನ್ನು ಪೂಜಿಸಿ ಹೋಗಿ ಗುರುವಿನ ಬಳಿಯಲ್ಲಿ ಕುಳಿತುಕೊಳ್ಳುತ್ತಿದ್ದನು. ಬೆಳಗಾಗುತ್ತಲೂ ಎಲ್ಲಾ ಋತ್ವಿಕ್ಕಗಳೂ, ಮುನೀಶ್ವರರೂ, ಸ್ನಾನಮಾಡಿ ನಿತ್ಯವಿಧಿಯನ್ನು ಮಾಡಿಕೊಂಡು ಯಜ್ಞಮಂಟಪದಲ್ಲಿ ಕುಳಿತುಕೊಳ್ಳುತ್ತಿದ್ದರು. ಅನಂತರ ರಾಮನ ಆಜ್ಞೆಯ ಪ್ರಕಾರ ಸೌಮಿತ್ರಿಯು ಅವರಿಗೆಲ್ಲರಿಗೂ ಪೂಜೆಯನ್ನು ಮಾಡುತ್ತಿದ್ದನು.

೧೬–೧೮. ಲಕ್ಷ್ಮಣನು ಕಾಮಧೇನುವು ಕೊಟ್ಟ ಪದಾರ್ಥಗಳಿಂದ ರಾಜರುಗಳನ್ನೂ ಪೂಜಿಸುತ್ತಿದ್ದನು. ಅಂತೆಯೇ ಸೀತೆಯ ಅಪ್ಪಣೆಯಂತೆ ಮಾಂಡವೀ, ಶ್ರುತಕೀರ್ತಿ, ಊರ್ಮಿಳೆಯರು ಹೆಂಗಸರಿಗೆ ವಸ್ತ್ರಗಳನ್ನೂ, ಆಭರಣಗಳನ್ನೂ ಕಾಮಧೇನುವಿನಿಂದ ಬಂದ ಇನ್ನೂ ಅನೇಕ ವಿಧವಾದ

ಮಾಂಡವೀ ಶ್ರುತಕೀರ್ತಿಶ್ಚ ಸರ್ವಾಶ್ಚಕ್ರುಃ ಪ್ರಪೂಜನಂ ।
ಅಥ ತೇ ಋತ್ವಿಜಶ್ಚಕ್ರುಸ್ಸ್ವಾಹಾಕಾರೈರ್ಯಥಾವಿಧಿ ॥ ೧೮ ॥

ಹೋಮಂ ನಾನಾವಿಧೈರ್ದಿವ್ಯೈಸ್ಸುಗಂಧೈರ್ಯಜ್ಞ ಮಂಟಪೇ ।
ಪುರೋಡಾಶಾನ್ವರಾನ್ದಿವ್ಯಾನಶ್ನ್ಯ ರಾಮೋಪಿ ಸೀತಯಾ ॥ ೧೯ ॥

ವಾಜಿಮೇಧೇ ರಾಘವಸ್ಯ ಸಾಕ್ಷಾದ್ದೇವಾಸ್ಸ್ವಯಂ ಮುದಾ ।
ಹವೀಂಷಿ ಭಕ್ಷಯಾಮಾಸುಸ್ತ್ಯಕ್ತಮಾತ್ರಾಣಿ ಪಾವಕೇ ॥ ೨೦ ॥

ಅಸ್ತು ಶ್ರೌಷಡಿತಿ ಪ್ರೋಚುರ್ವೇದಘೋಷಸ್ಸ ಮೇಘವತ್ ।
ಶ್ರೂಯತೇ ಯಜ್ಞಶಾಲಾಯಾಂ ಸರ್ವತ್ರರ್ತ್ವಿಜಕೀರ್ತಿತಃ ॥ ೨೧ ॥

ಮಧ್ಯೇ ಕುಂಡಂ ಮಹಾರಮ್ಯಂ ವ್ಯಾಪ್ತಮೃತ್ವಿಗ್ಜನೈಶ್ಶುಭಂ ।
ತತೋ ಮುನೀಶ್ವರಾಸ್ಸರ್ವೇ ತತೋ ದೇವಾಸ್ಸಮಂತತಃ ॥ ೨೨ ॥

ಪದಾರ್ಥಗಳನ್ನೂ ಕೊಟ್ಟು ಅವರನ್ನು ಪೂಜಿಸುತ್ತಿದ್ದರು. ಅನಂತರ ಋತ್ವಿಕ್ಕುಗಳು ಕ್ರಮವಾಗಿ ಸ್ವಾಹಾಕಾರದಿಂದ ಹೋಮಾದಿಗಳನ್ನು ಮಾಡುತ್ತಿದ್ದರು.

೧೯. ಸುಗಂಧವುಳ್ಳ ನಾನಾಬಗೆಯ ದ್ರವ್ಯಗಳಿಂದಲೂ ಹೋಮ ಮಾಡುತ್ತಿದ್ದರು. ಉತ್ತಮವಾದ ಪುರೋದಾಶವನ್ನು ರಾಮನೂ, ಸೀತೆಯೂ ತಿನ್ನುತ್ತಿದ್ದರು.

೨೦. ರಾಮನ ಈ ಅಶ್ವಮೇಧಯಾಗದಲ್ಲಿ ದೇವತೆಗಳು ತಮ್ಮ ತಮ್ಮ ಭಾಗಗಳ ಹವಿಸ್ಸುಗಳನ್ನು ಪ್ರತ್ಯಕ್ಷವಾಗಿ ತಾವೇ ಬಂದು ಯಜ್ಞೇಶ್ವರನಲ್ಲಿ ಹಾಕಿದ ಕೂಡಲೇ ತೆಗೆದುಕೊಳ್ಳುತ್ತಿದ್ದರು.

೨೧. ಆ ಯಜ್ಞಮಂಟಪದಲ್ಲಿ ವೇದಘೋಷವು ಗುಡುಗುವಂತೆ ಕೇಳಿಸುತ್ತಿದ್ದಿತು. ಅಸ್ತು ಶ್ರೌಷಟ್ ಎಂದು ಋತ್ವಿಜರು ಹೇಳುತ್ತಿದ್ದ ಶಬ್ದವು ಎಲ್ಲಾ ಕಡೆಗೂ ಕೇಳುತ್ತಾ ಇದ್ದುವು.

೨೨-೨೩. ಯಜ್ಞಮಂಟಪದ ಮಧ್ಯದಲ್ಲಿ ಯಜ್ಞಕುಂಡವು ರಮ್ಯವಾಗಿದ್ದಿತು. ಅದರ ಸುತ್ತಲೂ ಋತ್ವಿಜರು ಇದ್ದರು. ಅನಂತರ ಮುನೀಶ್ವರರು

ತತಸ್ಸರ್ವಾಸ್ತ್ರೀಯಶ್ಶೈಲೂಷ್ಯಾಸ್ತತೋ ವಿದ್ಯಾಧರಾಃ ಸ್ಥಿತಾಃ |
ತತೋ ಯಕ್ಷಾಶ್ಚ ಗಂಧರ್ವಾಃ ಕಿನ್ನರಾಃ ಪ್ಲವಗೋತ್ತಮಾಃ || ೨೩ ||

ತತಸ್ತೇ ಕ್ಷತ್ರಿಯಾಸ್ಸರ್ವೇ ತತಸ್ತೇಷಾಂ ತು ಸೇವಕಾಃ |
ತತಃ ಸ್ಥಿತಾ ವಾರನಾರ್ಯಸ್ತತೋ ಮಾಗಧವಂದಿನಃ || ೨೪ ||

ದದೃಶುಸ್ಸಂಸ್ಥಿತಾ ಯಜ್ಞಮಂಟಪೇ ಯಜ್ಞಕೌತುಕಂ |
ಮಧ್ಯಾಹ್ನಾವಧಿ ಹುತ್ವಾ ತೇ ಋತ್ವಿಜಶ್ಚ ಸವಿಸ್ತರಂ || ೨೫ ||

ತತೋ ಮಾಧ್ಯಾಹ್ನಿಕಂ ಕರ್ತುಂ ಯಯುಸ್ತಾಂ ಸರಯೂನದೀಂ |
ಕೃತ್ವಾ ಮಾಧ್ಯಾಹ್ನಿಕಂ ಕರ್ಮ ಗತ್ವಾ ತು ಯಜ್ಞಮಂಟಪೇ || ೨೬ ||

ಇರುತ್ತಿದ್ದರು. ಅನಂತರ ದೇವತೆಗಳು ಇರುತ್ತಿದ್ದರು. ಅನಂತರ ಹೆಂಗಸರು ಇರುತ್ತಿದ್ದರು. ಅನಂತರ ವಿದ್ಯಾಧರರು ಇರುತ್ತಿದ್ದರು. ಅನಂತರ ಯಕ್ಷರೂ ಅನಂತರ ಗಂಧರ್ವರೂ ಅನಂತರ ಕಿನ್ನರರೂ ಅನಂತರ ಪ್ಲವಗರೂ ಇರುತ್ತಿದ್ದರು.

೨೪. ಅವರಾದಮೇಲೆ ಕ್ಷತ್ರಿಯರು ಇರುತ್ತಿದ್ದರು. ಅನಂತರ ಅವರ ಸೇವಕರು ಇರುತ್ತಿದ್ದರು. ಅನಂತರ ಸೂಳೆಯರಿರುತ್ತಿದ್ದರು. ಅನಂತರ ಮಾಗಧರೂ ವಂದಿಗಳೂ ಇರುತ್ತಿದ್ದರು.

೨೫. ಈ ರೀತಿಯಾಗಿ ಅವರೆಲ್ಲರೂ ಯಜ್ಞಮಂಟಪದಲ್ಲಿ ಕುಳಿತುಕೊಂಡು ಯಜ್ಞದಲ್ಲಿ ನಡೆಯುತ್ತಿರುವ ಆಶ್ಚರ್ಯಗಳನ್ನು ನೋಡುತ್ತಿದ್ದರು. ಆ ಋತ್ವಿಜರೆಲ್ಲರೂ ಮಧ್ಯಾಹ್ನದವರೆಗೂ ವಿಸ್ತಾರವಾಗಿ ಹೋಮವನ್ನು ಮಾಡುತ್ತಿದ್ದರು.

೨೬. ಅನಂತರ ಅವರೆಲ್ಲರೂ ಮಾಧ್ಯಾಹ್ನಿಕವನ್ನು ಮಾಡಲು ಸರಯೂ ನದಿಗೆ ಹೋಗುತ್ತಿದ್ದರು. ಅಲ್ಲಿ ಮಾಧ್ಯಾಹ್ನಿಕವನ್ನು ಮುಗಿಸಿಕೊಂಡು ಮತ್ತೆ ಯಜ್ಞಮಂಟಪಕ್ಕೆ ಬರುತ್ತಿದ್ದರು.

ಹೈಮಾಸನೇ ತು ಸರ್ವತ್ರ ನೇಮಿರೇಖೋಪಮೇ ಸ್ಥಿತಾಃ ।
ದೇವಾಶ್ಚಾಪೀಶ್ವರಾದ್ಯಾಸ್ತೇ ತಸ್ಥುರ್ದಿವ್ಯಾಸನೋಪರಿ ॥ ೨೭ ॥

ಲಕ್ಷ್ಮಣಸ್ತಾನ್ ಪ್ರಪೂಜ್ಯಾಥ ಭರತೇನ ಸಶತ್ರುಹಾ ।
ಸಂಸ್ಥಾಪ್ಯ ಹೇಮಪಾತ್ರಾಣಿ ಸರ್ವೇಷಾಂ ಪುರತಸ್ತದಾ ॥ ೨೮ ॥

ಜಾನಕೀಂ ತ್ವರಯಾಮಾಸುಃ ಪರಿವೇಷಣಕರ್ಮಣಿ ।
ಅಥ ಸೀತೋರ್ಮಿಲಾ ರಮ್ಯಾ ತಥಾ ಸಾ ಮಾಂಡವೀ ಶುಭಾ ॥ ೨೯ ॥

ಶ್ರುತಕೀರ್ತಿರ್ಮಂತ್ರಿಪತ್ನ್ಯಸ್ಸುಹೃತ್ಪತ್ನ್ಯಸ್ಸಹಸ್ರಶಃ ।
ಪರಿವೇಷಣಕರ್ಮಾಣಿ ಚಕ್ರುಸ್ತಾ ಯಜ್ಞಮಂಟಪೇ ॥ ೩೦ ॥

ನಾನಾವಿಧೈರ್ವರಾನ್ನೈಶ್ಚ ಕಾಮಧೇನುಸಮುದ್ಭವೈಃ ।
ಮುನೀಶ್ವರಾದಿಕಾಸ್ಸರ್ವೇ ತೋಷಮಾಪುಸ್ತದಾಧ್ವರೇ ॥ ೩೧ ॥

---

೨೭. ಬಂದು ಉದ್ದಕ್ಕೂ ಸಾಲಾಗಿ ಚಿನ್ನದ ಮಣೆಗಳಮೇಲೆ ಕುಳಿತುಕೊಳ್ಳುತ್ತಿದ್ದರು. ಶಂಭುವೇ ಮುಂತಾದ ದೇವತೆಗಳೂ ಕೂಡ ಉತ್ತಮವಾದ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು.

೨೮. ಲಕ್ಷ್ಮಣನೂ, ಭರತನೂ, ಶತ್ರುಘ್ನನೂ ಅವರನ್ನು ಪೂಜಿಸಿ ಅವರ ಮುಂದೆ ಚಿನ್ನದ ಪಾತ್ರೆಗಳನ್ನು ಇಡುತ್ತಿದ್ದರು.

೨೯-೩೦. ಜಾನಕಿಯನ್ನು ಬಡಿಸುವುದಕ್ಕೋಸ್ಕರ ಅವಸರಪಡಿಸುತ್ತಿದ್ದರು. ಅನಂತರ ಸೀತೆ, ಮಾಂಡವಿ, ಶ್ರುತಕೀರ್ತಿ, ಊರ್ಮಿಲೆಯರು ಇನ್ನೂ ಸ್ನೇಹಿತರ ಹೆಂಡತಿಯರೂ ಮಂತ್ರಿಯರ ಹೆಂಡತಿಯರೂ ಸಾವಿರಾರು ಗಟ್ಟಲೆಯಲ್ಲಿ ಸೇರಿಕೊಂಡು ಆ ಯಜ್ಞಮಂಟಪದಲ್ಲೆಲ್ಲಾ ಬಡಿಸುತ್ತಿದ್ದರು.

೩೧. ಕಾಮಧೇನುವು ಕೊಟ್ಟ ಬಗೆ ಬಗೆಯಾದ ಉತ್ತಮವಾದ ಅನ್ನಗಳನ್ನೂ, ಪಾನಾದಿಗಳನ್ನೂ ಬಡಿಸುತ್ತಿದ್ದರು. ಆಗ ಆ ಮುನಿಗಳೇ ಮುಂತಾದವರೆಲ್ಲ ಅವನ್ನು ಭೋಜನಮಾಡಿ ತೃಪ್ತಿಪಡುತ್ತಿದ್ದರು.

ಸೀತಾದೀನಾಂ ಹಿ ನಾರೀಣಾಂ ತದಾ ಯಜ್ಞಸ್ಯ ಮಂಟಪೇ |
ನೂಪುರಾಣಂ ಕಿಂಕಿಣೀನಾಂ ಶಶ್ರುವೇ ಸರ್ವತೋ ಧ್ವನಿಃ || ೩೨ ||

ಯಥೇಚ್ಛಂ ಭುಂಜತಾಂ ಸರ್ವೇ ಯಾಚ್ಯತಾಂ ಯದ್ಧೃದಿ ಸ್ಥಿತಂ |
ಮಾ ಶಂಕಾ ಭೋಜನೇ ಕಾರ್ಯಾ ತ್ಯಕ್ತವ್ಯಂ ಯನ್ನ ರೋಚತೇ || ೩೩ ||

ಅಯಾಚಿತಾನಿ ದೇಯಾನಿ ಪಕ್ವಾನ್ನಾನಿ ಯಥಾರುಚಿ |
ಅಖಂಡಿತಾಜ್ಯಧಾರಾತ್ರ ಕಾರ್ಯಾ ರಾಘವಶಾಸನಾತ್ || ೩೪ ||

ಗೃಹ್ಯತಾಂ ಕಿಂ ಚಿದೂಚುಸ್ತೇ ನೇತಿ ನೇತಿ ದ್ವಿಜಾಃ ಪುನಃ |
ಇತಿ ಭೋಜನಕಾಲೇ ವೈ ಶುಶ್ರುವೇ ಸರ್ವತೋ ಧ್ವನಿಃ || ೩೫ ||

---

೩೨. ಆಗ ಬಡಿಸುತ್ತಿದ್ದ ಸೀತೆಯೇ ಮುಂತಾದವರ ಕೈಬಳೆಗಳ ಧ್ವನಿಯೂ ಕಾಲುಬಳೆ, ಮಿಂಚು ಮುಂತಾದುವುಗಳ ಧ್ವನಿಯೂ, ಆ ಯಜ್ಞಮಂಟಪದಲ್ಲಿ ಕೇಳಿ ಬರುತ್ತಿದ್ದವು.

೩೩. ಎಲ್ಲರೂ ಬೇಕಾದಂತೆ ಭೋಜನಮಾಡಿರಿ. ಮನಸ್ಸಿಗೆ ಬೇಕಾದುದನ್ನು ಕೇಳಿರಿ, ಊಟದಲ್ಲಿ ಸಂತೋಷಪಡಬೇಡರಿ. ಊಟದಲ್ಲಿ ಸೇರದೆ ಹೋದುದನ್ನು ಬಿಟ್ಟುಬಿಡಿರಿ.

೩೪. ಉತ್ತಮವಾದ ಪಕ್ವಾನ್ನಗಳನ್ನು ಬೇಕೆಂದು ಕೇಳದಿದ್ದರೂ ಅವರವರ ಹೊಟ್ಟೆಗೆ ತಕ್ಕಂತೆ ಬೇಕಾದಂತೆ ಹಾಕಿರಿ. ತುಪ್ಪವನ್ನು ಧಾರೆ ಧಾರೆಯಾಗಿ ಬೇಕಾದಂತೆ ಬಡಿಸಿರಿ. ಎಂಬುದಾಗಿ ರಾಮನು ಅಪ್ಪಣೆಮಾಡಿದ್ದನು.

೩೫. ತೆಗೆದುಕೊಳ್ಳಿರಿ ಸ್ವಲ್ಪಹಾಕುತ್ತೇನೆ. ಎಂದು ಬಡಿಸುತ್ತಿದ್ದವರ ಶಬ್ದವೂ ಬೇಡ ಬೇಡವೆಂದು ಬ್ರಾಹ್ಮಣರು ಊಟಮಾಡುವಾಗ ಹೇಳುತ್ತಿದ್ದ ಶಬ್ದಗಳೂ ಆ ಯಜ್ಞಮಂಟಪದಲ್ಲೆಲ್ಲಾ ಕೇಳಿಬರುತ್ತಿದ್ದಿತು.

ಕಿಂಚಿದಪೇಕ್ಷತಂ ಸ್ವಾಮಿನ್ನಿತಿ ರಾಮೇಣ ಪ್ರಾರ್ಥಿತಾಃ |
ಚಕ್ರುಸ್ತೇ ಭೋಜನಂ ಸರ್ವೇ ವೀಜಿತಾ ವ್ಯಜನಾದಿಭಿಃ || ೩೬ ||

ಜಲೈರುಷ್ಣೋದಕೈಶ್ಚಕ್ರುಃ ಕರಶುದ್ಧಿಂ ಮುನೀಶ್ವರಾಃ |
ತತೋ ಗೃಹೀತತಾಂಬೂಲಾ ಮುನಯಸ್ತೇ ತು ನಿರ್ಜರಾಃ || ೩೭ ||

ಗೃಹೀತ್ವಾ ಹೇಮಮುದ್ರಾಂ ಹಿ ರಾಘವೇಣ ಪೃಥಕ್ ಪೃಥಕ್ |
ಸಮರ್ಪಿತಾಂ ದಕ್ಷಿಣಾರ್ಥಂ ಜಗ್ಮುರ್ವಾಸಸ್ಥಲಾನಿ ಹಿ || ೩೮ ||

ತತಃ ಪೂರ್ವೋಪಚಾರಾದ್ಯೈಃ ಕಥಿತೈರೇವ ಪಾರ್ಥಿವಾಃ |
ಚಕ್ರುಸ್ತೇ ಭೋಜನಂ ಸರ್ವೇ ಚಕ್ರುರ್ವೈಶ್ಯಾಸ್ತತಃ ಪರಂ || ೩೯ ||

---

೩೬. ಅನಂತರ ರಾಮನೇ ಬಂದು ಏನಾದರೂ ಸ್ವಲ್ಪ ಬೇಕೆ ? ಯಾವುದು ಬೇಕು ? ಹೇಳಿ. ಸ್ವಾಮಿ ! ಎಂಬುದಾಗಿ ಕೇಳುತ್ತಿದ್ದನು. ಮತ್ತು ಬೀಸಣಿಗೆಯನ್ನು ತೆಗೆದುಕೊಂಡು ಎಲ್ಲರಿಗೂ ಬೀಸುತ್ತಿದ್ದನು. ಹೀಗಿರುತ್ತಿರಲು ಅವರು ಭೋಜನವನ್ನು ಮಾಡಿ ಮುಗಿಸುವರು

೩೭. ಊಟಮಾಡಿದಮೇಲೆ ಆ ಮುನೀಶ್ವರರು ಬಿಸಿ ನೀರಿನಿಂದ ಕೈಗಳನ್ನು ತೊಳೆದುಕೊಳ್ಳುತ್ತಿದ್ದರು. ಅನಂತರ ಮುನಿಗಳೂ, ದೇವತೆಗಳೂ ತಾಂಬೂಲವನ್ನು ತೆಗೆದುಕೊಳ್ಳುತ್ತಿದ್ದರು.

೩೮. ಆಮೇಲೆ ರಾಮನು ಬೇರೆ ಬೇರೆಯಾಗಿ ರಾಮಮುದ್ರೆಯುಳ್ಳ ದಕ್ಷಿಣೆಯನ್ನು ಕೊಡುತ್ತಿದ್ದನು. ಅದನ್ನು ತೆಗೆದುಕೊಂಡು ಅವರು ತಮ್ಮ ತಮ್ಮ ವಾಸದ ಮನೆಗಳಿಗೆ ಹೋಗುತ್ತಿದ್ದರು.

೩೯. ಅನಂತರ ಕ್ಷತ್ರಿಯರು ಭೋಜನಕ್ಕೆ ಕುಳಿತುಕೊಳ್ಳುತ್ತಿದ್ದರು. ಅವರಿಗೂ ಹಿಂದೆ ಹೇಳಿದಂತೆಯೇ ಉಪಚಾರಗಳು ನಡೆಯುತ್ತಿದ್ದುವು. ಅವರು ಭೋಜನಮಾಡಿದ ಮೇಲೆ ವೈಶ್ಯರು ಭೋಜನಮಾಡುತ್ತಿದ್ದರು. ಅವರಿಗೂ ಹಿಂದಿನವರಿಗೆ ಮಾಡಿದಂತೆಯೇ ಉಪಚಾರಗಳು ನಡೆಯುತ್ತಿದ್ದುವು.

ಸ್ತ್ರೀಣಾಂ ಭೋಜನಶಾಲಾಸು ಪೂರ್ವಂ ಭುಕ್ತ್ವಾಮರ ಸ್ತ್ರಿಯಃ ।
ಸಹಿತಾ ಮುನಿಪತ್ನೀಭಿಸ್ತತಸ್ತಾಃ ಕ್ಷತ್ರಿಯಸ್ತ್ರಿಯಃ ॥ ೪೦ ॥

ಚಕ್ರುರ್ವೈ ಭೋಜನಂ ಸರ್ವಾಸ್ಸೀತಯಾ ಪ್ರಾರ್ಥಿತಾ ಮುಹುಃ ।
ತತೋ ವೈಶ್ಯಸ್ತ್ರಿಯಶ್ಚಕ್ರುಃ ಪೌರನಾರ್ಯಸ್ತತಃ ಪರಂ ॥ ೪೧ ॥

ತತಶ್ಶೂದ್ರಸ್ತ್ರಿಯಶ್ಚಾಪಿ ಮುದಾ ಚಕ್ರುಶ್ಚ ಭೋಜನಂ ।
ಶಾಲಾಸು ಪುರುಷಾಣಾಂ ಚ ತತೋ ವಾನರರಾಕ್ಷಸಾಃ ॥ ೪೨ ॥

ಭುಕ್ತ್ವಾಃ ಪೌರಾ ಜಾನಪದಾಶ್ಚಕ್ರುರ್ಭೋಜನಮುತ್ತಮಂ ।
ತತಶ್ಶೂದ್ರಾದಯಸ್ಸರ್ವೇ ತತಃ ಪಾರ್ಥಿವಸೇವಕಾಃ ॥ ೪೩ ॥

ನ ಕಶ್ಚಿತ್ ಕ್ಷುಧಿತಸ್ತತ್ರ ನಾಸೀತ್ಕಸ್ಯ ನಿಷೇಧನಂ ।
ತತೋ ರಾಮಸ್ಸುಹೃನ್ಮಿತ್ರೈರ್ಬಂಧುಭಿಸ್ಸಚಿವಾದಿಭಿಃ ॥ ೪೪ ॥

೪೦–೪೨. ಹೆಂಗಸರ ಊಟದ ಮನೆಯಲ್ಲಿ ಮೊದಲು ದೇವತೆಗಳ ಹೆಂಗಸರೂ, ಮುನಿಗಳ ಹೆಂಗಸರೂ, ಊಟಮಾಡುತ್ತಿದ್ದರು. ಅನಂತರ ಕ್ಷತ್ರಿಯರ ಹೆಂಗಸರು ಊಟಮಾಡುತ್ತಿದ್ದರು. ಅವರೆಲ್ಲರನ್ನೂ ಸೀತೆಯು ಆದರದಿಂದ ನೋಡಿ ಪ್ರಾರ್ಥಿಸಿ ಬಡಿಸುತ್ತಿದ್ದಳು. ಅನಂತರ ವೈಶ್ಯಸ್ತ್ರೀಯರೂ ಆಮೇಲೆ ಪಟ್ಟಣದ ಹೆಂಗಸರೂ, ಊಟಮಾಡುತ್ತಿದ್ದರು. ಅನಂತರ ಶೂದ್ರರೂ ಅವರ ಹೆಂಗಸರೂ, ಭೋಜನಮಾಡುತ್ತಿದ್ದರು. ಪುರುಷರ ಶಾಲೆಯಲ್ಲಿ ವಾನರರೂ ರಾಕ್ಷಸರೂ ಭೋಜನಮಾಡುತ್ತಿದ್ದರು.

೪೩. ಮತ್ತು ಕರಡಿಗಳೂ, ಪಟ್ಟಣಿಗರೂ, ದೇಶದ ಜನರೂ ಊಟಮಾಡುತ್ತಿದ್ದರು. ಅನಂತರ ಶೂದ್ರರೂ ಆಮೇಲೆ ರಾಜರ ಸೇವಕರೂ ಭೋಜನಮಾಡುತ್ತಿದ್ದರು.

೪೪–೪೫. ಅಲ್ಲಿ ಹಸಿದುಕೊಂಡು ಇರುತ್ತಿದ್ದವನೇ ಇಲ್ಲ. ಊಟಮಾಡಬೇಡವೆಂದು ಯಾರನ್ನೂ ನಿಷೇಧಿಸುತ್ತಲೇ ಇರಲಿಲ್ಲ. ಊಟಕ್ಕಿಲ್ಲವೆಂದೂ ಹೇಳುತ್ತಿರಲೇ ಇಲ್ಲ. ಅನಂತರ ಸ್ನೇಹಿತರು, ಬಂಧುಗಳು, ಮಿತ್ರರು,

ಚಕಾರ ಭೋಜನಂ ಸ್ವಸ್ಥಸ್ಸೀತಯಾ ಪ್ರಾರ್ಥಿತೋ ಮುಹುಃ ।
ಯಾವಂತೋ ಭೂಮಿಕಣಿಕಾ ಯಾವಂತಸ್ತೋಯ ಬಿಂದವಃ ॥ ೪೫ ॥

ಯಾವಂತ್ಯುಡೂನಿ ಗಗನೇ ತಾವಂತೋ ರಾಘವಾಧ್ವರೇ ।
ಪ್ರತ್ಯಹಂ ಭೋಜನಂ ಚಕ್ರುರ್ವಿಪ್ರಾದ್ಯಾಸ್ತತ್ ಸ್ತ್ರಿಯೋಽಪಿ ಚ ॥ ೪೬ ॥

ಶ್ವಶ್ರೂಭಿರ್ಮಂತ್ರಿಪತ್ನೀಭಿಸ್ತಥಾದೇವರಪತ್ನಿಭಿಃ ।
ಚಕಾರ ಭೋಜನಂ ಸೀತಾ ದಿವ್ಯಾನ್ನೈಃ ಸ್ವಸ್ಥಮಾನಸಾ ॥ ೪೭ ॥

ತತಶ್ಚತುರ್ಥಪ್ರಹರೇ ಸಭಾಂ ಕೃತ್ವಾ ತು ಮಂಟಪೇ ।
ಕಥಾಭಿಃ ಕೀರ್ತನೈರ್ಗೀತೈಶ್ಶಾಸ್ತ್ರವಾದೈಸ್ಸುಪುಣ್ಯದೈಃ ॥ ೪೮ ॥

ತಮ್ಮಂದಿರು, ಮಂತ್ರಿಗಳು ಇವರೊಡನೆ ರಾಮನು ಭೋಜನವನ್ನು ಮಾಡುತ್ತಿದ್ದನು. ಆಗ ಸೀತೆಯು ಬೇಕಾದುದನ್ನು ಕೇಳಿ ಕೇಳಿ ಬಡಿಸುತ್ತಿದ್ದಳು.

೪೬. ಭೂಮಿಯಲ್ಲಿ ಎಷ್ಟು ಧೂಳಿನ ಕಣಗಳುಂಟೋ ನೀರಿನಲ್ಲಿ ಎಷ್ಟು ಬಿಂದುಗಳುಂಟೋ ಆಕಾಶದಲ್ಲಿ ನಕ್ಷತ್ರಗಳು ಎಷ್ಟಿರುವುವೋ ಅಷ್ಟು ಪ್ರಾಣಿಗಳು ನಿತ್ಯವೂ ರಾಮನ ಯಜ್ಞದಲ್ಲಿ ಭೋಜನಮಾಡುತ್ತಿದ್ದವು.

೪೭. ಅತ್ತೆಯರು, ಮಂತ್ರಿಪತ್ನಿಯರು, ಓರಗಿತ್ತಿಯರು ಇವರೊಡನೆ ಕುಳಿತುಕೊಂಡು ಸೀತೆಯು ಸ್ವಸ್ಥಚಿತ್ತದಿಂದ ಅನಂತರ ಊಟಮಾಡುತ್ತಿದ್ದಳು.

೪೮. ಅನಂತರ ನಾಲ್ಕನೆಯ ಜಾವದಲ್ಲಿ ಸಭೆಯು ಮಂಟಪದಲ್ಲಿ ನಡೆಯುತ್ತಿದ್ದಿತು. ಅಲ್ಲಿ ಕಥೆಗಳೂ ಕೀರ್ತನೆಗಳೂ, ಗೀತಗಳೂ, ಶಾಸ್ತ್ರವಾದಗಳೂ ಪುಣ್ಯಕರವಾದ ಚರ್ಚೆಗಳೂ ನಡೆಯುತ್ತಲೇ ಇದ್ದುವು.

ವಾರಸ್ತ್ರೀಣಾಂ ನೃತ್ಯಗೀತೈರ್ನಿನ್ಯೇ ರಾಮೋ ದಿನಕ್ಷಯಂ |
ತತಸ್ಸಂಧ್ಯಾದಿಕಂ ಕೃತ್ವಾ ಪುನರ್ಹುತ್ವಾ ಯಥಾವಿಧಿ ॥ ೪೯ ॥

ಪೂರ್ವೋಕ್ತೈಸ್ತು ಕಥಾದ್ಯೈಶ್ಚ ನಿಶಾಯಾಃ ಪ್ರಹರದ್ವಯಂ |
ಸಮತಿಕ್ರಮ್ಯ ನಿದ್ರಾರ್ಥಂ ಸರ್ವಾನಾಜ್ಞಾಪಯತ್ತದಾ ॥ ೫೦ ॥

ಗತ್ವಾ ಸ್ವಸ್ವಸ್ಥಲಂ ಸರ್ವೇ ನಿದ್ರಾಂ ಚಕ್ರುರ್ಯಥಾಸುಖಂ |
ಪಟ್ಟಕೂಲಾಸನೇ ಭೂಮ್ಯಾಂ ಸೀತಯಾ ಸ ಜಿತೇಂದ್ರಿಯಃ ॥ ೫೧ ॥

ಚಕಾರ ನಿದ್ರಾಂ ಶ್ರೀರಾಮೋ ಹೃದಿ ಚಿಂತ್ಯೇಷ್ಟದೇವತಾಃ |
ಆಜ್ಞಾಭಂಗೋ ನರೇಂದ್ರಾಣಾಂ ವಿಪ್ರಾಣಾಂ ಮಾನಖಂಡನಂ ॥ ೫೨ ॥

---

೪೯. ಸೂಳೆಯರು ಕುಣಿಯುತ್ತಿದ್ದರು. ಹಾಡುತ್ತಿದ್ದರು. ಈ ರೀತಿಯಾಗಿ ಸಾಯಂಕಾಲದವರೆಗೂ ಹಗಲಿನ ಕಾಲವನ್ನು ಎಲ್ಲರೂ ಕಳೆಯುತ್ತಿದ್ದರು. ಸಾಯಂಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡಿ ಮತ್ತೆ ಹೋಮ ಮಾಡುತ್ತಿದ್ದನು.

೫೦. ಅನಂತರ ಹಿಂದೆ ಹೇಳಿದ ಸಂಗೀತದಿಂದಲೂ, ಶಾಸ್ತ್ರಾರ್ಥಗಳಿಂದಲೂ ರಾತ್ರಿಯಲ್ಲಿ ಎರಡು ಜಾವವನ್ನು ಮತ್ತೆ ಕಳೆಯುತ್ತಿದ್ದರು. ಅನಂತರ ಎಲ್ಲರನ್ನೂ ಮಲಗಿಕೊಳ್ಳಲು ಹೋಗುವಂತೆ ರಾಮನು ಆಜ್ಞೆಮಾಡುತ್ತಿದ್ದನು.

೫೧. ಎಲ್ಲರೂ ತಮ್ಮ ತಮ್ಮ ಜಾಗಗಳಿಗೆ ಹೋಗಿ ಸುಖವಾಗಿ ಮಲಗಿ ನಿದ್ರಿಸುತ್ತಿದ್ದರು. ರಾಮನು ನೆಲದಮೇಲೆ ಉತ್ತಮವಾದ ಜಮಖಾನೆಗಳನ್ನು ಹಾಸಿಕೊಂಡು ಜಿತೇಂದ್ರಿಯನಾಗಿ ಇಷ್ಟ ದೇವತೆಗಳನ್ನು ಚಿಂತಿಸುತ್ತ ಸೀತೆಯೊಡನೆ ನಿದ್ರಿಸುತ್ತಿದ್ದನು.

೫೨-೫೪. ರಾಜರಿಗೆ ಆಜ್ಞೆಯನ್ನು ಭಂಗಪಡಿಸುವುದೂ ವಿಪ್ರರಿಗೆ ಅಪಮಾನಪಡಿಸುವುದೂ, ಹೆಂಗಸರನ್ನು ಬೇರೆ ಬೇರೆ ಹಾಸಿಗೆಯಲ್ಲಿ

ಪೃಥಕ್ಶಯ್ಯಾ ಚ ನಾರೀಣಾಮುಶಸ್ತ್ರವಧ ಉಚ್ಯತೇ ।
ಅತಸ್ಸ ಸೀತಯಾಯುಕ್ತಶ್ಚಕಾರ ಶಯನಂ ಪ್ರಭುಃ ॥ ೫೩ ॥

ಏವಮಾಸೀತ್ರ್ಪತ್ಯಹಂ ವೈ ದಿನಚರ್ಯಾಧ್ವರೇ ಪ್ರಭೋಃ ॥ ೫೪ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಯಾಗಕಾಂಡೇ ಯಜ್ಞಾಂಗಕ್ರಮಿತ ದಿನಚರ್ಯಾವರ್ಣನಂ ನಾಮ ಷಷ್ಠಸ್ಸರ್ಗಸ್ಸಮಾಪ್ತಃ

ಮಲಗಿಸುವುದೂ, ಶಸ್ತ್ರದಿಂದ ಕೊಲ್ಲದೆ ಪ್ರಾಣವನ್ನು ತೆಗೆಯುವಿಕೆಯು. ಎಂದು ಶಾಸ್ತ್ರದಲ್ಲಿ ಹೇಳಿದೆ ಆದ್ದರಿಂದಲೇ ರಾಮನು ಸೀತೆಯೊಡನೆ ಮಲಗುತ್ತಿದ್ದನು. ಆ ಪ್ರಭುವಾದ ರಾಮನ ದಿನಚರ್ಯೆಯು ಯಾಗದಲ್ಲಿ ಈ ರೀತಿಯಾಗಿ ಇರುತ್ತಿದ್ದಿತು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಯಜ್ಞಾಂಗಕ್ರಮಿತ ದಿನಚರ್ಯಾವರ್ಣನವೆಂಬ ಆರನೆಯ ಸರ್ಗವು ಸಮಾಪ್ತವು.

॥ ಶ್ರೀಃ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
॥ ಆರನೆಯ ಸರ್ಗದ ಸಾರಾಂಶವು ॥

ಅಗಸ್ತ್ಯನು ಕುಳಿತುಕೊಂಡನಂತರ ಯಾಗದ ಕುದುರೆಯನ್ನು ಯೂಪ ಸ್ತಂಭಕ್ಕೆ ಕಟ್ಟಿ ವಧೆ ಮಾಡಿ ಅದರ ಅಂಗಗಳನ್ನು ತೆಗೆದು ವಿಧಿವತ್ತಾಗಿ ಹೋಮ ಮಾಡಿದರು.

ಶ್ರೀರಾಮಚಂದ್ರನು ಪ್ರತಿದಿನವೂ ಬೆಳಗ್ಗೆ ಎದ್ದು ಶಿವ, ಬ್ರಹ್ಮ ದೇವತೆ ಗಳನ್ನು ಬೇರೆಬೇರೆಯಾಗಿ ನಮಸ್ಕರಿಸಿ ಅನಂತರ ಕೌಸಲ್ಯೆಯೇ ಮುಂತಾದ ತಾಯಿಯರಿಗೆ ನಮಸ್ಕರಿಸಿ ಕಾಮಧೇನು, ಚಿಂತಾಮಣಿ, ಕೌಸ್ತುಭಗಳನ್ನು ನಮ ಸ್ಕರಿಸಿ ಅನಂತರ ಯಜ್ಞಮಂಟಪದ ಹೊರಗಿರುವ ಪುಷ್ಪಕವಿಮಾನವನ್ನು ನಮ ಸ್ಕರಿಸಿ ಅನಂತರ ಯಜ್ಞಪುರುಷನಿಗೆ ನಮಸ್ಕರಿಸಿ ಅನಂತರ ಸ್ನಾನಕ್ಕೆ ರಾಮ ತೀರ್ಥಕ್ಕೆ ಹೋಗುತ್ತಿದ್ದನು. ಅಲ್ಲಿ ಸ್ನಾನ ಮಾಡಿಕೊಂಡು ನಿತ್ಯವಿಧಿಗಳನ್ನು ನೆರವೇರಿಸಿ ಶಿವಪೂಜೆಯನ್ನು ಮಾಡುತ್ತಿದ್ದನು. ಅನಂತರ ಎಲ್ಲರೊಡನೆಯೂ ಉಪಹಾರವನ್ನು ತೆಗೆದುಕೊಳ್ಳುತ್ತಿದ್ದನು. ಅನಂತರ ಯಜ್ಞಮಂಟಪದಲ್ಲಿರುವ ಗುರುವಿನ ಬಳಿಗೆ ಬಂದು ಕುಳಿತುಕೊಳ್ಳುತ್ತಿದ್ದನು.

ಬೆಳಗಾಗುತ್ತಲೂ ಋತ್ವಿಜರೇ ಮುಂತಾಗಿ ಎಲ್ಲರೂ ಸ್ನಾನಮಾಡಿ ಬಂದು ಯಜ್ಞಮಂಟಪದಲ್ಲಿ ಕುಳಿತುಕೊಳ್ಳುತ್ತಿದ್ದರು. ಲಕ್ಷ್ಮಣನು ರಾಮನ ಅಪ್ಪಣೆ ಯಂತೆ ಅವರಿಗೆಲ್ಲರಿಗೂ ಉಪಚರಿಸಿ ಉಪಹಾರವನ್ನು ಮಾಡಿಸುತ್ತಿದ್ದನು. ಅನಂತರ ರಾಜರಿಗೆ ಗೌರವವು ನಡೆದು ಉಪಹಾರವು ನಡೆಯುತ್ತಿದ್ದಿತು. ಸೀತೆಯ ಅಪ್ಪಣೆಯಂತೆ ಊರ್ಮಿಳೆಯೇ ಮುಂತಾದವರು ಹೆಂಗಸರಿಗೆ ಗೌರವಿಸಿ ಉಪಹಾರ ವನ್ನು ಮಾಡಿಸುತ್ತಿದ್ದರು.

ಋತ್ವಿಕ್ಕುಗಳೆಲ್ಲರೂ ಅವರವರ ಕೆಲಸಗಳನ್ನು ಸುಖವಾಗಿ ನೆರವೇರಿಸುತ್ತಿದ್ದರು. ದೇವತೆಗಳೆಲ್ಲರೂ ಆ ಯಜ್ಞದಲ್ಲಿ ಪ್ರತ್ಯಕ್ಷವಾಗಿಯೇ ಬಂದು ತಮ್ಮ ತಮ್ಮ ಭಾಗಗಳನ್ನು ತೆಗೆದುಕೊಳ್ಳುತ್ತಿದ್ದರು. ಜಾತ್ಯನುಗುಣವಾಗಿಯೂ ಅಂತಸ್ತಿಗನುಗುಣವಾಗಿಯೂ ಭಾಗಗಳನ್ನು ಕಲ್ಪಿಸಿದ್ದರು. ಋತ್ವಿಕ್ಕುಗಳು ಮಧ್ಯಾಹ್ನದವರೆಗೂ ಹೋಮವನ್ನು ಮಾಡಿ ಅನಂತರ ಸರಯೂ ನದಿಗೆ ಹೋಗಿ ಮಾಧ್ಯಾಹ್ನಿಕವನ್ನು ಮಾಡಿಕೊಂಡು ಯಜ್ಞಮಂಟಪಕ್ಕೆ ಬಂದು ಸಾಲಾಗಿ ಕುಳಿತುಕೊಳ್ಳುತ್ತಿದ್ದರು. ಆಗ ಲಕ್ಷ್ಮಣಾದಿಗಳೂ ಸೀತೆಯೂ ಎಲ್ಲರಿಗೂ ಬಡಿಸುತ್ತಿದ್ದರು. ಎಲ್ಲರೂ ಬೇಕಾದಂತೆ ಊಟಮಾಡಿರಿ. ಬೇಕಾದುದನ್ನು ಕೇಳಿರಿ. ಸಂಕೋಚಪಟ್ಟುಕೊಳ್ಳಬೇಡಿರಿ. ಬೇಡವಾದುದನ್ನು ಬಿಟ್ಟುಬಿಡಿರಿ. ಎಂದೆನ್ನುತ್ತಿದ್ದರು. ಉತ್ತಮವಾದ ಪದಾರ್ಥಗಳನ್ನು ಕೇಳದಿದ್ದರೂ ಬಡಿಸಿರಿ. ತುಪ್ಪವನ್ನು ಬಹುವಾಗಿ ಬಡಿಸಿರಿ. ಎಂಬುದಾಗಿ ರಾಮನು ಅಪ್ಪಣೆಮಾಡಿರುವನು ಎಂಬುದಾಗಿ ಹೇಳಿ ಬಡಿಸುತ್ತಿದ್ದರು ಊಟಮಾಡುವವರು ಬೇಡಬೇಡವೆನ್ನುತ್ತಿದ್ದರು. ಇದೇ ರೀತಿಯಾದ ಮಾತು ಎಲ್ಲ ಕಡೆಯಲ್ಲಿಯೂ ಕೇಳಿಬರುತ್ತಿದ್ದಿತು.

ಅನಂತರ ರಾಮನೇ ಪಂಕ್ತಿಯಮೇಲೆ ಬಂದು ಕೊಂಚಬೇಕೆ? ಸ್ವಲ್ಪವನ್ನು ಬಡಿಸುತ್ತೇನೆ. ಎಂದು ಪ್ರಾರ್ಥಿಸುತ್ತಿದ್ದನು. ಮತ್ತು ಬೀಸಣಿಗೆಯನ್ನು ತೆಗೆದುಕೊಂಡು ಬೀಸುತ್ತಿದ್ದನು.

ಅನಂತರ ಬಿಸಿನೀರಿನಿಂದ ಕೈಕಾಲುಗಳನ್ನು ತೊಳೆದುಕೊಳ್ಳುತ್ತಿದ್ದರು. ಅನಂತರ ತಾಂಬೂಲವನ್ನು ತೆಗೆದುಕೊಳ್ಳುತ್ತಿದ್ದರು. ರಾಮನು ರಾಮಮುದ್ರೆಯುಳ್ಳ ಹಣವನ್ನು ದಕ್ಷಿಣೆಯನ್ನಾಗಿ ಕೊಡುತ್ತಿದ್ದನು. ಅನಂತರ ಎಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ಹೋಗುತ್ತಿದ್ದರು.

ಅನಂತರ ಕ್ಷತ್ರಿಯರೂ, ಅವರಿಗಾದಮೇಲೆ ವೈಶ್ಯರೂ ಅನಂತರ ಶೂದ್ರರೂ ಅನಂತರ ವಾನರರೂ ರಾಕ್ಷಸರೂ ಭೋಜನವನ್ನು ಮಾಡುತ್ತಿದ್ದರು. ಆ ಯಜ್ಞದಲ್ಲಿ ಹಸಿದುಕೊಂಡಿದ್ದವನೇ ಇರಲಿಲ್ಲ. ಯಾವನನ್ನೂ ಊಟಮಾಡಕೂಡದೆಂದು ನಿಷೇಧಮಾಡುತ್ತಿರಲಿಲ್ಲ.

ಅನಂತರ ರಾಮನು ತಮ್ಮಂದಿರೊಡನೆ ಊಟಮಾಡುತ್ತಿದ್ದನು. ಆಮೇಲೆ ಸೀತೆಯೂ ಅತ್ತೆಯರೊಡನೆ ಊಟಮಾಡುತ್ತಿದ್ದಳು. ಭೂಮಿಯ ಅಣುಗಳೆಷ್ಟಿವೆಯೋ ನೀರಿನ ಬಿಂದುಗಳು ಎಷ್ಟಿವೆಯೋ ಅಂತರಿಕ್ಷದಲ್ಲಿ ನಕ್ಷತ್ರಗಳು ಎಷ್ಟಿವೆಯೋ ಅಷ್ಟಷ್ಟು ಜನರು ಆ ರಾಮನ ಯಜ್ಞದಲ್ಲಿ ಊಟಮಾಡುತ್ತಿದ್ದರು.

ಅನಂತರ ನಾಲ್ಕನೆಯ ಜಾವದಲ್ಲಿ ಸಭೆಯನ್ನು ನಡೆಸುತ್ತಿದ್ದನು. ಆಗ ಕಥೆಗಳೂ, ಕೀರ್ತನೆಗಳೂ, ಶಾಸ್ತ್ರವಾದಗಳೂ, ನರ್ತನಗಳೂ ನಡೆಯುತ್ತಿದ್ದುವು. ಈ ರೀತಿಯಾಗಿ ಹಗಲಿನಹೊತ್ತನ್ನು ಕಳೆಯುತ್ತಿದ್ದರು.

ಅನಂತರ ರಾಮನೇ ಮುಂತಾದವರು ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಿ, ಹೋಮಾದಿಗಳನ್ನು ಮಾಡಿ ರಾತ್ರಿಯ ಮೊದಲಿನ ಒಂದು ಜಾವವನ್ನು ಸಂಗೀತ ಮುಂತಾದುವುಗಳಿಂದ ಕಳೆಯುತ್ತಿದ್ದನು. ಅನಂತರ ಎಲ್ಲರಿಗೂ ಮಲಗಲು ಹೋಗುವಂತೆ ಅಪ್ಪಣೆಕೊಡುತ್ತಿದ್ದನು.

ರಾಮನೂ ಸೀತೆಯೊಡನೆ ಮಲಗಿ ನಿದ್ರಿಸುತ್ತಿದ್ದನು. ಆದರೆ ಜಿತೇಂದ್ರಿಯನಾಗಿ ಮಲಗುತ್ತಿದ್ದನು.

" ಆಜ್ಞಾಭಂಗೋ ನರೇಂದ್ರಾಣಾಂ ವಿಪ್ರಾಣಾಂ ಮಾನಖಂಡನಂ ।
ಪೃಥಕ್ ಶಯ್ಯಾಚನಾರೀಣಾಮಶಸ್ತ್ರವಧ ಉಚ್ಯತೇ ॥ "

ರಾಜರಿಗೆ ತಮ್ಮ ಆಜ್ಞೆಗೆ ಭಂಗಬರುವಿಕೆಯೂ, ಬ್ರಾಹ್ಮಣರಿಗೆ ಅವಮಾನವಾಗುವಿಕೆಯೂ, ಹೆಂಗಸರನ್ನು ಗಂಡಂದಿರು ಬೇರೆ ಹಾಸಿಗೆಯಲ್ಲಿ ಮಲಗಿಸುವಿಕೆಯೂ, ಶಸ್ತ್ರದಿಂದ ಕೊಲ್ಲದಿರುವ ಪ್ರಾಣಹತ್ಯೆಯು. ಎಂದು ಶಾಸ್ತ್ರದಲ್ಲಿ ಹೇಳಿರುವುದರಿಂದ ರಾಮನು ಸೀತೆಯನ್ನು ಬೇರೆ ಮಲಗಿಸುತ್ತಿರಲಿಲ್ಲ.

ಆ ಯಾಗದಲ್ಲಿ ಸ್ವಾಮಿಯಾದ ಶ್ರೀರಾಮನ ದಿನಚರ್ಯಾಕ್ರಮವು ಹೀಗಿದ್ದಿತು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

॥ ಸಪ್ತಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಸುತ್ಯೇಽಹನ್ಯವನೀಪಾಲೋ ಯಾಜಕಾನ್ ಸದಸಸ್ಪತೀನ್ ।
ಅಪೂಜಯನ್ಮಹಾಭಾಗಾನ್ ಯಥಾವತ್ಸುಸಮಾಹಿತಃ ॥ ೧ ॥

ಅಥ ಚೈತ್ರೇ ಸಿತೇ ಪಕ್ಷೇ ರಾಜಾನಃ ಪ್ರತಿಪತ್ತಿಥೌ ।
ಧ್ವಜಾನಾರೋಪಯಾಮಾಸುರ್ವಿಧಿನಾಧ್ವರ ಮಂಟಪೇ ॥ ೨ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ರಾಜನಾದ ರಾಮನು ಸುತ್ಯಾಹಸ್ಸು ಎಂದರೆ ಸೋಮರಸವನ್ನು ಹಿಂಡಿದ ದಿನದಲ್ಲಿ ಋತ್ವಿಜರನ್ನೂ ಸದಸಸ್ಪತಿಗಳನ್ನೂ ಶಾಸ್ತ್ರೋಕ್ತವಾಗಿ ಪೂಜಿಸಿದನು.

೨. ಅನಂತರ ರಾಜರು ಚೈತ್ರಮಾಸದ ಶುಕ್ಲಪಕ್ಷದ ಪ್ರತಿಪತ್ತಿಥಿಯಲ್ಲಿ ಶಾಸ್ತ್ರರೀತಿಯಿಂದ ಧ್ವಜಗಳನ್ನು ಎತ್ತಿಕಟ್ಟಿದರು.

॥ ವಿಷ್ಣುದಾಸ ಉವಾಚ ॥

ಆರೋಪಿತಾ ಧ್ವಜಾಃ ಪ್ರೋಕ್ತಾ ಪಾರ್ಥಿವೈರ್ಯಜ್ಞಮಂಟಪೇ ।
ಗುರೋ ತೇಷಾಂ ವಿಧಾನಂ ಮಾಂ ಸಮ್ಯಗ್ವಕ್ತುಂ ತ್ವಮರ್ಹಸಿ ॥ ೩ ॥

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ಪ್ರಶ್ನಃ ಕೃತಶ್ಶಿಷ್ಯ ತ್ವಯಾ ಲೋಕೋಪಕಾರಕಃ ।
ಸಾವಧಾನಮನಾ ಭೂತ್ವಾ ಶೃಣುಷ್ವ ತ್ವಂ ಮಯೋಚ್ಯತೇ ॥ ೪ ॥

ಸಾಂವತ್ಸರಂ ವ್ರತಂ ಚೇದಂ ನೃಪೈರ್ದೃಷ್ಟ್ವಾ ಸಮಾಗತಂ ।
ಆರೋಪಿತಾ ಧ್ವಜಾಸ್ಸರ್ವೈರ್ಯಜ್ಞವಾಟೇ ತದಾ ಮುದಾ ॥ ೫ ॥

ನೋ ಚೇದ್ವಿಷ್ಣುಗೃಹೇಷ್ವೇವಾರೋಪಣೀಯಾ ಧ್ವಜಾ ನೃಭಿಃ ।
ಪ್ರತ್ಯಬ್ದಂ ಮಧುಶುಕ್ಲಾಯಾಂ ಪುಣ್ಯಾಯಾಂ ಪ್ರತಿಪತ್ತಿಥೌ ॥ ೬ ॥

---

೩. ವಿಷ್ಣುದಾಸನು ಹೇಳಿದನು—ಎಲೈ ಗುರುವೇ! ಮೊದಲೇ ಯಜ್ಞಮಂಟಪದಲ್ಲಿ ಧ್ವಜಗಳನ್ನು ಎತ್ತಿಕಟ್ಟಿದ್ದರೆಂದು ಹೇಳಿದೆ. ಈಗಲೂ ಕಟ್ಟಿದರೆಂದು ಹೇಳುತ್ತಿದ್ದೀಯೆ. ಇದರ ವಿಧಾನವನ್ನು ನಾನು ಕೇಳಬೇಕೆಂದಿದ್ದೇನೆ. ಹೇಳು.

೪. ಶ್ರೀರಾಮದಾಸನು ಹೇಳಿದನು—ಎಲೈ ಶಿಷ್ಯನೇ! ಲೋಕೋಪಕಾರವಾದ ಒಳ್ಳೆಯ ಪ್ರಶ್ನೆಯನ್ನು ಕೇಳಿದೆ. ಸಾವಧಾನವಾದ ಮನಸ್ಸಿನಿಂದ ನಾನು ಹೇಳುವುದನ್ನು ಕೇಳು.

೫. ಈ ವ್ರತವನ್ನು ಪ್ರತಿಸಂವತ್ಸರವೂ ಮಾಡಬೇಕು. ರಾಜರು ಆ ಕಾಲದಲ್ಲಿ ಬಂದ ಆ ವ್ರತವನ್ನು ನೋಡಿ ಆಗ ಯಜ್ಞಮಂಟಪದಲ್ಲಿ ಸಂತೋಷದಿಂದ ಆ ಧ್ವಜಾರೋಪಣ ವ್ರತವನ್ನು ಮಾಡಿದರು.

೬. ಯಾಗದಲ್ಲಿಲ್ಲದಿದ್ದರೆ ವಿಷ್ಣುವಿನ ದೇವಾಲಯಗಳಲ್ಲಿಯಾದರೂ ಧ್ವಜಾರೋಪಣವನ್ನು ರಾಜರಾಗಲಿ, ಇತರರಾಗಲಿ ಮಾಡಬೇಕು. ಪ್ರತಿವರ್ಷದಲ್ಲಿಯೂ ಚೈತ್ರಶುದ್ಧ ಪ್ರತಿಪತ್ತಿನ ದಿನದಲ್ಲಿ ಧ್ವಜಾರೋಪಣವನ್ನು ಮಾಡಬೇಕು.

ಅಥವಾರೋಪಿಣೀಯಾಸ್ತೇ ಶ್ರೀರಾಮನವಮೀದಿನೇ ।
ಮಧುಶುಕ್ಲದಶಮ್ಯಾಂ ವಾ ದಶಮ್ಯಾಮಾಶ್ವಿನೇ ಸಿತೇ ॥ ೭ ॥

ಅಥವೋರ್ಜಪ್ರತಿಪದಿ ಶುಕ್ಲಪಕ್ಷೇಽಪಿ ಭೋ ದ್ವಿಜ ।
ಏತೇ ಕಾಲಾ ಮಯಾ ಪ್ರೋಕ್ತಾ ವ್ರತಸ್ಯಾಸ್ಯ ತವಾಗ್ರತಃ ॥ ೮ ॥

ಅಧುನಾ ಸಂಪ್ರವಕ್ಷ್ಯಾಮಿ ಧ್ವಜಾರೋಪಣಸಂಜ್ಞಿತಂ ।
ವ್ರತಂ ಪಾಪಹರಂ ಪುಣ್ಯಂ ರಾಮಸಂತೋಷಕಾರಿಣಂ ॥ ೯

ಯಃ ಕುರ್ಯಾದ್ವಿಷ್ಣುಭವನೇ ಧ್ವಜಾರೋಪಣಮುತ್ತಮಂ ।
ಸಂಪೂಜ್ಯ ತೇ ವಿರಿಂಚಾದ್ಯೈಃ ಕಿಮನ್ಯೈರ್ಬಹುಭಾಷಿತೈಃ ॥ ೧೦ ॥

---

೭. ಆವಾಗ ಆಗದಿದ್ದರೆ ಶ್ರೀರಾಮನವಮಿಯ ದಿನ ಧ್ವಜಾರೋಪಣವನ್ನು ಮಾಡಬಹುದು. ಆದಾಗದಿದ್ದರೆ ಚೈತ್ರಶುದ್ಧ ದಶಮಿಯ ದಿನ ಧ್ವಜಾರೋಹಣವನ್ನು ಮಾಡಬಹುದು. ಆಗ ಆಗದಿದ್ದರೆ ಆಶ್ವಯುಜ ಶುದ್ಧ ದಶಮಿ ದಿನ ಎಂದರೆ ವಿಜಯದಶಮಿಯ ದಿನ ಧ್ವಜಾರೋಪಣವನ್ನು ಮಾಡಬಹುದು.

೮. ಅದಿಲ್ಲದಿದ್ದರೆ ಕಾರ್ತಿಕ ಶುದ್ಧ ಪ್ರತಿಪತ್ತಿನ ದಿನ ಮಾಡಬಹುದು. ಈ ಕಾಲಗಳು ಧ್ವಜಾರೋಪಣಕ್ಕೆ ಹೇಳಲ್ಪಟ್ಟವೆ. ಇವು ಮುಖ್ಯ ಕಾಲಗಳೆಂದು ತಿಳಿ.

೯. ಈಗ ಧ್ವಜಾರೋಪಣ ವಿಧಿಯನ್ನು ಹೇಳುತ್ತೇನೆ ಕೇಳು ಈ ವ್ರತವು ಪಾಪನಾಶಕವು. ಪುಣ್ಯಕರವು. ರಾಮನಿಗೆ ಸಂತೋಷಕರವು.

೧೦. ಈ ಧ್ವಜಾರೋಪಣವನ್ನು ವಿಷ್ಣುದೇವಾಲಯದಲ್ಲಿ ಮಾಡಬೇಕು. ಅಲ್ಲಿ ಈ ವ್ರತಮಾಡಿದವನನ್ನು ಬ್ರಹ್ಮನೇ ಮುಂತಾದವರು ಪೂಜಿಸುತ್ತಾರೆ ಎಂದ ಮೇಲೆ ಬಹುಮಾತಿನಿಂದೇನು ?

ಹೇಮಭಾರಸಹಸ್ರಂ ತು ಯೋ ದದ್ಯಾಚ್ಚ ಕುಟುಂಬಿನೇ |
ತತ್ಫಲಂ ಸಮವಾಪ್ನೋತಿ ಧ್ವಜಾರೋಪಣಕರ್ಮಣಃ ॥ ೧೧ ॥

ಧ್ವಜಾರೋಪಣತುಲ್ಯಂ ಸ್ಯಾನ್ನ ಗಂಗಾಸ್ನಾನಮುತ್ತಮಂ |
ಅಥವಾ ತುಲಸೀಸೇವಾ ಶಿವಲಿಂಗಪ್ರಪೂಜನಂ ॥ ೧೨ ॥

ಅಹೋ ಪೂರ್ವಮಹೋಪೂರ್ವಮಹೋಪೂರ್ವಂ ಮಹತ್ತರಂ |
ಸರ್ವಪಾಪಹರಂ ಕರ್ಮ ಧ್ವಜಾರೋಪಣಸಂಜ್ಞಿತಂ ॥ ೧೩ ॥

ಯಾನಿ ಸರ್ವಾಣಿ ವಕ್ಷ್ಯಾಮಿ ಶ್ರುಣು ತ್ವಂ ಗದತೋ ಮಮ ॥ ೧೪ ॥

ಅಥ ಚೈತ್ರೇ ಸೀತೇ ಪಕ್ಷೇ ವ್ರತಂ ಹಿ ಪ್ರತಿಪತ್ತಿಥೌ ।
ಮಧುಶುಕ್ಲದಶಮ್ಯಾಂ ವಾ ನವಮ್ಯಾಂ ರಾಘವಸ್ಯ ವಾ ॥ ೧೫ ॥

---

೧೧. ಕುಟುಂಬಿಯಾದ ಬ್ರಾಹ್ಮಣನಿಗೆ ಸಾವಿರಮಣ ಚಿನ್ನವನ್ನು ಕೊಟ್ಟರೆ ಯಾವ ಫಲವನ್ನು ಹೊಂದುತ್ತಾನೆಯೋ ಆ ಫಲವನ್ನು ಧ್ವಜಾರೋಹಣ ವ್ರತವನ್ನು ಮಾಡುವುದರಿಂದ ಹೊಂದುತ್ತಾನೆ.

೧೨. ಉತ್ತಮವಾದ ಗಂಗಾಸ್ನಾನವೂ ಕೂಡ ಈ ಧ್ವಜಾರೋಹಣ ವಿಧಿಗೆ ಸಮವಾಗಲಾರದು. ತುಲಸಿಯ ಸೇವೆಯಾಗಲಿ, ಶಿವಲಿಂಗಪೂಜೆಯಾಗಲಿ, ಇದರ ಸಮವಾಗಲಾರದು.

೧೩–೧೪ ಈ ಧ್ವಜಾರೋಪಣವ್ರತವು ನಾನು ತಾನೆಂಬ ವ್ರತಗಳಲ್ಲಿ ಮುಖ್ಯವಾದುದು. ಮೊದಲನೆಯದೂ ಅದುದು. ಸರ್ವಪಾಪಗಳನ್ನೂ ನಾಶ ಮಾಡುತ್ತದೆ. ಅವುಗಳ ಮುಖ್ಯಕಾಲಗಳನ್ನೂ ಅದನ್ನು ಆರೋಪಣೆಮಾಡುವ ಬಗೆಯನ್ನೂ ಹೇಳುತ್ತೇನೆ. ಕೇಳು.

೧೫–೧೬. ಈ ಚೈತ್ರಶುಕ್ಲ ಪ್ರತಿಪತ್ತಿನ ದಿನ ಈ ವ್ರತವನ್ನು ಮಾಡಬೇಕು. ಚೈತ್ರಮಾಸದ ನವಮಿ ದಶಮಿಗಳಲ್ಲಿಯೂ ಈ ವ್ರತವನ್ನು ಮಾಡಬಹುದು,

ಕಾರ್ಯಂ ವಾಶ್ವಿನಮಾಸಸ್ಯ ದಶಮ್ಯಾಂ ಶುಕ್ಲಪಕ್ಷಕೇ ।
ಊರ್ಜಶುಕ್ಲಪ್ರತಿಪದಿ ದಶಮ್ಯಾಂ ವಾ ವಿಧೀಯತಾಂ ॥ ೧೬ ॥

ಅವಶ್ಯಂ ಚೈತ್ರಮಾಸೇ ಹಿ ಕಾರ್ಯಂ ಚೈತ್ರದ್ವ್ರತೋತ್ತಮಂ ।
ಅತಿಕ್ರಾಂತೇ ಚೈತ್ರಮಾಸೇ ಕಾರ್ಯಂ ಚೇತರಪರ್ವಸು ॥ ೧೭ ॥

ಚೈತ್ರಶುಕ್ಲಪ್ರತಿಪದಿ ಪ್ರಭಾತೇ ಪ್ರಯತೋ ನರಃ ।
ಸ್ನಾನಂ ಕುರ್ಯಾತ್ಪ್ರಯತ್ನೇನ ದಂತಧಾವನಪೂರ್ವಕಂ ॥ ೧೮ ॥

ತತಃ ಕೃತ್ವಾ ನಿತ್ಯಕರ್ಮ ಪಶ್ಚಾದ್ವಿಷ್ಣುಂ ಸಮರ್ಚಯೇತ್ ।
ಚತುರ್ಭಿರ್ಬ್ರಾಹ್ಮಣೈಸ್ಸಾರ್ಧಂ ಕೃತ್ವಾ ಚ ಸ್ವಸ್ತಿವಾಚನಂ ॥ ೧೯ ॥

ಕಾರ್ತಿಕಶುಕ್ಲ ಪ್ರತಿಪತ್ತಿನ ದಿನವಾದರೂ ಮಾಡಬೇಕು. ಅದಿಲ್ಲದಿದ್ದರೆ ಅಶ್ವಯುಜ ಶುದ್ಧ ದಶಮಿಯ ದಿನ ಈ ವ್ರತವನ್ನು ಮಾಡಬಹುದು.

೧೭. ಚೈತ್ರಮಾಸದಲ್ಲಿ ಈ ವ್ರತವನ್ನು ಖಂಡಿತವಾಗಿಯೂ ಮಾಡಬೇಕು. ಒಂದುವೇಳೆ ಚೈತ್ರಮಾಸದಲ್ಲಿ ಆಗದಿದ್ದರೆ ಉಳಿದ ದಿನಗಳಲ್ಲಿಯಾದರೂ ಮಾಡಬೇಕು.

೧೮. ವ್ರತಮಾಡತಕ್ಕವನು ಚೈತ್ರಶುಕ್ಲ ಪ್ರತಿಪತ್ತಿನ ಬೆಳಗ್ಗೆ ಎದ್ದು ದೇಹಬಾಧೆಗಳನ್ನು ತೀರಿಸಿಕೊಂಡು ಹಲ್ಲುಗಳನ್ನುಜ್ಜಿಕೊಂಡು ಸ್ನಾನವನ್ನು ಮಾಡಬೇಕು.

೧೯. ಅನಂತರ ನಿತ್ಯಕರ್ಮಗಳನ್ನು ಮಾಡಿಕೊಂಡು ವಿಷ್ಣುವನ್ನು ಪೂಜಿಸಬೇಕು. ನಾಲ್ಕುಜನ ಬ್ರಾಹ್ಮಣರನ್ನು ಕರೆದುಕೊಂಡು ಬಂದು ಅವರೊಡನೆ ಸ್ವಸ್ತಿವಾಚನವನ್ನು ಮಾಡಿಸಬೇಕು.

ನಾಂದೀಶ್ರಾದ್ಧಂ ಪ್ರಕುರ್ವೀತ ಧ್ವಜಾರೋಪಣಕರ್ಮಣಿ ।
ಧ್ವಜಸ್ತಂಭೌ ಚ ಗಾಯತ್ರ್ಯಾ ಪ್ರೋಕ್ಷಯೇದ್ವಸ್ತ್ರಸಂಯುತೌ ॥ ೨೦ ॥

ಪತಾಕಯೋರ್ಲೇಖನೀಯೌ ವೈನತೇಯಾಂಜನೀಸುತೌ ।
ಸೂರ್ಯಂ ಚಂದ್ರಂ ಮಾರುತಿಂ ಚ ವೈನತೇಯಂ ಪ್ರಪೂಜಯೇತ್ ॥ ೨೧ ॥

ಧಾತಾರಂ ಚ ವಿಧಾತಾರಂ ಪೂಜಯೇತ್ಕುಂಭಕದ್ವಯೇ ।
ಹರಿದ್ರಾಕ್ಷತದೂರ್ವಾದ್ಯೈಃ ಶುಕ್ಲಪುಷ್ಪೈರ್ವಿಶೇಷತಃ ॥ ೨೨ ॥

ತತೋ ಗೋಚರ್ಮಮಾತ್ರಂ ತು ಸ್ಥಂಡಿಲಂ ಚೋಪಲಿಪ್ಯ ತು ।
ಆಧಾಯಾಗ್ನಿಂ ಸ್ವಗೃಹ್ಯೋಕ್ತ್ಯಾ ಘೃತಭಾಗಾದಿಕಂ ಕ್ರಮಾತ್ ॥ ೨೩ ॥

---

೨೦. ಧ್ವಜಾರೋಪಣ ಕರ್ಮದಲ್ಲಿ ನಾಂದೀಶ್ರಾದ್ಧವನ್ನು ಮಾಡಬೇಕು. ಎರಡು ಕಂಬಗಳನ್ನು ನೆಡಬೇಕು. ಆ ಧ್ವಜಸ್ತಂಭಕ್ಕೆ ಬಟ್ಟೆಗಳನ್ನು ಕಟ್ಟಿ ಗಾಯಿತ್ರಿಯಿಂದ ಪ್ರೋಕ್ಷಿಸಬೇಕು.

೨೧. ಒಂದು ಕಂಬದ ಪತಾಕೆಯಲ್ಲಿ ಗರುಡನನ್ನೂ ಮತ್ತೊಂದು ಕಂಬದ ಪತಾಕೆಯಲ್ಲಿ ಆಂಜನೇಯನನ್ನೂ ಬರೆಯಬೇಕು. ಸೂರ್ಯ, ಚಂದ್ರ, ಮಾರುತಿ, ಗರುಡರನ್ನು ಪೂಜಿಸಬೇಕು.

೨೨. ಎರಡು ಕಲಶಗಳನ್ನಿಡಬೇಕು. ಒಂದರಲ್ಲಿ ಧಾತೃವನ್ನೂ ಮತ್ತೊಂದರಲ್ಲಿ ವಿಧಾತೃವನ್ನೂ ಆವಾಹಿಸಿ ಪೂಜಿಸಬೇಕು. ಅರಿಶಿನದಿಂದ ಮಾಡಿದ ಅಕ್ಷತೆಯಿಂದಲೂ, ದೂರ್ವೆಯಿಂದಲೂ, ಹೂಗಳಿಂದಲೂ, ಪೂಜಿಸಬೇಕು. ಬಿಳಿಯ ಹೂವಿನಿಂದಲೇ ಪೂಜಿಸುವುದು ಉತ್ತಮವು.

೨೩. ಅನಂತರ ಗೋಚರ್ಮದಷ್ಟು ಅಗಲಕ್ಕೆ ಸ್ಥಂಡಿಲವನ್ನು ಮಾಡಿ ಅದನ್ನು ಸಾರಿಸಿರಬೇಕು. ಅನಂತರ ತನ್ನ ಗೃಹ್ಯಸೂತ್ರದಲ್ಲಿ ಹೇಳಿರುವಂತೆ ಅಗ್ನಿಯನ್ನು ಪ್ರತಿಷ್ಠಾಪನೆಮಾಡಬೇಕು. ಅನಂತರ ಆಜ್ಯಭಾಗದವರೆಗೂ ಕರ್ಮವನ್ನು ಮಾಡಬೇಕು.

ಜುಹುಯಾತ್ಪಾಯಸೇನೈವ ಘೃತೇನಾಷ್ಟೋತ್ತರಂ ಶತಂ ।
ಪ್ರಥಮಂ ಪೌರುಷಂ ಸೂಕ್ತಂ ವಿಷ್ಣೋರ್ನುಕೇನ ಮಂತ್ರತಃ ॥ ೨೪ ॥

ತತಶ್ಚ ವೈನತೇಯಾಯ ಸ್ವಾಹೇತ್ಯಷ್ಟಾಹುತೀಸ್ತಥಾ ।
ತಥೈವ ಮಾರುತೇರಷ್ಟಾಹುತೀಃ ಸ್ವಾಹೇತಿಹೋಮಯೇತ್ ॥ ೨೫ ॥

ಸೋಮೋಧೇನುಂ ಸಮುಚ್ಚಾರ್ಯ ಜುಹುಯಾತ್ಪ್ರಯತಸ್ತಥಾ ।
ಸೌರಾನ್ಮಂತ್ರಾನ್ ಜಪೇತ್ತತ್ರ ಶಾಂತಿಸೂಕ್ತಾನಿ ಭಕ್ತಿತಃ ॥ ೨೬ ॥

ರಾತ್ರೌ ಜಾಗರಣಂ ಕುರ್ಯಾದುಪಕಂಠಂ ಹರೇಶ್ಶುಚಿಃ ।
ಏವಂ ನವದಿನಂ ಕಾರ್ಯಂ ಪೂಜನಂ ಪರಮೋತ್ಸವೈಃ ॥ ೨೭ ॥

---

೨೪. ಅನಂತರ ಪಾಯಸದಿಂದಲೂ ತುಪ್ಪದಿಂದಲೂ ಹೋಮವನ್ನು ಮಾಡಬೇಕು. ಮೊದಲು ಪುರುಷಸೂಕ್ತವನ್ನು ಹೇಳಿಕೊಂಡು ನೂರೆಂಟು ಹೋಮಗಳನ್ನು ಮಾಡಬೇಕು. ಅನಂತರ "ವಿಷ್ಣೋರ್ನುಕಂ" ಎಂಬ ಮಂತ್ರವನ್ನು ಹೇಳಿ ಹೋಮವನ್ನು ಮಾಡಬೇಕು.

೨೫. ಅನಂತರ ವೈನತೇಯನಿಗೆ ಸ್ವಾಹಾಕಾರವನ್ನು ಹೇಳಿ ಎಂಟು ಹೋಮಗಳನ್ನು ಮಾಡಬೇಕು. ಅದೇ ರೀತಿಯಾಗಿ ಮಾರುತಿಗೂ ಸ್ವಾಹಾಕಾರವನ್ನು ಹೇಳಿ ಎಂಟು ಆಹುತಿಗಳನ್ನು ಕೊಡಬೇಕು.

೨೬. ಸೋಮೋಧೇನುಂ ಎಂಬ ಮಂತ್ರವನ್ನು ಹೇಳಿ ಹೋಮವನ್ನು ಮಾಡಬೇಕು. ಅನಂತರ ಭಕ್ತಿಯಿಂದ ಸೌರಮಂತ್ರಗಳನ್ನೂ ಶಾನ್ತಿಸೂಕ್ತಗಳನ್ನೂ ಜಪಿಸಬೇಕು.

೨೭. ರಾತ್ರೆಯಲ್ಲಿ ಆ ಹರಿಯ ಸಮೀಪದಲ್ಲಿಯೇ ಇದ್ದುಕೊಂಡು ಜಾಗರಣೆಯನ್ನು ಮಾಡಬೇಕು. ಈ ರೀತಿಯಾಗಿ ಒಂಭತ್ತು ದಿನಗಳವರೆಗೂ ವಿಷ್ಣುವನ್ನು ಪೂಜಿಸಬೇಕು.

ನವರಾತ್ರಂ ಜಾಗರಣಂ ಕುರ್ಯಾನ್ನಿತ್ಯಂ ಸುಕೀರ್ತನೈಃ ।
ತತೋ ದಶಮ್ಯಾಮುಷಸಿ ಸಮುತ್ಥಾಯ ವ್ರತೀ ಶುಚಿಃ ॥ ೨೮ ॥

ಪ್ರಾತಃ ಸ್ನಾತ್ವಾ ನಿತ್ಯಕರ್ಮ ಸಮಾಪ್ಯಾಥ ಪರಸ್ಪರಂ ।
ಗಂಧಪುಷ್ಪಾದಿಭಿರ್ದೇವಾನರ್ಚಯೇತ್ಪೂರ್ವವತ್ಕ್ರಮಾತ್ ॥ ೨೯ ॥

ತತೋ ಮಂಗಳವಾದ್ಯೈಶ್ಚ ಶುಕ್ಲಪೀಠೈಶ್ಚ ಶೋಭನೈಃ ।
ನೃತ್ಯೈಶ್ಚ ಸ್ತೋತ್ರಪಠನೈರ್ನಯೇದ್ದೇವಾಲಯಂ ಧ್ವಜಂ ॥ ೩೦ ॥

ದೇವಸ್ಯ ದ್ವಾರದೇಶೇ ವಾ ಶಿಖರೇ ವಾ ಮುದಾನ್ವಿತಃ ।
ಸುಸ್ಥಿರಂ ಸ್ಥಾಪಯೇಚ್ಛಿಷ್ಯ ಧ್ವಜಸ್ತಂಭಂ ಸುಶೋಭಿತಂ ॥ ೩೧ ॥

---

೨೮. ಈ ಒಂಭತ್ತು ದಿನಗಳಲ್ಲಿಯೂ ವಿಷ್ಣುವನ್ನು ಕೀರ್ತಿಸುತ್ತ ಜಾಗರಣೆಯನ್ನು ಮಾಡಬೇಕು. ಅನಂತರ ವ್ರತಮಾಡತಕ್ಕವನು ದಶಮಿಯ ದಿನ ಬೆಳಗ್ಗೆ ಎದ್ದು ಬಾಹ್ಯಾದಿಕರ್ಮಗಳನ್ನು ಮುಗಿಸಿಕೊಂಡು ಸ್ನಾನಮಾಡಬೇಕು.

೨೯. ಪ್ರಾತಃಕಾಲದಲ್ಲಿ ಸ್ನಾನಮಾಡಿ ಶುಚಿಯಾಗಿ ನಿತ್ಯಕರ್ಮಗಳನ್ನು ಮಾಡಿಕೊಳ್ಳಬೇಕು. ಮತ್ತೆ ನಿತ್ಯದಂತೆಯೇ ಗಂಧ ಹೂ ಮುಂತಾದುವುಗಳಿಂದ ಸ್ವಾಮಿಯನ್ನು ಪೂಜಿಸಬೇಕು.

೩೦. ಅನಂತರ ಮಂಗಳವಾದ್ಯಗಳನ್ನು ಮಾಡಿಸಿಕೊಂಡು ನೃತ್ಯಗಳನ್ನೂ ಮಾಡಿಸಿಕೊಂಡು ಸ್ತೋತ್ರಗಳನ್ನು ಹೇಳಿಕೊಂಡು ಬೆಳ್ಳಗಿರುವ ಪೀಠದಸಂಗಡ ಆ ಧ್ವಜವನ್ನು ದೇವಸ್ಥಾನದ ಬಳಿಗೆ ತೆಗೆದುಕೊಂಡು ಹೋಗಬೇಕು.

೩೧. ಆ ದೇವಸ್ಥಾನದ ಬಾಗಿಲಿನಲ್ಲಿಯಾಗಲಿ ಶಿಖರದಲ್ಲಿಯಾಗಲಿ ಆ ಧ್ವಜಸ್ತಂಭವನ್ನು ಸ್ಥಾಪನೆಮಾಡಬೇಕು. ಗಟ್ಟಿಯಾಗಿ ನೆಡಬೇಕು.

ಗಂಧಪುಷ್ಪಾಕ್ಷತೈರ್ದೀಪೈರ್ದಿವ್ಯಧೂಪೈರ್ಮನೋರಮೈಃ ।
ಭಕ್ಷಭೋಜ್ಯಾದಿಸಂಯುಕ್ತೈರ್ನೈವೇದ್ಯೈಶ್ಚ ಹರಿಂ ಯಜೇತ್ ॥ ೩೨ ॥

ಆಪ್ರತಿಪದಮಾರಭ್ಯ ದಶಮ್ಯವಧಿ ಸದ್ಮನಿ ।
ಧ್ವಜಯೋಃ ಪೂಜನಂ ಕೃತ್ವೈಕಾದಶ್ಯಾಂ ಹರಿಸದ್ಮನಿ ॥ ೩೩ ॥

ಆರೋಪಿಣೀಯೌ ಶಿಖರೇ ಪುರತೋ ವಾ ಯಥಾಸುಖಂ ।
ಅಥವಾ ರೋಪಣೀಯೌ ಹಿ ದಶಮ್ಯಾಂ ತೌ ಧ್ವಜೋತ್ತಮೌ ॥ ೩೪ ॥

ನವಮ್ಯಾಂ ವಾ ದ್ವಿತೀಯಾಯಾಂ ಚತುರ್ಥ್ಯಾಮಷ್ಟಮೀದಿನೇ ।
ಷಷ್ಠ್ಯಾಂ ವಾ ರೋಪಣೀಯೌ ತೌ ಪೂರ್ವಂ ಪೂಜ್ಯ ಯಥಾವಿಧಿ ॥ ೩೫ ॥

---

೩೨. ಗಂಧ, ಹೂವು, ಅಕ್ಷತೆ, ದೀಪ, ಧೂಪಗಳಿಂದಲೂ ಭಕ್ಷ್ಯ, ಭೋಜ್ಯಗಳಿಂದಲೂ ಇನ್ನೂ ಅನೇಕ ವಿಧವಾದ ನೈವೇದ್ಯಗಳಿಂದಲೂ ಹರಿಯನ್ನು ಅಲ್ಲಿ ಪೂಜಿಸಬೇಕು.

೩೩. ಪ್ರತಿಪತ್ತಿನಿಂದ ಮೊದಲುಗೊಂಡು ದಶಮಿಯ ಪೂರ್ತಿಯಾಗಿ ಮನೆಯಲ್ಲಿಯೇ ಧ್ವಜಗಳಿಗೆ ಪೂಜೆಯನ್ನು ಮಾಡಬೇಕು ಏಕಾದಶಿಯ ದಿವಸ ವಿಷ್ಣುದೇವಸ್ಥಾನದಲ್ಲಿ ವಿಷ್ಣುವಿಗೆ ಪೂಜೆಯನ್ನು ಮಾಡಬೇಕು. ಅನಂತರ ಧ್ವಜವನ್ನು ಪೂಜಿಸಬೇಕು.

೩೪. ಆ ದೇವಸ್ಥಾನದ ಶಿಖರದಲ್ಲಿ ಪೂರ್ವದಿಕ್ಕಿಗಾಗಲಿ ಅಥವಾ ಅವರಿಗೆ ಅನುಕೂಲವಿದ್ದ ಕಡೆಗಾಗಲಿ ಸ್ಥಾಪಿಸಬಹುದು. ಏಕಾದಶಿಯ ದಿನವಾಗದಿದ್ದರೆ ದಶಮಿಯ ದಿನವೇ ಧ್ವಜಾರೋಹಣವನ್ನು ಮಾಡಬಹುದು.

೩೫. ನವಮಿ, ದ್ವಿತೀಯ, ಚತುರ್ಥಿ, ಅಷ್ಟಮಿ, ಷಷ್ಠಿ, ಈ ದಿನಗಳಲ್ಲಿ ಯಾವ ದಿನ ಬೇಕಾದರೂ ಧ್ವಜಾರೋಹಣವನ್ನು ಮಾಡಬಹುದು. ಅವುಗಳ ಹಿಂದಿನ ದಿನಗಳಲ್ಲಿ ಪ್ರತಿಪತ್ತಿನಿಂದ ಕ್ರಮವಾಗಿ ಪೂಜಿಸಬೇಕು.

ವ್ರತಸ್ಯ ಪ್ರತಿಪದ್ಯೇವ ಪ್ರಾರಂಭೋ ನೇತರೇ ದಿನೇ ।
ಪೂರ್ವೋಕ್ತೇಷು ಹರೇಃ ಕಾರ್ಯೋ ನ ಮಾಸೇಷ್ವಿತರೇಷು ಚ ॥ ೩೬ ॥

ಮಾಘಾಸಿತಚತುರ್ದಶ್ಯಾಮೇವಂ ಶಂಭೋರ್ಗೃಹೇ ಧ್ವಜೌ ।
ನಂದೀಭೃಂಗ್ಯಂಕಿತೌ ಕೃತ್ವಾ ರೋಪಣೀಯೌ ಯಥಾವಿಧಿ ॥ ೩೭ ॥

ಆಶ್ವಿನಸ್ಯ ಸಿತಾಷ್ಟಮ್ಯಾಂ ಮಧೋರ್ವಾ ಗಿರಿಜಾಗೃಹೇ ।
ನಭಸ್ಯಸ್ಯ ಚತುರ್ಥ್ಯಾಂ ಹಿ ಪ್ರೋಕ್ತಾ ಗಣಪಸದ್ಗೃಹೇ ॥ ೩೮ ॥

ಮಾರ್ಗಶೀರ್ಷೇ ಶುಕ್ಲಷಷ್ಠ್ಯಾಮೇವಂ ಮಾರ್ತಾಂಡಸದ್ಗೃಹೇ ।
ಏವಂ ಹಿ ಸರ್ವದೇವಾನಾಮುತ್ಸಾಹದಿವಸೇಷ್ವಪಿ ॥ ೩೯ ॥

---

೩೬. ವ್ರತವನ್ನು ಮೊದಲುಮಾಡಬೇಕಾದರೆ ಪ್ರತಿಪತ್ತಿನ ದಿನವೇ ಆರಂಭಿಸಬೇಕು. ಮಿಕ್ಕದಿನಗಳಲ್ಲಿ ಕೂಡದು ವಿಷ್ಣುವಿಗೆ ದ್ವಜಾರೋಹಣ ಮಾಡಬೇಕಾದರೆ ಹಿಂದೆ ಹೇಳಿದ ದಿನಗಳಲ್ಲಿ ಮತ್ತು ಮಾಸಗಳಲ್ಲಿಯೇ ಆಗ ಬೇಕು. ಇತರ ದಿನಗಳಲ್ಲಿ ಕೂಡದು.

೩೭. ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯ ದಿನದಲ್ಲಿ ಶಂಭುವಿಗೆ ಧ್ವಜಾರೋಹಣವನ್ನು ಮಾಡಬೇಕು. ಅವುಗಳಲ್ಲಿ ನಂದಿ, ಭೃಂಗಿಗಳನ್ನು ಬರೆಸಿರಬೇಕು. ಅಂತಹವನ್ನು ಕ್ರಮವಾಗಿ ಆರೋಪಿಸಬೇಕು.

೩೮. ಆಶ್ವಯುಜ ಶುದ್ಧ ಅಷ್ಟಮಿಯ ದಿನವಾಗಲಿ, ಚೈತ್ರಶುದ್ಧ ಅಷ್ಟಮಿಯ ದಿನವಾಗಲಿ ದುರ್ಗಿಯ ದೇವಸ್ಥಾನದಲ್ಲಿಯೂ, ಭಾದ್ರಪದ ಶುದ್ಧ ಚತುರ್ಥಿಯ ದಿನ ಗಣಪತಿಯ ದೇವಸ್ಥಾನದಲ್ಲಿಯೂ ಧ್ವಜಾರೋಹಣವನ್ನು ಮಾಡಬೇಕು.

೩೯. ಮಾರ್ಗಶೀರ್ಷಶುದ್ಧ ಷಷ್ಠೀದಿನ ಸೂರ್ಯದೇವಸ್ಥಾನದಲ್ಲಿಯೂ ಹೀಗೆಯೇ ಆಯಾಯ ದೇವರ ದೇವಸ್ಥಾನಗಳಲ್ಲಿ ಆಯಾಯ ದೇವರ ಉತ್ಸವ ದಿನಗಳಲ್ಲಿ ಧ್ವಜಾರೋಹಣವನ್ನು ಮಾಡಬೇಕು.

ಮಧೂರ್ಚಾಶ್ವಿನಮಾಸೇಷು ವಿನಾ ವಿಷ್ಣೋರ್ನ ಚೇಶರೇ ।
ಏವಂ ದೇವಾಲಯೇ ಸ್ಥಾಪ್ಯ ಶೋಭನೌ ತೌ ಧ್ವಜೋತ್ತಮೌ ॥ ೪೦ ॥

ಸಂಪೂಜ್ಯ ವಿಷ್ಣುಂ ವಿಧಿವದ್ವಿತ್ತಶಾಠ್ಯಂ ವಿನಾ ತತಃ ।
ಪ್ರದಕ್ಷಿಣಮನುವ್ರಜ್ಯ ಸ್ತೋತ್ರಮೇತದುದೀರಯೇತ್ ॥ ೪೧ ॥

ನಮಸ್ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥ ೪೨ ॥

ಯೇನೇದಮಖಿಲಂ ಜಾತಂ ಯಸ್ಮಿನ್ಸರ್ವಂ ಪ್ರತಿಷ್ಠಿತಂ ।
ಲಯಮೇಷ್ಯತಿ ಯತ್ರೈತತ್ ತಂ ಪ್ರಸನ್ನೋಽಸ್ಮಿ ಮಾಧವಂ ॥ ೪೩ ॥

---

೪೦. ಚೈತ್ರ ಆಶ್ವಯುಜ ಕಾರ್ತಿಕಮಾಸಗಳಲ್ಲಿ ಹೊರತಾಗಿ ಮಿಕ್ಕ ಮಾಸಗಳಲ್ಲಿ ವಿಷ್ಣುವಿನ ದೇವಸ್ಥಾನದಲ್ಲಿ ಧ್ವಜಾರೋಹಣವನ್ನು ಮಾಡಬಾರದು. ಈ ರೀತಿಯಾಗಿ ದೇವಸ್ಥಾನಗಳಲ್ಲಿ ಎರಡು ಧ್ವಜಗಳನ್ನೂ ನೆಟ್ಟು ಆರೋಹಿಸ ಬೇಕು.

೪೧. ವಿಷ್ಣುವನ್ನು ಶಾಸ್ತ್ರದ ರೀತಿಯಿಂದ ಪೂಜಿಸಬೇಕು. ಧನದಲ್ಲಿ ಲೋಭವನ್ನು ಮಾಡಬಾರದು. ಪ್ರದಕ್ಷಿಣೆಯನ್ನು ಮಾಡಿ ಈ ಸ್ತೋತ್ರವನ್ನು ಹೇಳಬೇಕು.

೪೨. ಪುಂಡರೀಕಾಕ್ಷನೇ ! ನಿನಗೆ ನಮಸ್ಕಾರವು. ಪ್ರಪಂಚವೆಲ್ಲಕ್ಕೂ ಬೇಕಾದವನೇ ! ನಿನಗೆ ನಮಸ್ಕಾರವು. ಹೃಷೀಕೇಶನೇ ! ನಿನಗೆ ನಮಸ್ಕಾರವು. ಆದಿಯ ಪುರುಷನೇ ! ನಿನಗೆ ನಮಸ್ಕಾರವು.

೪೩. ಯಾವನಿಂದ ಈ ಜಗತ್ತೆಲ್ಲವೂ ಹುಟ್ಟಿತೋ, ಯಾವನಲ್ಲಿ ಜಗತ್ತೆಲ್ಲವೂ ನಿಂತಿರುವುದೋ, ಎಲ್ಲ ಈ ಪ್ರಪಂಚವೆಲ್ಲವೂ ನಾಶವಾಗುತ್ತದೆಯೋ ಅಂತಹ ಮಾಧವನನ್ನು ಶರಣು ಹೊಂದುತ್ತೇನೆ.

ನ ಜಾನಂತಿ ಪರಂ ದೇವಂ ಸರ್ವೇ ಬ್ರಹ್ಮಾದಯಸ್ಸುರಾಃ ।
ಧ್ಯಾಯಂತಿ ಯೋಗಿನೋ ಯಂ ವೈ ತಂ ವಂದೇ ಜ್ಞಾನರೂಪಿಣಂ॥ ೪೪ ॥

ಅಂತರಿಕ್ಷಂ ತು ಯನ್ನಾಭಿರ್ದ್ಯೌರ್ಮೂರ್ಧಾ ಯಸ್ಯ ಚೈವ ಹಿ ।
ಪಾದಾಚ್ಚಾಭೂಚ್ಚ ವೈ ಪೃಥ್ವೀ ತಂ ವಂದೇ ವಿಶ್ವರೂಪಿಣಂ ॥ ೪೫ ॥

ಯಸ್ಯ ಶ್ರೋತ್ರಾ ದಿಶಸ್ಸರ್ವಾ ಯಚ್ಚಕ್ಷುರ್ದಿನಕೃಚ್ಛಶೀ ।
ಋಕ್ಸಾಮಯಜುಷೋ ಯೇನ ತಂ ವಂದೇ ಬ್ರಹ್ಮರೂಪಿಣಂ ॥ ೪೬ ॥

ಯನ್ಮುಖಾದ್ಬ್ರಾಹ್ಮಣಾ ಜಾತಾ ಯದ್ಬಾಹ್ವೋರಭವನ್ನೃಪಾಃ ।
ವೈಶ್ಯಾ ಯಸ್ಯೋರುತೋ ಜಾತಾಃ ಪದ್ಭ್ಯಾಂ ಶೂದ್ರಸ್ತ್ವಜಾಯತ ॥೪೭॥

ಮನಸಶ್ಚಂದ್ರಮಾ ಜಾತೋ ದಿನೇಶಶ್ಚಕ್ಷುಷಸ್ತಥಾ ।
ಪ್ರಾಣೇಭ್ಯಃ ಪವನೋ ಜಾತೋ ಮುಖಾದಗ್ನಿರಜಾಯತ ॥ ೪೮ ॥

---

೪೪. ಯಾವ ಸ್ವಾಮಿಯನ್ನು ಬ್ರಹ್ಮನೇ ಮೊದಲಾದ ದೇವತೆಗಳೂ ಕೂಡ ತಿಳಿಯದಿರುವರೋ ಯಾವನನ್ನು ಯೋಗಿಗಳು ಧ್ಯಾನಿಸುತ್ತಾರೆಯೋ, ಜ್ಞಾನರೂಪಿಯಾದ ಆ ಸ್ವಾಮಿಗೆ ನಮಸ್ಕರಿಸುತ್ತೇನೆ.

೪೫. ಯಾವನ ನಾಭಿಯೇ ಅಂತರಿಕ್ಷವೋ ಯಾವನ ತಲೆಯೇ ಸ್ವರ್ಗವೋ ಯಾವನ ಪಾದಗಳೇ ಭೂಮಿಯೋ ಅಂತಹ ವಿಶ್ವರೂಪಿಯಾದ ಸ್ವಾಮಿಯನ್ನು ನಮಸ್ಕರಿಸುತ್ತೇನೆ.

೪೬. ಯಾವನ ಕಿವಿಗಳೇ ದಿಕ್ಕುಗಳೋ ಯಾವನ ಕಣ್ಣುಗಳೇ ಚಂದ್ರಸೂರ್ಯರೋ, ಯಾವನಿಂದಲೇ ಋಗ್ವೇದ ಸಾಮವೇದ ಯಜುರ್ವೇದಗಳು ಹುಟ್ಟಿದುವೋ ಅಂತಹ ಬ್ರಹ್ಮಸ್ವರೂಪಿಯಾದ ಸ್ವಾಮಿಯನ್ನು ನಮಸ್ಕರಿಸುತ್ತೇನೆ.

೪೭–೪೮. ಯಾವನ ಮುಖದಿಂದ ಬ್ರಾಹ್ಮಣರೂ ತೋಳುಗಳಿಂದ ಕ್ಷತ್ರಿಯರೂ ತೊಡೆಗಳಿಂದ ವೈಶ್ಯರೂ ಕಾಲುಗಳಿಂದ ಶೂದ್ರರೂ ಮನಸ್ಸಿನಿಂದ ಚಂದ್ರನೂ, ತೊಡೆಗಳಿಂದ ಸೂರ್ಯನೂ ಪ್ರಾಣಗಳಿಂದ ವಾಯುವೂ ಮುಖದಿಂದ ಅಗ್ನಿಯೂ ಹುಟ್ಟಿದರೋ ಆ ಸ್ವಾಮಿಗೆ ನಮಸ್ಕಾರವು.

ಪಾಪಸಂದಾಹಮಾತ್ರೇಣ ವದಂತಿ ಪುರುಷಂ ತು ಯಂ |
ಸ್ವಭಾವವಿಮಲಂ ಶುದ್ಧಂ ನಿರ್ವಿಕಾರಂ ನಿರಂಜನಂ || ೪೯ ||

ಕ್ಷೀರಾಬ್ಧಿಶಾಯಿನಂ ದೇವಮನಂತಮಪರಾಜಿತಂ |
ಸದ್ಭಕ್ತವತ್ಸಲಂ ವಿಷ್ಣುಂ ಭಕ್ತಿಗಮ್ಯಂ ನಮಾಮ್ಯಹಂ || ೫೦ ||

ಪೃಥಿವ್ಯಾದೀನಿ ಭೂತಾನಿ ತನ್ಮಾತ್ರಾಣೀಂದ್ರಿಯಾಣಿ ಚ |
ಸುಸೂಕ್ಷ್ಮಾಣಿ ಚ ಯೇನಾಸಂಸ್ತಂ ವಂದೇ ಸರ್ವತೋ ಮುಖಂ || ೫೧ ||

ಯದ್ಬ್ರಹ್ಮ ಪರಮಂ ಧಾಮ ಸರ್ವಲೋಕೋತ್ತಮೋತ್ತಮಂ |
ನಿರ್ಗುಣಂ ಪರಮಂ ಸೂಕ್ಷ್ಮಂ ಪ್ರಣತೋಸ್ಮಿ ಪುನಃ ಪುನಃ || ೫೨ ||

---

೪೯. ಪಾಪಗಳನ್ನು ನಾಶಮಾಡುವುದರಿಂದಲೇ ಯಾವನನ್ನು ಪುರುಷನೆಂದೆನ್ನುತ್ತಾರೆಯೋ ಯಾವನು ಸ್ವಭಾವವಾಗಿ ಮಲರಹಿತನಾಗಿಯೂ ಶುದ್ಧನಾಗಿಯೂ ಇರುವನೋ ಅಂತಹ ನಿರ್ವಿಕಾರನೂ ಶುದ್ಧನೂ ಆದ ಸ್ವಾಮಿಯನ್ನು ನಮಸ್ಕರಿಸುತ್ತೇನೆ.

೫೦. ದೇವನಾದ ಕ್ಷೀರಸಮುದ್ರದಲ್ಲಿ ಮಲಗಿರುವ ಭಕ್ತವತ್ಸಲನಾದ ಭಕ್ತಿಯಿಂದ ಸಿಕ್ಕತಕ್ಕ ಆ ವಿಷ್ಣುವನ್ನು ನಮಸ್ಕರಿಸುತ್ತೇನೆ.

೫೧. ಪೃಥವೀ ಆಪ್ಪು ತೇಜಸ್ಸು ವಾಯು ಆಕಾಶರೂಪವಾದ ಪಂಚಭೂತಗಳೂ ಶಬ್ದ ಸ್ಪರ್ಶ ರೂಪ ರಸ ಗಂಧಗಳೂ ಶ್ರೋತ್ರ ತ್ವಕ್ ಚಕ್ಷುಸ್ಸು ಜಿಹ್ವೆ ಘ್ರಾಣಗಳೂ ವಾಕ್ ಪಾಣಿ ಪಾದ ಪಾಯು ಉಪಸ್ಥಗಳೂ ಮನಸ್ಸು ಬುದ್ಧಿ ಅಹಂಕಾರ ಚಿತ್ತಗಳೂ ಯಾವನಿಂದಾದುವೋ ಅಂತಹ ಸರ್ವತೋಮುಖನನ್ನು ನಮಸ್ಕರಿಸುತ್ತೇನೆ.

೫೨. ಯಾವ ಬ್ರಹ್ಮವು ಸರ್ವಲೋಕಗಳಲ್ಲಿಯೂ ಉತ್ತಮೋತ್ತಮವಾದ ಪರಂಧಾಮವೋ ಅಂತಹ ನಿರ್ಗುಣನೂ ಪರಮನೂ ಸೂಕ್ಷ್ಮನೂ ಆದ ವಿಷ್ಣುವನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇನೆ.

ನಿರ್ವಿಕಾರಮಜಂ ಶುದ್ಧಂ ಸರ್ವತೋ ವಹ್ನಿಮೀಶ್ವರಂ।
ಯಮಾಮನಂತಿ ಯೋಗೀಂದ್ರಾಸ್ಸರ್ವಕಾರಣಕಾರಣಂ ॥ ೫೩ ॥

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀನ್ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಙ್ಕ್ತೇ ವಿಶ್ವಭುಗವ್ಯಯಃ ॥ ೫೪ ॥

ನಿರ್ಗುಣಃ ಪರಮಾನಂದಸ್ಸ ಮೇ ವಿಷ್ಣುಃ ಪ್ರಸೀದತು ।
ಹೃದಯಸ್ಥೋಽಪಿ ದೂರಸ್ಥೋ ಮಾಯಯಾ ಮೋಹಿತಾತ್ಮನಾಂ ॥ ೫೫ ॥

ಜ್ಞಾನಿನಾಂ ಸರ್ವಧರ್ಮಸ್ತು ಸ ಮೇ ವಿಷ್ಣುಃ ಪ್ರಸೀದತು ।
ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ ॥ ೫೬ ॥

---

೫೩. ಯೋಗೀಂದ್ರರು ಯಾವನನ್ನು ವಿಕಾರವಿಲ್ಲದವನನ್ನಾಗಿಯೂ ಅಜನನ್ನಾಗಿಯೂ ಶುದ್ಧನನ್ನಾಗಿಯೂ ಎಲ್ಲಾ ಕಡೆಯಲ್ಲಿಯೂ ಇರುವ ಕಾರಣ ರೂಪನನ್ನಾಗಿಯೂ ಹೇಳುವರೋ ಅಂತಹ ಕಾರಣಗಳಿಗೂ ಕಾರಣನಾದ ಈಶ್ವರನನ್ನು ನಮಸ್ಕರಿಸುತ್ತೇನೆ.

೫೪. ಒಬ್ಬನೇ ಒಬ್ಬ ಮಹಾಭೂತವಾಗಿ ಎಂದರೆ ಮಹತ್ತತ್ವವಾಗಿ ಅನೇಕ ರೀತಿಯಿಂದ ಬೇರೆಬೇರೆಯಾಗಿ ಪಂಚವಿಂಶತಿ (ಇಪ್ಪತ್ತೈದು) ಭೂತಗಳಾಗಿ ಎಲ್ಲಾ ಭೂತಗಳಲ್ಲಿಯೂ ಸೇರಿಕೊಂಡು ಮೂರುಲೋಕವನ್ನೂ ವ್ಯಾಪಿಸಿಕೊಂಡು ಪ್ರಪಂಚವನ್ನೇ ಆವರಿಸಿಕೊಂಡು ಅನುಭವಿಸುತ್ತಿರುವನೋ ಅಂತಹ ವಿಷ್ಣುವನ್ನು ನಮಸ್ಕರಿಸುತ್ತೇನೆ.

೫೫. ನಿರ್ಗುಣನೂ ಪರಮಾನಂದನೂ ಆದ ವಿಷ್ಣುವು ನನಗೆ ಪ್ರಸನ್ನನಾಗಲಿ. ಯಾವನು ಮಾಯೆಯಿಂದ ಮೋಹಿತರಾದವರಿಗೆ ಹೃದಯದಲ್ಲಿದ್ದರೂ ದೂರದಲ್ಲಿರುವಂತೆ ಕಾಣುವನೋ ಅಂತಹ ಸ್ವಾಮಿಯನ್ನು ನಮಸ್ಕರಿಸುತ್ತೇನೆ.

೫೬–೬೪. ಜ್ಞಾನಿಗಳಿಗೆ ಸರ್ವಧರ್ಮವೂ ಯಾವನಾಗಿರುವನೋ ಅವನು ನನಗೆ ಪ್ರಸನ್ನನಾಗಲಿ. ಯಾವನನ್ನು ಮೊದಲು ನಾಲ್ಕು ಅಕ್ಷರದ 'ಆಶ್ರಾವಯ' ಎಂಬ ಮಂತ್ರ ಹೇಳಿ ಅನಂತರ ನಾಲ್ಕು ಅಕ್ಷರದ 'ಅಸ್ತುಶ್ರೌಷಟ್' ಎಂಬ ಮಂತ್ರ ಹೇಳಿ ಅನಂತರ ಎರಡು ಅಕ್ಷರದ 'ಯಜ' ಎಂಬ ಮಂತ್ರ ಹೇಳಿ ಅನಂತರ ಐದು ಅಕ್ಷರದ

ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು ।
ಜಗದ್ಧಿತಾರ್ಥಂ ಯೋ ದೇಹಮುದಧಲ್ಲೀಲಯಾ ಹರಿಃ ॥ ೫೭ ॥

ಯಮರ್ಚಯಂತಿ ವಿಬುಧಾಸ್ಸ ಮೇ ವಿಷ್ಣುಃ ಪ್ರಸೀದತು ।
ಜ್ಞಾನಿನಾಂ ಕರ್ಮಿಣಾಂ ಚೈವ ತಥಾ ಭಕ್ತಿಮತಾಂ ನೃಣಾಂ ॥ ೫೮ ॥

ಗತಿದಾತಾ ವಿಶ್ವಭುಗ್ಯಸ್ಸ ಮೇ ವಿಷ್ಣುಃ ಪ್ರಸೀದತು ।
ಯಮಾಮನಂತಿ ವೈ ಸಂತಸ್ಸಚ್ಚಿದಾನಂದವಿಗ್ರಹಂ ॥ ೫೯ ॥

ನಿರ್ಗುಣಂ ಚ ಗುಣಾಧಾರಂ ಸ ಮೇ ವಿಷ್ಣುಃ ಪ್ರಸೀದತು ।
ಪರೇಶಃ ಪರಮಾನಂದಃ ಪರಾತ್ಪರತರಃ ಪ್ರಭುಃ ॥ ೬೦ ॥

ಚಿದ್ರೂಪಶ್ಚ ಪರಿಜ್ಞೇಯಸ್ಸ ಮೇ ವಿಷ್ಣುಃ ಪ್ರಸೀದತು ।
ಯ ಇದಂ ಕೀರ್ತಯೇನ್ನಿತ್ಯಂ ಸ್ತೋತ್ರಾಣಾಮುತ್ತಮೋತ್ತಮಂ ॥ ೬೧ ॥

'ಯೇ ಯಜಾಮಹೇ' ಎಂಬ ಮಂತ್ರ ಹೇಳಿ ಮತ್ತೆ ಎರಡು ಅಕ್ಷರದ 'ವಷಟ್' ಎಂಬ ಮಂತ್ರ ಹೇಳಿ ಕರೆಯುತ್ತೇವೆಯೋ ಅಂತಹ ವಿಷ್ಣುವು ನನಗೆ ಪ್ರಸನ್ನನಾಗಲಿ. ಯಾವ ಹರಿಯು ಪ್ರಾಣಿಗಳ ಹಿತಕ್ಕೋಸ್ಕರಲೇ ಲೀಲೆಯಿಂದ ದೇಹವನ್ನು ಧರಿಸಿದನೋ ಜ್ಞಾನಿಗಳು ಯಾವನನ್ನು ಪೂಜಿಸುವರೋ ಆ ಸ್ವಾಮಿಯು ನನಗೆ ಪ್ರಸನ್ನನಾಗಲಿ. ಜ್ಞಾನಿಗಳಿಗೂ ಕರ್ಮಮಾಡುವವರಿಗೂ ಭಕ್ತಿಯುಳ್ಳವರಿಗೂ ಗತಿಯನ್ನು ಕೊಡತಕ್ಕ ಪ್ರಪಂಚವನ್ನೇ ಅನುಭವಿಸುವ ಆ ವಿಷ್ಣುವು ನನಗೆ ಪ್ರಸನ್ನನಾಗಲಿ. ಯಾವ ಸ್ವಾಮಿಯನ್ನು ಸಚ್ಚಿದಾನಂದ ವಿಗ್ರಹವನ್ನಾಗಿ ತಿಳಿಯುತ್ತಾರೆಯೋ ಯಾವನು ನಿರ್ಗುಣನಾದರೂ ಗುಣಗಳಿಗೆ ಆಧಾರನನ್ನಾಗಿ ತಿಳಿಯುವರೋ ಆ ವಿಷ್ಣುವು ನನಗೆ ಪ್ರಸನ್ನನಾಗಲಿ. ಪರೇಶನೂ ಪರಮಾನಂದನೂ, ಪರಕ್ಕಿಂತಲೂ ಪರನೂ ಪ್ರಭುವೂ ಚಿದ್ರೂಪನೂ ಆಗಿರುವನೆಂದು ಯಾವನನ್ನು ತಿಳಿಯುವೆವೋ ಆ ವಿಷ್ಣುವು ನನಗೆ ಪ್ರಸನ್ನನಾಗಲಿ. ಈ ಸ್ತೋತ್ರವು ಸ್ತೋತ್ರಗಳಲ್ಲೆಲ್ಲಾ ಉತ್ತಮೋತ್ತಮವು. ಇದನ್ನು ನಿತ್ಯವೂ ಯಾವನು ಹೇಳುವನೋ

ಸರ್ವಪಾಪನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ।
ಯ ಇದಂ ಕೀರ್ತಯೇದ್ವಿಷ್ಣುಂ ಬ್ರಾಹ್ಮಣಾಂಶ್ಚ ಪ್ರಪೂಜಯೇತ್ ॥ ೬೨ ॥

ಆಚಾರ್ಯಂ ಪೂಜಯೇತ್ಪಶ್ಚಾದ್ದಕ್ಷಿಣಾಚ್ಛಾದನಾದಿಭಿಃ ।
ಬ್ರಾಹ್ಮಣಾನ್ಭೋಜಯೇತ್ಪಶ್ಚಾತ್ ಭಕ್ತಿತಸ್ಸತ್ಯಭಾಷಣಃ ॥ ೬೩ ॥

ಪುತ್ರಮಿತ್ರಕಳತ್ರಾದ್ಯೈರ್ಬಂಧುಭಿಸ್ಸಹ ವಾಗ್ಯತಃ ।
ಕುರ್ವೀತ ಪಾರಣಾಂ ಶಿಷ್ಯ ನಾರಾಯಣಪರಾಯಣಃ ॥ ೬೪ ॥

ಯಸ್ತ್ವೇತತ್ಕರ್ಮ ಕುರ್ವೀತ ಧ್ವಜಾರೋಪಣಮುತ್ತಮಂ ।
ತಸ್ಯ ಪುಣ್ಯಫಲಂ ವಕ್ಷ್ಯೇ ಶ್ರುಣುಷ್ವ ಸುಸಮಾಹಿತಃ ॥ ೬೫ ॥

ವಸ್ತ್ರಂ ಧ್ವಜಸ್ಯ ಸಂಬದ್ಧಂ ಯಾವಚ್ಚಲತಿ ವಾಯುನಾ ।
ತಾವತ್ಸ್ವಪಾಪಜಾಲಾನಿ ನಶ್ಯಂತ್ಯತ್ರ ನ ಸಂಶಯಃ ॥ ೬೬ ॥

ಅವನು ಎಲ್ಲಾ ಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕದಲ್ಲಿ ಸುಖಿಸುತ್ತಾನೆ. ಯಾವನು ಇದನ್ನು ಹೇಳಿ ವಿಷ್ಣುವನ್ನೂ ಬ್ರಾಹ್ಮಣರನ್ನೂ ಪೂಜಿಸುವನೋ ಅನಂತರ ಆಚಾರ್ಯರನ್ನು ದಕ್ಷಿಣೆ ವಸ್ತ್ರಗಳಿಂದ ಪೂಜಿಸುವನೋ ಅನಂತರ ಬ್ರಾಹ್ಮಣರಿಗೆ ಭೋಜನಮಾಡಿಸುವನೋ ಅನಂತರ ಸತ್ಯವನ್ನೇ ಹೇಳುತ್ತ ಬಂಧು, ಮಿತ್ರ, ಪುತ್ರ, ಹೆಂಡಿರೊಡನೆ ಪಾರಣೆಯನ್ನು ಮಾಡುವನೋ ನಾರಾಯಣನಲ್ಲಿಯೇ ಆಸಕ್ತನಾಗಿರುವನೋ ಅವನು ಪಾಪಗಳನ್ನು ಕಳೆದುಕೊಂಡು ವಿಷ್ಣುಲೋಕದಲ್ಲಿ ಸುಖಿಸುವನು.

೬೫. ಈ ಧ್ವಜಾರೋಹಣ ಕರ್ಮವನ್ನು ಯಾವನು ಮಾಡುವನೋ ಅವನಿಗೆ ಬರುವ ಪುಣ್ಯಫಲವನ್ನು ಹೇಳುತ್ತೇನೆ. ಸಾವಧಾನಚಿತ್ತದಿಂದ ಕೇಳು.

೬೬. ಧ್ವಜಕ್ಕೆ ಕಟ್ಟಿರುವ ವಸ್ತ್ರವು ಎಷ್ಟುಕಾಲದವರೆಗೂ ಗಾಳಿಯಿಂದ ಅಲ್ಲಾಡುತ್ತದೆಯೋ ಅಲ್ಲಿಯವರೆಗೂ ತಾವು ಮಾಡಿದ ಪಾಪಗಳು ಹೋಗುತ್ತವೆ. ಇದರಲ್ಲಿ ಸಂಶಯವಿಲ್ಲ.

ಮಹಾಪಾತಕಯುಕ್ತೋ ವಾ ಯುಕ್ತಶ್ಚೇತ್ಸರ್ವಪಾತಕೈಃ ।
ಧ್ವಜಂ ವಿಷ್ಣುಗೃಹೇ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೬೭ ॥

ಯಾವದ್ದಿನಾನಿ ವಸತಿ ಧ್ವಜೋ ಹರಿಗೃಹೋಪರಿ ।
ತಾವದ್ಯುಗಸಹಸ್ರಾಣಿ ಹರೇಸ್ಸಾಮೀಪ್ಯಮಾಪ್ನುಯಾತ್ ॥ ೬೮ ॥

ಆರೋಪಿತಂ ಧ್ವಜಂ ದೃಷ್ಟ್ವಾ ಯೇಽಭಿವಂದಂತಿ ಧಾರ್ಮಿಕಾಃ ।
ತೇಽಪಿ ಸದ್ಯೋ ವಿಮುಚ್ಯಂತೇ ಹ್ಯುಪಪಾತಕಕೋಟಿಭಿಃ ॥ ೬೯ ॥

ಆರೋಪಿತಂ ಧ್ವಜಂ ವಿಷ್ಣುಗೃಹೇ ಧುನ್ವನ್ಸ್ವಕಂ ಪಟಂ ।
ಕರ್ತುಸ್ಸರ್ವಾಣಿ ಪಾಪಾನಿ ಧುನೋತಿ ನಿಮಿಷಾರ್ಧತಃ ॥ ೭೦ ॥

---

೬೭. ಮಹಾ ಪಾತಕದಿಂದ ಕೂಡಿರಲಿ ಕೊನೆಗೆ ಎಲ್ಲಾ ಪಾಪಗಳಿಂದಲೂ ಕೂಡಿದ್ದರೂ ಸರಿಯೆ ವಿಷ್ಣುವಿನ ದೇವಸ್ಥಾನದಲ್ಲಿ ಧ್ವಜವನ್ನು ಆರೋಪಿಸಿದರೆ ಎಲ್ಲಾ ಪಾಪಗಳೂ ಹೋಗುತ್ತವೆ.

೬೮. ಆ ವಿಷ್ಣುವಿನ ದೇವಾಲಯದಲ್ಲಿ ಧ್ವಜವು ಎಷ್ಟು ದಿನಗಳವರೆಗೆ ಇರುತ್ತದೆಯೋ, ಅಷ್ಟು ಸಾವಿರ ಯುಗಗಳವರೆಗೂ ಅವನು ಹರಿಯ ಸಮೀಪದಲ್ಲಿ ಸುಖಿಸುತ್ತಾನೆ.

೬೯. ಧ್ವಜಾರೋಹಣ ಮಾಡಿದುದನ್ನು ನೋಡಿ ಯಾವ ಪುಣ್ಯಾತ್ಮರು ಅದನ್ನು ವಂದಿಸುವರೋ ಅವರು ತಾವು ಮಾಡಿದ ಉಪಪಾಪಗಳೆಷ್ಟಿದ್ದರೂ ಅವನ್ನು ಕಳೆದುಕೊಳ್ಳುತ್ತಾರೆ.

೭೦. ವಿಷ್ಣುದೇವಾಲಯದಲ್ಲಿ ಸ್ಥಾಪಿಸಿದ ಧ್ವಜವು ತನ್ನಲ್ಲಿರುವ ಪತಾಕೆಯನ್ನು ಅಲ್ಲಾಡಿಸುತ್ತ ಕರ್ತೃವಿನ ಎಲ್ಲಾ ಪಾಪಗಳನ್ನೂ ನಿಮಿಷಾರ್ಧ ದಲ್ಲಿಯೇ ನಾಶಮಾಡುತ್ತದೆ.

ಏವಂ ಶಿಷ್ಯ ಮಯಾ ಪ್ರೋಕ್ತಂ ಯಥಾಪೃಷ್ಟಂ ತ್ವಯಾ ಮಮ ।
ಧ್ವಜಾರೋಪಣಮಾಹಾತ್ಮ್ಯಂ ಸವಿಧಾನಂ ಮನೋರಮಂ ॥ ೭೧ ॥

ಸಮಾಗತಾಂ ಪ್ರತಿಪದಂ ಜ್ಞಾತ್ವಾ ಚೈತ್ರಸಿತಾಂ ನೃಪೈಃ ।
ಆರೋಪಿತಾ ಧ್ವಜಾಸ್ಸರ್ವೈ ರ್ದ್ವಿತೀಯಾಯಾಂ ಪೃಥಕ್ ಪೃಥಕ್ ॥ ೭೨ ॥

ಜ್ಞಾತ್ವಾ ರಾಮಂ ಮಹಾವಿಷ್ಣುಂ ತಸ್ಯೈವಾಧ್ವರಮಂಡಪೇ ।
ಕೃತ್ವಾ ಚೈಕದಿನಂ ಸ್ವಸ್ವವಾಸಗೇಹೇಷು ಪೂಜನಂ ॥ ೭೩ ॥

ಧ್ವಜಸ್ಯ ಪೂಜನಂ ಗೇಹೇ ನವರಾತ್ರಂ ಸಮಾಚರೇತ್ ।
ಯಥಾಶಕ್ತ್ಯನುಸಾರಂ ವಾ ಚೈಕರಾತ್ರಮಥಾಪಿ ವಾ ॥ ೭೪ ॥

---

೭೧. ಎಲೈ ಶಿಷ್ಯನೆ ! ನೀನು ಕೇಳಿದುದೆಲ್ಲವನ್ನೂ ಹೇಳಿರುವೆನು. ಈ ಧ್ವಜಾರೋಪಣೆಯ ವಿಷಯವನ್ನು ವಿಧಿವತ್ತಾಗಿ ಎಲ್ಲವನ್ನೂ ಹೇಳಿ ಅದರ ಮಹಿಮೆಯನ್ನೂ ಹೇಳಿರುವೆನು.

೭೨. ರಾಜರಾದವರು ಚೈತ್ರಶುದ್ಧ ಪಾಡ್ಯವು ಬಂದುದನ್ನೇ ತಿಳಿದು ಆ ಯಜ್ಞಮಂಟಪದಲ್ಲಿ ದ್ವಿತೀಯೆಯ ದಿನ ಬೇರೆ ಬೇರೆಯಾಗಿ ಧ್ವಜಾರೋಹಣವನ್ನು ಮಾಡಿದರು.

೭೩. ರಾಮನನ್ನೇ ಮಹಾ ವಿಷ್ಣುವನ್ನಾಗಿ ತಿಳಿದು ಅವನ ಮಂಟಪವನ್ನೇ ವಿಷ್ಣುಗೃಹವೆಂದೂ ತಿಳಿದು ತಾವು ತಾವು ಇದ್ದಲ್ಲಿಯೇ ಒಂದೊಂದು ದಿವಸ ಪೂಜೆಯನ್ನು ಮಾಡಿ ಎರಡನೆಯ ದಿವಸವೇ ಧ್ವಜಾರೋಹಣೆಯನ್ನು ಮಾಡಿದರು.

೭೪. ಧ್ವಜವನ್ನು ಮನೆಯಲ್ಲಿ ಒಂಭತ್ತು ರಾತ್ರಿಗಳವರೆಗೂ ಪೂಜಿಸಬೇಕು. ಒಂಭತ್ತು ರಾತ್ರಿಗಳಾಗದಿದ್ದಲ್ಲಿ ಶಕ್ತಿಗನುಗುಣವಾಗಿ ಎರಡು ಮೂರು, ನಾಲ್ಕು, ಐದು, ಆರು, ಏಳು, ಎಂಟುರಾತ್ರಿಗಳು ಪೂಜಿಸಬೇಕು. ಕೊನೆಗೆ ಒಂದು ರಾತ್ರಿಯಾದರೂ ಪೂಜಿಸಬೇಕು.

ಯಜ್ಞೋತ್ಸವದರ್ಶನಾರ್ಥಂ ಕೃತಮೇಕದಿನಂ ನೃಪೈಃ ।
ಚಕಾರ ರಾಘವಶ್ಚಾಪಿ ಪೂರ್ವಮೇವ ಧ್ವಜೋತ್ಸವಂ ॥ ೭೫ ॥

ಮಾಘಮಾಸೇ ಕೃಷ್ಣಪಕ್ಷೇ ಚತುರ್ದಶ್ಯಾಂ ಶಿವಾಗ್ರತಃ ।
ತದಾ ಧ್ವಜೈರುಹೋಚ್ಛ್ರೈಸ್ತೈಶ್ಶುಶುಭೇ ಗಗನಾಂಗಣಂ ॥ ೭೬ ॥

ಇದಂ ಚರಿತ್ರಂ ಪರಮಂ ಮನೋಹರಂ
ಶ್ರೀಮದ್ಧ್ವಜಾರೋಪಣ ವಿಧಾನಸಂಜ್ಞಿತಂ ।
ಪಠಂತಿ ಶೃಣ್ವಂತಿ ನರಾಸ್ಸುಪುಣ್ಯದಂ
ಭವೇಚ್ಚ ತೇಷಾಂ ನಿಯತಂ ವಿಚಿಂತಿತಂ ॥ ೭೭ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಧ್ವಜಾರೋಪವ್ರತಂ
ನಾಮ ಸಪ್ತಮಸ್ಸರ್ಗಸ್ಸಮಾಪ್ತಃ

---

೭೫. ಈ ಯಜ್ಞದಲ್ಲಿದ್ದ ರಾಜರು ಯಜ್ಞದ ಉತ್ಸವವನ್ನು ನೋಡಲು ತೊಂದರೆಯಾಗುವುದೆಂದು ಒಂದೇ ದಿನ ಆ ಧ್ವಜವನ್ನು ಪೂಜಿಸಿದರು. ರಾಘವನು ಮೊದಲೇ ಧ್ವಜಾರೋಹಣವನ್ನು ಮಾಡಿದ್ದನು.

೭೬. ಮಾಘಮಾಸದಲ್ಲಿ ಕೃಷ್ಣಪಕ್ಷದ ಚತುರ್ದಶಿಯ ದಿನ ಶಿವನ ದೇವಸ್ಥಾನದ ಮುಂದೆ ಧ್ವಜಾರೋಹಣವನ್ನು ಮಾಡಿದ್ದನು. ಆಗ ಎತ್ತರವಾಗಿರುವ ಆ ಧ್ವಜಗಳಿಂದ ಗಗನವೆಲ್ಲವೂ ಶೋಭಿಸುತ್ತಿದ್ದಿತು.

೭೭. ಈ ಚರಿತ್ರೆಯು ಬಹು ಮನೋಹರವಾದುದು. ಶುಭವಾದ ಧ್ವಜಾರೋಹಣ ಸಂಜ್ಞೆಯುಳ್ಳ ಈ ಸರ್ಗವನ್ನು ಯಾರು ಓದುತ್ತಾರೆಯೋ ಯಾರು ಕೇಳುತ್ತಾರೆಯೋ ಅವರ ಇಷ್ಟಾರ್ಥಗಳು ಖಂಡಿತವಾಗಿಯೂ ನೆರವೇರುತ್ತವೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಧ್ವಜಾರೋಹಣವೆಂಬ
ಏಳನೆಯ ಸರ್ಗವು ಸಮಾಪ್ತವು.

॥ ಶ್ರೀಃ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ
॥ ಆರನೆಯ ಸರ್ಗದ ಸಾರಾಂಶವು ॥

ಯಾಗದ ಕೊನೆಯ ದಿನದಲ್ಲಿ ಶ್ರೀರಾಮನು ಋತ್ವಿಕ್ಕುಗಳೆಲ್ಲರನ್ನೂ ಗೌರವಿಸಿ ಪೂಜಿಸಿದನು.

ಚೈತ್ರಶುದ್ಧ ಪಾಡ್ಯದ ದಿನ ಆ ಯಾಗಕ್ಕೆ ಬಂದಿದ್ದ ರಾಜರೆಲ್ಲರೂ ಧ್ವಜಾರೋಹಣವನ್ನು ಮಾಡಿದರು. ಈ ಧ್ವಜಾರೋಹಣ ಕರ್ಮವು ಪಾಪಹರವು. ಇದನ್ನು ವ್ರತವನ್ನಾಗಿ ಆಚರಿಸಬೇಕು. ಈ ಧ್ವಜಾರೋಹಣ ವ್ರತವನ್ನು ಮಾಡಿದರೆ ಗಂಗಾಸ್ನಾನಮಾಡಿದ ಪುಣ್ಯಕ್ಕಿಂತ ಹೆಚ್ಚು ಪುಣ್ಯವು ಬರುವುದು.

ಧ್ವಜಾರೋಹಣದ ವ್ರತವು ಬಂದಾಗ ನಾಲ್ಕುಜನ ಬ್ರಾಹ್ಮಣರೊಡನೆ ಪುಣ್ಯಾಹವನ್ನು ಮಾಡಿ ನಾಂದೀಶ್ರಾದ್ಧವನ್ನು ಮಾಡಿ ಎರಡು ಧ್ವಜಸ್ತಂಭಗಳನ್ನು ತಂದು ಅವನ್ನು ಗಾಯತ್ರಿಯಿಂದ ಮಂತ್ರಿಸಬೇಕು. ಅವುಗಳಲ್ಲಿ ಒಂದರ ಪತಾಕೆಯಲ್ಲಿ ಗರುಡನನ್ನೂ ಮತ್ತೊಂದರ ಪತಾಕೆಯಲ್ಲಿ ಆಂಜನೇಯನನ್ನೂ ಬರೆಯಬೇಕು. ಅನಂತರ ತನ್ನ ಗೃಹ್ಯೋಕ್ತ ರೀತಿಯಲ್ಲಿ ಹೋಮಾದಿಗಳನ್ನು ಮಾಡಬೇಕು. ಈ ರೀತಿಯಾಗಿ ಈ ವ್ರತವು ಒಂಭತ್ತು ದಿನಗಳವರೆಗೆ ನಡೆಯತಕ್ಕದ್ದಾಗಿರುವುದು.

ಅನಂತರ ಹತ್ತನೆಯ ದಿನ ವಿಷ್ಣುವಿನ ದೇವಾಲಯಕ್ಕೆ ಹೋಗಿ ಬಾಗಿಲಿನ ಶಿಖರದಲ್ಲಿ ಆ ಧ್ವಜಸ್ತಂಭಕ್ಕೆ ಪತಾಕೆಯನ್ನು ಕಟ್ಟಿ ಎತ್ತಿ ನಿಲ್ಲಿಸಬೇಕು. ಈ ಧ್ವಜಾರೋಹಣಕ್ಕೆ ಕಾಲವು ಬೇರೆ ಬೇರೆಯಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ.

ಎಲ್ಲಾ ದೇವರುಗಳ ಉತ್ಸವಕಾಲಗಳಲ್ಲಿಯೂ ಈ ಧ್ವಜಾರೋಹಣವನ್ನು ಮಾಡಲೇಬೇಕು. ಹೀಗೆಮಾಡಿದರೆ ಅವನ ಪಾಪವೆಲ್ಲವೂ ಹೋಗುವುದು ಧ್ವಜದಲ್ಲಿ ಕಟ್ಟಿರುವ ವಸ್ತ್ರವು ಎಷ್ಟು ದಿನಗಳವರೆಗೆ ಅಲ್ಲಾಡುತ್ತಿರುವುದೋ ಅಷ್ಟು ಸಾವಿರ ಯುಗಗಳವರೆಗೂ ಕರ್ತೃವು ಹರಿಯ ಸಮೀಪದಲ್ಲಿರುತ್ತಾನೆ. ಈ ಧ್ವಜಾರೋಹಣವನ್ನು ನೋಡಿದವರೂ ಕೂಡ ಒಡನೆಯೇ ತಮ್ಮ ಪಾಪಗಳನ್ನು ಕಳೆದುಕೊಳ್ಳುತ್ತಾರೆ.

ಈ ರಾಮನ ಯಾಗಕ್ಕೆ ಎಲ್ಲರೂ ಬಂದಿದ್ದಾಗ ಆ ದಿನವು ಬಂದಿತು. ಆದ್ದರಿಂದ ಇಲ್ಲಿಯೇ ರಾಜರೆಲ್ಲರೂ ಆ ವ್ರತವನ್ನು ಆಚರಿಸಿದರು. ರಾಮನು ಯಾಗದ ಪ್ರಾರಂಭದಲ್ಲಿಯೇ ಈ ಧ್ವಜಾರೋಹಣ ಕರ್ಮವನ್ನು ಮಾಡಿದ್ದನು. ಆಗ ಆ ಯಾಗದಲ್ಲಿ ಅಂತರಿಕ್ಷವೆಲ್ಲವೂ ಧ್ವಜಗಳಿಂದ ತುಂಬಿದ್ದಿತು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

|| ಅಷ್ಟಮಸ್ಸರ್ಗಃ ||

|| ಶ್ರೀ ರಾಮದಾಸ ಉವಾಚ ||

ಅಥ ಚೈತ್ರೇ ಸಿತೇ ಪಕ್ಷೇ ನವಮ್ಯಾಂ ರಾಮಜನ್ಮನಿ |
ತದಾವಭೃಥಸ್ನಾನಾರ್ಥಂ ವಾಜಿಮೇಧಫಲಾಪ್ತಯೇ || ೧ ||

ಚಕಾರ ಸೂಚನಾಂ ರಾಜ್ಞೇ ರಾಘವಾಯ ಗುರುಃ ಸ್ವಯಂ |
ತ್ವರಯಾಮಾಸ ತಂ ರಾಮಂ ರವಿತಾಪಭಯಾನ್ಮುನಿಃ || ೨ ||

ವಸಿಷ್ಠವಚನಂ ಶ್ರುತ್ವಾ ರಾಮೋ ಲಕ್ಷ್ಮಣಮಬ್ರವೀತ್ |
ಅದ್ಯಾವಭೃತಸ್ನಾನಾರ್ಥಮುತ್ಸವೈರ್ಗಮನಂ ಮಮ || ೩ ||

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಎಂಟನೆಯ ಸರ್ಗವು

೧-೨. ಶ್ರೀರಾಮದಾಸನು ಹೇಳಿದನು-ಚೈತ್ರಶುದ್ಧ ನವಮಿಯ ದಿನ ರಾಮನ ಜನ್ಮದಿನದಲ್ಲಿ ಅಶ್ವಮೇಧವು ಪೂರ್ಣವಾಗಲು ಅದರ ಅವಭೃತಸ್ನಾನ ಮಾಡಿ ಫಲವನ್ನು ಹೊಂದಲು ರಾಘವನಿಗೂ, ರಾಜರಿಗೂ, ಗುರುವಾದ ವಸಿಷ್ಠನು ಸೂಚನೆಮಾಡಿದನು. ಮತ್ತು ಬಿಸಿಲು ಹೆಚ್ಚು ಹೆಚ್ಚಾಗುತ್ತಿದ್ದುದರಿಂದ ಬೇಗನೆ ಹೋಗಲು ಅವಸರಪಡಿಸುತ್ತಿದ್ದನು.

೩. ವಸಿಷ್ಠನ ಮಾತನ್ನು ಕೇಳಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ! ಈ ದಿನ ನನಗೆ ಯಾಗದಲ್ಲಿ ಅವಭೃತಸ್ನಾನವಾಗಬೇಕು.

ರಾಮತೀರ್ಥಂ ತ್ವಯಾ ಜ್ಞಾತ್ವಾ ಕರಣೀಯಂ ಮಯೋಚ್ಯತೇ ।
ಆಜ್ಞಾಪನೀಯಾ ರಾಜಾನೋ ನಿಜಸೈನ್ಯೈರ್ಗಜಾದಿಭಿಃ ॥ ೪ ॥

ಸಜ್ಜೀಭೂತಾಸ್ಸಾವರೋಧಾಸ್ತಿಷ್ಠಧ್ವಮಿತಿ ಮಂಟಪೇ ।
ಸಿದ್ಧಂ ಕಾರ್ಯಂ ನಿಜಂ ಸೈನ್ಯಂ ಶಿಬಿಕಾರಥವಾರಣಂ ॥ ೫ ॥

ಅಶ್ವಪತ್ತಿಸಮಾಯುಕ್ತಂ ತುರಗೋಷ್ಟ್ರಗಜೈರ್ಯುತಂ ।
ನವವಾದ್ಯಧ್ವನಿಃ ಕಾರ್ಯಸ್ತೂರ್ಯಾದೀನಾಂ ಸ್ವನೋಽಪಿ ಚ ॥ ೬ ॥

ಪತಾಕಾಶ್ಚ ಧ್ವಜಾಶ್ಚಾಪಿ ತೋರಣಾದಿ ಸಮಂತತಃ ।
ಮುಕ್ತಾಪ್ರವಾಳಪುಷ್ಪಾದಿಹಾರಾಶ್ಚಾಧ್ವರಮಂಟಪಾತ್ ॥ ೭ ॥

೪–೫. ನಾವು ಸ್ನಾನಕ್ಕೆ ಹೋಗಬೇಕಾದುದು ರಾಮತೀರ್ಥಕ್ಕೆ ಅದನ್ನು ತಿಳಿದುಕೊ. ಅದಕ್ಕೆ ಮಾಡಬೇಕಾದುದನ್ನು ನಾನು ಆಜ್ಞಾಪಿಸುತ್ತೇನೆ. ಕೇಳು. ರಾಜರೆಲ್ಲರೂ ಅವರವರ ಸೈನ್ಯದೊಡನೆಯೂ ಅವರ ಸ್ವಜನಗಳೊಡನೆಯೂ ಯಜ್ಞಮಂಟಪದಲ್ಲಿ ಸಿದ್ಧರಾಗಿರಲಿ. ನೀನೂ ಕೂಡ ನಮ್ಮ ಸೈನ್ಯವಾದ ಆನೆ, ಕುದುರೆ, ರಥ, ಒಂಟೆ, ಕಾಲಾಳುಗಳನ್ನು ಸಿದ್ಧಮಾಡು

೬. ಕುದುರೆಯ ರಾಹುತರು ಕುದುರೆಗಳನ್ನು ಸಿದ್ಧಮಾಡಿಕೊಳ್ಳಲಿ. ಆನೆಯ ಮಾವಟಿಗರು ಆನೆಗಳನ್ನು ಸಿದ್ಧಮಾಡಿಕೊಳ್ಳಲಿ. ಒಂಭತ್ತು ಬಗೆಯ ವಾದ್ಯಧ್ವನಿಗಳನ್ನು ಮಾಡಿಸಬೇಕು. ಮೃದುವಾದ ಧ್ವನಿಯನ್ನುಂಟುಮಾಡುವ ವಾದ್ಯಗಳನ್ನು ಧ್ವನಿಮಾಡಬೇಕು.

೭. ಈ ಯಾಗಮಂಟಪದಿಂದ ಮೊದಲುಮಾಡಿಕೊಂಡು ರಾಮತೀರ್ಥದವರೆಗೂ ಪತಾಕೆಗಳನ್ನೂ ಧ್ವಜಗಳನ್ನೂ ಕಟ್ಟಿಸು. ಎಲ್ಲಾ ಕಡೆಗೂ ತೋರಣಗಳನ್ನೂ ಕಟ್ಟಿಸು. ಮುತ್ತು, ಹವಳ, ಹೂಗಳಹಾರಗಳನ್ನು ಅಲ್ಲಲ್ಲಿ ನೇತುಹಾಕಿರುವಂತೆ ಮಾಡು.

ಬಂಧನೀಯಾ ರಾಮತೀರ್ಥಪರ್ಯಂತಂ ಸೈಕತೇಽಪಿ ಚ ।
ಕದಲೀನಾಂ ಮಹಾಸ್ತಂಭಾಶ್ಚೇಕ್ಷುದಂಡಾಸ್ಸಮಂತತಃ ॥ ೮ ॥

ಪುಷ್ಪಾಣಾಂ ವಾಟಿಕಾಶ್ಚಾಪಿ ಮೃತ್ಪಾತ್ರಾದ್ಯಭಿನಿರ್ಮಿತಾಃ ।
ಸ್ಥಾಪನೀಯಾಶ್ಚ ಸರ್ವತ್ರ ನೃತ್ಯಂತು ವಾರಯೋಷಿತಃ ॥ ೯ ॥

ಸೇಚನೀಯೋ ರಾಮತೀರ್ಥಮಾರ್ಗಶ್ಚಂದನವಾರಿಭಿಃ ।
ಪುಷ್ಪೈರಾಚ್ಛಾದನೀಯೋ ಹಿ ಪಟ್ಟಕೂಲಾದಿಭಿಸ್ತಥಾ ॥ ೧೦ ॥

ಅನ್ಯಚ್ಚಾಪಿ ಯಥಾಯೋಗ್ಯಂ ಯನ್ನೋಕ್ತಂ ಚ ಮಯಾ ತವ ।
ತತ್ಕುರುಷ್ವಾವಿಲಂಬೇನ ಮಾಮಪೃಷ್ಟ್ವಾ ವಿಚಾರಿತಂ ॥ ೧೧ ॥

---

೮ ಆ ರಾಮತೀರ್ಥದ ಮರಳಿನಮೇಲೆಯೂ ಕೂಡ ಈ ಅಲಂಕಾರಗಳನ್ನು ಮಾಡಿಸಬೇಕು. ಎಲ್ಲಾ ಕಡೆಯಲ್ಲಿಯೂ ಬಾಳೆಯ ಕಂಬಗಳನ್ನೂ, ಕಬ್ಬಿನ ಜಲ್ಲೆಗಳನ್ನೂ ಕಟ್ಟಿಸು.

೯. ಆ ಮಣ್ಣಿನ ಕುಂಡಗಳಲ್ಲಿ ಹಾಕಿರುವ ಹೂಗಿಡಗಳನ್ನು ಅಲ್ಲಲ್ಲಿ ಒಂಟಿಯಾಗಿಯೂ, ಗುಂಪಾಗಿಯೂ ಇರಿಸಿಸು. ಸೂಳೆಯರು ಎಲ್ಲಾ ಕಡೆಯಲ್ಲಿಯೂ ಕುಣಿಯುತ್ತಿರಲಿ.

೧೦. ಈ ಯಾಗಮಂಟಪದಿಂದ ಮೊದಲುಮಾಡಿಕೊಂಡು ರಾಮತೀರ್ಥದವರೆಗೂ ಮಾರ್ಗಗಳನ್ನು ಸರಿಮಾಡಿಸಿ ಗುಡಿಸಿಸಿ ಚಂದನದ ನೀರನ್ನು ಚುಮುಕಿಸುವಂತೆ ಮಾಡು. ದಾರಿಯಲ್ಲಿ ಉದ್ದಕ್ಕೂ ರಾಮತೀರ್ಥದವರೆಗೂ ನೆಲಕ್ಕೆ ಬಟ್ಟೆಯನ್ನು ಹಾಸಿರಬೇಕು. ಅದರಮೇಲೆ ಹೂವನ್ನು ಹಾಕಿರಬೇಕು.

೧೧. ನಾನು ಹೇಳದಿದ್ದರೂ ಅಲ್ಲಿಗೆ ಯಾವುದು ಹಿತವಾಗಿಯೂ, ರಮ್ಯವಾಗಿಯೂ ಕಾಣುತ್ತಿರುವುದೋ ಅವೆಲ್ಲವನ್ನೂ ಮಾಡಿಸು. ನನ್ನ ಅಪ್ಪಣೆಯಿಲ್ಲದಿದ್ದರೂ ಯೋಚಿಸದೆ ಅವೆಲ್ಲವನ್ನೂ ಮಾಡಿಸು.

ತಥೇತ್ಯುಕ್ತ್ವಾ ಲಕ್ಷ್ಮಣೋಽಪಿ ತಥಾ ಸರ್ವಂ ಚಕಾರ ಸಃ ।
ಅಥ ತೇ ಋತ್ವಿಜಶ್ಚಕ್ರುರ್ಗಮನೇಷ್ಟಿಂ ಸವಿಸ್ತರಂ ॥ ೧೨ ॥

ನಾಜಿನಾಹೇ ರಥೇ ವಹ್ನಿಂ ಪಾತ್ರಾಣಿ ಸ್ಥಾಪ್ಯ ರಾಘವಂ ।
ಸೀತಾಂ ಚಾರೋಪ್ಯ ಸ ಗುರುಶ್ಚಾರುರೋಹರ್ತ್ವಿಜೈಸ್ಸಹ ॥ ೧೩ ॥

ಮುನಯೋ ವೇದಘೋಷಾಂಶ್ಚ ಸರ್ವೇ ಚಕ್ರುಸ್ಸಮಂತತಃ ।
ಸ ಸಮ್ರಾಡ್ರಥಮಾರೂಢಸ್ಸದಶ್ವಂ ರುಕ್ಮಮಾಲಿನಂ ॥ ೧೪ ॥

ಯಯೌ ಶನೈಶ್ಶನೈರ್ಮಾರ್ಗೇ ಮುದಾ ವಂದಿಜನೈಃ ಸ್ತುತಃ ।
ಅಗ್ರೇ ಗಜಾಃ ಪತಾಕಾಭಿರ್ಜಗ್ಮುರಶ್ವಾಸ್ತತಃ ಪರಂ ॥ ೧೫ ॥

---

೧೨. ಇದನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಅಂತೆಯೇ ಎಲ್ಲವನ್ನೂ ಮಾಡಿಸಿದನು. ಅನಂತರ ಋತ್ವಿಕ್ಕುಗಳು ಅವಭೃತ ಸ್ನಾನಕ್ಕೆ ಹೊರಡುವಾಗ ಮಾಡತಕ್ಕ ಗಮನೇಷ್ಟಿಯೆಂಬ ಇಷ್ಟಿಯನ್ನು ಮಾಡಿದರು.

೧೩. ಕುದುರೆಯನ್ನು ಕಟ್ಟಿರುವ ರಥದಮೇಲೆ ಅಗ್ನಿಯನ್ನೂ ಪಾತ್ರೆಗಳನ್ನೂ ಇಟ್ಟುಕೊಂಡು ರಾಮನನ್ನೂ ಸೀತೆಯನ್ನೂ ಕೂರಿಸಿಕೊಂಡು ವಸಿಷ್ಠನು ತಾನೂ ಕುಳಿತನು. ಋತ್ವಿಜರನ್ನೂ ಕೂರಿಸಿಕೊಂಡನು.

೧೪. ಮುನಿಗಳು ಎಲ್ಲಾ ಕಡೆಯಲ್ಲಿಯೂ ವೇದಘೋಷವನ್ನು ಮಾಡುತ್ತಿದ್ದರು. ಚಕ್ರವರ್ತಿಯೂ, ರಾಜಸೂಯ ಯಾಗಮಾಡಿದವನೂ ಆದ ಶ್ರೀರಾಮನು ಒಳ್ಳೆಯ ಕುದುರೆಗಳನ್ನು ಕಟ್ಟಿದ ಚಿನ್ನದ ರಥವನ್ನು ಏರಿದನು.

೧೫. ವಂದಿಗಳು ಸ್ತುತಿಸುತ್ತಿರಲು ನಿಧಾನವಾಗಿ ದಾರಿಯಲ್ಲಿ ಹೋಗುತ್ತಿದ್ದನು. ಎಲ್ಲಕ್ಕಿಂತಲೂ ಮುಂದೆ ಆನೆಗಳು, ಪತಾಕೆಗಳೊಡನೆ ಹೊರಟುವು. ಅದರ ಹಿಂದೆ ಕುದುರೆಗಳು ಹೊರಟುವು.

ತತಸ್ತೇ ತೂರ್ಯಘೋಷಾಣಾಂ ಕರ್ತಾರಸ್ತುರಗಸ್ಥಿತಾಃ |
ತತಸ್ತೇ ರಾಜದೂತಾಶ್ಚ ಚಿತ್ರೋಷ್ಣೀಷಾಸ್ಸ ದಂಡಿನಃ ॥ ೧೬ ॥

ತತೋ ವಂದಿನಟಾದ್ಯಾಶ್ಚ ವಾರಸ್ತ್ರೀಣಾಂ ತತೋ ಗಣಾಃ |
ತತೋ ದೇವಾಸ್ಸಗಂಧರ್ವಾಸ್ತತೋ ರಾಮಸ್ಸಸೀತಯಾ ॥ ೧೭ ॥

ಋತ್ವಿಗ್ಜನೈರ್ಯಯೌ ವಹ್ನಿಸಂಯುತಃ ಸ್ಯಂದನಸ್ಥಿತಃ |
ತತೋ ಮುನೀಶ್ವರಾಸ್ಸರ್ವೇ ಋಷಿಪತ್ನ್ಯಸ್ತತೋ ಯಯುಃ ॥ ೧೮ ॥

ತತಃ ಕ್ಷತ್ರಿಯಪತ್ನ್ಯಾದ್ಯಾಃ ಸ್ತ್ರಿಯಸ್ಸರ್ವಾಶ್ಚನೈರ್ಯಯುಃ |
ತತಸ್ತೇ ಕ್ಷತ್ರಿಯಾಸ್ಸರ್ವೇ ನಾನಾವಾಹನಸಂಸ್ಥಿತಾಃ ॥ ೧೯ ॥

---

೧೬. ಅದರ ಹಿಂದೆ ವಾದ್ಯಗಳನ್ನು ಊದುವವರು ಕುದುರೆಗಳಮೇಲೆ ಕುಳಿತು ಹೊರಟರ. ಅವರ ಹಿಂದೆ ಚಿತ್ರ ಚಿತ್ರವಾದ ರುಮಾಲುಗಳನ್ನು ಹಾಕಿಕೊಂಡು ಕೈಯ್ಯಲ್ಲಿ ಕೋಲುಗಳನ್ನು ಹಿಡಿದಿರುವ ರಾಜದೂತರು ಹೊರಟರು.

೧೭. ಅವರ ಹಿಂದೆ ವಂದಿಗಳು, ನಟರು, ಸೂಳೆಯರು ಇವರ ಗುಂಪು ಹೋಗುತ್ತಿದ್ದಿತು ಅವರ ಹಿಂದೆ ದೇವತೆಗಳೂ, ಗಂಧರ್ವರೂ ಹೋಗುತ್ತಿದ್ದರು. ಅವರ ಹಿಂದೆ ರಾಮನು ಸೀತೆಯೊಡನೆ ಕುಳಿತು ರಥದಲ್ಲಿ ಹೋಗುತ್ತಿದ್ದನು

೧೮. ಆ ರಾಮನ ಜೊತೆಯಲ್ಲಿ ಯಾಗದ ವಹ್ನಿಯೂ, ಯಾಗದ ಪಾತ್ರೆಗಳೂ, ಋತ್ವಿಜರೂ ಕುಳಿತಿದ್ದರು. ಅವರ ಹಿಂದೆ ಋಷಿಗಳ ಗುಂಪು ಹೋಗುತ್ತಲಿದ್ದಿತು. ಅವರ ಹಿಂದೆ ಆ ಋಷಿಗಳ ಪತ್ನಿಯರು ಹೋಗುತ್ತಲಿದ್ದರು.

೧೯. ಅವರ ಹಿಂದೆ ಕ್ಷತ್ರಿಯರ ನಾರಿಯರೂ, ಪೌರನಾರಿಯರೂ ಹೋಗುತ್ತಿದ್ದರು. ಅವರ ಹಿಂದೆ ಕ್ಷತ್ರಿಯರು ಅವರವರಿಗೆ ಇಷ್ಟವಾದ, ಬಗೆ ಬಗೆಯಾದ ವಾಹನಗಳಲ್ಲಿ ಕುಳಿತು ಹೋಗುತ್ತಿದ್ದರು.

ತತಸ್ತೇಷಾಂ ಹಿ ಸೈನ್ಯಾನಿ ತತೋಽನ್ಯೇ ರಾಜಸೇವಕಾಃ ।
ನವವಾದ್ಯಧ್ವನೀನಾಂ ಚ ವಾರಣಾದ್ಯಾಸ್ತತಃ ಪರಂ ॥ ೨೦ ॥

ತತಶ್ಚೋಽಷ್ಟ್ರಾಸ್ತು ಬಾಣಾನಾಂ ಶಕಟಾಶ್ಯಸ್ತ್ರಪೂರಿತಾಃ ।
ಲೋಹಕಾರಾಸ್ತಕ್ಷಕಾಶ್ಚ ಚರ್ಮಕಾದ್ಯಾಸ್ತತಃ ಪರಂ ॥ ೨೧ ॥

ಭೂಮಿಮಾನಪ್ರಕರ್ತಾರೋ ರಜ್ಜುಕುದ್ದಾಲಧಾರಿಣಃ ।
ಯಯುರ್ಯಥಾಕ್ರಮಂ ಸರ್ವೇ ತದೈವಂ ಪರಮೋತ್ಸವೈಃ ॥ ೨೨ ॥

ತದಾ ನಿನೇದುರ್ವಾದ್ಯಾನಿ ನನೃತುರ್ವಾರಯೋಷಿತಃ ।
ಮುನಿಪಾರ್ಥಿವಪತ್ನ್ಯಸ್ತಂ ವವರ್ಷುಃ ಪುಷ್ಪವೃಷ್ಟಿಭಿಃ ॥ ೨೩ ॥

---

೨೦. ಅವರ ಹಿಂದೆ ಅವರ ಸೈನ್ಯಗಳು ಹೋಗುತ್ತಿದ್ದುವು. ಅದರ ಹಿಂದೆ ರಾಜಸೇವಕರು ಹೋಗುತ್ತಿದ್ದರು. ಅವರ ಹಿಂದೆ ನವವಾದ್ಯಧ್ವನಿಗಳನ್ನು ಬಾರಿಸುತ್ತ ಆನೆಯಮೇಲೆ ಕುಳಿತುಕೊಂಡಿರುವವರು ಹೋಗುತ್ತಿದ್ದರು.

೨೧. ಅವರ ಹಿಂದೆ ಗಾಡಿಗಳಲ್ಲಿ ಭಾಣಗಳನ್ನು ತುಂಬಿದ್ದರು. ಅವುಗಳನ್ನು ಒಂಟೆಗಳು ಎಳೆದುಕೊಂಡು ಹೋಗುತ್ತಿದ್ದುವು. ಅದರ ಹಿಂದೆ ಕಮ್ಮಾರರೂ ಮರವನ್ನು ಕೆತ್ತುವವರೂ, ಚಮ್ಮಾರರೂ, ಹೋಗುತ್ತಿದ್ದರು.

೨೨. ಅವರ ಹಿಂದೆ ನೆಲವನ್ನು ಸರಿಮಾಡುವವರು ಹಗ್ಗ ಗುದ್ದಲಿಗಳನ್ನು ತೆಗೆದುಕೊಂಡು ಹೋಗುತ್ತಲಿದ್ದರು. ಈ ರೀತಿಯಾಗಿ ಅವರೆಲ್ಲರೂ ಕ್ರಮವಾಗಿ ಹೋಗುತ್ತಿದ್ದರು. ಈ ಉತ್ಸವವು ಬಹು ರಮ್ಯವಾಗಿದ್ದಿತು.

೨೩. ಆ ಸಮಯದಲ್ಲಿ ವಾದ್ಯಗಳು ಮೊಳಗುತ್ತಿದ್ದುವು. ಸೂಳೆಯರು ಕುಣಿಯುತ್ತಿದ್ದರು. ಮುನಿಗಳ ಹೆಂಗಸರೂ, ರಾಜರ ಹೆಂಡತಿಯರೂ ಆ ರಾಮನಮೇಲೆ ಹೂಮಳೆ ಕರೆಯುತ್ತಿದ್ದರು.

ಮಾರ್ಗೇ ವಂದಿಜನಾದ್ಯಾಶ್ಚ ತುಷ್ಟುವೂ ರಘುನಂದನಂ ।
ಷಡ್ಜಾದಿಸ್ವರರ್ಾ ಗಂಧರ್ವಾಃ ಪ್ರಜಗುಃ ಪಥಿ ತೇ ಮುದಾ ॥ ೨೪ ॥

ಚಕ್ರುಸ್ತೇ ವೇದಘೋಷಾಂಶ್ಚ ಮುನಯಸ್ಸ್ವರಪೂರ್ವಕರ್ಾ ।
ಏವಂ ರಾಮಶ್ಶನೈರ್ಮಾರ್ಗೇ ಕೌತುಕಾನಿ ಸಮಂತತಃ ॥ ೨೫ ॥

ಪಶ್ಯನ್ ಜನಕನಂದಿನ್ಯಾ ಯಯೌ ಚಾಮರವೀಜಿತಃ ।
ತತ್ರ ರಾಮಸ್ಯ ಮಾರ್ಗೇ ಹಿ ಸೀತಾಯಾ ಮುಖಪಂಕಜಂ ॥ ೨೬ ॥

ದ್ರಷ್ಟುಂ ಕೋಲಾಹಲಂ ಚಕ್ರುಸ್ಸಮ್ಮರ್ದಾತ್ಸಕಲಾ ಜನಾಃ ।
ತದಾ ತಾಂಸ್ತಾಡಯಾಮಾಸುಶ್ಶತಶೋ ವೇತ್ರಪಾಣಯಃ ॥ ೨೭ ॥

ವಿಶೇಷೇಣ ತದಾಸೀತ್ಸ ಮಹಾನ್ಕೋಲಾಹಲೋ ದ್ವಿಜ ।
ತತ್ಸರ್ವಂ ರಾಘವೋ ದೃಷ್ಟ್ವಾ ಶ್ರುತ್ವಾ ಚ ಪ್ರಾಹ ಲಕ್ಷ್ಮಣಂ ॥ ೨೮ ॥

---

೨೪. ಮಾರ್ಗದಲ್ಲಿ ಉದ್ದಕ್ಕೂ ವಂದಿಗಳೂ, ಮಾಗಧರೂ ರಾಮನನ್ನು ಸ್ತುತಿಸುತ್ತ ಇದ್ದರು. ಗಂಧರ್ವರು ಷಡ್ಜವೇ ಮುಂತಾದ ಸ್ವರಗಳಿಂದ ಗಾನಮಾಡುತ್ತಿದ್ದರು.

೨೫. ಮುನಿಗಳು ಸ್ವರವನ್ನು ಎತ್ತಿ ಉಚ್ಚರಿಸುತ್ತ ವೇದಘೋಷವನ್ನು ಮಾಡುತ್ತಿದ್ದರು. ರಾಮನು ಮಾರ್ಗದಲ್ಲಿ ಸುತ್ತಲೂ ಆಶ್ಚರ್ಯಗಳನ್ನು ನೋಡುತ್ತ ಚಾಮರದಿಂದ ಬೀಸಿಸಿಕೊಳ್ಳುತ್ತ ಸೀತೆಯೊಡನೆ ನಿಧಾನವಾಗಿ ಹೊರಟನು.

೨೬-೨೭. ಈ ಸಮಯದಲ್ಲಿ ರಾಜಮಾರ್ಗದಲ್ಲಿ ರಾಮನ ಮತ್ತು ಸೀತೆಯ ಮುಖವನ್ನು ನೋಡಲು ಜನಗಳು ಬಹುವಾಗಿ ಗುಂಪುಸೇರಿ ಗಲಭೆಮಾಡಿದರು. ಆಗ ಆ ಬೆತ್ತವನ್ನು ಹಿಡಿದಿದ್ದ ಸೇವಕರು ಅವರನ್ನು ಹೊಡೆಯುತ್ತಿದ್ದರು.

೨೮. ಆ ಸಮಯದಲ್ಲಿ ಅಲ್ಲಿ ಜನಗಳ ನೋಡುವಿಕೆಯ ಆತುರವೂ ಸೇವಕರ ಹೊಡೆತವೂ, ಹೆಚ್ಚಾದುವು. ಅದೆಲ್ಲವನ್ನೂ ರಾಮನು ನೋಡಿದನು. ಅದೇನೆಂದು ಕೇಳಿ ತಿಳಿದುಕೊಂಡು ಲಕ್ಷ್ಮಣನನ್ನು ಕುರಿತು ಇಂತೆಂದನು.

ಏತೇ ಸರ್ವೇ ಪುಷ್ಪಕಸ್ಥಾ ಜನಾಸ್ಸೀತಾಂ ಚ ಮಾಂ ಸುಖಂ ।
ಪಶ್ಯಂತು ಕಲಹೋ ಮಾಸ್ತು ತಥಾಸ್ತ್ವಿತಿ ಸ ಲಕ್ಷ್ಮಣಃ ॥ ೨೯ ॥

ಸರ್ವಾನಾರೋಹಯಾಮಾಸ ಪುಷ್ಪಕೇ ತಾನ್ ಜನಾನ್ಮುದಾ ।
ತತಸ್ತೇ ಪುಷ್ಪಕಾರೂಢಾ ಜನಾ ರಾಮಂ ಮನೋರಮಂ ॥ ೩೦ ॥

ಜಾನಕೀಸಹಿತಂ ಯಾಂತಂ ದದೃಶುಃ ಪಥಿ ವೈ ಶನೈಃ ।
ಕೇಚಿದೂಚುರ್ವಯಂ ಧನ್ಯಾಃ ಪರಿಪೂರ್ಣಮನೋರಥಾಃ ॥ ೩೧ ॥

ಅದ್ಯ ರಾಮಂ ಸಸೀತಂ ಚ ಪಶ್ಯಾಮೋತ್ರ ಮಹೋತ್ಸವೇ ।
ಕೇಚಿದೂಚುಶ್ಚ ತೌ ಧನ್ಯೌ ಪಿತರೌ ನಸ್ಸುಜನ್ಮದೌ ॥ ೩೨ ॥

ಯಯೋಃ ಪುಣ್ಯಚಯೈರದ್ಯ ನಸ್ಸೀತಾರಾಮದರ್ಶನಂ ।
ಏವಂ ಗಚ್ಛತಿ ಶ್ರೀರಾಮೇ ಸ್ತ್ರಿಯಸ್ಸರ್ವಾಃ ಪರಸ್ಪರಂ ॥ ೩೩ ॥

---

೨೯. ಎಲೈ ಲಕ್ಷ್ಮಣನೇ! ಈ ಜನಗಳು ಪುಷ್ಪಕದಲ್ಲಿ ಹತ್ತಿಕೊಂಡು ಸೀತೆಯನ್ನೂ, ನನ್ನನ್ನೂ ಸುಖವಾಗಿ ನೋಡಲಿ. ಜಗಳವಾಗಲಿ, ಹೊಡೆಯುವು ದಾಗಲಿ ಬೇಡಿರಿ. ಎಂದು ಹೇಳಿದನು.

೩೦-೩೧. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಆ ಜನಗಳೆಲ್ಲರನ್ನೂ ಪುಷ್ಪಕವಿಮಾನಕ್ಕೆ ಹತ್ತಿಸಿದನು. ಆಗ ಅವರೆಲ್ಲರೂ ಪುಷ್ಪಕಕ್ಕೆ ಹತ್ತಿ ರಾಮನನ್ನೂ ಸೀತೆಯನ್ನೂ ಮೆಲ್ಲ ಮೆಲ್ಲಗೆ ಹೋಗುತ್ತ ನೋಡುತ್ತಲಿದ್ದರು.

೩೨. ಅವರಲ್ಲಿ ಕೆಲವರು ಈ ಮಹೋತ್ಸವದಲ್ಲಿ ರಾಮನನ್ನೂ ಸೀತೆಯನ್ನೂ, ನಾವು ನೋಡುತ್ತಿರುವೆವಲ್ಲ! ನಾವೇ ಧನ್ಯರು. ಪರಿಪೂರ್ಣ ಮನೋರಥರು. ಎನ್ನುತ್ತಿದ್ದರು. ಕೆಲವರು ನಮಗೆ ಈ ಜನ್ಮವನ್ನು ಕೊಟ್ಟ ತಾಯಿತಂದೆಗಳು ಧನ್ಯರು ಎನ್ನುತ್ತಿದ್ದರು.

೩೩. ಆ ತಾಯಿತಂದೆಯರ ಪುಣ್ಯವಿಶೇಷದಿಂದಲೇ ನಮಗೆ ಈಗ ರಾಮನ ದರ್ಶನವಾಗುತ್ತಿರುವುದು ಎನ್ನುತ್ತಿದ್ದರು. ರಾಮನು ಹೀಗೆ ಹೋಗುತ್ತಿರಲು ಹೆಂಗಸರೆಲ್ಲರೂ ಒಟ್ಟುಸೇರಿ ಮಾತನಾಡಿಕೊಂಡು ತಾವೂ ಪುಷ್ಪಕದಲ್ಲಿ ಕುಳಿತುಕೊಳ್ಳಬೇಕೆಂದು ನಿರ್ಧರಿಸಿದರು.

ಸಂಮಂತ್ರ್ಯ ಪುಷ್ಪಕೇ ಸ್ಥಾತುಂ ಪ್ರಾರ್ಥಯಂತಿ ಸ್ಮ ಜಾನಕೀಂ ।
ತದಾ ಸಾ ಜಾನಕೀ ಪ್ರಾಹ ಲಕ್ಷ್ಮಣಂ ಪುರತಃ ಸ್ಥಿತಂ ॥ ೩೪ ॥

ಸ್ತ್ರಿಯಸ್ಸರ್ವಾಸ್ತ್ವಯಾ ಶೀಘ್ರಂ ನಾರೀಶಾಲಾಸು ಪುಷ್ಪಕೇ ।
ಆರೋಹಣೀಯಾ ಮೇ ವಾಕ್ಯಾತ್ಪ್ರಾರ್ಥಯಂತ್ವತ್ರ ಮಾಂ ಮುಹುಃ॥ ೩೫ ॥

ಲಕ್ಷ್ಮಣೋಽಪಿ ತಥೇತ್ಯುಕ್ತ್ವಾ ತಾಃ ಸ್ತ್ರೀಸ್ಸರ್ವಾಶ್ಚ ಪುಷ್ಪಕೇ ।
ತ್ವರಯಾರೋಹಯಾವಾಸ ಸ್ತ್ರೀಶಾಲಾಸು ಯಥಾಸುಖಂ ॥ ೩೬ ॥

ತತಸ್ತಾಃ ಪುಷ್ಪಕಾರೂಢಾಸ್ತ್ಯಣಜಾಲಪಟಾಂತರೈಃ ।
ದದೃಶುಸ್ಸೀತಯಾ ರಾಮಂ ವವರ್ಷುಃ ಪುಷ್ಪವೃಷ್ಟಿಭಿಃ ॥ ೩೭ ॥

ಮೃದಂಗಶಂಖಪಣವಧುಂಧುಭ್ಯಾನಕಗೋಮುಖಾಃ ।
ವಾದಿತ್ರಾಣಿ ವಿಚಿತ್ರಾಣಿ ನೇದುಶ್ಚಾವಭೃಥೋತ್ಸವೇ ॥ ೩೮ ॥

---

೩೪. ಅದೇ ರೀತಿಯಾಗಿ ಕುಳಿತುಕೊಳ್ಳಲು ಜಾನಕಿಯನ್ನು ಪ್ರಾರ್ಥಿಸಿದರು. ಆಗ ಜಾನಕಿಯು ಎದುರಿನಲ್ಲಿರುವ ಲಕ್ಷ್ಮಣನನ್ನು ಕುರಿತು ಇಂತೆಂದಳು.

೩೫. ಎಲೈ ಲಕ್ಷ್ಮಣನೇ ! ಈ ಹೆಂಗಸರನ್ನೆಲ್ಲಾ ಪುಷ್ಪಕ ವಿಮಾನದಲ್ಲಿರುವ ನಾರಿಶಾಲೆಗೆ ಹತ್ತಿಸು. ನನ್ನನ್ನು ಮತ್ತೆ ಇವರು ಬಂದು ಪ್ರಾರ್ಥಿಸಬಾರದು ಹಾಗೆ ಏರ್ಪಡಿಸು. ಎಂದಳು.

೩೬. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಆ ಹೆಂಗಸರನ್ನೆಲ್ಲಾ ಪುಷ್ಪಕದಲ್ಲಿ ಅವಸರದಿಂದ ಹತ್ತಿಸಿದನು. ಅವರೆಲ್ಲರೂ ಆ ಸ್ತ್ರೀಶಾಲೆಯಲ್ಲಿ ಹೋಗಿ ಸುಖವಾಗಿ ಕುಳಿತರು

೩೭. ಆಗ ಅವರೆಲ್ಲರೂ ಪುಷ್ಪಕದಲ್ಲಿ ಕುಳಿತು ಜಾಲರಿ ತಡಿಕೆಗಳ ಸಂದಿಗಳಿಂದ ಕಿಟಕಿಗಳಲ್ಲಿ ಸೀತಾರಾಮರನ್ನು ನೋಡುತ್ತ ಪುಷ್ಪವೃಷ್ಟಿಯನ್ನು ಸುರಿಸಿದರು.

೩೮. ಮೃದಂಗ, ಶಂಖ, ತಮಟೆ, ರಮಡೋಲು, ಜಿಲ್ಲರಿ, ಗೋಮುಖ, ಮುಂತಾದ ವಿಚಿತ್ರವಾದ ವಾದ್ಯಗಳು ಆ ಅವಭೃತೋತ್ಸವದಲ್ಲಿ ಮೊಳಗಿದುವು.

ನರ್ತಕ್ಯೋ ನನೃತುರ್ಹೃಷ್ಟಾ ಗಾಯಕಾ ಯೂಥಶೋ ಜಗುಃ ।
ವೀಣಾವೇಣುತಲೋನ್ನಾದಸ್ತೇಷಾಂ ಸ ದಿವಮಸ್ಪೃಶತ್ ॥ ೩೯ ॥

ಚಿತ್ರಧ್ವಜಪತಾಕಾಗ್ರೈರಿಭೇಂದ್ರಸ್ಯಂದನಾರ್ವಭಿಃ ।
ಸ್ವಲಂಕೃತೈರ್ಭಟೈರ್ಭೂಪಾ ನಿರ್ಯಯೂ ರುಕ್ಮಮಾಲಿನಃ ॥ ೪೦ ॥

ಯದುಸೃಂಜಯಕಾಂಭೋಜಕುರುಕೈಕೆಯಕೋಸಲಾಃ ।
ಕಂಪಯಂತೋ ಭುವಂ ಸೈನ್ಯೈರ್ಯಜಮಾನಪುರಸ್ಸರಾಃ ॥ ೪೧ ॥

ಸದಸ್ಯರ್ತ್ವಿಕ್‌ದ್ವಿಜಶ್ರೇಷ್ಠಾ ಬ್ರಹ್ಮಘೋಷೇಣ ಭೂಯಸಾ ।
ದೇವರ್ಷಿಪಿತೃಗಂಧರ್ವಾಸ್ತುಷ್ಟುವುಃ ಪುಷ್ಪವೃಷ್ಟಿಭಿಃ ॥ ೪೨ ॥

---

೩೯. ನರ್ತಕಿಯರು ಸಂತೋಷದಿಂದ ಕುಣಿಯುತ್ತಿದ್ದರು. ಹಾಡುವವರು ಗುಂಪುಕಟ್ಟಿಕೊಂಡು ಹಾಡುತ್ತಿದ್ದರು. ವೀಣೆಕೊಳಲು ಇವುಗಳ ಧ್ವನಿಯು ಸ್ವರ್ಗವನ್ನು ಮುಟ್ಟಿತು.

೪೦. ಚಿತ್ರವಾದ ಧ್ವಜ, ಪತಾಕೆಗಳಿಂದ ಕೂಡಿರುವ ಆನೆ, ಕುದುರೆ, ರಥಗಳಮೇಲೆ ಕುಳಿತುಕೊಂಡು ರಾಜರು ಅಲಂಕೃತರಾದ ಭಟರಿಂದ ಸುತ್ತುವರಿಯಲ್ಪಟ್ಟು ಒಳ್ಳೆಯ ಹಾರವನ್ನು ಹಾಕಿಕೊಂಡು ಹೊರಟರು.

೪೧. ಯದು, ಸೃಂಜಯ, ಕಾಂಭೋಜ, ಕುರು, ಕೈಕಯ, ಕೋಸಲ ಇವೇ ಮುಂತಾದ ದೇಶದ ರಾಜರು ತಮ್ಮ ಸೈನ್ಯಗಳಿಂದ ಭೂಮಿಯನ್ನು ನಡುಗಿಸುತ್ತ ಯಜಮಾನನಾದ ರಾಮನನ್ನು ಮುಂದುಮಾಡಿಕೊಂಡು ಹೋಗುತ್ತಿದ್ದರು.

೪೨. ಸದಸ್ಯರು, ಋತ್ವಿಕ್ಕುಗಳು, ಮುನಿಗಳು, ಋಷಿಗಳು, ಪಿತೃಗಳು, ಗಂಧರ್ವರು, ಇವರೆಲ್ಲರೂ ವೇದವನ್ನು ಹೇಳುತ್ತ ರಾಮನನ್ನು ಹೊಗಳಿದರು. ಮತ್ತು ಅವನಮೇಲೆ ಹೂಗಳನ್ನು ಎರಚಿದರು.

ಸ್ವಲಂಕೃತಾ ನರಾ ನಾರ್ಯೋ ಗಂಧಸ್ರಗ್ಭೂಷಣಾಂಬರೈಃ ।
ವಿಲಿಂಪತ್ಯೋಽಭಿಷಿಂಚಂತ್ಯೋ ವಿಜಹುರ್ವಿವಿಧೈರಸೈಃ ॥ ೪೩ ॥

ತೈಲಗೋರಸಗಂಧೋದಹರಿದ್ರಾಸಾಂದ್ರಕುಂಕುಮೈಃ ।
ಪುಂಭಿರ್ಲಿಪ್ತಾಃ ಪ್ರಲಿಂಪಂತ್ಯೋ ವಿಜಹ್ರುರ್ವಾರಯೋಷಿತಃ ॥ ೪೪ ॥

ಏವಂ ನಾನಾಸಮುತ್ಸಾಹೈಃ ಶ್ರೀರಾಮಶ್ಚ ಸಸೀತಯಾ ।
ಪಶ್ಯನ್ನಾನಾಕೌತುಕಾನಿ ಸ್ಯಂದನೇನ ಶನೈಶ್ಶನೈಃ ॥ ೪೫ ॥

ಅಗಮತ್ಸರಯೂತೀರೇ ರಾಮತೀರ್ಥಂ ಶುಭಾವಹಂ ।
ಅವರುಹ್ಯ ರಥಾದ್ರಾಮಸ್ಸೀತಯಾ ಸರಯೂಜಲೇ ॥ ೪೬ ॥

---

೪೩. ಹೆಂಗಸರು ಮತ್ತು ಗಂಡಸರು ಗಂಧ, ಹೂಮಾಲೆ, ಒಡವೆಗಳಿಂದ ಅಲಂಕಾರಮಾಡಿಕೊಂಡು ಬೆಡಗನ್ನು ಬೀರುತ್ತ ನಾನಾ ಬಗೆಯ ವಾಸನೆಯುಳ್ಳ ರಸಗಳಿಂದ ಅಭಿಷೇಕಮಾಡಿಕೊಳ್ಳುತ್ತ ಎರಚಾಡುತ್ತಲಿದ್ದರು.

೪೪. ಸೂಳೆಯರು ಸುವಾಸನೆಯುಳ್ಳ ತೈಲ, ತುಪ್ಪ, ಗಂಧದ ನೀರು, ಅರಸಿನ, ಕುಂಕುಮಗಳ ದಟ್ಟವಾದ ರಸ, ಇವುಗಳನ್ನು ಗಂಡಸರ ಕೈಯಿಂದ ಬಳಿಸಿಕೊಳ್ಳುತ್ತ ತಾವೂ ಬಳಿದುಕೊಳ್ಳುತ್ತಾ ದಾರಿಯಲ್ಲಿ ಆಟವಾಡಿದರು.

೪೫. ಇವೇ ಮುಂತಾದ ಸಂತೋಷಕರವಾದ ಚೇಷ್ಟೆಗಳು ನಡೆಯುತ್ತಿರಲು ರಾಮನು ಇವೆಲ್ಲವನ್ನೂ ನೋಡುತ್ತ ರಥದಲ್ಲಿ ಕುಳಿತು ನಿಧಾನವಾಗಿ ಹೋಗುತ್ತಿದ್ದನು.

೪೬. ಹೀಗೆ ಹೋಗುತ್ತ ಸರಯೂತೀರದ ರಾಮತೀರ್ಥವನ್ನು ತಲಪಿದರು. ಅಲ್ಲಿ ರಥದಿಂದ ರಾಮನೂ, ಸೀತೆಯೂ ಇಳಿದು ಸರಯೂನದಿಯ ನೀರಿನ ದಡಕ್ಕೆ ಹೋದರು.

ಸ ಚಕಾರ ಜಲೇಷ್ಟಿಂ ತೈರ್ಋತ್ವಿಗ್ಭಿಃ ಪರಿವಾರಿತಃ ।
ಪತ್ನೀಸಂಯಾಜಾವಭೃಥೈಶ್ಚರಿತ್ವಾ ತೇ ತಮೃತ್ವಿಜಃ ॥ ೪೭ ॥

ಸರ್ವೇ ರಾಮಹ್ರದೇ ವಿಪ್ರಾ ಯಜಮಾನಪುರಸ್ಸರಾಃ ।
ಆಚಾಂತಂ ಸ್ನಾಪಯಾಂಚಕ್ರುಸ್ಸರಯ್ವಾಂ ಸಹ ಸೀತಯಾ ॥ ೪೮ ॥

ಶತ್ರುಘ್ನೇನ ಪುರಾನೀತೈರ್ನಾನಾತೀರ್ಥೈರ್ಜಲೈಸ್ತದಾ ।
ರಾಮಾಭಿಷೇಕಂ ತೇ ಚಕ್ರುಃ ಮುದಾ ಮಂತ್ರೈರ್ಮುನೀಶ್ವರಾಃ ॥ ೪೯ ॥

ದೇವದುಂದುಭಯೋ ನೇದುರ್ನರದುಂದುಭಿಭಿಸ್ಸಮಂ ।
ಮುಮುಚುಃ ಪುಷ್ಪವರ್ಷಾಣಿ ದೇವರ್ಷಿಪಿತೃಮಾನವಾಃ ॥ ೫೦ ॥

---

೪೭. ಅಲ್ಲಿ ಶ್ರೀರಾಮನು ಋತ್ವಿಕ್ಕುಗಳೊಡನೆ ಕೂಡಿಕೊಂಡು ಜಲೇಷ್ಟಿಯನ್ನು ಮಾಡಿದನು. ಪತ್ನಿಸಂಯಾಜ ಅವಭೃತ ಮಂತ್ರಗಳಿಂದ ಋತ್ವಿಕ್ಕುಗಳು ವಿಧಿಯನ್ನಾಚರಿಸಿ ಸ್ನಾನಮಾಡಿದರು.

೪೮. ಆ ರಾಮತೀರ್ಥದಲ್ಲಿ ಯಜಮಾನನನ್ನು ಮುಂದುಮಾಡಿಕೊಂಡು ಬಂದು ಋತ್ವಿಕ್ಕುಗಳು ರಾಮನಿಂದ ಆಚಮನಾದಿಗಳನ್ನು ಮಾಡಿಸಿ ಸರಯೂ ನದಿಯಲ್ಲಿ ಸ್ನಾನಮಾಡಿಸಿದರು.

೪೯. ಅನಂತರ ಶತ್ರುಘ್ನನು ದಿಗ್ವಿಜಯಕ್ಕೆ ಹೋದಾಗ ತಂದಿದ್ದ ನಾನಾ ಬಗೆಯಾದ ತೀರ್ಥಗಳ ನೀರಿನಿಂದ ಆ ಬ್ರಾಹ್ಮಣರೆಲ್ಲರೂ ರಾಮ ಸೀತೆಯರಿಗೆ ಅಭಿಷೇಕಮಾಡಿದರು.

೫೦. ಆಗ ವಾದ್ಯಗಾರರು ವಾದ್ಯಗಳನ್ನು ಮಾಡಿದರು. ದೇವ ದುಂದುಭಿಗಳು ಒಂದೇ ಸಮನೆ ಒಂದೇ ಸಾರಿ ಧ್ವನಿಮಾಡಿದುವು. ದೇವತೆಗಳೂ, ಪಿತೃಗಳೂ, ಮಾನವರೂ ಪುಷ್ಪವೃಷ್ಟಿಯನ್ನು ಸುರಿಸಿದರು.

ಸಸ್ನುಸ್ತತ್ರ ತತಸ್ಸರ್ವೇ ವರ್ಣಾಶ್ರಮಯುತಾ ನರಾಃ ।
ಮಹಾಪಾತಕಿನಶ್ಚಾಪಿ ಸ್ನಾತ್ವಾ ಮುಕ್ತ್ವಾ ಸ್ವಪಾತಕಾತ್ ॥ ೫೧ ॥

ಅಥ ರಾಮೋಽಹತೇ ಕ್ಷೌಮೇ ಪರಿಧಾಯ ಸ್ವಲಂಕೃತಃ ।
ಶುಶುಭೇ ನಿತರಾಂ ದಿವ್ಯಕಂಕಣಾಭ್ಯಾಂ ಸುಮಂಡಿತಃ ॥ ೫೨ ॥

ಕೇಯೂರಾಭ್ಯಾಂ ಕುಂಡಲಾಭ್ಯಾಂ ಮುಕ್ತಾಹಾರೈರ್ವಿಚಿತ್ರಿತೈಃ ।
ನಾನಾಪ್ರಸೂನಹಾರೈಶ್ಚ ರತ್ನಾನಾಂ ನೂಪುರಾದಿಭಿಃ ॥ ೫೩ ॥

ಹೃದಿ ಚಿಂತಾಮಣಿಯುತಃ ಕಂಠೇ ಕೌಸ್ತುಭಮಂಡಿತಃ ।
ಚಿಂತಾಮಣಿ ಕೌಸ್ತುಭಯೋಃ ಪ್ರಭಯಾ ದೀಪಿತೋದರಃ ॥ ೫೪ ॥

---

೫೧. ಅನಂತರ ವರ್ಣಾಶ್ರಮಿಗಳೆಲ್ಲರೂ ಆ ನೀರಿನಲ್ಲಿ ಸ್ನಾನಮಾಡಿದರು. ಮಹಾಪಾತಕಿಗಳೂ ಕೂಡ ಅದರಲ್ಲಿ ಸ್ನಾನಮಾಡಿ ತಮ್ಮ ಪಾಪದಿಂದ ಮುಕ್ತರಾದರು.

೫೨. ಅನಂತರ ರಾಮನು ಒಳ್ಳೆಯ ರೇಷ್ಮೆಯ ಮಗುಟವನ್ನು ಧರಿಸಿಕೊಂಡನು. ಅಲಂಕಾರಗಳನ್ನು ಮಾಡಿಕೊಂಡನು. ಕಂಕಣವು ಬಾಹು ಸೌಂದರ್ಯವನ್ನು ಕೊಡುತ್ತಿದ್ದಿತು.

೫೩. ಭುಜಕೀರ್ತಿಗಳನ್ನೂ, ಕುಂಡಲಗಳನ್ನೂ, ಮುತ್ತಿನ ಹಾರಗಳನ್ನೂ ಹಾಕಿಕೊಂಡು ವಿಧವಿಧವಾದ ಹೂಗಳುಳ್ಳ ಹೂವಿನ ಹಾರವನ್ನು ಹಾಕಿಕೊಂಡಿದ್ದನು. ರತ್ನಗಳನ್ನು ಸೇರಿಸಿರುವ ಕಾಲುಬಳೆಗಳನ್ನು ಹಾಕಿಕೊಂಡಿದ್ದನು.

೫೪. ಎದೆಯಮೇಲೆ ಚಿಂತಾಮಣಿ ರತ್ನವು ಹೊಳೆಯುತ್ತಿದ್ದಿತು. ಕಂಠದಲ್ಲಿ ಕೌಸ್ತುಭಮಣಿಯು ಪ್ರಕಾಶಿಸುತ್ತಿದ್ದಿತು. ಚಿಂತಾಮಣಿ ಕೌಸ್ತುಭಗಳ ಹೊಳಪಿನಿಂದ ರಾಮನು ಪ್ರಕಾಶಿಸುತ್ತಿದ್ದನು.

ಕೋಟಿಸೂರ್ಯಪ್ರತೀಕಾಶಸ್ಸಿಕತಾಯಾಂ ವರಾಸನೇ ।
ತಸ್ಥೌ ಜನಕನಂದಿನ್ಯಾ ಋತ್ವಿಗ್ಭಿಃ ಪರಿವೇಷ್ಟಿತಃ ॥ ೫೫ ॥

ಅಥರ್ತ್ವಿಗ್ಭ್ಯೋದದಾತ್ಕಾಲೇ ಯಥಾವ್ನಾಯಂ ಸ ದಕ್ಷಿಣಾಃ
ಸ್ವಲಂಕೃತೇಭ್ಯೋಲಂಕೃತ್ಯ ಗೋಭೂತುರಗವಾರಣಾ ॥ ೫೬ ॥

ಕಾಮಧೇನುಮಲಂಕೃತ್ಯ ಗುರುಂ ದಾತುಂ ಸಮುದ್ಯತಃ ।
ತತ್ ಜ್ಞಾತ್ವಾ ಚಿಂತಯಾಮಾಸ ವಸಿಷ್ಠಸ್ಸ ಸ್ವ ಚೇತಸಿ ॥ ೫೭ ॥

ಅಸ್ತಿ ಮಾಂ ನಂದಿನೀ ನಾಮ್ನಾ ಕಾಮಧೇನುಸುತಾಸುತಾ ।
ನಾಸ್ಯಾಃ ಪ್ರಯೋಜನಂ ಮೇದ್ಯ ಹ್ಯತ್ರಾಪೂರ್ವಂ ಕರೋಮ್ಯಹಂ ॥ ೫೮ ॥

ಅಸ್ಯೈವಾಸ್ತು ಕಾಮಧೇನುರಸ್ಯೈ ಯೋಗ್ಯೋ ರಘೂತ್ತಮಃ ।
ಏನಾಂ ತ್ಯಕ್ತ್ವಾ ತು ರಾಮಸ್ಯ ಕೀರ್ತ್ಯರ್ಥಂ ಜಗತೀತಲೇ ॥ ೫೯ ॥

---

೫೫. ಇದರಿಂದ ಕೋಟಿ ಸೂರ್ಯರಂತೆ ಪ್ರಕಾಶಿಸುತ್ತ ಆ ಮರಳಿನಮೇಲೆ ರಾಮನು ಸೀತೆಯೊಡನೆಯೂ, ಋತ್ವಿಜರೊಡನೆಯೂ ಕುಳಿತಿದ್ದನು.

೫೬. ರಾಮನು ಆ ಕಾಲದಲ್ಲಿ ಸ್ನಾನವಾದಮೇಲೆ ಋತ್ವಿಕ್ಕುಗಳನ್ನು ಅಲಂಕರಿಸಿ ಗೋವು, ಭೂಮಿ, ಕುದುರೆ, ಆನೆಗಳನ್ನು, ದಾನವಾಗಿ ಕೊಟ್ಟು ದಕ್ಷಿಣೆಗಳನ್ನು ಕೊಟ್ಟನು.

೫೭. ಕಾಮಧೇನುವಿಗೂ ಅಲಂಕರಿಸಿ ಅದನ್ನು ಗುರುವಿಗೆ ದಾನಮಾಡಲು ಪ್ರಯತ್ನಪಟ್ಟನು. ಇದನ್ನು ನೋಡಿ ವಸಿಷ್ಠನು ತನ್ನ ಮನಸ್ಸಿನಲ್ಲಿಯೇ ಇಂತೆಂದು ಯೋಚಿಸಿದನು.

೫೮. ನನ್ನ ಬಳಿಯಲ್ಲಿ ಕಾಮಧೇನುವಿನ ಮಮ್ಮಗಳಾದ ನಂದಿನಿಯೆಂಬ ಧೇನುವು ಇರುವುದು. ಈ ಕಾಮಧೇನುವಿನಿಂದ ನನಗೆ ಪ್ರಯೋಜನವಿಲ್ಲ. ಇಲ್ಲಿ ಒಂದು ಅಪೂರ್ವ ವಿಷಯವನ್ನು ನಡೆಸುತ್ತೇನೆ.

೫೯–೬೦. ಕಾಮಧೇನುವು ಈ ರಾಮನಿಗೇ ಇರಲಿ. ಈ ಕಾಮಧೇನುವಿಗೆ ರಾಮನೇ ಯೋಗ್ಯನಾಗಿರುವನು. ಈ ಕಾಮಧೇನುವನ್ನು ಕೇಳದೆ ಬಿಟ್ಟು

ಯಾಚಾಮ್ಯಹಂ ಶುಭಾಂ ಸೀತಾಂ ಸಾಲಂಕಾರಾಂ ಸದಕ್ಷಿಣಾಂ ।
ಔದಾರ್ಯಂ ರಾಘವಸ್ಯಾದ್ಯ ದರ್ಶಯಿಷ್ಯಾಮ್ಯಹಂ ಜನಾನ್ ॥ ೬೦ ॥

ಇತಿ ನಿಶ್ಚಿತ್ಯ ಸ ಗುರುಸ್ತದಾ ಪ್ರಾಹ ರಘೂತ್ತಮಂ ।
ಕರೋಷಿ ಕಿಂ ಧೇನುದಾನಂ ತೇನ ತೃಪ್ತಿರ್ನ ಮೇ ಭವೇತ್ ॥ ೬೧ ॥

ಯದಿ ದಾಸ್ಯಸಿ ದೇಯಾ ಮೇ ಸೀತಾಽಲಂಕಾರಮಂಡಿತಾ ।
ತಯಾ ತೃಪ್ತಿರ್ಭವೇನ್ಮೇಽದ್ಯ ನಾನ್ಯೈರ್ನಾರೀಶತೈರಪಿ ॥ ೬೨ ॥

ತಸ್ಮ್ಯನೇರ್ವಚನಂ ಶ್ರುತ್ವಾ ವಸಿಷ್ಠಸ್ಯ ಜನಾಸ್ತದಾ ।
ಹಾಹಾಕಾರಂ ಮುಹಚ್ಚಕ್ರುಃ ವಿಷಣ್ಣಾ ಭಯವಿಹ್ವಲಾಃ ॥ ೬೩ ॥

ಬಿಟ್ಟು ಈ ರಾಮನಿಗೆ ಜಗತ್ತಿನಲ್ಲಿ ಕೀರ್ತಿಯನ್ನುಂಟುಮಾಡುವುದಕ್ಕೋಸ್ಕರ ಸಾಲಂಕೃತಳಾದ ಸೀತೆಯನ್ನು ದಕ್ಷಿಣೆಯೊಡನೆ ಕೊಡು ಎಂದು ಕೇಳುವೆನು. ರಾಘವನಿಗೆ ಎಷ್ಟರಮಟ್ಟಿನ ಔದಾರ್ಯವಿದೆ ಎಂಬುದನ್ನು ನಾನು ಈಗ ಈ ಜನಗಳಿಗೆ ತೋರಿಸುತ್ತೇನೆ.

೬೧. ಆ ಗುರುವು ಹೀಗೆಂಬುದಾಗಿ ನಿಶ್ಚಯಿಸಿಕೊಂಡು ಎಲೈ ರಾಮನೇ ! ನನಗೆ ಕಾಮಧೇನುವನ್ನು ದಾನವನ್ನು ಮಾಡಬೇಕೆಂದಿರುವೆಯಾ? ಅದರಿಂದ ನನಗೆ ತೃಪ್ತಿಯುಂಟಾಗುವುದಿಲ್ಲ.

೬೨. ನೀನು ನನಗೆ ದಾನವನ್ನು ಮಾಡಬೇಕೆಂದಿದ್ದರೆ ಸೀತೆಯನ್ನು ಅಲಂಕರಿಸಿ ದಕ್ಷಿಣೆಯೊಡನೆ ದಾನವನ್ನು ಮಾಡು. ಅದರಿಂದ ನನಗೆ ತೃಪ್ತಿಯುಂಟಾಗುತ್ತದೆ. ಇವಳಂತಹ ನೂರಾರು ಹೆಂಗಸರನ್ನು ಕೊಟ್ಟರೂ ನನಗೆ ಅಷ್ಟು ತೃಪ್ತಿಯುಂಟಾಗುವುದಿಲ್ಲ. ಎಂದನು.

೬೩. ವಸಿಷ್ಠನ ಈ ಮಾತನ್ನು ಕೇಳಿ ಅಲ್ಲಿದ್ದ ಜನರೆಲ್ಲರೂ ದುಃಖದಿಂದಲೂ ಭಯದಿಂದಲೂ ಬಹುವಾಗಿ ಹಾಹಾಕಾರವನ್ನು ಮಾಡಿದರು.

ಕೇಚಿದೂಚುರ್ವಸಿಷ್ಠೋಽಯಂ ಕಿಂ ಭ್ರಾಂತೋ ಜರಠೋದ್ಯ ಹಿ |
ಕೇಚಿದೂಚುರ್ವಿನೋದೋಽಯಂ ಕೃತೋಽಸ್ತಿ ಮುನಿನಾತ್ರ ಹಿ || ೬೪ ||

ಕೇಚಿದೂಚೂ ರಾಘವಸ್ಯ ಧೈರ್ಯಂ ಪಶ್ಯತ್ಯಯಂ ಮುನಿಃ |
ಕೇಚಿದೂಚೂ ರಾಘವೋದ್ಯ ಕಿಂ ಕರಿಷ್ಯತಿ ಪಶ್ಯತಾಂ || ೬೫ ||

ಏತಸ್ಮಿನ್ನಂತರೇ ರಾಮಶ್ಶ್ರುತ್ವಾ ತಚ್ಚ ಗುರೋರ್ವಚಃ |
ಪ್ರಹಸ್ಯ ಸಂಜ್ಞಯಾ ಸೀತಾಮಾಹೂಯ ಗುರುಸನ್ನಿಧೌ || ೬೬ ||

ಸೀತಾಯಾಃ ಸ್ವಕರೇಣೈವ ಧೃತ್ವಾ ವಾಮಕರಂ ಮುದಾ |
ಸಭಾಯಾಂ ರಾಘವಃ ಪ್ರಾಹ ವಸಿಷ್ಠಂ ತೋಷಯನ್ಮುದಾ || ೬೭ ||

ಸ್ತ್ರೀದಾನಮಂತ್ರೋ ವಕ್ತವ್ಯಸ್ಸೀತಾದಾನಂ ಕರೋಮಿ ತೇ |
ತಥೇತಿ ಮುನಿವೃಂದೇಷು ವಸಿಷ್ಠಶ್ಚ ಯಥಾವಿಧಿ || ೬೮ ||

---

೬೪. ಈ ವಸಿಷ್ಠನು ಮುದುಕನಾಗಿರುವನಲ್ಲ ! ಇವನಿಗೇನು ಅರುಳೋ ಮರುಳೋ ಬಂದಿರುವುದಲ್ಲ ! ಎನ್ನುತ್ತಿದ್ದರು. ಕೆಲವರು ರಾಮನೊಡನೆ ವಿನೋದವಾದ ಮಾತನ್ನಾಡಿದನು ಎನ್ನುತ್ತಿದ್ದರು.

೬೫. ರಾಘವನ ಧೈರ್ಯವನ್ನು ನೋಡಲು ಈ ಮುನಿಯು ಈ ರೀತಿಯಾದ ಮಾತನಾಡುತ್ತಿರುವನು ಎಂದು ಕೆಲವರೆಂದರು. ರಾಮನು ಈಗ ಏನುಮಾಡುವನು ? ನೋಡೋಣ ಎಂದು ಕೆಲವರು ಎನ್ನುತ್ತಿದ್ದರು.

೬೬. ಅಲ್ಲಿದ್ದವರೆಲ್ಲರೂ ಈ ರೀತಿಯಾಗಿ ಮಾತನಾಡುತ್ತಿದ್ದಂತೆಯೇ ರಾಮನು ಗುರುವಿನ ಮಾತನ್ನು ಕೇಳಿ ನಕ್ಕು ಸಂಜ್ಞೆಮಾಡಿ ಸೀತೆಯನ್ನು ಕರೆದನು.

೬೭. ರಾಮನು ಸೀತೆಯ ಕೈಯ್ಯನ್ನು ಹಿಡಿದುಕೊಂಡು ಆ ಸಭೆಯಲ್ಲಿ ವಸಿಷ್ಠನಿಗೆ ಸಂತೋಷಕರವಾದ ಮಾತನ್ನಾಡುತ್ತ ಇಂತೆಂದನು.

೬೮-೬೯. ಎಲೈ ಗುರುವೇ ! ಹೆಂಗಸರನ್ನು ದಾನಮಾಡುವ ಮಂತ್ರವನ್ನು ಹೇಳು. ಸೀತೆಯ ದಾನವನ್ನು ನಿನಗೆ ಮಾಡುತ್ತೇನೆ ಎಂದನು. ಆಗ ಹಾಗೆಯೇ

ಅಂಗೀಚಕಾರ ಸ್ತ್ರೀದಾನಂ ರಾಘವೇಣ ಸಮರ್ಪಿತಂ ।
ಚಕಿತಂ ಚ ತದಾಭೂದ್ವೈ ಸರ್ವಂ ಸ್ಥಾವರಜಂಗಮಂ ॥ ೬೯ ॥

ದೇಹಭಾನಂ ನ ಕಸ್ಯಾಸೀತ್ತದಾಸೀದತಿ ಚಿತ್ರವತ್ ।
ತದಾ ಸೀತಾಂ ಮುನಿಃ ಪ್ರಾಹ ಮತ್ಪೃಷ್ಠೇ ತಿಷ್ಠ ಬಾಲಿಕೇ ॥ ೭೦ ॥

ಮಮಾರ್ಪಿತಾಸಿ ರಾಮೇಣ ತ್ವಾಂ ಮನ್ಯೇಹಂ ಸುತೋಪಮಾಂ ।
ತನ್ಮುನೇರ್ವಚನಂ ಶ್ರುತ್ವಾ ಸೀತಾ ಸಾ ಖಿನ್ನಮಾನಸಾ ॥ ೭೧ ॥

ವಾಮನ್ಯಸ್ತೇಕ್ಷಣಾ ಸಾಧ್ವೀ ಮುನೇಃ ಪೃಷ್ಠೇ ಹ್ಯುಪಾವಿಶತ್ ।
ಬಭೂವಾಶ್ರುಪೂರ್ಣನೇತ್ರಾ ಸಾ ರೋಮಾಂಚಿತವಿಗ್ರಹಾ ॥ ೭೨ ॥

ಆಗಲೆಂದು ಮುನಿಗಳ ಮಧ್ಯದಲ್ಲಿ ವಸಿಷ್ಠನು ಸ್ತ್ರೀದಾನ ಮಂತ್ರವನ್ನು ಹೇಳಿ ದಾನವಾಗಿ ಕೊಟ್ಟ ಸೀತಾದಾನವನ್ನು ಅಂಗೀಕರಿಸಿದನು. ಈ ಸೀತೆಯನ್ನು ರಾಮನು ದಾನಮಾಡಲು ಸ್ಥಾವರ ಜಂಗಮಗಳೆಲ್ಲವೂ ಚಕಿತವಾದುವು.

೭೦. ಆಗ ಒಬ್ಬನಿಗೂ ದೇಹದಮೇಲೆ ಜ್ಞಾನವೇ ಇರಲಿಲ್ಲ. ಚಿತ್ರದಲ್ಲಿ ಬರೆದಂತೆ ಇದ್ದರು. ಆಗ ವಸಿಷ್ಠನು ಸೀತೆಯನ್ನು ಕುರಿತು ಎಲೈ ಬಾಲಕಿಯೇ! ನನ್ನ ಬೆನ್ನಿನ ಹಿಂದೆ ನಿಂತಿರು.

೭೧. ನಿನ್ನನ್ನು ನನಗೆ ರಾಮನು ದಾನವಾಗಿ ಕೊಟ್ಟಿರುವನು. ನಿನ್ನನ್ನು ನಾನು ನನ್ನ ಮಗಳಂತೆ ತಿಳಿದುಕೊಂಡಿರುವೆನು ಎಂದನು. ಮುನಿಯು ಹೀಗೆ ಹೇಳುತ್ತಲೂ ಸೀತೆಯು ಖಿನ್ನಳಾದಳು.

೭೨. ಆಗ ಆ ಸೀತೆಯು ಆ ಋಷಿಯ ಬಲಭಾಗವನ್ನು ನೋಡುತ್ತ ಆ ಮುನಿಯ ಹಿಂದೆ ನಿಂತುಕೊಂಡಳು. ಕಣ್ಣಿನಲ್ಲಿ ನೀರನ್ನು ಸುರಿಸುತ್ತ ರೋಮಾಂಚವನ್ನು ಹೊಂದಿದವಳಾದಳು.

ತತೋ ರಾಮಃ ಪುನಃ ಪ್ರಾಹ ವಸಿಷ್ಠಂ ವಿನಯಾನ್ವಿತಃ ।
ಗೃಹಾಣ ಸುರಭಿಂ ಚಾಪಿ ಸೀತಾಯೈ ಹ್ಯರ್ಪಿತಾಂ ಪುರಾ ॥ ೭೩ ॥

ಮಯಾ ತೋಷೇಣ ಕೈಲಾಸೇ ಮನ್ಮಣೇಸ್ತೋಷದಾಯಿನೀ ।
ಮಯಾಪಿ ದಾತುಮಾನೀತಾ ತಚ್ಛ್ರುತ್ವಾ ಗುರುರಬ್ರವೀತ್ ॥ ೭೪ ॥

ರಾಮ ರಾಮ ಮಹಾಬಾಹೋ ತವೌದಾರ್ಯಂ ಚ ದರ್ಶಿತುಂ ।
ಯಾಚಿತಾ ತವ ಪತ್ನೀಯಂ ಮಯಾ ತೇಸ್ತು ಪುನಶ್ಶುಭಾ ॥ ೭೫ ॥

ಅಸ್ಯಾಃ ಕುರು ತುಲಾಮದ್ಯ ಸುವರ್ಣೇನ ರಘೂತ್ತಮ ।
ಅಷ್ಟವಾರಂ ಪ್ರತುಲಿತಂ ಸೀತಯಾ ರುಕ್ಮಮುತ್ತಮಂ ॥ ೭೬ ॥

೭೩–೭೪. ಅನಂತರ ರಾಮನು ವಸಿಷ್ಠನನ್ನು ಕುರಿತು ವಿನಯದಿಂದ ಎಲೈ ಮುನಿಯೇ ! ಈ ಕಾಮಧೇನುವನ್ನೂ ತೆಗೆದುಕೋ. ಇದನ್ನು ಸೀತೆಗೆ ನಾನು ಮೊದಲೇ ಕೊಟ್ಟಿದ್ದೆನು. ಕೈಲಾಸದಲ್ಲಿ ಸೀತೆಯು ಮಾತಿನ ಮೇರೆಗೆ ಈ ಹಸುವನ್ನು ಅವಳಿಗೆ ಕೊಟ್ಟು ಅವಳು ಸಂತೋಷಪಟ್ಟು ಕೊಟ್ಟ ಈ ಚಿಂತಾಮಣಿಯನ್ನು ನಾನು ಇಟ್ಟುಕೊಂಡಿರುವೆನು.

೭೫. ಕಾಮಧೇನುವೂ, ಚಿಂತಾಮಣಿಯೂ ಎರಡೂ ಒಂದೇ ಜಾಗವಾದ ಕ್ಷೀರಸಮುದ್ರದಲ್ಲಿ ಹುಟ್ಟಿದುವು. ನನ್ನ ಬಳಿಯಿರುವ ಈ ಚಿಂತಾಮಣಿಗೆ ಈ ಧೇನುವನ್ನು ಕಂಡರೆ ಸಂತೋಷವಾಗುವುದು ಆದರೆ ನಾನು ಮಾತ್ರ ಈ ಕಾಮಧೇನುವನ್ನು ದಾನಮಾಡುವುದಕ್ಕೆಂದೇ ಕೈಲಾಸದಿಂದ ತಂದೆನು. ಪರಸ್ಪರವಾಗಿ ನೋಡಿ ಸಂತೋಷಪಡುವ ಇವೆರಡನ್ನೂ ತೆಗೆದುಕೋ ಎಂದನು.

೭೬. ಈ ಮಾತನ್ನು ಕೇಳಿ ವಸಿಷ್ಠನು ಇಂತೆಂದನು. ಮಹಾಬಾಹುವಾದ ರಾಮನೇ ! ನೀನು ನಿನ್ನ ಔದಾರ್ಯ ಬುದ್ಧಿಯನ್ನು ತೋರಿಸಲೆಂದೇ ಈ ನಿನ್ನ ಹೆಂಡತಿಯಾದ ಸೀತೆಯನ್ನು ಕೇಳಿದೆನು. ಇವಳು ನಿನಗೇ ಇರಲಿ. ಈಗ ಈ ಸೀತೆಯನ್ನು ಚಿನ್ನವನ್ನು ಹಾಕಿ ತೂಕಮಾಡು. ಅವಳ ತೂಕದ ಎಂಟರಷ್ಟು ಚಿನ್ನವನ್ನು ನನಗೆ ಕೊಡು.

ಮಾಂ ದತ್ವೇಯಂ ತ್ವಯಾ ಗ್ರಾಹ್ಯಾ ಪುನಸ್ಸದಸಿ ಮದ್ಗಿರಾ ।
ಅನ್ಯತ್ಕಿಂಚಿಚ್ಛೃಣುಷ್ವ ತ್ವಂ ವಚನಂ ಯನ್ಮಯೋಚ್ಯತೇ ॥ ೭೭ ॥

ಧೇನುಂ ಚಿಂತಾಮಣಿಂ ಸೀತಾಂ ಕೌಸ್ತುಭಂ ಪುಷ್ಪಕಂ ಪುರೀಂ ।
ಸ್ವೀಯಂ ರಾಜ್ಯಮಯೋಧ್ಯಾಯಾಂ ತ್ವಂ ಚೇತ್ಕಸ್ಯ ಪ್ರದಾಸ್ಯಸಿ ॥ ೭೮ ॥

ಅಗ್ರೇ ಕದಾ ತದಾಜ್ಞಾ ಮೇ ತ್ವಯಾ ಲುಪ್ತಾ ಭವಿಷ್ಯತಿ ।
ಮಮಾಜ್ಞಾ ಭಂಗದೋಷೇಣ ಬಹುಕ್ಲೇಶೀ ಭವಿಷ್ಯಸಿ ॥ ೭೯ ॥

ಮದುಕ್ತೈಸ್ಸಪ್ತಭೀ ರಾಜ್ಞ ವಿನಾ ಯದ್ಯತ್ತ್ವಮಿಚ್ಛಸಿ ।
ತತ್ತದ್ದದಸ್ವ ವಿಪ್ರೇಭ್ಯೋ ತ್ವಂ ಸುಖಂ ಹ್ಯವಿಚಾರತಃ ॥ ೮೦ ॥

ತದ್ಗುರೋರ್ವಚನಂ ಶ್ರುತ್ವಾ ತಥೇತ್ಯುಕ್ತ್ವಾ ರಘೂತ್ತಮಃ ।
ಸೀತಾಂ ತುಲಾಯಾಮಾರೋಪ್ಯ ಸುವರ್ಣೇನಾಷ್ಟಸಂಖ್ಯಯಾ ॥ ೮೧ ॥

---

೭೭. ಹಾಗೆ ಕೊಟ್ಟರೆ ಇವಳ ಬೆಲೆಯನ್ನು ಕೊಟ್ಟಂತಾಗುತ್ತದೆ. ಅನಂತರ ನನ್ನ ಮಾತಿನಮೇಲೆ ಈ ಸಭೆಯಲ್ಲಿ ಈಕೆಯನ್ನು ನೀನು ತೆಗೆದುಕೋ. ಇದಲ್ಲದೆ ಮತ್ತೊಂದು ಮಾತನ್ನು ಹೇಳುತ್ತೇನೆ. ಕೇಳು.

೭೮. ಕಾಮಧೇನು, ಚಿಂತಾಮಣಿ, ಸೀತೆ, ಕೌಸ್ತುಭ, ಪುಷ್ಪಕ, ಅಯೋಧ್ಯೆ, ನಿನ್ನ ಈ ರಾಜ್ಯ, ಇವನ್ನು ನೀನು ಯಾರಿಗೆ ದಾನವಾಗಿ ಕೊಡುತ್ತೀಯೆ ? ಕೊಡಲಾಗುವುದಿಲ್ಲ.

೭೯. ಒಂದುವೇಳೆ ಮುಂದಾದರೂ ನೀನು ದಾನಮಾಡಿ ಕೊಟ್ಟರೂ ಆಗಲೂ ನನ್ನ ಆಜ್ಞೆಯನ್ನು ಭಂಗಮಾಡಿದ ಹಾಗಾಗುತ್ತದೆ. ನನ್ನ ಆಜ್ಞೆಯನ್ನು ಭಂಗಮಾಡಿದ ದೋಷದಿಂದ ನಿನಗೆ ಬಹುವಾದ ಕ್ಲೇಶವು ಬರುತ್ತದೆ.

೮೦. ಈ ನಾನು ಹೇಳಿದ ಏಳುಪದಾರ್ಥಗಳನ್ನು ಬಿಟ್ಟು ಬೇರೆ ಯಾದುವುಗಳಲ್ಲಿ ಯಾವುದನ್ನು ಕೊಡಬೇಕೆಂದು ನಿನಗೆ ತೋರುತ್ತದೆಯೋ ಅವೆಲ್ಲವನ್ನೂ ಬ್ರಾಹ್ಮಣರಿಗೆ ಯೋಚನೆಯಿಲ್ಲದೆ ಕೊಡು ಎಂದನು.

೮೧. ಗುರುವಿನ ಈ ಮಾತನ್ನು ಕೇಳಿ ರಾಮನು ಹಾಗೆಯೇ ಆಗಲೆಂದು ಹೇಳಿ ಆ ಸೀತೆಯನ್ನು ತಕ್ಕಡಿಯಲ್ಲಿ ಕೂರಿಸಿ ತೂಗಿದನು.

ತುಲಿತಾಂ ಪ್ರತಿಜಗ್ರಾಹ ಗುರೋಸ್ಸಾಧ್ವೀಂ ಸ್ಮಿತಾನನಾಂ ।
ದಿವ್ಯಾಲಂಕಾರಹೀನಾಂ ತಾಂ ಕಂಚುಕೀವಸ್ತ್ರಸಂಯುತಾಂ ॥ ೮೨ ॥

ತದಾ ನಿನೇದುರ್ವಾದ್ಯಾನಿ ವವರ್ಷುಃ ಪುಷ್ಪವೃಷ್ಟಿಭಿಃ ।
ಸುರಸ್ತ್ರಿಯೋ ವಿಮಾನಸ್ಥಾಸ್ಸೀತಾರಾಮೌ ಮುದಾನ್ವಿತಾಃ ॥ ೮೩ ॥

ಪೂರ್ವಾಧಿಕಾನಲಂಕಾರಾನ್ ಸ್ವದೇಹೇ ಜಾನಕೀ ದಧೌ ।
ಜನಾಸ್ಸರ್ವೇ ಸುಸಂತುಷ್ಟಾಸ್ತದಾಸನ್ಮುದಿತಾನನಾಃ ॥ ೮೪ ॥

ಅಥ ಸೀತಾ ಪತಿಂ ನತ್ವಾ ತತ್ಪಾರ್ಶ್ವೇ ಸಂಸ್ಥಿತಾಭವತ್ ।
ಸ್ಮಿತಾನನಾನಂದಮಗ್ನಾ ಲಜ್ಜಿತಾ ರಾಮಲೋಚನಾ ॥ ೮೫ ॥

ತತೋ ರಾಮೋಽಪ್ಯನೇಕಾನಿ ಕೃತ್ವಾ ದಾನಾನಿ ವಿಸ್ತರಾತ್ ।
ಋತ್ವಿಕ್ಸದಸ್ಯಮುಖ್ಯಾದೀನಾನರ್ಚ್ಯಾಭರಣಾಂಬರೈಃ ॥ ೮೬ ॥

---

೮೨. ಆ ಸೀತೆಯ ತೂಕದ ಸುವರ್ಣದ ಎಂಟರಷ್ಟು ತೂಕದ ಸುವರ್ಣವನ್ನು ಮತ್ತೆ ತೆಗೆದುಕೊಂಡನು. ಅವಳಲ್ಲಿದ್ದ ದಿವ್ಯವಾದ ಅಲಂಕಾರಗಳನ್ನು ಆ ಗುರುವಿಗೇ ಕೊಟ್ಟುಬಿಟ್ಟನು. ಅವಳನ್ನು ಒಂದು ಸೀರೆ ಒಂದು ರವುಕೆ ಇವುಗಳೊಡನೆ ಮಾತ್ರ ತೆಗೆದುಕೊಂಡನು.

೮೩. ಆಗ ಅಂತರಿಕ್ಷದಲ್ಲಿ ದುಂದುಭಿಗಳು ಮೊಳಗಿದುವು. ದೇವತಾಸ್ತ್ರೀಯರು ಹೂಮಳೆಯನ್ನು ಸೀತಾರಾಮರಮೇಲೆ ಸಂತೋಷಪಟ್ಟುಕೊಂಡು ಕರೆದರು.

೮೪. ಅನಂತರ ಜಾನಕಿಯು ಮೊದಲಿಗಿಂತಲೂ ಹೆಚ್ಚಾದ ಅಲಂಕಾರಗಳನ್ನು ಮಾಡಿಕೊಂಡಳು. ಜನಗಳೆಲ್ಲರೂ ಸಂತೋಷಪಟ್ಟುಕೊಂಡರು.

೮೫. ಸೀತೆಯು ಗಂಡನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಅವನ ಪಾರ್ಶ್ವದಲ್ಲಿ ನಿಂತುಕೊಂಡಳು. ಮತ್ತು ನಗುತ್ತಿದ್ದಳು. ಆನಂದದಿಂದ ಕೂಡಿಕೊಂಡಳು. ಲಜ್ಜಿತಳಾಗಿ ತಲೆತಗ್ಗಿಸಿಕೊಂಡಿದ್ದಳು.

೮೬. ಅನಂತರ ರಾಮನು ಅನೇಕ ದಾನಗಳನ್ನು ಮಾಡಿದನು. ಅಲ್ಲದೆ ಋತ್ವಿಕ್ಕುಗಳಿಗೂ ಸದಸ್ಯರಿಗೂ ಯಾಗದಲ್ಲಿ ಕೆಲಸಮಾಡಿದವರೆಲ್ಲರಿಗೂ ಅನೇಕ ವಿಧವಾದ ಬಟ್ಟೆಗಳನ್ನೂ ಒಡವೆಗಳನ್ನೂ, ಹಣವನ್ನೂ ಕೊಟ್ಟು ತೃಪ್ತಿಪಡಿಸಿದನು.

ಸ್ತ್ರೀಯಜ್ಞಾತೀನ್ನೃಪಾನ್ಮಿತ್ರ ಸುಹೃದೋನ್ಯಾಂಶ್ಚ ಸರ್ವಶಃ ।
ಅಭೀಕ್ಷ್ಣಂ ಪೂಜಯಾಮಾಸ ವಸ್ತ್ರಾಲಂಕಾರ ಭೂಷಣೈಃ ॥ ೮೭ ॥

ಸರ್ವೇ ಜನಾ ಸುಲಲಿತೋನ್ಮಣಿಕುಂಡಲಸ್ರ
ಗುಷ್ಣೀಷಕಂಚುಕದುಕೂಲಮಹಾರ್ಘಹಾರಾಃ ।
ನಾರ್ಯಶ್ಚ ಕುಂಡಲಯುಗಾಲಕ ವೃಂದಜುಷ್ಟ
ವಕ್ತ್ರಶ್ರೀಯಃ ಕನಕಮೇಖಲಯಾ ವಿರೇಜುಃ ॥ ೮೮ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಯಾಗಕಾಂಡೇ ಅವಭೃಥೋತ್ಸವ ವರ್ಣನಂ ನಾಮ ಅಷ್ಟಮಸ್ಸರ್ಗಸ್ಸಮಾಪ್ತಃ

---

೮೭. ತನ್ನ ಜ್ಞಾತಿಗಳಿಗೂ, ರಾಜರಿಗೂ, ಮಿತ್ರರಿಗೂ, ಇನ್ನೂ ಇತರರಿಗೂ ಅನೇಕವಾದ ಆಭರಣಗಳನ್ನೂ ಬಟ್ಟೆಗಳನ್ನೂ ಹಣವನ್ನು ಕೊಟ್ಟು ಗೌರವಿಸಿದನು.

೮೮. ಆ ರಾಮನು ಕೊಟ್ಟ ಒಡವೆ ಚೆನ್ನಾಗಿರುವ ಮಣಿಮಯಕರ್ಣಾಭರಣ, ಹಾರ, ರುಮಾಲು, ಅಂಗಿ, ರೇಷ್ಮೆಯಬಟ್ಟೆಗಳು, ಮುತ್ತಿನ ಹಾರಗಳು ಇವೇ ಮುಂತಾದುವನ್ನು ಹಾಕಿಕೊಂಡು ಗಂಡಸರೂ ಓಲೆಗಳು, ಬೈತಲೆಗೆ ಹಾಕಿಕೊಳ್ಳುವ ಚಂದ್ರಕಾಂತಿ ಸೂರ್ಯಕಾಂತಿ ಎಂಬ ಒಡವೆಗಳು, ಚಿನ್ನದ ಡಾಬು ಇವೇ ಮುಂತಾದುವುಗಳನ್ನು ಹಾಕಿಕೊಂಡು ಹೆಂಗಸರೂ ರಮ್ಯರಾಗಿ ಕಾಣುತ್ತಿದ್ದರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಅವಭೃಥೋತ್ಸವ ವರ್ಣನವೆಂಬ ಎಂಟನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ

॥ ಎಂಟನೆಯ ಸರ್ಗದ ಸಾರಾಂಶವು ॥

ಚೈತ್ರಶುದ್ಧ ನವಮಿಯ ದಿನ ಶ್ರೀರಾಮನ ಜನ್ಮದಿನವು. ಆ ದಿನವೇ ಯಾಗವೂ ಪೂರ್ಣವಾದುದರಿಂದ ಗುರುವಾದ ವಸಿಷ್ಠನು ಅಂದೇ ಅವಭೃಥ ಸ್ನಾನಕ್ಕೆ ರಾಮನಿಗೆ ಸೂಚನೆಯನ್ನು ಕೊಟ್ಟನು. ಅಲ್ಲದೆ ಆಗಲಿ ಬಿಸಲಿನ ತಾಪವು ಹೆಚ್ಚಾಗಿದ್ದುದರಿಂದ ಬಿಸಿಲೇರುವುದಕ್ಕೆ ಮೊದಲೇ ಸ್ನಾನಮಾಡಿ ಬರಬೇಕೆಂದೂ ಅವಸರವನ್ನು ಪಡಿಸಿದನು.

ವಸಿಷ್ಠನ ಈ ಮಾತನ್ನು ಕೇಳಿ ಶ್ರೀರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೆ ನಾನು ಈದಿನ ಅವಭೃಥಸ್ನಾನಕ್ಕೋಸ್ಕರ ರಾಮತೀರ್ಥಕ್ಕೆ ಪ್ರಯಾಣಮಾಡಬೇಕು. ಅದಕ್ಕೆ ಬೇಕಾದುವೆಲ್ಲವನ್ನೂ ನಾನು ಹೇಳಿದಂತೆ ಮಾಡು. ರಾಜರೆಲ್ಲರೂ ತಮ್ಮ ತಮ್ಮ ಸೈನ್ಯದೊಡನೆ ಮಂಟಪದಲ್ಲಿ ಸಿದ್ಧವಾಗಿರುವಂತೆ ಹೇಳು. ನಮ್ಮ ಸೈನ್ಯಗಳನ್ನು ಸಿದ್ಧಪಡಿಸು. ವಾದ್ಯಗಳೆಲ್ಲವನ್ನೂ ಬಾಜಿಸುವಂತೆ ಅಪ್ಪಣೆಮಾಡು. ಎಲ್ಲ ಕಡೆಯಲ್ಲಿಯೂ ಪತಾಕೆಗಳನ್ನೂ ತೋರಣಗಳನ್ನೂ ಕಟ್ಟಿಸು. ಆ ರಾಮತೀರ್ಥದಲ್ಲಿಯೂ ಅದರ ಮರಳಿನಮೇಲೆಯೂ ಕೂಡ ತೋರಣಾದಿಗಳನ್ನು ಕಟ್ಟಿಸು. ಬಾಳೆಯ ಕಂಬಗಳನ್ನು ಕಟ್ಟಿಸು. ಅಲ್ಲಲ್ಲಿಯೇ ಹೂವಿನ ಕುಂಡಗಳನ್ನಿಡಿಸು. ದಾರಿಯನ್ನು ಉದ್ದಕ್ಕೂ ಸರಿಮಾಡಿಸಿ ಗಂಧದನೀರನ್ನು ಹಾಕಿಸು. ನಾನು ಹೇಳದೇ ಇದ್ದರೂ ಅಲ್ಲಲ್ಲಿಗೆ ಅನುಕೂಲವಾದುವುಗಳನ್ನೂ ಯೋಗ್ಯವಾದುವುಗಳನ್ನೂ ಮಾಡಿಸು. ಇವು ಒಂದಕ್ಕೂ ನನ್ನನ್ನು ಕೇಳದೆ ಬೇಗನೆ ಮಾಡಿಸು. ಹೀಗೆಂದು ರಾಮನು ಹೇಳಲಾಗಿ ಲಕ್ಷ್ಮಣನು ಹಾಗೆಯೇ ಎಲ್ಲವನ್ನೂ ಬೇಗ ಬೇಗನೆ ಮಾಡಿಸಿದನು.

ಅನಂತರ ಋತ್ವಿಕ್ಕುಗಳು ಗಮನೇಷ್ಟಿಯನ್ನು ಮಾಡಿದರು. ಅನಂತರ ಒಂದು ಕುದುರೆಯ ಗಾಡಿಯಲ್ಲಿ ಅಗ್ನಿಯನ್ನೂ ಪಾತ್ರೆಗಳನ್ನೂ ಇಟ್ಟುಕೊಂಡು ಸೀತಾರಾಮರನ್ನೂ ಕೂರಿಸಿಕೊಂಡು ಋತ್ವಿಜರೊಡನೆ ವಸಿಷ್ಠನೂ ಕುಳಿತು ಕೊಂಡನು. ಮುನಿಗಳು ವೇದಘೋಷವನ್ನು ಮಾಡುತ್ತಿದ್ದರು. ವಂದಿಮಾಗಧರು ಹೊಗಳುತ್ತಿದ್ದರು. ಹೀಗಿರಲು ಶ್ರೀರಾಮನು ರಾಮತೀರ್ಥಕ್ಕೆ ಹೊರಟನು. ಮುಂದುಗಡೆಯಲ್ಲಿ ಆನೆಗಳು ಹೊರಟುವು. ಅದರ ಹಿಂದೆ ಕುದುರೆಗಳೂ ಅದರ ಹಿಂದೆ ವಾದ್ಯದವರೂ ಅವರ ಹಿಂದೆ ರಾಜದೂತರೂ ಅವರ ಹಿಂದೆ ವಂದಿನಟರೂ ಅವರ ಹಿಂದೆ ವಾರನಾರಿಯರೂ ಅವರ ಹಿಂದೆ ದೇವತೆಗಳೂ ಅವರ ಹಿಂದೆ ರಾಮನೂ ಅವನ ಹಿಂದೆ ಮುನೀಶ್ವರರೂ ಅವರ ಹಿಂದೆ ಬ್ರಾಹ್ಮಣಸ್ತ್ರೀಯರೂ ಅವರ ಹಿಂದೆ ಕ್ಷತ್ರಿಯರ ಹೆಂಗಸರೂ ಅವರ ಹಿಂದೆ ರಾಜರುಗಳೂ ಅವರ ಹಿಂದೆ ಅವರ ಸೈನ್ಯಗಳೂ ಅವರ ಹಿಂದೆ ರಾಜಸೇವಕರೂ ಅವರ ಹಿಂದೆ ವಾದ್ಯಧ್ವನಿ ಮಾಡುವವರೂ ಅವರ ಹಿಂದೆ ಆನೆಗಳೂ ಅವುಗಳ ಹಿಂದೆ ಒಂಟೆಗಳೂ ಅವುಗಳ ಹಿಂದೆ ರಥಗಳೂ ಅವುಗಳ ಹಿಂದೆ ಕೆಲಸಗಾರರೂ ಈ ರೀತಿಯಲ್ಲಿ ಕ್ರಮವಾಗಿ ಹೊರ ಟರು. ರಾಮನು ಪ್ರಯಾಣಮಾಡುತ್ತಿರಲು ಮೇಲಿನಿಂದ ಪುಷ್ಪವೃಷ್ಟಿಯಾಯಿತು. ಗಂಧರ್ವರು ಹಾಡಿದರು. ಮುನಿಗಳೂ ವೇದಘೋಷವನ್ನು ಮಾಡಿದರು. ಈ ರೀತಿ ಯಾದ ಕೌತುಕಗಳನ್ನು ನೋಡುತ್ತಾ ರಾಮನು ಹೊರಟನು. ಹೀಗೆ ಹೋಗುತ್ತಿ ರುವ ಸೀತಾರಾಮರನ್ನು ನೋಡಲು ಜನಗಳ ಗುಂಪು ಹೆಚ್ಚಿ ಗದ್ದಲವು ಹೆಚ್ಚಿತು.

ಆಗ ರಾಜಭಟರು ಆ ಜನಗಳನ್ನು ಹೊಡೆಯುತ್ತಿದ್ದರು. ಇದರಿಂದ ಗಲಭೆಯು ಇನ್ನೂ ಹೆಚ್ಚಿತು. ಅದೆಲ್ಲವನ್ನೂ ಶ್ರೀರಾಮನು ನೋಡಿ ಕೇಳಿಯೂ ತಿಳಿದುಕೊಂಡು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ! ಈ ಜನಗಳೆಲ್ಲರನ್ನೂ ಪುಷ್ಪಕದಲ್ಲಿ ಕೂರಿಸು. ಅಲ್ಲಿದ್ದುಕೊಂಡು ಇವರೆಲ್ಲರೂ ನನ್ನನ್ನು ಸುಖವಾಗಿ ನೋಡಲಿ. ಈ ಗದ್ದಲವೂ ಜಗಳವೂ ಬೇಡ ಎಂದನು. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಎಲ್ಲರನ್ನೂ ಆ ಪುಷ್ಪಕಕ್ಕೆ ಹತ್ತಿಸಿದನು. ಆಗ ಆ ಜನಗಳೆಲ್ಲರೂ ಸೀತಾರಾಮರನ್ನು ಸುಖವಾಗಿ ನೋಡುತ್ತಿದ್ದರು. ಇದರಿಂದ ತಮ್ಮ ಧನ್ಯತೆಯನ್ನು ವ್ಯಕ್ತಪಡಿಸಿದರು.

ಅನಂತರ ಹೆಂಗಸರೆಲ್ಲರೂ ಸೇರಿ ತಮ್ಮನ್ನೂ ಪುಷ್ಪಕದಲ್ಲಿ ಕೂರಿಸುವಂತೆ ಸೀತೆಯನ್ನು ಕೇಳಿಕೊಳ್ಳಲು ಆಕೆಯು ಲಕ್ಷ್ಮಣನಿಗೆ ಹೇಳಿ ಅವರೆಲ್ಲರನ್ನೂ ಪುಷ್ಪಕದಲ್ಲಿರುವ ಹೆಂಗಸರ ತೊಟ್ಟಿಯಲ್ಲಿ ಕೂರಿಸಿದಳು. ಅಂತೆಯೇ ಅವರೆಲ್ಲರೂ ಕುಳಿತು ನೋಡುತ್ತ ಹೂಮಳೆಯನ್ನು ಸುರಿಸುತ್ತಿದ್ದರು.

ವಾದ್ಯಗಳು ಮೊಗಳುತ್ತಿದ್ದುವು. ಗಾಯಕರು ಗಾನಮಾಡುತ್ತಿದ್ದರು. ನರ್ತಕಿಯರು ಕುಣಿಯುತ್ತಿದ್ದರು. ರಾಜರು ಸೈನ್ಯದೊಡನೆ ಹೋಗುತ್ತಿದ್ದರು. ವಂದಿಗಳು ಹೊಗಳುತ್ತಿದ್ದರು. ಒಬ್ಬರಿಗೊಬ್ಬರು ಓಕುಳಿಯನ್ನು ಎರಚಿಕೊಳ್ಳುತ್ತಿದ್ದರು. ಈ ರೀತಿಯಾದ ಉತ್ಸವದೊಡನೆ ಶ್ರೀರಾಮನು ರಾಮತೀರ್ಥಕ್ಕೆ ಹೋದನು.

ಅಲ್ಲಿ ರಥದಿಂದಿಳಿದು ಜಲೇಷ್ಟಿಯೆಂಬ ಯಾಗವನ್ನು ಮಾಡಿದನು. ಆಗ ಋತ್ವಿಕ್ಕುಗಳೆಲ್ಲರೂ ಆ ರಾಮನಿಗೆ ತೀರ್ಥೋದಕದಿಂದ ಅಭಿಷೇಕವನ್ನು ಮಾಡಿದರು. ಅನಂತರ ಬೇರೆಯ ಬಟ್ಟೆಯನ್ನುಟ್ಟು ಶ್ರೀರಾಮನೂ ಸೀತೆಯೂ ಸಿಂಹಾಸನದಲ್ಲಿ ಕುಳಿತು ಅನೇಕ ದಾನಗಳನ್ನು ಮಾಡಿದರು. ಕಾಮಧೇನುವನ್ನು ಅಲಂಕರಿಸಿ ಅದನ್ನು ಗುರುವಿಗೆ ದಾನಮಾಡಲು ರಾಮನು ಮನಸ್ಸುಮಾಡಿದನು. ಇದನ್ನು ಆ ಗುರುವಾದ ವಸಿಷ್ಠನು ತಿಳಿದು "ನನ್ನಲ್ಲಿ ಕಾಮಧೇನುವಿನ ಮೊಮ್ಮಗಳಾದ ನಂದಿನಿಧೇನುವಿರುವಾಗ ಈ ಕಾಮಧೇನುವಿನಿಂದ ನನಗೆ ಪ್ರಯೋಜನವಿಲ್ಲ. ಇದು ಅವನಿಗೇ ಇರಲಿ. ಈ ಕಾಮಧೇನುವಿಗೆ ರಾಮನೇ ಯೋಗ್ಯನು. ಆದ್ದರಿಂದ ಈ ಹಸುವನ್ನು ಕೇಳದೆ ಬಿಟ್ಟು ಸೀತೆಯನ್ನೇ ಕೇಳುತ್ತೇನೆ. ಇದರಿಂದ ಅವನ ಕೀರ್ತಿಯೂ ಹೆಚ್ಚುತ್ತದೆ. ಈ ರಾಮನ ಔದಾರ್ಯವನ್ನು ಪ್ರಪಂಚಕ್ಕೇ ತೋರಿಸುತ್ತೇನೆ" ಎಂದು ನಿಶ್ಚಯಿಸಿದನು.

ಅನಂತರ ರಾಮನನ್ನು ಕುರಿತು ಎಲೈ ಶ್ರೀರಾಮನೇ! ನೀನು ಕಾಮಧೇನುವನ್ನು ನನಗೆ ದಾನಮಾಡಿದರೆ ಅದರಿಂದ ನನಗೆ ತೃಪ್ತಿಯುಂಟಾಗುವುದಿಲ್ಲ. ನೀನು ನನಗೆ ದಾನವನ್ನು ಕೊಡಬೇಕೆಂದು ಮನಸ್ಸುಮಾಡಿದ್ದರೆ ಸೀತೆಯನ್ನು ಅಲಂಕರಿಸಿ

ನನಗೆ ದಾನವನ್ನು ಮಾಡು. ಇದರಿಂದ ನನಗೆ ತೃಪ್ತಿಯುಂಟಾಗುವುದೇ ಹೊರತು ಬೇರೆಯಾದ ನೂರಾರು ದಾನಗಳನ್ನು ಕೊಟ್ಟರೂ ತೃಪ್ತಿಯುಂಟಾಗುವುದಿಲ್ಲ. ಎಂದನು.

ಇದನ್ನು ಕೇಳಿ ಜನಗಳು ಹಾ ಹಾ ಎಂದೆನ್ನುತ್ತಾ ಭಯವನ್ನು ಹೊಂದಿ ದುಃಖಿತರಾದರು. ಅಲ್ಲದೆ ವಸಿಷ್ಠನ ವಿಷಯದಲ್ಲಿ ನಾನಾ ಬಗೆಯಾದ ಮಾತುಗಳನ್ನಾಡುತ್ತಿದ್ದರು.

ಒಡನೆಯೇ ರಾಮನು ಗುರುವಿನ ಮಾತನ್ನು ಕೇಳಿ ನಕ್ಕು ಸೀತೆಯನ್ನು ಕರೆದು ಸ್ತ್ರೀದಾನದ ಮಂತ್ರವನ್ನು ಹೇಳೆಂದು ಗುರುವಿನಿಂದ ಹೇಳಿಸಿ ಆಕೆಯನ್ನು ದಾನಮಾಡಿದನು. ವಸಿಷ್ಠನೂ ಅಂಗೀಕರಿಸಿದನು. ಜನರೆಲ್ಲರೂ ಚಕಿತರಾದರು. ಆಗ ಅಲ್ಲಿದ್ದ ಜನಗಳಿಗೆ ದೇಹದ ಮೇಲೆ ಪ್ರಜ್ಞೆಯೇ ಇಲ್ಲದಿದ್ದಿತು. ವಸಿಷ್ಠನು ಆಕೆಯನ್ನು ತನ್ನ ಹಿಂದೆ ನಿಲ್ಲುವಂತೆ ಹೇಳಿದನು.

ಸೀತೆಯೂ ಕೂಡ ಇದರಿಂದ ದುಃಖಿತಳಾಗಿ ಆ ವಸಿಷ್ಠನ ಹಿಂದೆ ನಿಂತು ಕಣ್ಣೀರನ್ನು ಸುರಿಸುತ್ತಿದ್ದಳು. ಅನಂತರ ರಾಮನು ವಿನಯದಿಂದ ಕೂಡಿ ಎಲೈ ಗುರುವೆ! ಈ ಕಾಮಧೇನುವನ್ನು ಆ ಸೀತೆಗೇ ಮೊದಲು ಕೊಟ್ಟಿದ್ದೆನು. ಇದನ್ನೂ ತೆಗೆದುಕೋ ಎಂದನು.

ಇದನ್ನು ಕೇಳಿ ವಸಿಷ್ಠನು ಎಲೈ ರಾಮನೇ. ನೀನು ನಿನ್ನ ಔದಾರ್ಯವನ್ನು ವ್ಯಕ್ತಪಡಿಸಿದೆ. ಈ ನಿನ್ನ ಹೆಂಡತಿಯನ್ನು ನೀನೇ ತೆಗೆದುಕೊ. ಆದರೆ ಇವಳ ತೂಕದಷ್ಟು ತೂಕದ ಎಂಟರಷ್ಟು ತೂಕದ ಚಿನ್ನವನ್ನು ನನಗೆ ಕೊಟ್ಟುಬಿಡು. ಇದರಿಂದ ಈಕೆಯನ್ನು ನೀನು ಮತ್ತೆ ತೆಗೆದುಕೊಳ್ಳಬಹುದು. ದೋಷವಿರುವುದಿಲ್ಲ. ಇದೂ ಅಲ್ಲದೆ ಮತ್ತೊಂದು ಮಾತನ್ನು ಹೇಳುತ್ತೇನೆ. ಕೇಳು. ಕಾಮಧೇನು, ಚಿಂತಾಮಣಿ, ಸೀತೆ, ಕೌಸ್ತುಭಮಣಿ, ಪುಷ್ಪಕ, ಅಯೋಧ್ಯೆ, ಈ ರಾಜ್ಯ ಈ ಏಳನ್ನು ನೀನು ಯಾರಿಗೂ ಕೊಡಕೂಡದು. ಇವನ್ನು ಕೊಟ್ಟರೆ ನನ್ನ ಆಜ್ಞಾಭಂಗವನ್ನು ಮಾಡಿದ ದೋಷವು ಬರುತ್ತದೆ. ಇದರಿಂದ ನಿನಗೆ ಬಹುಕಷ್ಟವೂ

ಒದುಗುತ್ತದೆ. ಇವನ್ನು ಬಿಟ್ಟು ಬೇರೆಯವನ್ನು ಯಾವದನ್ನು ಬೇಕಾದರೂ ಕೇಳಿದವರಿಗೆ ಕೊಡು. ಎಂದೆನ್ನಲು ಶ್ರೀರಾಮನು ಹಾಗೆಯೇ ಆಗಲೆಂದು ಒಪ್ಪಿಕೊಂಡನು.

ಅನಂತರ ಸೀತೆಯನ್ನು ತೂಕಮಾಡಿ ಅವಳ ತೂಕದ ಎಂಟರಷ್ಟು ತೂಕದ ಚಿನ್ನವನ್ನು ಗುರುವಿಗೆ ಕೊಟ್ಟನು. ಮತ್ತು ಆಕೆಯನ್ನು ಹಿಂದಕ್ಕೆ ತೆಗೆದು ಕೊಂಡನು. ಇದರಿಂದ ಎಲ್ಲರಿಗೂ ಸಂತೋಷವಾಯಿತು. ಇವಳೊಡನೆ ಕೂಡಿ ರಾಮನು ಅನೇಕ ದಾನಗಳನ್ನು ಮಾಡಿದನು. ಎಲ್ಲರನ್ನೂ ಸಂತೋಷಪಡಿಸಿದನು. ಅಲ್ಲಿದ್ದ ಜನರೆಲ್ಲರೂ ರಾಮನು ಕೊಟ್ಟ ಉಡಿಗೆ ತೊಡಿಗೆಗಳನ್ನು ಧರಿಸಿ ಬಹುವಾಗಿ ಸಂತೋಷದಿಂದ ನಲಿಯುತ್ತಿದ್ದರು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾಗಕಾಂಡೇ

॥ ನವಮಸ್ಸರ್ಗಃ ॥

॥ ಶ್ರೀ ರಾಮದಾಸ ಉವಾಚ ॥

ಶ್ರೀರಾಮೋವಭೃಥಸ್ನಾತೋ ಶಂಭುರ್ಬ್ರಹ್ಮಾದಿಭಿಸ್ಸುರೈಃ ।
ರಾಮಂ ವೇದಸ್ತವೈಃ ಸ್ತುತ್ವಾ ಪ್ರತ್ಯುವಾಚ ಪುರಃ ಸ್ಥಿತಃ ॥ ೧ ॥

ಅದ್ಯ ಧನ್ಯಾ ವಯಂ ಸರ್ವೇ ಯತ್ತ್ವಾಂ ಸ್ನಾತಂ ಸುಮಂಗಳಂ ।
ಪಶ್ಯಾಮೋ ವಾಜ್ಯವಭೃಥೇ ಸೀತಯಾ ಬಂಧುಭಿಸ್ಸಹ ॥ ೨ ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀರಾಮನು ಅವಭೃಥಸ್ನಾನವನ್ನು ಮಾಡಿದನು. ಆಗ ಶಂಕರನು ಬ್ರಹ್ಮನೇ ಮೊದಲಾದ ದೇವತೆಗಳೊಡನೆ ವೇದದ ಸ್ತುತಿಗಳಿಂದ ಆ ರಾಮನನ್ನು ಸ್ತುತಿಸಿದನು. ಮತ್ತು ಈ ರೀತಿಯಾಗಿ ಹೇಳಿದನು.

೨. ಎಲೈ ರಾಮನೇ ! ಸೀತೆಯೊಡನೆಯೂ, ತಮ್ಮಂದಿರೊಡನೆಯೂ, ಮಂಗಳಕರವಾದ ಅವಭೃಥಸ್ನಾನವನ್ನು ಮಾಡಿದ ನಿನ್ನನ್ನು ನೋಡಿದುದರಿಂದ ನಾವೆಲ್ಲರೂ ಧನ್ಯರಾದೆವು.

ಅಸ್ಮಾಕಂ ಹರ್ಷಕಾಲೋಽಯಂ ದೇವ ದೇವ ಕೃಪಾನಿಧೇ ।
ತಸ್ಮಾದಯಂ ಸದಾ ಪುಣ್ಯಃ ಶ್ರೇಷ್ಠಕಾಲೋ ಭವಿಷ್ಯತಿ ॥ ೩ ॥

ತ್ವಂ ಚಾಪ್ಯಂಗೀಕುರುಷ್ವಾದ್ಯ ದೇಹ್ಯಸ್ಮೈ ಸುಬಹೂನ್ ವರಾನ್ ।
ಅನ್ಯನ್ನಶ್ಚಾತ್ರ ಪ್ರತ್ಯಬ್ದಂ ಯೇನ ತೇ ದರ್ಶನಂ ಭವೇತ್ ॥ ೪ ॥

ತಥಾ ಕುರು ರಘುಶ್ರೇಷ್ಠ ತೀರ್ಥಾಯಾಸ್ಮೈ ವರಾನ್ಪದ ।
ಅನ್ಯಾನಿ ಚ ತ್ವಯಾ ಪೂರ್ವಂ ಯಾನಿ ಭೂಮ್ಯಾಂ ಕೃತಾನಿ ಹಿ ॥ ೫ ॥

ಯಾತ್ರಾಕಾಲೇ ಸುತೀರ್ಥಾನಿ ಲಿಂಗಾನ್ಯಪಿ ನಿಜಾಖ್ಯಯಾ ।
ತೇಷಾಮಪಿ ವರಾನದ್ಯ ವದ ತ್ವಂ ಮಮ ವಾಕ್ಯತಃ ॥ ೬ ॥

ಪುರೀಷು ಶ್ರೇಷ್ಠಾಯೋಧ್ಯೇಯಂ ತ್ವಯಾ ವಾಚ್ಯಾದ್ಯ ರಾಘವ ।
ನದೀಷು ಸರಯೂಃ ಶ್ರೇಷ್ಠಾ ವರೈಃ ಕಾರ್ಯಾದ್ಯ ಮದ್ಗಿರಾ ॥ ೭ ॥

---

೩. ಕೃಪಾನಿಧಿಯಾದ ಹೇ ದೇವದೇವನೇ ! ನಮಗೆಲ್ಲರಿಗೂ ಇದು ಹರ್ಷಕಾಲವು. ಆದ್ದರಿಂದ ಈ ಕಾಲವು ಶ್ರೇಷ್ಠವಾಗಿಯೂ ಪುಣ್ಯಕಾಲವಾಗಿಯೂ ಆಗಲಿ.

೪. ಈ ನಾವು ಹೇಳಿದುದನ್ನು ನೀನು ಅಂಗೀಕಾರಮಾಡಿಕೊಳ್ಳಬೇಕು. ಅಲ್ಲದೆ ನೀನೂ ಕೂಡ ಬಹುವಾದ ವರಗಳನ್ನು ಕೊಡು. ಪ್ರತಿವರ್ಷದಲ್ಲಿಯೂ ಯಾರು ಇಲ್ಲಿ ನಿನ್ನ ದರ್ಶನವನ್ನು ಮಾಡುವರೋ ಅವರಿಗೆ ಬಹುವಾದ ಪುಣ್ಯ ಬರುವಂತೆ ಮಾಡು.

೫–೬. ಈ ತೀರ್ಥಕ್ಕೆ ಆ ರೀತಿಯಾದ ವರವನ್ನು ಕೊಡು. ನೀನು ಈ ಭೂಮಿಯಲ್ಲಿ ಯಾವ ಯಾವ ತೀರ್ಥಗಳನ್ನು ನಿರ್ಮಿಸಿರುವೆಯೋ ಅವೆಲ್ಲವೂ ಯಾತ್ರಾಕಾಲಗಳಲ್ಲಿ ಒಳ್ಳೆಯ ಪುಣ್ಯತೀರ್ಥಗಳಾಗಲಿ. ನೀನು ನಿರ್ಮಿಸಿರುವ ಲಿಂಗಗಳೂ ಪುಣ್ಯಲಿಂಗಗಳಾಗಲಿ. ಅವುಗಳಿಗೆ ನಿನ್ನ ಹೆಸರಿನಿಂದ ಗುರುತಾಗು ವಂತೆ ಮಾಡು.

೭. ಪಟ್ಟಣಗಳೊಳಗೆಲ್ಲಾ ಅಯೋಧ್ಯೆಯು ಶ್ರೇಷ್ಠವಾದುದಾಗಿರಲಿ ಎಂಬುದಾಗಿ ನೀನು ವರವನ್ನು ಕೊಡು. ನದಿಗಳೊಳಗೆ ಈ ಸರಯೂ ನದಿಯು ಶ್ರೇಷ್ಠವಾಗಿರಲೆಂದು ನೀನು ನಿನ್ನ ಮಾತಿನಿಂದಲೇ ವರವನ್ನು ಕೊಡು.

ತಚ್ಛಂಭುವಚನಂ ಶ್ರುತ್ವಾ ಪ್ರಹಸ್ಯ ರಘುನಂದನಃ ।
ಹರ್ಷಕಾಲೇಬ್ರವೀದ್ವಾಕ್ಯಂ ಯತ್ರ್ರೈಲೋಕ್ಯೋಪಕಾರಕಂ ॥ ೮ ॥

ಯತ್ ಪ್ರಾರ್ಥಿತಂ ತ್ವಯಾ ಶಂಭೋ ತದೇವ ಹೃದಿ ಮೇ ಸ್ಥಿತಂ ।
ಶೃಣುಷ್ವ ವಚನಂ ಮೇದ್ಯ ಯದ್ಧರ್ಷಾತ್ಪ್ರೋಚ್ಯತೇ ಶುಭಂ ॥ ೯ ॥

ಸರ್ವೇಷಾಮೇವ ಮಾಸಾನಾಂ ಶ್ರೇಷ್ಠಶ್ಚಾಯಂ ಮಧುರ್ಭವೇತ್ ।
ವೈಶಾಖಾತ್ ಕಾರ್ತಿಕಶ್ಶ್ರೇಷ್ಠಃ ಕಾರ್ತಿಕಾನ್ಮಾಘ ಏವ ಚ ॥ ೧೦ ॥

ಮಾಘಮಾಸಾದ್ವದಶ್ಚಾಯಂ ಚೈತ್ರಮಾಸೋ ಭವಿಷ್ಯತಿ ।
ಚೈತ್ರಮಾಸೇಽಭವಜ್ಜನ್ಮ ಮಮ ಯಸ್ಮಾತ್ತಥಾ ಪುನಃ ॥ ೧೧ ॥

ವಾಜಿಮೇಧಾವಭೃಥ್ಯೇಷು ಸ್ನಾನೇನಾಪಿ ವಿಶೇಷತಃ ।
ಸರ್ವೇಷಾಮಧಿಕಶ್ಚಾಸ್ತು ಮಧುಸ್ತೇ ವಾಕ್ಯಗೌರವಾತ್ ॥ ೧೨ ॥

---

೮. ಶಂಭುವಿನ ಈ ಮಾತನ್ನು ಕೇಳಿ ರಾಮನು ನಕ್ಕು ಆ ಹರ್ಷಕಾಲದಲ್ಲಿ ಮೂರು ಲೋಕಗಳಿಗೂ ಉಪಕಾರವಾದ ಈ ಮಾತುಗಳನ್ನು ಹೇಳಿದನು.

೯. ಎಲೈ ಶಂಭುವೇ ! ನೀನು ಕೇಳಿದುದೇ ನನ್ನ ಮನಸ್ಸಿನಲ್ಲಿಯೂ ಇದ್ದಿತು. ನಾನು ಸಂತೋಷಕಾಲದಲ್ಲಿ ಹೇಳತಕ್ಕ ಈ ಮಾತನ್ನು ಕೇಳು.

೧೦–೧೧. ಎಲ್ಲಾ ತಿಂಗಳುಗಳಿಗಿಂತಲೂ ವೈಶಾಖಮಾಸವು ಶ್ರೇಷ್ಠವಾದುದು. ವೈಶಾಖಕ್ಕಿಂತಲೂ ಕಾರ್ತಿಕಮಾಸವು ಶ್ರೇಷ್ಠವು. ಕಾರ್ತಿಕಮಾಸಕ್ಕಿಂತಲೂ ಮಾಘಮಾಸವು ಶ್ರೇಷ್ಠವು. ಮಾಘಮಾಸಕ್ಕಿಂತಲೂ ಈ ಚೈತ್ರಮಾಸವು ಶ್ರೇಷ್ಠವಾಗಲಿ. ಅಲ್ಲದೆ ಈ ಚೈತ್ರಮಾಸದಲ್ಲಿಯೇ ನಾನು ಅವತರಿಸಿರುವುದರಿಂದ ಇದೇ ಶ್ರೇಷ್ಠವಾದುದಾಗಲಿ.

೧೨. ಚೈತ್ರಮಾಸದಲ್ಲಿ ಅಶ್ವಮೇಧಯಾಗವನ್ನು ಮಾಡಿ ಅವಭೃಥ ಸ್ನಾನವನ್ನು ಮಾಡಿದುದರಿಂದ ಈ ಮಾಸವು ನಿನ್ನ ಮಾತಿನ ಗೌರವದಿಂದ ಇನ್ನೂ ಅಧಿಕವಾಗಿ ಶ್ರೇಷ್ಠವಾಗಲಿ.

ಚೈತ್ರಮಾಸೇ ಕೃತಂ ದತ್ತಂ ಹುತಂ ಸ್ನಾತಂ ವಿಚಿಂತಿತಂ ।
ಸರ್ವಂ ಕೋಟಿಗುಣಂ ಪ್ರೋಕ್ತಮಯೋಧ್ಯಾಯಾಂ ವಿಶೇಷತಃ ॥ ೧೩ ॥

ಸರ್ವಾಸು ಪ್ರಥಮಾ ಚೇಯಂ ಪುರೀಷು ನಗರೀ ಮಮ ।
ಅಯೋಧ್ಯಾ ಮುಕ್ತಿದಾತ್ರೀ ತು ಭವಿಷ್ಯತಿ ಗಿರಾ ಮಮ ॥ ೧೪ ॥

ಅನ್ಯತ್ರ ಯತ್ಕೃತಂ ಪುಣ್ಯಂ ಷಷ್ಟಿಸಂವತ್ಸರೈಶ್ಶುಭಂ ।
ತದತ್ರ ದಿವಸೇನೈವ ಭವಿಷ್ಯತಿ ನೃಣಾಂ ಸದಾ ॥ ೧೫ ॥

ಪುರೀಣಾಂ ಮಧುರೀ ಜ್ಞೇಯಾ ರಾಜಧಾನೀ ಶುಭಪ್ರದಾ ।
ತ್ವಯಾಸ್ಯೈ ಯಾಚಿತೋ ಯಸ್ಮಾದ್ವರಾರ್ಥಮಹ ಮಾದರಾತ್ ॥ ೧೬ ॥

---

೧೩. ಈ ಚೈತ್ರಮಾಸದಲ್ಲಿ ಮಾಡಿದ ಕೆಲಸಗಳೂ, ದಾನಗಳೂ, ಹೋಮವೂ, ಸ್ನಾನವೂ, ಧಾನ್ಯವೂ, ಎಲ್ಲವೂ ಕೂಡ ಕೋಟಿಗುಣಿತವಾಗಿ ಫಲವನ್ನು ಕೊಡಲಿ. ಅದರಲ್ಲಿಯೂ ಚೈತ್ರಮಾಸದಲ್ಲಿ ಈ ಅಯೋಧ್ಯೆಯಲ್ಲಿ ಇವೆಲ್ಲವನ್ನೂ ಮಾಡಿದರೆ ವಿಶೇಷವಾಗಿ ಫಲಗಳನ್ನು ಕೊಡಲಿ.

೧೪. ಎಲ್ಲಾ ಪುಣ್ಯಪಟ್ಟಣಗಳಲ್ಲಿಯೂ ಕೂಡ ಈ ನನ್ನ ಪಟ್ಟಣವು ಮೊದಲನೆಯದಾಗಿರಲಿ. ಈ ಅಯೋಧ್ಯೆಯು ಮುಕ್ತಿಯನ್ನು ಕೊಡುವ ಪಟ್ಟಣವಾಗಿರಲಿ. ಇದೇ ನನ್ನ ವರವು.

೧೫. ಬೇರೆಯ ಪುಣ್ಯಸ್ಥಳಗಳಲ್ಲಿ ಅರವತ್ತು ವರ್ಷಗಳವರೆಗೆ ಸಾಧಿಸಿದ ಪುಣ್ಯಕೆಲಸಗಳ ಪುಣ್ಯವು ಈ ಅಯೋಧ್ಯೆಯಲ್ಲಿ ಅವನ್ನು ಒಂದುದಿನ ಆಚರಿಸುವುದರಿಂದಲೇ ಬರಲಿ.

೧೬. ಈ ಅಯೋಧ್ಯೆಯು ಮುಕ್ತಿಯನ್ನು ಕೊಡುವುದರಲ್ಲಿ ಉತ್ತಮವಾದುದು. ಶುಭಪ್ರದವಾದುದು. ನೀನು ಇದಕ್ಕೋಸ್ಕರ ವರವನ್ನು ಯಾಚಿಸಿದೆ ನಾನೂ ಕೂಡ ಆದರದಿಂದ ಕೊಟ್ಟಿದ್ದೇನೆ.

ತವ ವಾಕ್ಯಾದ್ಗೌರವೇಣ ತವ ಕಾಶ್ಯಾಶ್ಶತಾಧಿಕಾ ।
ಭವಿಷ್ಯತಿ ಪುರೀ ಚೇಯಮಯೋಧ್ಯಾ ಮಮ ವಲ್ಲಭಾ ॥ ೧೭ ॥

ನದೀಷು ಸರಯೂಶ್ಚೇಯಂ ಶ್ರೇಷ್ಠಾಸ್ತು ವಚನಾನ್ಮಮ ।
ಸರಯೂ ಸದೃಶೀ ನಾನ್ಯಾ ನದೀ ಭೂತಾ ಭವಿಷ್ಯತಿ ॥ ೧೮ ॥

ಅಸ್ಯಾಮಪಿ ಮಯಾ ಚೇದಂ ರಾಮತೀರ್ಥಂ ವಿನಿರ್ಮಿತಂ ।
ನಿಜತೇಜಃಪ್ರತಾಪೇನ ತೀರ್ಥೇಷು ಮುಕುಟೋಪಮಂ ॥ ೧೯ ॥

ಭವಿಷ್ಯತಿ ನ ಸಂದೇಹಃ ಸರ್ವಪಾತಕನಾಶನಂ ।
ತಥಾ ಯಾನಿ ಪೃಥಿವ್ಯಾಂ ಹಿ ಮಯಾ ತೀರ್ಥಾನಿ ವೈ ಪುರಾ ॥ ೨೦ ॥

ಲಿಂಗಾನ್ಯಪಿ ಸ್ವೀಯನಾಮ್ನಾ ಕೃತಾನಿ ತಾನಿ ಶಂಕರ ।
ಸ್ನಾನೇನ ದರ್ಶನಾಚಾರ್ಯೈರ್ಮುಕ್ತಿದಾನ್ಯತ್ರ ಸಂತು ವೈ ॥ ೨೧ ॥

---

೧೭. ನಿನ್ನ ಮಾತಿನ ಗೌರವದಿಂದಲೇ ನಿನ್ನ ಕಾಶಿಗಿಂತಲೂ ನೂರರಷ್ಟು ಹೆಚ್ಚಾಗಿರುವಂತೆ ಈ ನನ್ನ ಅಯೋಧ್ಯೆಯನ್ನು ಮಾಡಿದ್ದೇನೆ.

೧೮. ನದಿಗಳಲ್ಲಿ ಈ ಸರಯೂ ನದಿಯು ನನ್ನ ಮಾತಿನಂತೆ ಶ್ರೇಷ್ಠವಾಗಿರಲಿ. ಸರಯೂ ನದಿಗೆ ಸಮವಾದ ನದಿಯು ಮತ್ತೊಂದಿಲ್ಲದಂತೆ ಅಷ್ಟು ಶ್ರೇಷ್ಠವಾಗಿರಲಿ.

೧೯. ಈ ಸರಯೂನದಿಯಲ್ಲಿ ನಾನು ಈ ರಾಮತೀರ್ಥವನ್ನು ನಿರ್ಮಿಸಿದ್ದೇನೆ. ಈ ತೀರ್ಥವು ತನ್ನ ಪ್ರಭಾವದಿಂದ ಎಲ್ಲಾ ತೀರ್ಥಗಳಿಗಿಂತಲೂ ಉತ್ತಮವಾಗುತ್ತದೆ.

೨೦–೨೧ ಇದು ಎಲ್ಲಾ ಪಾಪಗಳನ್ನೂ ನಾಶಮಾಡುತ್ತದೆ. ಇದರಲ್ಲಿ ಸಂದೇಹವಿಲ್ಲ. ಭೂಮಿಯಲ್ಲಿ ಮೊದಲಿನಿಂದ ಇದ್ದ ತೀರ್ಥಗಳೂ ನಿನ್ನಿಂದ ಮಾಡಲ್ಪಟ್ಟ ತೀರ್ಥಗಳೂ ಎಲ್ಲೆಲ್ಲಿ ನೀನು ನಿರ್ಮಿಸಿದ ಲಿಂಗಗಳಿವೆಯೋ ಅವುಗಳೂ ಅಲ್ಲಿ ಸ್ನಾನಮಾಡುವುದರಿಂದಲೂ, ಪೂಜೆಮಾಡುವುದರಿಂದಲೂ, ದರ್ಶನಮಾಡುವುದರಿಂದಲೂ, ಇವೆಲ್ಲವೂ ಅವರಿಗೆ ಮುಕ್ತಿಯನ್ನು ಕೊಡುವುವುಗಳಾಗಲಿ.

ರಾಮತೀರ್ಥೇ ಚೈತ್ರಮಾಸೇ ಪ್ರತ್ಯಬ್ದಂ ಭುವಿ ಮಾನವೈಃ ।
ಸ್ನಾತವ್ಯಂ ವಿಧಿನಾ ಸಮ್ಯಕ್ ನಿಯಮೈರ್ಮಮವಾಕ್ಯತಃ ॥ ೨೨ ॥

ಯಚ್ಛ್ರೇಯಶ್ಚಾಶ್ವಮೇಧೇನ ಯದ್ಗೋಮೇಧೇನ ವೈ ಫಲಂ ।
ಯತ್ಫಲಂ ಸೋಮಯಾಗೇನ ತಚ್ಚೈತ್ರೇಽತ್ರಾವಗಾಹನಾತ್ ॥ ೨೩ ॥

ಸೂರ್ಯಗ್ರಹೇ ಕುರುಕ್ಷೇತ್ರೇ ಯಚ್ಛ್ರೇಯಃ ಸ್ನಾನದಾನತಃ ।
ತಚ್ಛ್ರೇಯಃ ಸ್ಯಾನ್ಮಧೌ ಸ್ನಾನಾದಯೋಧ್ಯಾಯಾಂ ಸುರೇಶ್ವರ ॥ ೨೪ ॥

ಅಯೋಧ್ಯಾಯಾಂ ರಾಮತೀರ್ಥೇ ಸರಯೂಜಲಸಂಸ್ಥಿತೇ ।
ಚೈತ್ರಸ್ನಾನಂ ಪ್ರಕುರ್ವಾಣಾಸ್ತೇ ನರಾ ಮೋಕ್ಷಭಾಗಿನಃ ॥ ೨೫ ॥

ಯಥಾ ಮಾಘೇ ಪ್ರಯಾಗೇ ಹಿ ಸ್ನಾತವ್ಯಂ ಸುಖಮಿಚ್ಛತಾ ।
ಕಾರ್ತಿಕೇಪಿ ಯಥಾ ಕಾಶ್ಯಾಂ ಪಂಚಗಂಗಾಜಲೇ ಸ್ಮೃತಃ ॥ ೨೬ ॥

೨೨-೨೩. ಈ ರಾಮತೀರ್ಥದಲ್ಲಿ ಚೈತ್ರಮಾಸದಲ್ಲಿ ಪ್ರತಿವರ್ಷವೂ ಸ್ನಾನಮಾಡಬೇಕು. ಇದು ನನ್ನ ವರದ ಮಾತು. ಆ ರೀತಿಯಾಗಿ ನಿಯಮದಿಂದ ಸ್ನಾನಮಾಡಿದರೆ ಅಶ್ವಮೇಧದಿಂದ ಯಾವ ಪುಣ್ಯಬರುವುದೋ ಗೋಮೇಧ ಯಾಗದಿಂದ ಯಾವ ಫಲವು ಬರುವುದೋ, ಸೋಮಯಾಗದಿಂದ ಯಾವ ಫಲವು ಬರುವುದೋ, ಆ ಫಲಗಳೆಲ್ಲವೂ ಖಂಡಿತವಾಗಿಯೂ ಅವನಿಗೆ ಬರುತ್ತವೆ.

೨೪. ಕುರುಕ್ಷೇತ್ರದಲ್ಲಿ ಸೂರ್ಯಗ್ರಹಣದಲ್ಲಿ ಸ್ನಾನದಾನಗಳನ್ನು ಮಾಡಿದರೆ ಯಾವ ಫಲವು ಬರುತ್ತದೆಯೋ ಆ ಫಲವು ಚೈತ್ರಮಾಸದಲ್ಲಿ ಅಯೋಧ್ಯೆಯಲ್ಲಿ ರಾಮತೀರ್ಥದಲ್ಲಿ ಸ್ನಾನಮಾಡುವುದರಿಂದ ಬರುತ್ತದೆ.

೨೫-೨೬. ಅಯೋಧ್ಯೆಯ ಸರಯೂ ನದಿಯ ರಾಮತೀರ್ಥದಲ್ಲಿ ಸ್ನಾನವನ್ನು ಮಾಡಿದವರು ಮೋಕ್ಷವನ್ನು ಹೊಂದುತ್ತಾರೆ. ಸುಖವನ್ನು ಅಪೇಕ್ಷಿಸುವವನು ಮಾಘಮಾಸದಲ್ಲಿ ಪ್ರಯಾಗದಲ್ಲಿ ಸ್ನಾನವನ್ನು ಮಾಡಬೇಕು. ಅಂತೆಯೇ ಕಾರ್ತಿಕದಲ್ಲಿ ಕಾಶಿಯಲ್ಲಿ ಪಂಚಗಂಗೆಯಲ್ಲಿ ಸ್ನಾನಮಾಡಿದರೆ ಆ ಆ ಸುಖವು ಬರುವುದು.

ದ್ವಾರಕಾಯಾಂ ಯಥಾ ಪ್ರೋಕ್ತೋ ವೈಶಾಖಶ್ಚಕ್ರತೀರ್ಥಕೇ |
ಅಯೋಧ್ಯಾಯಾಂ ರಾಮತೀರ್ಥೇ ತಥಾ ಚೈತ್ರೇವಗಾಹನಂ || ೨೭ ||

ಕರಣೀಯಂ ನರೈರ್ಭಕ್ತ್ಯಾ ವಚನಾನ್ಮಮ ಸರ್ವದಾ |
ಸರ್ವೇಷ್ವಪಿ ಚ ಮಾಸೇಷು ಪ್ರಥಮಸ್ಸಕಲೈರ್ಜನೈಃ || ೨೮ ||

ಏತಾವತ್ಕಾಲಪರ್ಯಂತಂ ಮಾರ್ಗಶೀರ್ಷಃ ಪ್ರಗೀಯತೇ |
ಅದ್ಯಾರಭ್ಯ ಮಧುಶ್ಚಾಯಂ ಪ್ರಥಮಃ ಖ್ಯಾತಿ ಮೇಷ್ಯತಿ || ೨೯ ||

ಯಥಾ ದೇವೇಷು ಪ್ರಥಮಸ್ತ್ವಂ ಮಹೇಶಸ್ತಥಾ ಮಧು |
ಮಾಸೇಷು ಪ್ರಥಮಶ್ಚಾಸ್ತು ತಥಾಯೋಧ್ಯಾ ಪುರೀಷ್ವಪಿ || ೩೦ ||

---

೨೭. ಅಂತೆಯೇ ಸುಖಾಪೇಕ್ಷಿಯು ದ್ವಾರಕೆಯಲ್ಲಿ ವೈಶಾಖದಲ್ಲಿ ಚಕ್ರತೀರ್ಥದಲ್ಲಿ ಸ್ನಾನಮಾಡಬೇಕು. ಮೇಲೆ ಹೇಳಿದುವುಗಳಲ್ಲಿ ಸ್ನಾನದಿಂದ ಬರುವ ಫಲವು ಆಯೋಧ್ಯೆಯಲ್ಲಿ ರಾಮತೀರ್ಥದಲ್ಲಿ ಚೈತ್ರಮಾಸದಲ್ಲಿ ಸ್ನಾನ ಮಾಡುವುದರಿಂದಲೇ ಬರುತ್ತದೆ.

೨೮. ನನ್ನ ಮಾತಿನಂತೆ ಜನರು ನಂಬಿಕೊಂಡು ಮಾಡಬೇಕು. ಇದಲ್ಲದೆ ಎಲ್ಲಾ ತಿಂಗಳಲ್ಲಿಯೂ ಮೊದಲಿನಲ್ಲಿ ಎಲ್ಲರೂ ಈ ರಾಮತೀರ್ಥದಲ್ಲಿ ಸ್ನಾನಮಾಡ ಬೇಕು.

೨೯. ಇಲ್ಲಿಯವರೆಗೂ ಮಾರ್ಗಶೀರ್ಷಮಾಸವು ಇಲ್ಲಿ ಸ್ನಾನಕ್ಕೆ ಪ್ರಸಿದ್ಧ ವಾಗಿದ್ದಿತು. ಇಂದಿನಿಂದ ಮೊದಲುಗೊಂಡು ಚೈತ್ರಮಾಸವು ಪುಣ್ಯಕ್ಕೆ ಮೊದ ಲೆಂಬುದಾಗಿ ಎನ್ನಿಸಿಕೊಳ್ಳುತ್ತದೆ.

೩೦. ಎಲೈ ಶಂಭುವೆ ! ನೀನು ದೇವತೆಗಳಲ್ಲಿ ಹೇಗೆ ಮೊದಲನೆಯವನೋ ಹಾಗೆ ಈ ಚೈತ್ರಮಾಸವು ಮಾಸಗಳಲ್ಲಿ ಮೊದಲನೆಯದುದಾಗಿರಲಿ. ಈ ಅಯೋಧ್ಯೆಯೂ ಕೂಡ ಮುಕ್ತಿಕೊಡುವ ಪಟ್ಟಣಗಳಲ್ಲಿ ಮೊದಲನೆಯದಾಗಿ ಆಗಲಿ.

ಚೈತ್ರ ಮಾಸೇ ತು ಸಂಪ್ರಾಪ್ತೇ ಸರ್ವೇ ದೇವಾಸ್ಸವಾಸವಾಃ ।
ಬಹಿರ್ಜಲಂ ಸಮಾಶ್ರಿತ್ಯ ತಿಷ್ಠಧ್ವಂ ಹಿ ಮಮಾಜ್ಞಯಾ ॥ ೩೧ ॥

ಪ್ರತ್ಯಬ್ದಂ ಚೈತ್ರಮಾಸೇತ್ರ ಯಥೇದಾನೀಂ ಸಮಾಗತಾಃ ।
ಆಗಂತವ್ಯಂ ತಥಾ ಸರ್ವೈಸ್ತ್ರೈಲೋಕ್ಯಾಂತರವಾಸಿಭಿಃ ॥ ೩೨ ॥

ಜರತೈರಾತುರೈಃ ಸ್ತ್ರೀಭಿರ್ಯೇಷಾಂ ಯತ್ಸನ್ನಿಧೌ ಮಮ ।
ರಾಮತೀರ್ಥಂ ಪ್ರಗಂತವ್ಯಂ ಸರ್ವತ್ರ ಭುವಿ ಶಂಕರ ॥ ೩೩ ॥

ಚೈತ್ರಮಾಸೇವಗಾಹಾರ್ಥಂ ವಚನಾನ್ಮಮ ಸರ್ವದಾ ।
ಇತಿ ರಾಮವಚಃ ಶ್ರುತ್ವಾ ಗಿರಿಜಾ ಪ್ರಾಹ ಜಾನಕೀಂ ॥ ೩೪ ॥

ಸೀತೇ ವರಾಸ್ತ್ವಯಾ ದೇಯಾ ಇದಾನೀಂ ವಚನಾನ್ಮಮ ।
ನಾರೀಣಾಂ ಚ ಹಿತಾರ್ಥಂ ಹಿ ಸರ್ವಲೋಕೋಪಕಾರಕಾಃ ॥ ೩೫ ॥

---

೩೧. ಚೈತ್ರಮಾಸವು ಬಂದೊಡದೆಯೇ ದೇವತೆಗಳೂ ಇಂದ್ರನೂ ಊರಿನ ಹೊರಗಿರುವ ನೀರಿನ ಬಳಿಗೆ ಹೋಗಿ ಅದನ್ನು ಆಶ್ರಯಿಸಿಕೊಂಡು ಇರಬೇಕು. ಇದು ನನ್ನ ಅಪ್ಪಣೆಯು.

೩೨–೩೩. ನೀವೆಲ್ಲರೂ ಈ ಚೈತ್ರಮಾಸದಲ್ಲಿ ಇಲ್ಲಿಗೆ ಹೇಗೆ ಬಂದಿರುವಿರೋ ಹಾಗೆ ಪ್ರತಿವರ್ಷವೂ ಮೂರುಲೋಕದಲ್ಲಿರುವವರೆಲ್ಲರೂ ಚೈತ್ರಮಾಸದಲ್ಲಿ ಇಲ್ಲಿಗೆ ಬರಬೇಕು. ಮುದುಕರಾಗಲಿ, ರೋಗಿಗಳಾಗಲಿ, ಹೆಂಗಸರಾಗಲಿ, ಎಲ್ಲರೂ ಕೂಡ ಯಾರಿಗೆ ರಾಮತೀರ್ಥವು ಎಲ್ಲಿ ಹತ್ತಿರದಲ್ಲಿದೆಯೋ ಅವರವರು ಅಲ್ಲಿಗೆ ಹೋಗಬೇಕು.

೩೪. ಚೈತ್ರಮಾಸದಲ್ಲಿ ಅವರೆಲ್ಲರೂ ಹೋಗಿ ಅಲ್ಲಿ ಸ್ನಾನಮಾಡಬೇಕು. ಇದು ನನ್ನ ವರವು. ರಾಮನು ಹೀಗೆ ಹೇಳಿದುದನ್ನು ಕೇಳಿ ಪಾರ್ವತಿಯು ಜಾನಕಿಯನ್ನು ಕುರಿತು ಇಂತೆಂದಳು.

೩೫. ಎಲೈ ಸೀತೆಯೇ ! ಈಗ ನನ್ನ ಮಾತಿನಂತೆ ನೀನು ವರವನ್ನು ಕೊಡಬೇಕು. ಅದು ಸರ್ವಲೋಕಕ್ಕೂ ಉಪಕಾರವಾಗಿರಬೇಕಲ್ಲದೆ ಹೆಂಗಸರಿಗೆ ವಿಶೇಷವಾಗಿ ಉಪಕಾರವಾಗಿರಬೇಕು. ಎಂದಳು.

ತದಾದ್ರಿಜಾವಚಶ್ಶ್ರುತ್ವಾ ಜಾನಕೀ ಪ್ರಾಹ ಸಾದರಂ ।
ಪೃಥಿವ್ಯಾಂ ಮಮ ತೀರ್ಥಾನಿ ಯಾನಿ ಸಂತಿ ಸಹಸ್ರಶಃ ॥ ೩೬ ॥

ಅತ್ರಾಪಿ ಚ ಮಹಚ್ಛ್ರೇಷ್ಠಂ ಯತ್ರ ಸ್ನಾತಂ ಮಯಾಧುನಾ ।
ತೇಷು ಚೈತ್ರತೃತೀಯಾ ಯಾ ಯಾವದ್ವೈಶಾಖಸಂಭವಾ ॥ ೩೭ ॥

ಸಿತಾತೃತೀಯಾಽಕ್ಷಯ್ಯಾಖ್ಯಾ ತಾವತ್ ಸ್ತ್ರೀಭಿಸ್ತು ಸಾದರಂ ।
ಸ್ನಾತವ್ಯಂ ಸೀತಲಾಗೌರೀಸಂಜ್ಞಕಂ ಸ್ನಾನಮುತ್ತಮಂ ॥ ೩೮ ॥

ಸೌಭಾಗ್ಯದಂ ಮಾಸಮೇಕಂ ಪುತ್ರಪೌತ್ರಪ್ರವರ್ಧನಂ ।
ಸರ್ವತ್ರರಾಮತೀರ್ಥಸ್ಯ ವಾಮೇ ತೀರ್ಥಂ ಮಮಾಸ್ತಿ ಹಿ ॥ ೩೯ ॥

ಇತಿ ದತ್ವಾವರಾನ್ಸೀತಾಽಽಸೀತ್ತೂಷ್ಣೀಂ ರಾಮಸನ್ನಿಧೌ ।
ತತೋರಾಮಂ ಗುರುಃ ಪ್ರಾಹಗಂತವ್ಯಂ ಯಜ್ಞಮಂಟಪಂ ॥ ೪೦ ॥

---

೩೬. ಆಗ ಸೀತೆಯು ಈ ಪಾರ್ವತಿಯ ಮಾತನ್ನು ಕೇಳಿ ಇಂತೆಂದಳು. ನಾನು ಸ್ನಾನಮಾಡಿದ ತೀರ್ಥವು ಭೂಮಿಯಲ್ಲಿ ಅನೇಕವಾಗಿವೆ. ನಾನು ಇಲ್ಲಿ ಸ್ನಾನಮಾಡುತ್ತಿರುವ ತೀರ್ಥವೂ ಇದ್ದುಕೊಂಡೇ ಇರುವುದು.

೩೭–೩೮. ಇವುಗಳೆಲ್ಲದರಲ್ಲಿಯೂ ಕೂಡ ಚೈತ್ರಶುಕ್ಲ ತೃತೀಯೆಯಿಂದ ಮೊದಲುಗೊಂಡು ವೈಶಾಖಮಾಸದ ತೃತೀಯೆಯೆಂಬ ಅಕ್ಷತದಿಗೆಯವರೆಗೆ ಪೂರ್ತಿಯಾಗಿ ಹೆಂಗಸರು ಇಲ್ಲಿ ಸ್ನಾನಮಾಡಬೇಕು. ಇದಕ್ಕೆ ಸೀತಳಾಗೌರೀ ಸ್ನಾನವೆಂದು ಹೆಸರು.

೩೯. ಈ ಒಂದುತಿಂಗಳೂ ಕೂಡ ಮಾಡಿದ ಸ್ನಾನವು ಸೌಭಾಗ್ಯವನ್ನು ಕೊಡುತ್ತದೆ. ಮಕ್ಕಳನ್ನು ಕೊಡುತ್ತದೆ. ರಾಮತೀರ್ಥಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಅವುಗಳ ಎಡಗಡೆಯಲ್ಲಿ ನನ್ನ ತೀರ್ಥ ವಿರುವುದು.

೪೦. ಸೀತೆಯು ಈ ರೀತಿಯಾಗಿ ವರಗಳನ್ನು ಕೊಟ್ಟು ರಾಮನ ಬಳಿಯಲ್ಲಿ ಸುಮ್ಮನೆ ನಿಂತಳು. ಅನಂತರ ಗುರುವಾದ ವಸಿಷ್ಠನು ರಾಮನನ್ನು ಕುರಿತು ಎಲೈ ರಾಮನೇ ! ಯಜ್ಞಮಂಟಪಕ್ಕೆ ಹೋಗಬೇಕು. ಹೊರಡು ಎಂದನು.

ತದ್ಗುರೋರ್ವಚನಂ ಶ್ರುತ್ವಾ ತಥೇತ್ಯುಕ್ತ್ವಾ ರಘೂದ್ವಹಃ |
ಆರುರೋಹ ರಥಂ ಶೀಘ್ರಂ ಸೀತಯಾರ್ತ್ವಿಗ್ಜನೈಸ್ಸಹ || ೪೧ ||

ತತೋ ನೇದುರ್ದುಂದುಭೀನಾಂ ಭೇರೀಣಾಂ ನಿಸ್ವನಾಸ್ತತಃ |
ಮೃದಂಗಪಣವಾದೀನಾಂ ಮಹಾಘೋಷಾಸ್ಸಮಂತತಃ || ೪೨ ||

ವೇದಘೋಶಾಶ್ಚ ಸರ್ವತ್ರ ಜಯಶಬ್ದಾ ದ್ವಿಜೇರಿತಾಃ |
ಬಭೂವುರ್ಮಂತ್ರಶಬ್ದಾಶ್ಚ ನನೃತುಶ್ಚಾಪ್ಸರೋಗಣಾಃ || ೪೩ ||

ನಾನೋತ್ಸವೈಃ ಪೂರ್ವವಚ್ಚ ಕೌತುಕಾನಿ ಸಮಂತತಃ |
ಪಶ್ಯನ್ಯಯೌ ರಾಮಚಂದ್ರಶ್ಶನೈರಧ್ವರಮಂಟಪಂ || ೪೪ ||

ಅವರುಹ್ಯ ರಥಾಚ್ಛೀಘ್ರಂ ನೀತ್ವಾಗ್ನಿಂ ಪ್ರಕ್ಷಿಪತ್ಪುನಃ |
ಯಜ್ಞಕುಂಡೇ ರಾಮಚಂದ್ರಸ್ಸೀತಯಾರ್ತ್ವಿಗ್ಜನೈಸ್ಸಹ || ೪೫ ||

---

೪೧. ವಸಿಷ್ಠನ ಈ ಮಾತನ್ನು ಕೇಳಿ ರಾಮನು ಹಾಗೆಯೇ ಆಗಲಿ ಎಂದು ಸೀತೆಯೊಡನೆಯೂ, ಋತ್ವಿಜರೊಡನೆಯೂ ರಥವನ್ನು ಹತ್ತಿದನು.

೪೨. ಒಡನೆಯೇ ದುಂಧುಭಿಗಳೂ, ಭೇರಿಗಳೂ ಮೊಳಗಿದುವು. ಮೃದಂಗ ತಮಟೆ ಮುಂತಾದುವುಗಳನ್ನು ಬಡಿಯುತ್ತಿದ್ದರು. ಇವುಗಳ ಧ್ವನಿಯು ಅಂತರಿಕ್ಷವನ್ನೆಲ್ಲಾ ವ್ಯಾಪಿಸಿತು.

೪೩. ದ್ವಿಜರು ಜಯಜಯ ಎಂದೆನ್ನುತ್ತಾ ವೇದಘೋಷಗಳನ್ನು ಮಾಡಿದರು. ಮಂತ್ರಶಬ್ದಗಳೂ ಅಪಾರವಾಗಿ ಕೇಳಿಬಂದುವು. ಅಪ್ಸರಸ್ತ್ರೀಯರು ಕುಣಿಯುತ್ತಿದ್ದರು.

೪೪. ಹೊರಟಾಗ ನಡೆಯುತ್ತಿದ್ದಂತೆಯೇ ಮನೆಗೆ ಹೋಗುವಾಗಲೂ ಬಗೆಬಗೆಯ ಉತ್ಸವಗಳು ಮೊದಲಾದುವು. ಇವುಗಳೆಲ್ಲವನ್ನೂ ರಾಮಚಂದ್ರನು ನೋಡುತ್ತ ಯಾಗಮಂಟಪಕ್ಕೆ ನಿಧಾನವಾಗಿ ಹೋಗುತ್ತಿದ್ದನು.

೪೫–೪೬. ಮಂಟಪಕ್ಕೆ ಬಂದು ಅಗ್ನಿಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಯಜ್ಞಕುಂಡಕ್ಕೆ ಮತ್ತೆ ಆ ಅಗ್ನಿಯನ್ನು ಹಾಕಿ ಪ್ರತಿಷ್ಠೆಮಾಡಿದನು.

ಪೂರ್ಣಾಹುತಿಂ ತತೋ ದತ್ತ್ವಾ ವಸ್ತ್ರೈರಾಭರಣೈಃ ಫಲೈಃ ।
ಕೃತ್ವಾಽಗ್ನೇಃ ಪೂಜನಂ ಚಾಪಿ ಯಜ್ಞಪಾತ್ರಾಣಿ ರಾಘವಃ ॥ ೪೬ ॥

ತತೋ ವಿಸರ್ಜಯಾಮಾಸ ಯಜ್ಞಾಂತೇ ದಕ್ಷಿಣಾಂ ಬಹು ।
ದಾತುಂ ತಾನೃತ್ವಿಜಸ್ಸರ್ವಾನ್ ಸೌಮಿತ್ರಿಂ ರಾಘವೋಽಬ್ರವೀತ್ ॥ ೪೭ ॥

ಕೋಶಾಗಾರಂ ಲಕ್ಷ್ಮಣಾದ್ಯ ಸರ್ವೇ ಮೇ ಋತ್ವಿಜಸ್ತ್ವಯಾ ।
ನೀತ್ವಾ ದೂತಾನ್ನಿರಾಕೃತ್ಯ ತೂಷ್ಣಿಂ ಸ್ಥೇಯಂ ತತಃ ಪರಂ ॥ ೪೮ ॥

ಯಥೇಚ್ಛಯಾಮಿತಂ ಯೇನ ಗೃಹೀತಮುತ್ತಮಂ ವಸು ।
ತಸ್ಯಾಶ್ರಮೇ ಪ್ರಾಪಣೀಯಂ ವಾಹನಾದ್ಯೈಶ್ಚ ತತ್ತ್ವಯಾ ॥ ೪೯ ॥

ಆ ಅಗ್ನಿಯಲ್ಲಿ ರಾಮಚಂದ್ರನು ಸೀತೆಯೊಡನೆ ಪೂರ್ಣಾಹುತಿಯನ್ನು ಕೊಟ್ಟನು. ಮತ್ತು ವಸ್ತ್ರಗಳಿಂದಲೂ, ಆಭರಣಗಳಿಂದಲೂ, ಫಲಗಳಿಂದಲೂ ಆ ಅಗ್ನಿಯನ್ನು ಪೂಜಿಸಿದನು.

೪೭. ಅನಂತರ ಯಜ್ಞಪಾತ್ರೆಗಳನ್ನು ವಿಸರ್ಜನೆಮಾಡಿದನು. ಯಜ್ಞದ ಕೊನೆಯಲ್ಲಿ ಆ ಋತ್ವಿಜರಿಗೆ ಬಹುವಾಗಿ ದಕ್ಷಿಣೆಯನ್ನು ಕೊಡಬೇಕೆಂದು ರಾಮನು ಸೌಮಿತ್ರಿಯನ್ನು ಕರೆದು ಇಂತೆಂದನು.

೪೮. ಎಲೈ ಲಕ್ಷ್ಮಣನೇ ! ಈ ಋತ್ವಿಕ್ಕುಗಳೆಲ್ಲರನ್ನೂ ನನ್ನ ಭಂಡಾರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಾಯುತ್ತಿರುವ ಸೇವಕರನ್ನು ದೂರವಾಗಿ ಕಳುಹಿಸಿ ನೀನು ಸುಮ್ಮನೆ ಇದ್ದುಬಿಡು.

೪೯. ಅವರು ಅವರವರಿಗೆ ಬೇಕಾದಷ್ಟು ಹಣವನ್ನು ತೆಗೆದುಕೊಳ್ಳಲಿ ಅನಂತರ ಅವರು ತೆಗೆದುಕೊಂಡ ಹಣವನ್ನು ಆಳುಗಳ ಕೈಯ್ಯಲ್ಲಿ ವಾಹನಗಳ ಮೇಲೆ ಹೇರಿ ಅವರವರ ಆಶ್ರಮಕ್ಕೆ ಕೊಟ್ಟು ಕಳುಹಿಸು.

ತತೋ ಮುನಿಜನಾನ್ ಸರ್ವಾನ್ದೇಯಂ ವಿಪುಲಹಸ್ತತಃ ।
ತದಾ್ರಮುದಜನಂ ಶ್ರುತ್ವಾ ಲಕ್ಷ್ಮಣೋಽಪಿ ತಥಾಕರೋತ್ ॥ ೫೦ ॥

ತತೋ ವಿಸರ್ಜಯಾಮಾಸ ಭೋಜಯಿತ್ವಾ ರಘೂತ್ತಮಃ ।
ಋತ್ವಿಗ್ಜನಾನ್ಸಂವೃಣೀತಾನ್ಯಾಜನೋದಾಖ್ಯಕರ್ಮಣಿ ॥ ೫೧ ॥

ತತೋ ರಾಮೋಽಮರಾನ್ಸರ್ವಾನ್ ಶಿವಾದ್ಯಾನ್ನಿಭವೈರ್ನಿಜೈಃ ।
ಪೂಜಯಾಮಾಸ ವಿಧಿವದ್ವಸ್ತ್ರಾಲಂಕಾರವಾಹನೈಃ ॥ ೫೨ ॥

ದದೌ ಕೇಷಾಂ ಸ ತುರುಗಾನ್ ಕೇಷಾಂ ಸ ಶಿಬಿಕಾಂ ದದೌ ।
ಕೇಷಾಂ ರಥಾನ್ ಗಜಾನ್ ಕೇಷಾಂ ದದೌ ಶಸ್ತ್ರಾಣ್ಯಪೀಶ್ವರಃ ॥ ೫೩ ॥

ಏವಂ ಪೃಥ್ವೀಪತಿಶ್ಚಾಪಿ ಸಾವರೋಧಾನ್ ಸಸೇವಕಾನ್ ।
ವಸ್ತ್ರೈರಾಭರಣೈರ್ಯಾನೈಃ ಪೂಜಯಾಮಾಸ ಭೋಜನೈಃ ॥ ೫೪ ॥

---

೫೦. ಅನಂತರ ಮುನಿಗಳೆಲ್ಲರಿಗೂ ದಕ್ಷಿಣೆಯನ್ನು ಕೈಹಿಡಿಯದೆ ಬಹುವಾಗಿ ಕೊಡಬೇಕು. ಎಂದು ರಾಮನು ಹೇಳಿದೊಡನೆಯೇ ಲಕ್ಷ್ಮಣನು ಹಾಗೆಯೇ ಮಾಡಿದನು.

೫೧. ಅನಂತರ ರಾಮನು ಆ ಋತ್ವಿಜರಿಗೆ ಭೋಜನವನ್ನು ಮಾಡಿಸಿ ಆ ಯಜ್ಞಕರ್ಮದಲ್ಲಿ ಯಾರು ಯಾರನ್ನು ವರಿಸಿದ್ದನೋ ಅವರೆಲ್ಲರನ್ನೂ ವಿಸರ್ಜನೆ ಮಾಡಿದನು.

೫೨. ಅನಂತರ ಅಲ್ಲಿಗೆ ಬಂದಿದ್ದ ಶಿವನೇ ಮುಂತಾದ ದೇವತೆಗಳನ್ನು ವಸ್ತ್ರ, ಅಲಂಕಾರ ವಾಹನಗಳಿಂದ ತನ್ನ ಯೋಗ್ಯತೆಗೆ ತಕ್ಕಂತೆ ವಿಭವದಿಂದ ಪೂಜಿಸಿದನು.

೫೩. ಕೆಲವರಿಗೆ ಕುದುರೆಗಳನ್ನೂ, ಕೆಲವರಿಗೆ ಪಲ್ಲಕ್ಕಿಗಳನ್ನೂ ಕೆಲವರಿಗೆ ರಥಗಳನ್ನೂ ಕೆಲವರಿಗೆ ಆನೆಗಳನ್ನೂ, ಕೆಲವರಿಗೆ ಶಸ್ತ್ರಗಳನ್ನೂ ಕೊಟ್ಟನು.

೫೪. ಇದೇ ರೀತಿಯಾಗಿ ಆ ಯಜ್ಞಕ್ಕೆ ಬಂದಿದ್ದ ರಾಜರಿಗೂ ಅವರ ಅಂತಃಪುರದವರಿಗೂ, ಅವರ ಸೇವಕರಿಗೂ ವಸ್ತ್ರ, ಆಭರಣ, ಯಾನ, ಭೋಜನ ಮುಂತಾದುವುಗಳಿಂದ ತೃಪ್ತಿಪಡಿಸಿದನು.

ತತೋ ರಾಮಃ ಸ್ವಶರೀರೇ ದಿವ್ಯವಸ್ತ್ರಾಣಿ ಸಂದಧೌ ।
ತದಾ ತಂ ಪೂಜಯಾಮಾಸುರ್ಬಲಿಭಿರ್ವಿಬುಧಾ ನೃಪಾಃ ॥ ೫೫ ॥

ಸರಿತ್ಸಮುದ್ರಾ ಗಿರಯೋ ನಾಗಾ ಗಾವಃ ಖಗಾ ಮೃಗಾಃ ।
ದ್ಯೌಃ ಕ್ಷಿತಿಸ್ಸರ್ವಭೂತಾನಿ ಸಮಾಜಹ್ರುರುಪಾಯನಂ ॥ ೫೬ ॥

ಸೀತಯಾ ಸ ಮಹಾರಾಜಸ್ಸುವಾಸಾಸ್ಸ್ವಭ್ಯಲಂಕೃತಃ ।
ಬಂಧುಭಿಸ್ಸೇವ್ಯಮಾನಸ್ಸ ವಿರೇಜೇಗ್ನಿರಿವಾಪರಃ ॥ ೫೭ ॥

ತಸ್ಮೈ ದದೌ ವೈ ಧನದೋ ಹೈಮಂ ವೀರವರಾಸನಂ ।
ವರುಣಸ್ಸಲಿಲಸ್ರಾವೀ ಹ್ಯಾತಪತ್ರಂ ಶಶಿಪ್ರಭಂ ॥ ೫೮ ॥

---

೫೫. ಅನಂತರ ರಾಮನು ಆ ಯಜ್ಞದ ಉಡುಪನ್ನು ವಿಸರ್ಜಿಸಿ ಬೇರೆಯಾದ ಉಡುಪನ್ನು ಹಾಕಿಕೊಂಡನು. ಆಗ ಅಲ್ಲಿಗೆ ಬಂದಿದ್ದ ದೇವತೆಗಳೂ ರಾಜರೂ, ಆ ರಾಮನನ್ನು ಪೂಜಾದ್ರವ್ಯಗಳಿಂದ ಪೂಜಿಸಿದರು.

೫೬. ನದಿಗಳೂ, ಸಮುದ್ರಗಳೂ, ಬೆಟ್ಟಗಳೂ, ನಾಗಗಳೂ, ಗೋವುಗಳೂ, ಪಕ್ಷಿಗಳೂ, ಮೃಗಗಳೂ, ಅಂತರಿಕ್ಷವೂ, ಕೊನೆಗೆ ಎಲ್ಲಾ ಪ್ರಾಣಿಗಳೂ ಆ ರಾಮನಿಗೆ ಕಪ್ಪವನ್ನು ಒಪ್ಪಿಸಿದರು.

೫೭ ರಾಮನೂ, ಸೀತೆಯೂ, ಒಳ್ಳೊಳ್ಳೆಯ ಬಟ್ಟೆಗಳಿಂದ ಅಲಂಕೃತರಾಗಿ ತಮ್ಮಂದಿರಿಂದ ಸೇವಿತರಾಗಿ ಮತ್ತೊಬ್ಬ ಅಗ್ನಿಯಂತೆ ಪ್ರಕಾಶಿಸುತ್ತಿದ್ದರು.

೫೮. ಆಗ ಕುಬೇರನು ರಾಮನಿಗೆ ಒಂದು ಉತ್ತಮವಾದ ವೀರಾಸನವನ್ನು ಕೊಟ್ಟನು. ವರುಣನು ನೀರಿನಿಂದ ಒದ್ದೆಯಾಗಿರುವ, ನೀರನ್ನು ತೊಟ್ಟಿಕ್ಕಿಸುತ್ತಿರುವ, ಚಂದ್ರನಂತೆ ಮನೋಹರವಾದ ಶ್ವೇತಚ್ಛತ್ರವನ್ನು ಕೊಟ್ಟನು.

ನಾಯುಶ್ಚ ವಾಲವ್ಯಜನೇ ಧರ್ಮಃ ಕೀರ್ತಿಮಯಾಂ ಸ್ರಜಂ ।
ಇಂದ್ರಃ ಕಿರೀಟಮುತ್ಕೃಷ್ಟಂ ದಂಡಂ ಸಂಯಮನಂ ಯಮಃ ॥ ೫೯ ॥

ಬ್ರಹ್ಮಾ ಬ್ರಹ್ಮಮಯಂ ವರ್ಮ ಭಾರತೀ ಹಾರಮುತ್ತಮಂ ।
ದಶಚಂದ್ರಮಸಿಂ ರುದ್ರಶ್ಶತಚಂದ್ರಮಥಾಂಬಿಕಾ ॥ ೬೦ ॥

ಸೋಮೋಽಮೃತಮಯಾನಶ್ವಾಂಸ್ತ್ವಷ್ಟಾ ರೂಪಾಶ್ರಯಂ ರಥಂ ।
ಅಗ್ನಿರಾಜಗವಂ ಚಾಪಂ ಸೂರ್ಯೋ ರಶ್ಮಿಮಯಾನಿಷೂನ್ ॥ ೬೧ ॥

ಭೂಃ ಪಾದುಕೇ ಯೋಗಮಯೇ ದ್ಯೌಃ ಪುಷ್ಪಾವಲಿಮನ್ವಹಂ ।
ನಾಟ್ಯಂ ಸುಗೀತಂ ವಾದಿತ್ರಮಂತರ್ಧಾನಂ ಚ ಖೇಚರಾಃ ॥ ೬೨ ॥

---

೫೯. ವಾಯುವು ಎರಡು ಚಮರಿಗಳನ್ನು ಕೊಟ್ಟನು. ಧರ್ಮನು ಕೀರ್ತಿಯ ರೂಪವಾದ ಒಂದು ಹಾರವನ್ನು ಕೊಟ್ಟನು. ಇಂದ್ರನು ಒಂದು ಉತ್ತಮವಾದ ಕಿರೀಟವನ್ನೂ, ಯಮನು ಉತ್ಕೃಷ್ಟವಾದ ದಂಡವನ್ನೂ ಕೊಟ್ಟರು.

೬೦. ಬ್ರಹ್ಮನು ಪರಬ್ರಹ್ಮರೂಪವಾದ ಕವಚವನ್ನೂ, ಸರಸ್ವತಿಯು ಉತ್ತಮವಾದ ಹಾರವನ್ನೂ, ರುದ್ರನು ದಶಚಂದ್ರ ಖಡ್ಗವನ್ನೂ ಪಾರ್ವತಿಯು ಶತಚಂದ್ರ ಖಡ್ಗವನ್ನೂ ಕೊಟ್ಟರು.

೬೧. ಚಂದ್ರನು ಅಮೃತಮಯವಾದ ಕುದುರೆಗಳನ್ನೂ, ತ್ವಷ್ಟನು ಸೌಂದರ್ಯವಾದ ರಥವನ್ನೂ, ಅಗ್ನಿಯು, ಅಜಗವವೆಂಬ ಧನುಸ್ಸನ್ನೂ, ಸೂರ್ಯನು ರಶ್ಮಿರೂಪದ ಬಾಣಗಳನ್ನೂ ಕೊಟ್ಟರು.

೬೨. ಭೂಮಿಯು ಯೋಗಮಯವಾದ ಪಾದುಕೆಗಳನ್ನೂ, ಸ್ವರ್ಗ ದೇವತೆಯು ನಿತ್ಯಪುಷ್ಪಮಾಲಿಕೆಯನ್ನೂ, ಖೇಚರರು ನೃತ್ಯ, ಗೀತ, ವಾದ್ಯ, ವಸ್ತ್ರಗಳನ್ನೂ ಅಂತರ್ಧಾನವಾಗುವಿಕೆಯನ್ನೂ ಕೊಟ್ಟರು.

ಋಷಯಶ್ಚಾಶಿಷಸ್ಸತ್ಯಾಸ್ಸಮುದ್ರಶ್ಶಂಖಮಾತ್ಮಜಂ ।
ಸಿಂಧವಃ ಪರ್ವತಾ ನದ್ಯೋ ರಥವೀಥಿರ್ಮಹಾತ್ಮನಃ ॥ ೬೩ ॥

ತತೋ ನೃಪಾ ದದುಸ್ಸರ್ವೇ ಸ್ಯಂದನಾಂಸ್ತುರಗಾನ್ ಗಜಾನ್ ।
ಶಿಬಿಕಾಗೋವೃಷಾನ್ ಖಡ್ಗಾನ್ ದಾಸೀರ್ದಾಸೋಷ್ಟ್ರಖೇಚರಾನ್ ॥ ೬೪ ॥

ಸೀತಾಯೈ ನೃಪಪತ್ನ್ಯಶ್ಚ ದೇವಪತ್ನ್ಯಸ್ಸಹಸ್ರಶಃ ।
ವಸ್ತ್ರಾಲಂಕಾರಯಾನಾನಿ ಮಾಂಗಲ್ಯಾನ್ಯಥ ಕಂಚುಕೀಃ ॥ ೬೫ ॥

ಕ್ರೀಡೋಪಕರಣಾದೀನಿ ದದುಸ್ತಾಃ ಪಕ್ಷಿಪಂಜರಾನ್ ।
ತತಸ್ತೈಃ ಪೂಜಿತಸ್ಸರ್ವೈಸ್ಸಿತಯಾ ರಘುನಾಯಕಃ ॥ ೬೬ ॥

ಆರುರೋಹ ರಥಂ ದಿವ್ಯಂ ವಹ್ನಿನಾ ವಂದಿಭಿಃ ಸ್ತುತಃ ।
ಸ್ವಸ್ತ್ರೀಭಿಃ ನೃಪಪತ್ನೀಭಿರ್ವಿಮಾನೇನ ಮುನೀಶ್ವರಾಃ ॥ ೬೭ ॥

---

೬೩. ಋಷಿಗಳು ಸತ್ಯವಾದ ಆಶೀರ್ವಾದವನ್ನೂ ಸಮುದ್ರರಾಜನು ತನ್ನಲ್ಲಿ ಹುಟ್ಟಿದ ಶಂಖವನ್ನೂ, ಸಮುದ್ರಗಳು, ಪರ್ವತಗಳು, ನದಿಗಳು, ರಥದ ಬೀದಿಗಳನ್ನೂ ಕೊಟ್ಟರು.

೬೪. ಅನಂತರ ರಾಜರುಗಳು ಕುದುರೆ, ಆನೆ, ರಥ, ಮೇನ, ಹಸು, ಗೂಳಿ, ಖಡ್ಗ, ದಾಸಿಯರು, ದಾಸರು, ಒಂಟೆಗಳು, ಪಕ್ಷಿಗಳು ಇವುಗಳನ್ನೂ ಕೊಟ್ಟರು.

೬೫–೬೬. ಸೀತೆಗೆ ರಾಜಪತ್ನಿಯರೂ, ದೇವಪತ್ನಿಯರೂ ಕೂಡ ವಸ್ತ್ರ, ಅಲಂಕಾರ, ಯಾನ, ಮಂಗಳಪದಾರ್ಥಗಳು, ರವುಕೆಗಳು, ಆಟದಸಾಮಾನುಗಳು, ಪಕ್ಷಿಪಂಜರಗಳು ಮುಂತಾದುವುಗಳನ್ನು ಕೊಟ್ಟರು. ಈ ರೀತಿಯಾಗಿ ಆ ಸೀತಾರಾಮರು ಎಲ್ಲರಿಂದಲೂ ಗೌರವಿಸಲ್ಪಟ್ಟರು.

೬೭–೬೮. ಅನಂತರ ರಾಮನು ವಹ್ನಿಯಿಂದಲೂ, ವಂದಿಗಳಿಂದಲೂ ಸ್ತುತಿಸಲ್ಪಡುತ್ತ ಉತ್ತಮವಾದ ರಥವನ್ನು ಹತ್ತಿದನು. ರಾಜರೂ, ಮುನಿಗಳೂ ಅವರವರ ಅಂತಃಪುರದವರೂ, ಪುಷ್ಪಕದಲ್ಲಿ ಕುಳಿತು ಆಕಾಶಮಾರ್ಗದಿಂದ

ವಿಹಾಯಸಾ ಯಯುಯುಸ್ಸರ್ವೇಽಯೋಧ್ಯಾಯಾಂ ನೃಪತೇರ್ಗೃಹಂ ।
ತತೋ ರಾಮೋ ರಥೇನೈವ ಪೂರ್ವೋಕ್ತೈರುತ್ಸವೈಶ್ಚನೈಃ ॥ ೬೮ ॥

ವಿವೇಶ ನಗರೀಂ ರಾಮಃ ಸ್ತುತಸ್ಸೂತೈಶ್ಚ ಮಾಗಧೈಃ ।
ಛತ್ರಂ ದಧಾರ ಸೌಮಿತ್ರಿರ್ಮುಕ್ತಾಜಾಲವಿರಾಜಿತಂ ॥ ೬೯ ॥

ಭರತಸ್ತಾಲವ್ಯಜನಂ ಶತ್ರುಘ್ನಶ್ಚಾಮರದ್ವಯೀ ।
ತಾಂಬೂಲಪಾತ್ರಂ ಸುಗ್ರೀವಸ್ತೋಯಪಾತ್ರಂ ತು ವಾಯುಜಃ ॥ ೭೦ ॥

ನಲಃ ಷ್ಠೀವನಪಾತ್ರಂ ಚ ವಾಲಿಜೋ ಮುಕುರಂ ವರಂ ।
ವಾಸಃ ಕೋಶಂ ರಾಕ್ಷಸೇಂದ್ರೋ ಧೂಪಪಾತ್ರಂ ಹಿ ಜಾಂಬವಾನ್ ॥ ೭೧ ॥

ನಾನಾಫಲಾನಾಂ ಪಾತ್ರಾಣಿ ಪೂಜಪಾತ್ರಾಣ್ಯನೇಕಶಃ ।
ಸುಗಂಧದ್ರವ್ಯಪಾತ್ರಾಣಿ ದಧುಸ್ತೇ ಮಂತ್ರಿಸತ್ತಮಾಃ ॥ ೭೨ ॥

ಅಯೋಧ್ಯೆಯಲ್ಲಿರುವ ರಾಮನ ಅರಮನೆಗೆ ಹೋದರು. ಆಮೇಲೆ ರಾಜನು ಹಿಂದೆ ಹೇಳಿದಂತೆ ಉತ್ಸವಗಳಿಂದ ನಿಧಾನವಾಗಿ ಹೊರಟನು,

೬೯–೭೧. ಸೂತರೂ, ಮಾಗಧರೂ, ಸ್ತುತಿಸುತ್ತಿದ್ದರು. ಸೌಮಿತ್ರಿಯು ಮುತ್ತಿನ ಸರಗಳನ್ನು ನೇತುಹಾಕಿರುವ ಶ್ವೇತಛತ್ರವನ್ನು ಹಿಡಿದನು. ಭರತನು ಬೀಸಣಿಗೆಯನ್ನು ಹಿಡಿದನು. ಶತ್ರುಘ್ನನು ಎರಡು ಚಾಮರವನ್ನೂ, ಸುಗ್ರೀವನು ತಾಂಬೂಲದ ಪಾತ್ರೆಯನ್ನೂ ಹನುಮಂತನು, ನೀರಿನ ಪಾತ್ರೆಯನ್ನೂ ನಲನು ತಂಬುಲಪಾತ್ರೆಯನ್ನೂ, ಅಂಗದನು ಕನ್ನಡಿಯನ್ನೂ, ವಿಭೀಷಣನು ಬಟ್ಟೆಯ ಪೆಟ್ಟಿಗೆಯನ್ನೂ, ಜಾಂಬವನು ಧೂಪದ ಪಾತ್ರೆಯನ್ನೂ ಹಿಡಿದರು.

೭೨. ಮಂತ್ರಿಗಳು ಬಗೆಬಗೆಯ ಫಲಗಳ ಪಾತ್ರೆಗಳನ್ನೂ, ಪೂಜೆಯ ಪಾತ್ರೆಗಳನ್ನೂ. ಸುಗಂಧದ್ರವ್ಯದ ಪಾತ್ರೆಗಳನ್ನೂ ಹಿಡಿದುಕೊಂಡು ರಾಮನನ್ನು ಉಪಚರಿಸುತ್ತಾ ಹೊರಟರು.

ಏವಂ ಸುಗಂಧಿವಸ್ತೂನಿ ಪ್ರಕ್ಷಿಪರ್ಜ ವಾರಯೋಷಿತಾಂ ।
ವೃಂದೇಷು ಸೀತಯಾ ರಾಮೋ ವಿರೇಜೇ ಸ್ಯಂದನೇ ಸ್ಥಿತಃ ॥ ೭೩ ॥

ಸುಗಂಧರಾಗಪೂರ್ಣೈರ್ಶ್ಚ ಜಲಯಂತ್ರೈಃ ಕರೇ ಧೃತೈಃ ।
ವಾರಾಂಗನಾನಾಂ ವಸ್ತ್ರಾಣಿ ನೃಪಾದೀನಾಂ ಚ ರಾಘವ ॥ ೭೪ ॥

ಚಿತ್ರಿತಾನ್ಯಕರೋದ್ರಾಗೈಃ ಕಿಂಶುಕಾನಿವ ಮಾಧವೇ ।
ಸ್ನೇಹೈಸ್ಸುಗಂಧೈರಾಗಾದ್ಯೈರಾದ್ರ್ರವಸ್ತ್ರೇಷು ರಾಘವ ॥ ೭೫ ॥

ಕ್ಷಿಪ್ತ್ವಾ ಪರಿಮಳಾದೀನಿ ಚಿತ್ರಿತಾನ್ಯಕರೋತ್ಪುನಃ ।
ನರ್ತತ್ಸು ವಾರಯೋಷಿತ್ಸು ವಾದ್ಯೇಷು ವಿನದತ್ಸು ಚ ॥ ೭೬ ॥

---

೭೩. ರಾಮನೂ, ಸೀತೆಯೂ, ವಾರಕಾಂತೆಯರ ಮಧ್ಯದಲ್ಲಿ ರಥದಲ್ಲಿ ಕುಳಿತು ಹೋಗುತ್ತಿದ್ದರು. ಆ ವಾರನಾರಿಯರು ಇವರ ಮೇಲೆ ಸುಗಂಧವನ್ನು ಎರಚುತ್ತಿದ್ದರು. ರಾಮನು ಈ ರೀತಿಯಾಗಿ ಪ್ರಕಾಶಿಸುತ್ತಿದ್ದನು

೭೪. ಶ್ರೀರಾಮನು ಜಲಯಂತ್ರಗಳನ್ನು ಸುಗಂಧಪೂರಿತವಾದ ನೀರಿನಿಂದ ಎಂದರೆ ಓಕುಳಿಯಿಂದ ತುಂಬಿಕೊಂಡು ಆ ವೇಶ್ಯಯರಮೇಲೆ ಎರಚುತ್ತ ಮತ್ತು ರಾಜರ ಮೇಲೆಯೂ ಎರಚುತ್ತ ಬಣ್ಣದಿಂದ ಅವರ ಬಟ್ಟೆಗಳೆಲ್ಲ ಚಿತ್ರಿತವಾಗುವಂತೆ ಮಾಡುತ್ತಿದ್ದನು. ಇದನ್ನು ನೋಡಿದರೆ ಅವರು ವಸಂತಋತುವಿನಲ್ಲಿ ಹೂಬಿಟ್ಟು ಕೆಂಪಗೆ ಪ್ರಕಾಶಿಸುತ್ತಲಿರುವ ಮುತ್ತುಗದ ಮರಗಳಂತೆ ಕಾಣುತ್ತಿದ್ದರು.

೭೫. ಅನಂತರ ಆ ರಾಮನು ವಾಸನಾದ್ರವ್ಯಗಳನ್ನು ಸೇರಿಸಿರುವ ಎಣ್ಣೆಯನ್ನೂ ಸುಗಂಧತೈಲಗಳನ್ನೂ ಮೊದಲೇ ಓಕುಳಿಯಿಂದ ಒದ್ದೆಯಾದ ಆ ರಾಜರ ಬಟ್ಟೆಯಮೇಲೆ ಆ ಜಲಯಂತ್ರದಿಂದ ಎರಚಿದನು. ಅದರಿಂದ ಬಟ್ಟೆಗಳು ಮತ್ತೂ ಚಿತ್ರವಿಚಿತ್ರತವಾದುವು.

೭೬–೭೭. ದಾರಿಯಲ್ಲಿ ಉದ್ದಕ್ಕೂ ಸೂಳೆಯರು ಕುಣಿಯುತ್ತಿದ್ದರು. ವಾದ್ಯಗಳು ಮೊಳಗುತ್ತಿದ್ದುವು. ವಂದಿಮಾಗಧರು ಸ್ತುತಿಸುತ್ತಿದ್ದರು.

ಸ್ತುವತ್ಸು ವಂದಿವೃಂದೇಷು ಪುಷ್ಪವೃಷ್ಟಿವಿರಾಜಿತಃ ।
ಯಯೌ ರಾಜಗೃಹದ್ವಾರಂ ರಾಮೋ ರಾಜಪಥಾ ಶನೈಃ ॥ ೭೭ ॥

ಮಾರ್ಗೇ ಕುಂಭಪ್ರದೀಪೈಶ್ಚ ದಧ್ಯೋದನವಿನಿರ್ಮಿತೈಃ ।
ಬಲಿದೀಪೈಃ ಪೂರ್ಣಕುಂಭೈರಾಜಮಾರ್ಗೇ ಪುರಸ್ತ್ರಿಯಃ ॥ ೭೮ ॥

ಚಕ್ರುರ್ನೀರಾಜನಂ ರಾಮಂ ಸ್ವಸ್ತ್ಯರ್ಥಂ ಸೀತಯಾ ಯುತಂ ।
ಅವರುಹ್ಯ ರಥಾದ್ರಾಮೋ ಸೀತಯಾಗ್ನಿಂ ನಿಜೇ ಗೃಹೇ ॥ ೭೯ ॥

ಸ್ಥಾಪ್ಯ ಸ್ವೀಯಸಭಾಂ ಗತ್ವಾರುರೋಹ ಸ್ವೀಯಮಾಸನಂ ।
ತತಸ್ತೇ ಪಾರ್ಥಿವಾಸ್ಸರ್ವೇ ಪ್ರಣೇಮೂ ರಘುನಂದನಂ ॥ ೮೦ ॥

ರಾಜ್ಞಾಂ ಮುಕುಟರತ್ನೌಘಪ್ರಭಾಭಿಃ ಪದಪಂಕಜೇ ।
ವಿರೇಜತೂ ರಾಘವಸ್ಯ ತದಾ ಸಿಂಹಾಸನೋಪರಿ ॥ ೮೧ ॥

ಹೂಮಳೆಯನ್ನು ಕರೆಯುತ್ತಿದ್ದರು. ಹೀಗೆ ನಡೆಯುತ್ತಿರಲು ರಾಮನು ರಾಜಬೀದಿಯಲ್ಲಿ ಮೆರವಣಿಗೆಮಾಡಿಕೊಳ್ಳುತ್ತ ನಿಧಾನವಾಗಿ ಅರಮನೆಗೆ ಹೋದನು.

೭೮-೭೯. ಪಟ್ಟಣದ ಮುತ್ತೈದೆಯರು ಮಾರ್ಗದಲ್ಲಿ ಗುಂಬದೀಪವನ್ನು ಬೆಳಗುತ್ತಿದ್ದರು. ಮೊಸರನ್ನವನ್ನು ನಿವಾಳಿಸಿ ಹಾಕುತ್ತಿದ್ದರು. ಬಲಿದೀಪಗಳನ್ನೂ ಪೂರ್ಣ ಕುಂಭಗಳನ್ನೂ ಬೆಳಗುತ್ತಿದ್ದರು. ಅಂತೆಯೇ ಸೀತೆಗೂ ಬೆಳಗುತ್ತಿದ್ದರು. ಇದೆಲ್ಲವನ್ನೂ ಅವರು ಮಂಗಳಾರ್ಥವಾಗಿ ಮಾಡುತ್ತಿದ್ದರು. ಕಡೆಗೆ ಮನೆಯ ಬಳಿಗೆ ಹೋಗಿ ರಾಮನು ರಥದಿಂದ ಇಳಿದು ಸೀತೆಯನ್ನೂ ಇಳಿಸಿ ಅಗ್ನಿಯನ್ನೂ ಇಳಿಸಿದನು.

೮೦. ಅಗ್ನಿಯನ್ನು ಹೋಮದ ಮನೆಯಲ್ಲಿಟ್ಟು ಸೀತೆಯನ್ನು ಒಳಗೆ ಬಿಟ್ಟು ರಾಮನು ತಾನು ಸಭೆಗೆ ಬಂದು ತನ್ನ ಸಿಂಹಾಸನದಲ್ಲಿ ಕುಳಿತುಕೊಂಡನು. ಆಗ ರಾಜರೆಲ್ಲರೂ ಆ ರಾಮನಿಗೆ ನಮಸ್ಕರಿಸಿದರು.

೮೧. ಸಿಂಹಾಸನದಲ್ಲಿ ಕುಳಿತಿರುವ ಈ ರಾಮನ ಪಾದಗಳು. ಆ ರಾಜರುಗಳು ನಮಸ್ಕರಿಸುವಾಗ ಅವರ ತಲೆಯ ಕಿರೀಟಗಳ ಮಣಿಯ ಬೆಳಕು ಬಿದ್ದುದರಿಂದಲೂ ಸೇರುತ್ತಿದ್ದುದರಿಂದಲೂ ಬಹು ರಮ್ಯವಾಗಿ ಕಾಣುತ್ತಲಿದ್ದುವು.

ಮುಕುಟಸ್ಥಾವತಂಸಾನಾಂ ಪರಾಗೈಃ ಪೂಜಿತೇ ನೃಪೈಃ ।
ಪ್ರಾಪತುರ್ನಿತರಾಂ ಶೋಭಾಂ ರಕ್ತೋತ್ಪಲನಿಭೇ ಪರೇ ॥ ೮೨ ॥

ಸೀಮಂತಸ್ಥಚಂದ್ರಸೂರ್ಯರತ್ನಮಾಣಿಕ್ಯದೀಪ್ತಿಭಿಃ ।
ಸುರಪಾರ್ಥಿವಪತ್ನೀನಾಂ ಸೀತಾಯಾಃ ಪದಪಂಕಜೇ ॥ ೮೩ ॥

ವಿರೇಜತುಃ ಪರಾಗೈಶ್ಚ ಕೇಶಬಂಧಪ್ರಸೂನಜೈಃ ।
ಸುರಪಾರ್ಥಿವಪತ್ನೀಭಿಃ ಪೂಜಿತೇ ಕನಕೋಜ್ಜ್ವಲೇ ॥ ೮೪ ॥

ತತಸ್ಸಭಾಯಾಂ ಶ್ರೀರಾಮಂ ಸ್ತುತ್ವಾ ದೇವೈರ್ಮಹೇಶ್ವರಃ ।
ಶ್ರೀರಾಮಸ್ತವರಾಜೇನ ಶ್ರೀರಾಮೇಣಾಪಿ ಪೂಜಿತಃ ॥ ೮೫ ॥

---

೮೨. ಆ ರಾಜರುಗಳು ಅಲಂಕಾರಕ್ಕೋಸ್ಕರ ಕಿವಿಗಳಮೇಲೆ ರಕ್ತೋತ್ಪಲಗಳನ್ನು ಇಟ್ಟುಕೊಂಡಿದ್ದರು. ಅವರು ನಮಸ್ಕರಿಸುವಾಗ ಅವುಗಳ ಧೂಳು ರಾಮಚಂದ್ರನ ಪಾದಗಳಮೇಲೆ ಬಿದ್ದು ರಕ್ತೋತ್ಪಲಗಳಂತೆಯೇ ಕಾಂತಿಯನ್ನು ಪಡೆದುವು.

೮೩. ಸೀತೆಯೂ ಒಳಗೆ ಮತ್ತೊಂದೆಡೆಯಲ್ಲಿ ಸಿಂಹಾಸನದಲ್ಲಿ ಕುಳಿತು ಒಡ್ಡೋಲಗವನ್ನು ನಡೆಸುತ್ತಿದ್ದಾಗ ರಾಜರ ಪತ್ನಿಯರು ಆಕೆಗೆ ನಮಸ್ಕರಿಸುತ್ತಿದ್ದರು. ಆ ಹೆಂಗಸರು ತಾವು ತಮ್ಮ ಬೈತಲೆಗೆ ಚಂದ್ರಸೂರ್ಯರೆಂಬ ಒಡವೆಗಳನ್ನು ಹಾಕಿಕೊಂಡಿದ್ದರು. ಅವುಗಳ ರತ್ನ ಮಾಣಿಕ್ಯಗಳ ಕಾಂತಿಗಳಿಂದ ಸೀತೆಯ ಪಾದಪದ್ಮಗಳು ಬಣ್ಣ ಬಣ್ಣವಾಗಿ ಪ್ರಕಾಶಿಸುತ್ತಿದ್ದುವು.

೮೪. ಅವರುಗಳ ತಲೆಯಲ್ಲಿ ಮುಡಿದುಕೊಂಡಿದ್ದ ಹೂವಿನ ಧೂಳುಗಳಿಂದ ಕೂಡಿ ಆಕೆಯ ಪಾದಪದ್ಮಗಳು ಪ್ರಕಾಶಿಸುತ್ತಿದ್ದುವು. ಇದನ್ನು ನೋಡಿದರೆ ಚಿನ್ನದ ಬಣ್ಣಕ್ಕೆ ಆ ಪಾದಗಳು ಪ್ರಕಾಶವಾಗಿ ಕಾಣುತ್ತಿದ್ದುವು.

೮೫. ಮಹೇಶ್ವರನು ಸಭೆಯಲ್ಲಿ ಆ ಶ್ರೀರಾಮನನ್ನು ಶ್ರೀರಾಮಸ್ತವರಾಗದಿಂದ ಸ್ತುತಿಸಿದನು. ರಾಮನೂ ಕೂಡ ಆ ಶಂಕರನನ್ನು ಗೌರವಿಸಿ ಪೂಜಿಸಿದನು.

ಪ್ರಾಪ್ಯಾಜ್ಞಾಂ ರಾಮಚಂದ್ರಸ್ಯ ಸಾವರೋಧೈಸ್ಸುರಾದಿಭಿಃ ।
ಪ್ರಸ್ಥಾನಂ ಸ್ವಸ್ಥಲಂ ಗಂತುಂ ಚಕಾರ ವೃಷಮಾಸ್ಥಿತಃ ॥ ೮೬ ॥

ನೃಪಸ್ತ್ರಿಯೋಽಪಿ ಸೀತಾಯಾಃ ಪ್ರಾಪ್ಯಾಜ್ಞಾಂ ಪೂಜಿತಾಸ್ತಯಾ ।
ಯಾನಾನ್ಯಾರುರುಹುಸ್ಸರ್ವಾಸ್ತ್ವಯೋಧ್ಯಾಯಾ ವಿನಿರ್ಯಯುಃ ॥ ೮೭ ॥

ಅಥ ತೇ ಪಾರ್ಥಿವಾದ್ಯಾಶ್ಚ ಪ್ರಾಪ್ಯಾಜ್ಞಾಂ ರಾಘವಸ್ಯ ಚ ।
ಸಾವರೋಧಾಸ್ಸಸೈನ್ಯಾಶ್ಚ ಸ್ವೀಯರಾಜ್ಯಾನಿ ವೈ ಯಯುಃ ॥ ೮೮ ॥

ಯಯೌ ಶಿವೋಽಪಿ ಕೈಲಾಸಂ ಸತ್ಯಲೋಕಂ ವಿಧಿರ್ಯಯೌ ।
ಇಂದ್ರಾದ್ಯಾ ನಿರ್ಜರಾಸ್ಸರ್ವೇ ಸ್ವರ್ಗಲೋಕಂ ಯಯುರ್ಮುದಾ ॥ ೮೯ ॥

ಅಥರ್ತ್ವಿಜೋ ಮಹಾಶೀಲಾಸ್ಸದಸ್ಯಾ ಬ್ರಹ್ಮವಾದಿನಃ ।
ಸರ್ವೇ ಮುನೀಶ್ವರಾದ್ಯಾಶ್ಚ ಸ್ವಧಾಮಾನಿ ಯಯುಸ್ತದಾ ॥ ೯೦ ॥

---

೮೬. ಅನಂತರ ಆ ಶಂಕರನು ರಾಮನ ಅಪ್ಪಣೆಯನ್ನು ಹೊಂದಿ ತಾನೂ ದೇವತೆಗಳೂ, ಅವರ ಪತ್ನಿಯರೂ, ತಮ್ಮ ತಮ್ಮ ಸ್ಥಳಗಳಿಗೆ ಹೋಗಲು ಸಿದ್ಧರಾಗಿ ತಾನು ಬಸವನಮೇಲೆ ಕುಳಿತನು. ಮತ್ತು ಪಾರ್ವತಿಯನ್ನು ಕೂರಿಸಿ ಕೊಂಡು ಪ್ರಯಾಣಮಾಡಿದನು.

೮೭. ರಾಜಪತ್ನಿಯರೂ ಕೂಡ ಸೀತೆಯ ಅಪ್ಪಣೆಯನ್ನು ಪಡೆದು ಅವಳಿಂದ ಗೌರವಿತರಾಗಿ ತಮ್ಮ ತಮ್ಮ ವಾಹನಗಳನ್ನು ಹತ್ತಿಕೊಂಡು ಅಯೋಧ್ಯೆಯಿಂದ ಹೊರಟರು.

೮೮. ರಾಜರೆಲ್ಲರೂ ಕೂಡ ರಾಘವನ ಅಪ್ಪಣೆಯನ್ನು ಪಡೆದು ತಮ್ಮ ಅಂತಃಪುರದವರನ್ನೂ ಸೈನ್ಯವನ್ನೂ ಕರೆದುಕೊಂಡು ತಮ್ಮ ತಮ್ಮ ರಾಜ್ಯಗಳಿಗೆ ಪ್ರಯಾಣಮಾಡಿದರು.

೮೯–೯೦. ಶಿವನು ಕೈಲಾಸಕ್ಕೂ, ಬ್ರಹ್ಮನು ಸತ್ಯಲೋಕಕ್ಕೂ ಇಂದ್ರಾದಿ ದೇವತೆಗಳು ಸ್ವರ್ಗಲೋಕಕ್ಕೂ ಸಂತೋಷದಿಂದ ಪ್ರಯಾಣಮಾಡಿದರು. ಆಚಾರ ಶೀಲವಾದ ಋತ್ವಿಕ್ಕುಗಳೂ, ಜ್ಞಾನಿಗಳಾದ ಸದಸ್ಯರೂ ಉಳಿದ ಮುನೀಶ್ವರರೂ ಕೂಡ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು.

ತತೋ ರಾಮಃ ಪೂರ್ವವಚ್ಚ ಶಶಾಸ ಜಗತೀತಲಂ ।
ರೇಮೇ ಜನಕನಂದಿನ್ಯಾ ಚಿರಕಾಲಂ ಯಥಾಸುಖಂ ॥ ೯೧ ॥

ವರ್ಷಾಂತರೇಣ ಕಾಲೇನ ವಾಜಿಮೇಧಾಃ ಪೃಥಕ್ ಪೃಥಕ್ ।
ಉತ್ತರೋತ್ತರತಃ ಶ್ರೇಷ್ಠಾಃ ವಿಂಶದ್ವರ್ಷೈಃ ಕೃತಾ ದಶ ॥ ೯೨ ॥

ಇತ್ಥಂ ಶ್ರೀರಾಮಚಂದ್ರೇಣ ದಶಮೇ ತುರಗಾಧ್ವರೇ ।
ಪ್ರತಿಪಾಲ್ಯ ಗುರೋರ್ವಾಕ್ಯಂ ಸರ್ವಸ್ವಮಪಿ ಭೂಸುರೈಃ ॥ ೯೩ ॥

ದತ್ತಂ ಕಿಲ ಮಹಾರಾಜ್ಞಾ ತಥಾ ಚ ದಿಕ್ಚತುಷ್ಟಯಂ ।
ಋತ್ವಿಗ್ಭ್ಯೋ ದಕ್ಷಿಣಾರ್ಥಂ ಹಿ ದತ್ತಂ ಚೇತಿ ಮಯಾ ಶ್ರುತಂ ॥ ೯೪ ॥

ಋತ್ವಿಗ್ಭಿಸ್ತತ್ಪುನರ್ದತ್ತಂ ರಾಘವಾಯೈವ ಸಾದರಂ ।
ಕೃಪಾಲುಭಿಃ ಪಾಲನಾರ್ಥಮಿತಿ ಶಿಷ್ಯಾತ್ರ ಶ್ರೂಯತೇ ॥ ೯೫ ॥

---

೯೧. ಅನಂತರ ಶ್ರೀರಾಮನು ಮೊದಲಿನಂತೆಯೇ ರಾಜ್ಯಭಾರವನ್ನು ಮಾಡುತ್ತಿದ್ದನು. ಆಗ ಜನಕನಂದಿನಿಯಾದ ಸೀತೆಯೊಡನೆ ಬಹುಕಾಲದವರೆಗೂ ಸುಖವಾಗಿದ್ದನು.

೯೨. ಅನಂತರವೂ ವರ್ಷಕ್ಕೊಂದರಂತೆ ಬೇರೆ ಬೇರೆಯಾಗಿ ಒಂದಕ್ಕಿಂತಲೂ ಒಂದು ಶ್ರೇಷ್ಠವಾಗಿರುವಂತಹ ಹತ್ತು ಅಶ್ವಮೇಧಯಾಗಗಳನ್ನು ಇಪ್ಪತ್ತು ವರ್ಷಗಳ ಕಾಲದಲ್ಲಿ ಮಾಡಿದನು.

೯೩. ಈ ರೀತಿಯಾಗಿ ರಾಮನು ಅಶ್ವಮೇಧಯಾಗಗಳನ್ನು ಮಾಡುತ್ತಿರಲು ಹತ್ತನೆಯ ಅಶ್ವಮೇಧಯಾಗದಲ್ಲಿ ಗುರುವಿನ ಮಾತಿನಂತೆ ಇರುತ್ತ ಬ್ರಾಹ್ಮಣರಿಗೆ ಸಕಲವನ್ನೂ ಕೊಟ್ಟುಬಿಟ್ಟನು

೯೪–೯೫. ಮತ್ತು ಆ ಯಾಗದಲ್ಲಿ ಋತ್ವಿಕ್ಕುಗಳಿಗೆ ದಕ್ಷಿಣೆಯಾಗಿ ನಾಲ್ಕು ದಿಕ್ಕುಗಳನ್ನೂ ದಾನಮಾಡಿದನೆಂದು ನಾನು ಕೇಳಿದ್ದೇನೆ. ಋತ್ವಿಕ್ಕುಗಳು ಮತ್ತೆ ರಾಮನಿಗೇನೇ ಕೊಟ್ಟರೆಂದೂ ಕೇಳಿದ್ದೇನೆ. ಕೃಪಾಳುವಾದ ಆ ರಾಮನೇ ಅದನ್ನು ಮತ್ತೆ ತೆಗೆದುಕೊಂಡು ಪಾಲಿಸುತ್ತಿದ್ದನೆಂದೂ ಕೇಳಿದ್ದೇನೆ.

ಏವಂ ಶಿಷ್ಯ ತ್ವಯಾ ಪೃಷ್ಟಂ ರಾಮಚಂದ್ರಸ್ಯ ಮಂಗಲಂ ।
ಚರಿತಂ ತನ್ಮಯಾ ಕಿಂಚಿತ್ತವೋಕ್ತಂ ಯಜ್ಞಸಂಭವಂ ॥ ೯೬ ॥

ಇದಂ ಯಃ ಪ್ರಾತರುತ್ಥಾಯ ಯಾಗಕಾಂಡಂ ಮನೋರಮಂ ।
ಪಠಿಷ್ಯತಿ ನರೋ ಪುಣ್ಯಂ ಸರ್ವಾನ್ಕಾಮಾನವಾಪ್ನುಯಾತ್ ॥ ೯೭ ॥

ಪುತ್ರಾರ್ಥೀ ಪ್ರಾಪ್ನುಯಾತ್ಪುತ್ರಂ ಧನಾರ್ಥೀ ಧನಮಾಪ್ನುಯಾತ್ ।
ಯಾಗಕಾಂಡಮಿದಂ ಶ್ರುತ್ವಾ ವಾಜಿಮೇಧಫಲಂ ಲಭೇತ್ ॥ ೯೮ ॥

ಹೋಮಕಾಲೇ ಶ್ರಾದ್ಧಕಾಲೇ ಚಾತುರ್ಮಾಸ್ಯಾದಿಕೇಷ್ವಪಿ ।
ಜಪಧ್ಯಾನಾರ್ಚನಾರಂಭೇ ಪೂರ್ವಂ ನಿತ್ಯಂ ಪಠೇದಿದಂ ॥ ೯೯ ॥

---

೯೬. ಎಲೈ ಶಿಷ್ಯನೇ! ನೀನು ಕೇಳಿದಂತೆ ರಾಮಚಂದ್ರನ ಮಂಗಳಕರವಾದ ಯಾಗದ ಸಂಬಂಧವಾದ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ಮಾತ್ರ ಹೇಳಿದೆನು.

೯೭. ಈ ಮನೋಹರವಾದ ಯಾಗಕಾಂಡವನ್ನು ಯಾವನು ಬೆಳಗ್ಗೆ ಎದ್ದು ಓದುತ್ತಾನೆಯೋ ಅವನು ಪುಣ್ಯವನ್ನು ಹೊಂದಿ ಇಷ್ಟಾರ್ಥಗಳೆಲ್ಲವನ್ನೂ ಹೊಂದುತ್ತಾನೆ.

೯೮. ಮಕ್ಕಳನ್ನು ಅಪೇಕ್ಷಿಸಿ ಓದಿದವರು ಮಕ್ಕಳನ್ನೂ, ಧನವನ್ನು ಅಪೇಕ್ಷಿಸಿ ಓದುವವರು ಧನವನ್ನೂ ಹೊಂದುತ್ತಾರೆ. ಈ ಯಾಗಕಾಂಡವನ್ನು ಕೇಳಿದರೆ ಅಶ್ವಮೇಧಯಜ್ಞವನ್ನು ಮಾಡಿದ ಫಲವು ಬರುತ್ತದೆ.

೯೯. ಹೋಮಕಾಲಶ್ರಾದ್ಧಗಳಲ್ಲಿಯೂ, ಚಾತುರ್ಮಾಸ್ಯಗಳಲ್ಲಿ ಜಪ, ಧ್ಯಾನ, ಅರ್ಚನೆಗಳನ್ನು ಮಾಡುವುದಕ್ಕೆ ಮೊದಲೂ ಈ ಯಾಗಕಾಂಡವನ್ನು ಯಾವಾಗಲೂ ಓದಬೇಕು.

ರಮ್ಯಂ ಪವಿತ್ರಂ ರಘುನಾಯಕಸ್ಯ
ಶ್ರೀಮಚ್ಚರಿತ್ರಂ ತುರಗಾಧ್ವರೋದ್ಭವಂ ।
ಪಠಂತಿ ಶೃಣ್ವಂತಿ ಜನಾಸ್ಸುಪುಣ್ಯದಂ
ಲಭಂತಿ ನೈಜಂ ಖಲು ವಾಂಛಿತಂ ಹೃದಿ ॥ ೧೦೦ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಯಾಗಕಾಂಡೇ ಯಜ್ಞ ಸಮಾಪ್ತಿರ್ನಾಮ
ನವಮಸ್ಸರ್ಗಸ್ಸಮಾಪ್ತಃ

॥ ಯಾಗಕಾಂಡಃ ತೃತೀಯಃ ಸಂಪೂರ್ಣಃ ॥
ಶ್ರೀರಾಮಚಂದ್ರಾರ್ಪಣಮಸ್ತು

---

೧೦೦. ರಮ್ಯವೂ, ಪವಿತ್ರವೂ, ಆದ ಅಶ್ವಮೇಧಯಾಗದ ಸಂಬಂಧವಾದ ರಾಮಚರಿತ್ರೆಯನ್ನು ಓದಿದವರಿಗೂ, ಕೇಳಿದವರಿಗೂ ಪುಣ್ಯವು ಬರುತ್ತದೆ. ಅಲ್ಲದೆ ತಮ್ಮ ಇಷ್ಟಾರ್ಥಗಳೂ ನೆರವೇರುತ್ತವೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ ಯಜ್ಞ ಸಮಾಪ್ತಿ
ಎಂಬ ಒಂಭತ್ತನೆಯ ಸರ್ಗವು ಸಮಾಪ್ತವು.

॥ ಮೂರನೆಯದಾದ ಯಾತ್ರಾಕಾಂಡವು ಮುಗಿದುದು ॥
ಶ್ರೀರಾಮಚಂದ್ರಾರ್ಪಣವಾಗಲಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾಗಕಾಂಡದಲ್ಲಿ

॥ ಒಂಭತ್ತನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಅವಭೃಥಸ್ನಾನಮಾಡಿದಮೇಲೆ ಶಂಭುವೇ ಮುಂತಾದ ದೇವತೆಗಳು ವೇದದ ಸ್ತುತಿಗಳಿಂದ ಆತನನ್ನು ಸ್ತುತಿಸಿದರು. ಎಲೈ ರಾಮನೆ! ಅವಭೃಥಸ್ನಾನಮಾಡಿದ ನಿನ್ನನ್ನು ನೋಡಿ ನಾವು ಧನ್ಯರಾದೆವು. ನಮ್ಮೆಲ್ಲರಿಗೂ ಇದು ಹರ್ಷಕಾಲವಾಗಿದೆ. ಆದುದರಿಂದ ಈ ಕಾಲವು ಯಾವಾಗಲೂ ಪುಣ್ಯಕಾಲವಾಗಿರಲಿ. ನೀನೂ ಕೂಡ ಈ ಕಾಲಕ್ಕೆ ಬಹುವಾದ ವರಗಳನ್ನು ಕೊಡು. ನೀನು ಈ ತೀರ್ಥಕ್ಕೆ ವರವನ್ನು ಕೊಡುವುದರಿಂದ ಪ್ರತಿವರ್ಷವೂ ನಿನ್ನ ದರ್ಶನವಾಗಬೇಕು. ಆ ರೀತಿಯಾಗಿ ವರವನ್ನು ಕೊಡು. ಅಲ್ಲದೆ ನೀನು ನಿರ್ಮಿಸಿರುವ ತೀರ್ಥಗಳೂ ನಿನ್ನಿಂದ ಪ್ರತಿಷ್ಠಿತವಾದ ಶಿವಲಿಂಗಗಳೂ ಯಾತ್ರಾ ಕಾಲದಲ್ಲಿ ಬಹು ಪುಣ್ಯವನ್ನು ಕೊಡುವುವುಗಳಾಗಲಿ. ಅವುಗಳಿಗೂ ಅಂತೆಯೇ ವರಗಳನ್ನು ಕೊಡು. ಎಲ್ಲಾ ಪಟ್ಟಣಗಳಿಗಿಂತಲೂ ಈ ಅಯೋಧ್ಯೆಯೂ ಎಲ್ಲಾ ನದಿಗಳಿಗಿಂತಲೂ ಈ ಸರಯೂ ನದಿಯೂ ಶ್ರೇಷ್ಠವಾಗುವಂತೆ ವರಗಳನ್ನು ಕೊಡು. ಈ ಚೈತ್ರಮಾಸವು ಎಲ್ಲಾ ಮಾಸಗಳಿಗಿಂತಲೂ ಶ್ರೇಷ್ಠವಾಗಿರುವಂತೆ ವರಗಳನ್ನು ನೀಡು ಎಂದೆನ್ನಲು ರಾಮನು ಅಂತೆಯೇ ವರಗಳನ್ನು ಕೊಟ್ಟನು. ಅಲ್ಲದೆ ರಾಮತೀರ್ಥವು ಉತ್ತಮೋತ್ತಮವಾಗಲೆಂದೂ ಹೇಳಿದನು.

ಚೈತ್ರಮಾಸದಲ್ಲಿ ಅಯೋಧ್ಯೆಯಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿದರೆ ಅವರಿಗೆ ಮೋಕ್ಷವು ಬರುತ್ತದೆ.

ಚೈತ್ರಮಾಸವು ಬಂದಾಗ ದೇವತೆಗಳೆಲ್ಲರೂ ಅವರವರಿಗೆ ಹತ್ತಿರದಲ್ಲಿರುವ ತೀರ್ಥಗಳನ್ನು ಆಶ್ರಯಿಸಿಕೊಂಡು ಇರಬೇಕು. ಅಲ್ಲದೆ ನೀವು ಈಗ ಇಲ್ಲಿಗೆ

ಬಂದಿರುವಂತೆಯೇ ಪ್ರತಿವರ್ಷವೂ ಈ ರಾಮತೀರ್ಥಕ್ಕೆ ಬರಬೇಕು. ಎಂದೂ ಅಪ್ಪಣೆಮಾಡಿದರು.

ಅನಂತರ ಗಿರಿಜೆಯು ಸೀತೆಯನ್ನು ಕುರಿತು ಎಲೈ ಸೀತೆಯೇ ! ನಾರಿಯರ ಹಿತಕ್ಕೋಸ್ಕರ ಎಲ್ಲಾ ತೀರ್ಥಗಳಿಗೂ ನೀನು ವರವನ್ನು ಕೊಡು. ಇದು ಎಲ್ಲರಿಗೂ ಉಪಕಾರವಾಗುತ್ತದೆ. ಎಂದೆನ್ನಲು ಸೀತೆಯು ಅಂತೆಯೇ ತಾನು ನಿರ್ಮಿಸಿದ ತೀರ್ಥಗಳಿಗೆ ವರವನ್ನು ಕೊಟ್ಟಳು.

ಅನಂತರ ಸೀತಾರಾಮರು ಯಜ್ಞಮಂಟಪಕ್ಕೆ ಹೋದರು. ಅಲ್ಲಿ ಯಜ್ಞಕುಂಡಕ್ಕೆ ಅಗ್ನಿಯನ್ನು ಹಾಕಿ ಪೂರ್ಣಾಹುತಿಯನ್ನು ಕೊಟ್ಟರು. ಅನಂತರ ಅಗ್ನಿದೇವನನ್ನು ಪೂಜಿಸಿ ಯಜ್ಞಪಾತ್ರೆಗಳನ್ನು ವಿಸರ್ಜಿಸಿದರು. ಅನಂತರ ಋತ್ವಿಕ್ಕುಗಳಿಗೆ ದಕ್ಷಿಣೆಯನ್ನು ಕೊಡುವಕಾಲವು ಬಂದಿತು. ಆಗ ರಾಮನು ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣನೇ ! ನೀನು ಈ ಋತ್ವಿಜರನ್ನು ಕರೆದು ಕೊಂಡು ಬೊಕ್ಕಸಕ್ಕೆ ಹೋಗಿ ಅಲ್ಲಿನ ರಕ್ಷಕರನ್ನು ದೂರವಾಗಿ ಕಳುಹಿಸಿ ಋತ್ವಿಜ ರನ್ನು ಬೇಕಾದಂತೆ ಹಣವನ್ನು ತೆಗೆದುಕೊಳ್ಳುವಂತೆ ಹೇಳು. ಅವರು ಬೇಕಾದಷ್ಟು ತೆಗೆದುಕೊಳ್ಳಲಿ. ಅನಂತರ ಆ ಹಣವನ್ನು ಆಳುಗಳ ಕೈಯ್ಯಲ್ಲಿ ಅವರವರ ಮನೆ ಗಳಿಗೆ ಕೊಟ್ಟುಕಳುಹಿಸು" ಎಂದನು. ಮತ್ತು ಉಳಿದ ಬ್ರಾಹ್ಮಣರಿಗೆಲ್ಲಾ ಯಥೇ ಚ್ಛವಾಗಿ ಹಣವನ್ನು ಕೊಟ್ಟನು.

ಈ ರೀತಿಯಾಗಿ ದಕ್ಷಿಣೆಯನ್ನು ಕೊಟ್ಟು ಆದಮೇಲೆ ಅವರಿಗೆಲ್ಲರಿಗೂ ತೃಪ್ತಿಯಾಗಿ ಭೋಜನವನ್ನು ಮಾಡಿಸಿ ಕಳುಹಿಸಿಕೊಟ್ಟನು. ಅನಂತರ ಶಿವನೇ ಮುಂತಾದ ದೇವತೆಗಳನ್ನು ಪೂಜಿಸಿದನು. ಅನಂತರ ರಾಜರನ್ನೂ ಅವರ ಪತ್ನಿಯರನ್ನೂ ಉಳಿದವರನ್ನೂ ಗೌರವಿಸಿದನು. ಅನಂತರ ರಾಮನು ಉಡಿಗೆತೊಡಿಗೆಗಳನ್ನು ಧರಿಸಿ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಎಲ್ಲರೂ ಕಾಣಿಕೆ ಗಳನ್ನು ಒಪ್ಪಿಸಿದರು. ಅಂತೆಯೇ ಹೆಂಗಸರು ಸೀತೆಗೂ ಅನೇಕ ಬಗೆಯಾದ ಕಾಣಿಕೆಗಳನ್ನು ಕೊಟ್ಟರು.

ಎಲ್ಲರಿಂದಲೂ ಇಂತು ಗೌರವಿತನಾದ ಶ್ರೀರಾಮನು ರಥದಲ್ಲಿ ಕುಳಿತು ಪಟ್ಟಣಕ್ಕೆ ಪ್ರಯಾಣವನ್ನು ಬೆಳಸಿದನು. ವಾದ್ಯಗಳು ಮೊಳಗುತ್ತಿದ್ದುವು. ಆಗ ಎಲ್ಲರೂ ದಾರಿಯುದ್ದಕ್ಕೂ ಪರಿಮಳಯುಕ್ತವಾದ ಓಕುಳಿಗಳನ್ನು ಎರಚುತ್ತ ಹೊರಟರು. ಪಟ್ಟಣದ ಹೆಂಗಸರು ದಾರಿಯುದ್ದಕ್ಕೂ ಆರತಿಯನ್ನು ಎತ್ತುತ್ತಿದ್ದರು.

ಇಂತು ರಾಮನು ಅರಮನೆಯ ಬಳಿಗೆ ಹೋಗಿ ರಥದಿಂದ ಇಳಿದು ಒಳಕ್ಕೆ ಹೋಗಿ ಸಿಂಹಾಸನದಲ್ಲಿ ಕುಳಿತನು. ಎಲ್ಲರೂ ಅವನನ್ನು ಅಲ್ಲಿ ನಮಸ್ಕರಿಸಿದರು. ಆ ಸಮಯದಲ್ಲಿ ಶಿವನು ಆ ರಾಮನನ್ನು ಸ್ತುತಿಸಿ ದೇವತೆಗಳೊಡನೆ ಸ್ವರ್ಗ ಲೋಕಕ್ಕೆ ಹೊರಟುಹೋದನು.

ರಾಜರೂ ಕೂಡ ರಾಮನ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಸ್ಥಳಗಳಿಗೆ ಹೋದರು. ರಾಮನು ಮೊದಲಿನಂತೆ ರಾಜ್ಯಭಾರವನ್ನು ಮಾಡುತ್ತ ಬಂದನು. ಅನಂತರವೂ ಕೂಡ ವರ್ಷವರ್ಷಕ್ಕೂ ಅಶ್ವಮೇಧಯಾಗವನ್ನು ಮಾಡುತ್ತ ಅನೇಕ ಯಾಗಗಳನ್ನು ಮಾಡಿದನು.

ಈ ರೀತಿಯಾಗಿ ಯಾಗವನ್ನು ಮಾಡುತ್ತ ರಾಮನು ಹತ್ತನೆಯ ಅಶ್ವಮೇಧಯಾಗದಲ್ಲಿ ಗುರುವಿನ ಮಾತಿನಂತೆ ನಡೆಯುತ್ತ ತನ್ನಲ್ಲಿದ್ದ ವಸ್ತುವೆಲ್ಲ ವನ್ನೂ ದಾನಮಾಡಿದನು. ಋತ್ವಿಜರಿಗೆ ತನ್ನ ರಾಜ್ಯವನ್ನೇ ಕೊಟ್ಟನು. ಅವರು ಮತ್ತೆ ಅದನ್ನು ಅವನಿಗೆ ಕೊಟ್ಟರು.

ಈ ಕಾಂಡವನ್ನು ಬೆಳಗ್ಗೆ ಎದ್ದು ಓದಿದರೆ ಸಕಲ ಇಷ್ಟಾರ್ಥಗಳೂ ಕೈಗೂಡು ತ್ತವೆ. ಅಲ್ಲದೆ ಅಶ್ವಮೇಧಯಾಗದ ಪುಣ್ಯವನ್ನೂ ಹೊಂದುತ್ತಾನೆ.



ಶ್ರೀಮದಾನಂದರಾಮಾಯಣದಲ್ಲಿ ಮೂರನೆಯದಾದ ಯಾಗಕಾಂಡವು ಮುಗಿದುದು

॥ ಶ್ರೀರಸ್ತು ॥

॥ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

॥ ಚತುರ್ಥಃ ವಿಲಾಸಕಾಂಡಃ ॥

॥ ಪ್ರಥಮಸ್ಸರ್ಗಃ ॥

॥ ಶ್ರೀ ವಿಷ್ಣುದಾಸ ಉವಾಚ ॥

ಗುರೋ ತೇ ಪ್ರಷ್ಟುಮಿಚ್ಛಾಮಿ ತದ್ವದಸ್ವ ಸವಿಸ್ತರಂ ।
ಸ್ತುತೋ ರಾಮಶ್ಶಿವೇನಾತ್ರ ಯೇನ ರಾಮಸ್ತವೇನ ಚ ॥ ೧ ॥

ತಂ ರಾಮಸ್ತವರಾಜಂ ಮೇ ವಿಸ್ತರೇಣ ಪ್ರಕಾಶಯ ।
ಇತಿ ಶಿಷ್ಯವಚಃ ಶ್ರುತ್ವಾ ರಾಮದಾಸೋಽಬ್ರವೀದ್ವಚಃ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
ಮೊದಲನೆಯ ಸರ್ಗವು

೧. ಶ್ರೀ ವಿಷ್ಣುದಾಸನು ಹೇಳಿದನು–ಎಲೈ ಗುರುವೆ! ಶಿವನು ರಾಮನನ್ನು ಸ್ತುತಿಸಿದನಷ್ಟೆ! ಆ ರಾಮನ ಸ್ತುತಿಯನ್ನು ಕೇಳಲು ಇಚ್ಛಿಸುತ್ತೇನೆ. ಅದನ್ನು ನನಗೆ ವಿಸ್ತಾರವಾಗಿ ಹೇಳು.

೨. ಆ ರಾಮನ ಸ್ತವರಾಜವನ್ನು ವಿಸ್ತಾರವಾಗಿ ಹೇಳೆಂದು ಶಿಷ್ಯನು ಹೇಳಿದ ಮಾತನ್ನು ಕೇಳಿ ಗುರುವಾದ ರಾಮದಾಸನು ಇಂತೆಂದು ಹೇಳಿದನು.

|| ಶ್ರೀ ರಾಮದಾಸ ಉವಾಚ ||

ಸಮ್ಯಕ್ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ಪ್ರೋಚ್ಯತೇ ರಾಮಚಂದ್ರಸ್ಯ ಸ್ತವರಾಜೋ ಮಯಾಧುನಾ || ೩ ||

ಯತ್ಪರಂ ಯದ್ಗುಣಾಥರಂ ಯಜ್ಜ್ಯೋತಿರಮಲಂ ಶಿವಂ ।
ತದೇವ ಪರಮಂ ತತ್ತ್ವಂ ಕೈವಲ್ಯಪದದಾಯಕಂ || ೪ ||

ಶ್ರೀರಾಮೇತಿ ಪರಂ ಜಾಪ್ಯಂ ತಾರಕಂ ಬ್ರಹ್ಮಸಂಜ್ಞಿತಂ ।
ಬ್ರಹ್ಮಹತ್ಯಾದಿ ಪಾಪಾಪಘ್ನಮಿತಿ ವೇದವಿದೋವಿದುಃ || ೫ ||

ಶ್ರೀರಾಮ ರಾಮ ರಾಮೇತಿ ಯೇ ವದಂತ್ಯಪಿ ಸರ್ವದಾ ।
ತೇಷಾಂ ಭುಕ್ತಿಶ್ಚ ಮುಕ್ತಿಶ್ಚ ಭವಿಷ್ಯತಿ ನ ಸಂಶಯಃ || ೬ ||

---

೩. ರಾಮದಾಸನು ಹೇಳಿದನು–ಎಲೈ ವತ್ಸನೇ! ನೀನು ಕೇಳಿದುದು ಚೆನ್ನಾಗಿದೆ ಸ್ತಿಮಿತವಾದ ಮನಸ್ಸಿನಿಂದ ಕೇಳು. ಈಗ ನಾನು ಆ ರಾಮಚಂದ್ರನ ಸ್ತವರಾಜವನ್ನು ಹೇಳುತ್ತೇನೆ.

೪. ಯಾವುದು ವ್ಯಕ್ಯವಾಗಿ ಕಾಣುವುದಿಲ್ಲವೋ ಯಾವುದು ಜ್ಯೋತಿಸ್ಸಿನ ಸ್ವರೂಪವೋ ಯಾವುದು ದೋಷರಹಿತವಾದುದೋ ಯಾವುದು ಮಂಗಳಕರವಾದುದೋ ಆ ಬ್ರಹ್ಮವೇ ಪರತತ್ವವೆಂದೆನಿಸಿಕೊಳ್ಳುತ್ತದೆ. ಅದೇನೇ ಮೋಕ್ಷವನ್ನು ಕೊಡತಕ್ಕದ್ದು.

೫. ಉತ್ತಮವಾದ ಶ್ರೀರಾಮವೆಂಬ ಮಂತ್ರವೇ ಜಪಮಾಡುವುದಕ್ಕೆ ಉತ್ತಮೋತ್ತಮವಾದುದು. ಅದನ್ನೇ ತಾರಕ ಬ್ರಹ್ಮವೆಂದೆನ್ನುತ್ತಾರೆ. ಅದು ಬ್ರಹ್ಮಹತ್ಯೆಯೇ ಮುಂತಾದ ಪಾಪಗಳನ್ನು ನಾಶಮಾಡುತ್ತದೆ. ಎಂಬುದಾಗಿ ವೇದದ ಗುಟ್ಟನ್ನು ಬಲ್ಲವರು ಹೇಳುತ್ತಾರೆ.

೬. ಶ್ರೀರಾಮ, ರಾಮ, ರಾಮ, ಎಂಬುದಾಗಿ ಯಾವಾಗಲೂ ಯಾರು ಹೇಳುತ್ತಾರೆಯೋ ಅವರಿಗೆ ಭುಕ್ತಿ (ಊಟವೂ) ಯೂ ಮುಕ್ತಿಯೂ ಸಿಕ್ಕುವುದರಲ್ಲಿ ಸಂಶಯವಿಲ್ಲ.

ಸ್ತವರಾಜಃ ಪುರಾಪ್ರೋಕ್ತಃ ಶಿವೇನ ಪರಮಾತ್ಮನಾ ।
ತಮಹಂ ಸಂಪ್ರವಕ್ಷ್ಯಾಮಿ ಹರಿಧ್ಯಾನಪುರಸ್ಸರಂ ॥ ೭ ॥

ತಾಪತ್ರಯಾಗ್ನಿಶಮನಂ ಸರ್ವಾಘೌಘನಿಕೃಂತನಂ ।
ದಾರಿದ್ರ್ಯದುಃಖಶಮನಂ ಸರ್ವಸಂಪತ್ಪ್ರದಾಯಕಂ ॥ ೮ ॥

ವಿಜ್ಞಾನಫಲದಂ ದಿವ್ಯಂ ಮೋಕ್ಷೈಕಫಲದಾಯಕಂ ।
ನಮಸ್ಕೃತ್ವಾ ಪ್ರವಕ್ಷ್ಯಾಮಿ ರಾಮಂ ಕೃಷ್ಣಮನಾಮಯಂ ॥ ೯ ॥

ಅಯೋಧ್ಯಾನಗರೇ ರಮ್ಯೇ ರತ್ನಮಂಟಪಮಧ್ಯಗೇ ।
ಸ್ಮರೇತ್ಕಲ್ಪತರೋರ್ಮೂಲೇ ರತ್ನಸಿಂಹಾಸನೇ ಶುಭೇ ॥ ೧೦ ॥

---

೭. ಈ ಸ್ತವರಾಜವನ್ನು ಪೂರ್ವದಲ್ಲಿ ಪರಮಾತ್ಮನಾದ ಶಿವನೇ ಹೇಳಿರುವನು. ಅದೇ ಸ್ತವರಾಜವನ್ನೂ, ಹರಿಯನ್ನೂ, ಧ್ಯಾನಮಾಡಿ ನಿನಗೆ ಹೇಳುತ್ತೇನೆ.

೮-೯. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ತಾಪತ್ರಯಗಳನ್ನು ನಾಶಮಾಡುವ ಎಲ್ಲಾ ಪಾಪಗಳನ್ನೂ ನಾಶಮಾಡುವ, ದಾರಿದ್ರ್ಯವೆಂಬ ದುಃಖವನ್ನು ನಾಶಮಾಡುವ ಎಲ್ಲಾ ವಿಧವಾದ ಸಂಪತ್ತುಗಳನ್ನೂ ಕೊಡುವ ಶಾಸ್ತ್ರಜನ್ಯವಾದ ಪ್ರಯೋಜನದ ಫಲವನ್ನು ಕೊಡುವ ದಿವ್ಯವಾದ ಮತ್ತು ಉತ್ತಮವಾದ ಮೋಕ್ಷಫಲವನ್ನು ಕೊಡುವ ಯಾವ ತೊಂದರೆಗೂ ಒಳಗಾಗದಿರುವ ಕೃಷ್ಣಸ್ವರೂಪನಾದ ರಾಮನನ್ನು ನಮಸ್ಕರಿಸಿ ಈ ರಾಮಸ್ತವವನ್ನು ಹೇಳುತ್ತೇನೆ.

೧೦. ರಮ್ಯವಾದ ಅಯೋಧ್ಯಾನಗರದಲ್ಲಿ ಕಲ್ಪವೃಕ್ಷದ ಬುಡದಲ್ಲಿ ರತ್ನಮಂಟಪವನ್ನೂ ಅದರ ಮಧ್ಯದಲ್ಲಿ ರತ್ನಸಿಂಹಾಸನವನ್ನೂ ಧ್ಯಾನಿಸಬೇಕು.

ತನ್ಮಧ್ಯೇಷ್ಟದಳಂ ಪದ್ಮಂ ನಾನಾರತ್ನೋಪಶೋಭಿತಂ ।
ಸ್ಮರೇನ್ಮಧ್ಯೇ ದಾಶರಥಿಂ ಸಹಸ್ರಾದಿತ್ಯತೇಜಸಂ ॥ ೧೧ ॥

ಪಿತುರಾಸನಮಾಸೀನಮಿಂದ್ರನೀಲಸಮಪ್ರಭಂ ।
ಕೋಮಲಾಂಗಂ ವಿಶಾಲಾಕ್ಷಂ ವಿದ್ಯುದ್ವರ್ಣಾಂಬರಾವೃತಂ ॥ ೧೨ ॥

ಭಾನುಕೋಟಿಪ್ರತೀಕಾಶಂ ಕಿರೀಟೇನ ವಿರಾಜಿತಂ ।
ರತ್ನಗ್ರೈವೇಯಕೇಯೂರವರಕುಂಡಲಮಂಡಿತಂ ॥ ೧೩ ॥

ರತ್ನಕಂಕಣಮಂಜೀರಕಟಿಸೂತ್ರೈರಲಂಕೃತಂ ।
ಶ್ರೀವತ್ಸಕೌಸ್ತುಭೋರಸ್ಕಂ ಮುಕ್ತಾಹಾರೋಪಶೋಭಿತಂ ॥ ೧೪ ॥

ಚಿಂತಾಮಣಿಸಮಾಯುಕ್ತಂ ರತ್ನಮಾಲಾವಿರಾಜಿತಂ ।
ದಿವ್ಯರತ್ನಸಮಾಯುಕ್ತಂ ಮುದ್ರಿಕಾಭಿರಲಂಕೃತಂ ॥ ೧೫ ॥

---

೧೧. ಆ ಮಂಟಪದ ಮಧ್ಯದಲ್ಲಿ ನಾನಾರತ್ನಗಳಿಂದ ಶೋಭಿತವಾದ ಎಂಟುದಳಗಳುಳ್ಳ ಪದ್ಮವನ್ನು ಧ್ಯಾನಿಸಬೇಕು. ಅದರ ಮಧ್ಯದಲ್ಲಿ ಸಾವಿರ ಸೂರ್ಯರಂತೆ ಬೆಳಗುತ್ತಿರುವ ದಾಶರಥಿ ರಾಮನನ್ನು ಸ್ಮರಿಸಬೇಕು.

೧೨–೧೪. ತಂದೆಯಾದ ದಶರಥನ ಸಿಂಹಾಸನದಲ್ಲಿ ಕುಳಿತಿರುವ ಇಂದ್ರನೀಲದಂತೆ ಕಾಂತಿಯುಳ್ಳ ಕೋಮಲಾಂಗನೂ ವಿಶಾಲಾಕ್ಷನೂ ಆದ ಹೊಂಬಣ್ಣದ ಬಟ್ಟೆಯನ್ನುಟ್ಟಿರುವ, ಕೋಟಿಸೂರ್ಯರಂತೆ ಪ್ರಕಾಶಿಸುವ ಕಿರೀಟವನ್ನು ಹಾಕಿಕೊಂಡಿರುವ, ರತ್ನದ ಹಾರದಿಂದಲೂ, ಭುಜಕೀರ್ತಿಯಿಂದಲೂ, ಕರ್ಣಾಭರಣಗಳಿಂದಲೂ ಅಲಂಕೃತನಾದ, ರತ್ನದ ಕೈಬಳೆಗಳಿಂದಲೂ, ರತ್ನದ ಕಾಲುಬಳೆಗಳಿಂದಲೂ ರತ್ನದ ಉಡಿದಾರದಿಂದಲೂ ಕೂಡಿರುವ, ಶ್ರೀವತ್ಸವೆಂಬ ಮಚ್ಚೆಯನ್ನೂ, ಕೌಸ್ತುಭವೆಂಬ ರತ್ನವನ್ನೂ ಎದೆಯಮೇಲೆ ಉಳ್ಳ, ಮುತ್ತಿನ ಹಾರಗಳಿಂದ ವಿರಾಜಿತನಾದ ರಾಮನನ್ನು ಧ್ಯಾನಿಸಬೇಕು.

೧೫–೧೯. ಚಿಂತಾಮಣಿಯನ್ನು ಹೊಂದಿರುವ ರತ್ನಮಾಲೆಗಳನ್ನು ಹಾಕಿಕೊಂಡಿರುವ ದಿವ್ಯವಾದ ರತ್ನಗಳನ್ನು ಧರಿಸಿರುವ ಉಂಗುರಗಳನ್ನು

ಕರ್ಪೂರಾಗರುಕಸ್ತೂರೀದಿವ್ಯಗಂಧಾನುಲೇಪನಂ ।
ತುಲಸೀಕುಂದಮಂದಾರಪುಷ್ಪಮಾಲ್ಯೈರಲಂಕೃತಂ ॥ ೧೬ ॥

ರಾಘವಂ ದ್ವಿಭುಜಂ ವೀರಂ ರಾಮಮೀಷತ್ ಸ್ಮಿತಾನನಂ ।
ಯೋಗಶಾಸ್ತ್ರೇಷ್ವಭಿರತಂ ಯೋಗೇಶಂ ಯೋಗದಾಯಕಂ ॥ ೧೭ ॥

ಸದಾ ಸೌಮಿತ್ರಿಭರತಶತ್ರುಘ್ನೈರುಪಸೇವಿತಂ ।
ವಿದ್ಯಾಧರಸುರಾಧೀಶಸಿದ್ಧಗಂಧರ್ವಕಿನ್ನರೈಃ ॥ ೧೮ ॥

ಯೋಗೀಂದ್ರೈರ್ನಾರದಾದ್ಯೈಶ್ಚ ಸ್ತೂಯಮಾನಮಹರ್ನಿಶಂ ।
ವಿಶ್ವಾಮಿತ್ರವಸಿಷ್ಠಾದ್ಯೈಃ ಋಷಿಭಿಃ ಪರಿವಾರಿತಂ ॥ ೧೯ ॥

ಸನಕಾದಿ ಮುನಿಶ್ರೇಷ್ಠೈಃ ಯೋಗಿವೃಂದೈಸ್ಸಮಾವೃತಂ ।
ರಾಮಂ ರಘುವರಂ ವೀರಂ ಧನುರ್ವೇದವಿಶಾರದಂ ॥ ೨೦ ॥

ಇಟ್ಟುಕೊಂಡಿರುವ, ಕರ್ಪೂರ, ಅಗರು, ಕಸ್ತೂರಿ ದಿವ್ಯವಾದ ಗಂಧಗಳನ್ನು ಲೇಪಿಸಿಕೊಂಡಿರುವ, ತುಲಸಿ, ಜಾಜಿ, ಪಾರಿಜಾತಗಳ ಹೂಗಳಿಂದ ಕಟ್ಟಿದ ಮಾಲೆಯಿಂದ ಭೂಷಿತನಾದ, ಎರಡು ತೋಳುಗಳುಳ್ಳ, ಹುಸಿನಗುವನ್ನು ನಗುತ್ತಿರುವ ಯೋಗಶಾಸ್ತ್ರದಲ್ಲಿ ಆಸಕ್ತನಾದ ಯೋಗಕ್ಕೆ ಒಡೆಯನಾದ ಯೋಗಸಿದ್ಧಿಯನ್ನು ಕೊಡುವ, ಲಕ್ಷ್ಮಣ, ಭರತ, ಶತ್ರುಘ್ನರಿಂದ ಸೇವಿತನಾದ ವಿದ್ಯಾಧರರು, ದೇವತೆಗಳು, ಸಿದ್ಧರು, ಗಂಧರ್ವರು, ಕಿನ್ನರರು, ಯೋಗೀಂದ್ರರಾದ ನಾರದಾದಿಗಳು ಇವರಿಂದ ಸ್ತುತಿಸಲ್ಪಡುತ್ತಿರುವ ವಿಶ್ವಾಮಿತ್ರವಸಿಷ್ಠರೇ ಮುಂತಾದ ಋಷಿಗಳಿಂದ ಸುತ್ತುವರಿಯಲ್ಪಟ್ಟ ಶ್ರೀರಾಮನನ್ನು ಸ್ಮರಿಸಬೇಕು.

೨೦–೨೨. ಸನಕನೇ ಮುಂತಾದ ಯೋಗಿಗಳ ಸಮೂಹದಿಂದ ಸೇವಿಸಲ್ಪಡುತ್ತಿರುವ ರಘುವರನೂ ವೀರನೂ ಆದ ಧನುರ್ವೇದದಲ್ಲಿ ನಿಪುಣನಾದ

ಮಂಗಳಾಯತನಂ ದೇವಂ ರಾಮಂ ರಾಜೀವಲೋಚನಂ ।
ಸರ್ವಶಾಸ್ತ್ರಾರ್ಥತತ್ತ್ವಜ್ಞಮಾನಂದಮತಿಸುಂದರಂ ॥ ೨೧ ॥
ಕೌಸಲ್ಯಾತನಯಂ ರಾಮಂ ಧನುರ್ಬಾಣಧರಂ ಹರಿಂ ।
ಏವಂ ಸಂಚಿಂತಯೇದ್ವಿಷ್ಣುಂ ಯಜ್ಜ್ಯೋತಿರ್ಜ್ಯೋತಿಷಾಂ ಪರಂ ॥ ೨೨ ॥
ಪ್ರಹೃಷ್ಟಮನಸೋ ಭೂತ್ವಾ ಸಭಾಯಾಂ ವೃಷಭಧ್ವಜಃ ।
ಸರ್ವಲೋಕ ಹಿತಾರ್ಥಾಯ ತುಷ್ಟಾವ ರಘುನಂದನಂ ॥ ೨೩ ॥
ಕೃತಾಂಜಲಿಪುಟೋ ಭೂತ್ವಾ ಚಿಂತಯನ್ನದ್ಭುತಂ ಹರಿಂ ।

॥ ಶ್ರೀರಾಮಸ್ತವ ರಾಜಸ್ತುತಿಃ ॥

॥ ಶ್ರೀ ಶಿವ ಉವಾಚ ॥

ಯದೇಕಂ ಯತ್ಪರಂ ನಿತ್ಯಂ ಯದನಂತಂ ಚಿದಾತ್ಮಕಂ ॥ ೨೪ ॥
ಯದೇಕಂ ವ್ಯಾಪಕಂ ಲೋಕೇ ತದ್ರೂಪಂ ಚಿಂತಯಾಮ್ಯಹಂ ।
ಸರ್ವತ್ರೈಲೋಕ್ಯಸೌಖ್ಯಾರ್ಥಂ ರಾಮಭಕ್ತ್ಯಭಿವೃದ್ಧಯೇ ॥ ೨೫ ॥

ಮಂಗಳಕ್ಕೆ ಮನೆಯಾದ ರಾಜೀವದಂತೆ ಕಣ್ಣುಗಳುಳ್ಳ, ಎಲ್ಲಾ ಶಾಸ್ತ್ರಗಳ ತತ್ವವನ್ನೂ ಬಲ್ಲ. ಆನಂದನಾದ, ಸುಂದರನಾದ, ಕೌಸಲ್ಯೆಯ ಮಗನಾದ ಧನುಸ್ಸುಬಾಣಗಳನ್ನು ಹಿಡಿದಿರುವ, ಜ್ಯೋತಿಸ್ಸುಗಳಿಗಿಂತಲೂ ಉತ್ತಮ ಜ್ಯೋತಿಸ್ಸಾದ ಆ ವಿಷ್ಣುವನ್ನೇ ಈ ರೀತಿಯಾಗಿ ಸ್ಮರಿಸಬೇಕು.

೨೩. ಇಂತಹ ರಾಮನನ್ನು ಸಂತೋಷಗೊಂಡ ಚಿತ್ತದಿಂದ ಆ ಶಿವನು ಸಭೆಯಲ್ಲಿ ಸರ್ವಲೋಕಗಳಿಗೂ ಹಿತವಾಗಲೆಂದು ಕೈಮುಗಿದುಕೊಂಡು ಇಂತೆಂದು ಸ್ತುತಿಸಿದನು.

ಶ್ರೀರಾಮಸ್ತವರಾಜಸ್ತುತಿಯು

೨೪–೨೫. ಶ್ರೀ ಶಿವನು ಹೇಳಿದನು–ಒಂದೇ ಒಂದಾಗಿ ಕಾಣಿಸುವ ಉತ್ತಮವಾದ ನಿತ್ಯವಾದ ನಾಶವಿಲ್ಲದ, ಚಿದ್ರೂಪವಾದ ಲೋಕವೆಲ್ಲವನ್ನೂ ವ್ಯಾಪಿಸಿಕೊಂಡಿರುವ ಮೂರುಲೋಕಗಳನ್ನೂ ವ್ಯಾಪಿಸಿಕೊಂಡಿರುವ ಶ್ರೀರಾಮ ರೂಪವಾದ ಪರಮಾತ್ಮನನ್ನು ರಾಮನಲ್ಲಿ ಭಕ್ತಿಯು ಹೆಚ್ಚುವುದಕ್ಕೋಸ್ಕರ ಭಜಿಸುತ್ತೇನೆ.

ವಿಜ್ಞಾನಹೇತುಂ ವಿಮಲಾಯತಾಕ್ಷಂ
ಪ್ರಜ್ಞಾನಸಂದಿವ್ಯ ಸುಖೈಕರೂಪಂ ।
ಶ್ರೀರಾಮಚಂದ್ರಂ ಹರಿಮಾದಿದೇವಂ
ವಿಶ್ವೇಶ್ವರಂ ರಾಮಹಂ ಭಜಾಮಿ ॥ ೨೬ ॥

ಕವಿಂ ಪುರಾಣಂ ಪುರುಷಂ ಪರೇಶಂ
ಸನಾತನಂ ಯೋಗಿನಮೀಶಿತಾರಂ ।
ಅಣೋರಣೀಯಾಂಸಮನಂತವೀರ್ಯಂ
ಪ್ರಾಣೇಶ್ವರಂ ರಾಮಹಂ ಭಜಾಮಿ ॥ ೨೭ ॥

ನಾರಾಯಣಂ ಜಗನ್ನಾಥಮಭಿರಾಮಂ ಜಗತ್ಪತಿಂ ।
ಕವಿಂ ಪುರಾಣಂ ವಾಗೀಶಂ ರಾಮಂ ದಶರಥಾತ್ಮಜಂ ॥ ೨೮ ॥

---

೨೬. ಶಾಸ್ತ್ರಜ್ಞಾನಕ್ಕೆ ಕಾರಣನಾದ; ಅಗಲವಾದ ಕಣ್ಣುಗಳುಳ್ಳ, ಬುದ್ಧಿವಂತನಾದ, ಸುಖರೂಪನಾದ ಆದಿದೇವನಾದ ಪ್ರಪಂಚಕ್ಕೆ ಒಡೆಯನಾದ ರಾಮನಲ್ಲಿ ಭಕ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಬಹುವಾಗಿ ರಾಮಚಂದ್ರನನ್ನು ಸ್ತುತಿಸುತ್ತೇನೆ.

೨೭. ಕವಿಯೂ, ಪುರಾಣಪುರುಷನೂ, ಪರೇಶನೂ ಸನಾತನನೂ ಯೋಗಿಯೂ ಕೇಳಿಕೊಂಡುದನ್ನು ಕೊಡುವವನೂ, ಅಣುವಿಗಿಂತಲೂ ಅಣುವೂ ಆದ ಬಹುಬಲವುಳ್ಳ ಪ್ರಾಣಿಗಳಿಗೆಲ್ಲಾ ಒಡೆಯನಾದ ರಾಮನನ್ನು ಭಜಿಸುತ್ತೇನೆ.

೨೮. ನಾರಾಯಣನಾದ, ಜಗತ್ತಿಗೆ ನಾಥನಾದ, ಜಗತ್ತಿಗೆ ಪತಿಯಾದ, ದೂರದೃಷ್ಟಿಯುಳ್ಳ ಪುರಾಣಪುರುಷನಾದ ದಶರಥನ ಮಗನಾದ ಶ್ರೀರಾಮನನ್ನು ಭಜಿಸುತ್ತೇನೆ.

ರಾಜರಾಜಂ ರಘುವರಂ ಕೌಸಲ್ಯಾನಂದವರ್ಧನಂ ।
ಭರ್ಗಂ ವರೇಣ್ಯಂ ವಿಶ್ವೇಶಂ ರಘುನಾಥಂ ಜಗದ್ಗುರುಂ ॥ ೨೯ ॥

ಸತ್ಯಂ ಸತ್ಯಪ್ರಿಯಂ ಶ್ರೇಷ್ಠಂ ಜಾನಕೀವಲ್ಲಭಂ ಪ್ರಭುಂ ।
ಸೌಮಿತ್ರಿಪೂರ್ವಜಂ ಶಾಂತಂ ಕಾಮದಂ ಕಮಲೇಕ್ಷಣಂ ॥ ೩೦ ॥

ಆದಿತ್ಯಂ ರವಿಮೀಶಾನಂ ಘೃಣಿಂ ಸೂರ್ಯಮನಾಮಯಂ ।
ಆನಂದರೂಪಿಣಂ ಸೌಮ್ಯಂ ರಾಘವಂ ಕರುಣಾಕರಂ ॥ ೩೧ ॥

ಜಾಮಗ್ನ್ಯಂ ತಪೋಮೂರ್ತಿಂ ರಾಮಂ ಪರಶುಧಾರಿಣಂ ।
ವಾಕ್ಪತಿಂ ವರದಂ ವಾಚ್ಯಂ ಶ್ರೀಪತಿಂ ಪಕ್ಷಿವಾಹನಂ ॥ ೩೨ ॥

---

೨೯. ರಾಜರಾಜನಾದ ರಘುಗಳಲ್ಲಿ ಶ್ರೇಷ್ಠನಾದ ಕೌಸಲ್ಯೆಗೆ ಸಂತೋಷವನ್ನುಂಟುಮಾಡುವ ಭರ್ಗರೂಪನಾದ ವಿಶ್ವೇಶ್ವರನಾದ ಜಗದ್ಗುರುವಾದ ರಾಮನನ್ನು ಭಜಿಸುತ್ತೇನೆ.

೩೦. ಸತ್ಯಸ್ವರೂಪನೂ, ಸತ್ಯಪ್ರಿಯನೂ, ಶ್ರೇಷ್ಠನೂ, ಜಾನಕೀವಲ್ಲಭನೂ, ಪ್ರಭುವೂ, ಸೌಮಿತ್ರಿಗೆ ಅಗ್ರಜನೂ, ಶಾಂತನೂ, ಇಷ್ಟವನ್ನು ಕೊಡುವವನೂ, ಕಮಲದಂತೆ ಕಣ್ಣುಳ್ಳವನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

೩೧. ಅದಿತಿಯ ಮಗನಾದ, ರವಿಯಾದ, ಈಶ್ವರನಾದ, ಕಿರಣಗಳನ್ನು ಕೊಡತಕ್ಕವನಾದ, ಬೇಕಾದುವನ್ನು ಕೊಡುವ ಐಶ್ವರ್ಯರೂಪನಾದ, ಪ್ರಕಾಶಕನಾದ ಅನಂತರೂಪಿಯಾದ, ಸೌಮ್ಯನಾದ, ಕರುಣಾಕರನಾದ ಶ್ರೀರಾಮನನ್ನು ಭಜಿಸುತ್ತೇನೆ.

೩೨. ಜಮದಗ್ನಿ ಪುತ್ರನಾದ, ತಪೋಮೂರ್ತಿಯಾದ ಪರಶುವನ್ನು ಹಿಡಿದಿರುವ ರಾಮನಾದ ವಾಕ್ಕಿಗೆ ಪತಿಯಾದ ಸ್ವರ್ಗವನ್ನು ಕೊಡತಕ್ಕ ಶ್ರೀಪತಿಯೂ ಪಕ್ಷಿವಾಹನನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಶ್ರೀಶಾರ್ಙ್ಗಧಾರಿಣಂ ರಾಮಂ ಚಿನ್ಮಯಾನಂದ ವಿಗ್ರಹಂ ।
ಹಲಧಾರಿಣಮೀಶಾನಂ ಬಲರಾಮಂ ಕೃಪಾನಿಧಿಂ ॥ ೩೩ ॥

ಶ್ರೀವಲ್ಲಭಂ ಕಲಾನಾಥಂ ಜಗನ್ಮೋಹನಮಚ್ಯುತಂ ।
ಮತ್ಸ್ಯಕೂರ್ಮವರಾಹಾದಿ ರೂಪಧಾರಿಣಮವ್ಯಯಂ ॥ ೩೪ ॥

ವಾಸುದೇವಂ ಜಗದ್ಯೋನಿಮನಾದಿನಿಧನಂ ಹರಿಂ ।
ಗೋವಿಂದಂ ಗೋಪತಿಂ ವಿಷ್ಣುಂ ಗೋಪೀಜನಮನೋಹರಂ ॥ ೩೫ ॥

ಗೋಪಾಲಂ ಗೋಪರೀವಾರಂ ಗೋಪಕನ್ಯಾಸಮಾವೃತಂ ।
ವಿದ್ಯುತ್ಪುಂಜಪ್ರತೀಕಾಶಂ ರಾಮಕೃಷ್ಣಂ ಜಗನ್ಮಯಂ ॥ ೩೬ ॥

---

೩೩. ಶಾರ್ಂಗವೆಂಬ ಧನುಸ್ಸನ್ನು ಹಿಡಿದಿರುವ ಚಿನ್ಮಯನೂ ಆನಂದ ವಿಗ್ರಹನೂ ಆದ, ನೇಗಿಲನ್ನು ಹಿಡಿದಿರುವ ಬಲರಾಮನ ಆಕಾರವುಳ್ಳ ಕೃಪಾನಿಧಿಯಾದ ಶ್ರೀರಾಮನನ್ನು ಭಜಿಸುತ್ತೇನೆ.

೩೪. ಲಕ್ಷ್ಮೀವಲ್ಲಭನಾದ ಕಲೆಗಳಿಗೆ ಒಡೆಯನಾದ ಜಗತ್ತಿಗೆ ಮೋಹನ ರೂಪನಾದ ಅಚ್ಯುತನಾದ ಮತ್ಸ್ಯ ಕೂರ್ಮ, ವರಾಹರೂಪನಾದ ಅವ್ಯಯನಾದ ಶ್ರೀರಾಮನನ್ನು ಭಜಿಸುತ್ತೇನೆ.

೩೫. ವಾಸುದೇವನಾದ ಜಗತ್ತಿಗೆ ಉತ್ಪತ್ತಿಸ್ಥಾನನಾದ ಆದ್ಯಂತರಹಿತನಾದ, ಕಾಲರೂಪನಾದ ಗೋವಿಂದನೂ, ಗೋಪತಿಯೂ ಆದ ವಿಷ್ಣುವಾದ ಗೋಪೀಜನ ಮನೋಹರನಾದ ಶ್ರೀರಾಮನನ್ನು ಭಜಿಸುತ್ತೇನೆ.

೩೬. ದನಕಾಯುವ ಗೋವುಗಳೇ ತನ್ನ ಸಂಗಡಿಗರಾಗಿ ಇರುವ ಗೋಪಕನ್ಯೆಯರಿಂದ ಸುತ್ತುವರಿದಿರುವ ಮಿಂಚಿನಉಂಡೆಯಂತೆ ಪ್ರಕಾಶನಾದ ಕೃಷ್ಣನೂ, ಜಗನ್ಮಯನೂ, ಆದ ಶ್ರೀರಾಮನನ್ನು ಭಜಿಸುತ್ತೇನೆ.

ಗೋಗೋಪಿಕಾಸಮಾಕೀರ್ಣಂ ವೇಣುವಾದನತತ್ಪರಂ ।
ಕಾಮರೂಪಂ ಕಲಾವಂತಂ ಕಾಮಿನಾಂ ಕಾಮದಂ ಪ್ರಭುಂ ॥ ೩೭ ॥

ಮನ್ಮಥಂ ಮಥುರಾನಾಥಂ ಮಾಧವಂ ಮಕರಧ್ವಜಂ ।
ಶ್ರೀಧರಂ ಶ್ರೀಕರಂ ಶ್ರೀಶಂ ಶ್ರೀನಿವಾಸಂ ಪರಾತ್ಪರಂ ॥ ೩೮ ॥

ಭೂತೇಶಂ ಭೂಪತಿಂ ಭದ್ರಂ ಭೂತಿದಂ ಭೂರಿಭೂಷಣಂ ।
ಸರ್ವದುಃಖಹರಂ ವೀರಂ ದುಷ್ಟದಾನವಮರ್ದನಂ ॥ ೩೯ ॥

ಶ್ರೀನೃಸಿಂಹಂ ಮಹಾವಿಷ್ಣುಂ ಮಹಾಂತಂ ದೀಪ್ತತೇಜಸಂ ।
ಚಿದಾನಂದಮಯಂ ನಿತ್ಯಂ ಪ್ರಣವಂ ಜ್ಯೋತಿರೂಪಕಂ ॥ ೪೦ ॥

---

೩೭. ಗೋವು ಗೋಪಿಕೆಯರುಗಳಿಂದ ಕೂಡಿರುವ ಕೊಳಲನ್ನು ಊದುತ್ತಿರುವ, ಮನೋಹರವಾದ ರೂಪುಗಳುಳ್ಳ, ಕಾಂತಿವಂತನಾದ, ಭಕ್ತರಿಗೆ ಕೇಳಿದುದನ್ನು ಕೊಡತಕ್ಕಂಥ ಶ್ರೀರಾಮನನ್ನು ಭಜಿಸುತ್ತೇನೆ.

೩೮. ಮನ್ಮಥನಾದ, ಮಥುರೆಗೆ ಸ್ವಾಮಿಯಾದ ಮಾಧವನಾದ ಮೀನೇ ಧ್ವಜದಲ್ಲಿರುವ ಕಾಂತಿಯನ್ನು ಧರಿಸಿರುವ, ಕಾಂತಿಯನ್ನು ಕೊಡುವ ಕಾಂತಿಗೆ ಒಡೆಯನಾದ, ಲಕ್ಷ್ಮೀನಿವಾಸಸ್ಥಾನನಾದ ಪರಕ್ಕೂ ಪರನಾದ ಶ್ರೀರಾಮನನ್ನು ಭಜಿಸುತ್ತೇನೆ.

೩೯ ಭೂತಗಳಿಗೆ ಒಡೆಯನಾದ, ಭೂಮಿಗೆ ಒಡೆಯನಾದ ಮಂಗಳಕರವಾದ ಐಶ್ವರ್ಯದಾಯಕನಾದ ಬಹುವಾಗಿ ಅಲಂಕೃತನಾಗಿರುವ ದುಃಖಗಳೆಲ್ಲವನ್ನೂ ನಾಶಮಾಡುವ ವೀರನಾದ, ದುಷ್ಟರಾದ ದಾನವರನ್ನು ನಾಶಮಾಡುವ ಶ್ರೀರಾಮನನ್ನು ಭಜಿಸುತ್ತೇನೆ.

೪೦. ಶ್ರೀ ನೃಸಿಂಹನಾದ, ಮಹಾವಿಷ್ಣುವಾದ, ಮಹತ್‌ಸ್ವರೂಪನಾದ ಒಳ್ಳೆಕಾಂತಿಯಿಂದ ಕೂಡಿದ ಚಿತ್‌ಸ್ವರೂಪನಾದ, ಆನಂದಮಯನಾದ, ನಿತ್ಯನಾದ, ಪ್ರಣವಸ್ವರೂಪನೂ ಜ್ಯೋತಿಸ್ಸ್ವರೂಪನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

ಆದಿತ್ಯಮಂಡಲಗತಂ ನಿಶ್ಚಿತಾರ್ಥಸ್ವರೂಪಿಣಂ ।
ಭಕ್ತಿಪ್ರಿಯಂ ಪದ್ಮನೇತ್ರಂ ಭಕ್ತಾನಾಮೀಪ್ಸಿತಪ್ರದಂ ॥ ೪೧ ॥

ಕೌಸಲ್ಯೇಯಂ ಕಲಾಮೂರ್ತಿಂ ಕಾಕುತ್‌ಸ್ಥಂ ಕಮಲಾಪ್ರಿಯಂ ।
ಸಿಂಹಾಸನೇ ಸಮಾಸೀನಂ ನಿತ್ಯವ್ರತಮಕಲ್ಮಷಂ ॥ ೪೨ ॥

ವಿಶ್ವಾಮಿತ್ರಪ್ರಿಯಂ ದಾಂತಂ ಸ್ವದಾರನಿಯತವ್ರತಂ ।
ಯಜ್ಞೇಶಂ ಯಜ್ಞಪುರುಷಂ ಯಜ್ಞಪಾಲನತತ್ಪರಂ ॥ ೪೩ ॥

ಸತ್ಯಸಂಧಂ ಜಿತಕ್ರೋಧಂ ಶರಣಾಗತವತ್ಸಲಂ ।
ಸರ್ವಕ್ಲೇಶಾಪಹರಣಂ ವಿಭೀಷಣವರಪ್ರದಂ ॥ ೪೪ ॥

---

೪೧. ಆದಿತ್ಯಮಂಡಲದಲ್ಲಿರುವ, ನಿಶ್ಚಯವಸ್ತುವಾದ ಭಕ್ತಿಯಿಂದ ಪ್ರೀತಿಯನ್ನು ಹೊಂದುವ ಪದ್ಮದಂತೆ ನೇತ್ರವುಳ್ಳ, ಭಕ್ತರಿಗೆ ಇಷ್ಟವಾದುದನು ಕೊಡುವಂತಹ ಶ್ರೀರಾಮುನನ್ನು ಭಜಿಸುತ್ತೇನೆ.

೪೨. ಕೌಸಲ್ಯೆಯ ಮಗನಾದ, ಕಲಾಮೂರ್ತಿಯಾದ, ಕಕುತ್‌ಸ್ಥನ ವಂಶದಲ್ಲಿ ಹುಟ್ಟಿದ, ಕಮಲೆಗೆ ಪ್ರಿಯನಾದ, ಸಿಂಹಾಸನದಲ್ಲಿ ಕುಳಿತಿರುವ, ನಿತ್ಯವೂ ವ್ರತವುಳ್ಳ, ಕಲ್ಮಷವಿಲ್ಲದಿರುವ ಶ್ರೀರಾಮುನನ್ನು ಭಜಿಸುತ್ತೇನೆ.

೪೩. ವಿಶ್ವಾಮಿತ್ರನಿಗೆ ಪ್ರೀತಿಪಾತ್ರನಾದ, ಇಂದ್ರಿಯನಿಗ್ರಹವುಳ್ಳ, ತನ್ನ ಹೆಂಡತಿಯಲ್ಲಿಯೇ ರಮಿಸುವ ನಿತ್ಯವ್ರತವುಳ್ಳ, ಯಜ್ಞಕ್ಕೆ ಒಡೆಯನಾದ ಯಜ್ಞಪುರುಷನಾದ ಯಜ್ಞವನ್ನು ಕಾಪಾಡುವುದರಲ್ಲಿ ಆಸಕ್ತನಾದ ಶ್ರೀರಾಮುನನ್ನು ಭಜಿಸುತ್ತೇನೆ.

೪೪. ಸತ್ಯವಂತನಾದ, ಕೋಪವನ್ನು ಅಡಗಿಸಿ ಇಟ್ಟುಕೊಳ್ಳುವ, ಶರಣಾಗತರಲ್ಲಿ ವಿಶ್ವಾಸವುಳ್ಳ ಎಲ್ಲಾ ಪ್ರಾಣಿಗಳ ಕಷ್ಟಗಳನ್ನೂ ನಾಶವಮಾಡುವ, ವಿಭೀಷಣನಿಗೆ ವರವನ್ನು ಕೊಟ್ಟಂಥ ಶ್ರೀರಾಮುನನ್ನು ಭಜಿಸುತ್ತೇನೆ.

ದಶಗ್ರೀವಹರಂ ರುದ್ರಂ ಕೇಶವಂ ಕೇಶಿಮರ್ದನಂ ।
ವಾಜಿಪ್ರಮಥನಂ ವೀರಂ ಸುಗ್ರೀವೇಪ್ಸಿತರಾಜ್ಯದಂ ॥ ೪೫ ॥

ನರವಾನರದೇವೈಶ್ಚ ಸೇವಿತಂ ಹನುಮತ್ಪ್ರಿಯಂ ।
ಶುದ್ಧಂ ಸೂಕ್ಷ್ಮಂ ಪರಂ ಶಾಂತಂ ತಾರಕಬ್ರಹ್ಮರೂಪಿಣಂ ॥ ೪೬ ॥

ಸರ್ವಭೂತಾತ್ಮಭೂತಸ್ಥಂ ಸರ್ವಾಧಾರಂ ಸನಾತನಂ ।
ಸರ್ವಕಾರಣಕರ್ತಾರಂ ನಿದಾನಂ ಪ್ರಕೃತೇಃ ಪರಂ ॥ ೪೭ ॥

ನಿರಾಮಯಂ ನಿರಾಭಾಸಂ ನಿರವದ್ಯಂ ನಿರಂಜನಂ ।
ನಿತ್ಯಾನಂದಂ ನಿರಾಕಾರಮದ್ವೈತಂ ತಮಸಃ ಪರಂ ॥ ೪೮ ॥

---

೪೫. ದಶಗ್ರೀವನನ್ನು ಸಂಹರಿಸಿದ, ರುದ್ರನಾದ, ಕೇಶವನೂ ಕೇಶಿಯೆಂಬ ರಾಕ್ಷಸನನ್ನು ಕೊಂದವನೂ ಆದ, ಅಶ್ವಮೇಧಯಾಗವನ್ನು ಮಾಡಿದ, ವೀರನಾದ, ಸುಗ್ರೀವನಿಗೆ ರಾಜ್ಯವನ್ನು ಕೊಡಿಸಿದ ಶ್ರೀರಾಮನನ್ನು ಭಜಿಸುತ್ತೇನೆ.

೪೬. ನರರಿಂದಲೂ, ವಾನರರಿಂದಲೂ, ದೇವತೆಗಳಿಂದಲೂ ಸೇವಿತನಾದ, ಹನುಮಂತನಿಗೆ ಪ್ರಿಯನಾದ, ಶುದ್ಧನೂ, ಸೂಕ್ಷ್ಮನೂ, ಆದ ಬಹುಶಾಂತನಾದ ತಾರಕ ಬ್ರಹ್ಮರೂಪಿಯಾದ ಶ್ರೀರಾಮನನ್ನು ಭಜಿಸುತ್ತೇನೆ.

೪೭. ಎಲ್ಲಾ ಪ್ರಾಣಿಗಳಿಗೂ ಆತ್ಮರೂಪನಾದ, ಸರ್ವಕ್ಕೂ ಆಧಾರನಾದ, ಸನಾತನನಾದ, ಎಲ್ಲಾ ಕಾರಣಗಳಿಗೆ ಕರ್ತೃವಾದ, ಮೊದಲನೆಯಕಾರಣ ರೂಪನಾದ, ಪ್ರಕೃತಿಗಿಂತಲೂ ಬೇರೆಯವನಾದ ಶ್ರೀರಾಮನನ್ನು ಭಜಿಸುತ್ತೇನೆ.

೪೮. ರೋಗವಿಲ್ಲದಿರುವ, ವಿಕಲ್ಪರೂಪನಲ್ಲದ, ನಿರಂಜನರೂಪನಾದ, ನಿತ್ಯಾನಂದರೂಪನಾದ, ಆಕಾರರಹಿತನಾದ, ಒಬ್ಬನೇ ಆದ, ತಮೋಗುಣವನ್ನು ಹೊಂದದೆ ಅದಕ್ಕೆ ದೂರವಾಗಿರುವ ಶ್ರೀರಾಮನನ್ನು ಭಜಿಸುತ್ತೇನೆ.

ಪರಾತ್ಪರತರಂ ನಿತ್ಯಂ ಸತ್ಯಾನಂದಂ ಚಿದಾತ್ಮಕಂ ।
ಮನಸಾ ಶಿರಸಾ ನಿತ್ಯಂ ಪ್ರಣಮಾಮಿ ರಘೂತ್ತಮಂ　　॥ ೪೯ ॥

ಭವೋದ್ಭವಂ ವೇದವಿದಾಂವರಿಷ್ಠ
ಮಾದಿತ್ಯಚಂದ್ರಾನಿಲಸಂಪ್ರಭಾವಂ ।
ಸರ್ವಾತ್ಮಕಂ ಸರ್ವಗತಸ್ವರೂಪಂ
ನಮಾಮಿ ರಾಮಂ ತಮಸಃ ಪರಸ್ತಾತ್　　॥ ೫೦ ॥

ನಿರಂಜನಂ ನಿಷ್ಪ್ರತಿಮಂ ನಿರೀಹಂ
ನಿರಾಶ್ರಯಂ ಕಾರಣಮಾದಿದೇವಂ ।
ನಿತ್ಯಂ ಧ್ರುವಂ ನಿರ್ವಿಷಯಸ್ವರೂಪಂ
ನಿರಂತರಂ ರಾಮಮಹಂ ಭಜಾಮಿ　　॥ ೫೧ ॥

---

೪೯. ಪರಸ್ವರೂಪಿಗಿಂತಲೂ ಪರಸ್ವರೂಪನಾದ, ನಿತ್ಯನಾದ, ಸತ್ಯಸ್ವರೂಪನೂ, ಚಿತ್‌ಸ್ವರೂಪನೂ ಆದ ಶ್ರೀರಾಮನನ್ನು ಮನಸ್ಸಿನಿಂದಲೂ, ತಲೆಯಿಂದಲೂ ಕೂಡಿ ನಮಸ್ಕರಿಸುತ್ತೇನೆ.

೫೦. ಸಂಸಾರಕ್ಕೆ ಜನಕನಾದ, ವೇದವನ್ನು ಬಲ್ಲವರಲ್ಲಿ ಉತ್ತಮನಾದ, ಆದಿತ್ಯ, ಚಂದ್ರ, ಗಾಳಿ, ಇವುಗಳ ಪ್ರಭಾವವನ್ನು ಹೊಂದಿರುವ ಸರ್ವಾತ್ಮಕನಾದ ಸರ್ವಗತವಾದ ತಮೋಗುಣಕ್ಕಿಂತ ಬಹು ದೂರದಲ್ಲಿರುವ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

೫೧. ನಿರಂಜನನಾದ, ನಿಷ್ಪ್ರತಿಮನಾದ ಆಶಾರಹಿತನಾದ, ಆಶ್ರಯವಿಲ್ಲದಿರುವ ಕಾರಣರೂಪನಾದ, ಆದಿದೇವನಾದ, ನಿತ್ಯನೂ ನಿಶ್ಚಯಸ್ವರೂಪನೂ, ಆದ ವಿಷಯಸ್ವರೂಪನಲ್ಲದ ರಾಮನನ್ನು ನಿತ್ಯವೂ ಭಜಿಸುತ್ತೇನೆ.

ಭವಾಬ್ಧಿಪೋತಂ ಭರತಾಗ್ರಜಂ ತಂ
ಭಕ್ತಿಪ್ರಿಯಂ ಭಾನುಕುಲಪ್ರದೀಪಂ ।
ಭೂತಾಧಿನಾಥಂ ಭುವನಾಧಿಪತ್ಯಂ
ಭಜಾಮಿ ರಾಮಂ ಭವರೋಗವೈದ್ಯಂ ॥ ೫೨ ॥

ಸರ್ವಾಧಿಪತ್ಯಂ ರಣರಂಗಧೀರಂ
ಸತ್ಯಂ ಚಿದಾನಂದ ಸುಖಸ್ವರೂಪಂ ।
ಸತ್ಯಂ ಶಿವಂ ಸಜ್ಜನಹೃನ್ನಿವಾಸಂ
ಧ್ಯೇಯಂ ಪರಾನಂದಮಹಂ ಭಜಾಮಿ ॥ ೫೩ ॥

ಕಾರ್ಯಕ್ರಿಯಾಕಾರಣಮಪ್ರಮೇಯಂ
ಕವಿಂ ಪುರಾಣಂ ಕಮಲಾಯತಾಕ್ಷಂ ।
ಕುಮಾರವೇಷಂ ಕರುಣಾಮಯಂ ತಂ
ಕಲ್ಪದ್ರುಮಂ ರಾಮಮಹಂ ಭಜಾಮಿ ॥ ೫೪ ॥

---

೫೨. ಸಂಸಾರವೆಂಬ ಸಮುದ್ರಕ್ಕೆ ದೋಣಿಯಂತಿರುವ, ಭರತನಿಗೆ ಅಗ್ರಜನಾದ, ಭಕ್ತಿಯಿಂದ ಪ್ರೀತಿಯನ್ನು ತೋರಿಸುವ, ಸೂರ್ಯವಂಶಕ್ಕೆ ಶ್ರೇಷ್ಠನಾದ ಭೂತಗಳಿಗೆ ಒಡೆಯನಾದ ಪ್ರಪಂಚಕ್ಕೆ ಅಧಿಪತಿಯಾದ ಶ್ರೀರಾಮನನ್ನು ಭಜಿಸುತ್ತೇನೆ.

೫೩. ಎಲ್ಲಕ್ಕೂ ಅಧಿಪತಿಯಾದ, ರಣರಂಗದಲ್ಲಿ ಧೀರನಾದ ಸತ್ಯಸ್ವರೂಪನಾದ ಚಿತ್‌ಸ್ವರೂಪನೂ ಆನಂದಸ್ವರೂಪನೂ ಆದ ಸರ್ವಸ್ವರೂಪನೂ ಮಂಗಳಸ್ವರೂಪನೂ ಆಗಿರುವ, ಸಜ್ಜನರ ಹೃದಯದಲ್ಲಿ ವಾಸಮಾಡುವ, ಧ್ಯಾನ ಯೋಗ್ಯನಾದ ಶ್ರೀರಾಮನನ್ನು ಭಜಿಸುತ್ತೇನೆ.

೫೪. ಕಾರ್ಯ ಕ್ರಿಯೆ, ಕಾರಣರೂಪನಾದ ಬಹುವಾದ ಯೋಗ್ಯತೆಯುಳ್ಳ, ಕವಿಯೂ, ಪುರಾಣಪುರುಷನೂ ಆದ, ಕಮಲದಂತೆ ಕಣ್ಣುಳ್ಳ ಕುಮಾರನವೇಷವನ್ನು ಹೊಂದಿರುವ, ಕರುಣಾಮಯನಾದ ಶ್ರೀರಾಮನನ್ನು ಭಜಿಸುತ್ತೇನೆ.

ತ್ರೈಲೋಕ್ಯನಾಥಂ ಸರಸೀರುಹಾಕ್ಷಂ
ದಯಾನಿಧಿಂ ದ್ವಂದ್ವವಿನಾಶಹೇತುಂ ।
ಮಹಾಬಲಂ ವೇದನಿಧಿಂ ಸುರೇಶಂ
ಸನಾತನಂ ರಾಮಮಹಂ ಭಜಾಮಿ ॥ ೫೫ ॥

ವೇದಾಂತವೇದ್ಯಂ ಕವಿಮೀಶಿತಾರ
ಮನಾದಿಮಧ್ಯಾಂತಮಚಿಂತಮಾದ್ಯಂ ।
ಅಗೋಚರಂ ನಿರ್ಮಲಮೇಕರೂಪಂ
ಪರಾತ್ಪರಂ ರಾಮಮಹಂ ಭಜಾಮಿ ॥ ೫೬ ॥

ಅಶೇಷವೇದಾತ್ಮಕಮಾದಿದೇವ
ಮಜಂ ಹರಿಂ ರಾಮಮನಂತಮೂರ್ತಿಂ ।
ಅಪಾರಸಂವಿತ್ಸುಖಮೇಕರೂಪಂ
ನಮಾಮಿ ರಾಮಂ ತಮಸಃ ಪರಸ್ತಾತ್ ॥ ೫೭ ॥

---

೫೫. ಮೂರುಲೋಕಕ್ಕೂ ಒಡೆಯನಾದ ಸರಸೀರುಹದಂತೆ ಕಣ್ಣುಳ್ಳ ದಯಾನಿಧಿಯಾದ ಸುಖದುಃಖರೂಪವಾದ, ದ್ವಂದ್ವಕ್ಕೆ ನಾಶರೂಪಕನಾದ ಮಹಾಬಲವುಳ್ಳ, ವೇದನಿಧಿಯಾದ ಸುರರಿಗೆ ಒಡೆಯನಾದ ಸನಾತನನಾದ ರಾಮನನ್ನು ಭಜಿಸುತ್ತೇನೆ.

೫೬. ವೇದಾಂತದಿಂದ ತಿಳಿಯಲು ಸಾಧ್ಯನಾದ, ಕವಿಯಾದ, ಬೇಕಾದುದನ್ನು ಕೊಡತಕ್ಕ, ಆದಿ ಮಧ್ಯ ಅಂತ್ಯಗಳಿಲ್ಲದ, ಅಚಿಂತ್ಯನೂ ಆದಿಯವನೂ ಆದ, ಗೋಚರನಾಗದ, ನಿರ್ಮಲನಾದ, ಏಕಸ್ವರೂಪನಾದ, ಪರಕ್ಕಿಂತಲೂ ಪರನಾದ ಶ್ರೀರಾಮನನ್ನು ಭಜಿಸುತ್ತೇನೆ.

೫೭. ಎಲ್ಲಾ ವೇದಗಳ ಸ್ವರೂಪನಾದ, ಆದಿದೇವನಾದ, ಅಜನಾದ ಹರಿಯೂ ರಾಮನೂ ಅನಂತಮೂರ್ತಿಯೂ ಆದ, ಜ್ಞಾನಸ್ವರೂಪನಾದ, ಸುಖವುಳ್ಳ, ಏಕರೂಪನಾಗಿರುವ, ಅಜ್ಞಾನಕ್ಕಿಂತ ಬಹುದೂರದಲ್ಲಿರುವ ಶ್ರೀರಾಮನನ್ನು ಭಜಿಸುತ್ತೇನೆ.

ತತ್ವಸ್ವರೂಪಂ ಪುರುಷಂ ಪುರಾಣಂ
ಸ್ವತೇಜಸಾ ಪೂರಿತಮೇಕಮೇವ ।
ರಾಜಾಧಿರಾಜಂ ರವಿಮಂಡಲಸ್ಥಂ
ವಿಶ್ವೇಶ್ವರಂ ರಾಮಮಹಂ ಭಜಾಮಿ ॥ ೫೮ ॥

ಯೋಗೀಂದ್ರಸಂಘೈರಪಿಸೇವ್ಯಮಾನಂ
ನಾರಾಯಣಂ ನಿರ್ಮಲಮಾದಿದೇವಂ ।
ನತೋಽಸ್ಮಿ ನಿತ್ಯಂ ಜಗದೇಕನಾಥಂ
ಹರಿಂ ಚಿದಾನಂದಮಯಂ ಮುಕುಂದಂ ॥ ೫೯ ॥

ಅಶೇಷವಿದ್ಯಾಧಿಪತಿಂ ನಮಾಮಿ
ರಾಮಂ ಪುರಾಣಂ ತಮಸಃ ಪರಸ್ತಾತ್ ।
ವಿಭೂತಿದಂ ವಿಶ್ವಸೃಜಂ ವಿರಾಜಂ
ರಾಜೇಂದ್ರಮೀಶಂ ರಘುವಂಶನಾಥಂ ॥ ೬೦ ॥

---

೫೮. ತತ್ವಸ್ವರೂಪನಾದ, ಪುರಾಣಪುರುಷನಾದ, ತನ್ನ ತೇಜಸ್ಸಿನಿಂದ ಪ್ರಪಂಚವೆಲ್ಲವನ್ನೂ ತುಂಬಿಕೊಂಡು ತಾನು ಒಬ್ಬನೇ ಆಗಿ ಪ್ರಕಾಶಿಸುತ್ತಿರುವ ರಾಜಾಧಿರಾಜನಾದ ಸೂರ್ಯಮಂಡಲವೇ ಸ್ಥಾನವಾಗಿ ಉಳ್ಳ ವಿಶ್ವೇಶ್ವರನಾದ ಶ್ರೀರಾಮನನ್ನು ಭಜಿಸುತ್ತೇನೆ.

೫೯. ಯೋಗೀಂದ್ರರ ಸಂಘಗಳಿಂದಲೇ ಸೇವಿತನಾದ, ಜಗತ್ತಿಗೆ ಚಕ್ರವರ್ತಿಯಾದ, ಹರಿಯೂ, ಚಿತ್‌ಸ್ವರೂಪನೂ, ಆನಂದರೂಪನೂ ಆದ ಶ್ರೀರಾಮನನ್ನು ಭಜಿಸುತ್ತೇನೆ.

೬೦. ವಿದ್ಯೆಗಳೆಲ್ಲಕ್ಕೂ ಅಧಿಪತಿಯಾದ, ಐಶ್ವರ್ಯವನ್ನು ದಯಪಾಲಿಸತಕ್ಕ ಪ್ರಪಂಚವನ್ನೇ ಸೃಷ್ಟಿಮಾಡಬಲ್ಲ, ರಾಜೇಂದ್ರನಾಗಿ ಪ್ರಕಾಶಿಸುವ, ರಘುವಂಶನಾಥನಾದ ಶ್ರೀರಾಮನನ್ನು ಭಜಿಸುತ್ತೇನೆ.

ಅಚಿಂತ್ಯಮವ್ಯಕ್ತಮನಂತರೂಪಂ
ಜ್ಯೋತಿರ್ಮಯಂ ರಾಮಮಹಂ ಭಜಾಮಿ ।
ಅಶೇಷಸಂಸಾರವಿಕಾರಹೀನ
ಮಾನಂದಸಂಪೂರ್ಣಸುಖಾಭಿರಾಮಂ ॥ ೬೧ ॥

ನಾರಾಯಣಂ ವಿಷ್ಣುಮಹಂ ಭಜಾಮಿ
ಸಮಸ್ತಸಾಕ್ಷಿಂ ತಮಸಃ ಪರಸ್ತಾತ್ ।
ಮುನೀಂದ್ರಗುಹ್ಯಂ ಪರಿಪೂರ್ಣಮೇಕಂ
ಕಲಾನಿಧಿಂ ಕಲ್ಮಶನಾಶಹೇತುಂ ॥
ಪರಾತ್ಪರಂ ಯತ್ಪರಮಂ ಪವಿತ್ರಂ
ನಮಾಮಿ ರಾಮಂ ಮಹತೋಮಹಾಂತಂ ॥ ೬೨ ॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವೇಂದ್ರೋ ದೇವತಾಸ್ತಥಾ ।
ಆದಿತ್ಯಾದಿಗ್ರಹಾಶ್ಚೈವ ತ್ವಮೇವ ರಘುನಂದನ ॥ ೬೩ ॥

---

೬೧. ಇಂತಹವನೆಂದು ಮನಸ್ಸಿಗೂ ನಿಲುಕದ, ವ್ಯಕ್ತನಲ್ಲದ, ಅನಂತ ರೂಪುಗಳುಳ್ಳ ಜ್ಯೋತಿರ್ಮಯನಾದ, ಸಂಸಾರಕ್ಕೆ ಸೇರಿದ್ದರೂ ವಿಕಾರವಿಲ್ಲದಿರುವ, ಆನಂದದಿಂದ ಪೂರ್ಣನಾದ, ಸುಖದಿಂದ ಮನೋಹರನಾದ ಶ್ರೀರಾಮನನ್ನು ಭಜಿಸುತ್ತೇನೆ.

೬೨. ಸಮಸ್ತಕ್ಕೂ ಸಾಕ್ಷಿರೂಪನಾದ, ಮುನೀಂದ್ರರಿಗೂ ಗುಹ್ಯನಾದ, ಪರಿಪೂರ್ಣನೂ ಏಕನೂ ಆದ ಕಲೆಗೆ ಸ್ಥಾನನಾದ ಕಲ್ಮಷವನ್ನು ನಾಶಮಾಡುವ ಪರಾತ್ಪರನಾದ, ಪವಿತ್ರನಾದ ಮಹತ್ತಿಗಿಂತಲೂ ಮಹತ್‌ಸ್ವರೂಪನಾದ ಶ್ರೀರಾಮನನ್ನು ಭಜಿಸುತ್ತೇನೆ.

೬೩. ಬ್ರಹ್ಮನೂ, ವಿಷ್ಣುವೂ, ಮಹೇಶನೂ, ಎಲ್ಲಾ ದೇವತಾಸ್ವರೂಪನೂ ದೇವೇಂದ್ರನೂ ಆದಿತ್ಯಾದಿಗ್ರಹಸ್ವರೂಪನೂ ನೀನೇ ಆಗಿದ್ದೀಯೆ. ಅಂತಹ ನಿನಗೆ ನಮಸ್ಕಾರವು.

ತಾಪಸಾ ಋಷಯಸ್ಸಿದ್ಧಾಸ್ಸಾಧ್ಯಾಶ್ಚ ಮುನಯಸ್ತಥಾ ।
ವಿಪ್ರಾ ವೇದಾಶ್ಚ ಯಜ್ಞಾಶ್ಚ ಪುರಾಣಂ ಧರ್ಮಸಂಹಿತಾಃ ॥ ೬೪ ॥

ವರ್ಣಾಶ್ರಮಾಸ್ತಥಾ ಧರ್ಮಾ ವರ್ಣಧರ್ಮಾಸ್ತಥೈವ ಚ ।
ನಾಗಾ ಯಕ್ಷಾಶ್ಚ ಗಂಧರ್ವಾ ದಿಕ್ಪಾಲಾ ದಿಗ್ಗಜಾ ದಿಶಃ ॥ ೬೫ ॥

ವಸವೋಷ್ಟೌ ತ್ರಯಃ ಕಾಲಾ ರುದ್ರಾ ಏಕಾದಶ ಸ್ಮೃತಾಃ ।
ತಾರಕಾ ದ್ವಾದಶಾದಿತ್ಯಾಸ್ತ್ವಮೇವ ರಘುನಾಯಕ ॥ ೬೬ ॥

ಸಪ್ತದ್ವೀಪಾಸ್ಸಮುದ್ರಾಶ್ಚ ನದಾನದ್ಯಸ್ತಥಾ ದ್ರುಮಾಃ ।
ಸ್ಥಾವರಾ ಜಂಗಮಾಶ್ಚೈವ ತ್ವಮೇವ ರಘುನಂದನ ॥ ೬೭ ॥

ದೇವತಿರ್ಯಙ್ಮನುಷ್ಯಾಣಾಂ ದಾನವಾನಾಂ ದಿವೌಕಸಾಂ ।
ಮಾತಾ ಪಿತಾ ತಥಾ ಭ್ರಾತಾ ತ್ವಮೇವ ರಘುನಂದನ ॥ ೬೮ ॥

೬೪–೬೬. ತಾಪಸರೂ, ಋಷಿಗಳೂ, ಸಿದ್ಧರೂ, ಸಾಧ್ಯರೂ, ಮುನಿಗಳೂ, ವಿಪ್ರರೂ, ಯಜ್ಞಗಳೂ, ವೇದಗಳೂ, ಪುರಾಣಗಳೂ, ಧರ್ಮಸಂಹಿತೆಗಳೂ, ವರ್ಣಾಶ್ರಮಗಳೂ ಮತ್ತು ವರ್ಣಾಶ್ರಮ ಧರ್ಮಗಳೂ, ನಾಗರೂ, ಯಕ್ಷರೂ, ಗಂಧರ್ವರೂ, ದಿಕ್ಪಾಲಕರೂ, ದಿಗ್ಗಜಗಳೂ, ದಿಕ್ಕುಗಳೂ, ಅಷ್ಟವಸುಗಳೂ, ತ್ರಿಕಾಲಗಳೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ ಇವೆಲ್ಲವೂ ಕೂಡ ನೀನೇ ಆಗಿದ್ದೀಯೆ.

೬೭. ಸಪ್ತದ್ವೀಪಗಳೂ, ಸಮುದ್ರಗಳೂ, ನದಗಳೂ, ನದಿಗಳೂ, ಮರಗಳೂ, ಜಂಗಮಗಳೂ, ಸ್ಥಾವರಗಳೂ ಇವೆಲ್ಲವೂ ನೀನೇ ಆಗಿದ್ದೀಯೆ.

೬೮. ದೇವತೆಗಳೂ, ತಿರ್ಯಕ್ಪ್ರಾಣಿಗಳೂ, ಮನುಷ್ಯರೂ, ದಾನವರೂ ಇವರೆಲ್ಲರಿಗೂ ನೀನೇ ತಂದೆಯು. ನೀನೇ ತಾಯಿಯು. ನೀನೇ ಸಹೋದರನು. ಎಲ್ಲವೂ ನೀನೇ ಆಗಿದ್ದೀಯೆ.

ಸರ್ವೇಶಸ್ತ್ವಂ ಪರಂ ಬ್ರಹ್ಮ ತ್ವದ್ರೂಪಂ ವಿಶ್ವಮೇವ ಚ ।
ತ್ವಮಕ್ಷರಂ ಪರಂ ಜ್ಯೋತಿಸ್ತ್ವಮೇವ ರಘುಪುಂಗವ ॥ ೬೯ ॥

ಶಾಂತಂ ಸರ್ವಗತಂ ಸೂಕ್ಷ್ಮಂ ಪರಂ ಬ್ರಹ್ಮಸನಾತನಂ ।
ರಾಜೀವಲೋಚನಂ ರಾಮಂ ಪ್ರಣಮಾಮಿ ಜಗತ್ಪತಿಂ ।
ತತಃ ಪ್ರಸನ್ನಶ್ರೀರಾಮಃ ಪ್ರೋವಾಚ ವೃಷಭಧ್ವಜಂ ॥ ೭೦ ॥

॥ ಶ್ರೀರಾಮ ಉವಾಚ ॥

ತುಷ್ಟೋಽಹಂ ಗಿರಿಜಾಕಾಂತ ವೃಣೀಷ್ವ ವರಮುತ್ತಮಂ ॥ ೭೧ ॥

॥ ಶ್ರೀ ಶಿವ ಉವಾಚ ॥

ಯದಿ ತುಷ್ಟೋಽಸಿ ದೇವೇಶ ಶ್ರೀರಾಮ ಕರುಣಾನಿಧೇ ।
ತವಾದ್ಯ ದರ್ಶನೇನೈವ ಕೃತಾರ್ಥೋಽಹಂ ನ ಸಂಶಯಃ ॥ ೭೨ ॥

---

೬೯. ನೀನೇ ಸರ್ವೇಶ್ವನು ನೀನೇ ಪರಬ್ರಹ್ಮನು. ಪ್ರಪಂಚವೆಲ್ಲವೂ ನಿನ್ನ ರೂಪವೇ. ನೀನೇ ಅಕ್ಷರರೂಪವಾದ ಜ್ಯೋತಿಸ್ಸು. ಎಲ್ಲವೂ ನೀನೇ ಆಗಿದ್ದೀಯೆ.

೭೦, ಶಾಂತನೂ, ಸರ್ವಗತನೂ, ಸೂಕ್ಷ್ಮನೂ, ಪರಬ್ರಹ್ಮನೂ, ಸನಾತನನೂ, ರಾಜೀವಲೋಚನನೂ, ಜಗತ್ಪತಿಯೂ ಆದ ಶ್ರೀರಾಮನನ್ನು ನಮಸ್ಕರಿಸುತ್ತೇನೆ. ಹೀಗೆಂದು ಶಿವನು ಸ್ತುತಿಸಲು ಶ್ರೀರಾಮನು ಪ್ರಸನ್ನನಾಗಿ ಆ ಶಿವನನ್ನು ಕುರಿತು ಇಂತೆಂದನು.

೭೧. ಶ್ರೀರಾಮನು ಹೇಳಿದನು–ಎಲೈ ಗಿರಿಜಾಕಾಂತನೇ! ನಿನ್ನ ಸ್ತೋತ್ರದಿಂದ ಸಂತೋಷಪಟ್ಟಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳು. ಕೊಡುತ್ತೇನೆ.

೭೨. ಶ್ರೀ ಶಿವನು ಹೇಳಿದನು–ಕರುಣಾನಿಧಿಯಾದ ಶ್ರೀರಾಮನೇ! ನೀನು ಸಂತುಷ್ಟನಾಗಿದ್ದರೆ ನಾನು ಧನ್ಯನಾದೆನು. ನಿನ್ನ ದರ್ಶನದಿಂದಲೇ ಈಗ ನಾನು ಕೃತಾರ್ಥನಾಗಿದ್ದೇನೆ.

ಧನ್ಯೋಽಹಂ ಕೃತಕೃತ್ಯೋಽಹಂ ಪುಣ್ಯೋಽಹಂ ಪುರುಷೋತ್ತಮ ।
ಅದ್ಯ ಮೇ ಸಫಲಂ ಕರ್ಮ ಹ್ಯದ್ಯ ಮೇ ಸಫಲಂ ತಪಃ ॥ ೭೩ ॥

ಅದ್ಯ ಮೇ ಸಫಲಂ ಜ್ಞಾನಮದ್ಯ ಮೇ ಸಫಲಂ ಶ್ರುತಂ ।
ಅದ್ಯ ಮೇ ಸಫಲಂ ಸರ್ವಂ ತ್ವತ್ಪದಾಂಭೋಜದರ್ಶನಾತ್ ॥ ೭೪ ॥

ಅದ್ವೈತಂ ವಿಮಲಂ ಜ್ಞಾನಂ ತ್ವನ್ನಾಮಸ್ಮರಣಂ ತಥಾ ।
ತ್ವತ್ಪದಾಂಭೋರುಹದ್ವಂದ್ವೇ ಸದ್ಭಕ್ತಿಂ ದೇಹಿ ರಾಘವ ॥ ೭೫ ॥

ತತಃ ಪರಂ ಸುಖಂ ಪ್ರೀತೋ ರಾಮಃ ಸ್ರಾಹ ಸದಾಶಿವಂ ।
ಗಿರಿಜೇಶ ಮಹಾಭಾಗ ಪುನರಿಷ್ಟಂ ದದಾಮ್ಯಹಂ ॥ ೭೬ ॥

---

೭೩. ನಾನು ಧನ್ಯನಾದೆನು. ಪುಣ್ಯವಂತನಾದೆನು. ಎಲೈ ಪುರುಷೋತ್ತಮನೇ! ನಾನೇ ಕೃತಕೃತ್ಯನು. ಈಗ ನನ್ನ ಜನ್ಮವು ಸಫಲವಾಯಿತು. ಈಗ ನನ್ನ ತಪಸ್ಸು ಫಲವನ್ನು ಕೊಟ್ಟಿತು. ಸಂಶಯವಿಲ್ಲ.

೭೪. ಈಗ ನನ್ನ ಜ್ಞಾನವು ಸಫಲವಾಯಿತು. ನನ್ನ ಜ್ಞಾನವು ಈಗ ಫಲವನ್ನು ಕೊಟ್ಟಿತು. ಈಗ ನನ್ನ ಸರ್ವಸ್ವವೂ ಸಫಲವಾದುವು. ನಿನ್ನ ಪಾದಕಮಲಗಳ ದರ್ಶನವಾದುದರಿಂದ ನನಗೆ ಸಂಬಂಧಪಟ್ಟುದೆಲ್ಲವೂ ಕೃತಕೃತ್ಯಗಳಾದುವು.

೭೫ ಎಲೈ ರಾಘವನೇ! ನನಗೆ ನಿರ್ಮಲವೂ, ಅದ್ವೈತವೂ ಆದ ಜ್ಞಾನವನ್ನು ಕೊಡು. ಯಾವಾಗಲೂ ನಿನ್ನ ನಾಮವನ್ನು ಸ್ಮರಿಸುತ್ತಿರುವಂತೆ ಅನುಗ್ರಹಿಸು. ನಿನ್ನ ಪಾದಪದ್ಮಗಳಲ್ಲಿ ಉತ್ತಮವಾದ ಭಕ್ತಿಯು ಇರುವಂತೆ ಮಾಡು.

೭೬. ಈ ರೀತಿಯಾದ ಸದಾಶಿವನ ಮಾತನ್ನು ಕೇಳಿ ಶ್ರೀರಾಮನು ಸುಪ್ರೀತನಾಗಿ ಗಿರಿಜೇಶನೇ! ಮಹಾನುಭಾವನೇ! ಇದೆಲ್ಲವನ್ನೂ ಕೊಟ್ಟಿದ್ದೇನೆ. ಇನ್ನೂ ಇಷ್ಟವಾದುದನ್ನು ಕೇಳು. ಅದನ್ನು ಕೊಡುತ್ತೇನೆ.

॥ ಶ್ರೀ ಶಿವ ಉವಾಚ ॥

ವರಂ ನ ಯಾಚೇ ರಘುನಾಥಯುಷ್ಮ
ತ್ಪದಾಬ್ಜಭಕ್ತಿಸ್ಸತತಂ ಮಮಾಸ್ತು ।
ಇದಂ ಪ್ರಿಯಂ ನಾಥ ವರಂ ಪ್ರಯಚ್ಛ
ಪುನಃ ಪುನಸ್ತ್ವಾಮಿದಮೇವ ಯಾಚೇ ॥ ೭೭ ॥

॥ ರಾಮದಾಸ ಉವಾಚ ॥

ಇತ್ಯೇವಮೀಡಿತೋ ರಾಮಃ ಪ್ರಾದಾತ್ತಸ್ಮೈ ವರಾಂತರಂ ।
ತೇನೋಕ್ತಃ ಸ್ತವರಾಜಾಯ ದದೌ ನಾನಾವರಾನ್ ಬಹೂನ್ ॥ ೭೮ ॥

ಏವಂ ಶಿವೇನ ಯಃ ಪ್ರೋಕ್ತಃ ಸ್ತವರಾಜಶ್ಶುಭಾವಹಃ ।
ಸ ಏವಾದ್ಯ ತ್ವಯಾ ಪೃಷ್ಟಸ್ತವಾಗ್ರೇ ಕಥಿತೋ ಮಯಾ ॥ ೭೯ ॥

ಅಯಂ ಶ್ರೀರಘುನಾಥಸ್ಯ ಸ್ತವರಾಜೋ ಹ್ಯನುತ್ತಮಃ ।
ಸರ್ವಸೌಭಾಗ್ಯಸಂಪತ್ತಿದಾಯಕೋ ಮುಕ್ತಿದಃ ಸ್ಮೃತಃ ॥ ೮೦ ॥

---

೭೭. ಶ್ರೀ ಶಿವನು ಹೇಳಿದನು–ಇಂತೆಂದ ರಾಮಚಂದ್ರನ ಮಾತನ್ನು ಕೇಳಿ ಎಲೈ ರಘುನಾಥನೇ ! ನನಗೆ ಮತ್ತಾವುದೂ ಬೇಕಿಲ್ಲ. ನಿನ್ನ ಪಾದದಲ್ಲಿ ಭಕ್ತಿಯೊಂದೇ ನನಗೆ ಯಾವಾಗಲೂ ಇರಲಿ. ಇದೇ ನನಗೆ ಪ್ರಿಯವಾದುದು ಇದನ್ನೇ ಕೊಡು. ಇದನ್ನೇ ಮತ್ತೆ ಮತ್ತೆ ಕೇಳಿಕೊಳ್ಳುತ್ತೇನೆ.

೭೮. ರಾಮದಾಸನು ಹೇಳಿದನು–ಶಿವನು ಈ ರೀತಿಯಾಗಿ ಹೇಳಲು ರಾಮನು ಅವನಿಗೆ ಆ ವರವನ್ನೂ ಬೇರೆ ವರವನ್ನೂ ಕೊಟ್ಟು ಅವನು ಹೇಳಿದ ಆ ಸ್ತವರಾಜಕ್ಕೆ ಅನೇಕ ವರಗಳನ್ನು ಕೊಟ್ಟನು.

೭೯. ಈ ರೀತಿಯಾಗಿ ಶಿವನು ಹೇಳಿದ ಶುಭವಾದ ಸ್ತವರಾಜವನ್ನು ನೀನು ಕೇಳಿದೆ. ಅದನ್ನೇ ನಾನು ನಿನ್ನೆದುರಿಗೆ ಹೇಳಿದ್ದೇನೆ.

೮೦. ಈ ರಾಮದೇವನ ಸ್ತವರಾಜವು ಬಹು ಉತ್ತಮವಾದುದು. ಸಮಸ್ತವಾದ ಸೌಭಾಗ್ಯವನ್ನು ಕೊಡುತ್ತದೆ. ಮುಕ್ತಿಯನ್ನೂ ಕೊಡುತ್ತದೆ.

ಕಥಿತೋ ಗಿರಿಜೇಶೇನ ವೇದಾನಾಂ ಸಾರಸಂಗ್ರಹಃ ।
ಗುಹ್ಯಾದ್ಗುಹ್ಯತರೋ ನಿತ್ಯಸ್ತವ ಸ್ನೇಹಾತ್ಪ್ರಕೀರ್ತಿತಃ ॥ ೮೧ ॥

ಯಃ ಪಠೇಚ್ಛೃಣುಯಾದ್ವಾಪಿ ತ್ರಿಸಂಧ್ಯಂ ಶ್ರದ್ಧಯಾನ್ವಿತಃ ।
ಬ್ರಹ್ಮಹತ್ಯಾದಿಪಾಪಾನಿ ತತ್ಸಮಾನಿ ಬಹೂನಿ ಚ ॥ ೮೨ ॥

ಹೇಮಸ್ತೇಯಸುರಾಪಾನಗುರುತಲ್ಪಾಯುತಾನಿ ಚ ।
ಗೋವಧಾದ್ಯುಪಪಾಪಾನಿ ಚಿಂತನಾತ್ಸಂಭವಾನಿ ಚ ॥ ೮೩ ॥

ಸರ್ವೈಸ್ಸಮುಚ್ಯತೇ ಪಾಪೈಃ ಕಲ್ಪಾಯುತಶತೋದ್ಭವೈಃ ।
ಮಾನಸಂ ವಾಚಿಕಂ ಪಾಪಂ ಕರ್ಮಣಾ ಸಮುಪಾರ್ಜಿತಂ ॥ ೮೪ ॥

ಶ್ರೀರಾಮಸ್ಮರಣೇನೈವ ವ್ಯಪೋಹತಿ ನ ಸಂಶಯಃ ।
ಇದಂ ಸತ್ಯಮಿದಂ ಸತ್ಯಂ ಸತ್ಯಂ ನೈವಾನ್ಯದುಚ್ಯತೇ ॥ ೮೫ ॥

---

೮೧. ಗಿರಿಜೇಶನಾದ ಶಿವನು ವೇದಗಳ ಸಾರಸಂಗ್ರಹವನ್ನು ಈ ರೀತಿಯಾಗಿ ಹೇಳಿದ್ದಾನೆ. ಇದು ಗುಟ್ಟಾದುವುಗಳಲ್ಲೆಲ್ಲಾ ಗುಟ್ಟಾದುದು. ನಿತ್ಯವಾದುದು. ಇದನ್ನು ನಿನ್ನಲ್ಲಿರುವ ಸ್ನೇಹದಿಂದ ಹೇಳಿದ್ದೇನೆ.

೮೨–೮೩. ಯಾವನು ಇದನ್ನು ಓದುವನೋ ಯಾವನು ಇದನ್ನು ಕೇಳುವನೋ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲಗಳ ಮೂರು ಸಂಧ್ಯೆಗಳಲ್ಲಿಯೂ ಯಾವನು ಶ್ರದ್ಧೆಯಿಂದ ಓದುತ್ತಾನೆಯೋ ಅಥವಾ ಕೇಳುತ್ತಾನೆಯೋ ಅವನಿಗೆ ಬ್ರಹ್ಮಹತ್ಯಾದಿ ಪಾಪಗಳೂ ಅದಕ್ಕೆ ಸಮವಾದ ಅನೇಕ ಪಾಪಗಳೂ, ಚಿನ್ನ ಕದಿಯುವುದು, ಹೆಂಡ ಕುಡಿಯುವುದು, ಗುರುವಿನ ಹೆಂಡತಿಯಲ್ಲಿ ರಮಿಸುವುದು, ಇಂತಹ ಸಾವಿರಾರು ಮಹಾಪಾಪಗಳೂ ಗೋವಧೆಯೇ ಮುಂತಾದ ಉಪಪಾತಕಗಳೂ ಮನಸ್ಸಿನಿಂದ ಹುಟ್ಟಿದ ಪಾಪಗಳೂ ಕೂಡ ಹೋಗುತ್ತವೆ.

೮೪–೮೫. ಅನೇಕಸಾವಿರಕಲ್ಪಗಳ ಪಾಪಗಳೂ ಕೂಡ ಹೋಗುತ್ತವೆ. ಮಾನಸಿಕವಾದ ವಾಚಿಕವಾದ ಕರ್ಮದಿಂದ ಸಂಪಾದಿಸಿದ ಎಲ್ಲಾ ಪಾಪಗಳೂ ಶ್ರೀರಾಮಸ್ಮರಣೆಯಿಂದಲೇ ಹೋಗುತ್ತವೆ. ಸಂಶಯವಿಲ್ಲ. ಇದು ಸತ್ಯವು. ಇದು ಸತ್ಯವು. ಇದು ಸತ್ಯವು ಮೂರುಬಾರಿಗೂ ಸತ್ಯವು ಸುಳ್ಳನ್ನು ಹೇಳುವುದೇ ಇಲ್ಲವು.

ರಾಮಸ್ಸತ್ಯಂ ಪರಂ ಬ್ರಹ್ಮ ರಾಮಾತ್ಕಿಂಚಿನ್ನ ವಿದ್ಯತೇ ।
ತಸ್ಮಾದ್ರಾಮಸ್ವರೂಪಂ ಹಿ ರಾಮಸ್ಸರ್ವಮಿದಂ ಜಗತ್ ॥ ೮೬ ॥

ಶ್ರೀರಾಮಚಂದ್ರ ರಘುಪುಂಗವ ರಾಜವರ್ಯ
ರಾಜೇಂದ್ರ ರಾಮ ರಘುನಾಯಕ ರಾಘವೇಶ ।
ರಾಜಾಧಿರಾಜ ರಘುನಾಯಕ ರಾಮಚಂದ್ರ
ದಾಸೋಽಹಮದ್ಯ ಭವತಶ್ಶರಣಾಗತೋಽಸ್ಮಿ ॥ ೮೭ ॥

ಉತ್ಫುಲ್ಲಾಮಲಕೋಮಲೋತ್ಪಲದಳಶ್ಯಾಮಾಯ ರಾಮಾಯ ಚಾ
ಕಾಮಾಯ ಪ್ರಶಮಾಯ ನಿರ್ಮಲಗುಣಗ್ರಾಮಾಯ ರಾಮಾತ್ಮನೇ ।
ಧ್ಯಾನಾರೂಢಮುನೀಂದ್ರಮಾನಸ ಸರೋಹಂಸಾಯ ಸಂಸಾರವಿ
ಧ್ವಂಸಾಯ ಸ್ಫುರದೋಜಸೇ ರಘುಕುಲೋತ್ತಂಸಾಯ ಪುಂಸೇ ನಮಃ ॥
॥ ೮೮ ॥

---

೮೬. ರಾಮನೇ ಸತ್ಯವಾಗಿಯೂ ಪರಬ್ರಹ್ಮವಸ್ತುವು. ರಾಮನಿಗಿಂತಲೂ ಬೇರೆಯಾದ ಉತ್ತಮವಸ್ತುವು ಇಲ್ಲವೇ ಇಲ್ಲ. ಆದ್ದರಿಂದ ರಾಮನೇ ಸರ್ವಸ್ವರೂಪನು. ಈ ಜಗತ್ತೆಲ್ಲವೂ ರಾಮನ ರೂಪವಾದುದೇ ಆಗಿರುವುದು.

೮೭. ಶ್ರೀರಾಮಚಂದ್ರನೇ ! ರಘುಪುಂಗವನೇ ! ರಾಜಶ್ರೇಷ್ಠನೇ ! ರಾಜೇಂದ್ರನಾದ ರಾಮನೇ ! ರಘುನಾಯಕನೇ ! ರಾಘವೇಶನೇ ! ರಾಜಾಧಿರಾಜನೇ ! ರಘುನಾಯಕನೇ ! ರಾಮಚಂದ್ರನೇ ! ನಾನು ನಿನಗೆ ದಾಸನು. ಈಗ ನಿನ್ನನ್ನು ಶರಣುಹೊಂದಿದ್ದೇನೆ.

೮೮. ಅರಳಿರುವ ಕನ್ನೈದಿಲೆಯ ದಳದಂತೆ ನೀಲವಾಗಿರುವ, ಯಾವ ಇಚ್ಛೆಯೂ ಇಲ್ಲದಿರುವ, ಶಾಂತವಾದ, ನಿರ್ಮಲವಾದ ಗುಣಗಳುಳ್ಳ, ಆತ್ಮಸ್ವರೂಪನಾದ, ಧ್ಯಾನ್ಯದಲ್ಲಿರುವ, ಮುನೀಂದ್ರರ, ಮನಸ್ಸಿನಲ್ಲಿ ಹಂಸದಂತೆ ಸಂಚರಿಸುವ, ಜನನಮರಣಗಳನ್ನು ನಾಶಮಾಡುವ, ಕಾಂತಿಮಂತನಾದ ರಘುಕುಲಶ್ರೇಷ್ಠನಾದ, ರಾಮರೂಪನಾದ ಮಹಾಪುರುಷನಿಗೆ ನಮಸ್ಕಾರವು

ಏವಂ ಶಿಷ್ಯ ಮಯಾ ಪ್ರೋಕ್ತೋ ಯಥಾ ಪೃಷ್ಟಸ್ತ್ವಯಾ ಮಮ |
ಸ್ತವರಾಜೋ ರಾಘವಸ್ಯ ಶ್ರವಣಾತ್ಪಾಪ ನಾಶನಃ ॥ ೮೯ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ವಿಲಾಸಕಾಂಡೇ ಶಂಕರಕೃತ ರಘುವೀರ
ಸ್ತವರಾಜೋನಾಮ ಪ್ರಥಮಸ್ಸರ್ಗಸ್ಸಮಾಪ್ತಃ

---

೮೯. ಎಲೈ ಶಿಷ್ಯನೇ! ನೀನು ಕೇಳಿದ ಈ ಸ್ತವವನ್ನು ವಿಸ್ತಾರವಾಗಿ ಹೇಳಿದ್ದೇನೆ. ಈ ರಾಮಸ್ತವವನ್ನು ಕೇಳಿದರೆ ಪಾಪಗಳೆಲ್ಲವೂ ಹೋಗುತ್ತದೆ. ಸಂಶಯವಿಲ್ಲ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಶಂಕರನು ಹೇಳಿದ
ರಘುವೀರ ಸ್ತವರಾಜ ಎಂಬ ಮೊದಲನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ

॥ ಮೊದಲನೆಯ ಸರ್ಗದ ಸಾರಾಂಶವು ॥

ಶಿಷ್ಯನಾದ ವಿಷ್ಣುದಾಸನ ಕೋರಿಕೆಯ ಪ್ರಕಾರ ರಾಮದಾಸನು ಶ್ರೀರಾಮಸ್ತವವನ್ನು ಹೇಳುವನು. ಅವೆಲ್ಲವೂ ರಾಮನ ನಾಮಗಳಾಗಿಯೇ ಇರುವುವು. ಮತ್ತು ಈ ರಾಮನೇ ಸಕಲದೇವತೆಗಳ ಸ್ವರೂಪನೆಂದೂ ಈತನಿಂದಲೇ ಪ್ರಪಂಚವೆಲ್ಲವೂ ನಿರ್ಮಿತವಾಗಿ ಪಾಲಿತವಾಗುತ್ತಿರುವುದೆಂದೂ ವರ್ಣಿತವಾಗಿದೆ.

ಈ ಸ್ತವಕ್ಕೆ ಶಿವನ ಕೋರಿಕೆಯಂತೆ ರಾಮನು ವರಗಳನ್ನು ಕೊಟ್ಟನು. ಇದನ್ನು ಓದಿದರೆ ಬ್ರಹ್ಮಹತ್ಯಾದಿಪಾಪಗಳೆಲ್ಲವೂ ಹೋಗುವುವು. ಮನೋವಾಕ್ಕಾಯ ಜನಿತವಾದ ಪಾಪಗಳೆಲ್ಲವೂ ಹೋಗುವುವು.

ಇದನ್ನು ಓದುವುದರಿಂದ ಮನುಷ್ಯನು ಸಕಲಇಷ್ಟಾರ್ಥಗಳನ್ನೂ ಹೊಂದುತ್ತಾನೆ.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

|| ದ್ವಿತೀಯಸ್ಸರ್ಗಃ ||

|| ವಿಷ್ಣುದಾಸ ಉವಾಚ ||

ಗುರೋ ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ಮಾಂ ವಕ್ತುಮರ್ಹಸಿ |
ಅಯೋಧ್ಯಾಯಾಂ ರಾಘವೇಣ ಸೀತಯಾತಿಸುರೂಪಯಾ || ೧ ||

ಕಥಂ ಭುಕ್ತಾ ವರಾ ಭೋಗಾಃ ಕಿಂ ಕಿಮಾಚರಿತಂ ಶುಭಂ |
ಚರಿತ್ರಂ ತಸ್ಯ ಸಕಲಂ ವದ ಮಂಗಳದಾಯಕಂ || ೨ ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಎರಡನೆಯ ಸರ್ಗವು

೧-೨. ಶ್ರೀ ವಿಷ್ಣುದಾಸನು ಹೇಳಿದನು—ಎಲೈ ಗುರುವೇ! ನಿನ್ನಲ್ಲಿ ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ಅದನ್ನು ಸರಿಯಾಗಿ ನೀನು ಹೇಳು. ಅಯೋಧ್ಯೆಯಲ್ಲಿ ರಾಮನು ಸೀತೆಯೊಡನೆ ಇದ್ದನಷ್ಟೆ! ಆ ಸುಂದರಿಯಾದ ಸೀತೆಯೊಡನೆ ಶ್ರೀರಾಮನು ಉತ್ತಮವಾದ ಭೋಗಗಳನ್ನು ಹೇಗೆ ಅನುಭವಿಸಿದನು? ಯಾವ ಯಾವ ಶುಭಕಾರ್ಯಗಳನ್ನು ಮಾಡಿದನು? ಮಂಗಳವನ್ನುಂಟುಮಾಡುವ ಆ ರಾಮಸ್ವಾಮಿಯ ಚರಿತ್ರೆಯನ್ನು ನನಗೆ ಹೇಳು.

|| ರಾಮದಾಸ ಉವಾಚ ||

ಸಮ್ಯಕ್ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು |
ರಣದೀಕ್ಷಾಂ ವಾಜಿಮೇಧದೀಕ್ಷಾಂ ಚ ರಘುನಂದನಃ || ೩ ||

ನಿರ್ವಾಪ್ಯ ಸೀತಯಾ ರೇಮೇಽಯೋಧ್ಯಾಯಾಂ ಬಂಧುಭಿಸ್ಸುಖಂ |
ಜಾನಕೀಂ ರಂಜಯಾಮಾಸ ನಾನಾಭೋಗೈರ್ಮನೋಹರೈಃ || ೪ ||

ತತ್ಕಿಂಚಿಚ್ಛೃಣು ಮಾಂಗಲ್ಯಂ ವಿಲಾಸಚರಿತಂ ಶುಭಂ |
ಸೀತಯಾ ಕೌಸಲೇಂದ್ರಸ್ಯ ಶ್ರವಣಾನ್ಮಂಗಳಪ್ರದಂ || ೫ ||

ಕಃ ಕೃತ್ಸ್ನಂ ಚರಿತಂ ವಕ್ತುಂ ತಯೋಃ ಕ್ರೀಡಾನ್ವಿತಂ ಕ್ಷಮಃ |
ಅತಸ್ಸಂಕ್ಷೇಪತಃ ಕಿಂಚಿದ್ವಕ್ಷ್ಯಾಮಿ ತವ ಸನ್ನಿಧೌ || ೬ ||

---

೩. ರಾಮದಾಸನು ಹೇಳಿದನು–ಎಲೈ ವತ್ಸನೇ! ನೀನು ಕೇಳಿದುದು ಚೆನ್ನಾಗಿದೆ. ಏಕಾಗ್ರತೆಯಿಂದ ಕೇಳು. ಹೇಳುತ್ತೇನೆ. ರಘುರಾಮನು ರಣದೀಕ್ಷೆಯನ್ನೂ ಅಶ್ವಮೇಧದ ದೀಕ್ಷೆಯನ್ನೂ ಕೊನೆಗಾಣಿಸಿದನು.

೪. ಅನಂತರ ಬಂಧುಗಳೊಡನೆಯೂ ತಮ್ಮಂದಿರೊಡನೆಯೂ, ಅಯೋಧ್ಯೆಯಲ್ಲಿ ಸುಖಿಸುತ್ತಿದ್ದನು. ಆಗ ಜಾನಕಿಯೊಡನೆ ಅನೇಕ ವಿಧವಾದ ಭೋಗಗಳನ್ನು ಅನುಭವಿಸುತ್ತಾ ಆ ಜಾನಕಿಯನ್ನು ಸಂತೋಷಪಡಿಸುತ್ತಿದ್ದನು.

೫. ಈ ಸೀತಾರಾಮರ ಚರಿತ್ರೆಯ ವಿಲಾಸವನ್ನು ಕೇಳು. ಇದನ್ನು ಕೇಳುವುದರಿಂದಲೇ ಮಂಗಳವುಂಟಾಗುವುದು. ಶುಭವನ್ನು ಕೊಡುವುದು. ಇಂತಹ ಚರಿತ್ರೆಯನ್ನು ಸ್ವಲ್ಪ ಹೇಳುತ್ತೇನೆ.

೬. ಅವರ ಆ ವಿಲಾಸದ ಚರಿತ್ರೆಯನ್ನು ಸಂಪೂರ್ಣವಾಗಿ ಹೇಳಲು ಯಾರಿಂದ ತಾನೇ ಸಾಧ್ಯವಾದೀತು? ಆದ್ದರಿಂದ ಸಂಕ್ಷೇಪವಾಗಿ ಸ್ವಲ್ಪವನ್ನು ನಿನ್ನ ಬಳಿಯಲ್ಲಿ ಹೇಳುತ್ತೇನೆ.

ಅಥ ಸೀತಾಯುತೋ ರಾಮಃ ಪಾರ್ವತ್ಯಾ ಶಂಕರೋ ಯಥಾ |
ಕ್ರೀಡಾಂ ಚಕಾರ ಕೈಲಾಸೇಽಯೋಧ್ಯಾಯಾಂ ಸ ತಥಾಕರೋತ್ || ೭ ||

ಹೈಮರತ್ನಮಯೇ ದಿವ್ಯಗೇಹೇ ವೈಕುಂಠಸನ್ನಿಭೇ ।
ನಿದ್ರಾಸ್ಥಾನಂ ರಾಘವಸ್ಯ ಮನೋಜ್ಞಂ ಶಶಿಸನ್ನಿಭಂ || ೮ ||

ಭಿತ್ತೌ ರತ್ನೋಪಲಾ ಯತ್ರ ಹೇಮ್ನಃ ಪಂಕೋಽಸ್ತಿ ಯತ್ರ ಹಿ |
ಯತ್ರ ಸ್ತಂಭಾಸ್ಸ್ಫಾಟಿಕಾಶ್ಚ ಯತ್ರ ಮಾರಕತೋದ್ಭವಾಃ || ೯ ||

ಪ್ರತೋಳ್ಯಶ್ಯತಶೋ ರಮ್ಯಾಶ್ಚೇಂದ್ರನೀಲಾದಿಭಿಃ ಶ್ರಿತಾಃ ।
ಮುಕುರೈರುಜ್ಜ್ವಲಾ ಯತ್ರ ಭಿತ್ತಯಶ್ಚಿತ್ರಚಿತ್ರಿತಾಃ || ೧೦ ||

---

೭. ಶಂಕರನು ಪಾರ್ವತಿಯೊಡನೆ ಕೈಲಾಸದಲ್ಲಿ ಹೇಗೆ ಭೋಗಗಳನ್ನು ಅನುಭವಿಸುವನೋ ಹಾಗೆ ಶ್ರೀರಾಮನು ಸೀತೆಯೊಡನೆ ಅಯೋಧ್ಯೆಯಲ್ಲಿ ಭೋಗಗಳನ್ನು ಅನುಭವಿಸುತ್ತಾ ರಮಿಸಿದನು.

೮. ಅಯೋಧ್ಯೆಯಲ್ಲಿ ಆ ಸೀತಾರಾಮರು ಸುವರ್ಣದಿಂದಲೂ, ರತ್ನಗಳಿಂದಲೂ, ನಿರ್ಮಿತವಾದ ವೈಕುಂಠದಂತಿರುವ ಒಂದು ರಮ್ಯವಾದ ಮನೆಯಲ್ಲಿರುತ್ತಿದ್ದರು. ಅದರೊಳಗೆ ಆ ರಾಮನ ಮಲಗುವ ಮನೆಯು ಚಂದ್ರನಂತಿದ್ದು ಮನೋಹರವಾಗಿದ್ದಿತು.

೯. ಅವನು ಮಲಗುವ ಮನೆಯ ಗೋಡೆಯನ್ನು ರತ್ನದ ಕಲ್ಲುಗಳಿಗೆ ಚಿನ್ನದ ರಸವನ್ನು ಸೇರಿಸಿ ಇಟ್ಟಿಗೆಯ ಸ್ಥಾನದಲ್ಲಿ ಆ ರತ್ನದ ಕಲ್ಲುಗಳನ್ನು ಹಾಕಿ ಕಟ್ಟಿದ್ದರು. ಅಲ್ಲಿದ್ದ ಕಂಬಗಳನ್ನು ಸ್ಫಟಿಕಶಿಲೆಯಿಂದಲೇ ಮಾಡಿ ನಿಲ್ಲಿಸಿದ್ದರು. ಆ ಕಂಬಗಳಿಗೆ ಮರಕತದ ಮಣಿಯ ಸುಣ್ಣಪಾದದ ಕಲ್ಲುಗಳನ್ನು ಹಾಕಿದ್ದರು.

೧೦. ಬೋದಿಗೆಗಳನ್ನು ಇಂದ್ರನೀಲ ಮಣಿಗಳಿಂದ ಸೇರಿಸಿ ಮಾಡಿದ್ದರು. ಗೋಡೆಗಳಿಗೆಲ್ಲಾ ಕನ್ನಡಿಯನ್ನು ಸೇರಿಸಿ ಅನೇಕ ರೀತಿಯಲ್ಲಿ ಚಿತ್ರವಾಗಿರುವಂತೆ ಮಾಡಿದ್ದರು.

ಯತ್ರ ಹೇಮಮಯೀ ಭೂಮಿರ್ಯತ್ರ ಮುಕ್ತಾಮಯೀ ಶುಭಾ ।
ವಿತಾನಂ ಪುಷ್ಪಹಾರೈಶ್ಚ ಮುಕ್ತಾಗುಚ್ಛೈರ್ವಿರಾಜಿತಂ ॥ ೧೧ ॥

ಹೇಮತಂತುಮಯಾನ್ಯತ್ರ ಭಿತ್ತಿವಸ್ತ್ರಾಣ್ಯನೇಕಶಃ ।
ಯತ್ರಾಯುತಮನುಷ್ಯೈಶ್ಚ ಸಂಮರ್ದೋ ನೈವ ಜಾಯತೇ ॥ ೧೨ ॥

ಏವಂ ತದ್ವಿಸ್ತೃತಂ ರಮ್ಯಂ ರತ್ನದೀಪೈರ್ವಿರಾಜಿತಂ ।
ಹೇಮಕುಂಭಾ ವಿರಾಜಂತೇ ಪ್ರಾಸಾದಾಗ್ರೇಷು ಚಿತ್ರಿತಾಃ ॥ ೧೩ ॥

ಯತ್ರ ಚಿತ್ರಾಣ್ಯನೇಕಾನಿ ಮೋಹಯಂತಿ ಮೃಗೀದೃಶಾಂ ।
ಯತ್ರ ಹೇಮಮಯಾ ರಮ್ಯಾಃ ಪರ್ಯಂಕಾಶ್ಚಿತ್ರಚಿತ್ರಿತಾಃ ॥ ೧೪ ॥

---

೧೧. ಅಲ್ಲಿನ ನೆಲ್ಲವನ್ನು ಚಿನ್ನದ ನೀರಿನ ಕೆಸರಿನಿಂದಲೇ ಮಾಡಿದ್ದಿತು. ಮೇಲು ಪ್ರದೇಶವನ್ನು ಮುತ್ತಿನಿಂದಲೇ ಮಾಡಿದ್ದರು. ಹೂವಿನ ಹಾರಗಳನ್ನೂ ಹೂವಿನ ಗೊಂಚಲುಗಳನ್ನೂ ಇಳಿಯಬಿಟ್ಟು ಪ್ರಕಾಶಿಸುವಂತೆ ಮಾಡಿದ್ದರು.

೧೨. ಚಿನ್ನದ ಸರಿಗೆಯಿಂದ ಮಾಡಿದ ಬಟ್ಟೆಗಳನ್ನು ತೆರೆಯ ಬಟ್ಟೆಯನ್ನಾಗಿ ಹಾಕಿದ್ದರು. ಇವು ನೂರಾರು ಬಟ್ಟೆಗಳಿದ್ದುವು. ಅಲ್ಲಿ ಹತ್ತುಸಾವಿರ ಮಂದಿಯು ಸೇರಿಕೊಂಡರೂ ಇಕ್ಕಟ್ಟಾಗಿ ಗಲಭೆಯಾಗುತ್ತಿರಲಿಲ್ಲ.

೧೩. ಈ ರೀತಿಯಾಗಿ ಆ ಮನೆಯು ವಿಶಾಲವಾಗಿದ್ದಿತು. ರತ್ನದ ದೀಪಗಳಿರುವಂತೆ ಅಲ್ಲೆಲ್ಲವೂ ಮಾಡಿದ್ದರು. ಅಲ್ಲಿನ ಮಹಡಿಯಮೇಲೆ ಚಿನ್ನದ ಕಲಶಗಳನ್ನು ಚಿತ್ರವಿಚಿತ್ರವಾಗಿ ಇಟ್ಟಿದ್ದರು.

೧೪. ಅಲ್ಲಿರುವ ಅನೇಕ ಚಿತ್ರಗಳು ಹೆಂಗಸರು ಆಶ್ಚರ್ಯಪಡುವಂತಿದ್ದುವು. ಅಲ್ಲಿದ್ದ ಮಂಚಗಳು ಚಿನ್ನದಿಂದ ಮಾಡಲ್ಪಟ್ಟು ಮಣಿಗಳಿಂದ ಚಿತ್ರಿತವಾಗಿದ್ದುವು.

ಹೇಮಕೌಶೇಯಸಂಭೂತತಂತುಪಟ್ಟ್ರೈರ್ವಿಗುಂಫಿತಾಃ ।
ಮಹಾರ್ಹವಸನೈಃ ಪುಷ್ಪಜಾಲೈರಾಚ್ಛಾದಿತಾಶ್ಶುಭಾಃ ॥ ೧೫ ॥

ಚತುಷ್ಕೋಣೇ ಲಂಬಮಾನಮುಕ್ತಾಘೋಷೈರ್ವಿರಾಜಿತಾಂ ।
ಯೇಷು ದಿವ್ಯಾ ಕಶಿಪವಸ್ತಥೋಪಬರ್ಹಣಾನಿ ಚ ॥ ೧೬ ॥

ಕೇಕಿಪಕ್ಷಮಯಾನ್ಯೇಷು ಚಾಮರಾಣಿ ಮಹಾಂತಿ ಚ ।
ಗೋಪುಚ್ಛತಾಲಖರ್ಜೂರೀಸಂಭವಾದೀನಿ ಸಂತಿ ಹಿ ॥ ೧೭ ॥

ಚತುಷ್ಕೋಣೇಷು ಸರ್ವೇಷಾಂ ಮಂಚಕಾನಾಂ ಮಹೋಜ್ಜ್ವಲಾಃ ।
ರತ್ನದೀಪಾಃ ಪ್ರಕಾಶಂತೇ ಸದ್ಯೈವಾಗ್ನಿಶಿಖೋಪಮಾಃ ॥ ೧೮ ॥

---

೧೫. ಆ ಮಂಚಕ್ಕೆ ಚಿನ್ನದ ಸರಿಗೆಯನ್ನು ಹಾಕಿದ ರೇಷ್ಮೆಯ ಬಟ್ಟೆಗಳನ್ನು ಕಟ್ಟಿದ್ದರು. ಅದರಮೇಲೆ ಉತ್ತಮವಾದ ಬಟ್ಟೆಯನ್ನು ಹಾಸಿ ಹಾಸಿಗೆಯನ್ನು ಮಾಡಿದ್ದರು. ಅದರಮೇಲೆ ಹೂವನ್ನು ಹಾಕಿ ಮೆತ್ತಗೆ ಮಾಡಿದ್ದರು. ಸುವಾಸನೆಯಾಗಿಯೂ ಇದ್ದಿತು. ಬಹು ರಮ್ಯವಾಗಿಯೂ ಇದ್ದಿತು.

೧೬. ಆ ಮಂಚದ ನಾಲ್ಕು ಮೂಲೆಗಳಲ್ಲಿಯೂ ಮುತ್ತಿನ ಕುಚ್ಚುಗಳನ್ನು ಕಟ್ಟಿದ್ದಿತು. ಆ ಹಾಸಿಗೆಯಮೇಲೆ ದಿವ್ಯವಾದ ದಿಂಬುಗಳನ್ನು ಹಾಕಿದ್ದರು. ಅಲ್ಲದೆ ಆ ಹಾಸಿಗೆಯಮೇಲೆ ಉತ್ತಮವಾದ ಮಗ್ಗುಲುಹಾಸಿಗೆಯನ್ನು ಹಾಸಿದ್ದರು.

೧೭. ನವಿಲುಗರಿಯ ಚಾಮರಗಳನ್ನು ಅಲ್ಲಿಟ್ಟಿದ್ದರು. ಇವುಗಳಲ್ಲದೆ ಚಮರೀಮೃಗದ ಚಾಮರವೂ ಇದ್ದಿತು. ತಾಳೆಯ, ಖರ್ಜೂರದ ಬೀಸಣಿಗೆಗಳೂ ಅಲ್ಲಿದ್ದುವು.

೧೮. ಆ ಮಂಚದ ನಾಲ್ಕು ಕಡೆಯಲ್ಲಿಯೂ ಬಹು ಪ್ರಕಾಶಮಾನವಾದ ರತ್ನದೀಪಗಳು ಬೆಂಕಿಯ ಶಿಖೆಗಳಂತೆ ಪ್ರಕಾಶಮಾನವಾಗಿ ಬೆಳಕನ್ನು ಕೊಡುತ್ತಿರುವುವು.

ಉಶೀರವ್ಯಜನಾದೀನಿ ಚಾಮರಾದೀನಿ ಸಂತಿ ಹಿ ।
ಯತ್ರ ತಾಂಬೂಲಪಾತ್ರಾಣಿ ಹೇಮರತ್ನೋದ್ಭವಾನಿ ಚ ॥ ೧೯ ॥

ತಥಾ ನಿಷ್ಠೀವನಾರ್ಥಂ ಹಿ ಪಾತ್ರಾಣಿ ರಾಜತಾನಿ ಚ ।
ಯತ್ರ ರಂಭೋಪಮಾ ದಾಸ್ಯಶ್ಶತಶೋ ರತ್ನಭೂಷಿತಾಃ ॥ ೨೦ ॥

ಚಾಮರೈರ್ವೀಜಯಂತ್ಯಶ್ಚ ಸೀತಾರಾಮಾವಹರ್ನಿಶಂ ।
ಯತ್ರ ಹೇಮಮಯಾಶ್ಚಿತ್ರಾ ಬದ್ಧಾಸ್ತೇ ಪಂಜರಾಶ್ಶುಭಾಃ ॥ ೨೧ ॥

ಯೇ ಯಾಗೇ ನೃಪಪತ್ನೀಭಿಃ ಶ್ರೀಸೀತಾಯಾಸ್ಸಮರ್ಪಿತಾಃ ।
ಯೇಷು ವೈ ಕೇಕಿನೋ ಹಂಸಾಸ್ಸಾರಸಾಸ್ಸಾರಿಕಾಶ್ಶುಕಾಃ ॥ ೨೨ ॥

ಲಾವಕಾಃ ಕೋಕಿಲಾದ್ಯಾಶ್ಚ ನಾನಾ ಯೇನ್ಯೇ ಪತತ್ರಿಣಃ ।
ನಾನಾಶಬ್ದಾನ್ಪ್ರಕುರ್ವಂತಶ್ಶತಶಸ್ತೇಷು ಸಂಸ್ಥಿತಾಃ ॥ ೨೩ ॥

---

೧೯. ಲಾಮಂಚದ ಬೀಸಣಿಗೆಗಳೂ, ಚಾಮರವೇ ಮುಂತಾದುವುಗಳೂ, ಅಲ್ಲಿವೆ ಚಿನ್ನದಿಂದಲೂ, ರತ್ನಗಳಿಂದಲೂ, ಕೂಡಿರುವ ತಾಂಬೂಲದ ಪಾತ್ರೆಗಳನ್ನು ಅಲ್ಲಿಟ್ಟಿದ್ದರು.

೨೦. ಅಡಕೆಲೆಯನ್ನು ಅಗಿದ ತಂಬುಲವನ್ನು ಉಗಿಯಲು ಅಲ್ಲಿ ಬೆಳ್ಳಿಯ ಪಾತ್ರೆಗಳನ್ನು ಇಟ್ಟಿದ್ದರು. ಅಲ್ಲಿ ರಂಭೆಯಂತಿರುವ ನೂರಾರುಜನ ದಾಸಿಯರು ರತ್ನ ಭೂಷಿತರಾಗಿ ಆ ಸೀತಾರಾಮರ ಅಪ್ಪಣೆಯನ್ನು ಕಾದಿರುವರು.

೨೧. ಅವರೆಲ್ಲರೂ ಸರದಿಯಮೇರೆಗೆ ಆ ಸೀತಾರಾಮರನ್ನು ಯಾವಾಗಲೂ ಬೀಸತ್ತಿರುವರು. ಅಲ್ಲಿ ಚಿನ್ನದ ಪಂಜರಗಳನ್ನು ಅನೇಕವಾಗಿ ನೇತುಹಾಕಿರುವರು.

೨೨. ಆ ಪಂಜರಗಳನ್ನು ಯಾಗಮಾಡುತ್ತಿದ್ದಕಾಲದಲ್ಲಿ ರಾಜ ಪತ್ನಿಯರು ಈ ಸೀತೆಗೆ ಕಾಣಿಕೆಯಾಗಿ ಕೊಟ್ಟಿದ್ದರು. ಅವುಗಳಲ್ಲಿ ನವಿಲುಗಳೂ, ಹಂಸಗಳೂ, ಸಾರಿಕೆಗಳೂ, ಸಾರಸಗಳೂ, ಗಿಳಿಗಳೂ, ವಾವಕೆಗಳೂ, ಕೋಕಿಲೆಯೇ ಮುಂತಾದ ಪಕ್ಷಿಗಳೂ ಸೇರಿಸಲ್ಪಟ್ಟಿದ್ದುವು.

೨೩. ಆ ಪಂಜರಗಳಲ್ಲಿ ಈ ರೀತಿಯಾಗಿಟ್ಟಿರುವ ಪಕ್ಷಿಗಳು ಬಗೆ ಬಗೆಯಾಗಿ ಕೂಗುತ್ತ ಅಲ್ಲಿರುವುವು. ಇದು ಬಹು ರಮ್ಯವಾಗಿರುವುದು.

ತೇಷಾಂ ಶಬ್ದಸ್ಯ ಶಿಷ್ಯ ತ್ವಾಂ ಕಿಂ ಪ್ರಾಕಟ್ಯಂ ವದಾಮ್ಯಹಂ ।
ಯೇ ರಾಮಸ್ಮರಣೇನೈವ ಜೀವನ್ಮುಕ್ತಾ ನ ಸಂಶಯಃ ॥ ೨೪ ॥

॥ ಪಕ್ಷಿಣ ಊಚುಃ ॥

ಜಯತು ರಾಘವೋ ಜಾನಕೀಯುತೋ
ಜಯತ್ವಖಿಲರಾಜರಾಜೇಶ್ವರಃ ।
ದಶರಥಾತ್ಮಜೋ ಲಕ್ಷ್ಮಣಾಗ್ರಜೋ
ಜಯತು ಮಾಪತಿಸ್ತಾಟಿಕಾಂತಕಃ ॥ ೨೫ ॥

ಜಯತು ಕೌಶಿಕಸ್ಯಾಧ್ವರಂ ಗತೋ
ಜಯತು ರಕ್ಷಸಾಂ ಮಾರಕೋ ಮಹಾನ್ ।
ಜಯತು ಗೌತಮಾಹಲ್ಯಯಾ ಸ್ತುತೋ
ಜಯತು ಜಾನಕೀತಾತಮಾನಿತಃ ॥ ೨೬ ॥

---

೨೪. ಎಲೈ ಶಿಷ್ಯನೆ! ಆ ಪಕ್ಷಿಗಳ ಗಲಭೆಯನ್ನು ನಾನು ಅದೆಂತು ವರ್ಣಿಸಲಿ! ಅವೆಲ್ಲವೂ ಕೂಡ ರಾಮನನ್ನು ಸ್ಮರಿಸುತ್ತಿರುವುದರಿಂದಲೇ ಜೀವನ್ಮುಕ್ತಗಳೆಂದು ತಿಳಿ. ಇದರಲ್ಲಿ ಸಂಶಯವಿಲ್ಲ.

೨೫. ಪಕ್ಷಿಗಳು ಹೇಳುತ್ತಿದ್ದುವು– ಜಾನಕಿಯೊಡನಿರುವ ರಾಘವನಿಗೆ ಜಯವಾಗಲಿ. ರಾಜರಿಗೆಲ್ಲಾ ಚಕ್ರವರ್ತಿಯಾದ ರಾಘವನಿಗೆ ಜಯವಾಗಲಿ. ದಶರಥನಿಗೆ ಮಗನಾದ, ಲಕ್ಷ್ಮಣನಿಗೆ ಅಣ್ಣನಾದ, ತಾಟಕೆಯನ್ನು ಸಂಹರಿಸಿದ ಲಕ್ಷ್ಮೀಪತಿಯಾದ ರಾಮನಿಗೆ ಜಯವಾಗಲಿ.

೨೬. ಕೌಶಿಕನ ಯಾಗಕ್ಕೆ ಹೋದ ರಾಮನಿಗೆ ಜಯವಾಗಲಿ. ರಾಕ್ಷಸರಿಗೆಲ್ಲಾ ಸಂಹಾರಕನಾದ ರಾಮನಿಗೆ ಜಯವಾಗಲಿ. ಗೌತಮ ಅಹಲ್ಯೆಯರಿಂದ ಸ್ತುತಿಸಲ್ಪಟ್ಟ ರಾಮನಿಗೆ ಜಯವಾಗಲಿ. ಜಾನಕಿಯ ತಾತನಾದ ಜನಕಮಹಾರಾಜನಿಂದ ಗೌರವಿತನಾದ ಶ್ರೀರಾಮನಿಗೆ ಜಯವಾಗಲಿ.

ಜಯತು ನಃ ಪತಿಶ್ಚಾಪಖಂಡನೋ
ಜನಕಜಾಕರಾನ್ಮುಕ್ತಮಾಲಯಾ ।
ನೃಪಸಭಾಂಗಣೇ ಕೌಶಿಕಾನುಗಃ
ಪರಮಶೋಭಿತಶ್ಚಾತಿಹರ್ಷಿತಃ ॥ ೨೭ ॥

ಜಯತು ಭೂಮಿಜಾಂಘ್ರ್ಯೋಸ್ತದಾ ಮುದಾ
ನಿಜಕರೋತ್ಪಲೇ ಸ್ಥಾಪ್ಯ ರಾಘವಃ ।
ಕಮಲಮಸ್ತಕೇನಾಕರೋನ್ನತಿಂ
ಸ ರಘುನಂದನಃ ಪಾತು ನಸ್ಸುಖಂ ॥ ೨೮ ॥

ಜಯತು ಭೂಮಿಜಾಲಿಂಗಿತೋ ಮಹಾ
ಜನಮನೋಹರಶ್ಚಾತಿ ಶೋಭನಃ ।
ಭೃಗುಭವಾರ್ಪಿತಂ ಧೃತ್ಯ ವೈ ಧನುಃ
ನಿಜಪಿತುಸ್ತದಾ ದರ್ಶಯನ್ ಬಲಂ ॥ ೨೯ ॥

---

೨೭. ಶಿವಧನುಸ್ಸನ್ನು ಮುರಿದ ರಾಮನಿಗೆ ಜಯವಾಗಲಿ. ಜನಕಜೆಯಾದ ಸೀತೆಯಿಂದ ಮಾಲೆಯನ್ನು ಹಾಕಿಸಿಕೊಂಡ ರಾಮನಿಗೆ ಜಯವಾಗಲಿ. ಕೌಶಿಕನನ್ನು ಅನುಸರಿಸಿಕೊಂಡಿದ್ದ ರಾಮನಿಗೆ ಜಯವಾಗಲಿ. ಬಹುವಾಗಿ ಅಲಂಕೃತನಾಗಿ ಸಂತೋಷದಿಂದ ಇರುವ ಶ್ರೀರಾಮನಿಗೆ ಜಯವಾಗಲಿ.

೨೮. ಸೀತೆಯ ಪಾದಪದ್ಮಗಳನ್ನು ತನ್ನ ಕರಕಮಲದಿಂದ ಹಿಡಿದುಕೊಂಡು ತನ್ನ ತಲೆಯಿಂದ ನಮಸ್ಕರಿಸಿದ ರಘುನಂದನನು ನಮ್ಮನ್ನು ಸುಖವಾಗಿ ಕಾಪಾಡಲಿ.

೨೯. ಜಾನಕಿಯಿಂದ ಆಲಂಗಿತನಾದ ಜನಮನೋಹರವಾಗಿರುವಂತೆ ರಮ್ಯನಾದ, ಪರುಶುರಾಮನು ಕೊಟ್ಟ ಬಿಲ್ಲನ್ನು ಹಿಡಿದುಕೊಂಡು ತನ್ನ ತಂದೆಗೆ ತನ್ನ ಬಲವನ್ನು ತೋರಿಸುತ್ತಿರುವ ರಾಮನಿಗೆ ಜಯವಾಗಲಿ.

ಜಯತು ಸೀತಯಾ ಭೋಗಕೃಚ್ಚಿರಂ
ಜಯತು ಕೈಕಯಾ ಪ್ರೇರಿತೋ ವನಂ ।
ಜಯತು ಪರ್ವತೇ ವಾಸಕೃಚ್ಚಿರಂ
ಜಯತು ಯೋಽತ್ರಿಣಾ ಪೂಜಿತೋ ವನೇ ॥ ೩೦ ॥

ಜಯತು ಯೋ ವಿರಾಧಸ್ಯ ಘಾತಕೃತ್
ಜಯತು ದೂಷಣಾದಿಪ್ರಮರ್ದನಃ ।
ಜಯತು ಯೋ ಮೃಗಂ ಮೋಚಯದ್ಭವಾತ್
ಜಯತು ಯಃ ಕಬಂಧಂ ಕ್ಷಣಾಜ್ಜಹೌ ॥ ೩೧ ॥

ಜಯತು ವಾಲಿಹಾ ಸೇತುಕಾರಕೋ
ಜಯತು ರಾವಣಾದಿಪ್ರಮರ್ದಕಃ ।
ಜಯತು ಸ್ವಂಪದಂ ಪ್ರಾಪ ಸೀತಯಾ
ಜಯತು ಮಂಗಳಸ್ನಾನಕೃನ್ಮುದಾ ॥ ೩೨ ॥

---

೩೦. ಸೀತೆಯೊಡನೆ ಅನೇಕಕಾಲ ಭೋಗವನ್ನು ಅನುಭವಿಸುತ್ತಿರುವ ರಾಮನಿಗೆ ಜಯವಾಗಲಿ. ಕೈಕೇಯಿಯಿಂದ ಪ್ರೇರಿತನಾಗಿ ವನಕ್ಕೆ ಹೋದ ರಾಮನಿಗೆ ಜಯವಾಗಲಿ. ಪರ್ವತಪ್ರದೇಶದಲ್ಲಿ ಬಹುಕಾಲ ವಾಸಿಸಿದ ಶ್ರೀರಾಮನಿಗೆ ಜಯವಾಗಲಿ. ವನದಲ್ಲಿ ಅತ್ರಿಋಷಿಯಿಂದ ಪೂಜಿತನಾದ ರಾಮನಿಗೆ ಜಯವಾಗಲಿ.

೩೧. ವಿರಾಧನನ್ನು ಕೊಂದ ರಾಮನಿಗೆ ಜಯವಾಗಲಿ. ದೂಷಣಾದಿ ರಾಕ್ಷಸರನ್ನು ಕೊಂದ ರಾಮನಿಗೆ ಜಯವಾಗಲಿ. ಮಾರೀಚನನ್ನು ಮೃಗದ ನೆವದಿಂದ ಕೊಂದು ಮೋಕ್ಷವನ್ನು ಕೊಟ್ಟ ರಾಮನಿಗೆ ಜಯವಾಗಲಿ. ಕಬಂಧನನ್ನು ಸಂಹರಿಸಿದ ರಾಮನಿಗೆ ಜಯವಾಗಲಿ.

೩೨. ವಾಲಿಯನ್ನು ಕೊಂದ ರಾಮನಿಗೆ ಜಯವಾಗಲಿ. ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದ ರಾಮನಿಗೆ ಜಯವಾಗಲಿ. ರಾವಣಾದಿಗಳನ್ನು ಕೊಂದ ರಾಮನಿಗೆ ಜಯವಾಗಲಿ. ಸೀತೆಯೊಡನೆ ತನ್ನ ಜಾಗಕ್ಕೆ ಬಂದ ರಾಮನಿಗೆ ಜಯವಾಗಲಿ. ಮಂಗಳಸ್ನಾನವನ್ನಾಚರಿಸಿದ ರಾಮನಿಗೆ ಜಯವಾಗಲಿ.

ಜಯತು ವಾಕ್ಯತೋ ಭೂಸುರಸ್ಯ ಯಃ
ಸಕಲಭೂತಲಂ ಪರ್ಯಟಚ್ಚಿರಂ ।
ಜಯತು ಯಾಗಕೃಲ್ಲೋಕಶಿಕ್ಷಯಾ
ಜಯತು ಜಾನಕೀಂ ರಂಜಯರ್ನ್ ಸ್ಥಿತಃ ॥ ೩೩ ॥

॥ ಶ್ರೀರಾಮದಾಸ ಉವಾಚ ॥

ರಘುವರಸ್ಯ ಯತ್ಪಕ್ಷಿಭಿಃ ಕೃತಂ
ನವಕಮುತ್ತಮಂ ಯಃ ಪಠಿಷ್ಯತಿ ।
ತಪನನಿರ್ಗಮೇ ಭಕ್ತಿತತ್ಪರೋ
ನಿಜಮನೋರ್ಥಿತಂ ಸಂಗಮಿಷ್ಯತಿ ॥ ೩೪ ॥

ಏತಾದೃಶೇ ರಮ್ಯಗೇಹೇ ಮಯಾ ಶಿಷ್ಯ ಪ್ರವರ್ಣಿತೇ ।
ಸೀತಯಾ ಸ ಸುಖಂ ರೇಮೇ ಚೈಕಪತ್ನೀವ್ರತಸ್ಥಿತಃ ॥ ೩೫ ॥

---

೩೩. ಕಶ್ಯಪನ ಮಾತಿನಂತೆ ಯಾತ್ರೆಯ ನೆವದಿಂದ ಭೂಮಿಯನ್ನು ಸುತ್ತಿದ ರಾಮನಿಗೆ ಜಯವಾಗಲಿ. ಲೋಕದ ಜನರಿಗೆ ಮೇಲುಪಂಕ್ತಿಯನ್ನು ಹಾಕಲು ಯಾಗವನ್ನು ಮಾಡಿದ ಶ್ರೀರಾಮನಿಗೆ ಜಯವಾಗಲಿ. ಜಾನಕಿಯನ್ನು ಸಂತೋಷಪಡಿಸುತ್ತಿರುವ ರಾಮನಿಗೆ ಜಯವಾಗಲಿ.

೩೪. ಶ್ರೀರಾಮದಾಸನು ಹೇಳಿದನು—ಪಕ್ಷಿಗಳಿಂದ ಸ್ತುತಿಸಲ್ಪಟ್ಟ ಶ್ರೀರಾಮನ ಉತ್ತಮವಾದ ಈ ನವಕವನ್ನು ಯಾವನು ಸಂಧ್ಯಾಕಾಲಗಳಲ್ಲಿ ಓದುತ್ತಾನೆಯೋ ಅವನು ತನ್ನ ಇಷ್ಟಾರ್ಥವನ್ನು ಹೊಂದುತ್ತಾನೆ.

೩೫. ಎಲೈ ಶಿಷ್ಯನೆ! ನಾನು ಹೇಳಿದ ಈ ರೀತಿಯಾದ ರತ್ನದ ಮನೆಯಲ್ಲಿ ಆ ರಾಮನು ಏಕಪತ್ನೀವ್ರತಸ್ಥನಾಗಿ ಸೀತೆಯೊಡನೆ ಸುಖವಾಗಿ ರಮಿಸಿದನು

ಅಥ ಸಾ ಜಾನಕೀ ದೇವೀ ರಂಜಯಾಮಾಸ ರಾಘವಂ ।
ಸ್ಥಿತಂ ಮಂಚಕವರ್ಯೇ ತಂ ನಿಜಕ್ರೀಡಾದಿಕೌತುಕೈಃ ॥ ೩೬ ॥

ಮಂಚಕಸ್ಥಶ್ಚ ಶ್ರೀರಾಮಸ್ತ್ವೇಕದಾ ಸುಖನಿರ್ಭರಃ ।
ಸೀತಾಸೌಂದರ್ಯಮಾಲೋಕ್ಯ ವರ್ಣಯಾಮಾಸ ತಾಂ ಮುದಾ ॥ ೩೭ ॥

ಹೇ ಸಿತೇ ಕಂಜನಯನೇ ಬ್ರಹ್ಮಣಾ ತ್ವಂ ಕಥಂ ಕೃತಾ ।
ಜಾನಾಮ್ಯಹಂ ವಿತರ್ಕೇಣ ತೇನ ತ್ವಂ ನಿರ್ಮಿತಾಸಿ ನ ॥ ೩೮ ॥

ತ್ವದ್ರೂಪಸದೃಶೀಂ ನಾನ್ಯಾಂ ಪಶ್ಯಾಮಿ ಜಗತೀತಲೇ ।
ಪ್ರತಿಪಚ್ಚಂದ್ರಕಲಯಾ ಸ್ಪರ್ಧಯಂತಿ ನಖಾನಿ ತೇ ॥ ೩೯ ॥

ನಖಮಧ್ಯಾ ರಕ್ತವರ್ಣಾಶ್ಶುಭಾ ದಾಡಿಮಬೀಜವತ್ ।
ಅಂಗುಷ್ಠೌ ವರ್ತುಲೌ ರಮ್ಯೌ ಶಿಶ್ವಂಗುಷ್ಠೋಪಮೌ ತವ ॥ ೪೦ ॥

---

೩೬. ಜಾನಕೀದೇವಿಯೂ ಕೂಡ ರಾಮನನ್ನು ಆ ಮಂಚದಮೇಲಿದ್ದುಕೊಂಡು ತನ್ನ ಕ್ರೀಡಾಕೌತುಕಗಳಿಂದ ಸಂತೋಷಪಡಿಸಿದಳು.

೩೭. ಶ್ರೀರಾಮನು ಒಂದುಸಾರಿ ಮಂಚದಮೇಲೆ ಸುಖವಾಗಿದ್ದುಕೊಂಡು ಸೀತೆಯ ಸೌಂದರ್ಯವನ್ನು ನೋಡಿ ಅವಳನ್ನು ಸಂತೋಷದಿಂದ ಇಂತೆಂದು ವರ್ಣಿಸಿದನು.

೩೮. ಎಲೈ ಕಮಲಾಕ್ಷಿಯಾದ ಸೀತೆಯೇ ! ಬ್ರಹ್ಮನು ನಿನ್ನನ್ನು ಹೇಗೆ ಸೃಷ್ಟಿಮಾಡಿದನು ? ಆದರೆ ನನ್ನ ಊಹೆಯ ಪ್ರಕಾರ ಆ ಬ್ರಹ್ಮನು ನಿನ್ನನ್ನು ನಿರ್ಮಿಸಲಿಲ್ಲ.

೩೯. ಏತಕ್ಕೆಂದರೆ ಈ ಭೂಲೋಕದಲ್ಲಿ ನಿನ್ನಂತೆ ಸುಂದರಿಯಾದ ಮತ್ತೊಬ್ಬಳನ್ನು ನಾನು ಕಾಣೆನು. ನಿನ್ನ ಉಗುರುಗಳು ಪಾಡ್ಯದ ಚಂದ್ರನಂತಿದ್ದು ಅವನನ್ನು ಸ್ಪರ್ಧಿಸುತ್ತಿವೆ.

೪೦. ನಿನ್ನ ಉಗುರಿನ ಮಧ್ಯಭಾಗಗಳು ಕೆಂಪಗೆ ದಾಳಿಂಬೆಯ ಬೀಜದಂತಿವೆ. ಅಂಗುಷ್ಠಗಳು ದುಂಡಗೆ ಮನೋಹರವಾಗಿ ಮಕ್ಕಳ ಅಂಗುಷ್ಠದಂತೆ ಇವೆ.

ಮೃದುಲೇ ತೇ ಪಾದತಲೇ ಕಂಜಪತ್ರಾಂತರೋಪಮೇ ।
ಸಮೇ ರೇಖಾಧ್ವಜಯುತೇ ಸ್ವಸ್ತಿಕಾದಿಸುಚಿಹ್ನಿತೇ ॥ ೪೧ ॥

ಸೀತೇ ತೇಂಘ್ರ್ಯೋರ್ಧ್ವಭಾಗೌ ತೌ ನಿರ್ಲೋಮೌ ಮಾಂಸಲೌ ಶುಭೌ ।
ಅಶಿರೌ ಮೃದುಲೌ ಪೀತೌ ನೃಪಸ್ತ್ರೀವಂದನೋಚಿತೌ ॥ ೪೨ ॥

ಪಾದಮೂಲೇ ದಧಿಜೇನ ಸ್ಪರ್ಧೇತೇ ರಕ್ತವರ್ತುಲೇ ।
ಪಾದಪೃಷ್ಠೇ ಸಮೇ ಪೀತೇ ಕೋಮಲೇ ಲೋಮವರ್ಜಿತೇ ॥ ೪೩ ॥

ತವ ಗುಲ್ಫೌ ರಕ್ತವರ್ಣೌ ವರ್ತುಲೌ ಮಾಂಸಲೌ ಶುಭೌ ।
ಜಂಘೇ ಗೋಪುಚ್ಛಸದೃಶೇ ವರ್ತುಲೇ ಮಾಂಸಲೇ ಶುಭೇ ॥ ೪೪ ॥

---

೪೧ ನಿನ್ನ ಹೆಜ್ಜೆಯ ಕೆಳಭಾಗವು ಮೃದುವಾಗಿದೆ. ಮತ್ತು ಕಮಲ ಪತ್ರದಂತಿದೆ. ಸಮವಾಗಿದೆ. ರೇಖಾರೂಪವಾದ ಧ್ವಜಗಳಿವೆ. ಸ್ವಸ್ತಿಕಾದಿ ಚಿಹ್ನೆಗಳಿವೆ.

೪೨. ಎಲೈ ಸೀತೆಯೇ ! ನಿನ್ನ ಹೆಜ್ಜೆಯ ಮೇಲುಭಾಗವು ಕೂದಲು ಗಳಿಂದ ಕೂಡಿಲ್ಲದೆ ಮಾಂಸದಿಂದ ಕೂಡಿ ದಪ್ಪವಾಗಿವೆ. ಇಳಿಜಾರಾಗಿಯೂ ಮೃದುವಾಗಿಯೂ, ಹೊಂಬಣ್ಣವಾಗಿಯೂ, ಇದ್ದು ದೊರೆಗಳ ಹೆಂಡಿರು ನಮಸ್ಕರಿಸಲು ಯೋಗ್ಯವಾಗಿವೆ.

೪೩. ನಿನ್ನ ಪಾದಗಳ ಮೂಲವು ಎಂದರೆ ಹಿಮ್ಮಡಿಯ ಕೆಳಭಾಗವು ಬೆಣ್ಣೆಯಂತೆ ಮೃದುವಾಗಿದೆ. ಕೆಂಪಗಿದ್ದು ವರ್ತುಲವಾಗಿದೆ. ಪಾದದ ಕೆಳಭಾಗವು ಸಮವಾಗಿಯೂ, ದಪ್ಪವಾಗಿಯೂ, ಹೊಂಬಣ್ಣವುಳ್ಳದ್ದಾಗಿಯೂ, ಕೋಮಲವಾಗಿಯೂ, ರೋಮವಿಲ್ಲದೆಯೂ ಇದೆ.

೪೪. ನಿನ್ನ ಹೆಜ್ಜೆಯ ಹರಡುಗಳು ಕೆಂಪುಬಣ್ಣವಾಗಿಯೂ, ದುಂಡಗ್ಗೂ, ಮಾಂಸದಿಂದ ಕೂಡಿಕೊಂಡೂ ಇವೆ. ನಿನ್ನ ಕಣಕಾಲುಗಳು ಹಸುವಿನ ಬಾಲದಂತೆ ಇಳಿಜಾರಾಗಿರುವುದು. ಅಲ್ಲದೆ ದುಂಡಾಗಿರುವುದು. ಮಾಂಸ ದಿಂದಲೂ ಕೂಡಿರುವುದು.

ನಿರ್ಲೋಮೇ ಮೃದುಲೇ ಸೀತೇ ಹ್ಯಶಿರೇ ಸರಲೇ ವರೇ ।
ವರ್ತುಲೌ ತೇ ಮಹಾಜಾನೂ ಮಾಂಸಲೌ ಬೀಪೂರವತ್ ॥ ೪೫ ॥

ರಂಭಾಸ್ತಂಭೋಪಮೇ ಚೋರೂ ಮಾಂಸಲೌ ತ್ವತಿಕೋಮಲೌ ।
ಪೀತೌ ಘನೌ ವರ್ತುಲೌ ತೌ ವಿಲೋಮೌ ಮೇ ಸುಖೋಚಿತೌ ॥ ೪೬ ॥

ಜಘನೇ ಮಾಂಸಲೇ ರಮ್ಯೇ ವರ್ತುಲೇ ಗಜಕುಂಭವತ್ ।
ಪೀತೇ ವಿಲೋಮೇ ಸುಸ್ನಿಗ್ಧೇ ಮಮ ಚಿತ್ತೈಕಮೋಹನೇ ॥ ೪೭ ॥

ನಾಹಂ ತೇ ವರ್ಣನೇ ಶಕ್ತೋ ರತಿಸ್ಥಾನಸ್ಯ ಭಾಮಿನಿ ।
ಗಂಭೀರಾ ವರ್ತುಲಾ ನಾಭಿಸ್ತವರಮ್ಯಾ ಪ್ರದೃಶ್ಯತೇ ॥ ೪೮ ॥

---

೪೫. ನಿನ್ನ ಮೊಣಕಾಲುಗಳು ಕೂದಲಿಲ್ಲದೆ ಮೃದುವಾಗಿ ಹೊಂಬಣ್ಣಕ್ಕಿವೆ. ನರಗಳು ಎದ್ದುಕಾಣುತ್ತಿಲ್ಲ. ಸರಳವಾಗಿವೆ. ದುಂಡಗಿವೆ. ಸೀಬೆಯ ಹಣ್ಣಿನಂತೆ ಮಾಂಸದಿಂದ ತುಂಬಿವೆ.

೪೬. ನಿನ್ನ ತೊಡೆಗಳು ಬಾಳೆಯ ಕಂಬದಂತೆ ಇವೆ. ಮಾಂಸದಿಂದ ಕೂಡಿವೆ. ಬಹು ಕೋಮಲವಾಗಿವೆ. ಹೊಂಬಣ್ಣಕ್ಕಿವೆ. ಕೂದಲುಗಳಿಲ್ಲದೆ ನನಗೆ ಸುಖಕೊಡಲು ಅರ್ಹವಾಗಿವೆ.

೪೭. ನಿನ್ನ ಸೊಂಟದ ಮುಂಭಾಗವಾದ ಮಡಿಕಟ್ಟು ಮಾಂಸದಿಂದ ಕೂಡಿಕೊಂಡು ರಮ್ಯವಾಗಿ ಆನೆಯ ಕುಂಭಸ್ಥಳದಂತಿದೆ. ಬೆಳ್ಳಗಿದೆ. ರೋಮವಿಲ್ಲವು. ಮೆತ್ತಗಿದೆ. ನನ್ನ ಮನಸ್ಸನ್ನು ಅಪಹರಿಸುತ್ತದೆ.

೪೮. ಎಲೈ ಸೀತೆಯೇ! ನಿನ್ನ ರತಿಸ್ಥಾನವನ್ನು ವರ್ಣಿಸಲು ನನಗೆ ಶಕ್ತಿ ಸಾಲದು. ನಿನ್ನ ಹೊಕ್ಕಳು ಆಳವಾಗಿ ದುಂಡಗೆ ಕಾಣಿಸುತ್ತದೆ. ರಮ್ಯವಾಗಿರುವುದು.

ವಲಿತ್ರಯಂ ತು ಜಠರೇ ದೃಶ್ಯತೇ ತತ್ತ್ರಿವೇಣಿವತ್ ।
ಮೃಗರಾಜಸ್ಯ ಕಟಿನಾ ತುಲ್ಯಸ್ತೇ ಕಟಿರುತ್ತಮಃ ॥ ೪೯ ॥

ರಮ್ಯಂ ತವೋದರಂ ಸೂಕ್ಷ್ಮಂ ಮೃದುಲಂ ಮಾಂಸಲಂ ಶುಭಂ ।
ವಿಲೋಮಂ ಪೀತವರ್ಣಂ ಚ ಪುತ್ರೋತ್ಪತ್ತಿವಿಸೂಚಕಂ ॥ ೫೦ ॥

ವಂಶಸ್ಯ ಶಕಲೇನೈವ ಸ್ಪರ್ಧತೇ ತವ ಮಾಂಸಲಃ ।
ಪೃಷ್ಠಸ್ತಂಭಃ ಕೋಮಲಶ್ಚ ನಿಮ್ನೋ ಲೋಮವಿವರ್ಜಿತಃ ॥ ೫೧ ॥

ಪಾರ್ಶ್ವೇತಿ ಽಮೃದುಲೇ ಪೀತೇ ಮಾಂಸಲೇ ಲೋಮವರ್ಜಿತೇ ।
ಕುಕ್ಷೀ ಪೀತೇ ಲೋಮಹೀನೇ ಮಾಂಸಲೇ ಕಿಂಚಿದುನ್ನತೇ ॥ ೫೨ ॥

---

೪೯. ನಿನ್ನ ಕಿಬ್ಬೊಟ್ಟೆಯಲ್ಲಿ ಮೂರು ಮಡಿಕೆಗಳು ಮೆಟ್ಟಲುಗಳಂತೆ ಕಂಡುಬರುತ್ತವೆ. ಅವು ತ್ರಿವೇಣಿಗಳಂತಿವೆ. ನಿನ್ನ ಸೊಂಟವು ಸಿಂಹದ ಸೊಂಟದಂತಿದ್ದು ಬಹು ಉತ್ತಮವಾಗಿರುವುದು.

೫೦. ನಿನ್ನ ಹೊಟ್ಟೆ ಸೂಕ್ಷ್ಮವಾಗಿಯೂ, ಮೃದುವಾಗಿಯೂ, ಮಾಂಸದಿಂದ ಕೂಡಿಯೂ, ರೋಮಗಳಿಲ್ಲದೆಯೂ, ಪುತ್ರೋತ್ಪತ್ತಿಗೆ ಸೂಚಕವಾಗಿಯೂ ಇದೆ.

೫೧. ನಿನ್ನ ಬೆನ್ನುಮೂಳೆಯು ಬಿದಿರಿನ ಕೋಲಿನಂತಿರುವುದು. ಮಾಂಸದಿಂದಲೂ ಕೂಡಿರುವುದು. ಕೋಮಲವಾಗಿಯೂ ಬಗ್ಗಿಕೊಂಡೂ ರೋಮಗಳಿಲ್ಲದೆಯೂ ಇರುವುದು.

೫೨. ನಿನ್ನ ಅಳ್ಳೆಗಳು ಅತಿಮೃದುವಾಗಿಯೂ, ಹೊಂಬಣ್ಣವಾಗಿಯೂ, ಮಾಂಸದಿಂದ ಕೂಡಿಕೊಂಡೂ, ರೋಮಗಳಿಲ್ಲದೆಯೂ, ಇರುವುವು. ಹೊಟ್ಟೆಯು ಹೊಂಬಣ್ಣವಾಗಿಯೂ, ರೋಮಗಳಿಲ್ಲದೆಯೂ ಸ್ವಲ್ಪಮುಂದಕ್ಕೆ ಎದ್ದುಕೊಂಡೂ ಮಾಂಸವುಳ್ಳದ್ದಾಗಿಯೂ ಇರುವುದು.

ಹೃದಯಂ ಕೋಮಲಂ ರಮ್ಯಂ ಮಾಂಸಲಂ ಪೀತಮುನ್ನತಂ ।
ವಿಸ್ತೀರ್ಣಂ ಲೋಮಹೀನಂ ಚ ಸುಸ್ನಿಗ್ಧಂ ಸೌಖ್ಯದಂ ಮಮ ॥ ೫೩ ॥

ಹೇಮಕುಂಭಸಮಾನೌ ದ್ವೌ ಕುಚೌ ಪೀನೌ ಘನೌ ಶುಭೌ ।
ಗಜಶುಂಡಾತುಂಡತುಲ್ಯೌ ಪೀನೌ ತೇ ಕೋಮಲೌ ಭುಜೌ ॥ ೫೪ ॥

ಕೃಶಾ ರಮ್ಯಾಃ ಕೋಮಲಾಶ್ಚ ತೇಂಗುಲ್ಯೋ ಜನಕಾತ್ಮಜೇ ।
ರಕ್ತೇ ಪಾಣಿತಲೇ ಶಂಖಧ್ವಜಮತ್ಸ್ಯಾದಿಚಿಹ್ನಿತೇ ॥ ೫೫ ॥

ಮಾಂಸಲೇ ಕೋಮಲೇ ಪ್ರೋಚ್ಚೈಸ್ಸುರೇಖಾಮಂಡಿತೇ ವರೇ ।
ಕರಪೃಷ್ಠೇ ಲೋಮಹೀನೇ ಮಾಂಸಲೇ ಕೋಮಲೇ ಶುಭೇ ॥ ೫೬ ॥

---

೫೩. ನಿನ್ನ ಎದೆಯು ಕೋಮಲವಾಗಿಯೂ ರಮ್ಯವಾಗಿಯೂ, ಮಾಂಸದಿಂದ ಕೂಡಿಕೊಂಡೂ, ಹೊಂಬಣ್ಣವಾಗಿಯೂ ಸ್ವಲ್ಪ ಎದ್ದುಕೊಂಡೂ ಇರುವುದು. ಅಗಲವಾಗಿಯೂ, ರೋಮಗಳಿಲ್ಲದೆಯೂ ಮೆತ್ತಗೂ ಇದೆ. ನನಗೆ ಬಹುವಾದ ಸೌಖ್ಯವನ್ನು ಕೊಡುತ್ತದೆ.

೫೪. ನಿನ್ನ ಸ್ತನಗಳು ಚಿನ್ನದ ಕಲಶಗಳಂತಿವೆ. ಮಾಂಸದಿಂದ ಕೂಡಿಕೊಂಡು ದಪ್ಪವಾಗಿವೆ. ನಿನ್ನ ಭುಜಗಳು ಆನೆಯಸೊಂಡಲಿನಂತೆ ದಪ್ಪವಾಗಿ ಇಳಿಜಾರಾಗಿ ಇರುವುವು. ಕೋಮಲವಾಗಿಯೂ ಇರುವುವು.

೫೫–೫೬. ನಿನ್ನ ಕೈಬೆರಳುಗಳು ಸಣ್ಣವಾಗಿ ರಮ್ಯವಾಗಿವೆ. ನಿನ್ನ ಅಂಗೈಪ್ರದೇಶವು ಕೆಂಪಗಿರುವುದು. ಶಂಖ, ಧ್ವಜ, ಮತ್ಸ್ಯಾದಿ ಚಿಹ್ನೆಗಳಿಂದ ಕೂಡಿವೆ. ಮಾಂಸದಿಂದ ಕೂಡಿವೆ. ಕೋಮಲವಾಗಿವೆ. ಎತ್ತರವಾಗಿ ಎದ್ದುಕೊಂಡಿವೆ. ಹಸ್ತದ ಹಿಂಭಾಗವು ರೋಮವಿಲ್ಲದಿರುವುದು. ಮಾಂಸದಿಂದ ಕೂಡಿಕೋಮಲವಾಗಿದೆ.

ಪೀನೌ ಸ್ಕಂಧೌ ವರ್ತುಲೌ ತೇ ಜತ್ರುಸ್ತೇ ಮಾಂಸಪೂರಿತಃ |
ಕಂಬುಕಂಠೋತಿಪೀನಶ್ಚ ಸ ವಳಿತ್ರಯ ಉತ್ತಮಃ || ೫೭ ||

ಮಧ್ಯೇ ನಿಮ್ನಂ ಸುಪೀನಂ ತೇ ಚುಬುಕಂ ವರ್ತುಲಂ ಮೃದು |
ಪ್ರವಾಲಬಿಂಬಸದೃಶಂ ಚಾರುವಕ್ತ್ರಂ ಸುಕೋಮಲಂ || ೫೮ ||

ಸೀತೇ ತೇಧೋಧರೋ ಭಾತಿ ಮಧುರೋಽಮೃತಸನ್ನಿಭಃ |
ಕುಂದಪುಷ್ಪಕಲಿಕಯಾ ಸ್ಪರ್ಧಂತೇ ದಶನಾಸ್ತವ || ೫೯ ||

ಸಾಂದ್ರಾಃ ಕೃತ್ರಿಮವರ್ಣೈಶ್ಚ ಕೃಷ್ಣವರ್ಣಾ ಮನೋಹರಾಃ |
ಹೇಮಪುಷ್ಪೈರ್ಹೇಮತಂತುಬಂಧೈಶ್ಚಿತ್ರ ವಿಚಿತ್ರಿತಾಃ || ೬೦ ||

ಊರ್ಧ್ವಾಧರಃ ಕೋಮಲಸ್ತೇ ರಕ್ತವರ್ಣೋ ವಿಭಾತ್ಯಯಂ |
ಋಜು ಘ್ರಾಣಮುನ್ನತಂ ತೇ ದಿವ್ಯಂ ಭಾತಿ ಮನೋಹರಂ || ೬೧ ||

---

೫೭. ನಿನ್ನ ಭುಜಶಿರಸ್ಸುಗಳು ದುಂಡಾಗಿ ಇವೆ. ಭುಜಶಿರಸ್ಸಿಗೂ ಎದೆಗೂ ಮಧ್ಯದಲ್ಲಿರುವ ಸಂಧಿಪ್ರದೇಶವು ಮಾಂಸಪೂರಿತವಾಗಿದೆ. ನಿನ್ನ ಕಂಠವು ಶಂಖದಂತಿದ್ದು ಬಹುದಪ್ಪವಾಗಿದೆ. ಮೂರು ಗಿಣ್ಣುಗಳಂತೆ ಸಾಲುಗಳಿರುವುವು.

೫೮–೫೯. ನಿನ್ನ ತುಟಿಯ ಕೆಳಗಡೆಯ ಗಲ್ಲವು ಮಧ್ಯದಲ್ಲಿ ಹಳ್ಳವಾಗಿ ದಪ್ಪವಾಗಿದೆ. ಮೃದುವಾಗಿದೆ. ನಿನ್ನ ತುಟಿಗಳು ಹವಳದಂತೆಯೂ ತೊಂಡೆಯ ಹಣ್ಣಿನಂತೆಯೂ ಇರುವುವು. ಕೋಮಲವಾಗಿಯೂ ಇರುವುವು. ಅಮೃತಕ್ಕೆ ಸಮವಾಗಿ ಮಧುರವಾಗಿರುವುದು. ನಿನ್ನ ಹಲ್ಲುಗಳು ಮಲ್ಲಿಗೆಯ ಮುಗ್ಗುಗಳಂತಿವೆ.

೬೦. ಆ ಹಲ್ಲುಗಳು ಸಂದುಗಳಿಲ್ಲದಂತೆ ಎಡಬಿಡದೆ ಸೇರಿಕೊಂಡಿವೆ. ಅವಕ್ಕೆ ಕೃತ್ರಿಮವಾದ ಕಪ್ಪುಬಣ್ಣವನ್ನು ಹಾಕಿರುವುದರಿಂದ ಕಪ್ಪಾಗಿವೆ. ಅವುಗಳನ್ನು ನೋಡಿದರೆ ಬಂಗಾರದ ಸರಿಗೆಯಿಂದ ಬಂಗಾರದ ಹೂಗಳನ್ನು ಕಟ್ಟಿರುವಂತೆ ಕಾಣುತ್ತವೆ.

೬೧. ನಿನ್ನ ಮೇಲು ತುಟಿಯು ಕೋಮಲವಾಗಿ ಕೆಂಪಾಗಿರುವುದು. ನಿನ್ನ ಮೂಗು ನೆಟ್ಟಗಿದ್ದು ಎತ್ತರವಾಗಿದೆ. ಮನೋಹರವಾಗಿರುವುದು.

ತವ ನೇತ್ರೇ ಕಂಜಪತ್ರತುಲ್ಯೇ ದೀರ್ಘೇ ಮನೋಹರೇ ।
ಹರಿಣೀನೇತ್ರಸದೃಶೇ ಕಾಮಬಾಣಾವಿವ ಪ್ರಿಯೇ ॥ ೬೨ ॥

ತವ ಕರ್ಣೌ ಘನೌ ಪೀನೌ ಬಹುಭಾರಸಹೌ ವರೌ ।
ತವ ಸೀತೇತಿಸುಸ್ನಿಗ್ಧೇ ಪ್ರೋಚ್ಚೇ ಗಂಡಸ್ಥಲೇ ಶುಭೇ ॥ ೬೩ ॥

ಕೃಶೇ ಭ್ರುವೌ ಚಾಪತುಲ್ಯೇ ಕೃಷ್ಣವರ್ಣೇ ಸುಕೋಮಲೇ ।
ಲಲಾಟಂ ತವ ವಿಸ್ತೀರ್ಣಂ ಮಾಂಸಲಂ ಹಿ ಸಮಂ ಮೃದು ॥ ೬೪ ॥

ಗಂಗಾಕೂಲೋಪಮಸ್ಸೀತೇ ಸೀಮಂತಸ್ತವ ಸುಂದರಃ ।
ಹೇಮತಂತುಸಮಾನಾಸ್ತೇ ಕೇಶಾಃ ಸ್ನಿಗ್ಧಾಸ್ಸುಕೋಮಲಾಃ ॥ ೬೫ ॥

ಮಸ್ತಕಸ್ತವ ಸೂಕ್ಷ್ಮಶ್ಚ ವರ್ತುಲೋ ಮಾಂಸಲಶ್ಶುಭಃ ।
ವೇಣೀಬಂಧೋ ವರಸ್ಸೀತೇ ಜಘನೇ ಪತಿತಸ್ತವ ॥ ೬೬ ॥

೬೨-೬೩. ನಿನ್ನ ಕಣ್ಣುಗಳು ಕಮಲದ ದಳಗಳಂತಿವೆ. ಉದ್ದವಾಗಿ ಮನೋಹರವಾಗಿವೆ. ಜಿಂಕೆಗಳ ಕಣ್ಣಿನಂತಿದ್ದು ಕಾಮನ ಬಾಣಗಳಂತಿವೆ. ನಿನ್ನ ಕಿವಿಗಳು ದಪ್ಪವಾಗಿವೆ. ಬಹು ಭಾರವನ್ನು ಸಹಿಸುವಂತಿವೆ. ನಿನ್ನ ಕಪೋಲವು ಎದ್ದುಕೊಂಡಂತಿದ್ದು ಮೆತ್ತಗೆ ಮನೋಹರವಾಗಿದೆ.

೬೪. ನಿನ್ನ ಹುಬ್ಬುಗಳು ಸಣ್ಣದಾಗಿ ಕಡ್ಡಿಯಂತಿವೆ. ಬಿಲ್ಲಿನಂತೆ ಬಗ್ಗಿಕೊಂಡಿವೆ. ಕಪ್ಪಗೆ ಕೋಮಲವಾಗಿವೆ. ನಿನ್ನ ಹಣೆಯು ವಿಸ್ತಾರವಾಗಿದೆ. ಸಮವಾಗಿ ಮಾಂಸದಿಂದ ಕೂಡಿಕೊಂಡಿದೆ.

೬೫. ಎಲೈ ಸೀತೆಯೇ ! ನಿನ್ನ ಬೈತಲೆಯು ಗಂಗೆಯ ದಡದಂತಿದೆ. ಸುಂದರವಾಗಿದೆ. ನಿನ್ನ ತಲೆಯ ಕೂದಲುಗಳು ಚಿನ್ನದ ನೂಲಿನಂತಿವೆ. ಮನೋಹರವಾಗಿವೆ.

೬೬. ನಿನ್ನ ತಲೆಯು ಸಣ್ಣದಾಗಿ ದುಂಡಗಿದೆ. ಮಾಂಸದಿಂದ ಕೂಡಿದೆ. ನಿನ್ನ ಜಡೆಯು ಉದ್ದವಾಗಿ ಬರಬರುತ್ತ ಸಣ್ಣದಾಗಿ ಮನೋಹರವಾಗಿದೆ. ಮತ್ತೆ ನಿನ್ನ ಸೊಂಟದವರೆಗೂ ನೇತಾಡುತ್ತಿರುವುದು.

ಚಂಪ್ರಪುಷ್ಪೋಪಮುಮುಖಂ ಸೌಕುಮಾರ್ಯಮಪಿ ಪ್ರಿಯೇ ।
ಸೀತೇ ತವಾನನಸ್ಪರ್ಧೀ ಶಶಾಂಕಃ ಕ್ಷಯಮಾಪ ಸಃ ॥ ೬೭ ॥

ತ್ವನ್ನೇತ್ರವಿಜಿತಾ ಸೀತೇ ಮೃಗೀ ಧಾವತಿ ಕಾನನೇ ।
ಸೀತೇ ತ್ವದ್ಭ್ರುಕುಟಿಸ್ಪರ್ಧಿ ಚಾಪಂ ಭಗ್ನಂ ಮಯಾ ಪುರಾ ॥ ೬೮ ॥

ತವ ನೇತ್ರ ಕಟಾಕ್ಷೇಣ ಮುನೀನಾಂ ಮದನೋದ್ಭವಃ ।
ನೇತ್ರಯೋಸ್ತವ ಚಾಂಚಲ್ಯಂ ಮಕರಾ ಲಜ್ಜಯತ್ಯಹೋ ॥ ೬೯ ॥

ತವ ಘ್ರಾಣಂ ಶುಕೋ ದೃಷ್ಟ್ವಾಽತ್ಮಾನಂ ಧಿಕ್ಕರೋತಿ ಹಿ ।
ದೃಷ್ಟ್ವೋಷ್ಠಯೋಶ್ಶೋಣಿಮಾಂ ತೇ ಸೌಕುಮಾರ್ಯಮಪಿ ಪ್ರಿಯೇ ॥ ೭೦ ॥

ಸಹಕಾರತರೋಶ್ಚಾಪಿ ರಕ್ತಃ ಕೋಮಲಪಲ್ಲವಃ ।
ಲಜ್ಜಯಾ ಹರಿತೋ ಭಾತಿ ತ್ಯಕ್ತ್ವಾ ಸ್ವೀಯಾಂ ಸುರಕ್ತತಾಂ ॥ ೭೧ ॥

---

೬೭. ನಿನ್ನ ಮುಖವು ಸಂಪಿಗೆಯ ಹೂವಿನಂತಿರುವುದು. ಸುಕೂಮಾರವಾಗಿರುವುದು. ಎಲೈ ಸೀತೆಯೇ! ನಿನ್ನ ಮುಖದೊಡನೆ ಸ್ಪರ್ಧಿಸಿದ ಆ ಚಂದ್ರನು ಕ್ಷಯರೋಗವನ್ನು ಹೊಂದಿ ನಾಶವಾದನು.

೬೮. ನಿನ್ನ ಕಣ್ಣುಗಳಿಂದ ಸೋತುಹೋಗಿ ಜಿಂಕೆಗಳು ಕಾಡಿಗೆ ಓಡಿಹೋದುವು. ನಿನ್ನ ಹುಬ್ಬುಗಳೊಡನೆ ಸ್ಪರ್ಧಿಸುತ್ತಿದ್ದ ಆ ಬಿಲ್ಲನ್ನು ಮೊದಲೇ ನಾನು ಮುರಿದು ಹಾಕಿದೆನು.

೬೯. ನಿನ್ನ ಕಟಾಕ್ಷವನ್ನು ನೋಡಿದರೆ ಮುನಿಗಳಿಗೂ ಕೂಡ ಕಾಮಬಾಧೆಯುಂಟಾಗುತ್ತದೆ. ನಿನ್ನ ಕಣ್ಣುಗಳಲ್ಲಿರುವ ಆ ಚಂಚಲ ಸ್ವಭಾವವನ್ನು ನೋಡಿ ಮೀನುಗಳೂ ಕೂಡ ಲಜ್ಜೆಗೊಂಡುವು.

೭೦–೭೧. ನಿನ್ನ ಮೂಗನ್ನು ನೋಡಿ ಗಿಳಿಯು ತನ್ನನ್ನು ನಿಂದಿಸಿಕೊಳುತ್ತಿರುವುದು. ಎಲೈ ಪ್ರಿಯಳೆ! ನಿನ್ನ ತುಟಿಗಳ ಕೆಂಪನ್ನೂ, ಸೌಕುಮಾರ್ಯವನ್ನೂ ನೋಡಿ ಮಾವಿನಮರದ ಸುಕುಮಾರವಾದ ಚಿಗುರುಗಳೂ ಕೂಡ ಕೋಪದಿಂದ ಕೆಂಪಾದುವು. ಅನಂತರ ಲಜ್ಜೆಯಿಂದ ತಮ್ಮ ಆ ರಕ್ತವರ್ಣವನ್ನು ಬಿಟ್ಟು ಹಸುರಾದುವು.

ಸೌಕುಮಾರ್ಯಂ ತಥಾ ತ್ಯಕ್ತ್ವಾ ಲಜ್ಜಯಾ ತೇ ಘನೋಽಪಿ ಸಃ ।
ಏವಂ ಕಿಂ ಕಿಂ ಮಯಾ ಕಾಂತೇ ಸೌಂದರ್ಯಂ ತವ ಜಾನಕಿ ॥ ೭೨ ॥

ವರ್ಣನೀಯಂ ಮಹದ್ದಿವ್ಯಂ ಯತ್ರ ಬ್ರಹ್ಮಾಪಿ ಕುಂಠಿತಃ ।
ಇತ್ಯುಕ್ತ್ವಾ ರಾಘವಸ್ಸೀತಾಂ ಪ್ರೀತ್ಯಾ ತಾಂ ಪರಿಷಸ್ವಜೇ ॥ ೭೩ ॥

ತಚ್ಛ್ರುತ್ವಾ ವರ್ಣನಂ ಸ್ವೀಯಂ ಲಜ್ಜಯಾಧಃಕೃತಾನನಾ ।
ಕಿಂಚಿತ್ ಸ್ಮಿತಾನನಂ ಕೃತ್ವಾ ತಸ್ಥಾವಂಕೇ ಪತೇಶ್ಚ ಸಾ ॥ ೭೪ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ವಿಲಾಸಕಾಂಡೇ ಸೀತಾವರ್ಣನಂ ನಾಮ
ದ್ವಿತೀಯಸ್ಸರ್ಗಸ್ಸಮಾಪ್ತಃ

೭೨-೭೩. ಅಂತೆಯೇ ಆ ಶೀಮಾವಿನಮರವು ಲಜ್ಜೆಯಿಂದ ತನ್ನ ಸೌಕುಮಾರ್ಯವನ್ನು ಬಿಟ್ಟು ಗಟ್ಟಿಯಾಗಿ ಹೋಯಿತು. ನಿನ್ನ ಸೌಕುಮಾರ್ಯವನ್ನು ನಾನು ಎಷ್ಟೆಂದು ವರ್ಣಿಸಲಿ. ಈ ವರ್ಣನೆಯ ವಿಷಯದಲ್ಲಿ ಬ್ರಹ್ಮನೂ ಕೂಡ ಸೋತುಹೋಗಿರುವನು. ರಾಮನು ಹೀಗೆಂದು ಹೇಳಿ ಅವಳನ್ನು ಆಲಿಂಗಿಸಿ ಕೊಂಡನು.

೭೪. ಮತ್ತು ಸೀತೆಯು ರಾಮನು ವರ್ಣಿಸಿದ ತನ್ನ ವರ್ಣನೆಯನ್ನು ಕೇಳಿ ಲಜ್ಜೆಯಿಂದ ತಲೆತಗ್ಗಿಸಿಕೊಂಡು ಹುಸಿನಗುನಗುತ್ತ ಅವನ ತೊಡೆಯ ಮೇಲೆ ಕುಳಿತಳು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಸೀತಾವರ್ಣನ
ಎಂಬ ಎರಡನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ

॥ ಎರಡನೆಯ ಸರ್ಗದ ಸಾರಾಂಶವು ॥

ವಿಷ್ಣುದಾಸನು ಗುರುವನ್ನು ಕುರಿತು ಎಲೈ ಗುರುವೆ! ರಾಮನು ಅಯೋಧ್ಯೆಯಲ್ಲಿ ಸೀತೆಯೊಡನೆ ಭೋಗಗಳನ್ನು ಹೇಗೆ ಅನುಭವಿಸಿದನು? ಅವನ ಚರಿತ್ರೆಯನ್ನು ಹೇಳು. ಎಂದು ಕೇಳಿದನು.

ಅದಕ್ಕೆ ರಾಮದಾಸನು ಇಂತೆಂದನು. ಎಲೈ ಶಿಷ್ಯನೆ! ಆ ರಾಮನು ರಣದೀಕ್ಷೆಯನ್ನೂ ಯಾಗದೀಕ್ಷೆಯನ್ನೂ ಜೊತೆಯಲ್ಲಿಯೇ ಪೂರ್ತಿಗೊಳಿಸಿದನು. ಅನಂತರ ಸೀತೆಯೊಡನೆ ಅಯೋಧ್ಯೆಯಲ್ಲಿ ಸುಖಿಸಿದನು. ಅವನ ವಿಲಾಸವನ್ನು ಹೇಳುತ್ತೇನೆ ಕೇಳು.

ಆ ರಾಮನ ಮಲಗುವ ಮನೆಯು ಬಹು ರಮ್ಯವಾಗಿದ್ದಿತು. ಆ ಮನೆಯ ಗೋಡೆಯನ್ನು ರತ್ನದ ಇಟ್ಟಿಗೆಗಳಿಂದಲೇ ಕಟ್ಟಿದ್ದರು. ಅಲ್ಲಿ ಚಿನ್ನದ ಮಂಚವನ್ನು ಹಾಕಿದ್ದರು. ಸ್ಫಟಿಕದ ಕಂಬಗಳೂ ಮರಕತರದ ಬೋದಿಗೆಗಳೂ ಇದ್ದುವು. ನೆಲವೆಲ್ಲವೂ ಚಿನ್ನದ ಮಯವಾಗಿದ್ದಿತು. ಹೂವಿನ ಹಾರಗಳನ್ನೂ ಮುತ್ತಿನ ಹಾರಗಳನ್ನೂ ಹಾಕಿ ಮೇಲ್ಕಟ್ಟನ್ನು ಕಟ್ಟಿದ್ದರು ಚಿನ್ನದ ಸರಿಗೆಯ ಬಟ್ಟೆಗಳನ್ನು ತೆರೆಯ ವಸ್ತ್ರಗಳನ್ನಾಗಿ ಹಾಕಿಕೊಂಡಿದ್ದರು. ಮಂಚದಮೇಲೆ ಹಂಸತೂಲಿಕೆಯ ಸುಪ್ಪತ್ತಿಗೆಯನ್ನೂ ಉತ್ತಮವಾದ ತಲೆದಿಂಬುಗಳನ್ನೂ ಹಾಕಿದ್ದರು. ಉತ್ತಮವಾದ ಮಗ್ಗುಲುಹಾಸಿಗೆಯನ್ನೂ ಹಾಸಿದ್ದರು. ನವಿಲುಗರಿಯ ಬೀಸಣಿಗೆಗಳನ್ನೂ ಚಾಮರವನ್ನೂ ಬೀಸಿಕೊಳ್ಳಲು ಇಟ್ಟಿದ್ದರು. ಲಾಮಂಚದ ಬೀಸಣಿಗೆಗಳೂ ಇದ್ದುವು. ತಾಂಬೂಲದ ಪಾತ್ರೆಯನ್ನೂ

ತಂಬುಲನ್ನು ಉಗಿಯುವ ಪಾತ್ರೆಯನ್ನೂ ಇಟ್ಟಿದ್ದರು. ರಂಭೆಯಂತಿರುವ ಅನೇಕ ದಾಸಿಯರು ಸರದಿಯ ಪ್ರಕಾರ ಉಪಚರಿಸುತ್ತಿದ್ದರು. ಚಿನ್ನದ ಪಂಜರಗಳಲ್ಲಿ ಈ ಪಕ್ಷಿಗಳನ್ನಿಟ್ಟು ಅವನ್ನು ಅಲ್ಲಲ್ಲಿ ನೇತುಹಾಕಿದ್ದರು.

ಅವುಗಳು ಯಾಗಕ್ಕೆ ಬಂದಿದ್ದ ರಾಜಪತ್ನಿಯರು ಕಾಣಿಕೆಯಾಗಿ ಕೊಟ್ಟ ಉತ್ತಮ ಪದಾರ್ಥಗಳಾಗಿದ್ದುವು ಅವುಗಳಲ್ಲಿದ್ದ ಗಿಳಿ ಲಾವಕೆ ಕೋಗಿಲೆ ಮುಂತಾದುವುಗಳು ಬಹುವಾಗಿ ರಾಮನ ವಿಷಯವಾಗಿ ಹೇಳುತ್ತ ಕೂಗಾಡು ತ್ತಿದ್ದುವು. ಈ ರಾಮನ ಸ್ಮರಣೆಯಿಂದಲೇ ಅವು ಜೀವನ್ಮುಕ್ತಗಳಾಗಿದ್ದುವು. ಅವು ಯಾವಾಗಲೂ ಜಯಕಾರಗಳನ್ನು ಹೇಳುತ್ತ ಆ ರಾಮನ ಚರಿತ್ರೆಯನ್ನು ಹೇಳುತ್ತಿದ್ದುವು.

ಆ ರಾಮನು ಏಕಪತ್ನೀವ್ರತದಲ್ಲಿಯೇ ಇದ್ದನು. ರಾಮನು ಒಂದುಸಾರಿ ಆಕೆಯೊಡನೆ ಸರಸಸಲ್ಲಾಪದಲ್ಲಿರುತ್ತ ಆ ಸೀತೆಯನ್ನು ಪಾದದಿಂದ ಕೇಶಪರ್ಯಂತ ವಾಗಿ ವರ್ಣಿಷಿದನು. ಹೀಗೆ ವರ್ಣಿಸುತ್ತ ಸುಖನಿರ್ಭಯನಾಗುತ್ತಿದ್ದನು.

ಸೀತೆಯು ತನ್ನ ವರ್ಣನೆಯನ್ನು ಕೇಳಿ ಲಜ್ಜೆಪಡುತ್ತ ಆತನ ತೊಡೆಯ ಮೇಲೆ ಕುಳಿತುಕೊಳ್ಳುತ್ತಿದ್ದಳು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

॥ ತೃತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಸಾ ಜಾನಕೀ ರಾಮಂ ವಿನಯಾಲ್ಲಜ್ಜಿತಾಬ್ರವೀತ್ ।
ರಾಮ ರಾಜೀವಪತ್ರಾಕ್ಷ ಕಿಂಚಿತ್ಪ್ರಷ್ಟುಂ ಮಮ ಪ್ರಭೋ ॥ ೧ ॥

ವಾಂಛಾಸ್ತಿ ಚೇತ್ಕರೋಷ್ಯಾಜ್ಞಾಂ ತರ್ಹಿ ಪೃಚ್ಛಾಮ್ಯಹಂ ತವ ।
ತತ್ಸೀತಾವಚನಂ ಶ್ರುತ್ವಾ ರಾಘವಃ ಪ್ರಾಹ ಜಾನಕೀಂ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಮೂರನೆಯ ಸರ್ಗವು

೧–೨. ಶ್ರೀ ರಾಮದಾಸನು ಹೇಳಿದನು–ಒಂದುಸಾರಿ ಜಾನಕಿಯು ರಾಮನನ್ನು ಕುರಿತು ವಿನಯದಿಂದ ತಲೆಯನ್ನು ತಗ್ಗಿಸಿಕೊಂಡು ರಾಜೀವ ಪತ್ರಾಕ್ಷನಾದ ರಾಮನೇ ! ನಿನ್ನನ್ನು ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ನೀನು ಒಪ್ಪಿ ಅಜ್ಞೆಮಾಡಿದರೆ ನಾನು ಕೇಳುತ್ತೇನೆ ಎಂದಳು. ಸೀತೆಯು ಇಂತೆಂದುದನ್ನು ಕೇಳಿ ರಾಮನು ಆಕೆಯನ್ನು ಕುರಿತು ಇಂತೆಂದನು.

ಪೃಚ್ಛಸ್ವ ಸೀತೇ ಯತ್ತೇಽಸ್ತಿ ಪ್ರಷ್ಟವ್ಯಂ ಮಾಂ ಸುಖೇನ ತತ್ ।
ಮಾ ಶಂಕಾಂ ಭಜ ರಂಭೋರು ಗುಹ್ಯಂ ಚಾಪಿ ವದಾಮಿ ತೇ ॥ ೩ ॥

ತದ್ರಾಮವಚನಂ ಶ್ರುತ್ವಾ ನತ್ವಾ ತಂ ಪ್ರಾಹ ಜಾನಕೀ ।
ರಾಮ ರಾಮ ಮಹಾಬಾಹೋ ಕಿಂಚಿದುಪದಿಶಸ್ವ ಮಾಂ ॥ ೪ ॥

ಯೇನ ಮಾಂ ತವ ಸಂಜ್ಞಾನಂ ಭವಿಷ್ಯತಿ ಮಹೋಜ್ಜ್ವಲಂ ।
ತತ್ಸೀತಾವಚನಂ ಶ್ರುತ್ವಾ ರಾಮಚಂದ್ರೋಽಬ್ರವೀದ್ವಚಃ ॥ ೫ ॥

ಸಮ್ಯಕ್ಪೃಷ್ಟಂ ತ್ವಯಾ ಸೀತೇ ಶ್ರುಣುಷ್ವೈಕಾಗ್ರಮಾನಸಾ ।
ಮಮ ಜ್ಞಾನಾಯ ತೇ ವಚ್ಮಿ ಪರಂ ಕೌತೂಹಲಂ ಶುಭಂ ॥ ೬ ॥

---

೩. ಎಲೈ ಸೀತೆಯೇ! ನೀನೇನನ್ನು ಕೇಳಬೇಕು. ಎಂದಿರುವೆಯೋ ಅದನ್ನು ಸಂದೇಹಪಡದೆ ಕೇಳು. ಸ್ವಲ್ಪವೂ ಸಂದೇಹವನ್ನು ಪಡಲೇ ಬೇಡ. ಅದು ಗುಟ್ಟಾದುದಾದರೂ ಕೂಡ ಹೇಳುತ್ತೇನೆ.

೪. ಎಂಬುದಾಗಿ ರಾಮನು ಹೇಳಿದುದನ್ನು ಕೇಳಿ ಸೀತೆಯು ರಾಮನಿಗೆ ನಮಸ್ಕರಿಸಿ ಎಲೈ ಮಹಾನುಭಾವನಾದ ರಾಮನೇ! ನಾನು ಕೇಳತಕ್ಕದ್ದನ್ನು ನನಗೆ ಉಪದೇಶಮಾಡು.

೫. ನನಗೆ ಪರಮಾತ್ಮನಾದ ನಿನ್ನ ಸಂಬಂಧವಾದ ಜ್ಞಾನವುಂಟಾಗಬೇಕು. ಅಂತಹ ನಿನ್ನ ಸಂಬಂಧವಾದ ಜ್ಞಾನವುಂಟಾಗುವಂತೆ ಉಪದೇಶಮಾಡು ಎಂದಳು. ಸೀತೆಯು ಹೀಗೆ ಹೇಳಿದುದನ್ನು ಕೇಳಿ ರಾಮಚಂದ್ರನು ಇಂತೆಂದನು.

೬. ಸೀತೆ! ನೀನು ಕೇಳಿದುದು ಚೆನ್ನಾಗಿದೆ. ಒಂದೇ ಮನಸ್ಸಿನಿಂದ ಕೇಳು. ನನ್ನ ಸಂಬಂಧವಾದ ಜ್ಞಾನವು ನಿನಗೆ ಉಂಟಾಗುವಂತೆ ಕುತೂಹಲವೂ ಶುಭವೂ ಆದ ವಿಷಯವನ್ನು ಹೇಳುತ್ತೇನೆ.

|| ಶ್ರೀರಾಮಚಂದ್ರ ಉವಾಚ ||

ಸಚ್ಚಿದಾನಂದರೂಪಾಖ್ಯಸಾಗರಸ್ಯ ತದಿಚ್ಛಯಾ |
ತರಂಗರೂಪಯಾಽತ್ಮಾಂಶಬಿಂದುಶ್ಶುದ್ಧೋ ವಿನಿರ್ಗತಃ || ೭ ||

ಆತ್ಮನಾಮಾಮಾತೃಭೂತ ಬುದ್ಧೇರ್ಜಠರಸಂಭವಃ |
ಶುದ್ಧ ಸತ್ವಾಂತಃಕರಣಂ ಪಿತಾ ಚಾತ್ಮನ ಈರಿತಃ || ೮ ||

ತಸ್ಯಾತ್ಮನಶ್ಚ ಚತ್ವಾರೋ ಭೇದಾಸ್ತೇ ಬಂಧವಃ ಸ್ಮೃತಾಃ |
ತುರ್ಯಾವಸ್ಥಸ್ತತ್ರ ವರಸ್ತತೋ ಜಾಗ್ರದವಸ್ಥಕಃ || ೯ ||

ಸ್ವಪ್ನಾವಸ್ಥಸ್ತೃತೀಯಶ್ಚಾವರಸ್ಸುಷುಪ್ತ್ಯವಸ್ಥಕಃ |
ಹೃದಯಾಕಾಶಂ ತತ್‌ಸ್ಥಾನಂ ಮನೋವೇಗೋ ಬಹಿರ್ಗಮಃ || ೧೦ ||

---

೭. ರಾಮಚಂದ್ರನು ಹೇಳಿದನು–ಸದ್ರೂಪ, ಚಿದ್ರೂಪ, ಆನಂದರೂಪಗಳೆಂಬುವೇ ತುಂಬಿರುವ ಒಂದು ಸಮುದ್ರವಿರುವುದು. ಆ ಸಮುದ್ರದಲ್ಲಿ ಇಚ್ಛೆಯು ತರಂಗರೂಪವಾಗಿರುವುದು. ಆ ಸಮುದ್ರದ ತರಂಗರೂಪವಾದ ಇಚ್ಛೆಯಿಂದ ಶುದ್ಧವಾದ ಬಿಂದು ರೂಪವಾದ ಆತ್ಮಾಂಶವು ಹೊರಗೆ ಬಂದಿತು.

೮. ಈ ಬಿಂದುರೂಪವಾದ ಆತ್ಮನೇ ಎಲ್ಲದಕ್ಕೂ ತಾಯಿಯಾದುದು. ಆ ಆತ್ಮನು ಬುದ್ಧಿಯೆಂಬ ತಾಯಿಯ ಹೊಟ್ಟೆಯಿಂದ ಹುಟ್ಟಿದುದು. ಆ ಆತ್ಮನಿಗೆ ಶುದ್ಧಸತ್ವಾಂತಃಕರಣವೆಂಬುದು ತಂದೆಯು.

೯–೧೦. ಆ ಆತ್ಮನಿಗೆ ನಾಲ್ಕುಜನ ತಮ್ಮಂದಿರೆಂಬ ಬಂಧುಗಳುಂಟು ಎಂದರೆ ಆ ಆತ್ಮನು ನಾಲ್ಕುಭೇದವುಳ್ಳವನು. ಅದರಲ್ಲಿ ಮೊದಲನೆಯದು ತುರೀಯಾವಸ್ಥೆ, ಎರಡನೆಯದು ಜಾಗ್ರದವಸ್ಥೆ, ಮೂರನೆಯದು ಸ್ವಪ್ನಾವಸ್ಥೆ, ನಾಲ್ಕನೆಯದು ಸುಷುಪ್ತ್ಯವಸ್ಥೆ. ಆ ಆತ್ಮನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯಾವಸ್ಥೆಗಳೆಂದು ನಾಲ್ಕು ಅವಸ್ಥೆಗಳುಂಟು. ಇವುಗಳು ಹೃದಯಾಕಾಶದಲ್ಲಿರುತ್ತವೆ. ಮನೋವೇಗದಿಂದ ಹೊರಗೆ ಸಂಚರಿಸುತ್ತದೆ.

ಮನೋದುರ್ವೃತ್ತಿಘಾತಶ್ಚ ಮನೋವೇಗಸ್ಯ ಖಂಡನಂ ।
ಮಾಯಾಯೋಗಸ್ತತಸ್ತಸ್ಯ ಪೂರ್ವಸಂಸ್ಕಾರ ನಿಗ್ರಹಃ ॥ ೧೧ ॥

ತತಃ ಕುಬುದ್ಧಿಹೇತೋರ್ಹಿ ಭವಾರಣ್ಯೇಟನಂ ಚಿರಂ ।
ದಂಭಸ್ಯ ನಿಗ್ರಹಸ್ತತ್ರ ಪಂಚಭೂತಾತ್ಮಕಾ ಸ್ಥಿರಾ ॥ ೧೨ ॥

ಆತ್ಮನಃ ಪರ್ಣಕುಟಿಕಾ ವಿಶ್ರಾಂತಿಸ್ಥಾನವಿಸಾರಿತಾ ।
ಕಾಮಕ್ರೋಧಲೋಭಜಯಸ್ತತ್ರಾಶಾಕೃಂತನಂ ಸ್ಮೃತಂ ॥ ೧೩ ॥

ಮೋಹಸ್ಯ ನಿಗ್ರಹಸ್ತತ್ರ ಶುದ್ಧಮಾಯಾಶ್ರಯಸ್ತತಃ ।
ರಜೋರೂಪಾ ತು ಯಾ ಮಾಯಾ ಜಠರಾಗ್ನೌ ತದಾ ಸ್ಮೃತಾ ॥ ೧೪ ॥

---

೧೧ ಮನಸ್ಸಿನ ದುರ್ವೃತ್ತಿಯನ್ನು ನಾಶಮಾಡುತ್ತವೆ. ಮತ್ತು ಮನೋವೇಗವನ್ನು ಖಂಡಿಸುತ್ತವೆ. ಅಂತಹ ಆತ್ಮನಿಗೆ ಮಾಯೆಯೆಂಬ ಒಂದು ಸಂಬಂಧವಿರುವುದು. ಮತ್ತು ಅದು ಪೂರ್ವಜನ್ಮ ಸಂಸ್ಕಾರವನ್ನು ನಾಶ ಮಾಡುತ್ತದೆ.

೧೨. ಅನಂತರ ಆತ್ಮನು ದುರ್ಬುದ್ಧಿಯ ಕಾರಣದಿಂದ ಸಂಸಾರವೆಂಬ ಅರಣ್ಯದಲ್ಲಿ ಬಹುಕಾಲ ಸುತ್ತುತ್ತಾನೆ. ಅನಂತರ ದಂಭನನ್ನು ನಿಗ್ರಹಿಸುತ್ತಾನೆ. ಪಂಚಭೂತಾತ್ಮನಾಗಿ ನಿಶ್ಚಲವಾಗಿಯೂ ಇರುವನು.

೧೩. ಆತ್ಮನಿಗೆ ಪರ್ಣಶಾಲೆಯು ವಿಶ್ರಾಂತಿಸ್ಥಾನವೆಂದು ಹೇಳಲ್ಪಟ್ಟಿದೆ. ಆ ಪರ್ಣಶಾಲೆಯಲ್ಲಿ ಆತ್ಮನು ಕಾಮಕ್ರೋಧ ಲೋಭಗಳನ್ನು ಜಯಿಸಿ ಆಸೆಯನ್ನು ನಾಶಮಾಡಿಕೊಳ್ಳುತ್ತಾನೆ.

೧೪. ಮೋಹವನ್ನು ಜಯಿಸುವನು. ಶುದ್ಧಮಾಯೆಯನ್ನು ಆಶ್ರಯಿಸುವನು. ರಜೋರೂಪವಾದ ಮಾಯೆಯು ಜಠರಾಗ್ನಿಯಲ್ಲಿ ಆಶ್ರಯಿಸಿಕೊಂಡಿರುವುದು.

ತಾಮಸ್ಯಾಶ್ಚೈವ ಮಾಯಾಯಾ ವಿಯೋಗಶ್ಚ ತದಾ ಸ್ಮೃತಃ |
ಸುಖಾಲಾಭೋ ಮಹತ್ಕ್ಲೇಶಶ್ಶೋಕಭಂಗಸ್ತತಃ ಪರಂ ॥ ೧೫ ॥

ವಿವೇಕಸ್ಯಾಶ್ರಯಸ್ತತ್ರ ಭಕ್ತ್ಯುದ್ರೇಕಸಮಾಗಮಃ ।
ಅವಿವೇಕವಧಶ್ಚಾಪಿ ಹ್ಯುತ್ಸಾಹೇನ ಸಮಾಗಮಃ ॥ ೧೬ ॥

ಅಜ್ಞಾನತರಣೋಪಾಯಸ್ತ್ರಿಗುಣಾಶ್ರಯ ಸದ್ಮನಿ ।
ಲಿಂಗಾಖ್ಯನಿಗ್ರಹಸ್ತತ್ರ ಮದಸ್ಯ ಸಂಪ್ರಕೀರ್ತಿತಃ ॥ ೧೭ ॥

ನಿಗ್ರಹೋ ಮತ್ಸರಸ್ಯಾಪಿ ತತೋಽಹಂಕಾರನಿಗ್ರಹಃ ।
ವಿಯೋಗೋ ಲಿಂಗದೇಹಸ್ಯ ಮಾಯಾನಾನ್ಯೈಕ್ಯತಾ ತತಃ ॥ ೧೮ ॥

ಹೃದಯಾಕಾಶಗಮನಮಾನಂದೈಕಸುಖಂ ತತಃ ।
ಮಾಯಾತ್ಯಾಗಸ್ತತಶ್ಚೈವ ಸಾತ್ವಿಕ್ಯಾಗ್ರಹಣಂ ಸ್ಮೃತಂ ॥ ೧೯ ॥

---

೧೫. ಆ ಕಾಲದಲ್ಲಿ ತಾಮಸೀಮಾಯೆಯು ಬಿಟ್ಟುಹೋಗುವುದು. ಸುಖಲಾಭವಾಗಲಿಲ್ಲವೆಂದು ಬಹುವಾದ ಕ್ಲೇಶವನ್ನು ಹೊಂದಿ ಶೋಕವನ್ನು ನಾಶಮಾಡಿಕೊಳ್ಳುವನು.

೧೬. ಅನಂತರ ವಿವೇಕವು ಬರುವುದು. ಅನಂತರ ಬಹುಭಕ್ತಿಯೂ ಬರುವುದು. ಅವಿವೇಕವು ತೊಲಗುವುದು. ಉತ್ಸಾಹವು ಹುಟ್ಟುವುದು.

೧೭-೧೮. ಅನಂತರ ಅಜ್ಞಾನವನ್ನು ನಾಶಮಾಡಿಕೊಳ್ಳಲು ತ್ರಿಗುಣವನ್ನು ಹೊಂದಿರುವ ಲಿಂಗಾಖ್ಯಶರೀರವನ್ನು ಹೊಂದುವನು. ಆ ಶರೀರದಲ್ಲಿ ಮದ ಮತ್ಸರಗಳನ್ನು ನಿಗ್ರಹಿಸುವನು. ಅನಂತರ ಅಹಂಕಾರವೂ ನಾಶವಾಗುವುದು. ಅನಂತರ ಆ ಲಿಂಗದೇಹವೂ ಹೋಗುವುದು. ಅನಂತರ ಮಾಯೆಯೊಡನೆ ಈ ಆತ್ಮವು ಸೇರಿಹೋಗುವುದು.

೧೯. ಅನಂತರ ಹೃದಯಾಕಾಶವು ಹೊರಟು ಹೋಗುವುದು. ಅನಂತರ ಆನಂದಸುಖವುಂಟಾಗುವುದು. ಅನಂತರ ಮಾಯೆಯು ಬಿಟ್ಟು ತೊಲಗುವುದು. ಆಮೇಲೆ ಸಾತ್ವಿಕಮಾಯೆಯು ಬರುವುದು.

ಸಾತ್ವಿಕ್ಯಾ ಮಾಯಯಾ ಸಾರ್ಧಂ ಹೃದಯಾಕಾಶಮುತ್ತಮಂ ।
ಮಹಾಕಾಶೇ ಪ್ರಣಯನಂ ಸಚ್ಚಿದಾನಂದ ಸಂಜ್ಞಕೇ ॥ ೨೦ ॥

ಪ್ರವೇಶನಂ ಸಾಗರೇ ಹಿ ಮುಕ್ತಿರ್ಜ್ಞೇಯಾತ್ಮನಶ್ಶುಭಾ ।
ಸಾಯುಜ್ಯಾ ಸಾ ಪರಿಜ್ಞೇಯಾ ಮುಕ್ತಿರ್ಮುಕ್ತಿಚತುಷ್ಟಯೇ ॥ ೨೧ ॥

ಏವಂ ಮಯೇಯಂ ತೇ ಪ್ರೀತ್ಯಾ ಸೀತೇ ಸಂಜ್ಞಾನಪೇಟಿಕಾ ।
ಗೂಡಾರ್ಥೈರ್ವೇದಸಾರಾರ್ಥೈ ರಜ್ಞಾನಮತಿನಾಶಕೈಃ ॥ ೨೨ ॥

ಮತ್‌ಜ್ಞಾನದೈಃ ಪಂಚದಶಶ್ಲೋಕರತ್ನೈಃ ಪ್ರಪೂರಿತಾ ।
ಸಮರ್ಪಿತಾ ಗೃಹಾಣ ತ್ವಮಸ್ಯಾಂ ಬುದ್ಧ್ಯಾಽವಲೋಕಯ ॥ ೨೩ ॥

ಭವಿಷ್ಯತಿ ಮಮ ಜ್ಞಾನಮಸ್ಯಾಸ್ಸಮ್ಯಗ್ವಿಚಾರತಃ ।
ತದ್ರಾಮವಚನಂ ಶ್ರುತ್ವಾ ಸೀತಾ ಸಂಜ್ಞಾನಪೇಟಿಕಾಂ ॥ ೨೪ ॥

---

೨೦. ಸಾತ್ವಿಕೀಯಮಾಯೆಯೊಡನೆ ಹೃದಯಕಾಶವನ್ನು ಆತ್ಮವು ಮತ್ತೆ ಸೇರುವುದು. ಅನಂತರ ಸಚ್ಚಿದಾನಂದ ಸಂಜ್ಞೆಯುಳ್ಳ ಮಹಾಕಾಶವೆಂಬ ಸಾಗರದಲ್ಲಿ ಸೇರುವುದು.

೨೧. ಇದೇ ಆತ್ಮನಿಗೆ ಮುಕ್ತಿಯೆನಿಸಿಕೊಳ್ಳುತ್ತದೆ. ಇದೇನೇ ನಾಲ್ಕು ಬಗೆಯಾದ ಮುಕ್ತಿಗಳೊಳಗೆ ಒಂದಾಗಿರುವುದು. ಇದಕ್ಕೆ ಸಾಯುಜ್ಯಮುಕ್ತಿ ಎಂದು ಹೆಸರು.

೨೨-೨೩. ಎಲೈ ಸೀತೆಯೇ! ನಿನ್ನ ಮೇಲಿನ ಪ್ರೀತಿಯಿಂದ ಸಂಜ್ಞಾನವೆಂಬ ಪೆಟ್ಟಿಗೆಯನ್ನು ವಿವರಿಸಿದ್ದೇನೆ. ಈ ಸಂಜ್ಞಾನದ ಪೆಟ್ಟಿಗೆಯು ಗೂಡಾರ್ಥವನ್ನುಳ್ಳ ವೇದದ ಸಾರವಾದ ಅರ್ಥವನ್ನು ಹೊಂದಿರುವ ಅಜ್ಞಾನವನ್ನು ನಾಶಮಾಡುವ ನನ್ನ ಸಂಬಂಧವಾದ ಜ್ಞಾನವನ್ನು ಕೊಡುವ ಹದಿನೈದು ಶ್ಲೋಕರತ್ನಗಳಿಂದ ಕೂಡಿಕೊಂಡಿದೆ. ಸರಿಯಾದ ಬುದ್ಧಿಯಿಂದ ಇದರೊಳಗೆ ನೋಡು.

೨೪. ಈ ಪೆಟ್ಟಿಗೆಯನ್ನು ತೆಗೆದು ವಿಚಾರಮಾಡಿ ನೋಡಿದರೆ ನನ್ನ ಸಂಬಂಧಿಯಾದ ಜ್ಞಾನವು ಉಂಟಾಗುತ್ತದೆ. ಎಂದನು. ಸೀತೆಯು ರಾಮನ ಈ ಮಾತನ್ನು ಕೇಳಿ ಸಂಜ್ಞಾನಪೆಟ್ಟಿಗೆಯನ್ನು ತೆಗೆದುಕೊಂಡಳು.

ನಿಜಹೃನ್ಮಂದಿರೇ ಸ್ಥಾಪ್ಯ ಬುದ್ಧಿದೃಷ್ಟ್ಯಾ ಮುಹುರ್ಮುಹುಃ ।
ಸಮ್ಯಗುದ್ಘಾಟ್ಯ ತೂಷ್ಣೀಂ ಸಾ ಮುಹೂರ್ತಮವಲೋಕಯತ್ ॥ ೨೫ ॥

ತದಾ ಜ್ಞಾತ್ವಾಥ ಸಕಲಾಂ ನಿಜಕ್ರೀಡಾಂ ವಿದೇಹಜಾ ।
ವಿಹಸ್ಯ ರಘುವೀರಸ್ಯ ಸಾ ನನಾಮಾಂಘ್ರಿಪಂಕಜೇ ॥ ೨೬ ॥

ಆನಂದನಿರ್ಭರಾ ಜಾತಾ ಸಾನಂದಾಶ್ರುಸಮನ್ವಿತಾ ।
ಆನಂದೋತ್ಫುಲ್ಲರೋಮಾಂಚ ತೂಷ್ಣೀಮಾಸೀತ್ತದಾ ಕ್ಷಣಂ ॥ ೨೭ ॥

ಆನಂದನಿರ್ಭರಾಂ ಸೀತಾಂ ದೃಷ್ಟ್ವಾ ತಾಂ ರಾಘವೋಬ್ರವೀತ್ ।
ಪೇಟಿಕಾಯಾಂ ತ್ವಯಾ ಸೀತೇ ಕಿಂ ದೃಷ್ಟಂ ತೋಷಕಾರಕಂ ॥ ೨೮ ॥

ಕಚ್ಚಿದ್ಗತಂ ತವಾಜ್ಞಾನಂ ಕಚ್ಚಿಲ್ಲಬ್ಧಂ ಮಮ ತ್ವಯಾ ।
ಸಂಜ್ಞಾನಂ ವದ ಮಾಂ ಸೀತೇ ಯಥಾ ಜ್ಞಾತಂ ತ್ವಯಾ ಹೃದಿ ॥ ೨೯ ॥

---

೨೫. ಆಕೆಯು ಆ ಪೆಟ್ಟಿಗೆಯನ್ನು ಹೃದಯವೆಂಬ ಮನೆಯಲ್ಲಿ ಇಟ್ಟು ಕೊಂಡು ಬುದ್ಧಿಯೆಂಬ ಕಣ್ಣಿನಿಂದ ಬಾರಿಬಾರಿಗೂ ತೆರೆದು ಚೆನ್ನಾಗಿ ಪರಿಶೀಲಿಸುತ್ತ ಕ್ಷಣಕಾಲ ನೋಡಿದಳು.

೨೬–೨೭. ಅನಂತರ ಆಕೆಯು ಅದರಲ್ಲಿ ಶ್ರೀರಾಮನ ಕ್ರೀಡೆಗಳನ್ನೆಲ್ಲಾ ಚೆನ್ನಾಗಿ ನೋಡಿ ನಕ್ಕು ರಾಮನ ಪಾದಗಳಿಗೆ ನಮಸ್ಕರಿಸಿದಳು. ಆನಂದದಿಂದ ಕೂಡಿದವಳಾಗಿ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸಿದಳು. ಆನಂದದಿಂದ ರೋಮಾಂಚಗಳೂ ಉಂಟಾದುವು. ಆಗ ಕ್ಷಣಕಾಲ ಸುಮ್ಮನೆ ಇದ್ದುಬಿಟ್ಟಳು.

೨೮. ಆನಂದದಿಂದ ತುಂಬಿಕೊಂಡಿರುವ ಸೀತೆಯನ್ನು ಈ ರಾಮನು ನೋಡಿ ಎಲೈ ಸೀತೆಯೇ ! ಪೆಟ್ಟಿಗೆಯಲ್ಲಿ ನಿನಗೆ ಸಂತೋಷವಾಗುವ ಪದಾರ್ಥಗಳು ಆವುವಾದರೂ ಕಂಡುವೇ ?

೨೯. ನಿನ್ನ ಅಜ್ಞಾನವೇನಾದರೂ ಸ್ವಲ್ಪವಾದರೂ ಹೋಯಿತೇ ? ನನ್ನ ಸಂಬಂಧವಾದ ಆತ್ಮಜ್ಞಾನವು ಸ್ವಲ್ಪವಾದರೂ ಸಿಕ್ಕಿತೆ ? ನೀನು ಆ ಹೃದಯವೆಂಬ ಪೆಟ್ಟಿಗೆಯಲ್ಲಿ ನೋಡಿದುದನ್ನು ಸ್ವಲ್ಪವನ್ನಾದರೂ ಹೇಳು.

ಜ್ಞಾತಂ ತ್ವಯಾ ವಾ ನ ಜ್ಞಾತಂ ವೇತ್ತುಮಿಚ್ಛಾಮಿ ತ್ವನ್ಮುಖಾತ್ ।
ಯದಿ ಕಿಂಚಿತ್ತ್ವಯಾ ನಾಸ್ಯಾಂ ಜ್ಞಾತಂ ತದ್ಬೋಧಯಾಮ್ಯಹಂ ॥ ೩೦ ॥

ಇತಿ ರಾಮವಚಃ ಶ್ರುತ್ವಾ ನಿಮಗ್ನಾನಂದಸಾಗರೇ ।
ಮಂಚಕಸ್ಥಾ ರಾಮಚಂದ್ರಂ ಜಾನಕೀ ವಾಕ್ಯಮಬ್ರವೀತ್ ॥ ೩೧ ॥

॥ ಶ್ರೀ ಸೀತೋವಾಚ ॥

ರಾಮ ರಾವಣದರ್ಪಘ್ನ ತ್ವದ್ದತ್ತಾಜ್ಞಾನಪೇಟಿಕಾ ।
ಮಯಾವಲೋಕಿತಾ ಬುದ್ಧ್ಯಾ ಲಬ್ಧಂ ಜ್ಞಾನಂ ತವ ಪ್ರಭೋ ॥ ೩೨ ॥

ನಿರ್ಗುಣೋ ನಿರ್ವಿಕಾಸ್ತ್ವಂ ಕ್ರೀಡೇಯಂ ಸಕಲಾ ತ್ವಯಾ ।
ಮತ್ಸಂಗಾದ್ದರ್ಶಿತಾ ಭೂಮ್ಯಾಂ ಕೃತ್ವಾ ಲೋಕಹಿತಾಯ ಹಿ ॥ ೩೩ ॥

---

೩೦. ಎಲೈ ಸೀತೆಯೇ! ನಿನಗೆ ತಿಳಿಯಿತೆ? ಅಥವಾ ಇಲ್ಲವೆ? ಎಂಬುದನ್ನು ನಿನ್ನ ಬಾಯಿಂದಲೇ ತಿಳಿಯಬೇಕೆಂದಿದ್ದೇನೆ. ನಿನಗೆ ಒಂದುವೇಳೆ ತಿಳಿಯದ ಪಕ್ಷದಲ್ಲಿ ಮತ್ತೆ ನಿನಗೆ ಅದನ್ನು ಬೋಧಿಸುತ್ತೇನೆ. ಎಂದನು.

೩೧. ರಾಮನ ಈ ಮಾತನ್ನು ಕೇಳಿ ಆನಂದಸಾಗರದಲ್ಲಿ ಮುಳುಗಿದ್ದ ಸೀತೆಯು ಮಂಚದಮೇಲೆ ಕುಳಿತಿದ್ದಂತೆಯೇ ರಾಮಚಂದ್ರನನ್ನು ಕುರಿತು ಇಂತೆಂದಳು.

೩೨. ಸೀತೆಯು ಹೇಳಿದಳು–ರಾವಣನ ದರ್ಪವನ್ನು ನಾಶಮಾಡಿದ ರಾಮನೇ! ನೀನು ನನಗೆ ಜ್ಞಾನದ ಪೆಟ್ಟಿಗೆಯನ್ನು ಕೊಟ್ಟೆ. ಅದರಲ್ಲಿ ಬುದ್ಧಿಯಿಂದಲೇ ಎಲ್ಲವನ್ನೂ ನೋಡಿದೆನು. ಅದರಿಂದ ನಿನ್ನ ಸಂಬಂಧವಾದ ಜ್ಞಾನವು ಸಿಕ್ಕಿತು.

೩೩. ನೀನು ನಿರ್ಗುಣನು. ವಿಕಾರವಿಲ್ಲದವನು. ಈ ಪ್ರಪಂಚವೆಲ್ಲವೂ ನಿನ್ನ ಕ್ರೀಡೆಯು. ನನ್ನ ಸಹಾಯದಿಂದ ನೀನು ಆ ಕ್ರಿಡೆಗಳನ್ನು ಲೋಕಹಿತಕ್ಕೋಸ್ಕರಲೇ ತೋರಿಸಿದ್ದೀಯೆ.

ಪೇಟಿಕಾಯಾಂ ಯಥಾ ಜ್ಞಾತಂ ಮಯಾ ತತ್ಪ್ರವದಾಮಿ ತೇ ।
ತ್ವಯಾ ಪಂಚದಶಶ್ಲೋಕೈರ್ಯದುಕ್ತಂ ಗುಹ್ಯಮುತ್ತಮಂ ॥ ೩೪ ॥

ಪ್ರಕಟಂ ತತ್ಕರೋಮ್ಯದ್ಯ ತವಾಗ್ರೇ ರಘುನಂದನ ।
ಸರ್ವೇಷಾಂ ಮಂದಬುದ್ಧೀನಾಂ ಹಿತಾಯ ಜ್ಞಾನಸಿದ್ಧಯೇ ॥ ೩೫ ॥

ಜನಾನಾಂ ಸಂಬೋಧಯಿತುಂ ಚರಿತ್ರಂ ಭವತಾತ್ರ ಯತ್ ।
ಕೃತಂ ತಸ್ಯ ವಿಚಾರೇಣ ಹ್ಯಾತ್ಮಜ್ಞಾನಂ ಲಭೇನ್ನರಃ ॥ ೩೬ ॥

ಸಚ್ಚಿದಾನಂದರೂಪೋ ಯೋ ವಿಷ್ಣುರ್ಜ್ಞೇಯಸ್ಸಸಾಗರಃ ।
ಭೂಭಾರಹರಣಾದೀಚ್ಛಾ ವಿಷ್ಣೋರ್ಯಾ ಜಾಯತೇ ಶುಭಾ ॥ ೩೭ ॥

ಸ ವೈ ಜ್ಞೇಯಸ್ತರಂಗೋತ್ರ ತಯಾತ್ಮಾಂಶಲವಶ್ಶುಭಃ ।
ಬಹಿಃ ಕೃತಾತ್ಸಾಗರಾತ್ಸ ಆತ್ಮಾಖ್ಯಃ ಕಥ್ಯತೇ ಭುವಿ ॥ ೩೮ ॥

---

೩೪. ಪೆಟ್ಟಿಗೆಯಲ್ಲಿ ನೋಡಿದುದರಿಂದ ನನಗೆ ಯಾವ ರೀತಿಯಾದ ತಿಳಿವಳಿಕೆಯುಂಟಾಯಿತೋ ಅದನ್ನು ಅದೇ ರೀತಿಯಾಗಿ ನಿನಗೆ ಹೇಳುತ್ತೇನೆ. ನೀನು ಹದಿನೈದು ಶ್ಲೋಕಗಳಿಂದ ಯಾವ ಉತ್ತಮವಾದ ಜ್ಞಾನವನ್ನು ಹೇಳಿದೆಯೋ ಅದೆಲ್ಲವನ್ನೂ ಹೇಳುತ್ತೇನೆ.

೩೫. ನಿನ್ನ ಎದುರಿನಲ್ಲಿಯೇ ಈಗಲೇ ಅದೆಲ್ಲವನ್ನೂ ಪ್ರಕಟಮಾಡುತ್ತೇನೆ. ಇದರಿಂದ ಲೋಕದಲ್ಲಿ ಮಂದಬುದ್ಧಿಗಳಿಗೆಲ್ಲರಿಗೂ ಜ್ಞಾನಸಿದ್ಧಿಯುಂಟಾಗಲಿ.

೩೬. ಜನಗಳಿಗೆಲ್ಲರಿಗೂ ತಿಳಿಯುವುದಕ್ಕೋಸ್ಕರ ನಿನ್ನ ಚರಿತ್ರೆಯನ್ನು ನೀನೇ ಮಾಡಿದ್ದೀಯೆ. ಇದರ ವಿಚಾರದಿಂದಲೇ ನರನಿಗೆ ಆತ್ಮಜ್ಞಾನವು ಉಂಟಾಗುವುದು.

೩೭. ಸಚ್ಚಿದಾನಂದರೂಪನಾದ ವಿಷ್ಣುವೇ ನೀನು ಹಿಂದೆ ಹೇಳಿದ ಸಾಗರವು. ಭೂಭಾರವನ್ನು ನಾಶಮಾಡುವುದಕ್ಕೋಸ್ಕರ ವಿಷ್ಣುವಿಗೆ ಉಂಟಾಗುವ ಇಚ್ಛೆಯೇ ತರಂಗವು.

೩೮-೪೧. ಆ ತರಂಗದಿಂದ ಹೊರಗೆ ಎಳೆಯಲ್ಪಟ್ಟ ಶುಭವಾದ ಆತ್ಮಾಂಶವೇ ಆ ಸಾಗರದಿಂದ ಹೊರಗೆ ಬಂದನಂತರ ಭೂಮಿಯಲ್ಲಿ ಆತ್ಮವೆಂದೆನಿಸಿ

ತಸ್ಯ ಬುದ್ಧಿಸ್ತು ಜನನೀ ಕೌಸಲ್ಯಾ ಸಾತ್ರ ಕಥ್ಯತೇ ।
ಶುದ್ಧ ತತ್ವಾಂತಃಕರಣಂ ಪಿತಾ ತಸ್ಯಾತ್ಮನಃ ಸ್ಮೃತಃ ॥ ೩೯ ॥

ರಾಜಾ ದಶರಥೋ ಜ್ಞೇಯಃ ಶ್ರೀವರ್ಮಾ ಸತ್ಯಪರಾಕ್ರಮಃ ।
ತಸ್ಯಾತ್ಮನಶ್ಚ ಚತ್ವಾರೋ ಭೇದಾಸ್ತೇ ಬಂಧವಃ ಸ್ಮೃತಾಃ ॥ ೪೦ ॥

ರಾಮಸೌಮಿತ್ರಿಭರತಶತ್ರುಘ್ನಾ ಏವ ಚಾತ್ರ ಹಿ ।
ತುರ್ಯಾವಸ್ಥಸ್ತೇಷು ವರಸ್ಸ ತ್ವಂ ದಶರಥಾತ್ಮಜಃ ॥ ೪೧ ॥

ತತೋ ಜಾಗ್ರದವಸ್ಥಶ್ಚ ಲಕ್ಷ್ಮಣಸ್ಸೋತ್ರ ಕಥ್ಯತೇ ।
ಸ್ವಪ್ನಾವಸ್ಥಸ್ತೃತೀಯಶ್ಚ ಭರತೋಽಪಿ ನಿಗದ್ಯತೇ ॥ ೪೨ ॥

ಅವರಸ್ಸುಷುಪ್ತ್ಯವಸ್ಥಸ್ತು ಜ್ಞೇಯಶ್ಶತ್ರುಘ್ನ ಏವ ಸಃ ।
ಹೃದಯಾಕಾಶಂ ತತ್ಸ್ಥಾನಮಯೋಧ್ಯಾತ್ರ ಸ್ಮೃತಾ ತು ಸಾ ॥ ೪೩ ॥

ಕೊಳ್ಳುತ್ತದೆ. ಅವನೇ ಶ್ರೀರಾಮನು. ಆ ಆತ್ಮನಿಗೆ ಬುದ್ಧಿಯೇ ಜನನಿಯು. ಆಕೆಯೇ ಕೌಸಲ್ಯೆಯು. ಶುದ್ಧ ತತ್ವಾಂತಃಕರಣವೇ ಆ ಆತ್ಮನಿಗೆ ತಂದೆಯು. ಅವನೇ ರಾಜನಾದ ದಶರಥನೆಂದು ಇಲ್ಲಿ ಹೇಳಲ್ಪಟ್ಟಿದೆ. ಆ ಆತ್ಮನ ನಾಲ್ಕು ಭೇದಗಳೇ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂದು ಹೇಳಲ್ಪಟ್ಟಿದೆ. ಅವರಲ್ಲಿ ತುರೀಯಾವಸ್ಥೆಯನ್ನು ಅನುಭವಿಸುವವನೇ ಶ್ರೇಷ್ಠನು. ಆತನೇ ಶ್ರೀರಾಮನಾದ ನೀನು.

೪೨–೪೩. ಜಾಗ್ರದವಸ್ಥೆಯೇ ಲಕ್ಷ್ಮಣನೆಂದು ಹೇಳಲ್ಪಟ್ಟಿದೆ. ಮೂರನೆಯದಾದ ಸ್ವಪ್ನಾವಸ್ಥೆಯೇ ಭರತನು. ಕೊನೆಯದಾದ ಸುಷುಪ್ತಿ ಅವಸ್ಥೆಯನ್ನು ಅನುಭವಿಸುವವನೇ ಶತ್ರುಘ್ನನೆಂದು ಹೇಳಲ್ಪಟ್ಟಿದೆ ಹೃದಯಾಕಾಶವೆಂಬ ಆ ಸ್ಥಾನವೇ ಅಯೋಧ್ಯೆಯು.

ಮನೋಯೋಗೋ ಬಹಿರ್ಯಾತ್ರಾ ವಿಶ್ವಾಮಿತ್ರಾಧ್ವರೇ ಗಮಃ ।
ಮನೋದುರ್ವೃತ್ತಿಘಾತಶ್ಚ ತಾಟಿಕಾಯಾ ವಧೋತ್ರ ಸಃ ॥ ೪೪ ॥

ಮನೋವೇಗಸ್ಯ ಯೋ ಭಂಗಸ್ಸ ಧನುರ್ಭಂಗ ಉಚ್ಯತೇ ।
ಮಾಯಾಯೋಗಸ್ತತಸ್ತಸ್ಯ ಮತ್ಪಾಣಿಗ್ರಹಣಂ ಸ್ಮೃತಂ ॥ ೪೫ ॥

ಪೂರ್ವಸಂಸ್ಕಾರನಿಗ್ರಹೋ ಜಾಮದಗ್ನೇರ್ವಿನಿಗ್ರಹಃ ।
ತತೋ ಕುಬುದ್ಧಿಹೇತೋರ್ಹಿ ಕೈಕೇಯ್ಯಾ ವರದಾನತಃ ॥ ೪೬ ॥

ಭವಾರಣ್ಯೇಟನಂ ಪ್ರೋಕ್ತಮಟನಂ ದಂಡಕೇತ್ರ ತೇ ।
ದಂಭಸ್ಯ ನಿಗ್ರಹಸ್ತತ್ರ ವಿರಾಧಸ್ಯಾತ್ರ ನಿಗ್ರಹಃ ॥ ೪೭ ॥

ಆತ್ಮನಃ ಪರ್ಣಕುಟಿಕಾ ಪಂಚಭೂತಾತ್ಮಕಶ್ಚಲಃ ।
ದೇಹೋ ಯಂ ಪಂಚವಟಿಕಾ ವಿಶ್ರಾಂತ್ಯರ್ಥಂ ತವಾತ್ರ ಸಾ ॥ ೪೮ ॥

---

೪೪. ಮನೋಯೋಗವೆಂಬುದೇ ಬಹಿರ್ಯಾತ್ರೆಯಾದ ವಿಶ್ವಾಮಿತ್ರನ ಯಾಗಕ್ಕೆ ಪ್ರಯಾಣಮಾಡುವಿಕೆಯು. ಮನಸ್ಸಿನ ದುರ್ವೃತ್ತಿಘಾತವೆಂಬುದೇ ತಾಟಕಾವಧೆಯು.

೪೫–೪೬. ಮನೋಯೋಗದ ಭಂಗವೇನೇ ಶಿವಧನುರ್ಭಂಗವೆನಿಸಿ ಕೊಂಡಿದೆ. ಆ ಆತ್ಮನಿಗೆ ಮಾಯಾಯೋಗವೆಂಬುದೇ ಸೀತಾಪರಿಗ್ರಹಣ ವೆಂದೆನಿಸಿಕೊಂಡಿದೆ. ಪೂರ್ವಸಂಸ್ಕಾರಗಳ ನಿಗ್ರಹವೇ ಜಾಮದಗ್ನಿ ರಾಮನ ನಿಗ್ರಹವು.

೪೭. ಕುಬುದ್ಧಿಯಿಂದ ಭವಾರಣ್ಯದಲ್ಲಿ ಸಂಚಾರವೆಂಬುದೇ ಕೈಕೇಯಿಗೆ ವರದಾನಮಾಡಿದುದರಿಂದ ಪ್ರಾಪ್ತವಾದ ದಂಡಕಾರಣ್ಯದಲ್ಲಿ ಮಾಡಿದ ಸಂಚಾರವು. ದಂಭದ ನಿಗ್ರಹವೆಂಬುದೇ ವಿರಾಧನವಧೆಯು.

೪೮. ಆತ್ಮನಿಗೆ ವಿಶ್ರಾಂತಿಗೋಸ್ಕರ ಪರ್ಣಶಾಲೆಯು ಪಂಚಭೂತಾತ್ಮಕ ವಾದುದು. ಅದೆಂಬುದೇ ರಾಮನು ವಿಶ್ರಾಂತಿಯನ್ನು ಅನುಭವಿಸಿದ ಪಂಚವಟಿಯು.

ಕಾಮಸ್ಯ ನಿಗ್ರಹಃ ಪ್ರೋಕ್ತಃ ಖರಸ್ಯಾತ್ರ ವಿನಿಗ್ರಹಃ ।
ಕ್ರೋಧಸ್ಯ ನಿಗ್ರಹಶ್ಚಾಪಿ ದೂಷಣಸ್ಯಾತ್ರ ನಿಗ್ರಹಃ ॥ ೪೯ ॥

ಲೋಭಸ್ಯ ಮರ್ದನಂ ತತ್ರ ತ್ರಿಶಿರಾನಿಗ್ರಹೋತ್ರ ಹಿ ।
ತತ್ರಾಶಾಕೃಂತನಂ ಪ್ರೋಕ್ತಂ ಬಾಣೇನಾತ್ರ ವಿರೂಪಣಂ ॥ ೫೦ ॥

ತಸ್ಯಾಶ್ಶೂರ್ಪಣಖಾಯಾಶ್ಚ ಮೋಹಸ್ಯ ನಿಗ್ರಹಃ ಸ್ಮೃತಃ ।
ಮೃಗಮಾರೀಚಘಾತೋತ್ರ ಶುದ್ಧಮಾಯಾಶ್ರಯಸ್ತತಃ ॥ ೫೧ ॥

ಮಮಾಶ್ರಯಸ್ತೇ ವಾಮಾಂಗೇ ಸಾತ್ವಿಕ್ಯಾ ದಂಡಕೇ ವನೇ ।
ರಜೋರೂಪಾ ತು ಯಾ ಮಾಯಾ ಜಠರಾಗ್ನೌ ಸ್ಮೃತಾ ಶುಭಾ ॥ ೫೨ ॥

ಮಮ ರಜಸ್ಸ್ವರೂಪಾಯಾಃ ಪ್ರವೇಶಶ್ಚಾನಲೇತ್ರ ಸಃ ।
ತಾಮಸ್ಯಾಶ್ಚೈವ ಮಾಯಾಯಾ ವಿಯೋಗಶ್ಚ ತದಾ ಸ್ಮೃತಃ ॥ ೫೩ ॥

ಮಮ ತಮಸ್ಸ್ವರೂಪಾಯಾ ಹರಣಂ ರಾವಣೇನ ಹಿ ।
ಸುಖಾಲಾಭೋ ಮಹಾಕ್ಲೇಶಸ್ತ್ವತ್ತೋ ಮದ್ವಿರಹಸ್ತ್ವವ ॥ ೫೪ ॥

೪೯–೫೧. ಕಾಮನಿಗ್ರಹವೆಂಬುದೇ ಇಲ್ಲಿ ಖರನವಧೆಯು. ಕ್ರೋಧದ ನಿಗ್ರಹವೆಂಬುದೇ ಇಲ್ಲಿ ದೂಷಣನ ನಿಗ್ರಹವು. ಲೋಭದಮರ್ದನವೆಂಬುದೇ ತ್ರಿಶಿರನ ನಿಗ್ರಹವು. ಅದರಲ್ಲಿ ಆಶೆಯುಖಂಡನವೆಂಬುದೇ ಶೂರ್ಪಣಖೆಯ ಕಿವಿ ಮೂಗುಗಳನ್ನು ಬಾಣದಿಂದ ಕುಯ್ದುದು ಮೋಹನಿಗ್ರಹವೆಂಬುದೇ ಮೃಗ ರೂಪನಾದ ಮಾರೀಚನ ಹನನವು.

೫೨–೫೪. ಶುದ್ಧಮಾಯಾಶ್ರಮವೆಂಬುದೇ ದಂಡಕಾರಣ್ಯದಲ್ಲಿ ನನ್ನನ್ನು ಎಂದರೆ ಸಾತ್ವಿಕೀಯ ಭಾಗವನ್ನು ವಾಗಮಾಂಗದಲ್ಲಿ ಧರಿಸಿದುದು. ರಜೋರೂಪವಾದ ಮಾಯೆಯು ಜಠರಾಗ್ನಿಯಲ್ಲಿ ಸೇರಿದುದೆಂದು ಹೇಳಲಾಗಿದೆಯಷ್ಟೆ ! ಅದೇನೇ ರಜೋರೂಪಳಾದ ನನ್ನ ಭಾಗವು ಅಗ್ನಿಯ ಪ್ರವೇಶಮಾಡಿದುದು. ತಾಮಸೀ ಮಾಯೆಯ ವಿಯೋಗವೆಂದು ಹೇಳಿದುದೇ ತಮಃಸ್ವರೂಪಳಾದ ನನ್ನನ್ನು ಅಪಹರಿಸಿಕೊಂಡು ಹೋದುದರಿಂದ ಆದ ವಿಯೋಗವು. ಸುಖಾಲಾಭದ ರೂಪವಾದ ಮಹಾಕ್ಲೇಶವೆಂಬುದೇ ನನ್ನನ್ನು ನೀನು ಅಗಲಿರುವುದು.

ಶೋಕಭಂಗಸ್ತತಃ ಪ್ರೋಕ್ತಃ ಕಬಂಧಸ್ಯ ವಧೋತ್ರ ಸಃ ।
ವಿವೇಕಸ್ಯಾಶ್ರಯಸ್ತತ್ರ ಸುಗ್ರೀವಸ್ಯಾಶ್ರಯೋತ್ರ ಸಃ ॥ ೫೫ ॥

ಭಕ್ತ್ಯುದ್ರೇಕಪ್ರಲಾಭಶ್ಚ ತವ ಲಾಭೋ ಹನೂಮತಃ ।
ಅವಿವೇಕವಧಃ ಪ್ರೋಕ್ತಶ್ಚಾತ್ರ ವಾಲಿವಧಸ್ತ್ವಯಾ ॥ ೫೬ ॥

ಉತ್ಸಾಹೇನ ತತಸ್ಸಂಗಸ್ಯಾದ್ವಿಭೀಷಣಮೈತ್ರಿಕೀ ।
ಅಜ್ಞಾನತರಣೋಪಾಯಸ್ಸೇತುಬಂಧೋ ಮಹೋದಧೌ ॥ ೫೭ ॥

ತ್ರಿಗುಣಾಶ್ರಯಗೇಹೇ ವೈ ಲಿಂಗದೇಹಾಹ್ವಯೇ ಶುಭೇ ।
ತ್ರಿಕೂಟಾಚಲಸಂಸ್ಥಾಯಾಂ ಲಂಕಾಯಾಂ ರಘುನಂದನ ॥ ೫೮ ॥

ಮದಸ್ಯ ನಿಗ್ರಹಸ್ತತ್ರ ಕುಂಭಕರ್ಣವಧಸ್ತ್ವಯಾ ।
ನಿಗ್ರಹೋ ಮತ್ಸರಸ್ಯಾಪಿ ಮೇಘನಾದವಧೋತ್ರ ಸಃ ॥ ೫೯ ॥

೫೫-೫೬. ಶೋಕಭಂಗವೆಂಬುದೇ ಕಬಂಧನವಧೆಯು. ಅನಂತರ ವಿವೇಕದ ಆಶ್ರಯವೆಂಬುದೇ ಸುಗ್ರೀವನನ್ನು ಆಶ್ರಯಿಸಿದುದಾಗಿದೆ. ಭಕ್ತಿಯ ಉದ್ರೇಕದ ಲಾಭವೆಂಬುದೇ ಹನುಮಂತನಿಂದ ನೀನಿರುವ ಜಾಗವನ್ನೂ ಸಮಾಚಾರವನ್ನೂ ತಿಳಿದುದು. ಅವಿವೇಕದ ವಧೆಯೆಂಬುದೇ ವಾಲಿವಧೆಯು.

೫೭. ಅನಂತರ ಉತ್ಸಾಹದ ಸಂಗಮವೆಂಬುದೇ ವಿಭೀಷಣನೊಡನೆ ಮೈತ್ರಿಯು ಅಜ್ಞಾನವನ್ನು ದಾಟುವುದರ ಉಪಾಯವೆಂಬುದೇ ಸಮುದ್ರದಲ್ಲಿ ಸೇತುವೆಕಟ್ಟುವಿಕೆಯು.

೫೮. ತ್ರಿಗುಣಾಶ್ರಯ ಗೇಹವೆಂಬುದೇ ತ್ರಿಕೂಟಾಚಲವು. ಆ ತ್ರಿಕೂಟಾಚಲದಲ್ಲಿರುವ ಲಂಕೆಯೇ ಲಿಂಗದೇಹವು.

೫೯-೬೦. ಅಲ್ಲಿ ಮದದ ನಿಗ್ರಹವೆಂಬುದೇ ಕುಂಭಕರ್ಣನ ವಧೆಯು. ಮತ್ಸರದ ನಿಗ್ರಹವೆಂಬುದೇ ಮೇಘನಾದನ ವಧೆಯು. ಅಲ್ಲಿ ಅಹಂಕಾರಘಾತ

ತತ್ರಾಹಂಕಾರಘಾತಶ್ಚ ರಾವಣಸ್ಯ ವಧಸ್ತ್ವಯಾ ।
ವಿಯೋಗೋ ಲಿಂಗದೇಹಸ್ಯ ಲಂಕಾತ್ಯಾಗಸ್ತ್ವಯಾತ್ರ ಸಃ ॥ ೬೦ ॥

ಮಾಯಾನಾಮೈಕ್ಯತಾ ಚಾಪಿ ತ್ರಿವಿಧಾಯಾ ಮಮೈಕ್ಯತಾ ।
ಹೃದಯಾಕಾಶಗಮನಮಯೋಧ್ಯಾಗಮನಂ ಪುನಃ ॥ ೬೧ ॥

ಆನಂದೈಕಸುಖಂ ತತ್ರ ರಾಜ್ಯಭೋಗಸ್ತ್ವಯಾತ್ರ ಹಿ ।
ಮಾಯಾತ್ಯಾಗಸ್ತತಶ್ಚೈವ ವಾಲ್ಮೀಕೇರಾಶ್ರಮೇ ಮಮ ॥ ೬೨ ॥

ತ್ಯಾಗೋಗ್ರೇ ಭಾವಿ ಶ್ರೀರಾಮ ತ್ವಯಾ ಸೋತ್ರ ಪ್ರಕಾಶಿತಃ ।
ಸಾತ್ವಿಕ್ಯಾಗ್ರಹಣಂ ಯಚ್ಚ ಪುನರ್ಮೇ ಗ್ರಹಣಂ ಸ್ಮೃತಂ ॥ ೬೩ ॥

ವೆಂಬುದೇ ರಾವಣನ ಹನನವು. ಲಿಂಗದೇಹದ ವಿಯೋಗವೆಂಬುದೇ ನೀನು ಲಂಕೆಯನ್ನು ಬಿಟ್ಟು ಹೊರಟುದು.

೬೧. ಮಾಯೆಯು ಐಕ್ಯವೆಂಬುದೇ ಮೂರು ವಿಧವಾಗಿ ಭಾಗವಾಗಿದ್ದ ನನ್ನ ಒಂದು ಗೂಡುವಿಕೆಯು. ಹೃದಯಾಕಾಶಗಮನವೆಂಬುದು ಅಯೋಧ್ಯೆಯನ್ನು ಕುರಿತು ಹೋದುದು.

೬೨. ಆನಂದೈಕಸುಖವೆಂಬುದು ಅಲ್ಲಿ ನೀನು ರಾಜ್ಯಭಾರವನ್ನು ವಹಿಸಿಕೊಂಡುದು. ಮತ್ತು ರಾಜ್ಯವನ್ನು ಆಳಿದುದು. ಮಾಯಾತ್ಯಾಗವೆಂಬುದು ನನ್ನನ್ನು ಮತ್ತೆ ವಾಲ್ಮೀಕಿಯ ಆಶ್ರಮದಲ್ಲಿ ಬಿಟ್ಟುದು.

೬೩. ಎಲೈ ರಾಮನೇ ! ನಿನಗೂ, ನನಗೂ, ಮುಂದೆ ಅಗಲುವಿಕೆಯುಂಟಾಗುತ್ತದೆ. ಅದನ್ನು ನೀನು ಈಗಲೇ ತೋರಿಸಿದೆ. ಸಾತ್ವಿಕೀ ಸೀತೆಯನ್ನು ನೀನು ಹಿಂದೆ ಹೊಂದಿದ್ದಂತೆಯೇ ಮತ್ತೆಯೂ ಅದನ್ನು ನೀನು ಧರಿಸುತ್ತೀಯೆ ಎಂಬುದಾಗಿ ತಿಳಿಯಿತು. ನನ್ನ ಸಂಬಂಧವಾದ ಸಾತ್ವಿಕೀ ಮಾಯೆಯು ನಿನ್ನೊಡನೆ ಸೇರಿದಾಗಲೇ ನೀನು ಯಾವುದಾದರೂ ಅಗಾಧವಾದ ಕೆಲಸಮಾಡತಕ್ಕದ್ದು.

ಸಾತ್ವಿಕ್ಯಾಮಾಯಯಾಸಾರ್ಧಂತವೋದ್ಯೋಗೋಮಯಾ ಸಹ ।
ತತಶ್ಚ ಹೃದಯಾಕಾಶಂ ಮಹಾಕಾಶೇ ವಿಲಾಪಯೇತ್ ॥ ೬೪ ॥

ಅಯೋಧ್ಯಾನಗರೀಮಗ್ರೇ ವೈಕುಂಠಂ ಪ್ರತಿನೇಷ್ಯಸಿ ।
ಪ್ರವೇಶನಂ ಸಾಗರೇ ಹಿ ಸಚ್ಚಿದಾನಂದ ಸಂಜ್ಞಿಕೇ ॥ ೬೫ ॥

ನರರೂಪಂ ಪರಿತ್ಯಜ್ಯ ವಿಷ್ಣುರೂಪಪ್ರದರ್ಶನಂ ।
ನೃಣಾಂ ತ್ವಯಾ ಸೈವ ಮುಕ್ತಿಸ್ಸಾಯುಜ್ಯಾತ್ಮನ ಈರಿತಾ ॥ ೬೬ ॥

ಏವಂ ಯದ್ಯತ್ತ್ವಯಾ ರಾಮ ಕೃತಂ ಕರ್ಮ ಶುಭಾಶುಭಂ ।
ತತ್ಸರ್ವಂ ಜನಬೋಧಾಯ ಸರ್ವೇಷಾಂ ಚ ಹಿತಾಯ ಹಿ ॥ ೬೭ ॥

ಕರ್ತವ್ಯಮಪ್ಯಕರ್ತವ್ಯಂ ಕರ್ಮಾತೀತಸ್ಯ ಕಿಂ ತವ ।
ನಿರ್ಗುಣಸ್ಯಾತ್ಮರೂಪಸ್ಯ ಸಚ್ಚಿದಾನಂದ ರೂಪಿಣಃ ॥ ೬೮ ॥

೬೪–೬೬. ಹೃದಯಕಾಶವನ್ನು ಮಹಾಕಾಶದಲ್ಲಿ ಸೇರಿಸಬೇಕೆಂದಿರುವೆಯಲ್ಲ! ಅದರ ವಿಷಯವೇನೆಂದರೆ ಮುಂದೆ ಅಯೋಧ್ಯಾನಗರಿಯನ್ನು ವೈಕುಂಠಕ್ಕೆ ತೆಗೆದುಕೊಂಡು ಹೋಗಿ ಸೇರಿಸುತ್ತೀಯೆ ಎಂದರ್ಥವಾಗುವುದು. ಸಾಗರಪ್ರವೇಶವೆಂಬುದು ನರರೂಪವನ್ನು ಬಿಟ್ಟು ಸಚ್ಚಿದಾನಂದರೂಪನಾದ ಆ ವಿಷ್ಣುವಿನಲ್ಲಿ ಅದನ್ನು ಪ್ರಕಾಶಪಡಿಸುವುದು. ಅದೇನೇ ಮನುಷ್ಯರಿಗೆ ಸಾಯುಜ್ಯಾತ್ಮಕವಾದ ಮುಕ್ತಿಯೆಂಬುದು ಎಂದು ತೋರಿಸಿದ್ದೀಯೆ.

೬೭. ಎಲೈ ರಾಮನೇ! ನೀನು ಮಾಡಿದ ಒಳ್ಳೆಯ ಮತ್ತು ಕೆಟ್ಟದಾದ ಯಾವ ಯಾವ ಕೆಲಸಗಳಿವೆಯೋ ಅವೆಲ್ಲವೂ ಕೂಡ ಜನಗಳಿಗೆ ಜ್ಞಾನೋದಯವನ್ನುಂಟುಮಾಡುವುದಕ್ಕೂ ಅವರ ಹಿತಕ್ಕೂ ಆಗುವುದಾಗಿದೆ.

೬೮. ನೀನು ಕರ್ಮಗಳಿಗೆ ಒಳಪಡದವನು. ನಿರ್ಗುಣನು. ಆತ್ಮರೂಪನು. ಸದ್ರೂಪನೂ, ಚಿದ್ರೂಪನೂ, ಆನಂದರೂಪನೂ, ಆಗಿದ್ದೀಯೆ. ನಿನಗೆ ಶುಭವಾಗಲಿ, ಅಶುಭವವಾಗಲಿ, ಮಾಡಬೇಕಾದುದಾಗಲೀ, ಮಾಡಬಾರದ್ದಾಗಲಿ ಇರುವುದಿಲ್ಲ.

ಇತ್ಥಂ ತ್ವಯೋಪದಿಷ್ಟಾ ಮೇ ಶುಭಾ ಸಂಜ್ಞಾನಪೇಟಿಕಾ ।
ಅಹಂ ತಸ್ಯಾ ವಿಚಾರೇಣ ಜೀವನ್ಮುಕ್ತಾ ನ ಸಂಶಯಃ ॥ ೯ ॥

ದೇಹೇ ರಾಮಾಯಣಂ ಸರ್ವಂ ಯತ್ತ್ವಯಾ ಮಮ ದರ್ಶಿತಂ ।
ಪಂಚದಶಶ್ಲೋಕರತ್ನೈಃ ಕಂಠೇ ತದ್ಧಾರವತ್ಕೃತಂ ॥ ೨೦ ॥

ಶ್ಲೋಕರತ್ನಮಯಂ ಯೋ ವೈ ಕಂಠೇ ಹಾರಂ ಬಿಭರ್ತಿ ಹಿ ।
ಜೀವನ್ಮುಕ್ತಃ ಕ್ಷಣಾದೇವ ಭವಿಷ್ಯತಿ ನರೋತ್ತಮಃ ॥ ೨೧ ॥

ದೇಹರಾಮಾಯಣಂ ನಾಮ ರಾಮ ಯತ್ಕಥಿತಂ ತ್ವಯಾ ।
ನೇದೃಶಂ ಕಥಿತಂ ಕೇನ ನಕೋಽಪ್ಯಗ್ರೇ ವದಿಷ್ಯತಿ ॥ ೨೨ ॥

---

೯. ಈ ರೀತಿಯಾದ ಶುಭವಾದ ಸಂಜ್ಞಾನ ಪೇಟಿಕೆಯನ್ನು ನನಗೆ ಉಪದೇಶಮಾಡಿದ್ದೀಯೆ. ನಾನು ಅದನ್ನು ವಿಚಾರಮಾಡಿ ತಿಳಿದುಕೊಂಡುದರಿಂದ ಜೀವನ್ಮುಕ್ತಳಾಗಿದ್ದೇನೆ.

೨೦. ಈ ದೇಹದಲ್ಲಿಯೇ ನೀನು ರಾಮಾಯಣವನ್ನೆಲ್ಲಾ ತೋರಿಸಿದೆ. ಹಾಗೆ ಆ ರಾಮಾಯಣತತ್ವವನ್ನು ತೋರಿಸಿದ ಹದಿನೈದುಶ್ಲೋಕ ರತ್ನಗಳನ್ನೂ ನಾನು ಕತ್ತಿನಲ್ಲಿ ಧರಿಸಿಕೊಳ್ಳುತ್ತೇನೆ.

೨೧. ಯಾವನು ನನಗೆ ಹೇಳಿದ ಈ ಶ್ಲೋಕರತ್ನಗಳನ್ನು ಕಂಠದಲ್ಲಿ ಧರಿಸಿಕೊಳ್ಳುವನೋ ಅವನು ಕ್ಷಣಕಾಲದಲ್ಲಿಯೇ ಜೀವನ್ಮುಕ್ತನಾಗಿ ನರೋತ್ತಮನಾಗುವನು.

೨೨. ಎಲೈ ರಾಮನೇ ! ನೀನು ನನಗೆ ಈ ದೇಹರಾಮಾಯಣವನ್ನು ಹೇಳಿದ್ದೀಯೆ. ಇಂತಹದನ್ನು ಒಬ್ಬನೂ ಇದುವರೆಗೂ ಹೇಳಿಲ್ಲ. ಮುಂದೆಯೂ ಕೂಡ ಒಬ್ಬನೂ ಹೇಳುವುದೂ ಇಲ್ಲ.

ಮಮ ಪ್ರೀತ್ಯೋಪದಿಷ್ಟಂ ಹಿ ತ್ವಯೈತದ್ರಘುನಂದನ ।
ಇತ್ಥಂ ಕೋಽಪಿ ನ ಜಾನಾತಿ ಬ್ರಹ್ಮಾದೀನಾಮಗೋಚರಂ ॥ ೭೩ ॥

ಗುಹ್ಯಂ ರಮ್ಯಂ ಸುದುರ್ಬೋಧಂ ಸ್ವಲ್ಪಂ ಜ್ಞಾನಪ್ರಕಾಶಕಂ ।
ದೇಹರಾಮಾಯಣಂ ಚೈತಚ್ಛ್ರವಣಾತ್ಪಾತಕಾಪಹಂ ॥ ೭೪ ॥

ಇತಿ ಸೀತಾವಚಃ ಶ್ರುತ್ವಾ ಪ್ರಹಸ್ಯ ರಾಘವೋಽಬ್ರವೀತ್ ।
ವಿದೇಹತನಯೇ ಸಾಧ್ವಿ ಧನ್ಯಾಸಿ ಗಜಗಾಮಿನಿ ॥ ೭೫ ॥

ಸಮ್ಯಗ್ವಿಚಾರಿತಾ ಬುದ್ಧ್ಯಾ ತ್ವಯಾ ಸಂಜ್ಞಾನಪೇಟಿಕಾ ।
ಕಿಂಚಿನ್ನ್ಯೂನಂ ತ್ವಯಾ ನೈವ ದೃಷ್ಟಮಸ್ಯಾಂ ಯಥಾ ಸ್ಥಿತಂ ॥ ೭೬ ॥

---

೭೩. ಎಲೈ ರಘುನಂದನನೇ! ನನ್ನಲ್ಲಿರುವ ಪ್ರೀತಿಯಿಂದ ನನಗೆ ಇದನ್ನು ಹೇಳಿದ್ದೀಯೆ. ಈ ರೀತಿಯಾದ ದೇಹ ರಾಮಾಯಣವು ಒಬ್ಬನಿಗೂ ತಿಳಿದಿಲ್ಲ. ಬ್ರಹ್ಮಾದಿಗಳಿಗೂ ಇದರ ತಿಳುವಳಿಕೆ ಇರುವುದಿಲ್ಲ.

೭೪. ಇದು ಗುಹ್ಯವಾದುದು. ಸುಂದರವಾದುದು. ಸುಲಭವಾಗಿ ತಿಳಿಯತಕ್ಕದ್ದು. ಸ್ವಲ್ಪವಾಗಿರುವುದು. ಜ್ಞಾನವನ್ನು ಪ್ರಕಾಶಿಸತಕ್ಕದ್ದು. ಈ ದೇಹ ರಾಮಾಯಣವನ್ನು ಕೇಳಿದರೇನೇ ಪಾಪವೆಲ್ಲವೂ ಹೋಗುತ್ತವೆ.

೭೫–೭೬. ರಾಮನು ಸೀತೆಯ ಈ ಮಾತನ್ನು ಕೇಳಿ ನಗುತ್ತ ಇಂತೆಂದನು. ಎಲೈ ವಿದೇಹತನಯಳಾದ ಸೀತೆಯೇ! ನೀನು ಧನ್ಯಳು. ನೀನು ಈ ಸಂಜ್ಞಾನಪೇಟಿಕೆಯನ್ನು ಬುದ್ಧಿಯಿಂದ ಚೆನ್ನಾಗಿ ವಿಚಾರಮಾಡಿ ತಿಳಿದಿದ್ದೀಯೆ. ಇದರಲ್ಲಿರುವ ವಿಷಯವನ್ನು ಸ್ವಲ್ಪವೂ ಬಿಟ್ಟಿಲ್ಲ. ಇದರಲ್ಲಿರುವಂತೆಯೇ ತಿಳಿದಿದ್ದೀಯೆ.

ಬುದ್ಧ್ಯಾ ಜ್ಞಾನಂ ಮಮ ಜ್ಞಾನಂ ಮೋಹಜಾಲನಿಕೃಂತನಂ ।
ದೇಹರಾಮಾಯಣಂ ನಾಮ ಕಥನೀಯಂ ನ ಕಸ್ಯಚಿತ್ ॥ ೭೭ ॥

ಏತದ್ಗುಹ್ಯತಮಂ ಪ್ರೋಕ್ತಂ ತವ ಪ್ರೀತ್ಯಾ ವಿದೇಹಜೇ ।
ದಾಂಭಿಕಾಯ ನ ದಾತವ್ಯಂ ನಾಸ್ತಿಕಾಯ ಶಠಾಯ ಚ ॥ ೭೮ ॥

ಅಭಕ್ತಾಯ ದ್ವಿಜದ್ವೇಷ್ಟ್ರೇ ಪರದಾರರತಾಯ ಚ ।
ಮಲಿನಾಯಾತಿಕ್ರೂರಾಯ ನಿಂದಕಾಯ ಜಡಾಯ ಚ ॥ ೭೯ ॥

ಕಲೌ ಚೈತತ್ತು ವೈ ಗುಹ್ಯಂ ಭವಿಷ್ಯತಿ ನ ಸಂಶಯಃ ।
ಸಹಸ್ರೇಷು ನರಃ ಕಶ್ಚಿತ್ ಜ್ಞಾಸ್ಯತ್ಯೇತನ್ನ ಸಂಶಯಃ ॥ ೮೦ ॥

---

೭೭. ಇದನ್ನು ಬುದ್ಧಿಯಿಂದ ವಿಚಾರಿಸಿದರೆ ಜ್ಞಾನವು ಉಂಟಾಗುತ್ತದೆ. ಅಜ್ಞಾನವು ನಾಶವಾಗುತ್ತದೆ. ಈ ನನ್ನ ಸಂಬಂಧವಾದ ಜ್ಞಾನವು ಮೋಹವನ್ನು ನಾಶಮಾಡುತ್ತದೆ. ಈ ದೇಹರಾಮಾಯಣವನ್ನು ಯಾರಿಗೂ ಹೇಳಬೇಡ.

೭೮-೭೯. ಎಲೈ ವಿದೇಹ ರಾಜಪುತ್ರಿಯೇ! ಇದು ಬಹು ಗುಹ್ಯವಾದುದು. ನಿನ್ನಲ್ಲಿರುವ ಪ್ರೀತಿಯಿಂದ ಇದನ್ನು ನಿನಗೆ ಹೇಳಿದ್ದೇನೆ. ಇದನ್ನು ದಾಂಭಿಕನಿಗಾಗಲಿ, ನಾಸ್ತಿಕನಿಗಾಗಲಿ, ಶಠನಿಗಾಗಲಿ ಹೇಳಕೂಡದು. ಅಲ್ಲದೆ ಭಕ್ತನಲ್ಲದವನಿಗೆ ಹೇಳಬಾರದು. ಬ್ರಾಹ್ಮಣನನ್ನು ದ್ವೇಷಮಾಡುವವನಿಗೆ ಹೇಳಬಾರದು. ಪರರ ಹೆಂಡಿರಲ್ಲಿ ರಮಿಸುವವನಿಗೆ ಹೇಳಬಾರದು. ಮಲಿನನಿಗೂ, ಬಹು ಕ್ರೂರನಿಗೂ ಹೇಳಬಾರದು. ಪರನಿಂದಕನಿಗೂ ಜಡನಿಗೂ ಹೇಳಬಾರದು.

೮೦. ಈ ದೇಹರಾಮಾಯಣವು ಕಲಿಯುಗದಲ್ಲಿ ಬಹು ಗುಟ್ಟಾಗಿರುವುದು. ತಿಳಿಯುವುದಿಲ್ಲ. ಇದರಲ್ಲಿ ಸಂಶಯವಿಲ್ಲ. ಇದನ್ನು ಸಾವಿರಾರು ಜನರಲ್ಲಿ ಯಾವನೋ ಒಬ್ಬನು ತಿಳಿದುಕೊಳ್ಳುತ್ತಾನೆ. ಇದರಲ್ಲಿ ಸಂದೇಹವೇ ಬೇಡ.

ಸರ್ವವೇದಾಂತಸಾರಂ ಹಿ ಮಯಾ ತೇ ಸಮುದೀರಿತಂ |
ದೇಹರಾಮಾಯಣಂ ಚೈತದ್ಭುಕ್ತಿಮುಕ್ತಿಪ್ರದಂ ವರಂ || ೮೧ ||

ಇತ್ಯುಕ್ತ್ವಾ ರಾಘವಸ್ಸೀತಾಂ ಪರ್ಯಂಕೇ ರತ್ನಮಂಡಿತೇ |
ಸುಷ್ವಾಪ ಸೀತಯಾ ರಾತ್ರೌ ದಾಸೀಭಿರ್ವೀಜಿತಸ್ಸುಖಂ || ೮೨ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ವಿಲಾಸಕಾಂಡೇ ದೇಹರಾಮಾಯಣಂ ನಾಮ
ತೃತೀಯಸ್ಸರ್ಗಸ್ಸಮಾಪ್ತಃ

---

೮೧. ಎಲ್ಲಾ ವೇದಾಂತಗಳ ಸಾರರೂಪವಾದ ಈ ದೇಹರಾಮಾಯಣವು ಭುಕ್ತಿಯನ್ನೂ ಮುಕ್ತಿಯನ್ನೂ ಕೊಡುತ್ತದೆ.

೮೨. ರಾಮನು ಸೀತೆಗೆ ಹೀಗೆಂದು ಹೇಳಿ ರತ್ನಖಚಿತವಾದ ಮಂಚದ ಮೇಲೆ ದಾಸಿಯರು ಸುಖವಾಗಿ ಬೀಸುತ್ತಿರಲು ಸುಖವಾಗಿ ಮಲಗಿಕೊಂಡನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ದೇಹರಾಮಾಯಣ
ಎಂಬ ಮೂರನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
॥ ಮೂರನೆಯ ಸರ್ಗದ ಸಾರಾಂಶವು ॥

ಒಂದುಸಾರಿ ಸೀತೆಯು ಶ್ರೀರಾಮನನ್ನು ಕುರಿತು ತನಗೆ ಆತ್ಮಬೋಧೆವನ್ನು ಉಪದೇಶಿಸಬೇಕೆಂದು ಕೇಳಲು ಆತನು ಹದಿನೈದು ಶ್ಲೋಕಗಳಿಂದ ಅದನ್ನು ಬೋಧಿಸಿದನು. ಇದರಿಂದ ಆಕೆಯು ಆತ್ಮನ ವಿಷಯವನ್ನು ತಿಳಿದುಕೊಂಡುದಲ್ಲದೆ ರಾಮನೇ ಆತ್ಮನೆಂದೂ ಅವನಿಗೆ ಸೀತೆಯಾದ ತನ್ನ ಸಂಬಂಧವೇ ಮಾಯಾಸಂಬಂಧವೆಂದೂ ತಿಳಿಯುತ್ತ ಒಟ್ಟು ರಾಮಾಯಣವನ್ನೇ ಆತ್ಮಜ್ಞಾನದ ವಿಷಯವನ್ನಾಗಿ ತಿಳಿದುಕೊಂಡಳು. ಮತ್ತು ಮುಕ್ತಿಯನ್ನು ಹೊಂದುವ ರೀತಿಯನ್ನೂ ಅದರ ಸ್ವರೂಪವನ್ನೂ ತಿಳಿದುಕೊಂಡಳು. ಅಲ್ಲದೆ ತನಗೆ ಮುಂದುಂಟಾಗುವ ವಿಯೋಗವನ್ನೂ ತಿಳಿದಳು.

ಇದರಿಂದ ಆಕೆಯ ಅಜ್ಞಾನವು ನಾಶವಾಗಿ ತನ್ನ ಧನ್ಯವಾದವನ್ನು ಶ್ರೀರಾಮನಿಗೆ ಅರ್ಪಿಸಿದಳು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

॥ ಚತುರ್ಥಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಚತುರ್ನಾಡ್ಯವಶಿಷ್ಟಾಯಾಂ ನಿಶಾಯಾಂ ರಘುನಾಯಕಂ ।
ಉದ್ಬೋಧನಾರ್ಥಂ ಸಂಪ್ರಾಪ್ತಾ ರತಿಶಾಲಾಬಹಿಃ ಸ್ಥಿತಾಃ ॥ ೧ ॥

ವಂದಿನೋ ಮಾಗಧಾಸ್ಸೂತಾ ನರ್ತಕ್ಯಶ್ಚ ನಟಾದಯಃ ।
ವಾದಯಾಮಾಸುರ್ವಾದ್ಯಾನಿ ನನೃತುಶ್ಚಾಪ್ಸರೋಗಣಾಃ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
ನಾಲ್ಕನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀರಾಮನು ಸುಖವಾಗಿ ಮಲಗಿ ನಿದ್ರಿಸುತ್ತಿರಲು ರಾತ್ರಿಯು ಇನ್ನೂ ನಾಲ್ಕುಗಳಿಗೆಯ ಕಾಲ ಉಳಿದಿದೆ ಎನ್ನುವಾಗಲೇ ಆ ಶ್ರೀರಾಮನನ್ನು ಎಚ್ಚರಗೊಳಿಸಲು ರತಿಶಾಲೆಯಿಂದ ಹೊರಗಡೆಯಲ್ಲಿ ವಂದಿಮಾಗಧರು ಬಂದು ನಿಂತರು.

೨. ವಂದಿಗಳೂ, ಮಾಗಧರೂ, ಸೂತರೂ, ನರ್ತಕಿಗಳೂ, ನಟರೂ, ಇವರೆಲ್ಲರೂ, ಆ ಹೊರಗಡೆಯಲ್ಲಿ ಒಟ್ಟುಗೂಡಿದರು. ಆ ರಾಮನಿಗೆ ಎಚ್ಚರವಾಗುವುದಕ್ಕೋಸ್ಕರ ಕೆಲವರು ವಾದ್ಯಗಳನ್ನು ಬಾರಿಸಿದರು. ಕೆಲವರು ಊದಿದರು. ಅಪ್ಸರಸ್ತ್ರೀಯರು ನರ್ತನಮಾಡಿದರು.

ಜಗುರ್ಮಂಗಳಗೀತಾನಿ ಸ್ತೋತ್ರಾಣಿ ವಿವಿಧಾನಿ ಚ ।
ಪ್ರಾಭಾತಿಕೀಂ ಸ್ತುತಿಂ ಪ್ರೋಚುಃ ಕಲಕಂಠೈರ್ಮನೋರಮೈಃ ॥ ೩ ॥

ವಿಘ್ನೇಶ್ವರಸ್ಸಕಲವಿಘ್ನವಿನಾಶದಕ್ಷೋ
ದಕ್ಷಾತ್ಮಜಾ ಭಗವತೀ ಚ ಸರಸ್ವತೀ ಚ ।
ದೃಪ್ತಾಷ್ಟಭೈರವಗಣಾ ನವದಿವ್ಯದುರ್ಗಾ
ದೇಯಾತ್ಸುರಾಸ್ತು ನೃಪತೇ ತವ ಸುಪ್ರಭಾತಂ ॥ ೪ ॥

ಭಾನುಶ್ಶಶೀಕುಜಬುಧೌ ಗುರುಶುಕ್ರಮಂದಾ
ರಾಹುಸ್ಸಕೇತುರದಿತಿರ್ದಿತಿರಾದಿತೇಯಾಃ ।
ಶಕ್ರಾದಯಃ ಕಮಲಭೂಃ ಪುರುಷೋತ್ತಮೋಂದ್ರೋ
ರುದ್ರಃ ಕರೋತು ಸತತಂ ತವ ಸುಪ್ರಭಾತಂ ॥ ೫ ॥

---

೩. ಕೆಲವರು ಮಧುರವಾದ ಮಂಗಳಗೀತೆಗಳನ್ನು ಹಾಡಿದರು. ಕೆಲವರು ಬಗೆಬಗೆಯಾದ ಸ್ತೋತ್ರಗಳನ್ನು ಹೇಳಿದರು. ಕೆಲವರು ಪ್ರಭಾತಕಾಲದಲ್ಲಿ ಹೇಳುವ ಮನೋಹರವಾದ ಸ್ತುತಿಗಳಿಂದ ಸ್ತುತಿಸಿದರು.

೪. ವಿಘ್ನಗಳೆಲ್ಲವನ್ನೂ ನಾಶಮಾಡುವುದರಲ್ಲಿ ಸಮರ್ಥನಾದ ವಿಘ್ನೇಶ್ವರನೂ ದಕ್ಷನಮಗಳಾದ ದಾಕ್ಷಾಯಣಿಯೂ, ಭಗವತಿಯಾದ ಸರಸ್ವತಿಯೂ, ಮದಯುಕ್ತರಾದ ಅಷ್ಟಭೈರವರೂ ನವದುರ್ಗೆಯರೂ ದೇವತೆಗಳೂ ಕೂಡ ಎಲೈ ರಾಮನೇ! ನಿನಗೆ ಸುಪ್ರಭಾತವನ್ನು ಉಂಟುಮಾಡಲಿ.

೫. ಸೂರ್ಯ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು, ಅದಿತಿ, ದಿತಿ, ಇಂದ್ರನೇ ಮುಂತಾದ ದೇವತೆಗಳು, ಬ್ರಹ್ಮ, ವಿಷ್ಣು, ರುದ್ರ ಇವರೆಲ್ಲರೂ ನಿನಗೆ ಸುಪ್ರಭಾತವನ್ನು ಉಂಟುಮಾಡಲಿ.

ಪೃಥ್ವೀ ಜಲಂ ಜ್ವಲನಮಾರುತಪುಷ್ಕರಾಣಿ
ಸಪ್ತಾದ್ರಯೋಽಪಿ ಭುವನಾನಿ ಚತುರ್ದಶೈವ ।
ಶೈಲಾ ವನಾನಿ ಸರಿತಃ ಪರಿತಃ ಪವಿತ್ರಾ
ಗಂಗಾದಯೋ ವಿದಧತಾಂ ತವ ಸುಪ್ರಭಾತಂ ॥ ೬ ॥

ದಿಕ್ಚಕ್ರಮೇತದಖಿಲಂ ದ್ವಿರದಾ ದಿಶಶ್ಚ
ನಾಗಾಸ್ಸುಪರ್ಣಭುಜಗಾ ನಗವೀರುಧಶ್ಚ ।
ಪುಣ್ಯಾನಿ ದೇವಸದನಾನಿ ಬಿಲಾನಿ ದಿವ್ಯಾ
ನ್ಯವ್ಯಾಹತಂ ವಿದಧತಾಂ ತವ ಸುಪ್ರಭಾತಂ ॥ ೭ ॥

ವೇದಾಷ್ಷಡಂಗಸಹಿತಾಃ ಸ್ಮೃತಯಃ ಪುರಾಣಂ
ಕಾವ್ಯಂ ಸದಾಗಮುಪಥೋ ಮುನಯೋಽಪಿ ದಿವ್ಯಾಃ ।
ವ್ಯಾಸಾದಯಃ ಪರಮಕಾರುಣಿಕಾ ಋಷೀಣಾಂ
ಗೋತ್ರಾಣಿ ವೈ ವಿದಧತಾಂ ತವ ಸುಪ್ರಭಾತಂ ॥ ೮ ॥

---

೬. ಭೂಮಿ, ನೀರು, ಅಗ್ನಿ, ವಾಯು, ಆಕಾಶ, ರೂಪವಾದ ಪಂಚಭೂತಗಳು, ಸಪ್ತಕುಲಪರ್ವತಗಳು, ಚತುರ್ದಶ ಭುವನಗಳು, ಬೆಟ್ಟಗಳು, ವನಗಳು, ಗಂಗೆಯೇ ಮುಂತಾದ ಪವಿತ್ರವಾದ ನದಿಗಳು ನಿನಗೆ ಸುಪ್ರಭಾತವನ್ನು ಉಂಟುಮಾಡಲಿ.

೭. ದಿಕ್ಕುಗಳು, ದಿಗ್ಗಜಗಳು, ದಿಗೀಶರು, ಸುಪರ್ಣರು, ಸರ್ಪಗಳು, ಬಳ್ಳಿಗಳು, ಪುಣ್ಯವಾದ ದೇವಸ್ಥಾನಗಳು, ದಿವ್ಯವಾದ ಗುಹೆಗಳು, ಇವೆಲ್ಲವೂ ನಿನಗೆ ಉತ್ತಮವಾದ ಸುಪ್ರಭಾತವನ್ನು ಉಂಟುಮಾಡಲಿ.

೮. ವೇದಗಳು, ಅವುಗಳ ಆರು ಅಂಗಗಳು, ಸ್ಮೃತಿಗಳು, ಪುರಾಣಗಳು, ಕಾವ್ಯಗಳು, ದೇವಮುನಿಗಳು, ವ್ಯಾಸಾದಿ ಋಷಿಗಳು ಪರಮಕಾರುಣಿಕರಾದ ಋಷಿಗಳು ಆ ಋಷಿಗಳ ಗೋತ್ರದವರು ಇವರೆಲ್ಲರೂ ನಿನಗೆ ಸುಪ್ರಭಾತ ವನ್ನುಂಟುಮಾಡಲಿ.

ಇತಿ ಬಂದಿಜನೈಸ್ಸೂತೈಃ ಸ್ತೋತ್ರೈರ್ಗೀತಾದಿಭಿಸ್ತುತಃ ।
ನಾನಾಪಕ್ಷಿಸಮೂಹೈಶ್ಚ ಪೂರ್ವೋಕ್ತೈಃ ಪಂಜರಸ್ಥಿತೈಃ ॥ ೯ ॥

ಸ್ತುತೋ ವಾದಿತ್ರ ನಿನದೈರ್ನವವಾದ್ಯಸ್ವನೈರಪಿ ।
ಸುಪ್ರಬುದ್ಧೋ ಬಭೂವಾಥ ರಾಮಚಂದ್ರಸ್ಸಸೀತಯಾ ॥ ೧೦ ॥

ಆದೌ ಪ್ರಬುದ್ಧಾ ಸಾ ಸೀತಾ ಪಶ್ಚಾದ್ಬುದ್ಧೋ ರಘೂತ್ತಮಃ ।
ರಾಮಸ್ಸುರಾನ್ ಮುನೀನ್ ತಾತಂ ಮಾತರಂ ಸರಯೂಂ ಗುರುಂ ॥ ೧೧ ॥

ಚಿಂತಾಮಣಿಂ ಕಾಮಧೇನುಂ ಚಿಂತಯಾಮಾಸ ಚೇತಸಿ ।
ತತಸ್ಸೀತಾಪಿ ಸಾ ದುರ್ಗಾಂ ಗಂಗಾಂ ವಾಣೀಂ ರಘೂತ್ತಮಂ ॥ ೧೨ ॥

ಚಿಂತಯಾಮಾಸ ಕೌಸಲ್ಯಾಂ ಗುರುಪತ್ನೀಂ ಸ್ವಮಾತರಂ ।
ತತೋ ನತ್ವಾ ರಾಮಚಂದ್ರಂ ವಿನಯಾವನತಾ ಸ್ಥಿತಾ ॥ ೧೩ ॥

---

೯. ವಂದಿಗಳಿಂದಲೂ, ಸೂತರಿಂದಲೂ, ಮಾಗಧರಿಂದಲೂ, ಈ ರೀತಿಯಾಗಿ ಸ್ತುತಿಸಲ್ಪಟ್ಟನಲ್ಲದೆ ಹಿಂದೆ ಹೇಳಿದಂತೆ ಪಂಜರದೊಳಗಿದ್ದ ಹಕ್ಕಿಗಳಿಂದಲೂ ಕೂಡ ಸ್ತುತಿಸಲ್ಪಟ್ಟನು.

೧೦. ವೀಣೆಯೇ ಮುಂತಾದ ವಾದ್ಯಧ್ವನಿಗಳಿಂದಲೂ, ದಿವ್ಯಧ್ವನಿಗಳಿಂದಲೂ, ಮಂಗಳಘೋಷದಿಂದಲೂ, ಸ್ತುತಿಸಲ್ಪಟ್ಟವನಾಗಿ ರಾಮಚಂದ್ರನು ಆ ಸೀತೆಯೊಡನೆ ಎಚ್ಚರಗೊಂಡನು.

೧೧. ಮೊದಲು ಸೀತೆಗೆ ಎಚ್ಚರವಾಗಿ ಎದ್ದಳು. ಅನಂತರ ಶ್ರೀರಾಮನಿಗೆ ಎಚ್ಚರವಾಗಿ ಎದ್ದನು. ಆಗ ಶ್ರೀರಾಮನು ದೇವತೆಗಳನ್ನೂ, ಮುನಿಗಳನ್ನೂ, ತಾಯಿತಂದೆಗಳನ್ನೂ, ಸರಯೂ ನದಿಯನ್ನೂ, ಗುರುವನ್ನೂ, ಚಿಂತಾಮಣಿಯನ್ನೂ, ಕಾಮಧೇನುವನ್ನೂ, ಮನಸ್ಸಿನಲ್ಲಿಯೇ ಸ್ಮರಿಸಿದನು.

೧೨-೧೩. ಸೀತೆಯೂ ಕೂಡ ದುರ್ಗೆ, ಗಂಗೆ, ಸರಸ್ವತಿ, ರಘೋತ್ತಮನಾದ ರಾಮ, ಕೌಸಲ್ಯೆ, ಗುರುಪತ್ನಿಯಾದ ಅರುಂಧತಿ, ತನ್ನ ತಾಯಿ ಇವರನ್ನು ಸ್ಮರಿಸಿ, ರಾಮಚಂದ್ರನಿಗೆ ನಮಸ್ಕರಿಸಿ ವಿನಯದಿಂದ ನಿಂತುಕೊಂಡಳು.

ಅವಶ್ಯಕಂ ತು ಸಂಪಾದ್ಯ ಕೃತ್ವಾ ಶೌಚವಿಧಿಂ ಕ್ರಮಾತ್ ।
ದಂತಶುದ್ಧಿಂ ಚಕಾರಾಥ ರಾಮಚಂದ್ರಸ್ಸವಿಸ್ತರಾಂ ॥ ೧೪ ॥

ತತಃ ಸ್ನಾತ್ವಾ ರಮ್ಯತೀರ್ಥಂ ಕೃತ್ವಾ ನಿತ್ಯವಿಧಿಂ ಶುಭಂ ।
ಹುತ್ವಾಗ್ನಿಹೋತ್ರಂ ವಿಧಿನಾ ಕೃತ್ವಾ ದೇವಾರ್ಚನಂ ಗೃಹೇ ॥ ೧೫ ॥

ದದೌ ದಾನಾನ್ಯನೇಕಾನಿ ಬ್ರಾಹ್ಮಣೇಭ್ಯೋ ಯಥಾಕ್ರಮಂ ।
ಏತಸ್ಮಿನ್ನಂತರೇ ಸೀತಾ ಸ್ನಾತ್ವಾ ದೇವೀಂ ಪ್ರಪೂಜ್ಯ ಚ ॥ ೧೬ ॥

ದೇವಾನಗ್ನೀನ್ ದ್ವಿಜಾನ್ನತ್ವಾ ಶ್ವಶ್ರೂರ್ನತ್ವಾ ಯಥಾಕ್ರಮಂ ।
ತತೋ ನತ್ವಾ ರಾಮಚಂದ್ರಂ ತತ್ಪಾರ್ಶ್ವೇ ಯತ್ನತಃ ಸ್ಥಿತಾ ॥ ೧೭ ॥

---

೧೪. ರಾಮನು ಜಲಬಾಧೆ ಮಲಬಾಧೆಗಳನ್ನು ನಿವೃತ್ತಿಮಾಡಿಕೊಂಡು ಶೌಚಾಚಾರವಿಧಿಗಳನ್ನು ಮುಗಿಸಿಕೊಂಡು ಅನಂತರ ದಂತಶುದ್ಧಿಯನ್ನು ಮಾಡಿಕೊಂಡನು.

೧೫. ಅನಂತರ ತನ್ನ ಹೆಸರಿನ ರಾಮತೀರ್ಥದಲ್ಲಿ ಸ್ನಾನಮಾಡಿ ನಿತ್ಯ ವಿಧಿಗಳನ್ನು ಮಾಡಿಕೊಂಡು ಅಗ್ನಿಹೋತ್ರವನ್ನು ಮಾಡಿ ದೇವತಾರ್ಚನೆಯನ್ನೂ ಮಾಡಿದನು. ಅನಂತರ ಅನೇಕ ಬಗೆಯಾದ ದಾನಗಳನ್ನು ಬ್ರಾಹ್ಮಣರಿಗೆ ಕೊಟ್ಟನು.

೧೬–೧೭. ಇಷ್ಟರೊಳಗೆ ಸೀತೆಯು ಸ್ನಾನಮಾಡಿ, ಗೌರಿಯ ಪೂಜೆಯನ್ನು ಮಾಡಿ, ದೇವತೆಗಳನ್ನೂ ಬ್ರಾಹ್ಮಣರನ್ನೂ ಅಗ್ನಿಯನ್ನೂ ಅತ್ತೆಯರನ್ನೂ ನಮಸ್ಕರಿಸಿ, ಅನಂತರ ರಾಮಚಂದ್ರನಿಗೆ ನಮಸ್ಕರಿಸಿ ಅವನ ಪಕ್ಕದಲ್ಲಿ ನಿಂತುಕೊಂಡಳು

ಅಥ ರಾಮೋ ವಸಿಷ್ಠಸ್ಯ ಮುಖಾತ್ಪೌರಾಣಿಕೀಂ ಕಥಾಂ ।
ಸೀತಯಾ ಮಾತೃಭಿರ್ಯುಕ್ತೋ ಬಂಧುಭಿಶ್ಚ ಸುಹೃಜ್ಜನೈಃ ॥ ೧೮ ॥

ಸಮ್ಯಕ್ ಶ್ರುತ್ವೈಕಚಿತ್ತೇನ ಪೂಜಯಾಮಾಸ ತಂ ಗುರುಂ ।
ತತೋ ನತ್ವಾ ಗುರುಂ ರಾಮೋ ಗುರುಪತ್ನೀಂ ಚ ಮಾತರಂ ॥ ೧೯ ॥

ಸರ್ವಾ ಮಾತ್ಯಾಂಶ್ಚ ವಿಪ್ರಾಂಶ್ಚ ಪಂಡಿತಾನ್ ವೈದಿಕಾನ್ಮುನೀನ್ ।
ಯೋಗನಿಷ್ಠಾಂಸ್ತಪೋನಿಷ್ಠಾನ್ ವಿಪ್ರಾನ್ ಜ್ಯೋತಿರ್ವಿದಸ್ತಥಾ ॥ ೨೦ ॥

ಮೀಮಾಂಸಕಾಂಸ್ತಾರ್ಕಿಕಾಂಶ್ಚ ಮಂತ್ರಶಾಸ್ತ್ರವಿಶಾರದಾನ್ ।
ಧರ್ಮಶಾಸ್ತ್ರವಿದಶ್ಚೈವ ವಂದ್ಯಾನನ್ಯಾನ್ವಯೋಧಿಕಾನ್ ॥ ೨೧ ॥

ಪೂಜಯಾಮಾಸ ಶ್ರೀರಾಮಸ್ಸೀತಯಾ ಪ್ರಣನಾಮ ತಾನ್ ।
ಅಥ ಸೀತಾ ಹೇಮಪಾತ್ರೇ ಪೂಜೋಪಕರಣಾನಿ ಸಾ ॥ ೨೨ ॥

೧೮-೧೯. ಅನಂತರ ಶ್ರೀರಾಮನು ಸೀತೆಯೊಡನೆಯೂ ತಾಯಿಯರೊಡನೆಯೂ, ತಮ್ಮಂದಿರೊಡನೆಯೂ, ಸ್ನೇಹಿತರೊಡನೆಯೂ ಕೂಡಿಕೊಂಡು ವಸಿಷ್ಠನಿಂದ ಪುರಾಣದ ಕಥೆಯನ್ನು ಕೇಳಿದನು.

೨೦-೨೧. ಅನಂತರ ತನ್ನ ತಾಯಿಯರಿಗೆಲ್ಲ ನಮಸ್ಕರಿಸಿದನು. ಪಂಡಿತರಿಗೂ, ಮುನಿಗಳಿಗೂ, ವೈದಿಕರಿಗೂ ನಮಸ್ಕರಿಸಿದನು. ಯೋಗಿಗಳಿಗೂ ತಪಸ್ವಿಗಳಿಗೂ, ನಮಸ್ಕರಿಸಿದನು. ವಿಪ್ರರಿಗೂ, ಜೋಯಿಸರಿಗೂ ನಮಸ್ಕರಿಸಿದನು. ಮೀಮಾಂಸಕರು, ತಾರ್ಕಿಕರು, ಮಂತ್ರಶಾಸ್ತ್ರವನ್ನು ಬಲ್ಲವರು ಧರ್ಮಶಾಸ್ತ್ರವನ್ನು ಬಲ್ಲವರು, ಇನ್ನೂ ಯಾರು ಯಾರು ಪೂಜ್ಯರಿರುವರೋ ಅವರನ್ನೂ ವಯಸ್ಸಿನಿಂದ ದೊಡ್ಡವರಾದವರನ್ನೂ ಇವರೆಲ್ಲರನ್ನೂ ಗೌರವಿಸಿ ಅವರಿಗೆ ಸೀತೆಯೊಡನೆ ನಮಸ್ಕರಿಸಿದನು.

೨೨-೨೪. ಸೀತೆಯು ಚಿನ್ನದ ತಟ್ಟೆಯಲ್ಲಿ ಪೂಜೆಯ ಪದಾರ್ಥಗಳನ್ನಿಟ್ಟುಕೊಂಡು ತನ್ನ ಸಖಿಯರನ್ನೂ ಕರೆದುಕೊಂಡು ಹೋಗಿ ಅವರೊಡನೆ

ಗೃಹೀತ್ವಾ ಸ್ವಸಖೀಭಿಶ್ಚ ನತ್ವಾ ಸುರಭಿಮರ್ಚಯತ್ ।
ನಾನೋಪಚಾರೈಸ್ಸಂಪೂಜ್ಯ ಪಕ್ವಾನ್ನೈರ್ವಹ್ನಿನಿರ್ಮಿತೈಃ ॥ ೨೩ ॥

ವಿಚಿತ್ರೈಃ ಪಾಯಸಾದ್ಯೈಶ್ಚ ಸಾ ತಾಂ ಧೇನುಮತೋಷಯತ್ ।
ತತಃ ಪ್ರದಕ್ಷಿಣಂ ಕೃತ್ವಾ ಪ್ರಾರ್ಥಯಾಮಾಸ ಜಾನಕೀ ॥ ೨೪ ॥

ಕಾಮಧೇನೋ ನಮಸ್ತುಭ್ಯಂ ಪಕ್ವಾನ್ನಾದೀನಿ ವೇಗತಃ ।
ದಿವ್ಯಾನ್ನಾನಿ ಭೂಸುರೇಭ್ಯೋ ರಾಮಾದಿಭ್ಯಸ್ತ್ವಮರ್ಪಯ ॥ ೨೫ ॥

ಇತಿ ಸಾ ಪ್ರಾರ್ಥನಾಂ ಕೃತ್ವಾ ಕಾಮಧೇನೋಸ್ತು ಜಾನಕೀ ।
ತದಧೋ ರುಕ್ಮಪಾತ್ರಾಣಿ ಸ್ಥಾಪಯಾಮಾಸ ಕೋಟಿಶಃ ॥ ೨೬ ॥

ಕಾಮಧೇನುವನ್ನು ಪೂಜಿಸಿ ಬಗೆ ಬಗೆಯ ಉಪಚಾರಗಳಿಂದಲೂ, ಬೆಂಕಿಯಿಂದ ಬೇಯಿಸಿಮಾಡಿದ ಅನೇಕ ಬಗೆಯಾದ ಅನ್ನಗಳನ್ನು ನಿವೇದಿಸಿಯೂ ಬಗೆ ಬಗೆಯ ಪಾಯಸಗಳಿಂದಲೂ ಕೂಡ, ಆ ಕಾಮಧೇನುವನ್ನು ಸಂತೋಷ ಪಡಿಸಿದಳು. ಅನಂತರ ಆ ಹಸುವಿಗೆ ಪ್ರದಕ್ಷಿಣೆಮಾಡಿ ಇಂತೆಂದು ಪ್ರಾರ್ಥಿಸಿ ಕೊಂಡಳು.

೨೫. ಎಲೈ ಕಾಮಧೇನುವೇ ! ನಿನಗೆ ನಮಸ್ಕಾರವು. ಪಕ್ವಾನ್ನಗಳನ್ನೂ ದಿವ್ಯಾನ್ನಗಳನ್ನೂ, ಬ್ರಾಹ್ಮಣರಿಗೂ, ರಾಮನೇ ಮುಂತಾದವರಿಗೂ, ಬೇಗನೆ ಸೃಷ್ಟಿಸಿಕೊಡು ಎಂದು ಕೇಳಿಕೊಂಡಳು.

೨೬. ಜಾನಕಿಯು ಕಾಮಧೇನುವನ್ನು ಈ ರೀತಿಯಾಗಿ ಪ್ರಾರ್ಥಿಸಿ ಕೊಂಡು ಆ ಕಾಮಧೇನುವಿನ ಕಾಲಿನಕೆಳಗೆ ಸಾವಿರಾರು ಚಿನ್ನದ ಪಾತ್ರೆಗಳ ನ್ನಿಟ್ಟಳು.

ದಿವ್ಯಾನ್ನೈಃ ಪರಿಪೂರ್ಣಾನಿ ಚಕಾರ ಸುರಭಿಸ್ತ್ವಪಿ ।
ತತಶ್ಶೀಘ್ರಂ ಹೇಮಪಾತ್ರೈಃ ಗೃಹ್ಯಾನ್ನಾನಿ ಪೃಥಕ್ ಜವಾತ್ ‖ ೨೭ ‖

ಪರಿವೇಷಣಾರ್ಥಂ ಸಂತುಷ್ಟಾ ಯಯೌ ನೂಪುರಗರ್ಜಿತಾ ।
ಏತಸ್ಮಿನ್ನಂತರೇ ರಾಮಶ್ಚೋಪಹಾರಾರ್ಥಮಾದರಾತ್ ‖ ೨೮ ‖

ವಿಪ್ರಾನಿಷ್ಟಾನ್ಮಂತ್ರಿಣಶ್ಚ ಸಮಾಹೂಯ ಸಹಸ್ರಶಃ ।
ಉಪಾವಿಶದ್ಭೋಜನಸ್ಯ ಶಾಲಾಯಾಂ ತೈಸ್ಸಮನ್ವಿತಃ ‖ ೨೯ ‖

ರುಕ್ಮಪೀಠೇಷು ಸರ್ವೇ ತೇ ನೇಮಿರೇಖೋಪಮಾಃ ಸ್ಥಿತಾಃ ।
ಪೀತಕೌಶೇಯವಸ್ತ್ರಾನ್ಯೈಃ ಭೂಷಿತಾ ರುಕ್ಮಮಂಡನೈಃ ‖ ೩೦ ‖

ಪೂಜಿತಾ ರಾಘವೇಣಾಪಿ ಗಂಧಮಾಲ್ಯಾದಿಭಿರ್ಮುದಾ ।
ಸ್ತ್ರೀಭಿ ರುಕ್ಮತ್ರಿಪದಾಸು ರುಕ್ಮಪಾತ್ರಾಣಿ ಚ ಪೃಥಕ್ ॥
ರಂಗವಲ್ಯಾ ವಿಚಿತ್ರಾಯಾಂ ಭೂಮ್ಯಾಂ ನ್ಯಸ್ತಾನಿ ತತ್ಪುರಃ ‖ ೩೧ ‖

---

೨೭. ಒಡನೆಯೇ ಆ ಕಾಮಧೇನುವೂ ಕೂಡ ಅವುಗಳನ್ನು ದಿವ್ಯಾನ್ನಗಳಿಂದ ತುಂಬಿಸಿತು. ಒಡನೆಯೇ ಸಖಿಯರು ಆ ಚಿನ್ನದ ಪಾತ್ರೆಗಳನ್ನು ಬೇರೆ ಬೇರೆಯಾಗಿ ತೆಗೆದುಕೊಂಡು ಬಡಿಸುವುದಕ್ಕೋಸ್ಕರ ಕಾಲುಂಗುರಗಳನ್ನು ಧ್ವನಿಮಾಡಿಸುತ್ತ ಸಂತೋಷದಿಂದ ಹೊರಟರು.

೨೮–೨೯. ಇಷ್ಟುಹೊತ್ತಿಗೆ ರಾಮನು ಉಪಹಾರಕ್ಕೋಸ್ಕರವಾಗಿ ವಿಪ್ರರನ್ನೂ ಇಷ್ಟರನ್ನೂ, ಮಂತ್ರಿಗಳನ್ನೂ, ಸಂತೋಷದಿಂದ ಕರೆದುಕೊಂಡು ಭೋಜನ ಶಾಲೆಯಲ್ಲಿ ಅವರೊಡನೆ ಕುಳಿತುಕೊಂಡನು.

೩೦. ಅವರೆಲ್ಲರೂ ಸಾಲಾಗಿ ಚಿನ್ನದ ಮಣೆಗಳಮೇಲೆ ಕುಳಿತರು. ಹೊಂಬಣ್ಣದ ರೇಷ್ಮೆಯ ಮಗುಟಗಳನ್ನುಟ್ಟು ಚಿನ್ನದ ಒಡವೆಗಳನ್ನು ಧರಿಸಿದ್ದರು.

೩೧. ರಾಮನೂ ಕೂಡ ಅವರನ್ನು ಗಂಧಹೂಗಳಿಂದ ಪೂಜಿಸಿದನು. ಆಗ ಹೆಂಗಸರು ಅವರವರ ಮುಂದೆ ರಂಗೋಲಿಯನ್ನಿಟ್ಟು ಅಲಂಕರಿಸಿ ಚಿನ್ನದ ಮುಕ್ಕಾಲುಮಣೆಗಳನ್ನು ಅವುಗಳ ಮೇಲಿಟ್ಟರು.

ಹೇಮೋದ್ಭವಾನಿ ಚಾನೀಯ ಪಾತ್ರಾಣ್ಯಪಿ ಪೃಥಕ್ ಪೃಥಕ್ ।
ಸೋಪಪಾತ್ರಾಣಿ ಚಿತ್ರಾಣಿ ರತ್ನದೀಪಯುತಾನಿ ಚ ॥ ೩೨ ॥

ಸ್ಥಾಪಯಾಮಾಸುಃ ಶ್ರೀರಾಮಬಂಧುಪತ್ನ್ಯಸ್ತ್ವರಾನ್ವಿತಾಃ ।
ಏತಸ್ಮಿನ್ನಂತರೇ ಸರ್ವೈಃ ಶ್ರುತೋ ಮಂಜುಲನಿಸ್ವನಃ ॥ ೩೩ ॥

ನೂಪುರಾಣಾಂ ಕಿಂಕಿಣೀನಾಂ ಕಂಕಣಾನಾಂ ಮನೋರಮಃ ।
ರತ್ನಮೌಕ್ತಿಕಮಾಲಾನಾಂ ಘರ್ಷಣಾದುತ್ಥಿತೋ ಮಹಾನ್ ॥ ೩೪ ॥

ತಂ ಮಂಜುಲಸ್ವನಂ ಶ್ರುತ್ವಾ ಕಸ್ಯಾಯಂ ಶ್ರೂಯತೇ ಸ್ವನಃ ।
ಇತಿ ಸಂದಿಗ್ಧಚಿತ್ತಾಸ್ತೇ ವ್ಯಗ್ರನೇತ್ರೈರಿತಸ್ತತಃ ॥ ೩೫ ॥

೩೨-೩೩. ಆ ಕಾಲುಮಣೆಗಳಮೇಲೆ ಚಿನ್ನದ ಭೋಜನ ಪಾತ್ರೆಗಳನ್ನು ಬೇರೆ ಬೇರೆಯಾಗಿ ಇಟ್ಟರು. ಅದರ ಸುತ್ತಲೂ ಬೇಕಾಗುವ ಉಪಪಾತ್ರೆಗಳನ್ನೂ ಇಟ್ಟು ರತ್ನದ ದೀಪಗಳನ್ನೂ ಇಟ್ಟರು. ಇದೆಲ್ಲವನ್ನೂ ರಾಮನ ತಮ್ಮಂದಿರ ಹೆಂಡತಿಯರು ಜಾಗ್ರತೆಯಾಗಿ ನೆರವೇರಿಸಿದರು.

೩೪. ಇಷ್ಟುಹೊತ್ತಿಗೆ ಅಲ್ಲಿದ್ದವರೆಲ್ಲರಿಗೂ ಕಾಲುಬಳೆಯ, ಗೆಜ್ಜೆಯ ಮತ್ತು ಒಡ್ಡಿಯಾಣಗಳ ಮನೋಹರವಾದ ಧ್ವನಿಯು ಕೇಳಿಸಿತು. ಆ ಧ್ವನಿಯು ರತ್ನದ ಮುತ್ತಿನ ಸರಗಳು ಒಂದಕ್ಕೊಂದು ತಗಲುತ್ತಿದ್ದುದರಿಂದ ಅವುಗಳ ಧ್ವನಿಯಿಂದಲೂ ಕೂಡಿ ಆಗಾಗ್ಗೆ ದೊಡ್ಡದಾಗಿ ಕೇಳಿಸುತ್ತಿದ್ದಿತು.

೩೫. ಆ ಮನೋಹರವಾದ ಧ್ವನಿಯನ್ನು ಕೇಳಿ ಇದು ಯಾರ ಒಡವೆಗಳ ಧ್ವನಿಯಿರಬಹುದೆಂದು ಸಂದೇಹಪಟ್ಟುಕೊಂಡು ಚಪಲವಾದ ಕಣ್ಣುಗಳಿಂದ ಬ್ರಾಹ್ಮಣರೇ ಮುಂತಾಗಿ ಎಲ್ಲರೂ ನೋಡಿದರು.

ಅಪಶ್ಯನ್ ಬ್ರಾಹ್ಮಣಾದ್ಯಾಶ್ಚ ತಾವತ್ಸೀತಾಂ ವ್ಯಲೋಕಯನ್ |
ತಟಿತ್ಪುಂಜೋಪಮಾಂ ದಿವ್ಯಾಂ ಶತಕೋಟಿರವಿಪ್ರಭಾಂ ॥ ೩೬ ॥

ಯಸ್ಯಾಂಗುಲಿಷು ಸರ್ವತ್ರ ಪಾದಯೋರ್ವಿವಿಧಾನಿ ಚ |
ಮತ್ಸ್ಯಕಚ್ಛಪನಕ್ರಾದಿ ಚಿಹ್ನಿತಾನ್ಯುಜ್ಜ್ವಲಾನಿ ಚ ॥ ೩೭ ॥

ದದೃಶೂ ರತ್ನಚಿತ್ರಾಣಿ ಹೈಮಾನ್ಯಾಭರಣಾನಿ ತೇ |
ತತ ಊರ್ಧ್ವಂ ಕಿಂಕಿಣೀನಾಂ ಪಾದಯೋರ್ನೂಪುರಾಣಿ ಚ ॥ ೩೮ ॥

ಶೃಂಖಲಾ ವಿವಿಧಾ ರಮ್ಯಾಸ್ತಥಾ ಗುರ್ಜರದೇಶಜಾಃ |
ನಾನಾನೂಪುರಭೇದಾಶ್ಚ ಕಂಕಣಾನ್ಯುಜ್ಜ್ವಲಾನಿ ಚ ॥ ೩೯ ॥

---

೩೬. ಹಾಗೆ ನೋಡುತ್ತಿರುವಂತೆಯೇ ಎಲ್ಲರೂ ಸೀತೆಯು ಬಂದುದನ್ನು ನೋಡಿದರು. ಆಕೆಯು ಮಿಂಚುಗಳು ಒಂದು ಗೂಡಿದಂತೆ ಬಣ್ಣವುಳ್ಳವಳಾಗಿದ್ದಳು. ಆಕೆಯಲ್ಲಿ ಸಾವಿರಕೋಟಿ ಸೂರ್ಯರ ಕಾಂತಿಯಿದ್ದಿತು.

೩೭. ಆಕೆಯ ಕೈಕಾಲುಗಳಲ್ಲಿಯೂ, ಬೆರಳುಗಳಲ್ಲಿಯೂ, ಮೀನು, ಆಮೆ, ಮೊಸಳೆ ಮುಂತಾದುವುಗಳ ಚಿಹ್ನೆಗಳಿದ್ದುವು. ಅವು ಬಹು ಪ್ರಕಾಶಮಾನವಾಗಿ ಕಾಣುತ್ತಿದ್ದುವು.

೩೮. ಅಲ್ಲದೆ ಲೌಕಿಕ ಆಭರಣಗಳಾದ ಚಿನ್ನದ ಒಡವೆಗಳಿದ್ದುವು. ಕಾಲಿಗೆ ಹಾಕಿಕೊಳ್ಳುವ ಮಿಂಚು, ಬಳೆ ಸರಪಣಿ ಮುಂತಾದುವುಗಳೆಲ್ಲವೂ ಇದ್ದುವು.

೩೯. ಗುರ್ಜರದೇಶದ ಬಗೆ ಬಗೆಯಾದ ಸರಿಗೆಗಳೂ, ಸರಪಣಿಗಳೂ ಇದ್ದುವು. ಕಾಲುಬಳೆಗಳಂತೂ ಬಹು ಬಗೆಯುವು ಇದ್ದುವು. ಕೈಬಳೆಗಳು ಬಹು ಪ್ರಕಾಶಮಾನವಾದುವೂ ಇದ್ದುವು.

ತಸ್ಯಾಃ ಕಟ್ಯಾಂ ದದೃಶುಸ್ತೇ ಪೀತಕೌಶೇಯಮುಜ್ಜ್ವಲಂ ।
ಮುಕ್ತಾಜಾಲರುಕ್ಮತಂತುಪುಷ್ಪರಾಜಿ ವಿರಾಜಿತಂ ॥ ೪೦ ॥

ರತ್ನಕಂಕಣಗರ್ಭಾಣಿ ದಿವ್ಯರುಕ್ಮೋದ್ಭವಾನಿ ಚ ।
ದದೃಶುಸ್ತೇ ಹಿ ಸೀತಾಯಾ ಮಾಣಿಕ್ಯ ಚಿತ್ರಿತಾನಿ ಚ ॥ ೪೧ ॥

ನವೀನಂ ಗತಿಚಾಂಚಲ್ಯಂ ಕೃತಮಂಜುಲನಿಸ್ವನಂ ।
ಆದರ್ಶಬಿಂಬಸಂಯುಕ್ತಂ ಸುಗಂಧಾಮೋದಮೋದಿತಂ ॥ ೪೨ ॥

ವಸ್ತ್ರೋಪರಿ ದದೃಶುಸ್ತೇ ರಶನಾಂ ರುಕ್ಮತಂತುಜಾಂ ।
ರತ್ನಕಂಕಣಗರ್ಭಾಭಿಃ ಕಿಂಕಿಣೀಭಿರ್ವಿರಾಜಿತಂ ॥ ೪೩ ॥

---

೪೦. ಆಕೆಯು ನಡುವಿಗೆ ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನುಟ್ಟಿದ್ದಳು. ಅದರ ಅಂಚಿಗೆ ಮುತ್ತುಗಳನ್ನು ಪೋಣಿಸಿದ್ದರು. ಚಿನ್ನದ ಸರಿಗೆಗಳಿದ್ದುವು. ಅನೇಕ ಬಗೆಯ ಹೂಗಳನ್ನು ಅದರಲ್ಲಿ ನೆಯ್ದಿದ್ದರು.

೪೧. ಚಿನ್ನದ ಸರಿಗೆಗಳಲ್ಲಿ ರತ್ನಗಳನ್ನು ಸೇರಿಸಿ ಹೂಗಳನ್ನು ನಿರ್ಮಿಸಿದ್ದರು. ಮಾಣಿಕ್ಯಗಳನ್ನು ಸೇರಿಸಿ ಅಂತಹವುಗಳನ್ನು ಬೇರೆ ಬೇರೆಯಾಗಿ ಅನೇಕವಾದ ಹೂಗಳನ್ನು ನಿರ್ಮಿಸಿದ್ದರು.

೪೨. ಆಕೆಯು ನಡೆಯುತ್ತಿರುವುದರಿಂದ ಆ ಒಡವೆಗಳಲ್ಲಿ ಒಂದುತರಹವಾದ ಮನೋಹರವಾದ ಅಲೆದಾಟವಿದ್ದಿತು. ಮನೋಹರಶಬ್ದವಿದ್ದಿತು. ಆ ಒಡವೆಗಳ ಮಧ್ಯದಲ್ಲಿ ಸಣ್ಣ ಸಣ್ಣ ಕನ್ನಡಿಗಳು ಪ್ರಕಾಶಿಸುತ್ತಿದ್ದುವು. ಆ ಸೊಂಟದ ಬಟ್ಟೆಯು ಗಂಧದವಾಸನೆಯಿಂದ ಬಹುವಾಗಿ ಸುವಾಸನೆಯಾಗಿದ್ದಿತು.

೪೩. ಸೊಂಟಕ್ಕೆ ಕಟ್ಟಿಕೊಂಡಿದ್ದ ಆ ರೇಷ್ಮೆಯ ಬಟ್ಟೆಯಮೇಲೆ ಚಿನ್ನದ ಸರಪಣಿಯನ್ನೂ ಒಡ್ಡಿಯಾಣವನ್ನೂ ಹಾಕಿಕೊಂಡಿದ್ದಳು. ಆ ಸರಪಣಿಗೆ ಅಲ್ಲಲ್ಲಿಯೇ ರತ್ನಗಳಿಂದ ಕೂಡಿದ ಬಳೆಗಳಿದ್ದುವು. ಆ ಬಳೆಗಳ ತುದಿಯಲ್ಲಿ ಸಣ್ಣ ಸಣ್ಣ ಗೆಜ್ಜೆಗಳಿದ್ದುವು.

ಕೇಕಿಸಿಂಹವೃಷವ್ಯಾಘ್ರವ್ಯಗಚಿತ್ರ ವಿಚಿತ್ರಿತಾಂ ।
ಪೀತರಕ್ತಹರಿನ್ನೀಲ ಕೃಷ್ಣಮಾಣಿಕ್ಯಮಂಡಿತಾಂ ॥ ೪೪ ॥

ತತ ಊರ್ಧ್ವಂ ದದೃಶುಸ್ತೇ ಪದಕಾನ್ಯುಜ್ಜ್ವಲಾನಿ ಹಿ ।
ರಂಭಾಫಲೋಪಮಾನ್ಯೇವ ಹೈಮಾನ್ಯಾಭರಣಾನಿ ಚ ॥ ೪೫ ॥

ಸಕಾಂಚನ ಶೃಂಖಲಾನಿ ಕಾಚದ್ರವಯುತಾನಿ ಚ ।
ನಾನಾರತ್ನವಿಚಿತ್ರಾಣಿ ಮುಕುರೈರ್ಮಂಡಿತಾನ್ಯಪಿ ॥ ೪೬ ॥

ನಾನಾಮಾಣಿಕ್ಯಮುಕ್ತಾನಿ ದೀಪ್ತಿಮಂತ್ಯುಜ್ಜ್ವಲಾನಿ ಹಿ ।
ತತೋ ದದೃಶುಸ್ತೇ ದಿವ್ಯಾನ್ ರುಕ್ಮಹಾರಾನ್ ವಿಚಿತ್ರಿತಾನ್ ॥ ೪೭ ॥

೪೪–೪೫. ಅಲ್ಲಿಂದ ಮೇಲುಗಡೆಯಲ್ಲಿ ನೋಡಿದರೆ ಅನೇಕವಾದ ಪದಕಗಳಿದ್ದುವು. ಅವುಗಳಲ್ಲಿ ನವಿಲು, ಸಿಂಹ, ಎತ್ತು, ಹುಲಿ, ಹುಲ್ಲೆ, ಇವುಗಳನ್ನು ನಿರ್ಮಿಸಿದ್ದರು. ಅರಿಶಿನ, ಕೆಂಪು, ಹಸರು, ನೀಲಿ, ಕಪ್ಪು, ಕೆಂಚುಬಣ್ಣಗಳಿಂದಲೂ ಕೂಡಿದ್ದುವು. ಅವುಗಳ ಜೊತೆಯಲ್ಲಿ ಬಾಳೆಯ ಹಣ್ಣಿನಂತೆ ಮಾಡಿರುವ ಚಿನ್ನದ ಬೇರೆಯ ರೀತಿಯ ಆಭರಣಗಳಿದ್ದುವು.

೪೬. ಅವುಗಳಲ್ಲಿಯೂ ಚಿನ್ನದ ಸರಪಣಿಗಳಿದ್ದುವು. ಆ ಸರಪಣಿಗಳಲ್ಲಿ ವಜ್ರಗಳನ್ನು ಅಲ್ಲಲ್ಲಿಗೆ ಸೇರಿಸಿದ್ದರು. ಬೇರೆ ಬೇರೆ ರತ್ನಗಳನ್ನೂ ಯಥಾಯೋಗ್ಯವಾಗಿ ಸೇರಿಸಿದ್ದರು. ಸಣ್ಣ ಸಣ್ಣದಾಗಿ ಕನ್ನಡಿಗಳಿರುವಂತೆ ಮಾಡಿದ್ದರು.

೪೭. ಅದರ ಮೇಲುಗಡೆ ಮಾಣಿಕ್ಯದಿಂದ ಕೂಡಿದ ಮುತ್ತಿನ ಹಾರಗಳಿದ್ದುವು. ಬಹು ಕಾಂತಿಯುಳ್ಳವಾಗಿದ್ದುವು. ಚಿನ್ನದ ಸರಿಗೆಗಳಿಂದ ಅವನ್ನು ಸೇರಿಸಿ ರಮ್ಯವಾಗಿ ಮಾಡಿದ್ದರು.

ನವರತ್ನಯುತಾರ್ ಹಾರಾರ್ ಮುಕ್ತಾಹಾರಾಂಶ್ಚ ಶೃಂಖಲಾಃ |
ಮೂರ್ತಿಮಾಲಾ ರುಕ್ಮಜಾಶ್ಚ ಯವಮಾಲಾ ವಿಚಿತ್ರಿತಾಃ ॥ ೪೮ ॥

ಪುಷ್ಪಮಾಲಾಃ ಕಾಂಚನಜಾಸ್ಸಾರಿಕಾ ರತ್ನಮಂಡಿತಾಃ |
ರುಕ್ಮಗುಂಜಾನ್ವಿತಾ ಮಾಲಾ ಹೇಮಧಾತ್ರೀ ಫಲಾನ್ವಿತಾಃ ॥ ೪೯ ॥

ಪ್ರವಾಳಮಣಿಮುಕ್ತಾ ಸಮ್ಮಿಶ್ರಿತಾಶ್ಚಿತ್ರಚಿತ್ರಿತಾಃ ।
ಚಂಪಸೂಕ್ಷ್ಮಕಲಿಕಯಾ ಸದೃಶಾ ಹೇಮಮಾಲಿಕಾಃ ॥ ೫೦ ॥

ಕಂಠೇ ಮಂಗಳಸೂತ್ರಂ ಚ ಪೇಟಿಕಾ ರತ್ನಭೂಷಿತಾಃ |
ಕಾಂಚನಾನಾಂ ಸುಸೂಕ್ಷ್ಮಾಣಾಂ ಮಣೀನಾಂ ವಿವಿಧಾನಿ ಚ ॥ ೫೧ ॥

---

೪೮. ಆ ಹಾರಗಳಲ್ಲಿ ಒಂಭತ್ತು ಬಗೆಯಾದ ರತ್ನಗಳೂ ಸೇರಿದ್ದುವು. ಚಿನ್ನದ ಕೊಂಡಿಗಳಿದ್ದುವು. ಚಿನ್ನದ ಸರಪಣಿಗಳಿಗೆ ರತ್ನಗಳನ್ನು ಸೇರಿಸಿದ್ದರು. ದೇವತೆಗಳ ಮೂರ್ತಿಗಳ ಮಾಲೆಗಳೂ ಇದ್ದುವು. ಗೋಧಿಯ ಸರವೆಂಬ ಸರವೂ ಇದ್ದಿತು.

೪೯. ಚಿನ್ನದಿಂದ ಮಾಡಿದ ಅನೇಕ ಬಗೆಯಾದ ಹೂವಿನ ಮಾಲೆಗಳೂ, ಇದ್ದುವು. ಅದರಲ್ಲಿಯೂ ಅನೇಕ ಬಗೆಯ ರತ್ನಗಳನ್ನು ಸೇರಿಸಿದ್ದರು. ಚಿನ್ನದ ಗುಂಡುಗಳೂ ಅವುಗಳಲ್ಲಿದ್ದುವು. ಈ ಹೂವಿನಮಾಲೆಗಳಲ್ಲದೆ ಚಿನ್ನದ ಗುಂಡಿನ ಮಾಲೆಗಳೂ ಇದ್ದುವು. ಚಿನ್ನದ ನೆಲ್ಲಿಕಾಯಿನ ಮಾಲೆಯೂ ಇದ್ದಿತು.

೫೦. ಅವುಗಳಲ್ಲಿ ಹವಳಗಳೂ, ಮಣಿಗಳೂ, ಮುತ್ತುಗಳೂ, ಸೇರಿಕೊಂಡಿದ್ದುವು. ಮಧ್ಯ ಮಧ್ಯದಲ್ಲಿ ಸಂಪಿಗೆಯ ಮುಗ್ಗುಗಳನ್ನು ಸೇರಿಸಿದ್ದರು. ಆ ಸಂಪಿಗೆಯ ಮುಗ್ಗುಗಳು ಚಿನ್ನದ ಮಾಲಿಕೆಯಂತೆಯೇ ಇದ್ದುವು.

೫೧. ಅನಂತರ ಅದರಮೇಲೆ ಮಾಂಗಲ್ಯದ ಮಾಲೆಯಿದ್ದಿತು. ಅದರಲ್ಲಿ ರತ್ನದಿಂದ ಕೂಡಿದ ಅನೇಕ ಪೆಟ್ಟಿಗೆಗಳಿದ್ದುವು. ಅಲ್ಲದೆ ಸೂಕ್ಷ್ಮವಾಗಿ ಚಿನ್ನದ ಸರಿಗೆಗಳನ್ನು ಸೇರಿಸಿಯೂ ಮಾಡಿದ್ದರು.

ಗುಚ್ಛೈಃ ಕಂಠಭೂಷಣಾನಿ ಮುಕ್ತಾಗುಚ್ಛಯುತಾನ್ಯಪಿ ।
ದದೃಶುಸ್ತೇ ಹಿ ಸೀತಾಯಾಃ ಕಂಠೇ ಹ್ಯನೇಕಶಃ ॥ ೫೨ ॥

ರಶನಾಸದೃಶಾನ್ಯೇವ ಗ್ರೀವಾಯಾಂ ಭೂಷಣಾನ್ಯಪಿ ।
ಪ್ರವಾಳಮಣಿಮಾಣಿಕ್ಯರಚಿತಾನ್ಯುಜ್ಜ್ವಲಾನಿ ಚ ॥ ೫೩ ॥

ಮುಕ್ತಾಗುಚ್ಛಾನ್ ಕಾಚಗುಚ್ಛಾನ್ ರತ್ನಗುಚ್ಛಾನ್ ವಿಚಿತ್ರಿತಾನ್ ।
ಪ್ರವಾಳಮಣಿಗುಚ್ಛಾಂಶ್ಚ ರತ್ನಪುಷ್ಪವಿಗುಂಫಿತಾನ್ ॥ ೫೪ ॥

ತತೋ ದದೃಶುಸ್ತೇ ಸರ್ವೇ ಮೈಥಿಲೀಕುಚಕಂಚುಕೀಂ ।
ಹೇಮತಂತು ಭವಾಂ ಚಿತ್ರಾಂ ಮುಕ್ತಾಮಾಣಿಕ್ಯಗುಂಫಿತಾಂ ॥ ೫೫ ॥

ಆದರ್ಶಬಿಂಬಸಂಯುಕ್ತಾಂ ಪುಷ್ಪರಾಜಿವಿರಾಜಿತಾಂ ।
ಮಯೂರಶುಕವೃಕ್ಷೈಶ್ಚ ಲವಂಗೈಸ್ತಂತುನಿರ್ಮಿತೈಃ ॥ ೫೬ ॥

---

೫೨. ಆದರ ಬಳಿ ಚಿನ್ನದಿಂದ ಮಾಡಿದ ಕುಚ್ಚುಗಳೂ ಇದ್ದುವು. ಮುತ್ತಿನ ಕುಚ್ಚುಗಳೂ, ಇದ್ದುವು. ಈ ರೀತಿಯಾಗಿ ಸೀತೆಯ ಕುತ್ತಿಗೆಯಲ್ಲಿ ಅನೇಕ ಬಗೆಯಾದ ಚಿನ್ನದ ಒಡವೆಗಳು ಪ್ರಕಾಶಿಸುತ್ತಲಿದ್ದುವು.

೫೩. ಕತ್ತಿನಲ್ಲಿ ಚಿನ್ನದ ಸರಪಣಿಗಳು, ಅನೇಕ ಬಗೆಯವು ಇದ್ದುವು. ಅವುಗಳಲ್ಲಿ ಹವಳ, ಮುತ್ತು ಮಾಣಿಕ್ಯ ಇವನ್ನು ಸೇರಿಸಿ ಕಟ್ಟಿದ್ದಿತು.

೫೪–೫೬. ಮುತ್ತಿನಕುಚ್ಚು, ವಜ್ರದಕುಚ್ಚು, ರತ್ನದಕುಚ್ಚು, ಹವಳದ ಕುಚ್ಚು, ರತ್ನದ ಹೂಗಳನ್ನು ಸೇರಿಸಿರುವ ಕುಚ್ಚು ಇವುಗಳನ್ನು ಅಲ್ಲಲ್ಲಿಗೆ ಸೇರಿಸಿ ನೇತಾಡುವಂತೆ ಮಾಡಿದ್ದ ಕುಪ್ಪಸವನ್ನು ಆ ಸೀತೆಯು ತೊಟ್ಟುಕೊಂಡಿದ್ದಳು. ಚಿನ್ನದ ಸರಿಗೆಗಳಿಂದಲೂ ಮತ್ತು ಮಾಣಿಕ್ಯಗಳ ಚಿತ್ರದಿಂದಲೂ ಕೂಡಿಕೊಂಡಿದ್ದಿತು. ಬಹು ಪ್ರಕಾಶಮಾನವಾಗಿದ್ದಿತು. ಅದರಲ್ಲಿ ಹೂಗಳನ್ನು ನಿರ್ಮಿಸಿದ್ದರು. ಆ ಸರಿಗೆಯ ಅಂಚಿನಲ್ಲಿ ನವಿಲು, ಗಿಳಿ, ಮರ, ಲವಂಗಗಳ ಚಿತ್ರವನ್ನೂ, ಚಿತ್ರಿಸಿದ್ದರು.

ಚಿತ್ರಿತಾಂ ಶ್ರಮಘರ್ಮೇಣಾದ್ರಾಂ ಸಂಲಗ್ನಾಂ ದೃಢಂ ತನೌ ।
ತತೋದದೃಶುರ್ಭುಜಯೋಃ ಕೇಯೂರೇ ರತ್ನಮಂಡಿತೇ ॥ ೫೭ ॥

ವಕ್ರಕಂಕಣಸಾದೃಶ್ಯೇ ಹೇಮಮಾಣಿಕ್ಯನಿರ್ಮಿತೇ ।
ರತ್ನಚಿತ್ರವಿಚಿತ್ರಾಶ್ಚ ಭುಜಯೋಃ ಪೇಟಿಕಾಶ್ಶುಭಾಃ ॥ ೫೮ ॥

ಹೇಮತಂತುಭವೈರ್ಲಂಬಮಾನಗುಚ್ಛೈಸ್ಸುಮಂಡಿತಾಃ ।
ಪ್ರವಾಳಮಣಿಮುಕ್ತಾನಾಂ ನಾನಾಗುಚ್ಛೈರ್ಯುತಾ ಅಪಿ ॥ ೫೯ ॥

ತದಧಃ ಕರಯೋಸ್ಸರ್ವೇ ದದೃಶುರ್ಭೂಷಣಾನಿ ತೇ ।
ರತ್ನಮಾಣಿಕ್ಯಮುಕ್ತಾಭಿಶ್ಚಿತ್ರಿತೌ ಹೇಮಸಂಭವೌ ॥ ೬೦ ॥

---

೫೭. ಶ್ರಮದಿಂದ ಬಂದಿರುವ ಬೆವರಿನಿಂದ ಆ ಕುಪ್ಪಸವು ಒದ್ದೆಯಾಗಿದ್ದಿತು. ಆದುದರಿಂದ ಅದು ಮೈಗೆ ಗಟ್ಟಿಯಾಗಿ ಅಂಟಿಕೊಂಡಿದ್ದಿತು. ಇವುಗಳಲ್ಲದೆ ಭುಜಗಳಮೇಲೆ ರತ್ನದ ಭುಜಕೀರ್ತಿಗಳನ್ನೂ ಧರಿಸಿದ್ದಳು.

೫೮. ಡೊಂಕು ಡೊಂಕಾಗಿರುವ ವಂಕಿಯೆಂಬ ತೋಳುಬಳೆಯನ್ನು ಹಾಕಿಕೊಂಡಿದ್ದಳು. ಅದಕ್ಕೆ ಚಿನ್ನದಿಂದ ಸೇರಿಸಿ ಕಟ್ಟಿದ್ದ ಮಾಣಿಕ್ಯಗಳನ್ನು ಸೇರಿಸಿದ್ದರು. ರತ್ನದಿಂದ ಚಿತ್ರ ಚಿತ್ರವಾದ ಬಗೆ ಬಗೆಯ ಕಾಂತಿಯುಳ್ಳ ಒಡವೆಯ ರೂಪವಾದ ಪೆಟ್ಟಿಗೆಗಳೂ ಇದ್ದುವು.

೫೯. ಚಿನ್ನದ ಸರಿಗೆಗಳಿಂದ ಕುಚ್ಚುಗಳನ್ನು ಕಟ್ಟಿ ಇಳಿಬಿಟ್ಟಿದ್ದರು. ಆ ಗೊಂಚಲುಗಳು ರತ್ನ, ಮಾಣಿಕ್ಯ ಮುತ್ತುಗಳಿಂದ ಮಾಡಿದುವುಗಳಾಗಿ ರಮ್ಯವಾಗಿ ಪ್ರಕಾಶಮಾನವಾಗಿದ್ದುವು.

೬೦. ಮೊಣಕೈಗಳಲ್ಲಿ ರತ್ನ, ಮಾಣಿಕ್ಯ ಮುತ್ತು ಇವುಗಳನ್ನು ಸೇರಿಸಿ ಚಿನ್ನದಿಂದ ಮಾಡಿದ ಒಡವೆಗಳಿದ್ದುವು. ಕೈಗಳಲ್ಲಿಯೂ ಅಂತಹವುಗಳೇ ಇದ್ದುವು.

ಕರಚೂಡೌ ದೀಪ್ತಿಮಂತೌ ಹೇಮಪುಷ್ಪಾದಿಚಿತ್ರಿತೌ ।
ಕಾಚಕಂಕಣಮಧ್ಯಸ್ಥೌ ಚಂದ್ರಸೂರ್ಯೋಪಮೌ ತ್ವಿಷಾ ॥ ೬೧ ॥

ತದೂರ್ಧ್ವಾಧಃ ಕಂಕಣಾನಿ ಹೇಮಜಾನಿ ಘನಾನಿ ಚ ।
ರತ್ನಮಾಣಿಕ್ಯಮುಕ್ತಾಭಿಶ್ಚಿತ್ರಿತಾನ್ಯುಜ್ಜ್ವಲಾನಿ ಚ ॥ ೬೨ ॥

ಪ್ರವಾಳಮಣಿಮುಕ್ತಾನಾಂ ಕರಹಾರಾದಿಚಿತ್ರಿತೌ ।
ಕರಯೋಸ್ಸಾರಿಕೇ ದಿವ್ಯೇ ಹ್ಯೂರ್ಧ್ವಾಧೋ ರತ್ನಮಂಡಿತೇ ॥ ೬೩ ॥

ತದೂರ್ಧ್ವಂ ಕಂಕಣಾನ್ಯೇವ ಪುಷ್ಪವಲ್ಲ್ಯಂಕಿತಾನಿ ಹಿ ।
ದಂತರಾಜ್ಯುಪಮಾದೀನಿ ರತ್ನಹೇಮೋದ್ಭವಾನಿ ಚ ॥ ೬೪ ॥

ಅಂಗುಳೀಷು ದದೃಶುಸ್ತೇ ಮುದ್ರಿಕಾ ರುಕ್ಮನಿರ್ಮಿತಾಃ ।
ರತ್ನಮಾಣಿಕ್ಯಮುಕ್ತಾಭಿರ್ನೀಲಮಾರಕತೈರಪಿ ॥ ೬೫ ॥

---

೬೧. ಕೈಗಳಲ್ಲಿ ಆಕೆಗೆ ಈ ಕಡೆಗೆ ಆ ಕಡೆಗೆ ಚಿನ್ನದ ಬಳೆಗಳಿದ್ದುವು. ಮಧ್ಯದಲ್ಲಿ ಗಾಜಿನ ಬಳೆಗಳಿದ್ದುವು. ಕಾಂತಿಯಲ್ಲಿ ಸೂರ್ಯಚಂದ್ರರಂತಿದ್ದುವು.

೬೨. ಅಕ್ಕಪಕ್ಕದಲ್ಲಿದ್ದ ಚಿನ್ನದ ಬಳೆಗಳು ದಪ್ಪವಾಗಿದ್ದುವು. ಮುತ್ತು ಮಾಣಿಕ್ಯ ವಜ್ರಗಳಿಂದ ಚಿತ್ರಿತವಾಗಿದ್ದುವು. ಕಾಂತಿಯುಕ್ತವಾಗಿದ್ದುವು.

೬೩–೬೪. ಮುತ್ತು ಮಾಣಿಕ್ಯಗಳಿಂದ ಕೂಡಿದ ಕೈಯ್ಯಿನಹಾರವಿದ್ದಿತು. ರತ್ನದಿಂದ ಮಾಡಿದ ಸಾರಿಕೆಗಳನ್ನು ಆ ಕೈಯ್ಯಹಾರದಲ್ಲಿ ಧರಿಸಿದ್ದಳು. ಅದರ ಪಕ್ಕದಲ್ಲಿ ಹೂವಿನ ಸಾಲಿನಿಂದ ಕೂಡಿದ ಬಳೆಗಳಿದ್ದುವು. ದಂತಗಳನ್ನು ಅವಕ್ಕೆ ಕೆತ್ತಿದ್ದರು.

೬೫. ಕೈಬೆರಳುಗಳಲ್ಲಿ ಚಿನ್ನದ ಉಂಗುರಗಳು ಅನೇಕವಾಗಿದ್ದುವು. ರತ್ನ, ಮಾಣಿಕ್ಯ, ಮುತ್ತು, ನೀಲ, ಮರಕತಗಳನ್ನು ಅವುಗಳಿಗೆ ಸೇರಿಸಿದ್ದರು.

ಪ್ರವಾಳಚಂದ್ರಕಾಂತೈಶ್ಚ ಸೂರ್ಯಕಾಂತೈರ್ವಿಚಿತ್ರಿತಾಃ ।
ನಾನಾಪುಷ್ಪೋಪಮಾ ದಿವ್ಯಾ ಪ್ರತಿಪರ್ವಸಮಾಶ್ರಿತಾಃ ॥ ೬೬ ॥

ತತೋ ದದೃಶುಸ್ಸೀತಾಯಾ ರಮ್ಯಂ ಘ್ರಾಣೇತಿಸೋಜ್ಜ್ವಲಂ ।
ದಿವ್ಯಂ ಮಯೂರಂ ಚಿತ್ರಂ ಚ ವರರುಕ್ಮವಿನಿರ್ಮಿತಂ ॥ ೬೭ ॥

ಮಣಿಮಾಣಿಕ್ಯಮುಕ್ತಾಭಿರ್ವರರತ್ನೈಸ್ಸಮಂಡಿತಂ ।
ಲಂಬಿತೈರ್ಮೌಕ್ತಿಕಾದೀನಾಂ ವರಗುಚ್ಛೈಸ್ಸವೇಷ್ಟಿತಂ ॥ ೬೮ ॥

ತತೋ ದದೃಶುಸ್ಸೀತಾಯಾಃ ಕರ್ಣಯೋರ್ಭೂಷಣಾನಿ ತೇ ।
ಮಕರಧ್ವಜಸಾದೃಶ್ಯೇ ತಾಟಂಕೇ ರತ್ನಚಿತ್ರಿತೇ ॥ ೬೯ ॥

ಮಣಿಮಾಣಿಕ್ಯಮುಕ್ತಾಭಿರ್ಗುಂಫಿತೇ ಸೋಜ್ಜ್ವಲೇ ವರೇ ।
ರತ್ನಪುಷ್ಪಾದಿಭಿಶ್ಚಿತ್ರೈಶ್ಚಿತ್ರಿತೇ ರವಿಭಾಸ್ವರೇ ॥ ೭೦ ॥

---

೬೬. ರಾವಳ, ಚಂದ್ರಕಾಂತ, ಸೂರ್ಯಕಾಂತಗಳಿಂದಲೂ ಸೇರಿಕೊಂಡೂ ಇದ್ದುವು. ಹೂವಿನಂತಿರುವ ಅನೇಕ ಉಂಗುರಗಳಿದ್ದುವು. ಈ ರೀತಿಯಾದ ಉಂಗುರಗಳನ್ನು ಗಿಣ್ಣೆ ಗಿಣ್ಣೆಗೂ ಹಾಕಿಕೊಂಡಿದ್ದಳು.

೬೭-೬೮. ಆ ಸೀತೆಯು ಮೂಗಿನಲ್ಲಿ ಪ್ರಕಾಶಮಾನವೂ ಮನೋಹರವೂ ಆದ ಚಿನ್ನದಿಂದ ಮಾಡಿದ, ನವಿಲು ಚಿತ್ರದ ಮೂಗುತಿಯನ್ನು ಧರಿಸಿದ್ದಳು. ಸುತ್ತಲೂ ಮಾಣಿಕ್ಯ, ಮುತ್ತು, ರತ್ನಗಳನ್ನು, ಹಾಕಿ ಅಲಂಕರಿಸಿದ್ದರು. ಅಲ್ಲದೆ ಅದರ ಸುತ್ತಲೂ ಮುತ್ತಿನ ಗೊಂಚಲುಗಳು ನೇತಾಡುತ್ತಿದ್ದುವು.

೬೯-೭೦. ಆ ಸೀತೆಯು ಕಿವಿಗೆ ಓಲೆಗಳನ್ನು ಧರಿಸಿದ್ದಳು. ಅವು ಮಕರಧ್ವಜದಂತೆ ಇದ್ದುವು. ರತ್ನಗಳಿಂದ ಕೂಡಿದ್ದುವು. ಮಾಣಿಕ್ಯವನ್ನೂ, ಮುತ್ತನ್ನೂ ಸೇರಿಸಿದ್ದರು. ರತ್ನಗಳನ್ನು ಮಧ್ಯದಲ್ಲಿ ಸೇರಿಸಿ ಹೂಗಳನ್ನು ಮಾಡಿ ಸೇರಿಸಿ ರಮ್ಯವಾಗಿ ಮಾಡಿದ್ದರು.

ತತೋ ಭ್ರಮರಿಕೇ ದಿವ್ಯೇ ರುಕ್ಮರತ್ನವಿಚಿತ್ರಿತೇ |
ಮುಕ್ತಾಭಿರ್ಗುಂಫಿತೇ ರಮ್ಯೇ ಹೇಮಪುಷ್ಪಾಣಿ ವೈ ತಥಾ ॥ ೭೧ ॥

ಕರ್ಣಯೋಶ್ಶೃಂಖಲಾಶ್ಚಿತ್ರಾ ದದೃಶೂ ರುಕ್ಮನಿರ್ಮಿತಾಃ ।
ಮುಕ್ತಾಗುಚ್ಛೈರ್ಗುಂಫಿತಾಶ್ಚ ರತ್ನಮಾಣಿಕ್ಯಮಂಡಿತಾಃ ॥ ೭೨ ॥

ಆಕರ್ಣಾಭ್ಯಾಂ ಚ ಸೀಮಂತಪರ್ಯಂತಂ ಫಾಲಪಾರ್ಶ್ವಯೋಃ ।
ಹಾರವದ್ರುಕ್ಮಜಾಲಾನಿ ಮಾಣಿಕ್ಯಸಹಿತಾನಿ ಹಿ ॥ ೭೩ ॥

ಮುಕ್ತಾಗುಚ್ಛೈರ್ಗುಂಫಿತಾನಿ ವೈಡೂರ್ಯಚಿತ್ರಿತಾನ್ಯಪಿ ।
ತತಸ್ತದೂರ್ಧ್ವಂ ಸೀತಾಯಾ ದದೃಶುಶ್ಶಿರಸಿ ದ್ವಿಜಾಃ ॥ ೭೪ ॥

---

೭೧. ಆ ಓಲೆಗಳಮೇಲೆ, ಮೇಲಿನ ಕಿವಿಗೆ ಇಟ್ಟುಕೊಳ್ಳುವ ಎರಡು ಭ್ರಮರಿಕೆಗಳು ಪ್ರಕಾಶಿಸುತ್ತಿದ್ದುವು. ಅವು ಚಿನ್ನದಿಂದ ಮತ್ತು ರತ್ನಗಳಿಂದ ನಿರ್ಮಿತವಾಗಿದ್ದುವು. ಅವುಗಳ ತುದಿಯಲ್ಲಿ ಮುತ್ತುಗಳನ್ನು ಜೋಡಿಸಿದ್ದರು. ಚಿನ್ನದ ಹೂಗಳನ್ನೂ ರಚಿಸಿದ್ದರು.

೭೨. ಕಿವಿಯಲ್ಲಿ ಚಿನ್ನದ ಸರಪಣಿಗಳು ರಂಜಿಸುತ್ತಿದ್ದುವು. ಮಧ್ಯ ಮಧ್ಯದಲ್ಲಿ ಮಾಣಿಕ್ಯ, ಕೆಂಪು, ಮುಂತಾದ ರತ್ನಗಳನ್ನು ಹಾಕಿದ್ದರು. ಅಲ್ಲದೆ ಅಂಚುಗಳಿಗೂ ತುದಿಗೂ ಮುತ್ತಿನ ಗೊಂಚಲನ್ನು ಕಟ್ಟಿದ್ದರು.

೭೩–೭೪. ಎರಡು ಕಡೆಯ ಕಿವಿಗಳ ಪಕ್ಕಗಳವರೆಗೂ ಮೇಲುಗಡೆ ಬೈತಲೆಯವರೆಗೆ ಮುಖದಮೇಲೆ ಬರುವಂತೆ ಚಿನ್ನದ ಸರಪಣಿಗಳನ್ನು ಮಾಡಿ ಅವನ್ನು ಹೂವಿನಂತೆ ನಿರ್ಮಿಸಿ ಆ ಹೂವುಗಳ ತುದಿಗೆ ಮುತ್ತಿನಗೊಂಚಲನ್ನು ಸೇರಿಸಿ ಅದರ ಮಧ್ಯದಲ್ಲಿ ವೈಡೂರ್ಯವನ್ನು ಸೇರಿಸಿದ್ದರು. ಇಂತಹವನ್ನು ಬೈತಲೆಯಲ್ಲಿ ಹಣೆಯ ತುಂಬ ಕಿವಿಯವರೆಗೆ ನೇತುಹಾಕಿದ್ದರು.

ಸೀಮಂತಸ್ಯೋತ್ತರೇ ಯಾಮ್ಯೇ ಕೇಶೇಷು ಶಶಿಭಾಸ್ಕರೌ ।
ರುಕ್ಮಜೌ ರತ್ನವೈಡೂರ್ಯಮಣಿಮುಕ್ತಾವಿಚಿತ್ರಿತೌ ॥ ೭೫ ॥

ನೀಲಕಾಶ್ಮೀರಕಾಂತೈಶ್ಚ ವಿದ್ರುಮೈರತಿಶೋಭಿತೌ ।
ಚಂದ್ರಸೂರ್ಯಾವಿವ ಸ್ವೀಯಭಾಸಾ ದೀಪಯತೋ ದಿಶಃ ॥ ೭೬ ॥

ನಿಟಲೇ ತಿಲಕಂ ರತ್ನಮಣಿಮುಕ್ತಾವಿರಾಜಿತಂ ।
ಹೈಮಂದಿವ್ಯಮುಜ್ಜ್ವಲಂ ಚ ಕೋಟಿಸೂರ್ಯಸಮಪ್ರಭಂ ॥ ೭೭ ॥

ತತೋ ದದೃಶುಸ್ಸೀಮಂತೇ ಮುಕ್ತಾಹಾರಂ ಮಹೋಜ್ಜ್ವಲಂ ।
ನಾನಾರತ್ನವಿಚಿತ್ರಂ ಚ ಹ್ಯಾವೇಣಿತಿಲಕಾವಧಿ ॥ ೭೮ ॥

೭೫–೭೬. ಬೈತಲೆಯ ಎರಡು ಪಾರ್ಶ್ವದಲ್ಲಿ ಈಶಾನ್ಯಕ್ಕೆ ತಲೆಯಮೇಲೆ ಸೂರ್ಯ ಚಂದ್ರರೆಂಬ ಒಡವೆಗಳನ್ನು ಹಾಕಿದ್ದರು. ಅವು ಚಿನ್ನದಿಂದ ಮಾಡಲ್ಪಟ್ಟಿದ್ದುವು. ಅವಕ್ಕೆ ನಕಾಸಿಯನ್ನು ಮಾಡಿ ಮಧ್ಯ ಮಧ್ಯದಲ್ಲಿ ವೈಡೂರ್ಯ ಮುಂತಾದ ರತ್ನಗಳನ್ನು ಸೇರಿಸಿದ್ದರು. ಹವಳಗಳನ್ನೂ, ಯಥಾಯೋಗ್ಯವಾಗಿ ಹಾಕಿದ್ದರು. ಇವು ಸೂರ್ಯಚಂದ್ರರೆಂಬ ತಮ್ಮ ಹೆಸರಿಗೆ ತಕ್ಕಂತೆ ದಿಕ್ಕೆಲ್ಲವನ್ನೂ ಪ್ರಕಾಶವಾಗುವಂತೆ ಮಾಡಿದ್ದುವು.

೭೭. ಹಣೆಯಲ್ಲಿ ಒಡವೆಯರೂಪವಾದ ಒಂದು ತಿಲಕವನ್ನು ಧರಿಸಿದ್ದಳು. ಅದನ್ನು ಚಿನ್ನದಲ್ಲಿ ಮಾಡಿ ಮುತ್ತು ರತ್ನಗಳನ್ನು ಸೇರಿಸಿ ರಮ್ಯವಾಗಿ ಮಾಡಿದ್ದರು. ಕೋಟಿಸೂರ್ಯರಂತೆ ಪ್ರಕಾಶಮಾನವಾಗಿದ್ದಿತು.

೭೮. ಸೀಮಂತ ಪ್ರದೇಶದಲ್ಲಿ ಒಂದು ಮುತ್ತಿನಹಾರವಿದ್ದಿತು. ಆ ಹಾರವು ತಿಲಕದಿಂದ ಮೊದಲುಗೊಂಡು ಹಿಂದಿನ ಜಡೆಯವರೆಗೂ ಇದ್ದಿತು. ಅದರ ಉದ್ದಕ್ಕೂ ರತ್ನಗಳನ್ನು ಸಂದರ್ಭಾನುಸಾರವಾಗಿ ಸೇರಿಸಿದ್ದರು.

ಚೂಡಾಮಣಿಂ ದದೃಶುಸ್ತೇ ಜನಕೇನ ಸಮರ್ಪಿತಂ ।
ನಾನಾರತ್ನವಿಚಿತ್ರಂ ಚ ಮುಕ್ತಾಗುಚ್ಛವಿರಾಜಿತಂ ॥ ೭೯ ॥

ತತೋ ದದೃಶುಶ್ಶಿರಸಿ ಮುಕ್ತಾಜಾಲಾನಿ ಭೂಸುರಾಃ ।
ಹೇಮತಂತುಗುಂಫಿತಾನಿ ರತ್ನಪುಷ್ಪಯುತಾನ್ಯಪಿ ॥ ೮೦ ॥

ಮಣಿವೈಡೂರ್ಯಕಾಶ್ಮೀರವಿದ್ರುಮೈಶ್ಚಿತ್ರಿತಾನಿ ಹಿ ।
ತದೂರ್ಧ್ವಂ ಪುಷ್ಪಜಾಲಾನಿ ಸುಗಂಧೀನಿ ವ್ಯಲೋಕಯನ್ ॥ ೮೧ ॥

ತತೋ ವೇಣ್ಯಾಂ ಭೂಷಣಾನಿ ದದೃಶುಸ್ತೇ ವರಾಣಿ ಹಿ ।
ನಾನಾಪಕ್ಷ್ಯುಪಮಾನ್ಯೇವ ಮಾಣಿಕ್ಯಚಿತ್ರಿತಾನಿ ಹಿ ॥ ೮೨ ॥

ಪಲ್ಲವಾಂತರವರ್ತೀನ್ಯಪ್ಯತಿದೀಪ್ತ್ಯುಜ್ಜ್ವಲಾನಿ ಚ ।
ಹೇಮತಂತುಮಯಾನ್ ಗುಚ್ಛಾನ್ ಮುಕ್ತಾಹಾರವಿಮಿಶ್ರಿತಾನ್ ॥ ೮೩ ॥

---

೭೯. ಆ ತಲೆಯಲ್ಲಿ ತಂದೆಯಾದ ಜನಕನು ಕೊಟ್ಟದ್ದ ಚೂಡಾಮಣಿಯೆಂಬ ಒಡವೆಯಿದ್ದಿತು. ನಾನಾರತ್ನಗಳಿಂದಲೂ, ಮುತ್ತಿನ ಗೊಂಚಲುಗಳಿಂದಲೂ, ರಮ್ಯವಾಗಿದ್ದಿತು.

೮೦–೮೧. ತಲೆಯಲ್ಲಿ ರತ್ನದ ಸರಿಗೆಗೆ ಮುತ್ತುಗಳನ್ನು ಕೋದು ಹಾಕಿಕೊಂಡಿದ್ದಳು. ಅದರಲ್ಲಿರತ್ನಗಳೂ, ಹೂವುಗಳೂ, ಸೇರಿದ್ದುವು. ವೈಡೂರ್ಯ, ವಜ್ರ, ಹವಳ, ಇವುಗಳಿಂದ ಬಹು ಮನೋಹರವಾಗಿದ್ದಿತು. ಆ ಒಡವೆಗಳ ಮೇಲುಭಾಗದಲ್ಲಿ ಸುಗಂಧವಾದ ಹೂಗಳನ್ನು ಮುಡಿದುಕೊಂಡಿದ್ದಳು.

೮೨–೮೩. ಅನಂತರ ಜಡೆಯಲ್ಲಿ ಉದ್ದಕ್ಕೂ ಒಡವೆಗಳನ್ನು ಹಾಕಿಕೊಂಡಿದ್ದಳು. ಪಕ್ಷಿಗಳಂತಿರುವ ಅನೇಕ ಒಡವೆಗಳು ಅಲ್ಲಿದ್ದುವು. ಅವು ಚಿಗುರಿನೊಳಗಿದ್ದು ಬಹು ಪ್ರಕಾಶವನ್ನು ಕೊಡುವಂತಿದ್ದುವು. ಚಿನ್ನದ ಸರಿಗೆಯಿಂದ ಕಟ್ಟಿದ ಅನೇಕ ಕುಚ್ಚುಗಳನ್ನು ನೇತಾಡುವಂತೆ ಜಡೆಯತುದಿಗೆ

ಲಂಬಮಾನಾಂ ದದೃಶುಸ್ತೇ ಮಣಿಮಾಣಿಕ್ಯಸಂಯುತಾಂ ।
ವೇಣ್ಯಗ್ರೇ ಸಂಸ್ಥಿತಾಂ ರಮ್ಯಾಂ ಪುಷ್ಪಾಪೀಡಸಮನ್ವಿತಾಂ ॥ ೮೪ ॥

ಏವಂ ಸೀತಾಂ ದದೃಶುಸ್ತೇ ಶ್ರಮುನ್ಯಸ್ತವಿಭೂಷಣಾಂ ।
ಸರ್ವಾಲಂಕಾರಸಹಿತಾಂ ತಾಂ ದ್ರಷ್ಟುಂ ಕೋಽಪಿ ನ ಕ್ಷಮಃ ॥ ೮೫ ॥

ದಿವ್ಯಾಲಂಕಾರರತ್ನಾನಾಂ ಪ್ರಭಯಾ ಹತಲೋಚನಾಃ ।
ವಾಮಹಸ್ತೇನ ಪಾತ್ರಂ ಚ ದರ್ವೀಂ ದಕ್ಷಿಣಸತ್ಕರೇ ॥ ೮೬ ॥

ದಧಾನಾಂ ಪದ್ಮಚರಣಾಂ ರಕ್ತೋತ್ಪಲಕರಾಂ ವರಾಂ ।
ಪದ್ಮಾಸ್ಯಾಂ ಪದ್ಮಪತ್ರಾಕ್ಷೀಂ ಪದ್ಮಗರ್ಭಸ್ವರೂಪಿಣೀಂ ॥ ೮೭ ॥

ಹಾಕಿಕೊಂಡಿದ್ದಳು. ಅವುಗಳ ತುದಿಯಲ್ಲಿ ಮಾಣಿಕ್ಯವೇ ಮುಂತಾದ ಮಣಿಗಳು ವಿರಾಜಸುತ್ತಿದ್ದುವು. ಜಡೆಯಲ್ಲಿ ಹೂಗೊಂಚಲಿದ್ದಿತು.

೮೫. ಶ್ರಮಪಟ್ಟು ಇಷ್ಟು ಒಡವೆಗಳನ್ನು ತೊಟ್ಟಿರುವ ಆ ಸೀತೆಯನ್ನು ಅಲ್ಲಿರುವವರೆಲ್ಲರೂ ನೋಡಿದರು. ಸರ್ವಾಲಂಕಾರದಿಂದ ಕೂಡಿರುವ ಆಕೆಯನ್ನು ನೋಡಲು ಅಲ್ಲಿದ್ದವರಲ್ಲಿ ಯಾರಿಂದಲೂ ಸಾಧ್ಯವಾಗಲೇ ಇಲ್ಲ.

೮೬. ಆ ಸೀತೆಯು ಧರಿಸಿದ್ದ ಒಡವೆಗಳ ರತ್ನಗಳ ಕಾಂತಿಯಿಂದ ನೋಡುತ್ತಿದ್ದವರ ಕಣ್ಣುಗಳೆಲ್ಲವೂ ಮುಚ್ಚಿಹೋದುವು. ಎಡಗೈಯ್ಯಲ್ಲಿ ಪದಾರ್ಥವು ತುಂಬಿರುವ ಪಾತ್ರೆಯನ್ನೂ ಬಲಗೈಯ್ಯಲ್ಲಿ ಸೌಟನ್ನೂ ಹಿಡಿದಿದ್ದಳು.

೮೭. ಕಾಲುಗಳು ಪದ್ಮಗಳಂತಿದ್ದುವು. ಕೈಗಳು ಕೆಂಪುಕಮಲದಂತಿದ್ದುವು. ಮುಖವೂ ಪದ್ಮದಂತಿದ್ದಿತು. ಪದ್ಮದ ಎಸಳಿನಂತೆ ಕಣ್ಣುಗಳು ಇದ್ದುವು. ಆಕೆಯು ಪದ್ಮದ ಮಧ್ಯಯಲ್ಲಿರುವ ಲಕ್ಷ್ಮಿಯಂತಿದ್ದಳು.

ದಿವ್ಯಕರ್ಪೂರಗಂಧೈಶ್ಚ ಚಂದನೈರಪಿ ಚರ್ಚಿತಾಂ ।
ಸ್ಫುರನ್ಮಂಜೀರಚರಣಾಂ ದಿವ್ಯಕಂಕಣಮಂಡಿತಾಂ ॥ ೮೮ ॥

ಸ್ವಪದಾಲಕ್ತವರ್ಣೇನ ಗತಿಂ ದರ್ಶಯತೀಂ ನಿಜಾಂ ।
ರತ್ನಾಂಗದಧರಾಂ ಸೀತಾಂ ದದೃಶುಸ್ತೇ ದ್ವಿಜಾದಯಃ ॥ ೮೯ ॥

ಗಜೇಂದ್ರಗಮನಾಂ ರಮ್ಯಾಂ ದಿವ್ಯಪುಷ್ಪೈಸ್ಸುಶೋಭಿತಾಂ ।
ದಿವ್ಯಮಂದಾರಕುಸುಮಮಾಲಾಭಿಶ್ಚ ಸುಶೋಭಿತಾಂ ॥ ೯೦ ॥

ಕಸ್ತೂರೀಕೃತತಿಲಕಾಂ ಕುಂಕುಮೇನ ಸುಶೋಭಿತಾಂ ।
ಹರಿದ್ರಯಾ ಕಜ್ಜಲಾದ್ಯೈರ್ಮಂಡಿತಾಂ ಚ ಸ್ಮಿತಾನನಾಂ ॥ ೯೧ ॥

---

೮೮. ದಿವ್ಯವಾದ ಪಚ್ಚಕರ್ಪೂರವನ್ನೂ, ಸುಗಂಧವನ್ನೂ ಪೂಸಿಕೊಂಡಿದ್ದಳು. ಕಾಲುಗಳಲ್ಲಿ ಕಾಲುಬಳೆಗಳು ಧ್ವನಿಮಾಡುತ್ತ ಪ್ರಕಾಶಿಸುತ್ತಿದ್ದುವು. ದಿವ್ಯವಾದ ಕೈಬಳೆಗಳನ್ನು ತೊಟ್ಟಿದ್ದಳು.

೮೯. ಕಾಲಿಗೆ ಅರಗಿನ ಬಣ್ಣವನ್ನು ಪೂಸಿಕೊಂಡಿದ್ದಳು. ಅದರಿಂದ ಕೂಡಿದ ರಕ್ತದ ಬಣ್ಣವುಳ್ಳ ತನ್ನ ಗಮನದಿಂದ ತನ್ನ ನಡಗೆಯ ಸೊಬಗನ್ನೂ ತೋರಿಸುತ್ತಿದ್ದಳು. ರತ್ನಗಳಿಂದ ಕೂಡಿದ ಭುಜಕೀರ್ತಿಯನ್ನು ತೊಟ್ಟ ಅವಯವಗಳುಳ್ಳ ಆ ಸೀತೆಯನ್ನು ಅವರು ನೋಡಿದರು.

೯೦. ಗಜೇದ್ರನಂತೆ ನಡೆಯುತ್ತಿದ್ದಳು. ಸುಂದರಳಾಗಿದ್ದಳು. ದಿವ್ಯವಾದ ಹೂಗಳನ್ನು ಮುಡಿದುಕೊಂಡಿದ್ದಳು. ದಿವ್ಯವಾದ ಪಾರಿಜಾತಮಾಲೆಯನ್ನು ಹಾಕಿಕೊಂಡು ಶೋಭಿತಳಾಗಿದ್ದಳು.

೯೧. ಕಸ್ತೂರಿಯ ‘ಲಕವನ್ನು ಧರಿಸಿದ್ದಳು. ಕುಂಕುಮವನ್ನು ಇಟ್ಟುಕೊಂಡಿದ್ದಳು. ಅರಿಶಿನವನ್ನು ಪೂಸಿಕೊಂಡಿದ್ದಳು. ಕಣ್ಣಿಗೆ ಕಾಡಿಗೆಯನ್ನು ಹಾಕಿಕೊಂಡಿದ್ದಳು. ನಗೆಮುಖದಿಂದ ಕೂಡಿದ್ದಳು.

ಇತಿ ದೃಷ್ಟ್ವಾ ಜಾನಕೀಂ ತೇಽಭೂರ್ವ ಚಿತ್ರೋಪಮಾಸ್ತದಾ ।
ಆತ್ಮಾನಂ ನ ವಿದುಸ್ಸರ್ವೇ ಸೀತಾಸೌಂದರ್ಯವಿಸ್ಮಿತಾಃ ॥ ೯೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ವಿಲಾಸಕಾಂಡೇ ಸೀತಾಲಂಕಾರವರ್ಣನಂ ನಾಮ ಚತುರ್ಥಸ್ಸರ್ಗಸ್ಸಮಾಪ್ತಃ

---

೯೨. ಈ ರೀತಿಯಾದ ಸೀತೆಯನ್ನು ನೋಡಿ ಎಲ್ಲರೂ ಚಿತ್ರಿಸಿದಂತೆ ಇದ್ದರು. ಸೀತೆಯ ಸೌಂದರ್ಯದಿಂದ ವಿಸ್ಮಿತರಾಗಿ ತಮ್ಮನ್ನೇ ತಾವು ತಿಳಿಯದವರಾದರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಸೀತಾಲಂಕಾರವರ್ಣನ ಎಂಬ ನಾಲ್ಕನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
॥ ನಾಲ್ಕನೆಯ ಸರ್ಗದ ಸಾರಾಂಶವು ॥

ಬೆಳಗಿನ ಜಾವದಲ್ಲಿ ಸ್ತುತಿಪಾಠಕರು ಹೊಗಳಿ ಆ ಶ್ರೀರಾಮನಿಗೆ ಎಚ್ಚರವಾಗುವಂತೆ ಮಾಡಿದರು. ಸೀತೆಗೂ ಎಚ್ಚರವಾಯಿತು. ಮೊದಲು ಸೀತೆಯು ಹಾಸಿಗೆಯಿಂದೆದ್ದಳು. ರಾಮನು ಎಚ್ಚರಗೊಂಡು ದೇವತೆಗಳನ್ನೂ ಸ್ಮರಿಸಬೇಕಾದ ಇತರ ಪದಾರ್ಥಗಳನ್ನೂ ಸ್ಮರಿಸಿದನು. ಸೀತೆಯೂ ಕೂಡ ಸ್ಮರಿಸಬೇಕಾದ ದೇವತೆಗಳನ್ನೂ ದೊಡ್ಡವರನ್ನೂ ಸ್ಮರಿಸಿದಳು. ಅನಂತರ ಶ್ರೀರಾಮನಿಗೆ ನಮಸ್ಕರಿಸಿ ಮುಂದಿನ ಕೆಲಸಕ್ಕೆ ಹೊರಟುಹೋದಳು.

ಶ್ರೀರಾಮನು ಹಾಸಿಗೆಯಿಂದ ಎದ್ದು ಜಲಬಾಧೆ ಮಲಬಾಧೆಗಳನ್ನು ನಿವೃತ್ತಿಮಾಡಿಕೊಂಡು ಹಲ್ಲನ್ನುಜ್ಜಿಕೊಂಡು ಮುಖವನ್ನು ತೊಳೆದುಕೊಂಡನು. ರಾಮತೀರ್ಥದಲ್ಲಿ ಸ್ನಾನಮಾಡಿ ಸಂಧ್ಯಾವಂದನೆ ಅಗ್ನಿಹೋತ್ರ ದೇವತಾರ್ಚನೆಗಳನ್ನು ಮಾಡಿ ಅನೇಕವಾದ ದಾನಗಳನ್ನು ಕೊಟ್ಟನು.

ಇಷ್ಟುಹೊತ್ತಿಗೆ ಸೀತೆಯು ಸ್ನಾನಮಾಡಿ ಗೌರಿಪೂಜೆಯನ್ನು ಮಾಡಿ ಅತ್ತೆಯರಿಗೆ ನಮಸ್ಕರಿಸಿ ರಾಮಚಂದ್ರನಿಗೂ ನಮಸ್ಕರಿಸಿ ಅವನ ಬಳಿಯಲ್ಲಿ ನಿಂತಳು.

ಅನಂತರ ರಾಮನು ಎಲ್ಲರೊಡನೆಯೂ ಕೂಡಿಕೊಂಡು ವಸಿಷ್ಠನಿಂದ ಪುರಾಣವನ್ನು ಕೇಳಿದನು. ಅನಂತರ ಅವನನ್ನು ಗೌರವಿಸಿ ಪೂಜಿಸಿದನು. ಅನಂತರ ದೊಡ್ಡವರಿಗೆಲ್ಲರಿಗೂ ನಮಸ್ಕರಿಸಿ ಬಹುಮಾನ ಕೊಡಬೇಕಾದವರಿಗೆ

ಯೋಗ್ಯವಾದ ಬಹುಮಾನಗಳನ್ನು ಕೊಟ್ಟನು. ಸೀತೆಯು ಕಾಮಧೇನುವನ್ನು ಪೂಜಿಸಿ ಅದನ್ನು ಉತ್ತಮವಾದ ಆಹಾರವನ್ನು ಕೊಡುವಂತೆ ಕೇಳಿಕೊಂಡಳು.

ಅನಂತರ ಎಲ್ಲರಿಗೂ ಚಿನ್ನದತಟ್ಟೆಗಳನ್ನು ಹಾಕಿ ಬಟ್ಟಲುಗಳನ್ನಿಟ್ಟು ಓರಗಿತ್ತಿಯರೊಡನೆ ಬಡಿಸಿದಳು. ಅವರೆಲ್ಲರೂ ಬಹು ಬಗೆಯಾದ ಆಭರಣಗಳನ್ನು ಹಾಕಿಕೊಂಡಿದ್ದರು.

ಸೀತೆಯು ದಿವ್ಯಾಲಂಕಾರಗಳನ್ನು ಧರಿಸಿ ಎಡಗೈಯ್ಯಲ್ಲಿ ಪದಾರ್ಥದ ಪಾತ್ರೆಯನ್ನೂ ಬಲಗೈಯಲ್ಲಿ ಸೌಟನ್ನೂ ಹಿಡಿದು ಬಡಿಸಲು ಬಂದಳು. ಕಾಲಿಗೆ ಬಣ್ಣವನ್ನು ಪೂಸಿಕೊಂಡು ದಿವ್ಯವಾದ ನಡಗೆಯಿಂದ ಬಂದು ತಟ್ಟೆಗಳಿಗೆ ಬಡಿಸುತ್ತಿದ್ದಳು.

ಸೀತೆಯ ಈ ಸೌಂದರ್ಯವನ್ನು ನೋಡಿ ಜನರೆಲ್ಲರೂ ಆಶ್ಚರ್ಯಪಡುತ್ತ ತಮ್ಮನ್ನೇ ತಾವು ಮರೆತು ಚಿತ್ರದಲ್ಲಿ ಬರೆದಂತೆ ಇದ್ದರು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

|| ಪಂಚಮಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥ ಸೀತಾ ಕ್ಷಣೇನೈವ ಚಕಾರ ಪರಿವೇಷಣಂ ।
ಹೇಮಪಾತ್ರೇಷು ಸರ್ವೇಷಾಂ ಪಕ್ವಾನ್ನೈರ್ವಿವಿಧೈರ್ಮುದಾ || ೧ ||

ಕಾಮಧೇನೂದ್ಭವೈಶ್ಚೈವ ಮಂಡಕಾ ಪೂರ್ಣಪೂರಿತಾ ।
ವಟಿಕಾ ಫೇನಿಕಾಶ್ಚಾಪಿ ಪಾಯಸಾನ್ಯುಜ್ಜ್ವಲಾನಿ ಚ || ೨ ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಐದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಅನಂತರ ಸೀತೆಯು ಚಿನ್ನದ ಪಾತ್ರೆಯಲ್ಲಿ ಪದಾರ್ಥಗಳನ್ನು ಇಟ್ಟುಕೊಂಡು ಅನೇಕ ಬಗೆಯಾದ ಪಕ್ವಾನ್ನಗಳನ್ನು ಒಂದು ಕ್ಷಣಕಾಲದಲ್ಲಿಯೇ ಬಡಿಸಿದಳು.

೨. ಅವೆಲ್ಲವೂ ಕಾಮಧೇನುವಿನಿಂದ ಸೃಷ್ಟಿಸಲ್ಪಟ್ಟದ್ದುವು. ಪೂರ್ಣವನ್ನು ಹಾಕಿರುವ ಹೋಳಿಗೆ, ಕಡಬು ಮುಂತಾದುವನ್ನೂ ಮಂಡಿಗೆ ಮುಂತಾದ ಪದಾರ್ಥಗಳನ್ನೂ, ವಡೆಗಳನ್ನೂ ಫೇಣಿಗಳನ್ನೂ ಉತ್ತಮವಾದ ಪಾಯಸಗಳನ್ನೂ ಬಡಿಸಿದಳು.

ಪರ್ಪಟಿಕಾ ಲಡ್ಡುಕಾಂಶ್ಚ ಕೂಶ್ಮಾಂಡವಟಿಕಾಂಸ್ತಥಾ |
ಸುಭೃಷ್ಟತಂಡುಲಕೃತಾ ದಧಿ ಕ್ಷೀರಂ ಘೃತಂ ಮಧು || ೩ ||

ಪೃಥಕ್ಕಾಂಚನದ್ರೋಣೀಷು ಜಾನಕೀ ಪರ್ಯವೇಷಯತ್ |
ಶರ್ಕರಾಶ್ಶ್ವೇತವರ್ಣಾಶ್ಚ ತಥೈವ ಖಂಡಶರ್ಕರಾಃ || ೪ ||

ಮರೀಚಾದ್ಯುಪಚಾರೈಶ್ಚ ಸಂಸ್ಕೃತಂ ತಕ್ರಮುತ್ತಮಂ |
ಘೃತಪಾಚಿತಶಾಕಾಶ್ಚ ಹ್ಯಪಶಾಕಾರುಚಿಪ್ರದಾಃ || ೫ ||

ತಿಲಸಂಮಿಶ್ರವಟಿಕಾನಾರ್ದ್ರಕಂ ಬೀಜಪೂರಕಂ |
ಆಮ್ರಾದೀನಾಂ ರಸಾಂಶ್ಚಾಪಿ ರಂಭಾದೀನಿ ಫಲಾನ್ಯಪಿ || ೬ ||

ಏವಮಾದೀನ್ಯನೇಕಾನಿ ಚೋಷ್ಯಾಣಿ ವಿವಿಧಾನಿ ಚ |
ತಥಾ ಲೇಹ್ಯಾನಿ ಪೇಯಾನಿ ಜಾನಕೀ ಪರ್ಯವೇಷಯತ್ || ೭ ||

೩-೪. ಹಪ್ಪಳ, ಲಾಡು, ಆಂಬೊಡೆ, ಖರ್ಜಿಕಾಯಿ, ಹಾಲು, ಮೊಸರು, ತುಪ್ಪ, ಜೇನು ಇವುಗಳನ್ನು ಬೇರೆ ಬೇರೆ ಪಾತ್ರೆಗಳಲ್ಲಿಟ್ಟುಕೊಂಡು ಸೀತೆಯು ಬಡಿಸಿದಳು. ಬೂರಾಸಕ್ಕರೆ, ಕೊಡಿಯ್ಥಾಲದ ಸಕ್ಕರೆಗಳನ್ನೂ ಬಡಿಸಿದಳು.

೫. ಮೆಣಸು ಮುಂತಾದುವುಗಳನ್ನು ಹಾಕಿ ಒಗ್ಗರಣೆ ಹಾಕಿರುವ ಉತ್ತಮವಾದ ಮಜ್ಜಿಗೆ (ಮಜ್ಜಿಗೆ ಹುಳಿ) ತುಪ್ಪದಿಂದ ಮಾಡಿದ ಪಲ್ಯಗಳು ಗೊಜ್ಜುಗಳು, ಇವನ್ನು ಬಡಿಸಿದಳು.

೬. ಎಳ್ಳುಹಾಕಿಮಾಡಿರುವ ವೊಡೆಗಳನ್ನೂ ಅದನ್ನು ನೆನೆಸಿ ಮೆತ್ತಗೆ ಮಾಡಿ ಅವುಗಳನ್ನೂ ಲಕ್ಕೋಟಿ ಹೋಳಿಗೆ, ಮಾವಿನಹಣ್ಣಿನ ಶೀಕರಣಿ ಮುಂತಾದ ರಸಗಳನ್ನೂ ಬಾಳೆಯಹಣ್ಣು, ಮುಂತಾದುವನ್ನೂ ಬಡಿಸಿದಳು.

೭. ಇವೇ ಮುಂತಾದುವನ್ನೂ ಬೇರೆಯಾದ ಬಿಸಿ ಬಿಸಿಯಾದ ಪದಾರ್ಥಗಳನ್ನೂ ಲೇಹ್ಯಗಳು (ಚಟ್ನಿಗಳು) ಪೇಯಗಳು (ದೊನ್ನೆಯಲ್ಲಿ ಕುಡಿಯುವಂತಹವು) ಇವುಗಳನ್ನೂ ಬಡಿಸಿದಳು.

ತತೋ ರಾಮುಸ್ಸುಹೃನ್ಮಿತ್ರೈಃ ಕಥಾಂ ಕುರ್ವನ್ ಸುಖೇನ ಸಃ ।
ಅಕರೋದುಪಹಾರಂ ಚ ಕರಶುದ್ಧಿಂ ವಿಧಾಯ ಸಃ ॥ ೮ ॥

ಸರ್ವೇಷಾಂ ನಿಜಹಸ್ತೇನ ದದೌ ತಾಂಬೂಲಮುತ್ತಮಂ ।
ಸ್ವಯಂ ಭುಕ್ತ್ವಾಥ ತಾಂಬೂಲಂ ವಾಸಾಂಸಿ ಪರಿಧಾಯ ಸಃ ॥ ೯ ॥

ಬದ್ಧ್ವಾ ಶಸ್ತ್ರಾಣಿ ಸರ್ವಾಣಿ ದೃಷ್ಟ್ವಾದರ್ಶೇ ನಿಜಂ ಮುಖಂ ।
ಆರುಹ್ಯ ಶಿಬಿಕಾಂ ದಿವ್ಯಾಂ ಮುಕ್ತಾಗುಚ್ಛವಿರಾಜಿತಾಂ ॥ ೧೦ ॥

ಹೈಮಾರತ್ನಾದಿಭಿಶ್ಚಿತ್ರಾಂ ಯಯೌ ನಿಜಗೃಹಾದ್ಬಹಿಃ ।
ಬಂಧುಭಿಸ್ಸಚಿವೈರಿಷ್ಟೈರ್ದೂತೈಸ್ಸರ್ವತ್ರ ವೇಷ್ಟಿತಃ ॥ ೧೧ ॥

---

೮. ಹೀಗೆ ಬಡಿಸುತ್ತಿರಲು ರಾಮನು ಸ್ನೇಹಿತರೊಡನೆ ಕಥೆಗಳನ್ನು ಹೇಳುತ್ತ ಕೇಳುತ್ತ ಸುಖವಾಗಿ ಉಪಾಹಾರವನ್ನು ಮಾಡಿಕೊಂಡು ಕೈಯ್ಯನ್ನು ತೊಳೆದುಕೊಂಡನು.

೯. ಎಲ್ಲರೂ ಕೈಗಳನ್ನು ತೊಳೆದುಕೊಂಡಮೇಲೆ ರಾಮನು ತಾನೇ ಎಲ್ಲರಿಗೂ ತಾಂಬೂಲವನ್ನು ಕೊಟ್ಟನು. ತಾನೂ ತಾಂಬೂಲವನ್ನು ಹಾಕಿಕೊಂಡನು. ಅನಂತರ ಬೇರೆಯ ಬಟ್ಟೆಗಳನ್ನು ಉಟ್ಟುಕೊಂಡನು.

೧೦. ಎಲ್ಲಾ ಶಸ್ತ್ರಗಳನ್ನೂ ಕಟ್ಟಿಕೊಂಡನು. ಅನಂತರ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡನು. ಅನಂತರ ಮುತ್ತಿನ ಗೊಂಚಲನ್ನು ನೇತುಹಾಕಿರುವ, ರತ್ನಗಳನ್ನು ಕೆತ್ತಿರುವ, ಚಿನ್ನದ ಪಲ್ಲಕ್ಕಿಯಲ್ಲಿ ಕುಳಿತನು.

೧೧. ಆ ದಿವ್ಯವಾದ ಪಲ್ಲಕ್ಕಿಯಲ್ಲಿ ಕುಳಿತು ಮನೆಯಿಂದ ಹೊರಗೆ ಹೊರಟನು. ಆ ಪಲ್ಲಕ್ಕಿಯ ಸುತ್ತಲೂ ತಮ್ಮಂದಿರೂ, ಮಿತ್ರರೂ, ಮಂತ್ರಿಗಳೂ, ದೂತರೂ ಆವರಿಸಿಕೊಂಡಿದ್ದರು.

ಸ್ತುತೋ ಬಂದಿಜನೈಸ್ಸರ್ವೈರ್ಯಯೌ ಸ ಜನನೀಗೃಹಂ ।
ತತ್ರ ನತ್ವಾಥ ಕೌಸಲ್ಯಾಂ ತಥಾ ಮಾತೄರ್ಯಥಾಕ್ರಮಂ ॥ ೧೨ ॥

ಆಶೀರ್ಭಿರೀಡಿತಸ್ತಾಭಿರ್ಯಯೌ ರಾಮಸ್ಸಭಾಂತರಂ ।
ತತ್ರ ಸಿಂಹಾಸನೇ ಸ್ಥಿತ್ವಾ ಮಂತ್ರಿಭಿರ್ಲಕ್ಷ್ಮಣಾದಿಭಿಃ ॥ ೧೩ ॥

ರಾಜಕಾರ್ಯಾಣಿ ಸರ್ವಾಣಿ ಚಕಾರ ನೀತಿಮತ್ತರಃ ।
ಶಶಾಸ ರಾಜ್ಯಂ ಧರ್ಮೇಣ ಬುದ್ಧಿಮಾ ಚಾರಲೋಚನಃ ॥ ೧೪ ॥

ಅಥ ಸೀತೋಪಹಾರಂ ಸ್ವಸಖೀಭಿಶ್ಚೋರ್ಮಿಲಾದಿಭಿಃ ।
ದೇವರಾಣಾಂ ಕಾಮಿನೀಭಿಃ ಸ್ವಸೃಭಿಶ್ಚಾಕರೋತ್ಸುಖಂ ॥ ೧೫ ॥

ಕರಶುದ್ಧಿಂ ವಿಧಾಯಾಥ ಭುಕ್ತ್ವಾ ತಾಂಬೂಲಮುತ್ತಮಂ ।
ಪರಿಧಾಯ ಹರಿದ್ವಸ್ತ್ರಂ ತಥಾ ರಕ್ತಾಂ ತು ಕಂಚುಕೀಂ ॥ ೧೬ ॥

---

೧೨. ಸ್ತುತಿಪಾಠಕರು ಹೊಗಳುತ್ತಿದ್ದರು. ತನ್ನ ಮನೆಯಿಂದ ಹೊರಟವನು ತಾಯಿಯ ಮನೆಗೆ ಹೋದನು. ಅಲ್ಲಿ ತಾಯಿಯಾದ ಕೌಸಲ್ಯೆಗೆ ನಮಸ್ಕರಿಸಿದನು. ಅನಂತರ ಮಿಕ್ಕತಾಯಿಯರಿಗೂ ನಮಸ್ಕರಿಸಿದನು. ಅವರೆಲ್ಲರಿಂದಲೂ ಆಶೀರ್ವಾದವನ್ನು ಪಡೆದು ಸಭಾಸ್ಥಾನಕ್ಕೆ ಹೋದನು.

೧೩–೧೪. ಅಲ್ಲಿ ಸಿಂಹಾಸನದಮೇಲೆ ಕುಳಿತು ಮಂತ್ರಿಗಳೊಡನೆಯೂ, ತಮ್ಮಂದಿರೊಡನೆಯೂ, ರಾಜಕಾರ್ಯಗಳನ್ನು ನೆರವೇರಿಸಿದನು. ನೀತಿಯನ್ನೂ, ನ್ಯಾಯವನ್ನೂ, ಮುಂದುಮಾಡಿಕೊಂಡು ಅದರಂತೆ ರಾಜ್ಯವನ್ನು ಬುದ್ಧಿವಂತಿಕೆಯಿಂದಲೂ ಧರ್ಮದಿಂದಲೂ ಆಳಿದನು. ಗೂಢಚಾರರಿಂದ ಎಲ್ಲಾ ವಿಷಯವನ್ನೂ ತಿಳಿದುಕೊಳ್ಳುತ್ತಿದ್ದನು.

೧೫. ಅನಂತರ ಇತ್ತ ಸೀತೆಯೂ, ತನ್ನ ಸಖಿಯರೊಡನೆಯೂ, ಅತ್ತಿಗೆ ನಾದಿನಿಯರೊಡನೆಯೂ, ಆಹಾರವನ್ನು ತೆಗೆದುಕೊಂಡಳು.

೧೬. ಕೈತೊಳೆದುಕೊಂಡು ತಾಂಬೂಲವನ್ನು ಹಾಕಿಕೊಂಡಳು. ಅನಂತರ ಹೊಂಬಣ್ಣದ ಪಟ್ಟೆಯ ಶೀರೆಯನ್ನು ಉಟ್ಟುಕೊಂಡಳು. ಕೆಂಪುಬಣ್ಣದ ರವುಕೆಯನ್ನು ತೊಟ್ಟುಕೊಂಡಳು.

ಹೇಮತಂತುಸುಪುಷ್ಪಾಢ್ಯಾಂ ಮುಕ್ತಾಜಾಲವಿಗುಂಫಿತಾಂ ।
ಗೇಹಾಂತರ್ವರ್ತ್ಯುಪವನಶಾಲಾಯಾಂ ಸಂಸ್ಥಿತಾಭವತ್ ॥ ೧೭ ॥

ಸಖೀಭಿರ್ವೇಷ್ಟಿತಾ ರಮ್ಯಾ ಧೃತಾಧೋಂಕೋಪಬರ್ಹಣಾ ।
ತತೋ ದಿವ್ಯಾನಲಂಕಾರಾನ್ನಿಜದೇಹೇ ದಧಾರ ಸಾ ॥ ೧೮ ॥

ಯೇ ಮಯಾ ಕಥಿತಾ ನೈವ ಪೂರ್ವಸ್ಮಿನ್ಸರ್ಗೇ ಕ್ರಮೇಣ ತೇ ।
ಕಸ್ತಸ್ಯಾ ವರ್ಣನೇ ಶಕ್ತೋ ಭವೇದತ್ರ ನರೋತ್ತಮಃ ॥ ೧೯ ॥

ಚತುರಾಸ್ಯಃ ಕುಂಠಿತೋಭೂತ್ಪಂಚಾಸ್ಯಶ್ಚ ಷಡಾನನಃ ।
ಉಚ್ಚೈಃಶ್ರವಾಶ್ಚ ಸಪ್ತಾಸ್ಯಸ್ಸಹಸ್ರಾಸ್ಯೋಪಿವರ್ಣನೇ ॥ ೨೦ ॥

ಶ್ರುತ್ವಾ ಸೀತಾಮುಪವನೇ ಗತಾಂ ತೇ ಜಲಪೂರಕಾಃ ।
ಜಲಯಂತ್ರಾಣಿ ಸರ್ವಾಣಿ ಚಕ್ರುರ್ಮುಕ್ತಾನಿ ವೇಗತಃ ॥ ೨೧ ॥

---

೧೭. ಆ ರವುಕೆಯಲ್ಲಿ ಚಿನ್ನದ ಸರಿಗೆಯಿಂದ ಹೂವುಗಳನ್ನು ರಚಿಸಿದ್ದರು. ಮುತ್ತಿನ ಗೊಂಚಲನ್ನು ಅಂಚುಗಳಿಗೆ ಹಾಕಿದ್ದರು. ಈ ರೀತಿಯಾದ ಬಟ್ಟೆ ಒಡವೆಗಳನ್ನು ಧರಿಸಿಕೊಂಡು ಅನಂತರ ಮನೆಯ ಒಳಗಡೆಗೇ ಸೇರಿದಂತಿರುವ ಉಪವನದಲ್ಲಿ ಕುಳಿತುಕೊಂಡಳು.

೧೮. ಸೀತೆಯು ನಾನು ಹಿಂದೆ ಹೇಳಿದ ಒಡವೆಗಳನ್ನು ಸಖಿಯರಿಂದ ಸೇರಿಕೊಂಡು ಧರಿಸಿಕೊಂಡಳು. ಆ ಅಲಂಕಾರಗಳನ್ನು ವರ್ಣಿಸಲು ಯಾರಿಂದ ತಾನೇ ಸಾಧ್ಯವಾದೀತು ?

೧೯–೨೦. ಈ ಅಲಂಕಾರವನ್ನು ವರ್ಣಿಸಲು ನಾಲ್ಕು ಮುಖವುಳ್ಳ ಬ್ರಹ್ಮನೂ ಶಕ್ತನಾಗಲಾರನು. ಐದುಮುಖವುಳ್ಳ ಶಿವನಾಗಲಿ, ಆರುಮುಖವುಳ್ಳ ಕುಮಾರಸ್ವಾಮಿಯಾಗಲಿ, ಏಳುಮುಖವುಳ್ಳ ಉಚ್ಚೈಃಶ್ರವಸ್ಸೇ ಆಗಲಿ, ಸಾವಿರ ಮುಖಗಳುಳ್ಳ ಆದಿಶೇಷನಾಗಲಿ, ಇವರೂ ಕೂಡ ಒಬ್ಬರೂ ವರ್ಣಿಸಲು ಶಕ್ತಸಾಲದವರು.

೨೧. ಸೀತೆಯು ಉಪವನದಲ್ಲಿ ಕುಳಿತಿರುವುದನ್ನು ಕೇಳಿ ಸೇವಕರು ಅಲ್ಲಿರುವ ಜಲಯಂತ್ರಗಳಲ್ಲೆಲ್ಲಾ ನೀರು ಬರುವಂತೆ ಮಾಡಿದರು.

ರತ್ನಮಂಚಕಸಂಸ್ಥಾ ಸಾ ಸೀತಾ ಚಾಮರವೀಜಿತಾ ।
ಜಲಯಂತ್ರಕೌತುಕಾನಿ ದದರ್ಶ ನಗವೀರುಧಾಂ ॥ ೨೨ ॥

ಏತಸ್ಮಿನ್ನಂತರೇ ರಾಮೋ ರಾಜಕಾರ್ಯಾಣಿ ಕೃತ್ಸ್ನಶಃ ।
ಕೃತ್ವಾ ಯಯೌ ಸಭಾಯಾಸ್ಸ ನಿಜಗೇಹಂ ತು ಬಂಧುಭಿಃ ॥ ೨೩

ತದಾ ದುಂದುಭಿನಿರ್ಘೋಷೋ ನವವಾದ್ಯಸ್ವನಾ ಅಪಿ ।
ಶಂಖಾನಾಂ ಗೋಮುಖಾನಾಂ ಚ ಭೇರೀಣಾಂ ತುಮುಲಸ್ವನಃ ॥ ೨೪ ॥

ಬಭೂವುರ್ಯಂತ್ರಶಬ್ದಾಶ್ಚ ತೂರ್ಯಾದೀನಾಂ ಸ್ವನಾಶ್ಶುಭಾಃ ।
ನನೃತುರ್ವಾರನಾರ್ಯಶ್ಚ ತುಷ್ಟುವುರ್ಮಾಗಧಾದಯಃ ॥ ೨೫ ॥

---

೨೨. ಸೀತೆಯು ರತ್ನದ ಮಂಚದಲ್ಲಿ ಕುಳಿತುಕೊಂಡು ಸಖಿಯರಿಂದ ಚಾಮರದಲ್ಲಿ ಬೀಸಿಸಿಕೊಳ್ಳುತ್ತಿದ್ದಳು. ಆಗ ಅಲ್ಲಿ ರಚಿಸಿದ್ದ ಉಪವನದ ಕೃತ್ರಿಮ ಪರ್ವತಗಳಲ್ಲಿ ಬಿಡುತ್ತಿದ್ದ ಜಲಯಂತ್ರಗಳ ಸೊಬಗನ್ನು ನೋಡುತ್ತಿದ್ದಳು. ಅಲ್ಲದೆ ಅಲ್ಲಿದ್ದ ಮರಗಳು ಬಳ್ಳಿಗಳು ಇವುಗಳ ರಮ್ಯತೆಯನ್ನೂ ನೋಡಿ ಆನಂದಿಸುತ್ತಿದ್ದಳು.

೨೩–೨೪. ಇತ್ತ ರಾಮನು ರಾಜ್ಯಕಾರ್ಯಗಳೆಲ್ಲವನ್ನೂ ಪೂರ್ತಿಯಾಗಿ ಮಾಡಿ ಸಭೆಯಿಂದೆದ್ದು ತಮ್ಮಂದಿರೊಡನೆ ಮನೆಗೆ ಹೋದನು. ಆಗ ದುಂದುಭಿಗಳೂ, ನವವಾದ್ಯಗಳೂ ಮೊಳಗಿದುವು, ಶಂಖಗಳೂ ಗೋಮುಖಗಳೂ, ಭೇರಿಗಳೂ ಧ್ವನಿಮಾಡಿದುವು. ಇವುಗಳ ಧ್ವನಿಗಳೆಲ್ಲವೂ ಸೇರಿಕೊಂಡು ತುಮುಲಧ್ವನಿಯಾಗಿ ಕೇಳಿ ಬಂದಿತು.

೨೫. ಫಿರಂಗಿಗಳು ಹಾರಿದುವು ಅದರ ಧ್ವನಿಯು ಭಯಂಕರವಾಗಿದ್ದಿತು. ಮಂಗಳವಾದ್ಯಗಳು ಧ್ವನಿಮಾಡಿದುವು. ಸೂಳೆಯರು ಕುಣಿದರು. ಮಾಗಧರು ಸ್ತುತಿಸಿದರು.

ತಂ ಸ್ವನಂ ಜಾನಕೀ ಚಾಪಿ ಶ್ರುತ್ವಾಚೋಪವನೇ ಸ್ಥಿತಾ ।
ಸಂಭ್ರಮೇಣ ಸಮುತ್ತೀರ್ಯ ಮಂಚಕಾಧೋ ವರಾನನಾ ॥ ೨೬ ॥

ವಾಮಹಸ್ತೇ ರ್ಘುರ್ಘ್ಯಂರೀಂ ತಾಂ ಹ್ಯುಪಪಾತ್ರಂ ತು ದಕ್ಷಿಣೇ ।
ಧೃತ್ವಾ ಕರೇ ಸಾ ವೈದೇಹೀ ರಾಮಂ ಪ್ರತ್ಯುಜ್ಜಗಾಮ ವೈ ॥ ೨೭ ॥

ಏತಸ್ಮಿನ್ನಂತರೇ ರಾಮಸ್ತ್ಯಕ್ತ್ವಾ ತಾಂ ಶಿಬಿಕಾಂ ಬಹಿಃ ।
ವಿಸರ್ಜ್ಯ ಸಕಲಾನ್ ಲೋಕಾನ್ ವಿವೇಶ ಬಂಧುಭಿರ್ಗೃಹೇ ॥ ೨೮ ॥

ಏತಸ್ಮಿನ್ನಂತರೇ ದಾಸ್ಯಶ್ಶತಶೋ ರುಕ್ಮಭೂಷಿತಾಃ ।
ರಾಘವಾಗ್ರೇ ದುದ್ರುವುಸ್ತಾಃ ಸ್ವಸ್ವಕರ್ಮಸು ತತ್ಪರಾಃ ॥ ೨೯ ॥

ಕಾಚಿತ್ತು ವ್ಯಜನೇನೈವ ವೀಜಯಾಮಾಸ ವೇಗತಃ ।
ದಧಾರ ಚಾಮರೇ ಕಾಚಿತ್ಕಾಚಿದಾಸನಮುತ್ತಮಂ ॥ ೩೦ ॥

೨೬–೨೭. ಇತ್ತ ಉಪವನದಲ್ಲಿ ಸೀತೆಯು ಆ ಧ್ವನಿಗಳನ್ನು ಕೇಳಿ ಸಡಗರದಿಂದ ಆ ಮಂಚದಿಂದ ಕೆಳಕ್ಕೆ ಇಳಿದು ನಿಂತುಕೊಂಡು ಎಡಗೈಯ್ಯಲ್ಲಿ ಅರ್ಘ್ಯಪಾತ್ರೆಯನ್ನೂ ಬಲಗೈಯ್ಯಲ್ಲಿ ಸಣ್ಣಪಾತ್ರೆಯನ್ನೂ ಹಿಡಿದುಕೊಂಡು ರಾಮನನ್ನು ಎದುರುಗೊಂಡಳು.

೨೮. ರಾಮನು ತನ್ನ ಪಲ್ಲಕ್ಕಿಯನ್ನು ಮನೆಯ ಹೊರಗೆ ನಿಲ್ಲಿಸಿ ಅದರಿಂದಿಳಿದು ಜನರೆಲ್ಲರನ್ನೂ ಕಳುಹಿಸಿಬಿಟ್ಟು ತಮ್ಮಂದಿರೊಡನೆ ಒಳಗೆ ಹೋದನು.

೨೯. ಅಷ್ಟುಹೊತ್ತಿಗೆ ನೂರಾರು ಜನ ದಾಸಿಯರು ಉತ್ತಮವಾದ ಒಡನೆಗಳನ್ನು ಧರಿಸಿ ತಮ್ಮ ತಮ್ಮ ಕೆಲಸಗಳಲ್ಲಿ ಅವಸರಪಡುತ್ತ ರಾಮನ ಎದುರಿಗೆ ಹೋದರು.

೩೦. ಅವರಲ್ಲಿ ಒಬ್ಬಳು ಬೀಸಣಿಗೆಯನ್ನು ತೆಗೆದುಕೊಂಡು ರಾಮನಿಗೆ ಬೀಸುತ್ತಿದ್ದಳು. ಮತ್ತೊಬ್ಬಳು ಚಾಮರವನ್ನು ಹಿಡಿದು ಬೀಸಿದಳು. ಮಗದೊಬ್ಬಳು ಆಸನವನ್ನು ಕೊಟ್ಟಳು.

ಕಾಚಿತ್ತಾಂಬೂಲಪಾತ್ರಂ ಸಾ ಕಾಚಿನ್ನಿಷ್ಠೀವನಸ್ಯ ಚ ।
ಪಾತ್ರಂ ದಧಾರ ಕಾಚಿತ್ತು ಜಲಕುಂಭಂ ಮನೋರಮಂ ॥ ೩೧ ॥

ಕಾಚಿದ್ದಧಾರ ವಸ್ತ್ರಾಣಾಂ ಕೋಶಂ ಕಾಚಿತ್ತು ಕಾರ್ಮುಕಂ ।
ಕಾಚಿದ್ದಧಾರ ತೂಣೀರಂ ಕಾಚಿತ್ಖಡ್ಗಂ ದಧಾರ ಸಾ ॥ ೩೨ ॥

ಏವಮಾದೀನ್ಯನೇಕಾನಿ ತದೋಪಕರಣಾನಿ ತಾಃ ।
ಜಗೃಹೂ ರಾಮಭದ್ರಂ ತಂ ವೇಷ್ಟಯಾಮಾಸುರಾದರಾತ್ ॥ ೩೩ ॥

ತತೋ ರಾಮಃ ಶನೈಃ ಪದ್ಭ್ಯಾಂ ಯಯೌ ಜನಕನಂದಿನೀಂ ।
ಸ್ಥಿತಾಂ ಮಾರ್ಗಂ ಪ್ರತೀಕ್ಷಂತೀಂ ಲಜ್ಜಯಾವನತಾನನಾಂ ॥ ೩೪ ॥

---

೩೧. ಒಬ್ಬಳು ತಾಂಬೂಲಪಾತ್ರೆಯನ್ನು ಹಿಡಿದಳು. ಒಬ್ಬಳು ತಂಬುಲು ಪಾತ್ರೆಯನ್ನು ಹಿಡಿದಳು. ಒಬ್ಬಳು ನೀರಿನ ಚಂಬನ್ನು ಹಿಡಿದಳು.

೩೨. ಒಬ್ಬಳು ಬಟ್ಟೆಯ ಪೆಟ್ಟಿಗೆಯನ್ನು ಹಿಡಿದಿದ್ದಳು ಒಬ್ಬಳು ಬಿಲ್ಲನ್ನು ತೆಗೆದುಕೊಂಡಳು. ಒಬ್ಬಳು ಬತ್ತಳಿಕೆಯನ್ನು ತೆಗೆದುಕೊಂಡಳು. ಒಬ್ಬಳ್ು ಕತ್ತಿಯನ್ನು ತೆಗೆದುಕೊಂಡಳು.

೩೩. ಇದೇ ರೀತಿಯಾಗಿ ರಾಮನಲ್ಲಿದ್ದ ಒಂದೊಂದು ಪದಾರ್ಥವನ್ನೂ ಒಬ್ಬೊಬ್ಬರು ತೆಗೆದುಕೊಂಡರು. ಆಗ ಅವರೆಲ್ಲರೂ ರಾಮಭದ್ರನ ಸುತ್ತಲೂ ಸುತ್ತುವರಿದುಕೊಂಡಿದ್ದರು.

೩೪. ಅನಂತರ ರಾಮನು ನಿದಾನವಾಗಿ ನಡೆಯುತ್ತಾ ಸೀತೆಯಿರುವಲ್ಲಿಗೆ ಹೋದನು. ಆಕೆಯು ರಾಮನ ಬರವನ್ನೇ ನೋಡುತ್ತ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ನಿಂತಿದ್ದಳು.

ಗೃಹಾಂಗಣಾರಾಮಮಧ್ಯೇ ಸಂಸ್ಥಿತಾಂ ಸುಸ್ಮಿತಾನನಾಂ |
ದೃಷ್ಟ್ವಾತ್ಮಾಸಂ ವಿಲಜ್ಜಂತೀಂ ಸುನಾಸಾಂ ಚಾರುಲೋಚನಾಂ || ೩೫ ||

ಶನೈಶ್ಶನೈಸ್ಸಮಾಯಾಂತೀಂ ಸಖೀಭಿಃ ಪರಿವೇಷ್ಟಿತಾಂ |
ತಾಂ ದೃಷ್ಟ್ವಾ ರಾಘವಶ್ಚಾಪಿ ಕಿಂಚಿತ್ಕೃತ್ವಾ ಸ್ಮಿತಾನನಂ || ೩೬ ||

ಚಕಾರಾಚಮನಂ ಸಮ್ಯಕ್ಸೀತಾರ್ಪಿತಜಲೇನ ಸಃ |
ತತಃ ಸ್ಥಿತ್ವಾಸನೇ ಪೀತ್ವಾ ಜಲಮಗ್ರೇ ಯಯೌ ಪುನಃ || ೩೭ ||

ಜಲಂಯತ್ರಸಮೀಪಸ್ಥಾಂ ಶಾಲಾಂ ಸೀತಾಸಮನ್ವಿತಃ |
ತಸ್ಯಾಂ ಸಿಂಹಾಸನೇ ಸ್ಥಿತ್ವಾ ಲಕ್ಷ್ಮಣಂ ಪ್ರಾಹ ರಾಘವಃ || ೩೮ ||

---

೩೫. ಮನೆಯ ಮಧ್ಯದಲ್ಲಿರುವ ತೋಟದ ಮಧ್ಯದಲ್ಲಿ ನಗುತ್ತ ನಿಂತಿರುವ ಗಂಡನಾದ ತನ್ನನ್ನು ನೋಡಿ ಲಜ್ಜೆಗೊಳ್ಳುತ್ತಿರುವ ಆ ಚಾರುಲೋಚನೆಯನ್ನು ರಾಮನು ನೋಡಿದನು.

೩೬. ಆಕೆಯು ನಾಚಿಗೆಯಿಂದಲೇ ಮೆಲ್ಲ ಮೆಲ್ಲಗೆ ಸಖಿಯರೊಡನೆ ರಾಮನೆದುರಿಗೆ ಬರುತ್ತಿದ್ದಳು. ಆಕೆಯನ್ನು ರಾಮನು ನೋಡಿ ಸ್ವಲ್ಪ ನಕ್ಕನು.

೩೭. ಆಗ ಸೀತೆಯು ಕೊಟ್ಟ ನೀರಿನಿಂದ ಕಾಲನ್ನು ತೊಳೆದುಕೊಂಡು ಆಚಮನವನ್ನು ಮಾಡಿದನು. ಅನಂತರ ಆಸನದಲ್ಲಿ ಕುಳಿತು ಸೀತೆಯು ಕೊಟ್ಟ ನೀರನ್ನು ಕುಡಿದು ಸ್ವಲ್ಪಹೊತ್ತು ಇದ್ದು ಅನಂತರ ಮುಂದಕ್ಕೆ ಹೊರಟನು.

೩೮. ಅಲ್ಲಿಂದ ಮುಂದೆ ಜಲಯಂತ್ರದ ಸಮೀಪದಲ್ಲಿರುವ ಮನೆಗೆ ಸೀತೆಯೊಡನೆ ಹೊರಟನು. ಆ ಮನೆಯಲ್ಲಿ ಸಿಂಹಾಸನದಲ್ಲಿ ಕುಳಿತು ಲಕ್ಷ್ಮಣನನ್ನು ಕುರಿತು ಇಂತೆಂದನು.

ಗಚ್ಛ ಭೋಜನಶಾಲಾಂ ತ್ವಂ ಸರ್ವಾನಾಹೂಯ ವೇಗತಃ ।
ಬ್ರಾಹ್ಮಣಾದೀನೂರ್ಮಿಲಾದಿನಾರೀಣಾಂ ತ್ವರಯಸ್ವ ಹಿ ॥ ೩೯ ॥

ಸರ್ವಂ ಕೃತ್ವಾ ಯಥಾಯೋಗ್ಯಂ ತತೋ ಮಾಂ ಕುರು ಸೂಚನಾಂ ।
ತಥೇತಿ ರಾಮವಚನಾದ್ಭರತೇನ ಸ ಶತ್ರುಹಾ ॥ ೪೦ ॥

ಲಕ್ಷ್ಮಣಸ್ತ್ವರಿತೋ ಗತ್ವಾ ಸರ್ವಾನಾಹೂಯ ವೇಗತಃ ।
ವಸಿಷ್ಠಾದಿಮುನೀನ್ಮಿತ್ರಮಂತ್ರಿಣಸ್ಸುಹೃದಸ್ತಥಾ ॥ ೪೧ ॥

ತ್ವರಯಾಮಾಸೋರ್ಮಿಲಾಂ ಚ ಮಾಂಡವೀಂ ಭರತಪ್ರಿಯಾಂ ।
ಶ್ರುತಕೀರ್ತಿಂ ಚ ಸೌಮಿತ್ರಿಃ ಶ್ರೀರಾಮವಚನಾತ್ತದಾ ॥ ೪೨ ॥

ಏತಸ್ಮಿನ್ನಂತರೇ ರಾಮಃ ಕೇಶರಾದಿವಿನಿರ್ಮಿತೈಃ ।
ಚಿತ್ರರಾಗೈಃ ಪೂರಿತಾನಿ ಜಲಯಂತ್ರಾಣ್ಯನೇಕಶಃ ॥ ೪೩ ॥

---

೩೯. ಎಲೈ ಲಕ್ಷ್ಮಣನೆ! ನೀನು ಭೋಜನಶಾಲೆಗೆ ಹೋಗು. ಅಲ್ಲಿ ಬ್ರಾಹ್ಮಣರೇ ಮುಂತಾದವರನ್ನು ಬೇಗನೆ ಕರೆಸು. ಊರ್ಮಿಳೆಯೇ ಮುಂತಾದವರನ್ನು ಜಾಗ್ರತೆಪಡಿಸು.

೪೦–೪೧. ಎಲ್ಲವನ್ನೂ ಸರಿಯಾಗಿ ಸಿದ್ಧಪಡಿಸಿ ಅನಂತರ ನನಗೆ ಸೂಚನೆಯನ್ನು ಮಾಡು. ಎನ್ನಲು ಲಕ್ಷ್ಮಣನು ಹಾಗೆಯೇ ಹಾಗಲೆಂದು ಭರತ ಶತ್ರುಘ್ನರೊಡನೆ ಜಾಗ್ರತೆಯಾಗಿ ಹೋಗಿ ವಸಿಷ್ಠನೇ ಮುಂತಾದ ಮುನಿಗಳನ್ನೂ, ಮಂತ್ರಿಗಳನ್ನೂ, ಸ್ನೇಹಿತರನ್ನೂ ಬೇಗನೆ ಕರೆಸಿದನು.

೪೨. ಮಾಂಡವಿ, ಶ್ರುತಕೀರ್ತಿ, ಊರ್ಮಿಳೆಯರನ್ನು ರಾಮನ ಮಾತಿನಂತೆ ಅವಸರಪಡಿಸಿದನು. ಇತ್ತ ರಾಮನು ವೈದೇಹಿಯೊಡನೆ ಜಲಕ್ರೀಡೆಗೆ ಆರಂಭಿಸಿದನು.

೪೩–೪೪. ಕುಂಕುಮಕೇಸರಿಯೇ ಮುಂತಾದ ಸುಗಂಧ ದ್ರವ್ಯಗಳನು ಹಾಕಿ ಸುವಾಸನೆಯೂ ಮನೋಹರಬಣ್ಣವೂ ಇರುವಂತೆ ಮಾಡಿರುವ ನೀರನ್ನು

ಕಾರಯಿತ್ವಾ ತೇಷು ಸೀತಾಂ ಬಾಹುಪಾಶೈಃ ದೃಢಂ ಮುದಾ ।
ಧೃತ್ವಾ ಕ್ಷಿಪತ್ಸೃಗ್ಗಾಧಸ್ಯಾದಿಷು ಪಶ್ಯತ್ಸು ವೈ ಸುಖಂ ॥ ೪೪ ॥

ತತಃ ಸ್ವಯಂ ಪಪಾತೋಚ್ಚೈರ್ಜಂಯಂತ್ರೇಷು ವೈ ಪೃಥಕ್ ।
ಜಲಕ್ರೀಡಾಂ ಸ ಮೈಥಿಲ್ಯಾ ಚಕಾರ ರಘುನಂದನಃ ॥ ೪೫ ॥

ಭುಜಾಭ್ಯಾಂ ಸ ಸಮಾಲಿಂಗ್ಯ ತಾಂ ಮುಹುಃ ಪ್ರಕ್ಷಿಪನ್ಮುದಾ ।
ರಂಜಯಾಮಾಸ ವೈದೇಹೀಂ ಸುರಾಗಾಂಜಲಿಸೇಚನೈಃ ॥ ೪೬ ॥

ತತಸ್ಸುಗಂಧತೈಲಾನಿ ತಥಾ ಪರಿಮಳಾನಿ ಹಿ ।
ನಾನಾಸುಗಂಧದ್ರವ್ಯಾಣಿ ಮಾಂಗಲ್ಯಾನಿ ಬಹೂನಿ ಚ ॥ ೪೭ ॥

ದಾಸೀಭಿಶ್ಶೀಘ್ರಮಾನೀಯ ತಾವುಭೌ ಹಿ ಪರಸ್ಪರಂ ।
ವವರ್ಷತುಃ ಸುಮಾದ್ಯೈಶ್ಚ ಕ್ರೀಡಾದ್ರವ್ಯೈರ್ಮನೋರಮೈಃ ॥ ೪೮ ॥

ನೀರಿನ ಕೊಳವಿಗಳಲ್ಲಿ ತುಂಬಿಕೊಂಡು ಸೀತೆಯನ್ನು ಕೈಗಳಿಂದ ಹಿಡಿದುಕೊಂಡು ಆ ದಾಸಿಯರು ನೋಡುತ್ತಿರುವಂತೆಯೇ ಅವಳಮೇಲೆ ಆ ನೀರನ್ನು ಎರಚಿದನು.

೪೫. ಅನಂತರ ಸೀತೆಯೂ ಕೂಡ ತನ್ನ ನೀರಿನ ಕೊಳವಿಯಿಂದ ರಾಮನಮೇಲೆ ನೀರನ್ನು ಎರಚಿದಳು. ಈ ರೀತಿಯಾಗಿ ರಾಮನು ಮೈಥಿಲಿಯೊಡನೆ ಜಲಕ್ರೀಡೆಯನ್ನಾಡಿದನು.

೪೬. ಅನಂತರ ರಾಮನು ಮತ್ತೆ ಭುಜಗಳನ್ನು ಹಿಡಿದುಕೊಂಡು ಜಲಯಂತ್ರದ ಬಳಿಯಲ್ಲಿ ಸೀತೆಯನ್ನು ನೀರಿನಲ್ಲಿ ಬೀಳುವಂತೆ ಮಾಡಿದನು. ಮತ್ತು ಅಲ್ಲಿದ್ದ ಬಣ್ಣ ಬಣ್ಣದ ಸೂವಾಸನೆಯ ನೀರನ್ನು ಆಕೆಯಮೇಲೆ ಮತ್ತೆ ಎರಚಿದನು

೪೭–೪೮. ಅನಂತರ ಸುಗಂಧವಾದ ಎಣ್ಣೆಗಳನ್ನೂ ಗಂಧವೇ ಮುಂತಾದ ಪರಿಮಳಗಳನ್ನೂ ಮಂಗಳಕರವಾದ ಸುಗಂಧದ್ರವ್ಯಗಳನ್ನೂ ದಾಸಿಯರ ಕೈಯ್ಯಲ್ಲಿ ತರಿಸಿಕೊಂಡು ಒಬ್ಬರಮೇಲೊಬ್ಬರು ಚೆಲ್ಲಿಕೊಂಡರು.

ಕರಾಭ್ಯಾಂ ಜಲಯಂತ್ರಾಣಿ ಮಿಥಸ್ತೌ ಸಂಮುಮುಚತುಃ ।
ರಾಮಾಕ್ಷಿಸಂಜ್ಞಯಾ ದಾಸ್ಯಸ್ಸೀತಾಸಖ್ಯೋಽಪಿ ಸೂಚಿತಾಃ ॥ ೪೯ ॥

ವಸ್ತ್ರಭಿತ್ತಿಬಹಿರ್ದೂರಂ ಗತ್ವಾ ತಸ್ಥುರ್ವಿಲಜ್ಜಿತಾಃ ।
ಕಾಶ್ಚಿತ್ ದ್ವಾರೇಷು ತಸ್ಥುಸ್ತಾಸ್ತೂಷ್ಣೀಂ ಪ್ರಮುದಿತಾನನಾಃ ॥ ೫೦ ॥

ಅದೃಷ್ಟ್ವಾನ್ಯಂ ತತಸ್ಸೀತಾರಾಮೌ ರಹಸಿ ಸಾದರಂ ।
ಜಲಯಂತ್ರೇಷು ತೌ ಕ್ರೀಡಾಂ ಚಕ್ರತುಸ್ಸುಚಿರಂ ಮುದಾ ॥ ೫೧ ॥

ಮುಷ್ಟಿಭ್ಯಾಂ ಜಾನಕೀ ರಾಮಂ ತಾಡಯಾಮಾಸ ಕೌತುಕಾತ್ ।
ಸೋಽಪಿ ತಾಂ ತಾಡಯಾಮಾಸ ಮುಷ್ಟ್ಯಾ ಪುಷ್ಪಸಮಾನಯಾ ॥ ೫೨ ॥

ಚುಚುಂಬ ತಸ್ಯಾ ಬಿಂಬೋಷ್ಠಂ ಚೂರ್ಣಯಾಮಾಸ ತತ್ಕುಚೌ ।
ಮುಕ್ತ್ವಾ ತತ್ಕಂಚುಕೀ ಬಂಧಮಾಲಿಂಗ್ಯ ಹೃದಯೇನ ತಾಂ ॥ ೫೩ ॥

೪೯–೫೦. ಅವರಿಬ್ಬರೂ ಮತ್ತೆ ಕೈಯ್ಯಿಂದ ನೀರಿನ ಕೊಳವಿಗಳಲ್ಲಿ ನೀರನ್ನು ಎರಚಿಕೊಂಡರು ಅನಂತರ ರಾಮನು ಕಣ್ಣಿನಿಂದ ಸಂಜ್ಞೆಯನ್ನು ಮಾಡಲು ದಾಸಿಯರು ಒಂದು ಬಟ್ಟೆಯ ಘರದೆಗಳ ಆಚೆಹೋಗಿ ಲಜ್ಜೆಯಿಂದ ನಿಂತುಕೊಂಡರು. ಕೆಲವರು ಸಂತೋಷದಿಂದ ಬಾಗಿಲಿನಲ್ಲಿಯೇ ಕುಳಿತು ಕೊಂಡರು.

೫೧. ಒಬ್ಬರೂ ಇಲ್ಲದಂತೆ ಆ ಜಾಗವು ವಿಜನವಾಗಲು ಸೀತಾರಾಮರು ಜಲಯಂತ್ರಗಳನ್ನು ತೆಗೆದುಕೊಂಡು ಸುಖವಾಗಿ ಕ್ರೀಡಿಸಿದರು. ಬಹುಕಾಲದ ವರೆವಿಗೆ ಹೀಗೆ ಕ್ರೀಡಿಸಿದರು.

೫೨. ಆಗ ಸೀತೆಯು ರಾಮುನನ್ನು ಸಂತೋಷಕ್ಕೋಸ್ಕರ ಮುಷ್ಟಿಗಳಿಂದ ಗುದ್ದಿದಳು. ಆಗ ರಾಮನೂ ಕೂಡ ಮುಷ್ಟಿಯನ್ನು ಹಿಡಿದುಕೊಂಡು ಏಟು ಬೀಳದಂತೆ ಆಕೆಯನ್ನು ಗುದ್ದಿದನು.

೫೩–೫೪. ಅನಂತರ ಆಕೆಯ ತುಟಿಗಳಿಗೆ ಮುತ್ತಿಕ್ಕಿದನು. ಸ್ತನಗಳನ್ನು ಮರ್ದಿಸಿದನು. ಆಕೆಯ ಕುಪ್ಪಸವನ್ನೂ ರಾಮನು ತನ್ನ ಕೈಯ್ಯಿಂದಲೇ

ಮುಮೋಚ ಕಚ್ಛಂ ಶ್ರೀರಾಮಃ ಸೀತಾಯಾಃ ಸ್ವರೇಣ ಸಃ ।
ಉದ್ದೀಯ ವಸ್ತ್ರಂ ಹಸ್ತೇನ ತದ್ರಂಭೋರೂ ದದರ್ಶ ಸಃ ॥ ೫೪ ॥

ತತಃ ಕರೇಣ ತನ್ನೀವೀಂ ರಾಮಶ್ಚಾಕರ್ಷಯನ್ಮುದಾ ।
ಸೀತಾಪ್ಯಾಕರ್ಷಯದ್ವೇಗಾದ್ರಾಮನೀವೀಂ ಸ್ಮಿತಾನನಾ ॥ ೫೫ ॥

ಏವಂ ಪರಸ್ಪರಂ ಕ್ರೀಡಾಂ ಚಕ್ರತುರ್ದಂಪತೀ ಮುದಾ ।
ಕಸ್ಸಮರ್ಥಸ್ತಯೋಃ ಕ್ರೀಡಾಂ ಸವಿಸ್ತಾರಾಂ ನಿವೇದಿತುಂ ॥ ೫೬ ॥

ಏತಸ್ಮಿನ್ನಂತರೇ ರಾಮಂ ಭೋಜನಾರ್ಥಂ ತು ಸೂಚನಾಂ ।
ಕರ್ತುಂ ಯಯೌ ಸ ಸೌಮಿತ್ರಿಸ್ಸಮಾಹೂಯ ಸುಹೃಜ್ಜನಾನ್ ॥ ೫೭ ॥

ನಿಷೇಧಿತಸ್ಸ ದಾಸೀಭಿರ್ವನದ್ವಾರಾದ್ಬಹಿಃ ಸ್ಥಿತಃ ।
ತಾ ಊಚುಸ್ಸಮಯೋ ನಾಯಂ ರಾಮಂ ಗಂತುಂ ನ ಚ ಕ್ಷಣಂ ॥ ೫೮ ॥

ಬಿಚ್ಚಿ ಆಲಿಂಗಿಸಿಕೊಂಡನು. ಮತ್ತು ಸೀತೆಯು ಉಟ್ಟಿದ್ದ ಬಟ್ಟೆಯ ಹಿಂದಿನ ಗಂಟನ್ನು ಬಿಚ್ಚಿದನು. ಇದರಿಂದ ಆಕೆಯ ತೊಡೆಗಳು ಕಾಣುವಂತಾದುವು.

೫೫. ಅನಂತರ ರಾಮನು ಆಕೆಯ ಬಟ್ಟೆಯನ್ನು ಪೂರ್ತಿಯಾಗಿ ಬಿಚ್ಚಲು ಆಕೆಯ ನೀವಿಯೆಂಬ ಬಟ್ಟೆಯ ಗಂಟನ್ನು ಹಿಡಿದು ಎಳೆದನು. ಸೀತೆಯೂ ಕೂಡ ರಾಮನು ಉಟ್ಟ ಬಟ್ಟೆಯನ್ನು ಬಿಚ್ಚಲು ಅವನ ನೀವಿಯೆಂಬ ಬಟ್ಟೆಯ ಗಂಟನ್ನು ಹಿಡಿದು ಬಲವಾಗಿ ಎಳೆದಳು.

೫೬. ಈ ರೀತಿಯಾಗಿ ದಂಪತಿಗಳು ಸಂತೋಷದಿಂದ ಕ್ರೀಡಿಸಿದರು. ಅವರುಗಳ ಕ್ರೀಡೆಯನ್ನು ವರ್ಣಿಸಲು ಯಾರಿಗೆ ಸಾಧ್ಯವಾದೀತು !

೫೭–೫೮. ಇಷ್ಟರ ವೇಳೆಗೆ ಸೌಮಿತ್ರಿಯು ಸ್ನೇಹಿತರೆಲ್ಲರನ್ನೂ ಕರೆಸಿ ಸಿದ್ಧಪಡಿಸಿ ರಾಮನಿಗೆ ಸೂಚನೆಕೊಡಲು ಹೋದನು. ಆಗ ದಾಸಿಯರು ನಿಷೇಧಮಾಡಲು ವನದ ಬಾಗಿಲಿನಿಂದ ಹೊರಗಡೆಯಲ್ಲಿಯೇ ನಿಂತನು. ಆಗ ಆ ದಾಸಿಯರು ಎಲೈ ಲಕ್ಷ್ಮಣನೇ ! ಈಗ ರಾಮನ ಬಳಿಗೆ ಹೋಗಲು ಒಂದು ನಿಮಿಷಗಳ ಕಾಲವೂ ಕೂಡ ಸಾಧ್ಯವೇ ಇಲ್ಲವು.

ಸ್ಥಿರೋ ಭವಾತ್ರ ಸೌಮಿತ್ರೇ ರಾಮೋ ರಹಸಿ ಸೀತಯಾ ।
ಕರೋತಿ ಜಲಯಂತ್ರೇಷು ಜಲಕ್ರೀಡಾಂ ಯಥಾಸುಖಂ ॥ ೫೯ ॥

ಪುನಸ್ತಾಃ ಪ್ರಾಹ ಸೌಮಿತ್ರಿರ್ಯೂರ್ಯಂಷ್ಮಾಭಿರ್ವಚನಂ ಮಮ ।
ನಿವೇದನೀಯಂ ರಾಮಾಯ ಸೂಚನಾರ್ಥಂ ಹಿ ಲಕ್ಷ್ಮಣಃ ॥ ೬೦ ॥

ಸಮಾಗತಸ್ತ್ವಮಸ್ತೀತಿ ತತೋ ಯಾಸ್ಯಾಮ್ಯಹಂ ಗೃಹಂ ।
ತತಸ್ತಾಸು ತದಾ ತ್ವೇಕಾ ದಾಸೀ ಗತ್ವಾ ರಘೂತ್ತಮಂ ॥ ೬೧ ॥

ವಸ್ತ್ರಭಿತ್ತೇರ್ಬಹಿಃ ಸ್ಥಿತ್ವಾ ಭಯಭೀತಾತಿ ಲಜ್ಜಿತಾ ।
ಕಥಯಾಮಾಸ ಸೌಮಿತ್ರೇರ್ದ್ವಾರಿ ಹ್ಯಾಗಮನಂ ಶನೈಃ ॥ ೬೨ ॥

ತದ್ದಾಸೀವಚನಂ ಶ್ರುತ್ವಾ ಜಲಯಂತ್ರಾತ್ತು ಜಾನಕೀಂ ।
ಬಹಿಃಕೃತ್ವಾ ನಿರ್ಗತಶ್ಚ ರಾಮಸ್ತುಷ್ಟಮನಾಃ ಸ್ವಯಂ ॥ ೬೩ ॥

---

೫೯. ಎಲೈ ಲಕ್ಷ್ಮಣನೇ ! ನೀನು ಇಲ್ಲಿಯೇ ನಿಂತುಕೊಂಡು ಇರು. ರಾಮನು ಸೀತೆಯ ಸಂಗಡ ಸದ್ಯದಲ್ಲಿ ಜಲಯಂತ್ರದಿಂದ ಜಲಕ್ರೀಡೆಯನ್ನು ಸುಖವಾಗಿ ಆಡುತ್ತಿರುವನು. ಎಂದು ಹೇಳಿದರು.

೬೦. ಆಗ ಲಕ್ಷ್ಮಣನು ಆ ದಾಸಿಯರನ್ನು ಕುರಿತು ನೀವುಗಳು ನನ್ನ ಮಾತಿನಂತೆ ರಾಮನ ಬಳಿಗೆ ಹೋಗಿ ಲಕ್ಷ್ಮಣನು ಸೂಚನೆಗೋಸ್ಕರವಾಗಿ ಬಂದಿರುವನೆಂದು ತಿಳಿಸಿರಿ. ಅನಂತರ ನಾನು ಮನೆಗೆ ಹೋಗುತ್ತೇನೆ. ಎಂದನು.

೬೧–೬೨. ಅನಂತರ ಅವರಲ್ಲಿ ಒಬ್ಬಳು ದಾಸಿಯು ರಾಮನ ಬಳಿಗೆ ಹೋದಳು. ಹೋಗಿ ಬಟ್ಟೆಯ ಫರದೆಯ ಹಿಂದುಗಡೆ ನಿಂತುಕೊಂಡು ಭಯಪಡುತ್ತ ಲಜ್ಜಿತಳಾಗಿ ಮೆಲ್ಲಗೆ ಲಕ್ಷ್ಮಣನು ಬಾಗಿಲಿನಲ್ಲಿ ಬಂದು ನಿಂತಿರುವನೆಂದು ರಾಮನಿಗೆ ತಿಳಿಸಿದಳು.

೬೩. ದಾಸಿಯ ಆ ಮಾತನ್ನು ಕೇಳಿ ರಾಮನು ಜಲಯಂತ್ರದಿಂದ ಜಾನಕಿಯನ್ನು ಹೊರಗೆ ಹೋಗುವಂತೆ ಕಳುಹಿಸಿ ತಾನೂ ಸಂತೋಷದಿಂದ ಹೊರಟನು.

ಜಲೈರುಷ್ಣೈಃ ಪ್ರಭುಃ ಸ್ನಾತ್ವಾ ದೇಹಮುದ್ವರ್ತನಾದಿಭಿಃ ।
ಸುಗಂಧದ್ರವ್ಯರಾಗಾದ್ಯೈಃ ಕೃತ್ವಾ ದೂರಂ ಪ್ರಿಯಾನ್ವಿತಃ ॥ ೬೪ ॥

ಪೀತಕೌಶೇಯವಾಸಾಂಸಿ ಪರಿಧಾಯಾಥ ದಂಪತೀ ।
ದದತುಶ್ಚಾರ್ದ್ರವಸ್ತ್ರಾಣಿ ಹೇಮತಂತ್ವಂಕಿತಾನಿ ಚ ॥ ೬೫ ॥

ದಾಸೀಭ್ಯಶ್ಚಾಥ ದಾಸೇಭ್ಯೋ ರಾಗಾದ್ಯೈಶ್ಚಿತ್ರಿತಾನಿ ಹಿ ।
ತತಸ್ತೌ ಜಗ್ಮತುಃ ಪುಷ್ಪಚಿತಮಾರ್ಗಾಶನಂ ಗೃಹಂ ॥ ೬೬ ॥

ತತ್ರ ಪೂರ್ವೋಕ್ತೋಪಚಾರಾಧಿಕ್ಯೈರ್ನಾನೋಪಚಾರಕೈಃ ।
ಊರ್ಮಿಲಾದಿಭಿರನ್ನಂ ಯತ್ಕಾಮಧೇನುಸಮುದ್ಭವಂ ॥ ೬೭ ॥

---

೬೪. ಅನಂತರ ರಾಮನೂ, ಸೀತೆಯೂ, ಬಿಸಿನೀರಿನಲ್ಲಿ ಸ್ನಾನವನ್ನು ಮಾಡಿ ಹೆಸರುಹಿಟ್ಟು ಮುಂತಾದುವುಗಳಿಂದ ಮೈಯ್ಯನ್ನು ತಿಕ್ಕಿಕೊಂಡು ಸುಗಂಧದ್ರವ್ಯಯುಕ್ತವಾದ ಬಣ್ಣಗಳನ್ನು ಪೂಸಿಕೊಂಡು ಹೊಂಬಣ್ಣದ ರೇಷ್ಮೆಯ ಮಕುಟಗಳನ್ನು ಉಟ್ಟುಕೊಂಡರು.

೬೫–೬೬. ತಾವು ಉಟ್ಟಿದ್ದ ಒದ್ದೆಯದೂ, ಬಣ್ಣದ್ದಾಗಿಯೂ ಆಗಿರುವ ಜರಿಬಟ್ಟೆಗಳನ್ನು ದಾಸಿಯರಿಗೂ, ದಾಸರಿಗೂ ಕೊಟ್ಟುಬಿಟ್ಟರು. ಅನಂತರ ಅವರಿಬ್ಬರೂ ಹೂವನ್ನು ಹಾಸಿರುವ ಮೃದುವಾದ ದಾರಿಯಿಂದ ಊಟದಮನೆಗೆ ಬಂದರು.

೬೭–೬೯. ಅನಂತರ ಊಟದ ಮನೆಯಲ್ಲಿ ಹಿಂದೆ ಹೇಳಿದ್ದ ಉಪಚಾರಕ್ಕಿಂತಲೂ ಹೆಚ್ಚಾದ ಉಪಚಾರಗಳಿಂದ ಊರ್ಮಿಳೆಯೇ ಮುಂತಾದವರು, ಕಾಮಧೇನುವು ಕೊಟ್ಟ ಉತ್ತಮವಾದ ಅನ್ನವನ್ನು ಚಿನ್ನದ ಪಾತ್ರೆಗಳಿಂದಲೂ

ದರ್ವೀಭಿಃ ಸ್ವರ್ಣಜಾಭಿಶ್ಚ ಪಾತ್ರೇಷು ಪರಿವೇಷಿತಂ ।
ಮುನೀಶ್ವರೈಶ್ಚ ಗುರುಣಾ ಸುಹೃನ್ಮಿತ್ರ ಸಮನ್ವಿತಃ ॥ ೬೮ ॥

ಮಂತ್ರಿಭಿರ್ಬಂಧುಭಿಶ್ಚಾಪಿ ರಾಮೋಽಶ್ನಂಸ್ತೋಷಮಾಪ ಸಃ ।
ತತ್ಪಾತ್ರಂ ವೀಜಯಾಮಾಸ ಜಾನಕೀ ಚಾಮರೇಣ ಸಾ ॥ ೬೯ ॥

ಸವಿನೋದೈಶ್ಚಾಟುವಾಕ್ಯೈರಂಜಯಾಮಾಸ ರಾಘವಂ ।
ಏವಂ ಕೃತ್ವಾ ಭೋಜನಂ ತು ಕೃತ್ವಾ ತಾಂಬೂಲಚರ್ವಣಂ ॥ ೭೦ ॥

ಸೀತಾಸಮರ್ಪಿತಂ ರಾಮಸ್ತಸ್ಥೌ ಶೃಣ್ವನ್ ಕಥಾಂ ಸುಖಂ ।
ಮಂತ್ರಿಭಿರ್ಬಂಧುಭಿರ್ಮಿತ್ರೈರ್ಗೇಹಾಂತಸ್ಸದಸಿ ಪ್ರಭುಃ ॥ ೭೧ ॥

ಸೌಟುಗಳಿಂದಲೂ ಬಡಿಸಿದ್ದರು. ರಾಮನು ಮುನಿಗಳೊಡನೆಯೂ, ಗುರುವಿನೊಡನೆಯೂ, ಮಿತ್ರರೊಡನೆಯೂ, ಮಂತ್ರಿಗಳೊಡನೆಯೂ, ತಮ್ಮಂದಿರೊಡನೆಯೂ, ಕುಳಿತುಕೊಂಡು ಸಂತೋಷದಿಂದ ಊಟಮಾಡಿದನು. ಆಗ ರಾಮನು ಊಟಮಾಡುತ್ತಿರಲು ಸೀತೆಯು ಎಲ್ಲರಿಗೂ ಬೀಸಣಿಗೆಯಿಂದ ಬೀಸುತ್ತಿದ್ದಳು.

೭೦. ಸೀತೆಯು ಬೀಸುತ್ತಿದ್ದಾಗ ಮನೋರಂಜಕವಾದ ಮಾತುಗಳನ್ನಾಡುತ್ತ ರಾಮನನ್ನು ಸಂತೋಷಪಡಿಸುತ್ತಿದ್ದಳು. ರಾಮನು ಹೀಗೆ ಭೋಜನಮಾಡಿ ಆಮೇಲೆ ಸೀತೆಯು ಕೊಟ್ಟ ತಾಂಬೂಲವನ್ನು ಹಾಕಿಕೊಂಡನು.

೭೧. ಅನಂತರ ಕಥೆಗಳನ್ನು ಕೇಳುತ್ತ ಒಂದು ಕ್ಷಣಕಾಲವಿದ್ದನು. ಮಂತ್ರಿಗಳೊಡನೆಯೂ, ಮಿತ್ರರೊಡನೆಯೂ, ತಮ್ಮಂದಿರೊಡನೆಯೂ, ಮನೆಯೊಳಗೆ ಸಭೆಯಲ್ಲಿ ಒಂದು ಕ್ಷಣಕಾಲವಿದ್ದನು.

ಸೀತಾಪಿ ಭೋಜನಂ ಕೃತ್ವಾ ದಿವ್ಯಾಲಂಕಾರಮಂಡಿತಾ ।
ನಿದ್ರಾಶಾಲಾಂ ಸಮಾಸೀನಾ ಸಖೀಭಿಃ ಪರಿವೇಷ್ಟಿತಾ ॥ ೭೨ ॥

ಚಕಾರ ಸಾರಿಭಿಃ ಕ್ರೀಡಾಂ ದಾಸೀಭಿರ್ವಿಜಿತಾ ಮುದಾ ।
ಕುರ್ವಂತೀ ರಘುನಾಥಸ್ಯ ಪ್ರತೀಕ್ಷಾಂ ದ್ವಾರಲೋಚನಾ ॥ ೭೩ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ವಿಲಾಸಕಾಂಡೇ ಜಲಕ್ರೀಡಾ ವರ್ಣನಂ ನಾಮ ಪಂಚಮಸ್ಸರ್ಗಸ್ಸಮಾಪ್ತಃ

---

೭೨. ಇತ್ತ ಸೀತೆಯು ಭೋಜನವನ್ನು ಮಾಡಿ ದಿವ್ಯವಾದ ಅಲಂಕಾರಗಳಿಂದ ಮಂಡಿತಳಾಗಿ ಸಖಿಯರೊಡನೆ ನಿದ್ರಾಶಾಲೆಗೆ ಹೋದಳು.

೭೩. ಅಲ್ಲಿ ಕೊಂಚಹೊತ್ತು ಪಗಡೆಯ ಆಟವನ್ನು ದಾಸಿಯರೊಡನೆ ಆಡಿ ಗೆಲ್ಲುತ್ತಾ ರಾಮನ ಬರುವಿಕೆಯನ್ನೇ ಬಾಗಿಲಿನಕಡೆಗೆ ಎದುರುನೋಡುತ್ತಿದ್ದಳು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಜಲಕ್ರೀಡಾ ವರ್ಣನ ಎಂಬ ಐದನೆಯ ಸರ್ಗವು ಸಮಾಪ್ತವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ

|| ಐದನೆಯ ಸರ್ಗದ ಸಾರಾಂಶವು ||

ಈರೀತಿಯಾಗಿ ಅಲಂಕರಿಸಿಕೊಂಡ ಸೀತೆಯು ಕಾಮಧೇನುವು ಕೊಟ್ಟ ಪದಾರ್ಥಗಳನ್ನೆಲ್ಲಾ ಕ್ಷಣಕಾಲದಲ್ಲಿ ಬಡಿಸಿದಳು. ಆಗ ಶ್ರೀರಾಮನು ಸ್ನೇಹಿತರೊಡನೆಯೂ ಇಷ್ಟರೊಡನೆಯೂ ಉಪಹಾರವನ್ನು ಮಾಡಿಕೊಂಡು ಕೈ ತೊಳೆದುಕೊಂಡನು. ಅನಂತರ ತಾನೇ ತನ್ನ ಕೈಯ್ಯಿಂದಲೇ ಎಲ್ಲರಿಗೂ ತಾಂಬೂಲವನ್ನು ಕೊಟ್ಟನು. ತಾನೂ ಹಾಕಿಕೊಂಡನು. ಅನಂತರ ರಾಜಯೋಗ್ಯವಾದ ಬಟ್ಟೆಗಳನ್ನು ಹಾಕಿಕೊಂಡು ಶಸ್ತ್ರಗಳನ್ನು ಎಲ್ಲೆಲ್ಲಿಗೆ ಕಟ್ಟಿಕೊಳ್ಳಬೇಕೋ ಅಲ್ಲಲ್ಲಿಗೆ ಕಟ್ಟಿಕೊಂಡನು. ಕನ್ನಡಿಯಲ್ಲಿ ಸೊಬಗನ್ನು ನೋಡಿಕೊಂಡನು.

ಒಡನೆಯೇ ಅಲ್ಲಿದ್ದ ಪಲ್ಲಕ್ಕಿಯಲ್ಲಿ ಕುಳಿತುಕೊಂಡನು. ತಮ್ಮಂದಿರೂ ದೂತರೂ ಸುತ್ತಲೂ ನಿಂತರು. ಅಲ್ಲಿಂದ ಹೊರಟು ಕೌಸಲ್ಯೆಯ ಮನೆಗೆ ಹೋಗಿ ಆಕೆಗೆ ನಮಸ್ಕರಿಸಿದನು. ಅನಂತರ ಮಿಕ್ಕ ಚಿಕ್ಕಮ್ಮಂದಿರಿಗೂ ನಮಸ್ಕರಿಸಿದನು. ಅವರಿಂದ ಆಶೀರ್ವಾದವನ್ನು ಹೊಂದಿ ಸಭೆಗೆ ಹೋದನು. ಅಲ್ಲಿ ಸಿಂಹಾಸನದಲ್ಲಿ ಕುಳಿತು ಮಂತ್ರಿಗಳೊಡನೆಯೂ ತಮ್ಮಂದಿರೊಡನೆಯೂ ರಾಜಕಾರ್ಯಗಳನ್ನು ನೆರವೇರಿಸಿದನು. ಚಾರಲೋಚನನೂ ಬುದ್ಧಿವಂತನೂ ಆದ ರಾಮನು ರಾಜಕಾರ್ಯಗಳನ್ನು ಚೆನ್ನಾಗಿ ನೆರವೇರಿಸುತ್ತಿದ್ದನು

ಇತ್ತ ಸೀತೆಯು ತಾನು ತನ್ನ ವಾರಗಿತ್ತಿಯರೊಡನೆ ಕುಳಿತು ಉಪಹಾರವನ್ನು ತೆಗೆದುಕೊಳ್ಳುತ್ತಿದ್ದಳು. ಕೈ ತೊಳೆದುಕೊಂಡು ತಾಂಬೂಲವನ್ನು ಹಾಕಿಕೊಂಡು ಒಳ್ಳೆಯ ಬಟ್ಟೆಗಳನ್ನು ಧರಿಸಿ ಮನೆಯ ಹಿಂಭಾಗದಲ್ಲಿರುವ

ವನಕ್ಕೆ ಹೋಗುತ್ತಿದ್ದಳು. ಆಗ ಅವಳು ಹಾಕಿಕೊಳ್ಳುತ್ತಿದ್ದ ಅಲಂಕಾರಗಳನ್ನು ವರ್ಣಿಸಲು ಬ್ರಹ್ಮನಿಗೂ ಆಗುತ್ತಿರಲಿಲ್ಲ. ಆಗ ಅಲ್ಲಿರುವ ಜಲಯಂತ್ರವೇ ಮುಂತಾದ ವಿಹಾರಸ್ಥಳಗಳನ್ನು ಪರೀಕ್ಷಿಸುತ್ತಿದ್ದಳು.

ರಾಮನು ಸಭೆಯಲ್ಲಿ ರಾಜಕಾರ್ಯಗಳನ್ನು ನೆರವೇರಿಸಿಕೊಂಡು ತಮ್ಮಂದಿರೊಡನೆ ಮನೆಗೆ ಬಂದು ಸೀತೆಯು ಉಪವನದಲ್ಲಿರುವುದನ್ನು ತಿಳಿದು ಅಲ್ಲಿಗೆ ಬರುತ್ತಿದ್ದನು. ಆತನು ಬಂದುದನ್ನು ಸೀತೆಯು ತಿಳಿದು ಕಾಲಿಗೆ ನೀರನ್ನು ತೆಗೆದುಕೊಂಡು ಎದುರುಗೊಳ್ಳುತ್ತಿದ್ದಳು. ಮತ್ತು ದಾಸಿಯರು ಅಲ್ಲಿಗೆ ಬಂದು ರಾಮನ ಉಡುಪುಗಳಲ್ಲಿ ಒಂದೊಂದನ್ನು ಒಬ್ಬೊಬ್ಬಳು ತೆಗೆದುಕೊಳ್ಳುತ್ತಿದ್ದಳು. ರಾಮನು ಸೀತೆಯು ಕೊಟ್ಟ ನೀರಿನಿಂದ ಕಾಲುಗಳನ್ನು ತೊಳೆದುಕೊಂಡು ಆಚಮನವನ್ನು ಮಾಡಿ ನೀರನ್ನು ಕುಡಿಯುತ್ತಿದ್ದನು.

ಆಗ ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣನೇ! ನೀನು ಹೋಗು. ಭೋಜನಕ್ಕೆ ಸಿದ್ಧಪಡಿಸಿ ನನಗೆ ಹೇಳಿ ಕಳುಹಿಸು." ಎನ್ನುತ್ತಿದ್ದನು. ಅದರಂತೆ ಲಕ್ಷ್ಮಣನು ಜಾಗ್ರತೆಯಾಗಿ ಹೋಗಿ ಎಲ್ಲರನ್ನೂ ಕರೆಸಿ ಬಡಿಸುವವರಿಗೆ ಹೇಳಿ ಅವಸರಪಡಿಸುತ್ತಿದ್ದನು.

ಇತ್ತ ರಾಮನು ಉತ್ತಮವಾದ ನೀರಿನಿಂದ ಸೀತೆಯೊಡನೆ ಜಲಕೇಳಿಯನ್ನಾಡಿ ಅವಳನ್ನು ಸಂತೋಷಪಡಿಸಿ ತಾನೂ ಸಂತೋಷಪಡುತ್ತಿದ್ದನು.

ಇಷ್ಟರವೇಳೆಗೆ ಲಕ್ಷ್ಮಣನು ಎಲ್ಲವನ್ನೂ ಸಿದ್ಧಪಡಿಸಿ ಬರುತ್ತಿದ್ದನು. ಆಗ ಸಖಿಯರು ರಾಮನ ಬಳಿಗೆ ಹೋಗಲು ಸಮಯವು ಸರಿಯಾಗಿಲ್ಲವೆಂದು ತಡೆಯುತ್ತಿದ್ದರು. ಅನಂತರ ಯಾವಳಾದರೂ ಒಬ್ಬ ದಾಸಿಯು ಲಕ್ಷ್ಮಣನ ಮಾತನ್ನು ದೂರದಿಂದಲೇ ಹೇಳುತ್ತಿದ್ದಳು.

ಆಗ ರಾಮನು ಅದನ್ನು ಕೇಳಿ ಸೀತೆಯನ್ನು ಕಳುಹಿಸಿ ತಾನೂ ಬಂದು ಬಿಸಿನೀರಿನಿಂದಲೂ ಶುದ್ಧವಾದ ನೀರಿನಿಂದಲೂ ಸ್ನಾನವನ್ನು ಮಾಡಿ ಬೇರೆ

ಬಟ್ಟೆಯನ್ನು ಧರಿಸಿಕೊಂಡು ಹೂವನ್ನು ಹಾಸಿರುವ ದಾರಿಯಿಂದ ಮನೆಯೊಳಕ್ಕೆ ಹೋಗಿ ಊಟದಮನೆಗೆ ಹೋಗುತ್ತಿದ್ದನು. ಅಲ್ಲಿ ತಟ್ಟೆಯ ಮುಂದೆ ಕುಳಿತು ತಮ್ಮಂದಿರೊಡನೆಯೂ ಮಂತ್ರಿಗಳೊಡನೆಯೂ ಸ್ನೇಹಿತರೊಡನೆಯೂ ಊಟ ಮಾಡುತ್ತಿದ್ದನು. ಅನಂತರ ಮಾತನಾಡುತ್ತ ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದನು. ಅನಂತರ ಸೀತೆಯೂ ಊಟಮಾಡಿ ನಿದ್ರಾಶಾಲೆಗೆ ಹೋಗುತ್ತಿದ್ದಳು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

|| ಷಷ್ಠಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥ ರಾಮೋ ಬಂಧುಭಿಶ್ಚ ನಿದ್ರಾಶಾಲಾಂ ಯಯೌ ಮುದಾ |
ಸ್ತುತೋ ಬಂದಿಜನಾದ್ಯೈಶ್ಚ ವಿವೇಶೈಕಾಂತಮಂದಿರಂ || ೧ ||

ವಿಸರ್ಜ್ಯ ಲಕ್ಷ್ಮಣಾದೀಂಶ್ಚ ದಾಸೀಭಿಃ ಪರಿವಾರಿತಃ |
ದದರ್ಶ ಜಾನಕೀಂ ನಿದ್ರಾಶಾಲಾಯಾಂ ರಘುನಂದನಃ || ೨ ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಆರನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಅನಂತರ ರಾಮನು ತಮ್ಮಂದಿರೊಡನೆ ನಿದ್ರಾಶಾಲೆಗೆ ಹೋದನು. ಸ್ತುತಿಪಾಠಕರು ಸ್ತುತಿಸುತ್ತಿರಲು ಏಕಾಂತ ಗೃಹವನ್ನು ಹೊಕ್ಕನು.

೨. ಆಗ ಲಕ್ಷ್ಮಣನೇ ಮುಂತಾದವರನ್ನು ಕಳುಹಿಸಿಬಿಟ್ಟನು. ಅನಂತರ ಅವನ ಜೊತೆಯಲ್ಲಿ ದಾಸಿಯರೆಲ್ಲರೂ ಬಂದರು. ಅವರೊಡನೆ ಕೂಡಿಕೊಂಡು ನಿದ್ರಾಶಾಲೆಯಲ್ಲಿರುವ ಸೀತೆಯ ಬಳಿಗೆ ಹೋದನು.

ಸಾಪಿ ಜ್ಞಾತ್ವಾ ಽಽಗತಂ ರಾಮಂ ಸಾರಿಕ್ರೀಡಾಂ ವಿಹಾಯ ಚ ।
ಪ್ರತ್ಯುಜ್ಜಗಾಮ ರಾಮಾಯ ಸಖೀಭಿರ್ನೂಪುರಸ್ವನಾ ॥ ೩ ॥

ನತ್ವಾ ರಾಮಂ ಕರೇ ಧೃತ್ವಾ ಮಂಚಕೇ ಸನ್ನಿವೇಶಯತ್ ।
ದತ್ವಾ ಪಾತುಂ ಜಲಂ ತಸ್ಮೈ ದದೌ ತಾಂಬೂಲಮುತ್ತಮಂ ॥ ೪ ॥

ತತಶ್ಚಕಾರ ಶ್ರೀರಾಮೋ ನಿದ್ರಾಂ ಸೀತಾಸಮನ್ವಿತಃ ।
ದಾಸೀಭಿರ್ವೀಜಿತಶ್ಚಾಪಿ ಪರ್ಯಂಕೇ ರತ್ನಭೂಷಿತೇ ॥ ೫ ॥

ಮುಹೂರ್ತಮಾತ್ರಾದುತ್ಥಾಯ ಧೃತಾಧೋಂಕೋಪಬರ್ಹಣಾ ।
ತಸ್ಥೌ ಸೀತಾ ಮಂಚಕಾಧಸ್ತತೋ ರಾಮೋಽಪ್ಯ ಬುಧ್ಯತ ॥ ೬ ॥

---

೩. ಸೀತೆಯು ರಾಮನು ಬಂದುದನ್ನು ತಿಳಿದು ಪಗಡೆಯ ಆಟವನ್ನು ಬಿಟ್ಟು ಮೇಲಕ್ಕೆದ್ದು ಸಖಿಯರೊಡನೆ ಕೂಡಿಕೊಂಡು ಕಾಲುಬಳೆಗಳು ಸದ್ದು ಮಾಡುತ್ತಿರಲು ರಾಮನನ್ನು ಎದುರುಗೊಂಡಳು.

೪. ಅವನಿಗೆ ನಮಸ್ಕರಿಸಿ ಕೈಯ್ಯನ್ನು ಹಿಡಿದುಕೊಂಡು ಬಂದು ಮಂಚದ ಮೇಲೆ ಕೂರಿಸಿದಳು. ಅನಂತರ ಕುಡಿಯಲು ನೀರನ್ನು ಕೊಟ್ಟು ಅನಂತರ ತಾಂಬೂಲವನ್ನು ಕೊಟ್ಟಳು.

೫. ಅನಂತರ ರಾಮನು ಸೀತೆಯೊಡನೆ ನಿದ್ದೆಮಾಡಿದನು. ಆಗ ಆ ರತ್ನದಿಂದ ಅಲಂಕೃತವಾದ ಮಂಚದಮೇಲೆ ಮಲಗಿರಲು ದಾಸಿಯರು ಬೀಸಣಿಗೆಯಿಂದ ಬೀಸುತ್ತಿದ್ದರು.

೬. ಒಂದು ಮುಹೂರ್ತಕಾಲದವರೆಗೂ ಸೀತೆಯು ಮಲಗಿದ್ದು ಒಡನೆಯೇ ಎಚ್ಚೆತ್ತು ಮಂಚದಿಂದ ಕೆಳಕ್ಕೆ ಇಳಿದು ನೇತಾಡುತ್ತಿರುವ ಕುಚ್ಚನ್ನು ಹಿಡಿದು ನಿಂತುಕೊಂಡಳು. ಅನಂತರ ರಾಮನಿಗೂ ಎಚ್ಚರವಾಯಿತು.

ದೃಷ್ಟ್ವಾ ಸಮುತ್ಥಿತಂ ರಾಮಂ ದತ್ವಾ ಪಾತುಂ ಜಲಂ ಪುನಃ ।
ದದೌ ಸೀತಾಥ ತಾಂಬೂಲಂ ರಾಘವಾಯಾತಿ ಹರ್ಷಿತಾ ॥ ೭ ॥

ರಾಮದಾಸ್ಯಸ್ತಥಾ ರಾಮಂ ವೀಜಯಾಮಾಸುರಾದರಾತ್ ।
ಕೇಕೀಪಕ್ಷಸಮುದ್ಭೂತೈಃ ಚಾಮರೈರುಕ್ಮಭೂಷಿತೈಃ ॥ ೮ ॥

ಸಿತಾ ದಾಸ್ಯಸ್ತಥಾ ಸೀತಾಂ ವೀಜಯಾಮಾಸುರಾದರಾತ್ ।
ಧೇನುಪುಚ್ಛೋದ್ಭವೈರ್ದಿವ್ಯೈಶ್ಚಾಮರೈರ್ಹೇಮಮಂಡಿತೈಃ ॥ ೯ ॥

ತತಸ್ಸೀತಾಕರಂ ಧೃತ್ವಾ ದ್ರಾಕ್ಷಾವಲ್ಯಾಸ್ಸುಮಂಟಪಂ ।
ಯಯೌ ರಾಮೋಂಗಣೋದ್ಭೂತಂ ತಸ್ಥೌ ತದಧ ಆಸನೇ ॥ ೧೦ ॥

ಉಪಬರ್ಹಣಸಂವೃಷ್ಟಸ್ಸೀತಾವಾಮಸ್ಥಿತೋ ಮುದಾ ।
ಹಸ್ತ್ಯಶ್ವೋಷ್ಟ್ರಮಂತ್ರಿರಾಜದೂತೈಃ ಕೃತ್ರಿಮನಿರ್ಮಿತೈಃ ॥ ೧೧ ॥

---

೭. ರಾಮನು ಎಚ್ಚರಗೊಂಡುದನ್ನು ಸೀತೆಯು ನೋಡಿ ಅವನಿಗೆ ಕುಡಿಯಲು ನೀರನ್ನು ಕೊಟ್ಟು ಮತ್ತೆ ಸಂತೋಷದಿಂದ ತಾಂಬೂಲವನ್ನು ಕೊಟ್ಟಳು.

೮. ಆಗ ದಾಸಿಯರು ರಾಮನಿಗೆ ಬೀಸಲು ಮೊದಲಿಟ್ಟರು. ಕೆಲವರು ನವಿಲುಗರಿಯ ಬೀಸಣಿಗೆಗಳಿಂದಲೂ, ಕೆಲವರು ಚಿನ್ನದ ಕಟ್ಟನ್ನು ಹಾಕಿರುವ ಚಾಮರಗಳಿಂದಲೂ ಬೀಸುತ್ತಿದ್ದರು.

೯-೧೦. ಸೀತೆಯ ದಾಸಿಯರು ದಿವ್ಯವಾದ ಚಾಮರಗಳಿಂದ ಸೀತೆಯನ್ನು ಬೀಸುತ್ತಿದ್ದರು. ಅನಂತರ ಶ್ರೀರಾಮನು ಸೀತೆಯ ಕೈಯ್ಯನ್ನು ಹಿಡಿದುಕೊಂಡು ದ್ರಾಕ್ಷಿಯಬಳ್ಳಿಯ ಮಂಟಪಕ್ಕೆ ಹೋಗಿ ಅದರ ತಳಭಾಗದಲ್ಲಿರುವ ಆಸನದಲ್ಲಿ ಕುಳಿತುಕೊಂಡನು.

೧೧. ಅಲ್ಲಿದ್ದ ಒರಗುದಿಂಬುಗಳನ್ನು ಒರಗಿಕೊಂಡು ಕುಳಿತಿರಲು ಸೀತೆಯು ಆ ಶ್ರೀರಾಮನ ಎಡದ ಪಕ್ಕದಲ್ಲಿ ನಿಂತುಕೊಂಡಳು.

ಹೇಮರತ್ನಹಸ್ತಿದಂತಸಂಭೂತೈರತಿಚಿತ್ರಿತೈಃ ।
ಕ್ರೀಡಾಂ ಬುದ್ಧೇರ್ಬಲೇನೈವ ಚಕಾರ ಸೀತಯಾ ಸುಖಂ ॥ ೧೨ ॥

ತತಃ ಪಕ್ಷಿಕುಲೈಸ್ಸರ್ವೈಃ ಪಂಜರಸ್ಥೈಸ್ಸ ಸೀತಯಾ ।
ಕ್ರೀಡಾಂ ಚಕಾರ ಶ್ರೀರಾಮೋ ದಾಸೀಭಿರ್ವೀಜಿತೋ ಮುಹುಃ ॥ ೧೩ ॥

ಏತಸ್ಮಿನ್ನಂತರೇ ತತ್ರ ಸೀತಯಾಽಽಕಾರಿತಾ ಶುಭಾ ।
ಸಮಾಯಯುರ್ವಾರನಾರ್ಯೋ ನನೃತುಶ್ಚ ತತಸ್ತದಾ ॥ ೧೪ ॥

ಚಕ್ರುರ್ಗೀತಂ ಸುಸ್ವರಂ ತಾಷ್ಷಡ್ಜಸ್ವರಸಮನ್ವಿತಂ ।
ತತಸ್ತಾಭ್ಯೋ ಹ್ಯಲಂಕಾರಾನ್ ದತ್ವಾ ವಸ್ತ್ರಾಣಿ ಜಾನಕೀ ॥ ೧೫ ॥

ವಿಸರ್ಜಯಾಮಾಸ ಸರ್ವಾಸ್ತತೋ ರಾಘವಮಬ್ರವೀತ್ ।
ಸ್ಥಿತ್ವಾ ಪ್ರಾಸಾದವರ್ಯೇದ್ಯ ಕೌತುಕಂ ಹಟ್ಟಜಂ ತ್ವಯಾ ॥ ೧೬ ॥

---

೧೨. ಚಿನ್ನ, ರತ್ನ, ದಂತಗಳಿಂದ ಕೂಡಿದ, ಚಿತ್ರವನ್ನು ಕೆತ್ತಿರುವ ಆನೆ, ಒಂಟೆ, ಮಂತ್ರಿ, ರಾಜ, ದೂತರು ಇವನ್ನು ಮಾಡಿರುವ ಬೊಂಬೆಗಳಿಂದ ಬುದ್ಧಿ ಬಲವನ್ನು ಉಪಯೋಗಿಸಿ ಸೀತೆಯೊಡನೆ ಚದುರಂಗವನ್ನು ಆಡಿದನು.

೧೩. ಅನಂತರ ಮತ್ತೆ ದಾಸಿಯರು ಬೀಸುತ್ತಿರಲು ರಾಮನು ಪಂಜರ ದಲ್ಲಿರುವ ಪಕ್ಷಿಗಳನ್ನು ಸೀತೆಯೊಡನೆ ನೋಡುತ್ತ ಕ್ರೀಡಿಸಿದನು.

೧೪. ಇಷ್ಟರಲ್ಲಿ ಆ ಸೀತೆಯು ಮೊದಲೇ ನಿಯಮಿಸಿದ್ದಂತೆ ವೇಶ್ಯಾಂಗನೆ ಯರು ಅಲ್ಲಿಗೆ ಬಂದು ಗುಂಪುಗುಂಪಾಗಿ ಕುಣಿಯುತ್ತಿದ್ದರು.

೧೫. ಅವರೆಲ್ಲರೂ ಷಡ್ಜಸ್ವರದಿಂದ ಕೂಡಿದ ಉತ್ತಮವಾದ ಗಾನವನ್ನು ಹಾಡಿದರು. ಅವರು ಕುಣಿದು ಹಾಡಿದಮೇಲೆ ಜಾನಕಿಯು ಅವರಿಗೆ ಅಲಂಕಾರ ಗಳನ್ನು ಬಹುಮಾನವಾಗಿ ಕೊಟ್ಟು ಕಳುಹಿಸಿದಳು.

೧೬. ಅನಂತರ ಸೀತೆಯು ರಾಮುನನ್ನು ಕುರಿತು ಎಲೈ ನಾಥನೇ! ಈ ಉತ್ತಮವಾದ ಮಹಡಿಯಮೇಲೆ ಕುಳಿತುಕೊಂಡು ಅಂಗಡಿಬೀದಿಯ ಸೋಜಿಗ ವನ್ನು ನೋಡೋಣ.

ದ್ರಷ್ಟುಮಿಚ್ಛಾಮ್ಯಹಂ ರಾಮ ಶೀಘ್ರಮುತ್ತಿಷ್ಠ ರಾಘವ ।
ತತ್ಸೀತಾವಚನಾದ್ರಾಮಃ ಪ್ರಾಸಾದಂ ಪ್ರತಿ ಸೀತಯಾ ॥ ೧೭ ॥

ಗತ್ವಾ ದಿವ್ಯಾಸನೇ ಸ್ಥಿತ್ವಾ ಗವಾಕ್ಷೈ ರುಕ್ಮಭೂಷಿತೈಃ ।
ರತ್ನೋದ್ಭವಕಪಾಟೈಶ್ಚ ಮುಕ್ತಾಜಾಲವಿರಾಜಿತೈಃ ॥ ೧೮ ॥

ರಾಜವೀಥ್ಯಾಂ ಹಟ್ಟಜಾತಂ ದದರ್ಶ ಜನಕೌತುಕಂ ।
ಸೀತಾಯೈ ದರ್ಶಯಾಮಾಸ ಕೌತುಕಾನಿ ಸ ರಾಘವಃ ॥ ೧೯ ॥

ಸ್ವೀಯದಕ್ಷಿಣಹಸ್ತಸ್ಯ ತರ್ಜನ್ಯಾ ಮುದಿತಾನನಃ ।
ಏತಸ್ಮಿನ್ನಂತರೇ ಹಟ್ಟೇ ದ್ವಿಜಪತ್ನೀ ತು ಸೀತಯಾ ॥ ೨೦ ॥

ದೃಷ್ಟ್ವಾಽಲಂಕಾರವಸ್ತ್ರಾದ್ಯೈರ್ಹೀನಾ ಕಟಿಧೃತಾರ್ಭಕಾ ।
ಗಚ್ಛಂತೀ ರಾಜಮಾರ್ಗೇಣ ಕೃಶಾ ಭಿಕ್ಷಾರ್ಥಮುದ್ಯತಾ ॥ ೨೧ ॥

೧೭–೧೯. ಆದ್ದರಿಂದ ಬೇಗನೆ ಏಳು. ಎಂದಳು. ಸೀತೆಯ ಈ ಮಾತನ್ನು ಕೇಳಿ ರಾಮನು ಸೀತೆಯೊಡನೆ ಮಹಡಿಯಮೇಲಕ್ಕೆ ಹೋದನು ಅಲ್ಲಿ ದಿವ್ಯವಾದ ಆಸನದಲ್ಲಿ ಕುಳಿತು ಚಿನ್ನದಿಂದ ಅಲಂಕೃತವಾದ, ರತ್ನದ ಬಾಗಿಲುಗಳಿರುವ, ಮುತ್ತಿನ ಸರಗಳು ಜೋಲಾಡುತ್ತಿರುವ ಕಿಟಕಿಯಲ್ಲಿ ಅಂಗಡಿಬೀದಿಯ ಕೌತುಕವನ್ನು ನೋಡುತ್ತಿದ್ದನು. ಮತ್ತು ಸೀತೆಗೂ ತೋರಿಸುತ್ತಿದ್ದನು.

೨೦–೨೧. ತೋರಿಸುವಾಗ ತನ್ನ ಎರಡನೆಯ ಬೆಟ್ಟನಿಂದ ಗುರಿಯಿಟ್ಟು ಸಂತೋಷದಿಂದ ತೋರಿಸುತ್ತಿದ್ದನು. ಹೀಗೆ ನೋಡುತ್ತಿರುವಾಗ ಒಬ್ಬಾನೊಬ್ಬ ಬ್ರಾಹ್ಮಣನ ಹೆಂಡತಿಯು ಅಲಂಕಾರವನ್ನು ಮಾಡಿಕೊಳ್ಳದೆ ಮಗುವನ್ನು ಸೊಂಟದಲ್ಲಿ ಎತ್ತಿಕೊಂಡು ಬಡಕಲು ಬಡಕಲಾಗಿ ಭಿಕ್ಷೆಗೆ ಹೋಗುತ್ತಿದ್ದುದನ್ನು ನೋಡಿದಳು.

ತಾಂ ತಾದೃಶೀಂ ನಿರೀಕ್ಷ್ಯಾಥ ದಾಸ್ಯಾಹೂಯ ವಿದೇಹಜಾ |
ಪಪ್ರಚ್ಛ ಭೂಷಣಾದ್ಯೈಸ್ತ್ವಂ ಕಿಮರ್ಥಂ ರಹಿತಾ ಹ್ಯಸಿ ॥ ೨೨ ॥

ಸಾ ಪ್ರಾಹ ತೀರ್ಥಯಾತ್ರಾರ್ಥಂ ತ್ಯಕ್ತ್ವಾ ಮಾಂ ತಾತಲಾಲಿತಾಂ |
ತಾತಗೇಹೇ ಗತೋ ಭರ್ತಾ ತಾತೋಽಪಿ ಜರಠೋ ಮೃತಃ ॥ ೨೩ ॥

ಗುರುಗೇಹೇಽವಂತಿಕಾಯಾಂ ವರ್ತೇತೇ ಭ್ರಾತರೌ ಮಮ |
ನ ಪೋಷಕಃ ಕೋಽಪಿ ಗೇಹೇಽಧುನಾ ಸೀತೇಽಸ್ತಿ ವೈ ಮಮ ॥ ೨೪ ॥

ತಸ್ಮಾನ್ನ ಸಂತ್ಯಲಂಕಾರಾ ಮಮ ದೇಹೇ ವಿದೇಹಜೇ ।
ಇತಿ ತಸ್ಯಾವಚಶ್ಶ್ರುತ್ವಾ ರಾಮಾಸ್ಯಂ ಸನ್ನಿರೀಕ್ಷ್ಯ ಸಾ ॥ ೨೫ ॥

---

೨೨. ಆ ರೀತಿಯಾಗಿ ತಿರಿಯುತ್ತಿದ್ದ ಆಕೆಯನ್ನು ಸೀತೆಯು ನೋಡಿ ದಾಸಿಯನ್ನು ಕಳುಹಿಸಿ ಆಕೆಯನ್ನು ಕರೆಸಿದಳು. ಬಂದನಂತರ ನೀನು ಭೂಷಣಾದಿಗಳನ್ನು ಏತಕ್ಕೆ ಧರಿಸಿಲ್ಲ? ಎಂದು ಕೇಳಿದಳು.

೨೩. ಆಗ ಆಕೆಯು ಎಲೈ ಸೀತೆಯೇ! ನಾನು ನಮ್ಮತಂದೆಯ ಮನೆಯಲ್ಲಿದ್ದಾಗ ನನ್ನನ್ನು ಬಿಟ್ಟು ಬಿಟ್ಟು ನನ್ನಗಂಡನು ತೀರ್ಥಯಾತ್ರೆಗೆ ಹೊರಟು ಹೋದನು. ನನ್ನ ತಂದೆಯು ವಯಸ್ಸು ಕಳೆದು ಮುದುಕನಾಗಿ ಸತ್ತುಹೋದನು.

೨೪. ನನಗೆ ಇಬ್ಬರು ಸಹೋದರರು ಇರುವರು. ಅವರು ಅವಂತಿಯಲ್ಲಿ ಗುರುವಿನ ಮನೆಯಲ್ಲಿ ಗುರುಕುಲವಾಸಮಾಡುತ್ತಿರುವರು. ಮನೆಯಲ್ಲಿ ನನ್ನನ್ನು ಕಾಪಾಡತಕ್ಕವರು ಈಗ ಯಾರೂ ಇಲ್ಲ.

೨೫. ಆದ್ದರಿಂದ ನನ್ನ ಮೈಮೇಲೆ ಅಲಂಕಾರಗಳೊಂದೂ ಇಲ್ಲ. ಎಂದಳು. ಆಕೆಯು ಹೀಗೆನ್ನಲು ಸೀತೆಯು ರಾಮನ ಮುಖವನ್ನು ನೋಡಿದಳು.

ನಿಜಾಲಂಕಾರವಾಸಾಂಸಿ ದದೌ ತಸ್ಯೈ ವಿದೇಹಜಾ ।
ಬ್ರಾಹ್ಮಣೀಂ ಸಾ ಪುನಃ ಪ್ರಾಹ ಗಚ್ಛ ತ್ವಂ ಲಕ್ಷ್ಮಣಂ ಪ್ರತಿ ॥ ೨೬ ॥

ಹೇಮಮುದ್ರಾಲಕ್ಷಮಿತಾಸ್ತ್ವಂ ಗೃಹಾಣ ಮಮಾಜ್ಞಯಾ ।
ತಥೇತಿ ಜಾನಕೀಂ ಪೃಷ್ಟ್ವಾ ಸಾ ಯಯೌ ಲಕ್ಷ್ಮಣಂ ತದಾ ॥ ೨೭ ॥

ಪೂರ್ವಾಧಿಕಾನಲಂಕಾರಾನ್ ಸ್ವದೇಹೇ ಜಾನಕೀ ಪುನಃ ।
ದಧಾರ ದಿವ್ಯವಾಸಾಂಸಿ ಹೇಮತಂತೂದ್ಭವಾನಿ ಸಾ ॥ ೨೮ ॥

ಲಕ್ಷ್ಮಣಂ ಬ್ರಾಹ್ಮಣೀ ಗತ್ವಾ ಸೀತಾವಾಕ್ಯಂ ನ್ಯವೇದಯತ್ ।
ದದೌ ತಸ್ಯೈ ಲಕ್ಷ್ಮಣೋಽಪಿ ಹೇಮಮುದ್ರಾಸ್ತಥೈವ ಸಃ ॥ ೨೯ ॥

೨೬–೨೭. ಮತ್ತು ತನ್ನ ಮೈಮೇಲಿದ್ದ ಬಟ್ಟೆಗಳನ್ನು, ಅಲಂಕಾರಗಳನ್ನೂ ಆಕೆಗೆ ಕೊಟ್ಟು ಬಿಟ್ಟಳು. ಅಲ್ಲದೆ ಅಮ್ಮ! ನೀನು ಲಕ್ಷ್ಮಣನ ಬಳಿಗೆ ಹೋಗಿ ನಾನು ಅಪ್ಪಣೆಮಾಡಿರುವೆನೆಂದು ಹೇಳಿ ಒಂದು ಲಕ್ಷ ಚಿನ್ನದ ನಾಣ್ಯಗಳನ್ನು ತೆಗೆದುಕೋ ಎಂದಳು. ಆಗ ಆಕೆಯು ಹಾಗೆಯೇ ಆಗಲೆಂದು ಹೇಳಿ ಲಕ್ಷ್ಮಣನ ಬಳಿಗೆ ಹೊರಟು ಹೋದಳು.

೨೮. ಅನಂತರ ಸೀತೆಯು ಮೊದಲಿದ್ದುದಕ್ಕಿಂತಲೂ ಉತ್ತಮವಾದ ಅಲಂಕಾರಗಳನ್ನೂ ಅಮೂಲ್ಯವಾದ ಬಟ್ಟೆಗಳನ್ನೂ ಧರಿಸಿಕೊಂಡಳು. ಅವು ಚಿನ್ನದ ಜರಿಗಳಿಂದ ಕೂಡಿದ್ದುವಲ್ಲದೆ ಬಹುವಾದ ಚಿತ್ರಗಳಿಂದಲೂ ಕೂಡಿದ್ದುವು.

೨೯. ಅನಂತರ ಆ ಬ್ರಾಹ್ಮಣಸ್ತ್ರೀಯು ಲಕ್ಷ್ಮಣನ ಬಳಿಗೆ ಹೋಗಿ ಸೀತೆಯ ಅಪ್ಪಣೆಯನ್ನು ತಿಳಿಸಿದಳು. ಲಕ್ಷ್ಮಣನೂ ಕೂಡ ಒಡನೆಯೇ ಆ ಚಿನ್ನದ ನಾಣ್ಯಗಳನ್ನು ಕೊಟ್ಟುಬಿಟ್ಟನು.

ಸೀತಾವಾಕ್ಯಾಲ್ಲಕ್ಷಮಿತಾ ಮೃಷಾ ಮೇನೇ ನ ತದ್ವಚಃ |
ಕಸ್ಸಮರ್ಥೋ ರಾಮರಾಜ್ಯೇ ಮೃಷಾ ವಕ್ತುಂ ಭವೇದಿತಿ ॥ ೩೦ ॥

ಅಥ ಸೀತಾಪಿ ಸೌಮಿತ್ರಿಂ ಸ್ವಾಂ ದಾಸೀಂ ಪ್ರೇಷ್ಯ ವೈ ತದಾ |
ಅಯೋಧ್ಯಾಯಾಂ ತಥಾ ರಾಷ್ಟ್ರೇ ಘೋಷಯಾಮಾಸ ದುಂದುಭಿಂ॥೩೧॥

ಸಪ್ತದ್ವೀಪೇಷು ಸರ್ವತ್ರ ಪೃಥಗ್ವರ್ಷೇಷು ಸಾದರಂ |
ಕಾಚಿನ್ನಾರೀ ಪುಮಾನ್ವಾಪಿ ವಿನಾ ಸದ್ವಸ್ತ್ರಭೂಷಣೈಃ ॥ ೩೨ ॥

ದೃಷ್ಟಶ್ಚಾರೈರ್ಮಯಾ ಜ್ಞಾತೋ ಯದ್ದೇಶೇ ಯತ್ಪುರೇ ಕದಾ |
ತದ್ರಾಜ್ಞಶ್ಚಾಸ್ತು ಮೇ ದಂಡೋ ರಾಮಸ್ಯಾಪಿ ವಿಶೇಷತಃ ॥ ೩೩ ॥

---

೩೦. ಸೀತೆಯು ಲಕ್ಷ ಸುವರ್ಣಗಳನ್ನು ಕೊಡೆಂದು ಹೇಳಿರುವುದು ಸುಳ್ಳು ಎಂಬುದಾಗಿ ಲಕ್ಷ್ಮಣನು ಭಾವಿಸಲೇ ಇಲ್ಲ. ಏತಕ್ಕೆಂದರೆ ರಾಮರಾಜ್ಯದಲ್ಲಿ ಸುಳ್ಳನ್ನು ಹೇಳಲು ಒಬ್ಬರಿಗೂ ಧೈರ್ಯವಾಗಲೀ ಶಕ್ತಿಯಾಗಲಿ ಇರಲಿಲ್ಲ.

೩೧. ಆಗ ಸೀತೆಯು ಸೌಮಿತ್ರಿಯ ಬಳಿಗೆ ದಾಸಿಗೆ ಇಂತೆಂದು ಅಪ್ಪಣೆ ಮಾಡಿ ಕಳುಹಿಸಿದಳು. ಎಲೈ ಸೌಮಿತ್ರಿಯೇ ! ಅಯೋಧ್ಯೆಯಲ್ಲಿಯೂ ಮತ್ತು ರಾಷ್ಟ್ರಗಳಲ್ಲಿಯೂ ಇಂತೆಂದು ಹೇಳಿ ಡಂಗೂರವನ್ನು ಹೊಡಿಸು.

೩೨–೩೩. ಸಪ್ತದ್ವೀಪಗಳಲ್ಲಿಯಾಗಲಿ, ಬೇರೆ ಬೇರೆ ದೇಶಗಳಲ್ಲಿಯಾಗಲಿ, ಪುರುಷನಾಗಲಿ, ಸ್ತ್ರೀಯಾಗಲಿ ಬಟ್ಟೆಗಳೂ ಅಲಂಕಾರಗಳೂ ಇಲ್ಲದೆ ಇರಕೂಡದು. ಅಂತಹವರನ್ನು ಚಾರರು ಎಲ್ಲಿ ಯಾವಾಗ ನೋಡಿದರೂ ಆ ಕೂಡಲೆ ಆ ದೇಶದ ರಾಜನಿಗೆ ನನ್ನ ಅಪ್ಪಣೆಯಿಂದ ಶಿಕ್ಷೆಯನ್ನು ವಿಧಿಸಬೇಕು. ಈ ವಿಷಯದಲ್ಲಿ ರಾಮನೂ ವಿಶೇಷವಾಗಿ ಅನುಮೋದಿಸಿದ್ದಾನೆ. ಎಂಬುದಾಗಿ ಎಲ್ಲಕಡೆಗೂ ಹೇಳಿಕಳುಹಿಸು.

ಇತಿ ಮಚ್ಛಿಕ್ಷಿತಂ ಜ್ಞಾತ್ವಾ ಸ್ವಕೋಶೈಃ ಸ್ವೀಯರಾಷ್ಟ್ರಕೇ ।
ವಸ್ತ್ರಾಲಂಕಾರಭೂಷಾಭಿರ್ಭೂಷಣೀಯಾ ದ್ವಿಜಾದಯಃ ॥ ೩೪ ॥

ಸಪ್ತದ್ವೀಪನೃಪತಯಶ್ಚೇತ್ಥಂ ಸೀತಾಸುಶಿಕ್ಷಿತಂ ।
ಗಜದುಂದುಭಿಘೋಷೇಣ ಶ್ರುತ್ವಾ ಚಕ್ರುಸ್ತಥೈವ ಚ ॥ ೩೫ ॥

ತದಾರಭ್ಯ ಜಗತ್ಯಾಂ ನ ಕಶ್ಚಿದ್ವಿಗತಭೂಷಣಃ ।
ನಾರೀ ವಾ ಪುರುಷೋ ವಾಸೀತ್ ಕುತ್ರಾಪ್ಯವನಿಜಾಭಯಾತ್ ॥ ೩೬ ॥

ಏವಂ ನಾನಾಕೌತುಕಾನಿ ಭೂಮ್ಯಾಂ ಸೀತಾಕರೋನ್ಮುದಾ ।
ಅಥ ರಾಮಸ್ಸಭಾಂ ಗತ್ವಾ ಪುನರ್ಯಾಮೇ ಚತುರ್ಥಕೇ ॥ ೩೭ ॥

---

೩೪. ಈ ರೀತಿಯಾದ ನನ್ನ ಶಿಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಲ್ಲಿನ ರಾಜರು ಬ್ರಾಹ್ಮಣರೇ ಮುಂತಾದವರಿಗೆ ತನ್ನ ಕೋಶದಿಂದ ಬಟ್ಟೆ ಬರೆಗಳನ್ನೂ ಅಲಂಕಾರಗಳನ್ನೂ ಕೊಟ್ಟು ಗೌರವಿಸಲಿ ಎಂದಳು.

೩೫. ಈ ರೀತಿಯಾಗಿ ಲಕ್ಷ್ಮಣನು ತನ್ನ ರಾಜ್ಯದಲ್ಲಿ ಡಂಗೂರವನ್ನು ಹೊಡೆಸಿದುದಲ್ಲದೆ ಸಪ್ತದ್ವೀಪದ ರಾಜರೂ ಹೊಡೆಸುವಂತೆ ಅಪ್ಪಣೆಮಾಡಿ ಹೊಡೆಸಿದನು. ಅವರೂ ಆನೆಯಮೇಲೆ ರಮಡೋಲನ್ನಿಟ್ಟು ಬಡಿಸಿ ಸಾರಿಸಿದರು.

೩೬. ಅದು ಮೊದಲುಗೊಂಡು ಈ ಭೂಲೋಕದಲ್ಲಿ ಗಂಡಸಾಗಲಿ, ಹೆಂಗಸಾಗಲಿ ಬಟ್ಟೆಗಳಾಗಲಿ ಅಲಂಕಾರಗಳಾಗಲಿ ಇಲ್ಲದೆ ಇರುತ್ತಿರಲಿಲ್ಲ. ಇದಕ್ಕೆ ಸೀತೆಯ ಅಪ್ಪಣೆಯ ಭಯವೇ ಕಾರಣವಾಗಿದ್ದಿತು.

೩೭. ಈ ರೀತಿಯಾಗಿ ಸೀತೆಯು ಭೂಮಿಯಲ್ಲಿ ಬಗೆ ಬಗೆಯ ಆಶ್ಚರ್ಯಕರವಾದ ಅಪ್ಪಣೆಗಳನ್ನು ಮಾಡಿದಳು. ಅನಂತರ ರಾಮನು ಮತ್ತೆ ನಾಲ್ಕನೆಯ ಜಾವದಲ್ಲಿ ಸಭೆಗೆ ಬಂದನು.

ಚಕಾರ ರಾಜಕಾರ್ಯಾಣಿ ಧರ್ಮೇಣೈವ ಸ್ವಬಂಧುಭಿಃ ।
ನಟನಾಟಕವೇಶ್ಯಾನಾಂ ಕೌತುಕಾನಿ ಮಹಾಂತಿ ಚ ॥ ೩೮ ॥

ದದರ್ಶ ಸ ಸಭಾಮಧ್ಯೇ ಸ್ತುತೋ ಮಾಗಧವಂದಿಭಿಃ ।
ತತಸ್ಸರ್ವಾನ್ವಿಸರ್ಜ್ಯಾಥ ಯಯೌ ಸೀತಾಗೃಹಂ ಪ್ರಭುಃ ॥ ೩೯ ॥

ಸಾಯಂ ಸಂಧ್ಯಾದಿಕಂ ಕೃತ್ವಾ ಹುತ್ವಾ ಹೋಮಂ ಯಥಾವಿಧಿ ।
ಗಂಧಾದಿಭಿಶ್ಶಿವಂ ಪೂಜ್ಯ ಬ್ರಾಹ್ಮಣಾಂಶ್ಚಾಪಿ ರಾಘವಃ ॥ ೪೦ ॥

ನಾನೋಪಹಾರನೈವೇದ್ಯಂ ದತ್ವಾ ತೇಭ್ಯಸ್ಸ್ವಯಂ ಪುನಃ ।
ಕೃತ್ವೋಪಹಾರಂ ಶ್ರೀರಾಮಶ್ಶ್ರುತ್ವಾ ಪೌರಾಣಿಕೀಂ ಕಥಾಂ ॥ ೪೧ ॥

---

೩೮. ತಮ್ಮಂದಿರೊಡನೆ ಕೂಡಿಕೊಂಡು ಧರ್ಮರೀತಿಯಾಗಿ ಅನೇಕ ಧರ್ಮಕಾರ್ಯಗಳನ್ನು ಮಾಡಿದನು. ಅನಂತರ ನಟರೂ, ನಾಟಕರೂ, ವೇಶ್ಯೆಯರೂ ಅನೇಕವಾದ ಆಶ್ಚರ್ಯಗಳನ್ನು ತೋರಿಸಿದರು.

೩೯. ಅವೆಲ್ಲವನ್ನೂ ರಾಮನು ಆ ಸಭೆಯ ಮಧ್ಯದಲ್ಲಿ ನೋಡಿದನು. ಅಲ್ಲಿನ ಕೆಲಸಗಳೆಲ್ಲವೂ ಮುಗಿದಮೇಲೆ ಸ್ತುತಿಪಾಠಕರಿಂದ ಹೊಗಳಿಸಿಕೊಂಡು ಸೀತೆಯ ಮನೆಗೆ ಹೋದನು.

೪೦. ಅಲ್ಲಿ ಸಾಯಂಸಂಧ್ಯಾವಂದನೆಯನ್ನು ಮಾಡಿಕೊಂಡು ಅಗ್ನಿಹೋತ್ರವನ್ನು ಮಾಡಿ ಗಂಧ ಪುಷ್ಪಗಳಿಂದ ಶಿವನನ್ನು ಪೂಜಿಸಿ ಬ್ರಾಹ್ಮಣರನ್ನು ದಾನಮಾನಗಳಿಂದ ಗೌರವಿಸಿದನು.

೪೧. ದೇವರಿಗೂ ಅನೇಕಬಗೆಯಾದ ನೈವೇದ್ಯಗಳನ್ನು ಸಮರ್ಪಿಸಿ, ಬ್ರಾಹ್ಮಣರಿಗೂ ಬಗೆಬಗೆಯಾದ ಉಪಹಾರಗಳನ್ನು ಕೊಟ್ಟು ತಿನ್ನಿಸಿ ತಾನೂ ಉಪಹಾರವನ್ನು ಸೇವಿಸಿ ಅನಂತರ ಪುರಾಣದ ಕಥೆಯನ್ನು ಕೇಳಿದನು.

ಕೀರ್ತನೈರ್ಹರಿದಾಸಾನಾಂ ವೇಶ್ಯಾನಾಂ ನರ್ತನೈರಪಿ ।
ಪೌರೋದಿತಾಭಿರ್ವಾರ್ತಾಭಿರ್ಗಾಯಕಾನಾಂ ಚ ಗಾಯನೈಃ ॥ ೪೨ ॥

ಸಾರ್ಧಯಾಮಾಂ ನಿಶಾಂ ನೀತ್ವಾ ಯಯೌ ನಿದ್ರಾಸ್ಥಲಂ ಶನೈಃ ।
ತತೋ ರತ್ನಪ್ರಕಾಶೈಸ್ಸ ಜಗಾಮ ಜಾನಕೀಂ ಪ್ರತಿ ॥ ೪೩ ॥

ಸಾಪಿ ಪ್ರತ್ಯುಜ್ಜಗಾಮಾಥ ರತ್ನದೀಪೈಸ್ಸಖೀಯುತಾ ।
ತತಸ್ಸ ಸೀತಯಾ ರಾಮಃ ಪರ್ಯಂಕೇ ರತ್ನಚಿತ್ರಿತೇ ॥ ೪೪ ॥

ಚಕಾರ ಸೀತಯಾ ಕ್ರೀಡಾಂ ರಂಜಯಾಮಾಸ ಜಾನಕೀಂ ।
ತತಸ್ತೌ ದಂಪತೀ ನಿದ್ರಾಂ ಚಕ್ರತುರ್ವೀಜಿತೌ ಮುಹುಃ ॥ ೪೫ ॥

ದಾಸೀಭಿರ್ವ್ಯಜನೈಶ್ಚಿತ್ರೈಃ ಚಾಮರೈರ್ಹೇಮಭೂಷಿತೈಃ ।
ಏವಂ ರಾಮೇಣ ಸಾ ಸೀತಾ ಸುಖಮಾಪ ಪತಿವ್ರತಾ ॥ ೪೬ ॥

೪೨–೪೩. ಹರಿದಾಸರ ಕೀರ್ತನೆಗಳನ್ನು ಕೇಳುತ್ತ ವೇಶ್ಯೆಯರ ನರ್ತನವನ್ನು ನೋಡುತ್ತ ಪಟ್ಟಣಿಗರೊಡನೆ ಅನೇಕವಾಗಿ ಸರಸ ಸಲ್ಲಾಪಗಳನ್ನು ಮಾಡುತ್ತ ಗಾಯಕರು ಹಾಡುವ ಗಾನವನ್ನು ಕೇಳುತ್ತ ರಾತ್ರಿಯಲ್ಲಿ ಅರ್ಧ ಯಾಮವನ್ನು ಕಳೆದು ಅನಂತರ ನಿದ್ದೆಮಾಡುವ ಮನೆಗೆ ನಿಧಾನವಾಗಿ ಹೋದನು. ಅಲ್ಲಿ ಜಾನಕಿಯು ಇದ್ದಳು. ಹೋಗುವಾಗ ರತ್ನದ ದೀಪದ ಬೆಳಕನ್ನು ಹಿಡಿಸಿಕೊಂಡು ಹೋದನು.

೪೪–೪೫. ಸೀತೆಯೂ ಕೂಡ ರತ್ನದ ದೀಪಗಳನ್ನು ಹಿಡಿಸಿಕೊಂಡು ಸಖಿಯರೊಡನೆ ಎದುರುಗೊಂಡಳು. ಅನಂತರ ರಾಮನು ಆ ರತ್ನದ ಮಂಚದ ಮೇಲೆ ಸೀತೆಯೊಡನೆ ಕುಳಿತು ಆಟವಾಡುತ್ತ ಸೀತೆಯನ್ನು ಸಂತೋಷಪಡಿಸಿದನು. ಅನಂತರ ದಾಸಿಯರು ಬೀಸುತ್ತಿರಲು ಇಬ್ಬರೂ ನಿದ್ರಿಸಿದರು.

೪೬. ಬೀಸುವುದಕ್ಕೆ ಬೀಸಣಿಗೆಗಳನ್ನೂ ಚಾಮರಗಳನ್ನೂ ಉಪಯೋಗಿಸಿ ಸಖಿಯರು ಮೆಲ್ಲಗೆ ಬೀಸುತ್ತಿದ್ದರು. ಪತಿವ್ರತೆಯಾದ ಸೀತೆಯು ಈರೀತಿಯಾಗಿ ರಾಮನೊಡನೆ ಸುಖವಾಗಿದ್ದಳು.

ಸೀತಯಾ ರಾಘವಶ್ಚಾಪಿ ಸುಖಮಾಪವಿಶೇಷತಃ ।
ಏವಂ ನಾನಾಕೌತುಕಾನಿ ಪ್ರತ್ಯಹಂ ರಘುನಂದನಃ ॥ ೪೭ ॥

ಚಕಾರ ಸೀತಯಾ ಸಾರ್ಧಂ ಪರಿಪೂರ್ಣಮನೋರಥಃ ।
ಕದಾ ಚಂದ್ರಸ್ಯ ಜ್ಯೋತ್ಸ್ನಯಾಮಂಗಣೇ ಸದ್ಮನಃ ಪ್ರಭುಃ ॥ ೪೮ ॥

ಚಕಾರ ಸೀತಯಾ ನಿದ್ರಾಂ ಕದಾ ಪ್ರಾಸಾದಮಸ್ತಕೇ ।
ಪ್ರಾಸಾದಾಭ್ಯಂತರೇ ವಾಪಿ ಗವಾಕ್ಷಪವನೈಶ್ಶುಭೈಃ ॥ ೪೯ ॥

ಸುಖಮಾಪ ಕದಾ ರಾಮಃ ಕದಾ ರಹಸಿ ಮಂದಿರೇ ।
ಕನಕಶೃಂಖಲಾನದ್ಧ ಸವಿತಾನಸುಮಂಚಕೇ ॥ ೫೦ ॥

ಕದಾ ದ್ರಾಕ್ಷಾಮಂಟಪಾಧೋ ಜಲಯಂತ್ರ ಸಮೀಪತಃ ।
ಕಾಚಭೂಮ್ಯಾಂ ರುಕ್ಮಭೂಮ್ಯಾಂ ಮಣಿಭೂಮ್ಯಾಂ ಕದಾಪಿ ವಾ ॥ ೫೧ ॥

---

೪೭. ಆ ಸೀತೆಯಿಂದಲೂ ರಾಮನು ಬಹುವಾಗಿ ಸುಖಿಯಾಗಿದ್ದನು. ರಾಮನು ಸೀತೆಯೊಡನೆ ಈ ರೀತಿಯಾಗಿ ನಿತ್ಯವೂ ಹಾಸ್ಯಾದಿಗಳನ್ನು ಮಾಡುತ್ತ ಆಟವನ್ನು ಆಡುತ್ತ ಪರಿಪೂರ್ಣಮನೋರಥನಾಗಿದ್ದನು.

೪೮–೫೧. ಆ ಶ್ರೀರಾಮನು ಒಂದೊಂದುಸಾರಿ ಅಂಗಳದಲ್ಲಿ ಬೆಳದಿಂಗಳಲ್ಲಿ ಸೀತೆಯೊಡನೆ ನಿದ್ದೆ ಮಾಡುವನು. ಒಂದೊಂದುಸಾರಿ ಉಪ್ಪರಿಗೆಯ ಮೇಲುಗಡೆ ಆಕೆಯೊಡನೆ ಮಲಗುತ್ತಿದ್ದನು. ಒಂದೊಂದುಸಾರಿ ಗವಾಕ್ಷಗಳಲ್ಲಿ ಕುಳಿತು ವಾಯುವನ್ನು ಸೇವಿಸುತ್ತಿರುವನು. ಒಂದೊಂದುಸಾರಿ ರಹಸ್ಯ ಸ್ಥಳವಾದ ಮನೆಗಳಲ್ಲಿ ಸುಖಿಸುತ್ತಿರುವನು. ಒಂದೊಂದುಸಾರಿ ಚಿನ್ನದ ಸರಪಣಿಗಳನ್ನು ಕಟ್ಟಿ ನೇತುಹಾಕಿಕೊಂಡು ಇರುವ ಮೇಲ್ಕಟ್ಟನ್ನು ಕತ್ತರಿಸುವ ತೂಗುಮಂಚಗಳಲ್ಲಿ ಸುಖಿಸುತ್ತಿರುವನು. ಒಂದೊಂದುಸಾರಿ ದ್ರಾಕ್ಷಾಮಂಟಪದ ಕೆಳಗೂ, ಒಂದೊಂದುಸಾರಿ ಜಲಯಂತ್ರದ ಹತ್ತಿರದಲ್ಲಿಯೂ ಇರುತ್ತಿರುವನು. ಒಂದೊಂದುಸಾರಿ ರತ್ನದ ಭೂಮಿಯಲ್ಲಿಯೂ, ಒಂದೊಂದುಸಾರಿ ಚಿನ್ನದ

ಸ್ಫಟಿಕಾದಿಸುಭೂಮ್ಯಾಂ ಹಿ ಕದಾ ಸುಷ್ವಾಪ ರಾಘವಃ ।
ಕದಾ ಸ ಪುಷ್ಪಕೇ ವಾಪಿ ರಂಗಶಾಲಾಂತರೇ ಕದಾ ॥ ೫೨ ॥

ಕದಾ ಸ ಚಿತ್ರಶಾಲಾಯಾಂ ಕದೋಶೀರಮಯೇ ಗೃಹೇ ।
ಕದಾ ಪುಷ್ಪಮಯೇ ಗೇಹೇ ಕದಾ ರಂಭಾವನೇ ವರೇ ॥ ೫೩ ॥

ಕದಾ ಪುಷ್ಪವಾಟಿಕಾಯಾಂ ಕದಾ ವೃಕ್ಷೋರ್ಧ್ವಸದ್ಮನಿ ।
ಶೃಂಖಲಾವೃಕ್ಷಸಂಬದ್ಧದೋಲಕೇ ರತ್ನಚಿತ್ರಿತೇ ॥ ೫೪ ॥

ಕದಾ ಕಾಷ್ಠಮಯೇ ದಿವ್ಯೇ ಮಂಚಕೇ ರತ್ನಭೂಷಿತೇ ।
ಕದಾ ಚಕಾರ ತುಲಸೀವಾಟಿಕಾಯಾಂ ರಘೂತ್ತಮಃ ॥ ೫೫ ॥

ನಿದ್ರಾಂ ಜನಕನಂದಿನ್ಯಾ ಸಭಾಯಾಮಥ ವಾ ಕದಾ ।
ಕದಾ ದ್ವಾರೋರ್ಧ್ವಪ್ರಾಸಾದೇ ಕದ್ಯೈಕಸ್ತಂಭಸದ್ಮನಿ ॥ ೫೬ ॥

ಭೂಮಿಯಲ್ಲಿಯೂ, ಒಂದೊಂದುಸಾರಿ ಸ್ಫಟಿಕದ ಭೂಮಿಯಲ್ಲಿಯೂ ಮಲಗಿ ಸುಖಿಸುತ್ತಿರುವನು.

೫೩–೫೪. ಒಂದುಸಾರಿ ಪುಷ್ಪಕದಲ್ಲಿಯೂ, ಒಂದುಸಾರಿ ರಂಗಶಾಲೆಯಲ್ಲಿಯೂ, ಒಂದುಸಾರಿ ಚಿತ್ರಶಾಲೆಯಲ್ಲಿಯೂ, ಒಂದುಸಾರಿ ಲಾಮಂಚಗೃಹದಲ್ಲಿಯೂ, ಒಂದುಸಾರಿ ಪುಷ್ಪವಾಟಿಕೆಯಲ್ಲಿಯೂ, ಒಂದುಸಾರಿ ಬಾಳೆಯ ಮರಗಳ ವನಗಳಲ್ಲಿಯೂ, ಒಂದುಸಾರಿ ಹೂವಿನ ಮನೆಯಲ್ಲಿಯೂ, ಒಂದುಸಾರಿ ಮರದಮೇಲಿರುವ ಅಟ್ಟಣೆ ಎಂಬ ಮನೆಯಲ್ಲಿಯೂ, ಒಂದುಸಾರಿ ಮರಕ್ಕೆ ಕಟ್ಟಿರುವ ರತ್ನಮಯವಾದ ಉಯ್ಯಾಲೆಯಲ್ಲಿಯೂ ಕ್ರೀಡಿಸುತ್ತಿರುವನು.

೫೫. ಒಂದುಸಾರಿ ದಿವ್ಯವಾದ ಮಂಚದಮೇಲೆಯೂ, ಒಂದುಸಾರಿ ತುಲಸಿಯ ತೋಟದಲ್ಲಿಯೂ ಕ್ರೀಡಿಸುತ್ತಿರುವನು.

೫೬. ಒಂದುಸಾರಿ ಸಭೆಯಲ್ಲಿಯೂ, ಒಂದುಸಾರಿ ಬಾಗಿಲಿನ ಗೋಪುರದ ಮನೆಯಲ್ಲಿಯೂ, ಒಂದುಸಾರಿ ಒಂದೇ ಕಂಬದಮೇಲೆ ಕಟ್ಟಿರುವ ಮನೆಯಲ್ಲಿಯೂ ಸೀತೆಯೊಡನೆ ಮಲಗುತ್ತಿದ್ದನು.

ಕದಾ ಸ್ವಗೃಹದೇಹಲ್ಯಾಂ ಕದಾ ವೃಂದಾವನೇಪಿ ಚ ।
ಏವಂ ಸ ಸೀತಯಾ ರೇಮೇಽಯೋಧ್ಯಾಯಾಂ ರಘುನಂದನಃ ॥ ೫೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ವಿಲಾಸಕಾಂಡೇ ಸೀತಾರಾಮಯೋ ರ್ದಿನಚರ್ಯಾ ವರ್ಣನಂ ನಾಮ ಷಷ್ಠಸ್ಸರ್ಗಸ್ಸಮಾಪ್ತಃ

---

೫೭. ಒಂದುಸಾರಿ ತನ್ನ ಮನೆಯ ಹೊಸಲಿನಬಳಿಯಲ್ಲಿಯೂ, ಒಂದು ಸಾರಿ ಬೃಂದಾವನದಬಳಿಯಲ್ಲಿಯೂ ಮಲಗುತ್ತ ಸೀತೆಯೊಡನೆ ರಾಮನು ಅಯೋಧ್ಯೆಯಲ್ಲಿ ಸುಖಿಸಿದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಸೀತಾರಾಮರ ದಿನಚರ್ಯೆಯ ವರ್ಣನ ಎಂಬ ಆರನೆಯ ಸರ್ಗವು ಸಮಾಪ್ತವು

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ

|| ಆರನೆಯ ಸರ್ಗದ ಸಾರಾಂಶವು ||

ಶ್ರೀರಾಮನು ಆಮೇಲೆ ತಮ್ಮಂದಿರೊಡಗೂಡಿ ವಂದಿಗಳಿಂದ ಹೊಗಳಿಸಿಕೊಳ್ಳುತ್ತ ನಿದ್ದೆಮಾಡುವ ಮನೆಗೆ ಹೋಗುತ್ತಿದ್ದನು. ಅಲ್ಲಿ ತಮ್ಮಂದಿರನ್ನು ಕಳುಹಿಸಿ ದಾಸಿಯರೊಡನೆ ನಿದ್ರಾಶಾಲೆಯಲ್ಲಿರುವ ಜಾನಕಿಯನ್ನು ನೋಡುತ್ತಿದ್ದನು. ಶ್ರೀರಾಮನು ಬಂದುದನ್ನು ನೋಡಿ ಆಕೆಯು ಪಗಡೆಯಾಟವನ್ನು ಬಿಟ್ಟು ಆ ರಾಮನನ್ನು ಎದುರುಗೊಳ್ಳುತ್ತಿದ್ದಳು. ಮತ್ತು ಆ ರಾಮನ ಕೈಗಳನ್ನು ಹಿಡಿದುಕೊಂಡು ರತ್ನದ ಮಂಚದಲ್ಲಿ ಕೂರಿಸಿ ಕುಡಿಯಲು ಪಾನೀಯವನ್ನು ಕೊಟ್ಟು ಅನಂತರ ತಾಂಬೂಲವನ್ನು ಕೊಡುತ್ತಿದ್ದಳು. ಅನಂತರ ಅವರಿಬ್ಬರೂ ನಿದ್ದೆಮಾಡುತ್ತಿದ್ದರು. ಸೀತೆಯು ಮೊದಲೇ ಎಚ್ಚತ್ತುಕೊಳ್ಳುವಳು. ಅನಂತರ ರಾಮನು ಎಚ್ಚತ್ತು ಏಳಲು ಸೀತೆಯು ಮತ್ತೆ ಕುಡಿಯಲು ನೀರನ್ನು ಕೊಡುತ್ತಿದ್ದಳು. ದಾಸಿಯರಿಂದ ಬೀಸಿಸಿಕೊಳ್ಳುತ್ತಾ ಒಂದು ಕ್ಷಣಕಾಲ ಕುಳಿತಿದ್ದು ದ್ರಾಕ್ಷಿಬಳ್ಳಿಯ ತೋಟಕ್ಕೆ ಹೋಗಿ ಆ ದ್ರಾಕ್ಷಿ ಚಪ್ಪರದ ಕೆಳಗೆ ಇರುವ ಪೀಠದಲ್ಲಿ ಇಬ್ಬರೂ ಕುಳಿತುಕೊಳ್ಳುವರು. ಅಲ್ಲಿ ಇಬ್ಬರೂ ಚದುರಂಗದ ಆಟವನ್ನು ಆಡುತ್ತಿದ್ದರು. ಆ ಆಟವು ಮುಗಿಯುತ್ತಲೂ ಅಲ್ಲಿ ಪಂಜರದಲ್ಲಿದ್ದ ಪಕ್ಷಿಗಳೊಡನೆ ಆಟವಾಡುತ್ತ ಒಂದು ಕ್ಷಣಕಾಲವನ್ನು ಕಳೆಯುತ್ತಿದ್ದರು. ಅನಂತರ ಸೂಳೆಯರು ಬಂದು ಕುಣಿಯುತ್ತಿದ್ದರು. ಅದನ್ನು ಇಬ್ಬರೂ ನೋಡುವರು. ಅನಂತರ ಅವರಿಗೆ ಬಹುಮಾನವನ್ನು ಮಾಡಿ ಕಳುಹಿಸುವರು. ಅನಂತರ ಮಹಡಿಯ ಮೇಲೆ ಹತ್ತಿ ಕುಳಿತು ಕಿಟಕಿಯಲ್ಲಿ ಅಂಗಡಿಬೀದಿಯ ಸೊಬಗನ್ನು ನೋಡುವರು.

ಹೀಗಿರುತ್ತಿರಲು ಒಂದುದಿನ ಮಹಡಿಯಮೇಲೆ ಕುಳಿತು ಅಂಗಡಿಬೀದಿಯ ಸೊಬಗನ್ನು ನೋಡುತ್ತಿದ್ದಾಗ ಸೀತೆಯು ಭಿಕ್ಷೆ ಬೇಡುತ್ತಿದ್ದ ಬಡವಳಾದ ಒಬ್ಬಳು ಬ್ರಾಹ್ಮಣ ಹೆಂಗಸನ್ನು ಕಂಡಳು. ಅವಳು ಕಂಕುಳಿನಲ್ಲಿ ಮಗುವನ್ನು ಎತ್ತಿಕೊಂಡು ಮನೆ ಮನೆಗೂ ಭಿಕ್ಷಕ್ಕೆ ಹೋಗುತ್ತಿದ್ದಳು. ಸೀತೆಯು ಒಡನೆಯೇ ದಾಸಿಯನ್ನು ಕಳುಹಿಸಿ ಆಕೆಯನ್ನು ಕರೆಸಿ "ಅಮ್ಮ! ನೀನೇತಕ್ಕೆ ಒಡವೆಗಳನ್ನಿಟ್ಟುಕೊಳ್ಳದೆ ಮನೆ ಮನೆಗೂ ಭಿಕ್ಷಕ್ಕೆ ಹೋಗುತ್ತಿದ್ದೀಯೆ.?" ಎಂದು ಕೇಳಿದಳು.

ಅದಕ್ಕೆ ಆ ಬ್ರಾಹ್ಮಣಿತಿಯು "ಅಮ್ಮ! ನನ್ನ ಗಂಡನು ನನ್ನನ್ನು ನಮ್ಮ ತಂದೆಯ ಮನೆಯಲ್ಲಿ ಬಿಟ್ಟುಬಿಟ್ಟು ಹೊರಟುಹೋದನು. ತಂದೆಯು ಮುದುಕನಾಗಿದ್ದುದರಿಂದ ಸತ್ತುಹೋದನು. ನನಗೆ ಇಬ್ಬರು ತಮ್ಮಂದಿರು ಇರುವರು. ಅವರು ಅವಂತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿರುವರು. ಆದ್ದರಿಂದ ನನ್ನನ್ನು ಪೋಷಿಸುವವರು ನಮ್ಮ ಮನೆಯಲ್ಲಿ ಯಾರೂ ಇಲ್ಲ. ಆದ್ದರಿಂದಲೇ ಒಡವೆಯಾಗಲಿ ಬಟ್ಟೆಯಾಗಲಿ ನನಗಿಲ್ಲ." ಎಂದಳು.

ಸೀತೆಯು ಇದನ್ನು ಕೇಳಿ ತನ್ನ ಮೈಮೇಲಿದ್ದ ಒಡವೆಗಳನ್ನೂ ಬಟ್ಟೆಗಳನ್ನೂ ಆಕೆಗೆ ಕೊಟ್ಟುಬಿಟ್ಟಳು. ಮತ್ತು ಆಕೆಯನ್ನು ಕುರಿತು "ಅಮ್ಮ! ನೀನು ಲಕ್ಷ್ಮಣನ ಬಳಿಗೆ ಹೋಗಿ ನಾನು ಹೇಳಿರುವೆನೆಂದು ಹೇಳಿ ಒಂದು ಲಕ್ಷ ಚಿನ್ನದ ಮುದ್ರೆಗಳ ನಾಣ್ಯವನ್ನು ತೆಗೆದುಕೊ." ಎಂದು ಹೇಳಿದಳು. ಆಕೆಯು ಹೋಗಿ ಅವಳಪ್ಪಣೆಯಂತೆ ಹಣವನ್ನು ತೆಗೆದುಕೊಂಡಳು. ಸೀತೆಯು ಬೇರೆಯಾದ ಅಲಂಕಾರಗಳನ್ನು ಧರಿಸಿ ಮೊದಲಿಗಿಂತಲೂ ಹೆಚ್ಚಾಗಿ ಶೋಭಿಸಿದಳು.

ಅನಂತರ ಸೀತೆಯು ದಾಸಿಯನ್ನು ಕರೆದು "ಅಯೋಧ್ಯೆಯಲ್ಲಿಯಾಗಲಿ, ಸಪ್ತದ್ವೀಪಗಳಲ್ಲಿ ಎಲ್ಲೇ ಆಗಲಿ, ಗಂಡಸಾಗಲಿ ಹೆಂಗಸಾಗಲಿ ಒಳ್ಳೆಯ ಬಟ್ಟೆಗಳಿಲ್ಲದೆ ಅವರವರಿಗೆ ಯೋಗ್ಯವಾದ ಅಲಂಕಾರಗಳಿಲ್ಲದಿದ್ದರೆ ಆಯಾದೇಶದ ರಾಜರಿಗೆ ಶಿಕ್ಷೆಯನ್ನು ವಿಧಿಸಲಾಗುವುದೆಂದು ಡಂಗೂರವನ್ನು ಹೊಡೆಸುವಂತೆ ಲಕ್ಷ್ಮಣನಿಗೆ ಹೇಳು." ಎಂದು ಆಜ್ಞೆ ಮಾಡಿದಳು. ದಾಸಿಯು

ಹೋಗಿ ಅಂತೆಯೇ ಹೇಳಲು ಲಕ್ಷ್ಮಣನು ಹಾಗೆಯೇ ಮಾಡಿದನು. ಅದು ಮೊದಲುಗೊಂಡು ಎಲ್ಲರೂ ಒಳ್ಳೆಯಬಟ್ಟೆಗಳನ್ನು ಹಾಕಿಕೊಳ್ಳುತ್ತಲೂ ಒಡವೆ ಗಳನ್ನು ಧರಿಸಿಕೊಳ್ಳುತ್ತಲೂ ಇದ್ದರು.

ಇವೇ ಮುಂತಾದ ರೀತಿಯಲ್ಲಿ ಸೀತೆಯು ತಾನು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿದಳು.

ಅನಂತರ ಶ್ರೀರಾಮನು ನಾಲ್ಕನೆಯ ಯಾಮದಲ್ಲಿ ಸಭೆಯಲ್ಲಿ ಕುಳಿತು ಧರ್ಮದಿಂದ ರಾಜಕಾರ್ಯಗಳನ್ನು ಮಾಡುತ್ತಿದ್ದನು. ಆ ಸಭೆಯನ್ನು ವಿಸರ್ಜಿಸಿದ ನಂತರ ಸೀತೆಯ ಮನೆಗೆ ಹೋಗಿ ಅಲ್ಲಿ ಸಾಯಂ ಸಂಧ್ಯಾವಂದನೆಯನ್ನು ಮಾಡುತ್ತಿದ್ದನು. ಅಗ್ನಿಹೋತ್ರವನ್ನು ಮಾಡಿ ಶಿವಪೂಜೆಯನ್ನು ಮುಗಿಸಿ ಕೊಂಡು ಪುರಾಣದ ಕಥೆಯನ್ನು ಕೇಳುತ್ತಿದ್ದನು. ಅನಂತರ ಉಪಹಾರವನ್ನು ಮುಗಿಸಿಕೊಂಡು ನಿದ್ದೆಮಾಡುತ್ತಿದ್ದನು.

ಈ ರೀತಿಯಾಗಿ ರಾಮನೂ ಸೀತೆಯೂ ಸುಖವಾಗಿರುತ್ತಿದ್ದರು. ಅವರಿಬ್ಬರೂ ತಮಗೆ ಇಷ್ಟಬಂದಂತೆ ಒಂದೊಂದು ಸಾರಿ ಬೆಳದಿಂಗಳಿನಲ್ಲಿಯೂ ಒಂದೊಂದು ಸಾರಿ ದ್ರಾಕ್ಷಾಮಂಟಪದಲ್ಲಿಯೂ ಒಂದೊಂದುಸಾರಿ ಮಣಿಭೂಮಿ ಗಳಲ್ಲಿಯೂ ಒಂದೊಂದುಸಾರಿ ಪುಷ್ಪಕದಲ್ಲಿಯೂ ಒಂದೊಂದುಸಾರಿ ತೋಟ ಗಳಲ್ಲಿಯೂ ಒಂದೊಂದುಸಾರಿ ತುಲಸಿಯ ತೋಟಗಳಲ್ಲಿಯೂ ಒಂದೊಂದು ಸಾರಿ ಅಟ್ಟಣೆಯ ಮನೆಯಲ್ಲಿಯೂ ವಿಹರಿಸುತ್ತ ಸುಖಿಸುತ್ತಿದ್ದರು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

॥ ಸಪ್ತಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಏಕದಾ ರಾಘವಂ ದ್ರಷ್ಟುಂ ತಥಾ ಸ್ನಾತುಂ ಮಧಾವಪಿ ।
ಶಿಷ್ಯೈಸ್ಸಮಾಯಯೌ ವ್ಯಾಸೋ ಮುನಿಭಿಃ ಪರಿವೇಷ್ಟಿತಃ ॥ ೧ ॥

ಸಮಾಗತಂ ಮುನಿಂ ಶ್ರುತ್ವಾ ತಂ ಪ್ರತ್ಯುದ್ಗಮ್ಯ ರಾಘವಃ ।
ನನಾಮ ಶಿರಸಾ ಭಕ್ತ್ಯಾ ನಿನಾಯ ನಿಜಮಂದಿರಂ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಒಂದುಸಾರಿ ವ್ಯಾಸನು ಶ್ರೀರಾಮನನ್ನು ನೋಡುವುದಕ್ಕು ಚೈತ್ರಸ್ನಾನಮಾಡುವುದಕ್ಕೂ ಶಿಷ್ಯರೊಡನೆಯೂ, ಮುನಿಗಳೊಡನೆಯೂ ಅಯೋಧ್ಯೆಗೆ ಬಂದನು.

೨. ವ್ಯಾಸನು ಬಂದುದನ್ನು ಶ್ರೀರಾಮನು ಕೇಳಿ ಅವನನ್ನು ಎದುರುಗೊಂಡು ಭಕ್ತಿಯಿಂದ ತಲೆಬಾಗಿ ನಮಸ್ಕರಿಸಿ ತನ್ನ ಮನೆಗೆ ಕರೆದುತಂದನು.

ದತ್ವಾ ವರಾಸನಂ ತಸ್ಮೈ ದ್ವಿಜೇಭ್ಯಶ್ಚಾಪಿ ವೈ ಪೃಥಕ್ ।
ದತ್ವಾಸನಾನಿ ದಿವ್ಯಾನಿ ಚಕಾರ ಪೂಜನಂ ಪೃಥಕ್ ॥ ೩ ॥

ಕಾಮಧೇನೂದ್ಭವೈರನ್ನೈರ್ಮಣಿಭ್ಯಾಂ ಸಂಭವೈರಪಿ ।
ವ್ಯಾಸಂ ತಂ ಭೋಜಯಾಮಾಸ ಮುನಿಭಿರ್ಜಾನಕೀ ಪತಿಃ ॥ ೪ ॥

ತಾಂಬೂಲಂ ದಕ್ಷಿಣಾಂ ದತ್ವಾ ಪ್ರಬದ್ಧಕರಸಂಪುಟಃ ।
ಪಪ್ರಚ್ಛ ಕುಶಲಂ ತಸ್ಮೈ ವ್ಯಾಸಾಯ ರಘುನಂದನಃ ॥ ೫ ॥

ಸೀತಾ ತಂ ವೀಜಯಾಮಾಸ ವ್ಯಾಸಂ ಸತ್ಯವತೀಸುತಂ ।
ಏತಸ್ಮಿನ್ನಂತರೇ ವ್ಯಾಸೋ ರಾಮಾಯ ಕುಶಲಂ ನಿಜಂ ॥ ೬ ॥

---

೩. ವ್ಯಾಸಮಹರ್ಷಿಗೆ ಉತ್ತಮವಾದ ಆಸನವನ್ನು ಕೊಟ್ಟನು. ಅಂತೆಯೇ ಉಳಿದ ಶಿಷ್ಯರಿಗೂ ಮುನಿಗಳಿಗೂ ಬೇರೆ ಬೇರೆಯಾಗಿ ಆಸನಗಳನ್ನು ಕೊಟ್ಟನು. ಆಸನವನ್ನು ಕೊಟ್ಟಾದಮೇಲೆ ಅವರಿಗೆ ಬೇರೆ ಬೇರೆಯಾಗಿ ಪೂಜೆಮಾಡಿದನು.

೪. ಕಾಮಧೇನುವಿನಿಂದಲೂ ಮಣಿಗಳಿಂದಲೂ ಕೊಡಲ್ಪಟ್ಟ ಉತ್ತಮ ವಾದ ಅವರನ್ನು ಗೌರವಿಸಿದುದಲ್ಲದೆ ಆದೇ ಕಾಮಧೇನುವು ಕೊಟ್ಟ ಉತ್ತಮ ವಾದ ಅನ್ನಗಳಿಂದ ಜಾನಕಿಪತಿಯು ವ್ಯಾಸನನ್ನೂ, ಋಷಿಗಳನ್ನೂ ಭೋಜನ ಮಾಡಿಸಿದನು.

೫. ಅನಂತರ ಶ್ರೀರಾಮನು ಅವರಿಗೆಲ್ಲರಿಗೂ ತಾಂಬೂಲ ದಕ್ಷಿಣೆಗಳನ್ನು ಕೊಟ್ಟು ಕೈಮುಗಿದುಕೊಂಡು ವ್ಯಾಸನನ್ನು ಕುರಿತು ಕುಶಲಪ್ರಶ್ನೆಯನ್ನು ಮಾಡಿದನು.

೬. ಸೀತೆಯು ಸತ್ಯವತಿಯ ಮಗನಾದ ವ್ಯಾಸನನ್ನು ಬೀಸಣಿಗೆಯಿಂದ ಬೀಸುತ್ತಿದ್ದಳು. ಈ ಮಧ್ಯದಲ್ಲಿ ವ್ಯಾಸನು ರಾಮನಿಗೆ ತನ್ನ ಕುಶಲವನ್ನೆಲ್ಲಾ ಹೇಳಿದನು.

ನಿವೇದ್ಯ ಪೃಷ್ಟ್ವಾ ತತ್ಕ್ಷೇಮಂ ತಮಾಹ ಕೌತುಕಾತ್ಪುನಃ ।
ರಾಮ ರಾಮ ಮಹಾಬಾಹೋ ಯಥಾ ರಾಜ್ಯಂ ತ್ವಯಾ ಭುವಿ ॥ ೭ ॥

ಭುಜ್ಯತೇ ನ ತಥಾನ್ಯೇನ ಕೇನಾಪಿ ಪೃಥಿವೀಭೃತಾ ।
ಪುರಾ ಭುಕ್ತಂ ನಕೋಽಪ್ಯಗ್ರೇ ಭೋಕ್ಷ್ಯತಿ ಪೃಥಿವೀಪತಿಃ ॥ ೮ ॥

ಅನ್ಯತ್ತ್ವತ್ರ ಮಹದ್ಧೈರ್ಯಮೇಕಪತ್ನೀವ್ರತಂ ಪ್ರತಿ ।
ದೃಷ್ಟ್ವಾತಿವಿಸ್ಮಯಶ್ಚಿತ್ತೇ ಜಾಯತೇ ರಘುಸತ್ತಮ ॥ ೯ ॥

ಕಸ್ಸಹೇತಾತ್ರ ತಾರುಣ್ಯಕಾಮದಾವಾನಲಂ ನೃಪಃ ।
ಪದಸ್ಥೇ ಯೌವನೇ ಚಾಪಿ ತ್ವಮೇವಾಸ್ಮಿನ್ವ್ರತೇ ಕ್ಷಮಃ ॥ ೧೦ ॥

೭-೮. ಅನಂತರ ಆ ಶ್ರೀರಾಮುನನ್ನು ಕುಶಲಪ್ರಶ್ನೆಮಾಡಿದನು. ಅನಂತರ ಆಶ್ಚರ್ಯಪಡುತ್ತ ಆ ರಾಮುನನ್ನು ಕುರಿತು ಇಂತೆಂದನು. ಎಲೈ ಮಹಾಬಾಹುವಾದ ರಾಮನೇ ! ನೀನು ಭೂಲೋಕದಲ್ಲಿ ರಾಜ್ಯವಾಳುತ್ತಿರುವಂತೆ ಮತ್ತೊಬ್ಬನಾದ ಯಾವ ರಾಜನೂ ಕೂಡ ಆಳುತ್ತಲಿಲ್ಲ, ಹಿಂದೆ ಯಾವನೊಬ್ಬರಾಜನೂ ಆಳಲೂ ಇಲ್ಲ. ಮುಂದೆ ಯಾವನೊಬ್ಬನೂ ಆಳುವುದೂ ಇಲ್ಲ.

೯. ಆದರೆ ಇಂತಹ ಭೋಗಗಳಿದ್ದು ಸ್ವತಂತ್ರನಾಗಿದ್ದರೂ ಧೈರ್ಯದಿಂದ ಏಕಪತ್ನೀವ್ರತವನ್ನು ಅವಲಂಬಿಸಿರುವೆಯಲ್ಲ! ಆದನ್ನು ನೋಡಿ ನನ್ನ ಮನಸ್ಸಿನಲ್ಲಿ ಬಹುವಾಗಿ ಆಶ್ಚರ್ಯವು ಉಂಟಾಗುತ್ತಿರುವುದು.

೧೦. ಕಾಮನೆಂಬ ಕಾಳ್ಗಿಚ್ಚಿನಿಂದ ಆವರಿಸಲ್ಪಟ್ಟ ಈ ಯೌವನವನ್ನು ಯಾವ ರಾಜನು ತಾನೇ ಸಹಿಸಿಯಾನು! ಒಳ್ಳೆಯ ಪದವಿಯಲ್ಲಿದ್ದು ಯೌವನವನ್ನು ಹೊಂದಿದ್ದು ಈ ರೀತಿಯಾಗಿ ಏಕಪತ್ನೀವ್ರತಸ್ಥನಾಗಿರುವವನು ನಿನ್ನನ್ನು ಬಿಟ್ಟು ಮತ್ತಾವನಿರುವನು! ಈ ವಿಷಯದಲ್ಲಿ ನೀನೊಬ್ಬನೇ ಶಕ್ತನಾಗಿದ್ದೀಯೆ. ಬೇರೆ ಯಾರಿಂದಲೂ ಸಾಧ್ಯವೇ ಇಲ್ಲ.

ಇತಿ ವ್ಯಾಸವಚಶ್ಶ್ರುತ್ವಾ ರಾಮೋ ವ್ಯಾಸಂ ವಚೋಽಬ್ರವೀತ್ ।
ಮಯಾತ್ರ ಯೇ ಕೃತಾಸ್ಸಂತಿ ನಿಯಮಾ ಮುನಿಸತ್ತಮ ॥ ೧೧ ॥

ಮುಖಾದ್ವಿನಿರ್ಗತಂ ವಾಕ್ಯಮೇಕಮೇವ ವಿನಿಶ್ಚಿತಂ ।
ನ ಕ್ರಿಯತೇ ಮೃಷಾ ತಚ್ಚ ನೋಚ್ಯತೇ ಹ್ಯಪರಂ ಪುನಃ ॥ ೧೨ ॥

ಅನ್ಯತ್ಸೀತಾಂ ವಿನಾನ್ಯಾಸ್ತ್ರೀ ಕೌಸಲ್ಯಾಸದೃಶೀ ಮಮ ।
ನ ಕ್ರಿಯೇಽಹಂ ಪರಾಂ ಪತ್ನೀಂ ಮನಸಾಪಿ ನ ಚಿಂತಯೇ ॥ ೧೩ ॥

ತಥಾ ಯಂ ಘಾತುಮಿಚ್ಛಾಮಿ ಬಾಣೇನೈಕೇನ ಕೋಪತಃ ।
ನಿಹನ್ಯತೇ ತದೈಕೇನ ನಾನ್ಯಂ ಬಾಣಂ ಸೃಜಾಮ್ಯಹಂ ॥ ೧೪ ॥

---

೧೧. ವ್ಯಾಸನು ಹೀಗೆ ಹೇಳಿದುದನ್ನು ಕೇಳಿ ರಾಮನು ಅವನನ್ನು ಕುರಿತು ಇಂತೆಂದನು. ಎಲೈ ಋಷಿಯೇ! ನಾನು ಮೂರು ನಿಯಮಗಳನ್ನು ಮಾಡಿಕೊಂಡಿರುವೆನು. ಹಾಗೆ ಮಾಡಿಕೊಂಡಿರುವ ನಿಯಮಗಳನ್ನು ಕೇಳು.

೧೨. ನನ್ನ ಬಾಯಿಂದ ಹೊರಟಮೇಲೆ ಆಯಿತು ಆ ಮಾತು ಬೇರೆಯಾಗುವುದಿಲ್ಲ. ಅದೊಂದೇ ನಿಶ್ಚಯವಾಗಿಯೂ ನಡೆಯತಕ್ಕದ್ದು. ಅದನ್ನು ಸುಳ್ಳನ್ನಾಗಿ ಮಾಡುವುದೂ ಇಲ್ಲ ಬೇರೆ ಮಾತನ್ನಾಡುವುದೂ ಇಲ್ಲ.

೧೩. ಮತ್ತೊಂದೇನೆಂದರೆ ಸೀತೆಯನ್ನು ಬಿಟ್ಟು ಉಳಿದ ಹೆಂಗಸರು ನನಗೆ ಕೌಸಲ್ಯೆಗೆ ಸಮಾನರು. ನಾನು ಮತ್ತೊಬ್ಬ ಹೆಂಡತಿಯನ್ನು ಮಾಡಿಕೊಳ್ಳುವುದೂ ಇಲ್ಲ. ಆ ರೀತಿಯಾಗಿ ಮನಸ್ಸಿನಿಂದಲೂ ಯೋಚಿಸುವುದೂ ಇಲ್ಲ.

೧೪. ಇನ್ನೊಂದೇನೆಂದರೆ ನಾನು ಕೋಪದಿಂದ ಯಾರನ್ನು ಕೊಲ್ಲಬೇಕೆಂದು ಇಚ್ಛಿಸುವೆನೋ ಅವನನ್ನು ಒಂದೇ ಬಾಣದಿಂದ ಕೊಂದುಬಿಡುತ್ತೇನೆ ಮತ್ತೊಂದು ಬಾಣವನ್ನು ಹೂಡುವುದೇ ಇಲ್ಲ.

ಇತ್ಥಂ ತ್ರಯಃ ಕೃತಾಃ ಪೂರ್ವಂ ನಿಯಮಾಸ್ತ್ವತ್ರ ಭೋ ಮುನೇ ।
ಸತ್ಯಾ ಏವ ಭವಂತ್ಯಗ್ರೇಽಖಂಡಿತಾಸ್ತವ ವಾಕ್ಯತಃ ॥ ೧೫ ॥

ತಥೈವಾಸ್ತ್ವಿತಿ ಸೋಽಪ್ಯಾಹ ವ್ಯಾಸಃ ಶ್ರೀರಾಘವಂ ತದಾ ।
ಪುನರಾಹ ಮುನಿಃ ಶ್ರೀವರ್ಮಾ ವ್ಯಾಸಃ ಶ್ರೀರಾಘವಂ ಪ್ರತಿ ॥ ೧೬ ॥

ಏಕಪತ್ನೀವ್ರತಸ್ಯಾಸ್ಯ ಫಲೇನಾಪರಜನ್ಮನಿ ।
ತ್ವಂ ಕೃಷ್ಣರೂಪೇಣ ಬಹ್ವೀರ್ನಾರೀರ್ಭೋಕ್ಷ್ಯಸಿ ರಾಘವ ॥ ೧೭ ॥

ತನ್ಮುನೇರ್ವಚಂ ಶ್ರುತ್ವಾ ವಿಹಸ್ಯ ರಾಘವೋಽಬ್ರವೀತ್ ।
ಬಹ್ವೀಶ್ಚ ಕಾಮಿನೀರ್ಭೋಕ್ತುಂ ಕೃಷ್ಣರೂಪಧರೋಽಪ್ಯಹಂ ॥ ೧೮ ॥

---

೧೫. ಎಲೈ ಋಷಿಯೇ! ಈ ರೀತಿಯಾಗಿ ನಾನು ಪೂರ್ವದಲ್ಲಿಯೇ ಮೂರು ನಿಯಮಗಳನ್ನು ಮಾಡಿಕೊಂಡಿರುವೆನು. ಅವೆಲ್ಲವೂ ಸತ್ಯವಾಗಿಯೇ ನಡೆದುಕೊಂಡು ಬಂದಿವೆ. ಮುಂದೆಯೂ ಕೂಡ ನಿನ್ನ ಆಶೀರ್ವಾದದಿಂದ ನಡೆದುಕೊಂಡು ಹೋಗುತ್ತವೆ.

೧೬. ಇಂತೆಂದು ರಾಮನು ಹೇಳಲು ಅದನ್ನು ಕೇಳಿ ವ್ಯಾಸನು ಅವು ಹಾಗೆಯೇ ಆಗಲೆಂದು ಆಶೀರ್ವದಿಸಿದನು. ಮತ್ತೆಯೂ ಕೂಡ ಆ ಮುನಿಯು ರಾಮನನ್ನು ಕುರಿತು ಇಂತೆಂದನು.

೧೭. ಎಲೈ ರಾಘವನೇ! ಈ ಏಕಪತ್ನೀವ್ರತದ ಫಲವಾಗಿ ನೀನು ಮುಂದೆ ಕೃಷ್ಣಾವತಾರವನ್ನು ಮಾಡಿ ಬಹುಜನ ನಾರಿಯರನ್ನು ಅನುಭವಿಸುತ್ತೀಯೆ.

೧೮. ವ್ಯಾಸನ ಈಮಾತನ್ನು ಕೇಳಿ ರಾಘವನು ನಗುತ್ತ ಎಲೈ ಮುನಿಯೆ! ಬಹುಜನ ನಾರಿಯರನ್ನು ಅನುಭವಿಸಲು ನಾನು ದ್ವಾಪರಯುಗದಲ್ಲಿ ದ್ವಾರಕೆಯಲ್ಲಿ ಕೃಷ್ಣಾವತಾರದಿಂದ ಹುಟ್ಟುವೆನು.

ದ್ವಾರಕಾಯಾಂ ಯದಾಗ್ರೇ ಹಿ ದ್ವಾಪರೇ ಮುನಿಸತ್ತಮ ।
ಯೇನ ವ್ರತೇನ ದಾನೇನ ನಿಯಮೇನಾಽಥವಾ ಮುನೇ ॥ ೧೯ ॥

ಬಹುನಾರೀರ್ನಿಶ್ಚಯೇನ ಪ್ರಾಪ್ಸ್ಯಾಮಿ ತ್ವಂ ವದಸ್ವ ಮಾಂ ।
ಇತಿ ರಾಮವಚಶ್ಶ್ರುತ್ವಾ ವ್ಯಾಸೋ ರಾಘವಮಬ್ರವೀತ್ ॥ ೨೦ ॥

ಸಮ್ಯಗುಕ್ತಂ ತ್ವಯಾ ರಾಮ ದಾನಂ ತೇ ಪ್ರವದಾಮ್ಯಹಂ ।
ಏಕಪತ್ನೀವ್ರತಾದೇವ ಯದ್ಯಪಿ ತ್ವಂ ಚ ಸ್ತ್ರೀರ್ಬಹೂಃ ॥ ೨೧ ॥

ಲಭಿಷ್ಯಸಿ ತಥಾಪ್ಯದ್ಯ ದಾನಂ ತವ ವದಾಮ್ಯಹಂ ।
ಸೀತಾಭಾರಸುವರ್ಣೇನ ಮೂರ್ತಿಮೇಕಾಂ ರಘೂತ್ತಮಃ ॥ ೨೨ ॥

೧೯–೨೦. ಆದರೂ ನಿಶ್ಚಯವಾಗಿ ತಪ್ಪದೆ ಆ ಬಹುಜನ ನಾರಿಯರನ್ನು ಅನುಭವಿಸಲು ಮತ್ತಾವ ದಾನಗಳನ್ನು ಮಾಡಬೇಕು? ಮತ್ತಾವ ವ್ರತಗಳನ್ನು ಆಚರಿಸಬೇಕು? ಅವೆಲ್ಲನ್ನೂ ನೀನು ನನಗೆ ಕೃಪೆಮಾಡಿ ಹೇಳು. ಎಂದು ಎನ್ನಲು ರಾಮನ ಈ ಮಾತನ್ನು ಕೇಳಿ ವ್ಯಾಸನು ರಾಮನನ್ನು ಕುರಿತು ಇಂತೆಂದನು.

೨೧. ಎಲೈ ರಾಮನೇ! ನೀನು ಕೇಳಿದ ವಿಷಯವು ಚೆನ್ನಾಗಿದೆ. ಆ ರೀತಿಯಾದ ದಾನಗಳನ್ನು ಹೇಳುತ್ತೇನೆ ಕೇಳು. ಈ ಏಕಪತ್ನೀವ್ರತವೊಂದ ರಿಂದಲೇ ನೀನು ಬಹುವಾದ ಸ್ತ್ರೀಯರನ್ನು ಅನುಭವಿಸುವ ಫಲವು ಬರುತ್ತದೆ.

೨೨. ಆದರೂ ಕೂಡ ಬಹು ಸ್ತ್ರೀಯರು ಲಭಿಸುವ ದಾನವನ್ನು ಹೇಳು ತ್ತೇನೆ. ಸೀತೆಯ ತೂಕದಷ್ಟು ಚಿನ್ನದಿಂದ ಒಂದು ಹೆಂಗಸಿನ ಆಕಾರದ ಪ್ರತಿ ಮೆಯನ್ನು ಮಾಡಿಸು.

ಏವಂ ಷೋಡಶಮೂರ್ತೀಶ್ಚ ಕಾರಯ ತ್ವಂ ಪೃಥಕ್ ಪೃಥಕ್ ।
ದೇಹಿ ತ್ವಂ ಸರಯೂನದ್ಯಾಸ್ತೀರೇ ವಿಪ್ರೇಭ್ಯ ಆದರಾತ್ ॥ ೨೩ ॥

ವಸ್ತ್ರಾಲಂಕಾರಭೂಷಾದ್ಯೈರ್ದಕ್ಷಿಣಾಭಿಶ್ಚ ತಾಶ್ಶುಭಾಃ ।
ಅನೇನ ಬಹುನಾರೀಸ್ತ್ವಂ ಲಭಿಷ್ಯಸ್ಯನ್ಯಜನ್ಮನಿ ॥ ೨೪ ॥

ತಥೇತಿ ರಾಘವಶ್ಚಾಪಿ ಮೂರ್ತೀಃ ಕೃತ್ವಾ ಮನೋರಮಾಃ ।
ದದೌ ತಾಸ್ಸರಯೂನದ್ಯಾಂ ಬ್ರಾಹ್ಮಣೇಭ್ಯಸ್ತು ಷೋಡಶ ॥ ೨೫ ॥

ತತಸ್ತೇ ಬ್ರಾಹ್ಮಣಾಸ್ತುಷ್ಟಾ ರಾಮಾಯಾಶೀರ್ದದುರ್ಮುದಾ ।
ದತ್ತಮೇಕಗುಣಂ ರಾಜನ್ ಸಹಸ್ರಗುಣಿತಂ ಪುರಾ ॥ ೨೬ ॥

---

೨೩. ಅದರಂತೆಯೇ ಇರುವ ಹದಿನಾರು ಮೂರ್ತಿಗಳನ್ನೂ ಬೇರೆ ಬೇರೆಯಾಗಿ ಮಾಡಿಸು. ಸರಯೂ ನದಿಯ ದಡದಲ್ಲಿ ಬ್ರಾಹ್ಮಣರನ್ನು ಕರೆಸಿ ಅವರಿಗೆ ಪೂಜೆಮಾಡಿ ಆ ಪ್ರತಿಮೆಗಳನ್ನು ಬೇರೆ ಬೇರೆಯಾಗಿ ದಾನಮಾಡು.

೨೪. ಆ ಪ್ರತಿಮೆಗಳಿಗೆ ಒಡವೆಗಳಿಂದಲೂ, ಬಟ್ಟೆಗಳಿಂದಲೂ ಅಲಂಕಾರ ಮಾಡು. ದಾನಮಾಡುವಾಗ ಅವಕ್ಕೆ ಅನುಗುಣವಾದ ದಕ್ಷಿಣೆಯನ್ನು ಕೊಡು. ಈ ದಾನದಿಂದ ನಿನಗೆ ಮತ್ತೊಂದು ಜನ್ಮದಲ್ಲಿ ಬಹು ಜನ ಹೆಂಡತಿಯರಾಗುವರು, ಎಂದನು.

೨೫. ಇದನ್ನು ಕೇಳಿ ರಾಮನು ಅಂತೆಯೇ ಮನೋಹರವಾದ ಹದಿನಾರು ಮೂರ್ತಿಗಳನ್ನು ಮಾಡಿಸಿದನು. ಅವೆಲ್ಲವನ್ನೂ ಅಲಂಕರಿಸಿ ಸರಯೂ ನದಿಯ ದಡದಲ್ಲಿ ಹದಿನಾರು ಜನ ಬ್ರಾಹ್ಮಣರಿಗೆ ದಾನಮಾಡಿದನು.

೨೬. ಅದರಿಂದ ಸಂತೋಷಗೊಂಡ ಬ್ರಾಹ್ಮಣರು ರಾಮನಿಗೆ ಬಹು ವಿಶ್ವಾಸದಿಂದ ಇಂತೆಂದು ಆಶೀರ್ವದಿಸಿದರು. ಎಲೈ ರಾಮನೇ! ಪೂರ್ವದಲ್ಲಿ ದಾನಮಾಡಿದ ಒಂದು ಪದಾರ್ಥವು ಈಗ ಅದರ ಸಾವಿರಪಾಲಿನಷ್ಟು ಫಲಿಸುತ್ತದೆ ಅಂತೆಯೇ ಈಗ ದಾನಮಾಡಿದುದು ಮುಂದೆ ಸಾವಿರಪಾಲಿನಷ್ಟು ಫಲಿಸುತ್ತದೆ.

ಅಸ್ಮಾಕಂ ವಚನಾದ್ದಾನಂ ಸಫಲಂ ಚ ಭವಿಷ್ಯತಿ ।
ಷೋಡಶಸ್ತ್ರೀಸಹಸ್ರಾಣಿ ತ್ವಂ ಲಭಿಷ್ಯಸಿ ನಿಶ್ಚಯಾತ್ ॥ ೨೭ ॥

ತಥಾಸ್ತ್ವಿತ್ಯಾಹ ರಾಮೋಽಪಿ ತತೋ ವಿಪ್ರಾನ್ ವ್ಯಸರ್ಜಯತ್ ।
ಪ್ರಣಮ್ಯ ಪೂಜಿತಂ ವ್ಯಾಸಂ ದದಾವಾಜ್ಞಾಂ ರಘೂದ್ವಹಃ ॥ ೨೮ ॥

ಅಥೈಕದಾ ರಾಮಚಂದ್ರಸ್ಸೀತಯಾ ಸರಯೂತಟೇ ।
ಮಧುಮಾಸೇ ವಸ್ತ್ರಗೇಹೇ ಸ್ಥಿತಃ ಕ್ರೀಡಾಂ ಚಕಾರ ಸಃ ॥ ೨೯ ॥

ಏತಸ್ಮಿನ್ನಂತರೇಽಯೋಧ್ಯಾಂ ನಾನಾದೇಶನಿವಾಸಿನಃ ।
ರಾಮತೀರ್ಥೇ ಮಧೌ ಸ್ನಾತುಂ ಸಮಾಜಗ್ಮುಸ್ಸಹಸ್ರಶಃ ॥ ೩೦ ॥

---

೨೭. ನಮ್ಮಗಳ ಮಾತಿನಿಂದ ಈ ದಾನವು ಖಂಡಿತವಾಗಿಯೂ ನಿನಗೆ ಫಲವನ್ನು ಕೊಡುತ್ತದೆ. ಹದಿನಾರು ಪ್ರತಿಮೆಗಳನ್ನು ದಾನಮಾಡಿರುವುದರಿಂದ ಹದಿನಾರು ಸಾವಿರ ಜನ ಸ್ತ್ರೀಯರನ್ನು ನೀನು ಹೊಂದುತ್ತೀಯೆ. ಇದರಲ್ಲಿ ಸಂಶಯವಿಲ್ಲ.

೨೮. ಇದನ್ನು ಕೇಳಿ ರಾಮನು ಹಾಗೆಯೇ ಆಗಲಿ ಎಂದು ಹೇಳಿ ಆ ಬ್ರಾಹ್ಮಣರನ್ನು ಕಳುಹಿಸಿಕೊಟ್ಟನು. ಅನಂತರ ವ್ಯಾಸನನ್ನು ಪೂಜಿಸಿ ಅವನಿಗೆ ನಮಸ್ಕರಿಸಿದನು. ವ್ಯಾಸನೂ ಅನಂತರ ಹೊರಟುಹೋದನು.

೨೯. ಹೀಗಿರುತ್ತಿರಲು ರಾಮನು ಒಂದುಸಾರಿ ಸರಯೂನದಿಯ ದಡದಲ್ಲಿದ್ದುಕೊಂಡು ಬಟ್ಟೆಯಿಂದ ಕಟ್ಟಿದ ಡೇರೆಗಳಲ್ಲಿ ಸೀತೆಯೊಡನೆ ಕ್ರೀಡಿಸುತ್ತಿದ್ದನು.

೩೦. ಆ ಕಾಲದಲ್ಲಿ ಚೈತ್ರಮಾಸವಾದುದರಿಂದ ನಾನಾದೇಶದ ಜನರು ರಾಮತೀರ್ಥದಲ್ಲಿ ಸ್ನಾನಮಾಡಲು ಸಾವಿರಾರುಗಟ್ಟಲೆಯಲ್ಲಿ ಬಂದರು.

ಸುರಾ ಯಕ್ಷಾಃ ಕಿನ್ನರಾಶ್ಚ ಗಂಧರ್ವಾಃ ಪನ್ನಗಾ ನಗಾಃ ।
ವಲ್ಯಶ್ಚ ಸರಿತಸ್ಸರ್ವಾಸ್ತೀರ್ಥಾನಿ ಮುನಯೋ ನೃಪಾಃ ॥ ೩೧ ॥

ಅಪ್ಸರಸಃ ಪನ್ನಗಾಶ್ಚ ಖಗಾಃ ಕ್ಷೇತ್ರಾಣಿ ವಾನರಾಃ ।
ಅಥೈಕದಾ ದೇವಪತ್ನ್ಯೋ ಜ್ಞಾತ್ವಾಽಸ್ಪೃಶ್ಯಾಂ ವಿದೇಹಜಾಂ ॥ ೩೨ ॥

ಪರಸ್ಪರಂ ತಾಸ್ಸಂಮಂತ್ರ್ಯ ನಿಶೀಥೇ ರಾಘವಂ ಪ್ರತಿ ।
ಸಮಾಜಗ್ಮುರ್ದಿವ್ಯವಸ್ತ್ರರತ್ನಾಭರಣಭೂಷಿತಾಃ ॥ ೩೩ ॥

ರಾಮಸೌಂದರ್ಯಸಂಭ್ರಾಂತಾಃ ಕಾಮಬಾಣಪ್ರಪೀಡಿತಾಃ ।
ತಾ ದೃಷ್ಟ್ವಾ ರಾಮದೂತಾಸ್ತೇ ಪಪ್ರಚ್ಛೂ ರಕ್ಷಣಸ್ಥಿತಾಃ ॥ ೩೪ ॥

---

೩೧. ಸುರರು, ಯಕ್ಷರು, ಕಿನ್ನರರು, ಗಂಧರ್ವರು, ಪನ್ನಗರು, ನಗರು, ವಲ್ಲಿಗಳು, ನದಿಗಳು, ತೀರ್ಥಗಳು, ಮುನಿಗಳು, ರಾಜರುಗಳು, ಅಪ್ಸರರು, ಖಗರು, ಕ್ಷೇತ್ರಗಳು, ವಾನರರು ಇವರೆಲ್ಲರೂ ಅಲ್ಲಿ ಸ್ನಾನಕ್ಕೆ ಬಂದರು.

೩೨–೩೩. ಹೀಗೆ ಬರುತ್ತಿರುವಾಗ ದೇವಪತ್ನಿಯರಿಗೆ ಈ ವಿದೇಹಜೆಯಾದ ಸೀತೆಯು ಅಸ್ಪೃಶ್ಯಳೆಂದು (ಮುಟ್ಟಾಗಿರುವಳೆಂದು) ತಿಳಿಯಿತು. ಇದರಿಂದ ಆಕೆಯು ರಾಮನಿಂದ ದೂರಳಾಗಿರುವಳೆಂದೂ ತಿಳಿದುಬಂದಿತು. ಆಗ ಅವರೆಲ್ಲರೂ ಒಬ್ಬರಿಗೊಬ್ಬರು ಮಾತನಾಡಿಕೊಂಡು ವಸ್ತ್ರಾಲಂಕಾರಭೂಷಿತರಾಗಿ ಅರ್ಧರಾತ್ರಿ ಸಮಯದಲ್ಲಿ ರಾಮನ ಬಳಿಗೆ ಬಂದರು.

೩೪. ಅವರೆಲ್ಲರೂ ಆ ರಾಮನ ಸೌಂದರ್ಯವನ್ನು ನೋಡಿ ಭ್ರಾಂತಿಗೊಂಡು ಮನ್ಮಥಬಾಣಕ್ಕೆ ಒಳಗಾಗಿ ಮೋಹಗೊಂಡಿದ್ದರು. ಅವರೆಲ್ಲರೂ ರಾಮನ ಮನೆಯ ಬಳಿಗೆ ಬರಲು ಅಲ್ಲಿ ಬಾಗಿಲು ಕಾಯುತ್ತಿದ್ದ ರಾಮದೂತರು ಇಂತೆಂದು ಕೇಳಿದರು.

ಯೂಯಂ ಕಿಮರ್ಥಂ ಸಂಪ್ರಾಪ್ತಾ ನಿಶೀಥೇತ್ರ ಭಯಾವಹೇ ।
ಕಥಯಧ್ವಂ ಹಿ ನಸ್ಸರ್ವಂ ಮಾ ಶಂಕಾಂ ಕುರುತಾತ್ರ ಹಿ ॥ ೩೫ ॥

ತಾ ಊಚೂ ರಾಘವಂ ದ್ರಷ್ಟುಂ ಸಮಾಯಾತಾ ವಯಂ ಸ್ತ್ರಿಯಃ ।
ಅಧುನಾ ಚೇದ್ರಾಘವಸ್ಯ ದರ್ಶನಂ ನ ಭವಿಷ್ಯತಿ ॥ ೩೬ ॥

ಜಾತೋಽವಧಿಸ್ತದಾಸ್ಮಾಕಂ ಜೀವಿತಸ್ಯ ನದೀಜಲೇ ।
ಇತಿ ತಾಸಾಂ ವಚಃ ಶ್ರುತ್ವಾ ದೂತಾಸ್ತೇ ರಾಘವಂ ಜವಾತ್ ॥ ೩೭ ॥

ದಾಸ್ಯಾ ನಿವೇದಯಾಮಾಸುಸ್ಸ್ತ್ರೀವೃತ್ತಂ ತತ್ಸವಿಸ್ತರಂ ।
ಶ್ರುತ್ವಾ ದಾಸೀಮುಖಾದ್ರಾಮಸ್ಸ್ವೈಕತೇ ಮಂಚಕೇ ಸ್ಥಿತಃ ॥ ೩೮ ॥

---

೩೫. ಎಲೈ ಹೆಂಗಸರಿರಾ! ಈ ಭಯಂಕರವಾದ ಅರ್ಧರಾತ್ರಿಯಲ್ಲಿ ನೀವೇತಕ್ಕೆ ಇಲ್ಲಿಗೆ ಬಂದಿರಿ? ಅದೆಲ್ಲವನ್ನೂ ನಮಗೆ ಹೇಳಿರಿ. ಸ್ವಲ್ಪವೂ ಶಂಕಿಸಬೇಡಿರಿ.

೩೬. ಆಗ ಅವರು ನಾವೆಲ್ಲರೂ ರಾಮನನ್ನು ನೋಡುವುದಕ್ಕೆ ಬಂದಿದ್ದೇವೆ. ಈಗ ನಮಗೆ ಆ ಶ್ರೀರಾಮನ ದರ್ಶನವಾಗದಿದ್ದರೆ ಈಗಲೇ ನಾವೆಲ್ಲರೂ ಈ ಸರಯೂನದಿಯ ನೀರಿನಲ್ಲಿ ಬಿದ್ದು ನಮ್ಮಗಳ ಪ್ರಾಣಗಳನ್ನು ಕಳೆದುಕೊಳ್ಳುತ್ತೇವೆ ಎಂದು ಹೇಳಿದರು.

೩೭–೩೮. ದೂತರು ಈ ಮಾತನ್ನು ಕೇಳಿ ಬೇಗನೆ ರಾಮನ ಮಲಗುವ ಮನೆಯ ಬಳಿಗೆ ಹೋಗಿ ಆ ಹೆಂಗಸರು ಹೇಳಿದ ವಿಷಯವನ್ನೂ ಅವರ ಸ್ಥಿತಿಯನ್ನೂ ಅಲ್ಲಿದ್ದ ದಾಸಿಯರಿಗೆ ಹೇಳಿದರು. ಸರಯೂನದಿಯ ಮರಳಿನ ಮೇಲೆ ಮಂಚದಲ್ಲಿ ಮಲಗಿದ್ದ ರಾಮನಿಗೆ ಆ ದಾಸಿಯರು ಇದೆಲ್ಲವನ್ನೂ ತಿಳಿಸಿದರು.

ಸಮಾಹೂಯ ಸ್ತ್ರಿಯಸ್ಸರ್ವಾ ದದರ್ಶ ರಘುನಾಯಕಃ ।
ತಾಶ್ಚಾಪಿ ದೃಷ್ಟ್ವಾ ಶ್ರೀರಾಮಂ ಮೇನಿರೇ ಕೃತಕೃತ್ಯತಾಂ ॥ ೩೯ ॥

ತತಸ್ತಾ ರಾಘವಂ ನತ್ವಾ ಲಜ್ಜಯಾಧೋಮುಖಾಃ ಸ್ತ್ರಿಯಃ ।
ಪೀಡಿತಾಃ ಕಾಮಬಾಣೈಶ್ಚ ತಸ್ಥುಃ ಶ್ರೀರಾಮಸನ್ನಿಧೌ ॥ ೪೦ ॥

ತಾಃ ಪಪ್ರಚ್ಛ ರಾಘವೋಽಸ್ಯಾಗಮನಸ್ಯಾಥ ಕಾರಣಂ ।
ತಾ ರಾಘವಂ ತದಾ ಪ್ರೋಚುಸ್ಸರ್ವಂ ವೇತ್ಸಿ ತ್ವಮೀಶ್ವರಃ ॥ ೪೧ ॥

ಜ್ಞಾತ್ವಾ ತಾಸಾಂ ರಾಮಚಂದ್ರೋ ಹೃದ್ಗತಂ ಪ್ರಾಹ ತಾಃ ಪುನಃ ।
ಏಕಪತ್ನೀವ್ರತಂ ಮೇಽಸ್ತಿ ಚೈತಜ್ಜನ್ಮನಿ ಭೋ ಸ್ತ್ರಿಯಃ ॥ ೪೨ ॥

---

೩೯. ಇನನ್ನು ಕೇಳಿ ರಾಮನು ಆ ಹೆಂಗಸರನ್ನೆಲ್ಲಾ ಕರೆಸಿದನು. ಅವರೆಲ್ಲರಿಗೂ ದರ್ಶನವನ್ನು ಕೊಟ್ಟನು. ಅವರೆಲ್ಲರೂ ಆ ಶ್ರೀರಾಮನನ್ನು ನೋಡಿ ತಾವು ಹುಟ್ಟಿದುದಕ್ಕೆ ಸಾರ್ಥಕವಾಯಿತೆಂದುಕೊಂಡರು.

೪೦. ಆ ಹೆಂಗಸರೆಲ್ಲರೂ ರಾಮನನ್ನು ನೋಡಿದೊಡನೆಯೇ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಕಾಮಬಾಣದಿಂದ ಪೀಡಿತರಾಗಿ ಅವನ ಬಳಿಯಲ್ಲಿ ಸುಮ್ಮನೆ ನಿಂತುಕೊಂಡರು.

೪೧. ಆಗ ಶ್ರೀರಾಮನು ಅವರನ್ನು ಕುರಿತು ನೀವು ಇಲ್ಲಿಗೆ ಬರಲು ಕಾರಣವೇನೆಂದು ಕೇಳಿದನು. ಆಗ ಅವರೆಲ್ಲರೂ ನೀನು ಸರ್ವೇಶ್ವರನು. ನಿನಗೆ ಎಲ್ಲವೂ ತಿಳಿದೇ ಇದೆ ಎಂದರು.

೪೨–೪೩. ಆಗ ರಾಮನು ಅವರ ಮನಸ್ಸಿನಲ್ಲಿರುವುದನ್ನು ತಿಳಿದು ಎಲೈ ಸ್ತ್ರೀಯರಿರಾ! ಈ ಜನ್ಮದಲ್ಲಿ ನನಗೆ ಏಕಪತ್ನೀ ವ್ರತವಿರುವುದು. ನಾನು ಪರ ಸ್ತ್ರೀಯನ್ನು ಮುಟ್ಟುವುದಿಲ್ಲ. ನನ್ನ ಮಾತು ಸುಳ್ಳೆಂದು ತಿಳಿಯಬೇಡಿ. ನಿಮ್ಮ

ನ ಜ್ಞೇಯಂ ಮೇ ಮೃಷಾ ವಾಕ್ಯಂ ಗಮ್ಯತಾಂ ಸ್ವಸ್ಥಲಂ ಜವಾತ್ ।
ಮಾ ಭೂದಧರ್ಮೋ ಮದ್ರಾಜ್ಯೇ ರಾಜ್ಞಾಂ ವೈ ನಿರಯಪ್ರದಃ ॥ ೪೩ ॥

ಇತಿ ರಾಘವವಾಗ್ಬಾಣೈರ್ಭಿನ್ನಮರ್ಮಸ್ಥಲಾಃ ಸ್ತ್ರಿಯಃ ।
ಯಯುರ್ಮೂರ್ಛಾಂ ಕ್ಷಣಾದೇವ ಸಿಕತಾಯಾಂ ಸಹಸ್ರಶಃ ॥ ೪೪ ॥

ತಾ ಮೂರ್ಛಾವಿಹ್ವಲಾ ದೃಷ್ಟ್ವಾ ರಾಮೋ ವಿಹ್ವಲಮಾನಸಃ ।
ನಾರೀಸ್ಸಂತೋಷಯನ್ ಪ್ರಾಹ ಹೇ ನಾರ್ಯಃ ಶ್ರೂಯತಾಂ ಮಮ ॥ ೪೫ ॥

ವಾಕ್ಯಂ ಖೇದಾಪಹಂ ಮೇಽದ್ಯ ದ್ವಾಪರೇ ಕೃಷ್ಣರೂಪಧೃಕ್ ।
ಅಹಂ ವ್ರಜೇ ಭವಿಷ್ಯಾಮಿ ನಂದಗೋಪೇಶಪಾಲಿತೇ ॥ ೪೬ ॥

ನಿಮ್ಮ ಸ್ಥಳಗಳಿಗೆ ಬೇಗನೇ ಹೋಗಿರಿ. ನನ್ನ ರಾಜ್ಯದಲ್ಲಿ ಅಧರ್ಮವು ನಡೆಯ ಕೂಡದು. ಅದು ರಾಜನಿಗೆ ನರಕವನ್ನು ಉಂಟುಮಾಡುತ್ತದೆ ಎಂದನು.

೪೪. ರಾಮನು ಇಂತೆನ್ನಲು ರಾಮನ ಮಾತೆಂಬ ಬಾಣದಿಂದ ಅವರೆಲ್ಲರೂ ಮನಸ್ಸಿನಲ್ಲಿ ನೊಂದರು. ಅದರಿಂದ ಅವರೆಲ್ಲರೂ ಒಡನೆಯೇ ಮೂರ್ಛೆಗೊಂಡು ಆ ಸರಯೂನದಿಯ ಮರಳಿನಲ್ಲಿಯೇ ಗುಂಪುಗುಂಪಾಗಿ ಬಿದ್ದುಬಿಟ್ಟರು.

೪೫. ಅವರು ಮೂರ್ಛೆಗೊಂಡುದನ್ನು ನೋಡಿ ರಾಮನಿಗೆ ಬಹು ದುಃಖ ವಾಯಿತು. ಆಗ ಅವರಿಗೆಲ್ಲಾ ಸಂತೋಷವಾಗುವಂತೆ ಅವರನ್ನು ಕುರಿತು ಇಂತೆಂದನು.

೪೬. ಎಲೈ ನಾರಿಯರಿರಾ! ಈಗ ನಾನಾಡಿದ ಮಾತು ನಿಮಗೆ ದುಃಖ ಕರವಾಗಿರುವುದು. ನಾನು ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡು ತ್ತೇನೆ. ಆಗ ನಾನು ನಂದಗೋಪನಿಂದ ರಕ್ಷಿತವಾದ ಗೋಕುಲದಲ್ಲಿರುತ್ತೇನೆ.

ತದಾ ದೇವಾಸ್ತು ಗೋಪಾಲಾ ಭಾವಿ ಮದ್ವರದಾನತಃ ।
ಭವಿಷ್ಯಂತಿ ಸುರೇಶಶ್ಚ ನಂದಸ್ತತ್ರ ಭವಿಷ್ಯತಿ ॥ ೪೭ ॥

ಭವಿಷ್ಯಥ ತಥಾ ಯೂಯಂ ಗೋಪಿಕಾಸ್ಸಕಲಾಃ ವ್ರಜೇ ।
ಯುಷ್ಮಾಕಂ ಪೂರಯಿಷ್ಯಾಮಿ ಯಥೇಚ್ಛಂ ವಾಂಛಿತಂ ತದಾ ॥ ೪೮ ॥

ರಾಸಕ್ರೀಡಾಂ ಹಿ ಯುಷ್ಮಾಭಿಃ ಕರಿಷ್ಯಾಮಿ ನ ಸಂಶಯಃ ।
ವೃಂದಾವನೇ ತು ಕಾಲಿಂದ್ಯಾಂ ಸೈಕತೇ ನಿಶಿ ವೈ ಚಿರಂ ॥ ೪೯ ॥

ಭವಧ್ವಂ ಸ್ವಸ್ಥಚಿತ್ತಾಶ್ಚ ಗಚ್ಛಧ್ವಂ ಸ್ವಸ್ಥಲಂ ಮುದಾ ।
ಇತಿ ರಾಮವಚೋರೂಪಸುಧಯಾ ಜೀವಿತಾಃ ಸ್ತ್ರಿಯಃ ॥ ೫೦ ॥

ಕಿಂಚಿತ್ತುಷ್ಟಹೃದೋ ರಾಮಂ ನತ್ವಾ ಜಗ್ಮುರ್ನಿಜಂ ಸ್ಥಲಂ ।
ಏತಸ್ಮಿನ್ನಂತರೇ ತತ್ರ ಮಧುಸ್ನಾನಾರ್ಥಮಾದರಾತ್ ॥ ೫೧ ॥

೪೭–೪೮. ಆಗ ದೇವತೆಗಳೆಲ್ಲರೂ ನನ್ನ ವರದಾನದಿಂದ ಗೋಪರಾಗಿ ಹುಟ್ಟುತ್ತಾರೆ. ದೇವೇಂದ್ರನು ಅಲ್ಲಿ ನಂದನಾಗಿ ಹುಟ್ಟುತ್ತಾನೆ. ಅಲ್ಲಿ ನೀವೆಲ್ಲರೂ ಗೋಪಿಕೆಯರಾಗಿ ಹುಟ್ಟಿರಿ. ಆಗ ನಿಮ್ಮ ಇಷ್ಟಾರ್ಥವನ್ನೆಲ್ಲಾ ಕೊಡುತ್ತೇನೆ.

೪೯. ಆಗ ನಾನು ನಿಮ್ಮಗಳೊಡನೆ ಸೇರಿಕೊಂಡು ರಾಸಕ್ರೀಡೆಯನ್ನು ಮಾಡುತ್ತೇನೆ. ಈ ವಿಷಯದಲ್ಲಿ ಸಂದೇಹಪಡಬೇಡಿರಿ. ಬೃಂದಾವನದಲ್ಲಿಯೂ ಕಾಳಿಂದಿಯ ಮರಳಿನಮೇಲೂ ರಾತ್ರಿಯಲ್ಲೆಲ್ಲಾ ಕ್ರೀಡಿಸುವೆನು.

೫೦. ಇದರಿಂದ ನೀವು ಮನಸ್ಸಿಗೆ ಸಮಾಧಾನವನ್ನು ಹೊಂದಿ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿರಿ. ಎಂದು ರಾಮನು ಹೇಳಲು ಅವನ ಈ ಮಾತೆಂಬ ಅಮೃತದಿಂದ ಅವರೆಲ್ಲರಿಗೂ ಮತ್ತೆ ಪ್ರಾಣವು ಉಳಿಯಿತು.

೫೧. ಇದರಿಂದ ಸ್ವಲ್ಪ ಸಮಾಧಾನವನ್ನು ಹೊಂದಿ ಅವರು ರಾಮನಿಗೆ ನಮಸ್ಕರಿಸಿ ಅವರವರ ಸ್ಥಳಗಳಿಗೆ ಹೊರಟುಹೋದರು. ಇಷ್ಟರಲ್ಲಿ ಚೈತ್ರಸ್ನಾನಕ್ಕೋಸ್ಕರ ಮಾಯಾಪುರಿಯಿಂದ ಸುಂದರಿಯೂ ಗುಣವತಿಯೂ ಆದ ಗುಣವತಿಯೆಂಬುವಳು ಅಲ್ಲಿಗೆ ಬಂದಳು.

ಮಾಯಾಪುರ್ಯಾಸ್ಸಮಾಯಾತಾ ರಮ್ಯಾ ಗುಣವತೀ ಶುಭಾ ।

॥ ವಿಷ್ಣುದಾಸ ಉವಾಚ ॥

ಕಾ ಸಾ ಪ್ರೋಕ್ತಾ ಗುಣವತೀ ಕಿಂ ಶೀಲಾ ಕಸ್ಯ ಕನ್ಯಕಾ ॥ ೫೨ ॥

ತದ್ವದಸ್ವ ಸವಿಸ್ತಾರಂ ಕಸ್ಯಾಽಸೀತ್ಪ್ರಮದಾ ಪುರಾ ।

ಇತಿ ಶಿಷ್ಯವಚಶ್ಶ್ರುತ್ವಾ ರಾಮದಾಸೋಽಬ್ರವೀತ್ಪುನಃ ॥ ೫೩ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ವಿಲಾಸಕಾಂಡೇ ದೇವಪತ್ನೀ ವರದಾನಂ ನಾಮ ಸಪ್ತಮಸ್ಸರ್ಗಸ್ಸಮಾಪ್ತಃ

---

೫೨. ವಿಷ್ಣುದಾಸನು ಹೇಳಿದನು–ಎಲೈ ಗುರುವೇ! ಗುಣವತಿ ಎಂದು ಹೇಳುತ್ತೀಯಲ್ಲ! ಅವಳಾರು? ಅವಳ ಸ್ವಭಾವವೇನು? ಅವಳು ಯಾರ ಮಗಳು?

೫೩. ಅವಳು ಯಾರ ಹೆಂಡತಿಯು? ಇದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು. ಇಂತೆಂದ ಶಿಷ್ಯನ ಮಾತನ್ನು ಕೇಳಿ ರಾಮದಾಸನು ಇಂತೆಂದು ಹೇಳಿದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ದೇವಪತ್ನೀ ವರದಾನವೆಂಬ ಏಳನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ

॥ ಏಳನೆಯ ಸರ್ಗದ ಸಾರಾಂಶವು ॥

ಹೀಗೆ ರಾಮನು ರಾಜ್ಯಭಾರವನ್ನು ಮಾಡುತ್ತಿರಲು ಶ್ರೀ ವ್ಯಾಸಮಹಾಮುನಿಗಳು ಶ್ರೀರಾಮನನ್ನು ನೋಡಲು ಶಿಷ್ಯರೊಡನೆ ಬಂದರು. ರಾಮನ ಅವರೆಲ್ಲರಿಗೂ ಸತ್ಕಾರವನ್ನು ಮಾಡಿದನು. ಇಬ್ಬರಿಗೂ ಕುಶಲಪ್ರಶ್ನೆಗಳು ನಡೆದುವು. ವ್ಯಾಸನು ರಾಮನನ್ನು ಕುರಿತು "ಎಲೈ ರಾಮನೆ! ನೀನು ರಾಜ್ಯವಾಳುವ ರೀತಿಯಲ್ಲಿ ಹಿಂದೆ ಯಾರೂ ಆಳಲಿಲ್ಲ. ಈಗಲೂ ಆಳುತ್ತಿಲ್ಲ. ಮುಂದೆಯೂ ಆಳಲಾರರು." ಎಂದು ಶ್ಲಾಘಿಸಿದನು. ಮತ್ತು "ಎಲೈ ರಾಮನೆ! ನೀನು ಒಳ್ಳೆಯ ಪದವಿಯನ್ನು ಹೊಂದಿದ್ದೀಯೆ. ನಿನ್ನ ಆಜ್ಞೆಗೆ ತಡೆಯೇ ಇಲ್ಲ. ಒಳ್ಳೆಯ ಯೌವನವನ್ನು ಹೊಂದಿದ್ದೀಯೆ. ಹೀಗಿರುವಲ್ಲಿ ಈ ತಾರುಣ್ಯದ ಕಾಳ್ಗಿಚ್ಚು ಹೊರಹೊಮ್ಮದಂತೆ ಏಕಪತ್ನೀವ್ರತದಲ್ಲಿರುತ್ತಿರುವೆಯಲ್ಲ! ಇದನ್ನು ಮತ್ತಾವನು ತಾನೆ ಸಹಿಸಿಯಾನು? ಇದು ಬಹು ಶ್ಲಾಘ್ಯವಾದುದು." ಎಂದೂ ಹೊಗಳಿದನು.

ಇದನ್ನು ಕೇಳಿ ರಾಮನು "ಎಲೈ ಋಷಿಯೆ! 1) ನನ್ನ ಬಾಯಿಂದ ಹೊರಟ ಮಾತು ಒಂದೇ ಆಗಿರಬೇಕು. ಅದನ್ನು ಎಂದೂ ಸುಳ್ಳು ಮಾಡುವುದಿಲ್ಲ. 2) ಸೀತೆಯು ಹೊರತಾದ ಉಳಿದ ಹೆಂಗಸರು ನನಗೆ ಕೌಸಲ್ಯೆಗೆ ಸಮಾನರು. 3) ನಾನು ಯಾರಮೇಲೆ ಕೋಪವನ್ನು ಮಾಡಿ ದಹಿಸಲು ಇಚ್ಛಿಸುವೆನೋ ಅವನನ್ನು ಒಂದೇ ಬಾಣದಿಂದ ಕೊಲ್ಲುವೆನು. ಇವು ಮೂರೂ ನನ್ನ ಆಜನ್ಮ ಪ್ರತಿಜ್ಞೆಗಳು. ಇವು ಈಗಲೂ ನಡೆಯುತ್ತಿವೆ. ಮುಂದೆಯೂ ನಡೆಯುವಂತೆ ನೀನು ಆಶೀರ್ವದಿಸು." ಎಂದನು.

ಅದಕ್ಕೆ ವ್ಯಾಸನು ಹಾಗೆಯೇ ಆಗಲೆಂದು ಆಶೀರ್ವದಿಸಿ "ಎಲೈ ರಾಮನೆ! ನೀನು ಈ ಏಕಪತ್ನೀವ್ರತದ ಫಲವಾಗಿ ಮುಂದಿನ ಜನ್ಮದಲ್ಲಿ ಕೃಷ್ಣಾವತಾರದಲ್ಲಿ ಬಹುಸ್ತ್ರೀಯರನ್ನು ಅನುಭವಿಸುತ್ತೀಯೆ." ಎಂದನು.

ಇದನ್ನು ಕೇಳಿ ರಾಘವನು ನಕ್ಕು "ಎಲೈ ಋಷಿಯೆ! ಮುಂದಿನ ಜನ್ಮದಲ್ಲಿ ಕೃಷ್ಣಾವತಾರದಲ್ಲಿ ಈ ಏಕಪತ್ನೀವ್ರತದ ಫಲದಿಂದ ಬಹು ಸ್ತ್ರೀಯರನ್ನು ಅನುಭವಿಸುವ ಸುಖವು ಸಿಕ್ಕುವುದು ಸರಿಯಷ್ಟೆ. ಆದರೂ ಕೂಡ ಇನ್ನೂ ಯಾವ ದಾನವನ್ನೂ ವ್ರತವನ್ನೂ ಮಾಡಿದರೆ ಆ ಸುಖವು ಖಂಡಿತವಾಗಿಯೂ ಸಿಕ್ಕುವುದೋ ಅಂತಹ ದಾನವನ್ನೂ ವ್ರತವನ್ನೂ ಹೇಳು." ಎಂದು ಕೇಳಿದನು.

ಅದಕ್ಕೆ ವ್ಯಾಸನು ಇಂತೆಂದನು. "ಎಲೈ ರಾಮನೆ! ನೀನು ಏಕಪತ್ನೀವ್ರತದ ಪ್ರಭಾವದಿಂದಲೇ ಬಹು ಪತ್ನಿಯರನ್ನು ಹೊಂದುತ್ತೀಯೆ. ಆದರೂ ಒಂದು ದಾನವನ್ನು ಹೇಳುತ್ತೇನೆ. ಕೇಳು. ಈ ಸೀತೆಯ ತೂಕದಷ್ಟು ಚಿನ್ನವನ್ನು ತೂಗಿ ಅದರಿಂದ ಒಂದು ಸ್ತ್ರೀ ಪ್ರತಿಮೆಯನ್ನು ಮಾಡಿಸು. ಇಂತಹ ಹದಿನಾರು ಪ್ರತಿಮೆಗಳನ್ನು ಮಾಡಿಸು. ಅದನ್ನು ಸರಯೂನದಿಯ ದಡದಲ್ಲಿ ಹದಿನಾರುಜನ ಬ್ರಾಹ್ಮಣರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದಾನಮಾಡು. ಪ್ರತಿಮೆಗಳಿಗೂ ಆ ಬ್ರಾಹ್ಮಣರಿಗೂ ಉಡಿಗೆ ತೊಡಿಗೆಗಳಿಂದ ಅಲಂಕಾರವನ್ನು ಮಾಡಿರು. ಇದರಿಂದಲೂ ನಿನಗೆ ಬಹು ನಾರಿಯರು ಸಿಕ್ಕುವರು." ಎಂದನು.

ಇದನ್ನು ಕೇಳಿ ರಾಮನು ಅಂತೆಯೇ ಮಾಡಿದನು. ಇದರಿಂದ ಆ ಬ್ರಾಹ್ಮಣರು ಸಂತೋಷಗೊಂಡು "ಎಲೈ ರಾಮನೆ! ಈ ಜನ್ಮದಲ್ಲಿ ಮಾಡಿದ ಒಂದು ದಾನವು ಮತ್ತೊಂದು ಜನ್ಮದಲ್ಲಿ ಸಾವಿರದಷ್ಟು ಫಲವನ್ನು ಕೊಡುವುದು. ಆದ್ದರಿಂದ ನಿನಗೆ ಹದಿನಾರು ಪ್ರತಿಮೆಗಳು ಹದಿನಾರು ಸಾವಿರ ಹೆಂಗಸರ ಭೋಗದ ಫಲವನ್ನು ಕೊಡುತ್ತವೆ." ಎಂದು ಆಶೀರ್ವದಿಸಿದರು. ಈ ವ್ರತವನ್ನು ಮಾಡಿದಮೇಲೆ ವ್ಯಾಸನು ಹೊರಟುಹೋದನು.

ಹೀಗಿರುತ್ತಿರಲು ಒಂದುಸಾರಿ ರಾಮನು ಸೀತೆಯೊಡನೆ ಸರಯೂನದಿಯ ದಡದಲ್ಲಿ ಡೇರೆಯಲ್ಲಿರುತ್ತಿರಲು ಯಾತ್ರಾರ್ಥಿಗಳು ಚೈತ್ರಮಾಸದಲ್ಲಿ ನಾನಾ

ದೇಶಗಳಿಂದ ಆ ರಾಮತೀರ್ಥಕ್ಕೆ ಸ್ನಾನಕ್ಕೆ ಬಂದರು. ಆ ಸಮಯದಲ್ಲಿ ದೇವತೆಗಳೂ ಅಲ್ಲಿಗೆ ಬಂದರು. ಹೀಗೆ ಸ್ನಾನವನ್ನು ಮಾಡುತ್ತಾ ಅಲ್ಲಿರುವ ಕಾಲದಲ್ಲಿ ಸೀತೆಯು ಮುಟ್ಟಾದಳು. ಆ ಸಮಯದಲ್ಲಿ ರಾಮನ ಸೌಂದರ್ಯಕ್ಕೆ ಮೋಹಗೊಂಡಿದ್ದ ಆ ದೇವತಾಸ್ತ್ರೀಯರು ಇದನ್ನು ತಿಳಿದು ರಾಮನ ಬಳಿಗೆ ಹೋದರು. ರಾಮದೂತರು ಅವರನ್ನು ತಡೆದು ಏತಕ್ಕೆ ಬಂದಿರುವಿರೆಂದು ಕೇಳಲು ಈಗ ನಾವು ರಾಮನನ್ನು ನೋಡದಿದ್ದರೆ ನಮ್ಮ ಪ್ರಾಣಗಳು ಉಳಿಯು ವಂತಿಲ್ಲ ಎಂದು ಹೇಳಿದರು ಆ ದೂತರು ಹೋಗಿ ಇದನ್ನು ರಾಮನಿಗೆ ತಿಳಿಸಿದರು.

ಆಗ ರಾಮನು ಆ ಹೆಂಗಸರೆಲ್ಲರನ್ನೂ ಕರೆಸಿ ಅವರಿಗೆ ದರ್ಶನವನ್ನು ಕೊಟ್ಟನು. ಆ ಹೆಂಗಸರು ಆತನಿಗೆ ನಮಸ್ಕರಿಸಿ ಲಜ್ಜೆಯಿಂದ ತಲೆಯನ್ನು ಬಗ್ಗಿಸಿಕೊಂಡು ನಿಂತರು. ಇದನ್ನು ನೋಡಿ ರಾಮನು ಇವರು ಕಾಮಪೀಡಿತ ರಾಗಿರುವರೆಂದು ತಿಳಿದು "ಎಲೈ ಸ್ತ್ರೀಯರಿರಾ! ಈ ಜನ್ಮದಲ್ಲಿ ನಾನು ಏಕಪತ್ನೀ ವ್ರತದಲ್ಲಿದ್ದೇನೆ. ನಾನು ಸುಳ್ಳನ್ನಾಡುವುದಿಲ್ಲ. ನಾನು ಈ ಧರ್ಮದಿಂದ ಚ್ಯುತನಾದರೆ ನನಗೆ ನರಕವು ಬರುವುದು." ಎಂದನು. ಇದರಿಂದ ಆ ಹೆಂಗಸರು ಭಗ್ನಮನೋರಥರಾಗಿ ಮೂರ್ಛೆಗೊಂಡರು. ಇದರಿಂದ ರಾಮನಿಗೆ ದುಃಖವಾಯಿತು. ಕನಿಕರಗೊಂಡ ರಾಮನು "ಎಲೈ ಸ್ತ್ರೀಯರಿರಾ! ನಾನು ದ್ವಾಪರಯುಗದಲ್ಲಿ ಕೃಷ್ಣಾವತಾರವನ್ನು ಮಾಡುವೆನು. ಆಗ ದೇವತೆಗಳು ಗೋಪಾಲರಾಗಿ ಹುಟ್ಟುವರು. ಇಂದ್ರನು ನಂದನಾಗಿ ಹುಟ್ಟುವನು. ನೀವೆಲ್ಲರೂ ಗೋಪಿಕೆಯರಾಗಿ ಹುಟ್ಟುತ್ತೀರಿ. ಆಗ ನಿಮ್ಮ ಇಷ್ಟಾರ್ಥವನ್ನು ಪೂರ್ಣ ಗೊಳಿಸುತ್ತೇನೆ. ನೀವು ಸುಖವಾಗಿ ಹೋಗಿರಿ." ಎಂದೆನ್ನಲು ಅವರೆಲ್ಲರಿಗೂ ಸ್ವಲ್ಪ ಸಮಾಧಾನವಾಗಿ ರಾಮನಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

॥ ಅಷ್ಟಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಆಸೀತ್ಕೃತಯುಗಸ್ಯಾಂತೇ ಮಾಯಾಪುರ್ಯಾಂ ದ್ವಿಜೋತ್ತಮಃ |
ಆತ್ರೇಯೋ ದೇವಶರ್ಮೇತಿ ವೇದವೇದಾಂಗಪಾರಗಃ ॥ ೧ ॥

ಆತಿಥೇಯೋಽಗ್ನಿಶುಶ್ರೂಷೀ ಸೌರವ್ರತಪರಾಯಣಃ |
ಸೂರ್ಯಮಾರಾಧಯನ್ನಿತ್ಯಂ ಸಾಕ್ಷಾತ್ಸೂರ್ಯ ಇವಾಪರಃ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಎಂಟನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು–ಎಲೈ ವಿಷ್ಣುದಾಸನೇ ! ಕೃತ ಯುಗದ ಕೊನೆಯ ಭಾಗದಲ್ಲಿ ಮಾಯಾಪುರಿಯಲ್ಲಿ ಒಬ್ಬ ಬ್ರಾಹ್ಮಣ ಶ್ರೇಷ್ಠನಿದ್ದನು. ಅವನು ಆತ್ರೇಯಸ ಗೋತ್ರದವನು ದೇವಶರ್ಮನೆಂದು ಅವನ ಹೆಸರು. ವೇದವೇದಾಂಗಗಳನ್ನು ಅಧ್ಯಯನಮಾಡಿದ್ದನು.

೨. ಅವನು ಅತಿಥಿಗಳನ್ನು ಸತ್ಕರಿಸುತ್ತಾ ಔಪಾಸನಾದಿಗಳನ್ನು ಮಾಡುತ್ತಲಿದ್ದನು. ಯಾವಾಗಲೂ ಸೂರ್ಯಪ್ರಾರ್ಥನೆಯನ್ನು ಮಾಡುತ್ತಿದ್ದನು. ಅವನು ಸೂರ್ಯನನ್ನು ಆರಾಧಿಸುತ್ತಿದ್ದುದರಿಂದ ಯಾವಾಗಲೂ ಮತ್ತೊಬ್ಬ ಸೂರ್ಯನಂತೆಯೇ ತೇಜಸ್ವಿಯಾಗಿ ಕಾಣುತ್ತಿದ್ದನು.

ತಸ್ಯಾತಿವಯಸಶ್ಚಾಸೀನ್ನಾಮ್ನಾ ಗುಣವತೀ ಶುಭಾ ।
ಅಪುತ್ರಸ್ಸ ಸ್ವಶಿಷ್ಯಾಯ ಚಂದ್ರನಾಮ್ನೇ ದದೌ ಸುತಾಂ ॥ ೩ ॥

ತಮೇವ ಪುತ್ರವನ್ಮೇನೇ ಸ ಚ ತಂ ಪಿತೃವದ್ವಶೀ ।
ತೌ ಕದಾಚಿದ್ವನಂ ಯಾತೌ ಕುಶೇಧ್ಮಹರಣಾಯ ವೈ ॥ ೪ ॥

ಹಿಮಾದ್ರಿಪಾದೇ ವೇಗೇನ ಚೇರತುಸ್ತಾವಿತಸ್ತತಃ ।
ತಾವತ್ತೌ ರಾಕ್ಷಸಂ ಘೋರಮಪಶ್ಯೇತಾಂ ಪುರಃ ಸ್ಥಿತಂ ॥ ೫ ॥

ಭಯವಿಹ್ವಲಸರ್ವಾಂಗಾವಸಮರ್ಥೌ ಪಲಾಯಿತುಂ ।
ನಿಹತೌ ರಕ್ಷಸಾ ತೇನ ಕೃತಾಂತಸಮರೂಪಿಣಾ ॥ ೬ ॥

---

೩. ಅವನು ಮುದುಕನಾಗಿದ್ದನು. ಅವನಿಗೆ ಗುಣವತಿಯೆಂಬ ಹೆಸರಿನ ಶೀಲವತಿಯಾದ ಮಗಳೊಬ್ಬಳಿದ್ದಳು ಅವನಿಗೆ ಗಂಡುಮಕ್ಕಳಿರಲಿಲ್ಲ. ತನ್ನ ಶಿಷ್ಯನಾದ ಚಂದ್ರಶರ್ಮನೆಂಬುವನಿಗೆ ಆ ಮಗಳನ್ನು ಕೊಟ್ಟು ಮದುವೆಮಾಡಿದನು.

೪. ಆ ಚಂದ್ರಶರ್ಮನು ಮಾವನನ್ನು ತಂದೆಯಂತೆಯೇ ತಿಳಿದಿದ್ದನು. ಆ ಮಾವನೂ ಅಳಿಯನನ್ನು ಮಗನಂತೆ ತಿಳಿದಿದ್ದನು. ಅವರಿಬ್ಬರೂ ಒಂದು ಸಾರಿ ದರ್ಭೆಸಮಿತ್ತುಗಳನ್ನು ತರಲು ಕಾಡಿಗೆ ಹೋದರು.

೫. ಆ ಹಿಮವತ್ಪರ್ವತದ ತಪ್ಪಲಿನಲ್ಲಿ ದರ್ಭೆ ಸಮಿತ್ತುಗಳಿಗೋಸ್ಕರ ಅವರಿಬ್ಬರೂ ಅಲ್ಲಲ್ಲಿ ತಿರುಗುತ್ತಿದ್ದರು. ಆಗ ಅವರೆದುರಿಗೆ ಒಬ್ಬ ಘೋರನಾದ ರಾಕ್ಷಸನು ಬಂದನು.

೬. ಅವನನ್ನು ನೋಡಿ ಭಯದಿಂದ ಅವರಿಬ್ಬರೂ ನಡುಗಲಾರಂಭಿಸಿದರು. ಆದ್ದರಿಂದ ಓಡಿಹೋಗಲು ಆಗಲಿಲ್ಲ. ಆಗ ಯಮನಂತಿದ್ದ ಆ ರಾಕ್ಷಸನು ಅವರಿಬ್ಬರನ್ನೂ ಕೊಂದುಹಾಕಿದನು.

ತೌ ತತ್‌ಕ್ಷೇತ್ರಪ್ರಭಾವೇಣ ಧರ್ಮಶೀಲತಯಾ ಪುನಃ ।
ವೈಕುಂಠಭುವನಂ ಯಾತೌ ನೀತೌ ವಿಷ್ಣುಗಣೈಸ್ತದಾ ॥ ೭ ॥

ಯಾವಜ್ಜೀವಂ ತು ಯತ್ತಾಭ್ಯಾಂ ಸೂರ್ಯಪೂಜಾದಿಕಂ ಕೃತಂ ।
ಕರ್ಮಣಾ ತೇನ ಸಂತುಷ್ಟೋ ವಿಷ್ಣುಸ್ತಾಭ್ಯಾಂ ಬಭೂವ ಹ ॥ ೮ ॥

ಶೈವಾಸ್ಸೌರಾಶ್ಚ ಗಾಣೇಶಾ ವೈಷ್ಣವಾಶ್ಶಕ್ತಿಪೂಜಕಾಃ ।
ತಮೇವ ಪ್ರಾಪ್ನುವಂತೀಹ ವರ್ಷಾಪಸ್ಸಾಗರಂ ಯಥಾ ॥ ೯ ॥

ಏಕಸ್ಸ ಪಂಚಧಾ ಜಾತಃ ಕ್ರಿಯಯಾ ನಾಮಭಿಃ ಕಿಲ ।
ದೇವದತ್ತೋ ಯಥಾ ಕಶ್ಚಿತ್ಪುತ್ರಾದ್ಯಾಹ್ವಾನನಾಮಭಿಃ ॥ ೧೦ ॥

---

೭. ಆ ಕ್ಷೇತ್ರದ ಪ್ರಭಾವದಿಂದಲೂ, ತಾವು ಮಾಡುತ್ತಿದ್ದ ವ್ರತ, ಶೀಲಗಳ ಪ್ರಭಾವದಿಂದಲೂ ಅವರಿಬ್ಬರನ್ನೂ ವಿಷ್ಣುಗಣಗಳು ವೈಕುಂಠಕ್ಕೆ ಕರೆದುಕೊಂಡು ಹೋದರು.

೮. ಅವರಿಬ್ಬರೂ ತಾವು ಜೀವಿಸಿರುವವರೆಗೂ ಸೂರ್ಯವ್ರತವನ್ನು ಮಾಡುತ್ತಿದ್ದುದಕ್ಕಾಗಿ ವಿಷ್ಣುವು ಅವರಿಬ್ಬರ ವಿಷಯದಲ್ಲಿಯೂ ಸಂತೋಷ ಗೊಂಡಿದ್ದನು.

೯. ಶಿವಪೂಜಾ ನಿರತರಾಗಲಿ, ಸೂರ್ಯಪೂಜಾ ನಿರತರಾಗಲಿ, ಗಣೇಶ ಪೂಜಾನಿರತರಾಗಲಿ, ವಿಷ್ಣುಪೂಜಾ ನಿರತರಾಗಲಿ, ಶಕ್ತಿಪೂಜಾ ನಿರತರಾಗಲಿ, ಯಾವ ದೇವರನ್ನೇ ಪೂಜೆಮಾಡುವುದರಲ್ಲಿ ನಿರತರಾಗಿರುತ್ತಿರಲಿ ಅವರು ನದಿಗಳು ಬೇರೆ ಬೇರೆಯಾಗಿದ್ದರೂ, ಒಂದೇ ಸಮುದ್ರವನ್ನು ಸೇರುವಂತೆ ವಿಷ್ಣುವನ್ನೇ ಹೊಂದುವರು.

೧೦. ಆ ಸ್ವಾಮಿಯಾದ ವಿಷ್ಣುವೇ "ದೇವದತ್ತನು ಒಬ್ಬನಾದರೂ ತಂದೆಗೆ ಮಗ, ಮಾವನಿಗೆ ಅಳಿಯ ಅಳಿಯನಿಗೆ ಮಾವ ಮುಂತಾದ ಹೆಸರುಗಳಿಂದ ಬೇರ್ಪಡುವಂತೆ" ಶಿವಸೂರ್ಯಗಣೇಶ ವಿಷ್ಣು ಶಕ್ತಿ ಮುಂತಾದ ಹೆಸರುಗಳಿಂದಲೂ ಕ್ರೀಯೆಯಿಂದಲೂ ಐದು ಬಗೆಯಾಗಿ ಅವತರಿಸಿರುವನು.

ತತಶ್ಚ ತೌ ತದ್ಭುನಾಧಿವಾಸಿನೌ
ವಿಮಾನಯಾತೌ ರವಿವರ್ಚಸಾವುಭೌ ।
ತತ್ತುಲ್ಯರೂಪೌ ಹರಿಸನ್ನಿಧಾನಗೌ
ದಿವ್ಯಾಂಗನಾಚಂದನಭೋಗಭೋಗಿನೌ ॥ ೧೧ ॥

ತತೋ ಗುಣವತೀ ಶ್ರುತ್ವಾ ರಕ್ಷಸಾ ನಿಹತಾವುಭೌ ।
ಪಿತೃಭರ್ತೃಜದುಃಖಾರ್ತಾ ವಿಲಲಾಪ ಭೃಶಾತುರಾ ॥ ೧೨ ॥

ಸಾ ಗೃಹೋಪಸ್ಕರಾನ್ಸರ್ವಾನ್ವಿಕ್ರೀಯ ಶುಭಕರ್ಮಕೃತ್ ।
ತಯೋಶ್ಚಕ್ರೇ ಯಥಾಶಕ್ತಿ ಪರಲೋಕಕ್ರಿಯಾಂ ತದಾ ॥ ೧೩ ॥

ತಸ್ಮಿನ್ನೇವ ಪುರೇ ವಾಸಂ ಚಕ್ರೇ ಪ್ರಸೃತಜೀವಿನೀ ।
ವಿಷ್ಣುಭಕ್ತಿಪರಾ ಶಾಂತಾ ಸತ್ಯಶೌಚಾ ಜಿತೇಂದ್ರಿಯಾ ॥ ೧೪ ॥

---

೧೧. ಆದ್ದರಿಂದ ಆ ದೇವಶರ್ಮನೂ, ಚಂದ್ರಶರ್ಮನೂ, ಸೂರ್ಯನ ತೇಜಸ್ಸನ್ನು ಹೊಂದಿ ವಿಮಾನದಲ್ಲಿ ವಿಷ್ಣುಭವನವಾದ ವೈಕುಂಠಕ್ಕೆ ಹೋದರು. ಅಲ್ಲಿ ಅವರಿಬ್ಬರೂ ವಿಷ್ಣುವಿನ ಆಕಾರವನ್ನೇ ಹೊಂದಿ ಹರಿಯ ಸನ್ನಿಧಿಯಲ್ಲಿದ್ದು ಕೊಂಡು, ಗಂಧ ಹೂವು ಮುಂತಾದುವುಗಳಿಂದ ಭೂಷಿತರಾಗಿ ದಿವ್ಯಾಂಗನೆಯ ರನ್ನು ಭೋಗಿಸುತ್ತಿದ್ದರು.

೧೨. ಇತ್ತ ಗುಣವತಿಗೆ ಇವರಿಬ್ಬರನ್ನೂ ರಾಕ್ಷಸನು ಕೊಂದನು ಎಂಬುದು ತಿಳಿಯಿತು. ಗಂಡನೂ, ತಂದೆಯೂ ಸತ್ತುದರಿಂದ ಬಹುವಾಗಿ ಸಂಕಟಪಡುತ್ತ ದುಃಖಿಸಿದಳು.

೧೩. ಒಳ್ಳೆಯ ಸ್ವಭಾವವುಳ್ಳ ಆಕೆಯು ಮನೆಯಲ್ಲಿರುವ ಪದಾರ್ಥ ಗಳೆಲ್ಲವನ್ನೂ ಮಾರಿ ಅವರಿಗೆ ತನ್ನ ಶಕ್ತಿಯನ್ನನುಸರಿಸಿ ಪರಲೋಕ ಕ್ರಿಯೆಯನ್ನು ಮಾಡಿದಳು.

೧೪. ಅನಂತರ ತನಗೆ ಜೀವನಕ್ಕೆ ಬೇರೆ ಮಾರ್ಗವಿಲ್ಲದಿರಲು ಆ ಊರಿನಲ್ಲಿ ಭಿಕ್ಷವನ್ನು ಮಾಡುತ್ತ ಜೀವಿಸುತ್ತಿದ್ದಳು. ವಿಷುಭಕ್ತಿನಿರತಳಾಗಿಯೂ ಶಾಂತಳಾಗಿಯೂ, ಸತ್ಯವನ್ನೇ ಹೇಳುತ್ತಲೂ ಶೌಚಾಚಾರನಿರತಳಾಗಿಯೂ, ಜಿತೇಂದ್ರಿಯಳಾಗಿಯೂ ಇದ್ದುಕೊಂಡಿದ್ದಳು.

ವ್ರತಾಷ್ಟಕಂ ತಯಾ ಸಮ್ಯಗಾಜನ್ಮಮರಣಾತ್ಕೃತಂ ।
ಏಕಾದಶೀವ್ರತಂ ಸಮ್ಯಕ್ಸೇವನಂ ಕಾರ್ತಿಕಸ್ಯ ಚ ॥ ೧೫ ॥

ಮಾಘೇ ಚೈತ್ರೇ ಮಾಧವೇಽಪಿ ಸ್ನಾನಾನಿ ಪ್ರತಿವತ್ಸರಂ ।
ಸಮ್ಮಾರ್ಜನಂ ವಿಷ್ಣುಗೇಹೇ ಸ್ವಸ್ತಿಕಾದಿನಿವೇಶನಂ ॥ ೧೬ ॥

ನಿತ್ಯಂ ವಿಷ್ಣೋಃ ಪೂಜನಂ ಚ ಭಕ್ತ್ಯಾ ತತ್ಪರಮಾನಸಾ ।
ಇತ್ಥಂ ವ್ರತಾಷ್ಟಕಂ ಸಮ್ಯಕ್ ಸಾ ಚಕಾರಾಥ ಭಕ್ತಿತಃ ॥ ೧೭ ॥

ಏಕದಾ ಸಾ ಗುಣವತೀ ಪೌರಾಣಿಕಮುಖೇನ ಹಿ ।
ಶ್ರುತ್ವಾ ಮಹತ್ಫಲಂ ಶಿಷ್ಯ ಸಾಕೇತೇ ಸರಯೂ ಜಲೇ ॥ ೧೮ ॥

ಚೈತ್ರಸ್ನಾನಸ್ಯ ಕೈವಲ್ಯದಾಯಕಂ ಜನಸಂಯುತಾ ।
ಯಯೌ ಶ್ರೀರಾಮನಗರೀಂ ರಾಮತೀರ್ಥೇಽವಸಚ್ಛುಭಾ ॥ ೧೯ ॥

೧೫-೧೭. ತಾನು ಸಾಯುವವರೆಗೂ ಆಕೆಯು ಎಂಟು ವ್ರತಗಳನ್ನು ಚೆನ್ನಾಗಿ ಆಚರಿಸಿದಳು. ೧ ಏಕಾದಶೀ ವ್ರತಾಚರಣೆ, ೨ ಕಾರ್ತಿಕ ವಿಷ್ಣುಸೇವೆ, ೩ ಪ್ರತಿವರ್ಷವೂ ಮಾಘಸ್ನಾನ, ೪ ಚೈತ್ರಸ್ನಾನ, ೫ ವೈಶಾಖಸ್ನಾನ, ೬ ವಿಷ್ಣುವಿನ-ದೇವಸ್ಥಾನದಲ್ಲಿ ಗುಡಿಸುವ ಸೇವೆ. ೭ ಅಲ್ಲಿ ಸ್ವಸ್ತಿಕ ಮುಂತಾದ ಪದ್ಮಗಳನ್ನು ರಂಗೋಲೆಯಲ್ಲಿಡುವ ಸೇವೆ, ೮ ನಿತ್ಯವೂ ವಿಷ್ಣುಪೂಜೆ ಎಂಬುದಾಗಿ ಈ ಎಂಟು ವ್ರತಗಳನ್ನು ಭಕ್ತಿಯಿಂದ ಮಾಡುತ್ತಿದ್ದಳು.

೧೮-೧೯. ಅನಂತರ ಆ ಗುಣವತಿಯು ಒಂದುಸಾರಿ ಪುರಾಣವನ್ನು ಕೇಳುತ್ತಿರುವಾಗ ಅಯೋಧ್ಯೆಯಲ್ಲಿರುವ ಸರಯೂ ನದಿಯಲ್ಲಿ ಚೈತ್ರಮಾಸದಲ್ಲಿ ಸ್ನಾನಮಾಡಿದರೆ ಮಹಾ ಫಲವು ಬರುವುದು. ಅದರಿಂದ ಕೈವಲ್ಯವು ಸಿಕ್ಕುವುದು ಎಂದು ಕೇಳಿದಳು. ಅದರಿಂದ ಅವಳು ಜನಗಳ ಜೊತೆಯಲ್ಲಿ ಆ ಅಯೋಧ್ಯೆಗೆ ಹೋಗಿ ರಾಮ ತೀರ್ಥದಲ್ಲಿ ಸ್ನಾನಮಾಡುತ್ತಿದ್ದಳು.

ಸೈಕದಾ ರಾಘವಂ ದ್ರಷ್ಟುಂ ಸರಯೂಸೈಕತಸ್ಥಿತಂ ।
ವಾಸೋಗೇಹೇ ರಹಃ ಪತ್ನ್ಯಾ ಯುಯಾ ಬಂಧುಸಮನ್ವಿತಂ ॥ ೨೦ ॥

ಪೂಜಾಪಾತ್ರಾಣಿ ಹಸ್ತಾಭ್ಯಾಂ ಬಿಭ್ರತೀ ದ್ವಾರಸಂಸ್ಥಿತಾ ।
ಪ್ರತೀಹಾರೇಣ ರಾಮಾಯ ವೇದಿತಾ ಸಾ ವಿವೇಶ ಹ ॥ ೨೧ ॥

ವಾಸೋಗೇಹೇ ದದರ್ಶಾಥ ಸೀತಯಾ ರಘುನಾಯಕಂ ।
ರತ್ನಮಂಚಕಸಂಲಗ್ನಂ ಧೃತಾಧೋಂಕೋಪಬರ್ಹಣಂ ॥ ೨೨ ॥

ಕ್ರೀಡಂತಂ ಸಾರಿಭಿಃ ಪಾಶೈಸ್ಸೀತಯಾ ಲಕ್ಷ್ಮಣೇನ ಚ ।
ಕೈಕೇಯೀತನಯಾಭ್ಯಾಂ ಚ ಸಖೀಭಿಃ ಪರಿವಾರಿತಂ ॥ ೨೩ ॥

೨೦–೨೧. ಒಂದುಸಾರಿ ಶ್ರೀ ರಾಮನು ಸರಯೂನದಿಯ ದಡದಲ್ಲಿ ಗುಡಾರದಲ್ಲಿ ತಮ್ಮಂದಿರೊಡನೆಯೂ ಹೆಂಡತಿಯೊಡನೆಯೂ ಇರಲು ಈ ಗುಣವತಿಯು ಆ ರಾಮನನ್ನು ನೋಡುವ ಇಚ್ಛೆಯಿಂದ ಪೂಜಾಸಾಮಗ್ರಿಗಳನ್ನು ಹಿಡಿದುಕೊಂಡು ರಾಮನ ಮನೆಗೆ ಹೋಗಿ. ಬಾಗಿಲಿನಲ್ಲಿ ನಿಂತಿದ್ದಳು. ದ್ವಾರಪಾಲಕನು ಹೋಗಿ ರಾಮನಿಗೆ ಈಕೆಯು ಬಂದಿರುವುದನ್ನು ಹೇಳಲು ರಾಮನ ಒಪ್ಪಿಗೆಯಿಂದ ಆಕೆಯು ಒಳಗೆ ಹೋದಳು.

೨೨. ಅಲ್ಲಿ ಸೀತೆಯೊಡನೆ ಕುಳಿತಿರುವ ರಘುರಾಮನ ದರ್ಶನವನ್ನು ಮಾಡಿದಳು. ಆ ರಾಮನು ರತ್ನದ ಮಂಚದಲ್ಲಿ ಕುಳಿತಿದ್ದನು. ಜೋಲಾಡುತ್ತಿರುವ ಕುಚ್ಚನ್ನು ಹಿಡಿದುಕೊಂಡು ಕುಳಿತಿದ್ದನು.

೨೩. ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಪಗಡೆಯಾಟವಾಡುತ್ತಿದ್ದನು. ಭರತ ಶತ್ರುಘ್ನರೂ ನೋಡುತ್ತ ಸಲಹೆಮಾಡುತ್ತಿದ್ದರು. ಸುತ್ತಲೂ ಸಖಿಯರು ಕುಳಿತಿದ್ದರು.

ಮಯೂರಪಿಚ್ಛಸಂಭೂತಚಾಮರೈಃ ಪರಿವೀಜಿತಂ ।
ರತ್ನಚಿತ್ರರುಕ್ಮಭವೇ ನೂಪುರೇ ಪದಯೋರ್ವರೇ ॥ ೨೪ ॥

ಬಿಭ್ರಂತಂ ರಶನಾಂ ಕಟ್ಯಾಂ ರತ್ನರುಕ್ಮವಿಭೂಷಿತಾಂ ।
ರತ್ನರುಕ್ಮಭವೇ ದಿವ್ಯಕಂಕಣೇ ಕರಯೋರ್ವರೇ ॥ ೨೫ ॥

ಬಿಭ್ರಂತಂ ಭುಜಯೋರ್ದಿವ್ಯಕೇಯೂರೇ ರತ್ನಭೂಷಿತೇ ।
ಕಂಠದೇಶೇ ಕೌಸ್ತುಭಂ ಚ ಹೃದಿ ಚಿಂತಾಮಣಿಂ ಶುಭಂ ॥ ೨೬ ॥

ಬಿಭ್ರಂತಂ ವಿವಿಧಾನ್ ಹಾರಾನ್ ರತ್ನಮಾಣಿಕ್ಯನಿರ್ಮಿತಾನ್ ।
ತಥಾ ಮಾಲಾ ರುಕ್ಮಜಾಶ್ಚ ಮುಕ್ತಾಹಾರಾನ್ ವಿಚಿತ್ರಿತಾನ್ ॥ ೨೭ ॥

---

೨೪. ಆ ಸಖಿಯರು ನವಿಲುಗರಿಯ ಬೀಸಣಿಗೆಯಿಂದಲೂ ಚಾಮರದಿಂದಲೂ ರಾಮನಿಗೆ ಬೀಸುತ್ತಿದ್ದರು. ರತ್ನ ಖಚಿತವಾದ ಚಿನ್ನದ ಕಾಲುಬಳೆಗಳನ್ನು ಹಾಕಿಕೊಂಡಿದ್ದನು.

೨೫. ರತ್ನದಿಂದಲೂ ಚಿನ್ನದಿಂದಲೂ ಕೂಡಿದ್ದ ಉಡಿದಾರವನ್ನು ನಡುವಿಗೆ ಹಾಕಿಕೊಂಡಿದ್ದನು. ಅದೇ ರೀತಿಯಾದ ಉತ್ತಮವಾದ ಕೈಬಳೆಗಳನ್ನೂ ಹಾಕಿಕೊಂಡಿದ್ದನು.

೨೬. ರತ್ನ ಭೂಷಿತವಾದ ಭುಜಕೀರ್ತಿಗಳನ್ನು ಧರಿಸಿಕೊಂಡಿದ್ದನು. ಕತ್ತಿನಲ್ಲಿ ಕೌಸ್ತುಭವನ್ನೂ ಹೃದಯದಮೇಲೆ ಚಿಂತಾಮಣಿಯನ್ನೂ ಧರಿಸಿದ್ದನು.

೨೭. ರತ್ನಗಳಿಂದಲೂ ಮಾಣಿಕ್ಯದಿಂದಲೂ ನಿರ್ಮಿತವಾದ ಬಗೆಬಗೆಯಾದ ಹಾರಗಳನ್ನು ಧರಿಸಿದ್ದನು. ಚಿನ್ನದ ಹಾರಗಳನ್ನೂ ಮುತ್ತಿನ ಹಾರಗಳನ್ನೂ ಕತ್ತಿನಲ್ಲಿ ಹಾಕಿಕೊಂಡಿದ್ದನು.

ತುಲಸೀಕಾಷ್ಠಹಾರಾಂಶ್ಚ ಪುಷ್ಪಹಾರಾನನೇಕಶಃ |
ಪ್ರವಾಳಮಣಿಹಾರಾಂಶ್ಚ ಶೃಂಖಲಾಃ ಕಾಂಚನೋದ್ಭವಾಃ || ೨೮ ||

ಪದಕಾನಿ ವಿಚಿತ್ರಾಣಿ ರತ್ನಮಾಣಿಕ್ಯವಂತ್ಯಪಿ |
ರಂಭಾಫಲಾಬ್ಜಸದೃಶಾನಲಂಕಾರಾನ್ವಿಚಿತ್ರಿತಾನ್ || ೨೯ ||

ರತ್ನಮಾಣಿಕ್ಯಸಂಯುಕ್ತಾನ್ ಮುಕುರೈರತಿಮಂಡಿತಾನ್ |
ನೀಲಮಾರಕತೈಶ್ಚಿತ್ರಾನ್ ರಾಮನಾಮಾಂಕಿತಾನಪಿ || ೩೦ ||

ಅಂಗುಲೀಷ್ವಪಿ ಬಿಭ್ರಂತಂ ಹಸ್ತಯೋರ್ಮುದ್ರಿಕಾಶ್ಶುಭಾಃ |
ರತ್ನಮಾಣಿಕ್ಯಮುಕ್ತಾಭಿಶ್ಚಿತ್ರಿತಾ ರುಕ್ಮನಿರ್ಮಿತಾಃ || ೩೧ ||

---

೨೮. ತುಲಸಿಯ ಮಣಿಯ ಹಾರಗಳನ್ನೂ ಹೂವಿನ ಹಾರಗಳನ್ನೂ ಹಾಕಿಕೊಂಡಿದ್ದನು. ಹವಳದ ಹಾರಗಳನ್ನೂ ಚಿನ್ನದ ಸರಪಣಿಗಳನ್ನೂ ಕತ್ತಿಗೆ ಹಾಕಿಕೊಂಡಿದ್ದನು.

೨೯. ರತ್ನಮಾಣಿಕ್ಯಗಳಿಂದ ಕೂಡಿದ ಅನೇಕ ಪದಕಗಳನ್ನು ಹಾಕಿಕೊಂಡಿದ್ದನು. ಬಾಳೆಯ ಹಣ್ಣಿನಂತಿರುವ ಮತ್ತು ಕಮಲದಂತಿರುವ ಕಾಯಿನ ಹಾರಗಳನ್ನು ಹಾಕಿಕೊಂಡಿದ್ದನು.

೩೦. ರತ್ನಮಾಣಿಕ್ಯಗಳಿಂದ ಕೂಡಿರುವ ಕನ್ನಡಿಗಳುಳ್ಳ ಹಾರಗಳನ್ನೂ ನೀಲಮರಕತಗಳಿಂದ ಚಿತ್ರಿತವಾಗಿರುವ ರಾಮ ರಾಮ ಎಂದು ಚಿತ್ರಿಸಿರುವ ಹಾರಗಳನ್ನೂ ಪದಕಗಳನ್ನೂ ಧರಿಸಿದ್ದನು.

೩೧. ಕೈಬೆರಳುಗಳಲ್ಲಿ ಒಳ್ಳೆಯ ಉಂಗುರಗಳನ್ನು ಇಟ್ಟುಕೊಂಡಿದ್ದನು. ಅವುಗಳು ಚಿನ್ನದಿಂದ ಮಾಡಲ್ಪಟ್ಟು ರತ್ನ ಮಾಣಿಕ್ಯ ಮುತ್ತುಗಳಿಂದ ಕೂಡಿದ್ದುವು.

ರಾಮನಾಮಾಂಕಿತಾಶ್ಚಾಪಿ ಪವಿತ್ರಾಣ್ಯುಜ್ಜ್ವಲಾನಿ ಹಿ ।
ರತ್ನಮುಕ್ತಾಹೇಮಮಯೇ ಕರ್ಣಯೋಃ ಕುಂಡಲೇ ವರೇ ॥ ೩೨ ॥

ಬಿಭ್ರಂತಂ ಮಹಿಸಾದೃಶ್ಯಾಲಂಕಾರಾಂಶ್ಚಾಪ್ಯನೇಕಶಃ ।
ಬಿಭ್ರಂತಂ ರವಿಸಾದೃಶ್ಯಂ ಮುಕುಟಂ ರತ್ನಚಿತ್ರಿತಂ ॥ ೩೩ ॥

ನಾನಾಮಣಿಸಮಾಯುಕ್ತಂ ಕಲಶೈರತಿಶೋಭಿತಂ ।
ಮುಕ್ತಾಪ್ರವಾಳವೈಡೂರ್ಯಯುಕ್ತಂ ಹೇಮಮಯಂ ವರಂ ॥ ೩೪ ॥

ಏವಂ ಗುಣವತೀ ರಾಮಂ ಕೋಟಿಸೂರ್ಯಸಮಪ್ರಭಂ ।
ಹೇಮವರ್ಣಂ ಮಹಾರಮ್ಯಂ ಕಂಜಪತ್ರಾಯತೇಕ್ಷಣಂ ॥ ೩೫ ॥

ಸೋಮಾನನಂ ಕಂಜಹಸ್ತಂ ದೃಷ್ಟ್ವಾ ತಂ ಪ್ರಣನಾಮ ಸಾ ।
ತಾಂ ಸಮುತ್ಥಾಪಯದ್ರಾಮಸ್ತಯಾ ಸಮ್ಯಕ್ಪ್ರಪೂಜಿತಃ ॥ ೩೬ ॥

---

೩೨. ಆ ಉಂಗುರಗಳು ರಾಮನಾಮದಿಂದ ಚಿತ್ರಿತವಾಗಿಯೂ, ಪವಿತ್ರವಾಗಿಯೂ ಇದ್ದುವು. ರತ್ನ ಮತ್ತು ಚಿನ್ನಗಳಿಂದ ಕೂಡಿದ ಕರ್ಣಾಭರಣಗಳನ್ನೂ ಹಾಕಿಕೊಂಡಿದ್ದನು.

೩೩. ಅಲ್ಲದೆ ರಾಜಯೋಗ್ಯವಾದ ಅನೇಕ ಅಲಂಕಾರಗಳನ್ನು ಧರಿಸಿಕೊಂಡಿದ್ದನು. ಸೂರ್ಯನಂತೆ ಪ್ರಕಾಶಮಾನವಾದ ರತ್ನಕಿರೀಟವನ್ನು ಧರಿಸಿದ್ದನು.

೩೪. ಆ ಕಿರೀಟವು ಬಗೆ ಬಗೆಯ ಮಣಿಗಳಿಂದ ಕೂಡಿಕೊಂಡಿದ್ದಿತು. ಕಲಶದಿಂದ ಶೋಭಾಯಮಾನವಾಗಿದ್ದಿತು. ಮತ್ತು ಆ ಕಿರೀಟವು ಮುತ್ತು ಹವಳ, ವೈಡೂರ್ಯಗಳಿಂದಲೂ ಚಿನ್ನದಿಂದಲೂ ಕೂಡಿದ್ದಿತು.

೩೫-೩೬. ಕೋಟಿಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ ಚಿನ್ನದಂತೆ ಬಣ್ಣವುಳ್ಳ ಕಮಲದಂತೆ ಸುಂದರವಾದ ಕಣ್ಣುಗಳುಳ್ಳ ಚಂದ್ರನಂತೆ ಮುಖವುಳ್ಳ, ಪದ್ಮದಂತೆ ಹಸ್ತವುಳ್ಳ ಆ ರಾಮನನ್ನು ಗುಣವತಿಯು ನೋಡಿ ಅವನಿಗೆ ನಮಸ್ಕರಿಸಿದಳು. ಆಗ ರಾಮನು ಅವಳನ್ನು ಎಬ್ಬಿಸಿದನು. ಆಕೆಯು ರಾಮನನ್ನು ಚೆನ್ನಾಗಿ ಪೂಜಿಸಿದಳು.

ತದ್ದತ್ತೈರುಪಹಾರಾದ್ಯೈಸ್ಸುಪ್ರೀತಸ್ತಾಂ ತದಾಬ್ರವೀತ್ ।
ವರಂ ವರಯ ಮಾಮದ್ಯ ಯತ್ತೇ ಮನಸಿ ವರ್ತತೇ ॥ ೩೭ ॥

ಇತಿ ರಾಮವಚಶ್ಶ್ರುತ್ವಾ ಸಾ ತುಷ್ಟಾ ರಾಮಮಬ್ರವೀತ್ ।
ರಾಮ ರಾಜೀವಪತ್ರಾಕ್ಷ ಯಥೇಮಾಸ್ತೇ ಸಹಸ್ರಶಃ ॥ ೩೮ ॥

ದಾಸ್ಯಸ್ಸಂತಿ ತಥಾ ಮಾಂ ತ್ವಮಂಗೀಕರ್ತುಮಿಹಾರ್ಹಸಿ ।
ಇತಿ ತದ್ವಚನಂ ಶ್ರುತ್ವಾ ರಾಘವಃ ಪ್ರಾಹ ಸಸ್ಮಿತಃ ॥ ೩೯ ॥

ಕಥಂ ತ್ವಂ ಬ್ರಾಹ್ಮಣೀ ಚೇತ್ಥಂ ವದಸ್ಯದ್ಯ ಶುಭವ್ರತೇ ।
ಮತ್ಸೇವಾಂ ಕರ್ತುಮಿಚ್ಛಾಸ್ತಿ ತವ ತರ್ಹಿ ವದಾಮ್ಯಹಂ ॥ ೪೦ ॥

---

೩೭. ಅವಳು ಕೊಟ್ಟ ತಿಂಡಿಯನ್ನು ತಿಂದು ಸಂತೋಷಗೊಂಡವನಾಗಿ ಆಕೆಯನ್ನು ಕುರಿತು ಎಲೈ ಗುಣವತಿಯೆ ! ನಿನ್ನ ಮನಸ್ಸಿನಲ್ಲಿರುವ ವರವನ್ನು ಕೇಳಿಕೋ ಎಂದನು.

೩೮. ರಾಮನು ಹೀಗೆಂದುದನ್ನು ಕೇಳಿ ಆಕೆಯು ಸಂತೋಷಗೊಂಡು ಎಲೈ ರಾಮನೇ ! ನಿನ್ನ ಬಳಿಯಲ್ಲಿ ಈ ಸಾವಿರಾರು ಜನ ದಾಸಿಯರು ಇರುವಂತೆ ನನ್ನನ್ನೂ ಒಬ್ಬಳನ್ನು ಅಂಗೀಕರಿಸು ಎಂದಳು.

೩೯–೪೦. ಆಕೆಯು ಹೇಳಿದುದನ್ನು ರಾಮನು ಕೇಳಿ ನಕ್ಕು ಎಲೈ ಮಂಗಳಾಂಗಿಯೇ ! ನೀನು ಬ್ರಾಹ್ಮಣರ ಹೆಂಗಸು. ನಾವು ಕ್ಷತ್ರಿಯರು. ನೀನು ನಮಗೆ ದಾಸಿಯಾಗಬಾರದು. ಆದರೂ ಈ ರೀತಿಯಾಗಿ ಹೇಳುತ್ತಿರುವೆಯಲ್ಲ ! ನನ್ನ ಸೇವೆಯನ್ನು ಮಾಡಲು ನಿನಗೆ ಇಚ್ಛೆಯಿದ್ದರೆ ಒಂದು ವಿಷಯವನ್ನು ಹೇಳುತ್ತೇನೆ ಕೇಳು.

ಶೃಣುಷ್ವ ತ್ವಂ ಗುಣವತಿ ಕೃಷ್ಣರೂಪಧರೋ ಹ್ಯಹಂ ।
ದ್ವಾರಿಕಾಯಾಂ ದ್ವಾಪರೇ ಹಿ ಭವಿಷ್ಯಾಮ್ಯನ್ಯ ಜನ್ಮನಿ ॥ ೪೧ ॥

ಭಜಿಷ್ಯಸಿ ತದಾ ಮಾಂ ತ್ವಂ ಸ್ತ್ರೀರೂಪೇಣ ನ ಸಂಶಯಃ ।
ಸತ್ರಾಜಿದ್ದೇವಶರ್ಮಾ ತೇ ಭವಿಷ್ಯತಿ ಪಿತಾ ಪುನಃ ॥ ೪೨ ॥

ಯಶ್ಚಂದ್ರನಾಮಾ ಸೋಽಕ್ರೂರೋ ಭವಿಷ್ಯತಿ ಸಖಾ ಮಮ ।
ಸತ್ಯಭಾಮೇತಿ ನಾಮ್ನಾ ತ್ವಂ ಭವಿಷ್ಯಸಿ ಪ್ರಿಯಾ ಮಮ ॥ ೪೩ ॥

ತದಾ ಕುರುಷ್ವ ದಾಸ್ಯಂ ಮೇ ಯತ್ತೇ ಮನಸಿ ವರ್ತತೇ ।
ಇತಿ ರಾಮವಚಃ ಶ್ರುತ್ವಾ ತುಷ್ಟಾ ಗುಣವತೀ ಮುಹುಃ ॥ ೪೪ ॥

---

೪೧. ಎಲೈ ಗುಣವತಿಯೇ ! ನಾನು ದ್ವಾಪರಯುಗದಲ್ಲಿ ದ್ವಾರಕೆಯಲ್ಲಿ ಕೃಷ್ಣರೂಪದಿಂದ ಅವತರಿಸುತ್ತೇನೆ. ಆಗ ನೀನು ಸ್ತ್ರೀರೂಪದಿಂದ ನನ್ನನ್ನು ಸೇವಿಸುತ್ತೀಯೆ. ಸಂಶಯವಿಲ್ಲ.

೪೨-೪೩. ನಿನ್ನ ತಂದೆಯಾದ ದೇವಶರ್ಮನು ಸತ್ರಾಜಿತನಾಗಿ ಹುಟ್ಟುವನು. ಆಗಲೂ ಅವನೇ ನಿನಗೆ ತಂದೆಯಾಗುವನು. ನಿನ್ನ ಗಂಡನಾದ ಚಂದ್ರಶರ್ಮನು ನನಗೆ ಸ್ನೇಹಿತನಾಗಿ ಅಕ್ರೂರನಾಗಿ ಹುಟ್ಟುವನು. ನೀನು ಸತ್ಯಭಾಮೆಯೆಂಬ ಹೆಸರನ್ನು ಹೊಂದಿ ನನಗೆ ಹೆಂಡತಿಯಾಗಿ ಆಗುತ್ತೀಯೆ.

೪೪. ಆಗ ನೀನು ನಿನ್ನ ಮನಸ್ಸಿನಲ್ಲಿರುವಂತೆ ನನಗೆ ಶುಶ್ರೂಷೆಯನ್ನು ಮಾಡು ಎಂದನು. ರಾಮನು ಹೀಗೆ ಹೇಳಿದುದನ್ನು ಕೇಳಿ ಆ ಗುಣವತಿಯು ಬಹುವಾಗಿ ಸಂತೋಷಗೊಂಡಳು.

ನತ್ವಾ ಶ್ರೀರಾಘವಂ ಸೀತಾಂ ಯಯೌ ಸ್ವೀಯಸ್ಥಲಂ ಪ್ರತಿ।
ಚೈತ್ರಸ್ನಾನಾನಂತರಂ ಹಿ ಹರಿದ್ವಾರಂ ಯಯೌ ಜನೈಃ ॥ ೪೫ ॥

ಆಯುಶ್ಶೇಷಂ ಸಮಾಪ್ಯಾಥ ಗಂಗಾಯಾಂ ಕುಣಪಂ ನಿಜಂ।
ಸಜ್ವರಂ ಸ್ನಾನಸಮಯೇ ತ್ಯಕ್ತ್ವಾ ನಾಕಂ ಚಿರಂ ಗತಾ ॥ ೪೬ ॥

ತತಃ ಕಾಲಾಂತರೇಣಾಸೀತ್ಸತ್ರಾಜಿತ್ತನಯಾ ಭುವಿ।
ಬಭೂವ ಪತ್ನೀ ಕೃಷ್ಣಸ್ಯ ದ್ವಾಪರೇ ದ್ವಾರಿಕಾಪುರಿ ॥ ೪೭ ॥

ಏಕದಾ ಪಿಂಗಲಾ ನಾಮ್ನೀ ವೇಶ್ಯಾ ರಾತ್ರೌ ವಿನಿದ್ರಿತಂ।
ಸೀತಯಾ ದಿವ್ಯಪರ್ಯಂಕೇ ಯಯೌ ಸಾ ರಾಘವಂ ರಹಃ ॥ ೪೮ ॥

---

೪೫. ಅನಂತರ ಆಕೆಯು ಆ ರಾಮನಿಗೂ, ಸೀತೆಗೂ ನಮಸ್ಕರಿಸಿ ತನ್ನ ಜಾಗಕ್ಕೆ ಹೊರಟುಹೋದಳು. ಚೈತ್ರಮಾಸದ ಸ್ನಾನವು ಮುಗಿದಮೇಲೆ ಆಕೆಯು ಜನಗಳೊಡನೆ ಹರಿದ್ವಾರಕ್ಕೆ ಹೊರಟುಹೋದಳು.

೪೬. ಅಲ್ಲಿ ಹೀಗಿರುತ್ತಿರಲು ಆಯುಸ್ಸು ಮುಗಿಯಿತು. ಒಂದುಸಾರಿ ಜ್ವರವು ಬಂದಿರಲು ಆಗ ಗಂಗೆಯುಲ್ಲಿ ಸ್ನಾನಮಾಡುತ್ತ ಅದರಲ್ಲಿಯೇ ಪ್ರಾಣವನ್ನು ಬಿಟ್ಟುಬಿಟ್ಟಳು. ಅನಂತರ ಸ್ವರ್ಗವನ್ನು ಹೊಂದಿದಳು.

೪೭. ಅನಂತರ ಕಾಲಾನುಕಾಲದಲ್ಲಿ ಭೂಲೋಕದಲ್ಲಿ ಸತ್ರಾಜಿತನ ಮಗಳಾಗಿ ಹುಟ್ಟಿದಳು. ಆಗ ದ್ವಾಪರಯುಗದಲ್ಲಿ ದ್ವಾರಕೆಯಲ್ಲಿ ಕೃಷ್ಣನಿಗೆ ಹೆಂಡತಿಯಾದಳು.

೪೮. ಒಂದುಸಾರಿ ಪಿಂಗಳಳೆಂಬ ಹೆಸರುಳ್ಳ ವೇಶ್ಯೆಯು ರಾಮನು ರಾತ್ರಿಯಲ್ಲಿ ಸೀತೆಯೊಡನೆ ಮಂಚದಮೇಲೆ ನಿದ್ರಿಸುತ್ತಿರುವಾಗ ಬಂದಳು.

ವಿಹಾಯ ನೂಪುರಾದೀನಿ ಸ್ವನವಂತಿ ಪದೋಽಶ್ಮನೈಃ ।
ಇತಸ್ತತೋ ನಿರೀಕ್ಷಂತೀ ದಿವ್ಯವಸ್ತ್ರಾದಿಭೂಷಿತಾ ॥ ೪೯ ॥

ಸೀತಾಭಯಾತ್ಪ್ರಕಂಪಂತೀ ಕಾಮಬಾಣಪ್ರಪೀಡಿತಾ ।
ಮಂಡಿತಾ ಪುಷ್ಪಮಾಲಾದ್ಯೈರ್ಭೂಷಣೈರತಿಶೋಭಿತಾ ॥ ೫೦ ॥

ಅಜ್ಞಾತಾ ದ್ವಾರಪಾಲೈಸ್ತೈ ನಿದ್ರಿತೈರ್ಮಂಚಕಂ ಯಯೌ ।
ಸ್ವಕರೇಣ ಪದಸ್ಪರ್ಶಂ ಕೃತ್ವಾ ರಾಮಂ ಪ್ರಬೋಧಯತ್ ॥ ೫೧ ॥

ತದಾ ಪ್ರಬುದ್ಧಶ್ಶ್ರೀರಾಮಸ್ತಾಂ ದದರ್ಶ ಪುರಃ ಸ್ಥಿತಾಂ ।
ಸಾ ಧೃತ್ವಾ ತತ್ಪದೇ ಗಾಢಂ ಪ್ರಾರ್ಥಯಾಮಾಸ ರಾಘವಂ ॥ ೫೨ ॥

೪೯–೫೦. ಸದ್ದಾಗದಂತೆ ಬರಲು ಕಾಲುಬಳೆಗಳನ್ನು ತೆಗೆದುಹಾಕಿದ್ದಳು. ದಿವ್ಯವಾದ ವಸ್ತ್ರಗಳನ್ನೂ, ಆಭರಣಗಳನ್ನೂ ತೊಟ್ಟಿದ್ದಳು. ಯಾರಾದರೂ ನೋಡಿ ಯಾರೆಂಬ ಭಯದಿಂದ ಅತ್ತಿತ್ತ ನೋಡುತ್ತ ಬರುತ್ತಿದ್ದಳು. ರಾಮನನ್ನು ನೋಡಿ ಕಾಮಬಾಣದಿಂದ ಬಾಧೆಗೊಂಡಿದ್ದಳು. ಆದರೆ ಸೀತೆಗೆ ಹೆದರಿಕೊಂಡು ನಡುಗುತ್ತಿದ್ದಳು. ಹೂವು ಗಂಧ ಮುಂತಾದುವನ್ನು ಧರಿಸಿಕೊಂಡು ರಮ್ಯಳಾಗಿದ್ದಳು.

೫೧. ದ್ವಾರಪಾಲಕರು ನಿದ್ದೆಮಾಡುತ್ತಿದ್ದಾಗ ಅವರಿಗೆ ತಿಳಿಯದಂತೆ ಆ ರಾಮನ ಮಂಚದ ಬಳಿಗೆ ಹೋದಳು. ಅಲ್ಲಿ ರಾಮನು ಮಲಗಿರಲು ತನ್ನ ಕೈಗಳಿಂದ ರಾಮನ ಕಾಲುಗಳನ್ನು ಮುಟ್ಟಿ ಆತನನ್ನು ಎಬ್ಬಿಸಿದಳು.

೫೨. ರಾಮನು ಎಚ್ಚರಗೊಂಡು ಎದುರಿಗೆ ನಿಂತಿರುವ ಆಕೆಯನ್ನು ನೋಡಿದನು. ಆಗ ಆಕೆಯು ರಾಮನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ರಾಮನನ್ನು ಇಂತೆಂದು ಪ್ರಾರ್ಥಿಸಿಕೊಂಡಳು.

ರಾಮ ರಾಜೀವಪತ್ರಾಕ್ಷ ಮಯಾ ತೇದ್ಯಾಪರಾಧಿತಂ ।
ತ್ವಂ ಕ್ಷಮಸ್ವ ಕೃಪಾಂ ಕೃತ್ವಾ ಮಯಿ ಚಾನುಗ್ರಹಂ ಕುರು ॥ ೫೩ ॥

ತತ್ತಸ್ಯಾ ವಚನಂ ಶ್ರುತ್ವಾ ಜ್ಞಾತ್ವಾ ಕಾಮಪ್ರಪೀಡಿತಾಂ ।
ತಾಂ ಸಮಾಶ್ವಾಸಿತುಂ ಪ್ರಾಹ ರಾಘವಃ ಕಂಜಲೋಚನಃ ॥ ೫೪ ॥

ಏಕಪತ್ನೀವ್ರತಂ ಮೇಽಸ್ಮಿನ್ಭವೇ ತ್ವಂ ವೇತ್ಸಿ ಪಿಂಗಲೇ ।
ಅತಸ್ತ್ವತ್ಕಾಮಪೂರ್ತ್ಯರ್ಥಂ ವದಾಮಿ ತಚ್ಛೃಣುಷ್ವ ಹಿ ॥ ೫೫ ॥

ಯಥಾಹಂ ಮಥುರಾಮಗ್ರೇ ವ್ರಜಾಚ್ಛ್ರೀಕೃಷ್ಣರೂಪಧೃಕ್ ।
ಯಾಸ್ಯಾಮಿ ಮಾತುಲಂ ಕಂಸಂ ಹತ್ವಾ ಸ್ಥಾಸ್ಯಾಮಿ ತತ್ಪುರೀಂ ॥ ೫೬ ॥

---

೫೩. ಎಲೈ ರಾಜೀವದಂತೆ ಕಣ್ಣುಳ್ಳ ರಾಮನೆ! ನಾನು ಈಗ ನಿನಗೆ ಅಪರಾಧವನ್ನು ಮಾಡಿದ್ದೇನೆ. ನೀನು ಅದನ್ನು ಕೃಪೆಯಿಂದ ಕ್ಷಮಿಸಿ ನನ್ನಲ್ಲಿ ಅನುಗ್ರಹವನ್ನು ಮಾಡು.

೫೪. ರಾಮನು ಆಕೆಯ ಮಾತನ್ನು ಕೇಳಿ ಆಕೆಯು ಕಾಮಬಾಧೆಗಳಿಗೊಳಗಾಗಿರುವುದನ್ನು ತಿಳಿದು ಆಕೆಯನ್ನು ಸಮಾಧಾನಪಡಿಸಲು ಆಕೆಗೆ ಇಂತೆಂದು ಹೇಳಿದನು.

೫೫. ಎಲೈ ಪಿಂಗಳೆಯೇ! ನಾನು ಈ ಜನ್ಮದಲ್ಲಿ ಏಕಪತ್ನೀವ್ರತದಲ್ಲಿದ್ದೇನೆ ಎಂಬುದನ್ನು ತಿಳಿದಿದ್ದೀಯೆ. ಆದ್ದರಿಂದ ಈಗ ನಿನ್ನ ಕಾಮವನ್ನು ಪೂರ್ಣಮಾಡಲಾರೆನು. ಅದನ್ನು ಪೂರ್ಣಮಾಡಲು ಒಂದು ಮಾತನ್ನು ಹೇಳುತ್ತೇನೆ, ಕೇಳು.

೫೬. ನಾನು ದ್ವಾಪರಯುಗದಲ್ಲಿ ಮಥುರೆಯಲ್ಲಿ ಕೃಷ್ಣನಾಗಿ ಹುಟ್ಟಿ ಗೋಕುಲದಲ್ಲಿ ಬೆಳೆದು ಮಾವನಾದ ಕಂಸನನ್ನು ಕೊಲ್ಲಲು ಆ ಮಥುರೆಗೆ ಹೋಗುತ್ತೇನೆ. ಆಗ ಅವನನ್ನು ಕೊಂದು ಆ ಊರಿನಲ್ಲಿಯೇ ನೆಲಸುತ್ತೇನೆ.

ತದಾ ಭಜಿಷ್ಯಸಿ ತ್ವಂ ಮಾಂ ಕುಬ್ಜಾರೂಪೇಣ ಪಿಂಗಲೇ ।
ಗಚ್ಛ ದಾಸೀಸ್ವರೂಪೇಣ ತಿಷ್ಠ ತ್ವಂ ಕಂಸವೇಶ್ಮನಿ ॥ ೫೭ ॥

ಆಯುಃಕ್ಷಯೇ ತ್ವಿಮಂ ದೇಹಂ ವಿಸೃಜ್ಯ ಬಹುಭುಕ್ತಕಂ ।
ಇತ್ಯುಕ್ತ್ವಾ ಪಿಂಗಲಾಂ ರಾಮೋ ದದಾವಾಜ್ಞಾಂ ಭಯಾತ್ ಸ್ತ್ರಿಯಃ॥೫೮॥

ಶಿಕ್ಷಯಾಮಾಸ ದ್ವಾರಸ್ಥಾನ್ ದಾಸಾನ್ ದಾಸೀರ್ವಿನಿದ್ರಿತಾಃ ।
ತತಸ್ಸೀತಾಂ ಪ್ರಬೋಧ್ಯಾಥ ವೇಶ್ಯಾವೃತ್ತಂ ನ್ಯವೇದಯತ್ ॥ ೫೯ ॥

ತಚ್ಛ್ರುತ್ವಾ ಜಾನಕೀ ರುಷ್ಟಾ ತ್ಯಕ್ತ್ವಾ ಪರ್ಯಂಕಮುತ್ತಮಂ ।
ರಾಘವಂ ಪ್ರಾಹ ಸಕ್ರೋಧಾ ಕಥಂ ನಾಹಂ ಪ್ರಬೋಧಿತಾ ॥ ೬೦ ॥

---

೫೭. ಆಗ ನೀನು ಕುಬ್ಜೆ (ಗುಜ್ಜಾರಿ)ಯ ರೂಪದಿಂದ ನನ್ನನ್ನು ಹೊಂದಿ ಸುಖಿಸುತ್ತೀಯೆ. ಆದ್ದರಿಂದ ನೀನು ಹೋಗಿ ಕಂಸನ ಮನೆಯಲ್ಲಿ ದಾಸಿಯಾಗಿದ್ದುಕೊಂಡಿರು.

೫೮. ನೀನು ಬಹುವಾದ ಜನರು ಅನುಭವಿಸಿರುವ ಈ ನಿನ್ನ ದೇಹವನ್ನು ಆಯುಸ್ಸಿನ ಅಂತ್ಯದಲ್ಲಿ ಬಿಟ್ಟು ಸ್ವರ್ಗಸುಖವನ್ನು ಅನುಭವಿಸುತ್ತಿದ್ದು ಈ ರೀತಿಯಾಗಿ ಹುಟ್ಟುತ್ತೀಯೆ. ಎಂಬುದಾಗಿ ಹೇಳಿ ಹೆದರುತ್ತಿರುವ ಆಕೆಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿದನು.

೫೯. ಅನಂತರ ರಾಮನು ತನ್ನ ಕಾವಲುಗಾರರನ್ನೂ ದಾಸಿಯರನ್ನೂ ನಿದ್ರಿಸುತ್ತಿದುದಕ್ಕೋಸ್ಕರ ಶಿಕ್ಷಿಸಿದನು. ಅನಂತರ ಸೀತೆಯನ್ನು ಎಬ್ಬಿಸಿ ಈ ಸೂಳೆಯ ಸಮಾಚಾರವನ್ನು ವಿಸ್ತಾರವಾಗಿ ಹೇಳಿದನು.

೬೦. ಇದನ್ನು ಕೇಳಿ ಜಾನಕಿಯು ಕೋಪಗೊಂಡು ಮಂಚದಿಂದ ಕೆಳಗಿಳಿದು ನಿಂತುಕೊಂಡಳು. ಮತ್ತು ನನ್ನನ್ನೇಕೆ ಎಬ್ಬಿಸಲಿಲ್ಲವೆಂದು ಕೋಪದಿಂದ ಕೇಳಿದಳು.

ತೇದೈವಾದ್ಯ ಮಯಾ ಜ್ಞಾತಮೇಕಪತ್ನೀವ್ರತಂ ಮೃಷಾ ।
ಭುಕ್ತ್ವಾದೌ ಪಿಂಗಲಾಂ ತೂಷ್ಣೀಂ ತ್ವಯಾಹಂ ಬೋಧಿತಾ ತತಃ ॥ ೬೧ ॥

ತಾಂ ವಿಸೃಜ್ಯ ಚಿರಾದದ್ಯ ಜ್ಞಾತಂ ತೇ ಚರಿತಂ ಮಯಾ ।
ಮೃಷಾ ತ್ವಯಾ ಪ್ರತಿಜ್ಞಾತಂ ಪುರಾ ವ್ಯಾಸಮುನೇಃ ಪುರಃ ॥ ೬೨ ॥

ಏಕಪತ್ನೀವ್ರತಂ ಮೇಽಸ್ತಿ ಕೌಸಲ್ಯಾಸದೃಶೀ ಮಮ ।
ಅನ್ಯಾ ಸ್ತ್ರೀತಿ ಮೃಷಾ ವಾಕ್ಯಂ ಕಥಸೇ ತ್ವಂ ಪುನಃ ಪುನಃ ॥ ೬೩ ॥

ಕ್ವ ಗತಂ ತದ್ವಚಸ್ತೇಽದ್ಯ ಕ್ವ ಗತಂ ತದ್ವ್ರತಂ ತವ ।
ಅದ್ಯೈವ ಜೀವಿತಂ ಸ್ವೀಯಂ ತ್ಯಜಾಮಿ ಸರಯೂಜಲೇ ॥ ೬೪ ॥

---

೬೧. ಮತ್ತು ಇದರಿಂದಲೇ ಈಗ ನಿನ್ನ ಏಕಪತ್ನೀವ್ರತವು ಸುಳ್ಳೆಂದು ತಿಳಿಯಿತು. ನೀನು ಆ ಪಿಂಗಳೆಯಲ್ಲಿ ಗುಟ್ಟಾಗಿ ರಮಿಸಿ ಆಕೆಯು ಹೋದಮೇಲೆ ನನ್ನನ್ನು ಎಚ್ಚರಗೊಳಿಸಿದ್ದೀಯೆ.

೬೨. ನೀನು ಅವಳನ್ನು ಕಳುಹಿಸಿದ ಎಷ್ಟೋ ಹೊತ್ತಿನಮೇಲೆ ನನ್ನನ್ನು ಎಬ್ಬಿಸಿದುದರಿಂದ ನಿನ್ನ ಚರಿತ್ರೆಯು ಗೊತ್ತಾಯಿತು. ನೀನು ವ್ಯಾಸಮುನಿಯ ಎದುರಿಗೆ ಪೂರ್ವದಲ್ಲಿ ಪ್ರತಿಜ್ಞೆಮಾಡಿದುದು ಸುಳ್ಳಾಯಿತು.

೬೩. "ನಾನು ಏಕಪತ್ನೀವ್ರತವನ್ನು ಕೈಗೊಂಡಿದ್ದೇನೆ. ಸೀತೆಯ ಹೊರತು ಮಿಕ್ಕ ಹೆಂಗಸರು ನನಗೆ ಕೌಸಲ್ಯೆಗೆ ಸಮಾನರು." ಎಂಬ ಸುಳ್ಳು ಮಾತನ್ನು ನೀನು ಬಾರಿ ಬಾರಿಗೂ ಹೇಳುತ್ತಲೇ ಇದ್ದೀಯೆ.

೬೪. ನಿನ್ನ ಆ ಮಾತು ಎಲ್ಲಿಗೆ ಹೋಯಿತು? ಆ ಏಕಪತ್ನೀವ್ರತವು ತಾನೇ ಎಲ್ಲಿಗೆ ಹೋಯಿತು? ನಾನು ಇದನ್ನು ಸಹಿಸಲಾರೆ. ಸರಯೂ ನದಿಯ ನೀರಿನ ಪ್ರವಾಹದಲ್ಲಿ ಈಗಲೇ ಬಿದ್ದು ಪ್ರಾಣಗಳನ್ನು ಕಳೆದುಕೊಳ್ಳುತ್ತೇನೆ.

ವೇಶ್ಯಾಯಾಃ ಪೃಷ್ಠಸಂಲಗ್ನಾಂ ಶಯ್ಯಾಂ ನಾದ್ಯಂ ಸ್ಪೃಶಾಮ್ಯಹಂ ।
ವೇಶ್ಯಾಸಕ್ತಂ ಸ್ವಾಮಿನಂ ತ್ವಾಂ ದೃಷ್ಟ್ವಾ ದ್ವೇಷೋ ಭವೇತ್ತ್ವಯಿ ॥೬೫॥

ಮೃತಾಯಾಂ ಮಯಿ ಯದ್ಭಾವ್ಯಂ ವೇಶ್ಯಾಸಕ್ತಸ್ಯ ತೇ ಭವೇತ್ ।
ವೇಶ್ಯಾಸಕ್ತಪಾರ್ಥಿವಸ್ಯ ಚಿರಂ ರಾಜ್ಯಂ ನ ತಿಷ್ಠತಿ ॥ ೬೬ ॥

ಇತ್ಯುಕ್ತ್ವಾ ರಾಘವಂ ನತ್ವಾ ದೇಹತ್ಯಾಗಾರ್ಥಮುದ್ಯತಾ ।
ಯಯೌ ವೇಗೇನ ಸರಯೂಂ ವಸ್ತ್ರಗೇಹಾತ್ತಟಿತ್ಪ್ರಭಾ ॥ ೬೭ ॥

ಗಚ್ಛಂತೀಂ ರಾಘವೋ ದೃಷ್ಟ್ವಾ ಮುಕ್ತಕಚ್ಛಃ ಪ್ರದುದ್ರುವೇ ।
ಸಂಭ್ರಮಾಜ್ಜಾನಕೀಂ ದೃತ್ವಾ ಭುಜಾಭ್ಯಾಂ ಸೈಕತೇಽಮಲೇ ॥ ೬೮ ॥

---

೬೫. ವೇಶ್ಯೆಯು ಮಲಗಿದ್ದ ಈ ಹಾಸಿಗೆಯನ್ನು ಮತ್ತೆ ನಾನು ಮುಟ್ಟುವುದಿಲ್ಲ. ನೀನು ನನಗೆ ಸ್ವಾಮಿಯಾದರೂ ವೇಶ್ಯೆಯಲ್ಲಿ ರಮಿಸಿದುದರಿಂದ ನಿನ್ನನ್ನು ನೋಡಿ ನನಗೆ ದ್ವೇಷವು ಹುಟ್ಟುತ್ತಿರುವುದು.

೬೬. ನಾನು ಸತ್ತಮೇಲೆ ವೇಶ್ಯಾಸಕ್ತನಾಗಿರುವವನಿಗೆ ಏನೇನಾಗಬೇಕೋ ಅದೆಲ್ಲವೂ ನಿನಗೆ ಆಗುತ್ತವೆ. ವೇಶ್ಯಾಸಕ್ತನಾದ ರಾಜನಿಗೆ ರಾಜ್ಯವು ಬಹುಕಾಲ ನಿಲ್ಲುವುದಿಲ್ಲ.

೬೭. ಹೀಗೆಂಬುದಾಗಿ ಆ ಸೀತೆಯು ರಾಮನಿಗೆ ಹೇಳಿ ದೇಹವನ್ನು ಬಿಡಲು ನಿಶ್ಚಯಿಸಿ ಗುಡಾರದಿಂದ ಸರಯೂ ನದಿಗೆ ಮಿಂಚಿನಂತೆ ಜಾಗ್ರತೆಯಾಗಿ ಹೊರಟಳು.

೬೮. ಸೀತೆಯು ಹೋಗುತ್ತಿರುವುದನ್ನು ನೋಡಿ ರಾಮನು ಕಚ್ಚೆಯು ಬಿಚ್ಚಿ ಹೋಗಿದ್ದರೂ ಆ ಕಚ್ಚೆಯನ್ನು ಕಟ್ಟಿಕೊಳ್ಳದೇನೆ ಆಕೆಯ ಹಿಂದೆ ಓಡಿದನು. ಜಾಗ್ರತೆಯಾಗಿ ಹೋಗಿ ಅವಸರದಿಂದ ಆಕೆಯನ್ನು ಆ ಸರಯೂನದಿಯ ಮರಳಿನಮೇಲೆ ತಬ್ಬಿಹಿಡಿದುಕೊಂಡನು.

ಅಬ್ರವೀನ್ಮಧುರಂ ವಾಕ್ಯಂ ಮಾ ರುಷ್ಟ ತ್ವಂ ವಿದೇಹಜೇ ।
ಶೃಣುಷ್ವ ವಚನಂ ಮೇ ತ್ವಂ ದಿವ್ಯಂ ತೇ ಪ್ರವದಾಮ್ಯಹಂ ॥ ೧೯ ॥

ಮಯಿ ತೇ ಶಪಥೈರದ್ಯ ಪ್ರತ್ಯಯೋ ನ ಭವಿಷ್ಯತಿ ।
ದುರ್ಘಟಂ ಯದ್ಬ್ರವೀಷಿ ತ್ವಂ ತದ್ದಿವ್ಯಂ ಪ್ರವದಾಮ್ಯಹಂ ॥ ೨೦ ॥

ವದ ಶೀಘ್ರಂ ಜನಕಜೇ ಮಾ ಕ್ರೋಧಂ ಕುರು ಭಾಮಿನಿ ।
ಇತಿ ರಾಮವಚಃ ಶ್ರುತ್ವಾ ಜಾನಕೀ ಪ್ರಾಹ ರಾಘವಂ ॥ ೨೧ ॥

॥ ಜಾನಕ್ಯುವಾಚ ॥

ರಾಮ ಬ್ರೂಯಾಮಹಂ ಕಿಂ ತೇ ಯೇನ ದಿವ್ಯಂ ದದಾಸಿ ಮೇ ।
ಅನಲಸ್ತ್ವನ್ಮುಖೋದ್ಭೂತೋ ನಯನೇ ಶಶಿಭಾಸ್ಕರೌ ॥ ೨೨ ॥

---

೧೯. ಮಧುರವಾದ ಮಾತುಗಳನ್ನಾಡುತ್ತ ಎಲೈ ವಿದೇಹಜೆಯೇ! ಕೋಪಮಾಡಿಕೊಳ್ಳಬೇಡ. ನನ್ನ ಮಾತನ್ನು ಕೇಳು. ನಾನು ನಿನಗೆ ಪ್ರಮಾಣಗಳನ್ನು ಮಾಡಿ ಹೇಳುತ್ತೇನೆ ಕೇಳು.

೨೦. ನಾನು ಮಾಡತಕ್ಕ ಪ್ರಮಾಣಗಳಿಂದ ನಿನಗೆ ನಂಬಿಕೆ ಬಾರದಿದ್ದರೆ ನೀನು ಹೇಳತಕ್ಕ ಬಹುಕಷ್ಟವಾದ ಪ್ರಮಾಣಗಳನ್ನಾದರೂ ಮಾಡಿ ತೋರಿಸುತ್ತೇನೆ.

೨೧. ಏನುಮಾಡಬೇಕೆಂಬುದನ್ನು ಹೇಳು. ಕೋಪವನ್ನು ಮಾಡಿಕೊಳ್ಳಬೇಡ. ಎಂದೆನ್ನಲು ರಾಮನ ಈ ಮಾತುಗಳನ್ನು ಕೇಳಿ ಜಾನಕಿಯು ಅವನನು ಕುರಿತು ಇಂತೆಂದಳು.

೨೨. ಜಾನಕಿಯು ಹೇಳಿದಳು–ಎಲೈ ರಾಮನೇ! ನಾನು ನಿನಗೆ ಯಾವುದನ್ನು ಹೇಳಲಿ! ಯಾವುದರಿಂದ ನೀನು ನನಗೆ ಪ್ರಮಾಣವನ್ನು ಮಾಡಿ ತೋರಿಸುತ್ತೀಯೆ! ಅಗ್ನಿಯು ನಿನ್ನ ಮುಖದಿಂದ ಹುಟ್ಟಿದವನು. ಸೂರ್ಯಚಂದ್ರರು ನಿನ್ನ ಕಣ್ಣುಗಳಾಗಿದ್ದಾರೆ.

ವಾಸಸ್ತೇ ಜಲಧೌ ರಾಮ ಪೃಥ್ವೀಯಂ ವಿಧೃತಾ ತ್ವಯಾ ।
ಶೇಷಸ್ತಲ್ಪಸ್ತ್ವನೈವಾಯಂ ಲಕ್ಷ್ಮಣಸ್ತಿಷ್ಠತೇ ಬಹಿಃ ॥ ೭೩ ॥

ಶಸ್ತ್ರಾಣಿ ತ್ವನ್ಮುಖೋದ್ಭೂತಾನ್ಯಾಸನ್ಸರ್ವಾಣ್ಯಸಂಶಯಃ ।
ಯದ್ಯತ್ಪಶ್ಯಾಮಿ ತತ್ಸರ್ವಂ ತವ ರೂಪಂ ನ ಸಂಶಯಃ ॥ ೭೪ ॥

ನ ದುರ್ಲಭಂ ತೇ ದಿವ್ಯಾರ್ಥಂ ಕಿಂಚಿತ್ಪಶ್ಯಾಮಿ ರಾಘವ ।
ಕಿಂ ಬ್ರೂಯಾಮಧುನಾ ತೇತ್ರ ಯೇನ ಮೇ ಪ್ರತ್ಯಯೋ ಭವೇತ್ ॥ ೭೫ ॥

ಏಕಮೇವಾಸ್ತಿ ಜಾನೇಽಹಂ ತತ್ಕುರುಷ್ವ ರಘೂತ್ತಮ ।
ಇದಾನೀಮೇವ ಸ್ವಗುರುಂ ಸಮಾಹೂಯ ರಘೂತ್ತಮ ॥ ೭೬ ॥

---

೭೩. ನಿನ್ನ ವಾಸವು ನೀರಿನಲ್ಲಿಯೇ ಆಗಿದೆ. ಈ ಭೂಮಿಯನ್ನೇ ನೀನು ಧರಿಸಿದ್ದೀಯೆ. ಮತ್ತೂ ಉದ್ಧರಿಸಿದ್ದೀಯೆ. ಈ ಶೇಷನೇ ನಿನಗೆ ಹಾಸಿಗೆಯು. ಆ ಶೇಷಸ್ವರೂಪನಾದ ಲಕ್ಷ್ಮಣನೇ ಹೊರಗಿದ್ದಾನಲ್ಲವೆ !

೭೪. ಸಕಲ ಶಾಸ್ತ್ರಗಳೂ ನಿನ್ನ ಬಾಯಿಂದಲೇ ಹುಟ್ಟಿದುವು. ಇದರಲ್ಲಿ ಸಂಶಯವಿಲ್ಲ. ನಮಗೆ ಯಾವು ಯಾವುವು ಕಾಣುತ್ತವೆಯೋ ಅವೆಲ್ಲವೂ ನಿನ್ನ ರೂಪಗಳೇ. ಇದರಲ್ಲಿ ಯಾವ ಸಂಶಯವೂ ಇಲ್ಲ.

೭೫. ಯಾವ ದಿವ್ಯವಾದ ಪ್ರಮಾಣಗಳೂ ನಿನಗೆ ಅಸಾಧ್ಯವಾದುವಲ್ಲ. ಎಂದು ಕಾಣುತ್ತವೆ. ನನಗೆ ನಂಬಿಕೆಯನ್ನುಂಟುಮಾಡುವ ಯಾವ ಪ್ರಮಾಣವೂ ನಿನ್ನಲ್ಲಿ ನನಗೆ ತೋರುವುದಿಲ್ಲ.

೭೬. ಆದರೆ ಒಂದೇ ಒಂದು ಪ್ರಮಾಣವು ಇರುತ್ತದೆ. ಅದು ಸರಿಯೆಂದು ನನಗೆ ತೋರುತ್ತದೆ. ಅದನ್ನು ನೀನು ಮಾಡು. ಅದೇನೆಂದರೆ " ಈಗಲೇ ನಿನ್ನ ಗುರುವನ್ನು ಕರೆಸು.

ಪದಯೋಸ್ತಸ್ಯ ಶಪಥಂ ಕೃತ್ವಾ ತೇ ಪ್ರತ್ಯಯೋ ಮಮ ।
ಭವಿಷ್ಯಸಿ ನ ಸಂದೇಹಸ್ತಂ ಕುರುಷ್ವ ರಘೂತ್ತಮ ॥ ೭೭ ॥

ಇತಿ ಸೀತಾವಚಃ ಶ್ರುತ್ವಾ ಪ್ರಹಸ್ಯ ರಘುನಂದನಃ ।
ದಾಸ್ಯಾ ಸೌಮಿತ್ರಿಮಾಹೂಯ ವಸಿಷ್ಠಂ ಪ್ರೇಷಯತ್ತದಾ ॥ ೭೮ ॥

ಲಕ್ಷ್ಮಣಶ್ಶಿಬಿಕಾರೂಢಃ ಪುರದ್ವಾರಾಂತಿಕಂ ಯಯೌ ।
ರಾಮವಾಕ್ಯಾದ್ದ್ವಾರಪೋಽಪಿ ದ್ವಾರಮುದ್ಘಾಟಯತ್ತದಾ ॥ ೭೯ ॥

ಗತ್ವಾ ಪುರ್ಯಾಂ ಲಕ್ಷ್ಮಣಸ್ಸ ಗುರೋರ್ದ್ವಾರಿ ಸ್ಥಿರೋಽಭವತ್ ।
ವಸಿಷ್ಠದ್ವಾರಪೋ ದಾಸ್ಯಾ ವಸಿಷ್ಠಾಯ ನ್ಯವೇದಯತ್ ॥ ೮೦ ॥

---

೭೭. ಅವನ ಕಾಲನ್ನು ಮುಟ್ಟಿ ಪ್ರಮಾಣಮಾಡಿದರೆ ನನಗೆ ನಂಬುಗೆಯುಂಟಾಗುತ್ತದೆ. ಅದರಲ್ಲಿ ಸಂದೇಹವಿಲ್ಲ. ಆ ರೀತಿಯಾಗಿ ನೀನು ಮಾಡು" ಎಂದಳು.

೭೮. ರಾಮನು ಈ ಮಾತನ್ನು ಕೇಳಿ ನಕ್ಕು ದಾಸಿಯರನ್ನು ಕಳುಹಿಸಿ ಲಕ್ಷ್ಮಣನನ್ನು ಬರಮಾಡಿ ವಸಿಷ್ಠನನ್ನು ಕರೆತರುವಂತೆ ಹೇಳಿ ಕಳುಹಿಸಿದನು.

೭೯. ಲಕ್ಷ್ಮಣನು ಅಂತೆಯೇ ಆಗಲೆಂದು ಪಲ್ಲಕ್ಕಿಯನ್ನು ತೆಗೆಯಿಸಿಕೊಂಡು ಅರಮನೆಯ ಹೆಬ್ಬಾಗಿಲಿನ ಬಳಿಗೆ ಹೋದನು. ರಾಮನ ಮಾತಿನಂತೆ ಬಾಗಿಲುಕಾಯುವವನು ಬಾಗಿಲನ್ನು ತೆಗೆದನು.

೮೦. ಲಕ್ಷ್ಮಣನು ಪಟ್ಟಣದಲ್ಲಿ ಉದ್ದಕ್ಕೂ ಹೋಗಿ ಗುರುವಿನ ಮನೆಯ ಬಾಗಿಲಿನಲ್ಲಿ ನಿಂತುಕೊಂಡನು. ಆಗ ವಸಿಷ್ಠನ ಮನೆಯ ಬಾಗಿಲುಕಾಯುವವನು ದಾಸಿಗೆ ಹೇಳಿ ವಸಿಷ್ಠನಿಗೆ ಲಕ್ಷ್ಮಣನು ಬಂದಿರುವುದನ್ನು ಹೇಳಿಸಿದನು.

ನಿಶೀಥೇ ಲಕ್ಷ್ಮಣಂ ದ್ವಾರಮಾಗತಂ ತ್ವಿತಿಸಂಭ್ರಮಾತ್ ।
ಅರುಂಧತ್ಯಾ ವಸಿಷ್ಠೋಽಪಿ ತತ್ ಶ್ರುತ್ವಾ ವಿಹ್ವಲೋಽಭವತ್ ॥ ೭೧ ॥

ನಿಶೀಥೇ ಲಕ್ಷ್ಮಣಶ್ಚಾತ್ರ ಕಿಮರ್ಥಂ ಮಾಂ ಸಮಾಗತಃ ।
ಏವಂ ವಿಹ್ವಲಚಿತ್ತಸ್ಸಃ ಸಮಾಹೂಯಾಥ ಲಕ್ಷ್ಮಣಂ ॥ ೭೨ ॥

ಪಪ್ರಚ್ಛ ಗಮನಸ್ಯಾಥ ಕಾರಣಂ ಮುನಿಸತ್ತಮಃ ।
ತಂ ನತ್ವಾ ಲಕ್ಷ್ಮಣಃ ಪ್ರಾಹ ರಾಮೇಣ ಸ್ಮಾರಿತೋಽಸಿ ಹಿ ॥ ೭೩ ॥

ಕಾರಣಂ ನಾತ್ರ ಜಾನಾಮಿ ಸಮುತ್ತಿಷ್ಠಾಧುನೈವ ಹಿ ।
ಶಿಬಿಕಾ ತಿಷ್ಠಣೇ ದ್ವಾರಾದ್ಬಹಿಸ್ತೇ ಮುನಿಸತ್ತಮ ॥ ೭೪ ॥

---

೭೧. ಅರ್ಧರಾತ್ರಿಯಲ್ಲಿ ಲಕ್ಷ್ಮಣನು ತನ್ನ ಮನೆಯ ಬಾಗಿಲಿಗೆ ಬಂದುದನ್ನು ಕೇಳಿ ವಸಿಷ್ಠನು ಕಳವಳಗೊಂಡನು. ಅರುಂಧತಿಯೂ ಕೂಡ ಕಳವಳ ಗೊಂಡಳು.

೭೨. ಈ ಅರ್ಧರಾತ್ರೆಯಲ್ಲಿ ಲಕ್ಷ್ಮಣನು ನನ್ನ ಬಳಿಗೆ ಬರಲು ಕಾರಣ ವೇನು ? ಎಂದು ಯೋಚಿಸುತ್ತಾ ವಸಿಷ್ಠನು ಲಕ್ಷ್ಮಣನನ್ನು ಒಳಕ್ಕೆ ಕರೆದನು.

೭೩. ಅವನು ಬಂದುದಕ್ಕೆ ಕಾರಣವೇನೆಂದು ಕೇಳಿದನು. ಆಗ ಲಕ್ಷ್ಮಣನು ವಸಿಷ್ಠನಿಗೆ ನಮಸ್ಕರಿಸಿ ರಾಮನು ನಿನ್ನನ್ನು ಜ್ಞಾಪಿಸಿಕೊಂಡನು. ಅಂತೆಯೇ ನಿನ್ನನ್ನು ಕರೆದುಕೊಂಡು ಹೋಗಲು ಬಂದೆನು.

೭೪. ಇದರಲ್ಲೇನು ಕಾರಣವೋ ನನಗೆ ತಿಳಿಯದು. ಈಗಲೇ ಎದ್ದು ಬರಬೇಕು ! ಬಾಗಿಲಿನ ಹೊರಗೆ ಪಲ್ಲಕ್ಕಿಯು ನಿಂತಿರುವುದು ಜಾಗ್ರತೆಮಾಡು ಎಂದನು.

ಇತಿ ಶ್ರುತ್ವಾ ರಾಮವಾಕ್ಯಾದರುಂಧತ್ಯಾತಿಪ್ರಾರ್ಥಿತಃ ।
ಶಿಬಿಕಾಯಾಮರುಂಧತ್ಯಾ ಸ್ಥಿತ್ವಾ ಶೀಘ್ರಂ ಯಯೌ ಗುರುಃ ॥ ೮೫ ॥

ತತ್ಪೃಷ್ಠೇ ಶಿಬಿಕಾಸಂಸ್ಥಸ್ಸೌಮಿತ್ರಿಸ್ತ್ವರಿತೋ ಯಯೌ ।
ರತ್ನದೀಪಪ್ರಕಾಶೈಶ್ಚ ವೇಷ್ಟಿತೋ ವೇತ್ರಪಾಣಿಭಿಃ ॥ ೮೬ ॥

ಸಮಾಗತಂ ಗುರುಂ ಜ್ಞಾತ್ವಾ ಪ್ರತ್ಯುದ್ಗಮ್ಯ ರಘೂತ್ತಮಃ ।
ದತ್ವಾಸನಂ ವಸಿಷ್ಠಾಯ ಸೀತಯಾ ಪ್ರಣನಾಮ ಸಃ ॥ ೮೭ ॥

ಕೃತ್ವಾ ಪೂಜಾಂ ಸವಿಸ್ತಾರಂ ವಸ್ತ್ರೈರಾಭರಣಾದಿಭಿಃ ।
ಕಥಯಾಮಾಸ ಸಕಲಂ ಪಿಂಗಲಾವೃತ್ತಮಾದರಾತ್ ॥ ೮೮ ॥

---

೮೫. ಲಕ್ಷ್ಮಣನು ಹೇಳಿದ ರಾಮನ ಈ ಮಾತನ್ನು ಕೇಳಿ ಅರುಂಧತಿಯು ತಾನೂ ಬರಬೇಕೆಂದು ಹೇಳಲು ವಸಿಷ್ಠನು ಪಲ್ಲಕ್ಕಿಯಲ್ಲಿ ಅರುಂಧತಿಯೊಡನೆ ಕುಳಿತುಕೊಂಡನು. ಇಬ್ಬರೂ ಜಾಗ್ರತೆಯಾಗಿಯೇ ಹೋದರು.

೮೬. ಆ ವಸಿಷ್ಠನ ಪಲ್ಲಕ್ಕಿಯ ಹಿಂದೆಯೇ ಲಕ್ಷ್ಮಣನೂ ಪಲ್ಲಕ್ಕಿಯಲ್ಲಿ ಕುಳಿತು ಜಾಗ್ರತೆಯಾಗಿ ಹೋದನು. ಆಗ ಸುತ್ತಲೂ ರತ್ನದ ದೀಪಗಳು ಬರುತ್ತಿದ್ದುವು. ಕೋಲನ್ನು ಹಿಡಿದ ಸೇವಕರು ಸುತ್ತಲೂ ಬರುತ್ತಿದ್ದರು.

೮೭. ಆ ವಸಿಷ್ಠನು (ಗುರುವು) ಬಂದುದನ್ನು ಕೇಳಿ ಶ್ರೀರಾಮನು ಅವನನ್ನು ಎದುರುಗೊಂಡನು. ಅವನಿಗೆ ಆಸನವನ್ನು ಕೊಟ್ಟು ನಮಸ್ಕರಿಸಿದನು. ಸೀತೆಯೂ ನಮಸ್ಕರಿಸಿದಳು.

೮೮. ಆ ವಸಿಷ್ಠನನ್ನು ವಸ್ತ್ರಗಳಿಂದಲೂ, ಆಭರಣಗಳಿಂದಲೂ ಬಹುವಾಗಿ ಗೌರವಿಸಿದರು. ಅನಂತರ ಆ ಪಿಂಗಳಳೆಂಬ ವೇಶ್ಯೆಯ ವಿಷಯವನ್ನು ವಿಸ್ತಾರವಾಗಿ ಆ ವಸಿಷ್ಠನಿಗೆ ರಾಮನು ಹೇಳಿದನು.

ಕಥಯಾಮಾಸ ಸೀತಾಯಾಃ ಕ್ರೋಧವಾಕ್ಯಾನ್ಯಪಿ ಪ್ರಭುಃ ।
ದಿವ್ಯಂ ದಾತುಂ ನ ಕಿಂಚಿಚ್ಚ ದೃಷ್ಟ್ವಾನ್ಯತ್ಸೀತಯಾ ಮಮ ॥ ೮೯ ॥

ವಿನಿಶ್ಚಿತಂ ತೇ ಪದಯೋರ್ದಿವ್ಯಂ ತತ್ತೇ ವದಾಮ್ಯಹಂ ।
ಮನಸಾಪಿ ನ ಭುಕ್ತಾ ಸಾ ಮಯಾ ವೇಶ್ಯಾಥವಾ ಪರಾ ॥ ೯೦ ॥

ಇದಂ ಚೇದ್ವಚನಂ ಸತ್ಯಂ ಸ್ಪೃಶಾಮಿ ತರ್ಹಿ ತ್ವತ್ಪದೇ ।
ಇತ್ಯುಕ್ತ್ವಾ ರಾಘವಶ್ಶೀಘ್ರಂ ವಸಿಷ್ಠಪದಯೋಃ ಕರೌ ॥ ೯೧ ॥

ಸ್ವೀಯೌ ಸಂಸ್ಥಾಪ್ಯ ಶಿರಸಾ ಪ್ರಣನಾಮ ಗುರುಂ ಪುನಃ ।
ತದ್ದೃಷ್ಟ್ವಾ ಲಜ್ಜಿತಾ ಸೀತಾ ಜ್ಞಾತ್ವಾ ಶುದ್ಧಂ ರಘೂತ್ತಮಂ ॥ ೯೨ ॥

---

೮೯. ಅನಂತರ ಸೀತೆಯು ಕೋಪಗೊಂಡುದನ್ನೂ ಅದರಿಂದ ಆಡಿದ ಮಾತುಗಳನ್ನೂ ಹೇಳಿದನು. ಸೀತೆಗೆ ಉತ್ತಮವಾದ ಪ್ರಮಾಣಗಳನ್ನು ಮಾಡಿ ನಂಬಿಸಲು ಬೇರೆಯಾವುದೂ ಇಲ್ಲದೆ ಹೋಯಿತು.

೯೦. ಆದ್ದರಿಂದ ನಿನ್ನ ಪಾದಗಳನ್ನು ಮುಟ್ಟಿ ಪ್ರಮಾಣಮಾಡಬೇಕೆಂದು ಹೇಳಿದಳು. ಆದ್ದರಿಂದ ನಿನ್ನ ಪಾದಗಳನ್ನು ಮುಟ್ಟಿ ಆಕೆಗೆ ನಂಬಿಕೆಯನ್ನುಂಟು ಮಾಡಬೇಕು. ನಾನು ವೇಶ್ಯೆಯನ್ನಾಗಲೀ, ಮತ್ತೊಬ್ಬ ಹೆಂಗಸನ್ನೇ ಆಗಲಿ ಮನಸ್ಸಿನಲ್ಲಿಯೂ ನೆನೆಸಿದವನಲ್ಲ.

೯೧-೯೨. ಈ ಮಾತು ಸತ್ಯವೆಂಬುದಾಗಿ ಹೇಳಿ ನಿನ್ನ ಪಾದಗಳನ್ನು ಮುಟ್ಟಿ ಪ್ರಮಾಣಮಾಡುತ್ತೇನೆ. ಹೀಗೆಂದು ಹೇಳಿ ರಾಮನು ವಸಿಷ್ಠನ ಪಾದಗಳಮೇಲೆ ಕೈಗಳನ್ನಿಟ್ಟು ತಲೆಯಿಂದ ಅವನನ್ನು ನಮಸ್ಕರಿಸಿದನು. ಆಗ ರಾಮನು ಶುದ್ಧನೆಂದು ತಿಳಿದು ಸೀತೆಯು ಲಜ್ಜೆಗೊಂಡಳು.

ಪ್ರಣಮ್ಯ ಮೇಽಪರಾಧಂ ತ್ವಂ ಕ್ಷಮಸ್ವೇತಿ ಪ್ರಸಾದಯತ್ ।
ತತಸ್ಸೀತಾ ಗುರೋಃ ಪತ್ನ್ಯೈ ದದೌ ಚಿತ್ರಾಣಿ ಭಕ್ತಿತಃ ॥ ೯೩ ॥

ಭೂಷಣಾನಿ ವರಾಣ್ಯೇವ ದಿವ್ಯವಸ್ತ್ರಾಣಿ ಸಾದರಂ ।
ರಾಮೇಣ ಪೂಜಿತಶ್ಚಾಪಿ ವಸಿಷ್ಠಃ ಪೂರ್ವವತ್ ಸ್ತ್ರಿಯಾ ॥ ೯೪ ॥

ಸಹಿತಶ್ಶಿಬಿಕಾಸಂಸ್ಥಸ್ತುಷ್ಟಃ ಸ್ವೀಯಗೃಹಂ ಯಯೌ ।
ತತಸ್ಸೀತಾಂ ಸಮಾಲಿಂಗ್ಯ ರಾಮೋ ನಿದ್ರಾಂ ಚಕಾರ ಸಃ ॥ ೯೫ ॥

ಪ್ರಭಾತೇ ಪಿಂಗಲಾಂ ದಾಸ್ಯಾ ಸಮಾಹೂಯಾಥ ಜಾನಕೀ ।
ಧಿಕ್ ಧಿಕ್ ಕೃತ್ವಾ ಸಖೀಭಿಸ್ತಾಂ ತಾಡಯಾಮಾಸ ಬಂಧಿತಾಂ ॥ ೯೬ ॥

ಸೀತೋವಾಚ ತದಾ ವೇಶ್ಯಾಂ ಯಸ್ಮಾನ್ಮೇಽದ್ಯಾಪರಾಧಿತಂ ।
ಭವಿಷ್ಯಸಿ ತ್ರಿಧಾ ವಕ್ರಾ ಮಥುರಾಯಾಂ ಹಿ ಕುತ್ಸಿತಾ ॥ ೯೭ ॥

---

೯೩. ಅನಂತರ ಸೀತೆಯು ರಾಮನಿಗೆ ನಮಸ್ಕರಿಸಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಕೇಳಿಕೊಂಡಳು. ಅನಂತರ ಆ ಸೀತೆಯು ಗುರುವಿನ ಪತ್ನಿಯಾದ ಅರುಂಧತಿಗೆ ಆಭರಣಗಳನ್ನು ಕೊಟ್ಟಳು.

೯೪–೯೫ ಅಲ್ಲದೆ ದಿವ್ಯವಾದ ವಸ್ತ್ರಗಳನ್ನೂ ಕೊಟ್ಟಳು. ರಾಮನೂ ಕೂಡ ಮತ್ತೆ ವಸಿಷ್ಠನನ್ನು ಪೂಜಿಸಿದನು. ಅನಂತರ ವಸಿಷ್ಠನೂ, ಅರುಂಧತಿಯೂ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹಿಂತಿರುಗಿ ಮನೆಗೆ ಬಂದರು ಅನಂತರ ರಾಮನು ಸೀತೆಯನ್ನು ಆಲಂಗಿಸಿಕೊಂಡು ನಿದ್ರಿಸಿದನು.

೯೬. ಬೆಳಗಾಗುತ್ತಲೇ ಜಾನಕಿಯು ಆ ವೇಶ್ಯೆಯಾದ ಪಿಂಗಳೆಯನ್ನು ಕರೆಸಿದಳು. ಅವಳನ್ನು ಕಟ್ಟಿಹಾಕಿಸಿ ಬಹುವಾಗಿ ಧಿಕ್ಕಾರಮಾಡಿ ದಾಸಿಯರಿಂದ ಹೊಡೆಯಿಸಿದಳು.

೯೭. ಅನಂತರ ಸೀತೆಯು ಎಲೈ ಪಿಂಗಳೆಯೇ ! ನೀನು ನನಗೆ ಅಪರಾಧ ಮಾಡಿದುದರಿಂದ ನೀನು ಮೂರು ರೀತಿಯಾಗಿ ವಕ್ರಳಾಗಿ ಮಥುರೆಯಲ್ಲಿ ಅಸಹ್ಯಳಾಗಿ ಹುಟ್ಟುತ್ತೀಯೆ. ಎಂದು ಶಪಿಸಿದಳು.

ವೇಶ್ಯಯಾ ಪ್ರಾರ್ಥಿತಾ ಪ್ರಾಹ ಕೃಷ್ಣಸ್ತ್ವಾಮುದ್ಧರಿಷ್ಯತಿ ।
ಶ್ರುತ್ವಾ ತಾಂ ಬಂಧಿತಾಂ ವೇಶ್ಯಾಂ ಮೋಚಯಾಮಾಸ ರಾಘವಃ ॥ ೯೮ ॥

ಏವಂ ನಾನಾಕೌತುಕಾನಿ ಚಕಾರ ರಘುನಂದನಃ ।
ಸೀತಾಂ ಸಂರಂಜಯಾಮಾಸ ಸ್ವಚರಿತ್ರೈರ್ಮನೋರಮೈಃ ॥ ೯೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ವಿಲಾಸಕಾಂಡೇ ಸೀತಾಕ್ರೋಧನ ವರ್ಣನಂ
ನಾಮ ಅಷ್ಟಮಸ್ಸರ್ಗಸ್ಸಮಾಪ್ತಃ

---

೯೮. ಅನಂತರ ಆ ವೇಶ್ಯೆಯು ಬಹುವಾಗಿ ಸೀತೆಯನ್ನು ಪ್ರಾರ್ಥಿಸಿಕೊಳ್ಳಲು ಆಗ ಕೃಷ್ಣನು ನಿನ್ನನ್ನು ಉದ್ಧಾರಮಾಡುವನು ಎಂದಳು. ಆ ವೇಶ್ಯೆಯನ್ನು ಕಟ್ಟಿಹಾಕಿರುವುದನ್ನು ಕೇಳಿ ರಾಮನು ಆಕೆಯನ್ನು ಬಿಡಿಸಿದನು.

೯೯. ರಾಮನು ಈ ರೀತಿಯಾಗಿ ಬಗೆ ಬಗೆಯ ಆಶ್ಚರ್ಯದ ಕೆಲಸಗಳನ್ನು ಮಾಡಿದನು. ತನ್ನ ಉತ್ತಮವಾದ ಚರಿತ್ರೆಯಿಂದ ಸೀತೆಯನ್ನು ಹೀಗೆ ಸಂತೋಷಪಡಿಸುತ್ತಿದ್ದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಸೀತಾಕ್ರೋಧನ
ವರ್ಣನವೆಂಬ ಎಂಟನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
॥ ಎಂಟನೆಯ ಸರ್ಗದ ಸಾರಾಂಶವು ॥

ವೈಶಾಖಮಾಸದಲ್ಲಿ ರಾಮತೀರ್ಥದಲ್ಲಿ ಸ್ನಾನಮಾಡಲು ಮಾಯಾಪುರಿಯಿಂದ ಗುಣವತಿಯೆಂಬ ಒಬ್ಬ ಹೆಂಗಸು ಬಂದಳು. ಅವಳ ವಿಷಯವನ್ನು ವಿಷ್ಣುದಾಸನು ಕೇಳಲು ರಾಮದಾಸನು ಹೇಳುತ್ತಾನೆ.

ಕೃತಯುಗದ ಕೊನೆಯಲ್ಲಿ ಮಾಯಾಪುರಿಯಲ್ಲಿ ದೇವಶರ್ಮನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ನಿತ್ಯಕರ್ಮಗಳಲ್ಲಿ ನಿರತನಾಗಿದ್ದು ಸೂರ್ಯಪ್ರಾರ್ಥನೆಯನ್ನು ಬಿಡದೆ ಮಾಡುತ್ತಿದ್ದನು. ಅವನಿಗೆ ಗುಣವತಿಯೆಂಬ ಹೆಸರಿನ ಮಗಳು ಇದ್ದಳು. ಅವಳನ್ನು ಚಂದ್ರನೆಂಬ ತನ್ನ ಶಿಷ್ಯನಿಗೆ ಕೊಟ್ಟು ಮದುವೆಯನ್ನು ಮಾಡಿದ್ದನು.

ಒಂದುಸಾರಿ ದೇವಶರ್ಮನು ತನ್ನ ಶಿಷ್ಯನೊಂದಿಗೆ ದರ್ಭೆ ಸಮಿತ್ತುಗಳನ್ನು ತರಲು ಕಾಡಿಗೆ ಹೋದನು. ಆ ಕಾಡಿದಲ್ಲಿ ಒಬ್ಬ ರಾಕ್ಷಸನು ಇವರನ್ನು ನೋಡಿ ಕೊಂದನು. ಅವರು ಧರ್ಮಿಷ್ಠರಾದುದರಿಂದಲೂ ತಾವು ಸತ್ತ ಕ್ಷೇತ್ರದ ಪ್ರಭಾವದಿಂದಲೂ ವೈಕುಂಠಕ್ಕೆ ಹೋದರು.

ಇತ್ತ ಗಂಡನೂ ತಂದೆಯೂ ರಾಕ್ಷಸನಿಂದ ಮೃತಪಟ್ಟರೆಂಬುದು ಗುಣವತಿಗೆ ತಿಳಿಯಿತು. ಆಗ ಮನೆಯಲ್ಲಿದ್ದ ಪದಾರ್ಥಗಳನ್ನು ಮಾರಿ ಅದರಿಂದ ಅವರಿಬ್ಬರಿಗೂ ಉತ್ತರಕ್ರಿಯೆಗಳನ್ನು ಮಾಡಿದಳು. ಮುಂದೆಯೂ ಅಲ್ಲಿಯೇ ಭಿಕ್ಷೆಮಾಡಿ ಜೀವನವನ್ನು ಮಾಡಿಕೊಂಡಿದ್ದಳು. ಅವಳು ಹುಟ್ಟಿದಂದಿನಿಂದ ಮೊದಲುಮಾಡಿಕೊಂಡು ಸಾಯುವವರೆಗೂ ಎಂಟು ವ್ರತಗಳನ್ನು ಕ್ರಮವಾಗಿ

ಮಾಡುತ್ತಿದ್ದಳು (1) ಏಕಾದಶೀವ್ರತ, (2) ಕಾರ್ತಿಕವ್ರತ, (3) ಮಾಘಸ್ನಾನ, (4) ಚೈತ್ರಸ್ನಾನ, (5) ವೈಶಾಖಸ್ನಾನ, (6) ವಿಷ್ಣುವಿನ ದೇವಸ್ಥಾನವನ್ನು ಗುಡಿಸಿ ಸಾರಿಸುವುದು, (7) ಅಲ್ಲಿ ರಂಗವಲ್ಲಿಯನ್ನಿಡುವುದು, (8) ಭಕ್ತಿಯಿಂದ ವಿಷ್ಣುವನ್ನು ಪೂಜಿಸುವುದು. ಇವೇ ಎಂಟು ವ್ರತಗಳಾಗಿದ್ದುವು.

ಹೀಗಿರುತ್ತಿರಲು ಈಕೆಯು ಒಂದುದಿನ ಪುರಾಣಿಕನು ಪುರಾಣದಲ್ಲಿ ಚೈತ್ರ ಮಾಸದಲ್ಲಿ ಆಯೋಧ್ಯೆಯಲ್ಲಿ ಸರಯೂನದಿಯ ಸ್ನಾನವು ಕೈವಲ್ಯಪ್ರದವೆಂದು ಹೇಳಿದುದನ್ನು ಕೇಳಿದಳು ಆಗಲೇ ಆಕೆಯು ಅಲ್ಲಿಂದ ಹೊರಟು ಆಯೋಧ್ಯೆಗೆ ಬಂದು ಚೈತ್ರಸ್ನಾನವನ್ನು ಮಾಡುತ್ತ ರಾಮತೀರ್ಥದಲ್ಲಿದ್ದಳು.

ಆಗ ರಾಮನು ಡೇರೆಯ ಮನೆಯಲ್ಲಿದ್ದುದನ್ನು ತಿಳಿದು ಆಕೆಯು ರಾಮನನ್ನು ನೋಡಲು ಪೂಜಾದ್ರವ್ಯಗಳನ್ನು ತೆಗೆದುಕೊಂಡು ಹೋಗಿ ಅವನ ಡೇರೆಯ ಬಾಗಿಲಿನಲ್ಲಿ ನಿಂತಳು. ದ್ವಾರಪಾಲಕನು ಇದನ್ನು ಶ್ರೀರಾಮನಿಗೆ ಹೇಳಲು ಅವನು ಅಪ್ಪಣೆಮಾಡಿ ಒಳಕ್ಕೆ ಕರೆಸಿಕೊಂಡನು. ಸರ್ವಾಭರಣಶೋಭಿತ ನಾಗಿ ಸೀತೆಯೊಡನೆ ಪಗಡೆಯಾಡುತ್ತಾ ಮಂಚದಮೇಲೆ ಕುಳಿತಿರುವ ಶ್ರೀರಾಮ ನನ್ನು ಈ ಗುಣವತಿಯು ನೋಡಿದಳು. ಮತ್ತು ಆತನನ್ನು ಪೂಜಿಸಿದಳು.

ಇದರಿಂದ ಸುಪ್ರೀತನಾದ ಶ್ರೀರಾಮನು ಆಕೆಯನ್ನು ಕುರಿತು ವರವನ್ನು ಕೇಳುವಂತೆ ಹೇಳಿದನು. ಇದನ್ನು ಕೇಳಿ ಆಕೆಯು ಎಲೈ ರಾಮನೇ! ಈ ದಾಸಿ ಯರೊಡನೆ ನನ್ನನ್ನು ನಿನ್ನ ಸೇವೆಗೆ ಸೇರಿಸಿಕೋ ಎಂದಳು. ಇದನ್ನು ಕೇಳಿ ರಾಮನು ನಗುತ್ತಾ ಅಮ್ಮಾ! ನೀನು ಬ್ರಾಹ್ಮಣ ಹೆಂಗಸು. ಕ್ಷತ್ರಿಯರಿಗೆ ದಾಸಿ ಯಾಗಿರಬಾರದು. ಈಗ ಅದು ಸಾಧ್ಯವಿಲ್ಲ. ಒಂದುವೇಳೆ ನನ್ನ ಸೇವೆಯನ್ನು ಮಾಡಲು ನಿನಗೆ ಇಚ್ಛೆಯಿದ್ದರೆ ನಾನು ದ್ವಾಪರಯುಗದಲ್ಲಿ ಕೃಷ್ಣರೂಪದಿಂದ ದ್ವಾರಕೆಯಲ್ಲಿ ಹುಟ್ಟುತ್ತೇನೆ. ಆಗ ನೀನು ಸತ್ಯಭಾಮೆಯೆಂಬ ಹೆಸರುಳ್ಳವಳಾಗಿ ನನ್ನ ಸೇವೆಯನ್ನು ಮಾಡುತ್ತೀಯಂತೆ. ನಿನ್ನ ತಂದೆಯಾದ ದೇವಶರ್ಮನು ಸತ್ರಾಜಿತನಾಗಿಯೂ ನಿನ್ನ ಗಂಡನಾದ ಚಂದ್ರಶರ್ಮನು ಅಕ್ರೂರನಾಗಿಯೂ ಹುಟ್ಟುವರು. ಎಂದನು.

ರಾಮನ ಈ ಮಾತನ್ನು ಕೇಳಿ ಗುಣವತಿಯು ಸಂತೋಷಗೊಂಡು ರಾಮನಿಗೆ ನಮಸ್ಕರಿಸಿ ತನ್ನ ಸ್ಥಳಕ್ಕೆ ಹೊರಟುಹೋದಳು. ಕಾಲಾನಂತರದಲ್ಲಿ ಈ ದೇಹವನ್ನು ಬಿಟ್ಟು ವೈಕುಂಠದಲ್ಲಿ ಸೌಖ್ಯವನ್ನು ಅನುಭವಿಸಿ ಪುಣ್ಯಶೇಷದಿಂದ ದ್ವಾರಕೆಯಲ್ಲಿ ಸತ್ರಾಜಿತನಿಗೆ ಮಗಳಾಗಿ ಹುಟ್ಟಿದಳು.

ಒಂದುಸಾರಿ ಪಿಂಗಳೆ ಎಂಬ ವೇಶ್ಯೆಯು ರಾತ್ರಿಯಲ್ಲಿ ಸೀತೆಯೊಡನೆ ರಾಮನು ನಿದ್ರಿಸುತ್ತಿರುವಾಗ ದ್ವಾರಪಾಲಕರಿಗೆ ತಿಳಿಯದಂತೆ ಅವನ ಬಳಿಗೆ ಹೋದಳು. ಆಗ ಕೈಯ್ಯಿಂದ ರಾಮನ ಕಾಲುಗಳನ್ನು ಮುಟ್ಟಿ ಎಬ್ಬಿಸಿದಳು. ಇದರಿಂದ ರಾಮನಿಗೆ ಎಚ್ಚರವಾಗಲು ಆಕೆಯು ತನ್ನ ಕಾಮಬಾಧೆಯನ್ನು ನಾಶಮಾಡುವಂತೆ ಕೇಳಿಕೊಂಡಳು.

ಆಗ ರಾಮನು ಎಲೈ ಪಿಂಗಳೆಯೇ! ಈ ಜನ್ಮದಲ್ಲಿ ನಾನು ಏಕಪತ್ನೀವ್ರತ ವನ್ನು ಹಿಡಿದಿದ್ದೇನೆ. ಆದ್ದರಿಂದ ಈಗ ಅದು ಸಾಧ್ಯವಾಗಲಾರದು. ಮುಂದಿನ ಜನ್ಮದಲ್ಲಿ ಮಥುರೆಯಲ್ಲಿ ಕೃಷ್ಣಾವತಾರವನ್ನು ಮಾಡುತ್ತೇನೆ. ಆಗ ಸೋದರ ಮಾವನಾದ ಕಂಸನನ್ನು ಕೊಂದು ಅವನ ಪಟ್ಟಣವನ್ನು ನನ್ನ ಸ್ವಾಧೀನವನ್ನಾಗಿ ಮಾಡಿಕೊಳ್ಳುತ್ತೇನೆ. ಆಗ ನೀನು ನನ್ನನ್ನು ಕುಬ್ಜೆಯಾಗಿ ಹೊಂದು. ನೀನು ದಾಸಿಯಾಗಿದ್ದುಕೊಂಡು ಆ ಕಂಸನ ಮನೆಯಲ್ಲಿರು ಎಂದನು. ಇದನ್ನು ಕೇಳಿದ ಆಕೆಯು ಹೊರಟುಹೋದಳು. ಅನಂತರ ರಾಮನು ಆಳುಗಳನ್ನು ಎಬ್ಬಿಸಿ ಅವರನ್ನು ಶಿಕ್ಷಿಸಿದನು. ಆಮೇಲೆ ಸೀತೆಯನ್ನು ಎಬ್ಬಿಸಿ ನಡೆದ ವಿಷಯವನ್ನು ಸಾಂಗವಾಗಿ ತಿಳಿಸಿದನು.

ಇದರಿಂದ ಸೀತೆಗೆ ಕೋಪಬಂದು ಒಡನೆಯೇ ಮಂಚದಿಂದ ಕೆಳಗಿಳಿದು ನಿಂತುಕೊಂಡು ಕೋಪದಿಂದ ಆಗಲೇ ನನ್ನನ್ನು ಏತಕ್ಕೆ ಎಬ್ಬಿಸಲಿಲ್ಲ? ಇದರಿಂದಲೆ ನಿನ್ನ ಏಕಪತ್ನೀವ್ರತವು ಸುಳ್ಳೆಂಬುದಾಗಿ ತಿಳಿಯಿತು. ಮೊದಲು ನೀನು ಆ ಸೂಳೆಯನ್ನು ಅನುಭವಿಸಿ ಅನಂತರ ನನ್ನನ್ನು ಎಬ್ಬಿಸಿದ್ದೀಯೆ. ಈಗ ನಿನ್ನ ನಡತೆಯು ತಿಳಿಯಿತು. ನೀನು ಹಿಂದೆ ವ್ಯಾಸಮಹರ್ಷಿಯ ಎದುರಿಗೆ ಮಾಡಿದ ಪ್ರತಿಜ್ಞೆಯು ಸುಳ್ಳಾಯಿತು. ವೇಶ್ಯೆಯು ಮಲಗಿದ್ದ ಈ ಹಾಸಿಗೆಯನ್ನು ಮತ್ತೆ

ನಾನು ಮುಟ್ಟುವುದಿಲ್ಲ. ಈ ಸರಯೂ ನದಿಯಲ್ಲಿ ಬಿದ್ದು ಪ್ರಾಣವನ್ನು ಬಿಟ್ಟು ಬಿಡುತ್ತೇನೆ. ವೇಶ್ಯಾಸಕ್ತನಾದ ನಿನ್ನನ್ನು ನೋಡಿ ನನಗೆ ದ್ವೇಷವು ಉಕ್ಕುತ್ತಿರುವುದು. ನಾನು ಸತ್ತನಂತರ ವೇಶ್ಯಾಸಕ್ತನಾದ ನಿನಗೇನೇನಾಗಬೇಕೋ ಅವೆಲ್ಲವೂ ಆಗುತ್ತವೆ. ವೇಶ್ಯಾಸಕ್ತನಾದ ರಾಜನಿಗೆ ರಾಜ್ಯವು ಬಹುಕಾಲ ನಿಲ್ಲುವುದಿಲ್ಲ. ಹೀಗೆಂದು ಹೇಳಿ ರಾಮನಿಗೆ ನಮಸ್ಕರಿಸಿ ಪ್ರಾಣವನ್ನು ಬಿಡಲು ಹೊರಟಳು. ಆಕೆಯು ಹೀಗೆ ಹೋಗುತ್ತಿರುವುದನ್ನು ನೋಡಿ ರಾಮನು ಹಿಂದೆಯೇ ಓಡಿದನು. ಮತ್ತು ಆಕೆಯನ್ನು ಬಲವಾಗಿ ತಬ್ಬಿಕೊಂಡು " ಎಲೈ ಸೀತೆಯೇ! ಕೋಪಗೊಳ್ಳಬೇಡ. ಈ ವಿಷಯದಲ್ಲಿ ನಾನು ವೇಶ್ಯೆಯ ಸಂಗವನ್ನು ಮಾಡಿಲ್ಲವೆಂದು ನಿನಗೆ ತೋರಿಸಲು ನೀನು ಹೇಳಿದ ಪ್ರಮಾಣವನ್ನು ಮಾಡುತ್ತೇನೆ. ಆ ಪ್ರಮಾಣಗಳಿಂದಲೂ ನಿನಗೆ ನಂಬುಗೆಯು ಆಗದಿದ್ದರೆ ನೀನು ಹೇಳಿದುದನ್ನೆಲ್ಲವನ್ನೂ ಮಾಡುತ್ತೇನೆ. ಯಾವುದು ಬೇಕೋ ಅದನ್ನು ಹೇಳು. ಸುಮ್ಮನೆ ಕೋಪಮಾಡಿಕೊಳ್ಳಬೇಡ" ಎಂದು ಆ ರಾಮನು ಹೇಳಲು ಜಾನಕಿಯು ಇಂತೆಂದಳು.

ಎಲೈ ರಾಮನೇ! ನಿನಗೆ ಯಾವ ಪ್ರಮಾಣವನ್ನು ಮಾಡೆಂದು ನಾನು ಹೇಳಲಿ. ಅಗ್ನಿಯು ನಿನ್ನ ಮುಖದಿಂದ ಹುಟ್ಟಿದವನು. ಸೂರ್ಯಚಂದ್ರರು ನಿನ್ನ ಕಣ್ಣುಗಳೇ ಆಗಿರುವರು. ನೀರಿನಲ್ಲಿಯೇ ನೀನು ವಾಸವಾಗಿದ್ದೀಯೆ. ಭೂಮಿಯನ್ನು ನೀನೇ ಮೇಲಕ್ಕೆ ತಂದು ಉದ್ಧರಿಸಿದವನು. ಶೇಷನು ನಿನ್ನ ಹಾಸಿಗೆಯು. ಶಸ್ತ್ರಗಳೆಲ್ಲವೂ ನಿನ್ನ ಉಗುರಿನಿಂದಲೇ ಹುಟ್ಟಿದುವು. ನನ್ನ ಕಣ್ಣಿಗೆ ಬೀಳುವುವೆಲ್ಲವೂ ನಿನ್ನ ರೂಪಗಳೇ ಆಗಿರುವುವು. ಆದ್ದರಿಂದ ಕಷ್ಟವಾದ ಪ್ರತಿಜ್ಞೆಯನ್ನಾಗಲಿ ಪ್ರಮಾಣವನ್ನಾಗಲಿ ಹುಡುಕುವುದೇ ನನಗೆ ಕಷ್ಟವಾಗಿದೆ. ನನಗೆ ನಂಬುಗೆ ಬರತಕ್ಕಂಥಾದ್ದೊಂದೂ ಕಾಣುವುದೇ ಇಲ್ಲ. ಆದರೆ ಒಂದೇ ಒಂದು ಪ್ರಮಾಣವಿರುವುದು. ಅದನ್ನು ಮಾಡಿ ತೋರಿಸು.

ಈಗಲೇ ಗುರುವಾದ ವಸಿಷ್ಠನನ್ನು ಕರೆಸು ಅವನ ಪಾದಗಳನ್ನು ಮುಟ್ಟಿ ಪ್ರಮಾಣವನ್ನು ಮಾಡಿದರೆ ಆಗ ನನಗೆ ನಂಬುಗೆಯು ಬರುತ್ತದೆ ಎಂದಳು.

ರಾಮನು ಇದನ್ನು ಕೇಳಿ ಒಡನೆಯೇ ಸೌಮಿತ್ರಿಯನ್ನು ಕರೆಸಿ ವಸಿಷ್ಠ ನನ್ನು ಕರೆತರಬೇಕೆಂದನು. ಲಕ್ಷ್ಮಣನು ಪಲ್ಲಕ್ಕಿಯಲ್ಲಿ ಕುಳಿತು ಗುರುವಿಗೂ ಒಂದು ಪಲ್ಲಕ್ಕಿಯನ್ನು ತೆಗೆದುಕೊಂಡು ಅವನ ಮನೆಯ ಬಳಿಗೆ ಹೋದನು. ದ್ವಾರಪಾಲಕನು ಲಕ್ಷ್ಮಣನು ಬಂದಿರುವುದನ್ನು ನೋಡಿ ವಸಿಷ್ಠನಿಗೆ ತಿಳಿಸಲು ಅವನೂ ಕಳವಳಗೊಂಡು ಹೊರಗೆ ಬಂದು ಎಲೈ ಲಕ್ಷ್ಮಣನೇ ! ಈ ಅವೇಳೆಯಲ್ಲಿ ಏತಕ್ಕೆ ಬಂದೆ? ಎಂದನು. ಅದಕ್ಕೆ ಲಕ್ಷ್ಮಣನು ಅದೆಲ್ಲವೂ ನನಗೆ ಗೊತ್ತಿಲ್ಲ. ರಾಮನು ನಿನ್ನನ್ನು ಕರೆತರಬೇಕೆಂದನು. ಏಳು. ಈಗಲೇ ಬಾ. ಪಲ್ಲಕ್ಕಿಯನ್ನು ತಂದಿದ್ದೇನೆ. ಎಂದನು.

ಅನಂತರ ಅರುಂಧತಿಯನ್ನು ಕರೆದುಕೊಂಡು ವಸಿಷ್ಠನು ಹೊರಟನು. ವಸಿಷ್ಠಲಕ್ಷ್ಮಣರಿಬ್ಬರೂ ರಾಮನ ಬಳಿಗೆ ಬಂದು ಸೇರಿದರು. ವಸಿಷ್ಠನು ಬಂದುದನ್ನು ರಾಮನು ತಿಳಿದು ಆಸನವನ್ನು ಕೊಟ್ಟು ನಮಸ್ಕರಿಸಿ ವೇಶ್ಯೆಯಾದ ಪಿಂಗಳೆಯ ವಿಷಯವೆಲ್ಲವನ್ನೂ ತಿಳಿಸಿದನು. ಇದರಿಂದ ಸೀತೆಗೆ ಕೋಪ ಬಂದಿರುವುದನ್ನೂ ತಾನು ಮಾತು ಕೊಟ್ಟಿರುವುದನ್ನೂ ಸಾಂಗವಾಗಿ ಹೇಳಿದನು. ಮತ್ತು ನಾನು ಆ ವೇಶ್ಯೆಯನ್ನಾಗಲಿ ಇತರ ಹೆಂಗಸನ್ನಾಗಲಿ ಮನಸ್ಸಿನಿಂದಲೂ ಅನುಭವಿಸಿದವನೂ ಅಲ್ಲ. ಸ್ಮರಿಸಿದವನೂ ಅಲ್ಲ. ಇದು ಸತ್ಯವು. ಎಂದು ಹೇಳಿ ಅವನಕಾಲುಗಳಮೇಲೆ ತಲೆಯನ್ನಿಟ್ಟನು.

ಇದರಿಂದ ರಾಮನು ಶುದ್ಧನೆಂದು ಸೀತೆಯು ತಿಳಿದವಳಾಗಿ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ನಿಂತಳು. ಮತ್ತು ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ರಾಮನಿಗೆ ನಮಸ್ಕರಿಸಿದಳು. ಮತ್ತು ತಾನು ಅರುಂಧತಿಗೂ ಗೌರವಿಸಿದಳು. ರಾಮನು ವಸಿಷ್ಠನಿಗೆ ಮತ್ತೆ ಪೂಜಿಸಿದನು. ಅನಂತರ ಆ ಗುರು ಗುರುಪತ್ನೀಯರು ಪಲ್ಲಕ್ಕಿಯಲ್ಲಿ ಕುಳಿತು ಮನೆಗೆ ಹೊರಟು ಹೋದರು. ಸೀತಾರಾಮ ರಿಬ್ಬರೂ ಅನಂತರ ಸುಖವಾಗಿ ನಿದ್ರಿಸಿದರು. ಬೆಳಗಾಗುತ್ತಲೂ ಸೀತೆಯು ಪಿಂಗಳೆಯನ್ನು ಕರೆಸಿ ಬೈದು ದಾಸಿಯರಿಂದ ಹೊಡೆಸಿದಳು. ಮತ್ತು ಎಲೈ ಪಿಂಗಳೆಯೇ ! ನೀನು ನನಗೆ ತಪ್ಪುಮಾಡಿದುದರಿಂದ ಮುಂದೆ ಮಥುರೆಯಲ್ಲಿ

ವಕ್ರಳಾಗಿ ಹುಟ್ಟುತ್ತೀಯೆ. ಎಂದು ಶಪಿಸಿದಳು. ಅನಂತರ ಆ ವೇಶ್ಯೆಯು ದುಃಖಪಡುತ್ತಾ ಸೀತೆಯನ್ನು ಕುರಿತು ನನ್ನನ್ನು ಶಪಿಸಬೇಡ. ಇದಕ್ಕೆ ವಿಶಾಪ ವನ್ನು ಕೊಡು ಎಂದು ನಮಸ್ಕರಿಸುತ್ತಾ ಬಹುವಾಗಿ ಕೇಳಿಕೊಳ್ಳಲು ಅದಕ್ಕೆ ಸೀತೆಯು ಎಲೈ ಪಿಂಗಳೆಯೇ! ಮುಂದೆ ದ್ವಾಪರಯುಗದಲ್ಲಿ ಈ ರಾಮನು ಕೃಷ್ಣನಾಗಿ ಅವತರಿಸುವನು. ಅವನು ಗೋಕುಲದಲ್ಲಿ ಹುಟ್ಟಿ ಬೆಳೆದು ಮಾವನಾದ ಕಂಸನನ್ನು ಸಂಹರಿಸಲು ದ್ವಾರಕೆಗೆ ಬರುವನು. ಆಗ ಆ ಕೃಷ್ಣನು ನಿನ್ನನ್ನು ಉದ್ಧಾರಮಾಡುವನು" ಎಂದು ವಿಶಾಪವನ್ನು ಕೊಟ್ಟಳು. ರಾಮನು ಈ ರೀತಿ ಯಾದ ಅನೇಕ ಆಶ್ಚರ್ಯಕರವಾದ ಸಂಗಗಳನ್ನು ಮಾಡುತ್ತಾ ಸೀತೆಯನ್ನು ಸಂತೋಷಪಡಿಸುತ್ತ ರಾಜ್ಯಭಾರಮಾಡುತ್ತಿದ್ದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ವಿಲಾಸಕಾಂಡೇ

॥ ನವಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಏಕದಾ ಸೀತಯಾ ರಾಮಃ ಕುರುಕ್ಷೇತ್ರಂ ಸ್ವಬಂಧುಭಿಃ ।
ಯಯೌ ಸೂರ್ಯೋಽಪರಾಗೇ ವೈ ಸ್ನಾತುಂ ಪುಷ್ಪಕಸಂಸ್ಥಿತಃ ॥ ೧ ॥

ತತ್ರ ದೇವಾಸ್ಸಗಂಧರ್ವಾಃ ಕಿನ್ನರಾಃ ಪನ್ನಗಾ ಯಯುಃ ।
ನಾನಾಶ್ರಮೇಭ್ಯೋ ಮುನಯಃ ಪಾರ್ಥಿವಾಶ್ಚ ಸಹಸ್ರಶಃ ॥ ೨ ॥

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಒಂದುಸಾರಿ ಸೂರ್ಯಗ್ರಹಣ ಬರಲು ರಾಮನು ತಮ್ಮಂದಿರೊಡನೆಯೂ, ಸೀತೆಯೊಡನೆಯೂ ಕುರುಕ್ಷೇತ್ರದಲ್ಲಿ ಸ್ನಾನ ಮಾಡಲು ಪುಷ್ಪಕದಲ್ಲಿ ಕುಳಿತು ಹೊರಟನು.

೨. ಆಗ ಅಲ್ಲಿಗೆ ದೇವತೆಗಳೂ, ಪನ್ನಗರೂ ಕಿನ್ನರರೂ, ಗಂಧರ್ವರೂ ಬಂದರು. ಅನೇಕ ಆಶ್ರಮಗಳಿಂದ ಮುನಿಗಳೂ, ಅನೇಕ ದೇಶಗಳಿಂದ ರಾಜರೂ ಅಲ್ಲಿಗೆ ಬಂದರು.

ತತ್ರ ಸ್ನಾತ್ವಾ ರವೌ ಗ್ರಸ್ತೇ ರಾಘವಸ್ಸೀತಯಾ ಸಹ ।
ಚಕಾರ ನಾನಾದಾನಾನಿ ಹಸ್ತ್ಯಶ್ವರಥವಾಜಿನಾಂ ॥ ೩ ॥

ತತಸ್ತೇ ಪಾರ್ಥಿವಾಸ್ಸರ್ವೇ ನಾನೋಪಾಯನಪಾಣಯಃ ।
ಯಯುಃ ಶ್ರೀರಾಘವಂ ದ್ರಷ್ಟುಂ ರಾಜಪತ್ನ್ಯಶ್ಚ ಜಾನಕೀಂ ॥ ೪ ॥

ಅಥ ಸೀತಾ ರಾಜಪತ್ನೀಸ್ಸಮಾಲಿಂಗ್ಯ ವರಾಸನೇ ।
ಸಖೀಭಿರ್ಮುನಿದಾರೈಶ್ಚ ಸುಖಂ ಚೋಪಾವಿಶತ್ತದಾ ॥ ೫ ॥

ಏತಸ್ಮಿನ್ನಂತರೇ ತತ್ರ ಸೀತಯಾ ಪೂಜಿತಾ ಸ್ಥಿತಾ ।
ಲೋಪಾಮುದ್ರಾಬ್ರವೀದ್ವಾಕ್ಯಂ ಜಾನಕೀಂ ರಂಜಯನ್ಮುದಾ ॥ ೬ ॥

---

೩. ಸೂರ್ಯಗ್ರಹಣವು ಹಿಡಿಯಲು ರಾಮನು ಸೀತೆಯೊಡನೆ ಸ್ನಾನ ಮಾಡಿದನು. ಆ ಗ್ರಹಣಕಾಲದಲ್ಲಿ ಆನೆ, ಕುದುರೆ, ಒಂಟೆ, ರಥ ಮುಂತಾದ ಅನೇಕ ದಾನಗಳನ್ನು ಮಾಡಿದನು.

೪. ಅನಂತರ ಅಲ್ಲಿಗೆ ಬಂದಿದ್ದ ರಾಜರೆಲ್ಲರೂ ಅನೇಕ ಬಗೆಯಾದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ರಾಮನನ್ನು ನೋಡಲು ಬಂದರು. ಆ ರಾಜರ ಹೆಂಡತಿಯರೂ ಜಾನಕಿಯನ್ನು ನೋಡಲು ಬಂದರು. ಋಷಿಪತ್ನಿಯರೂ ಬಂದರು.

೫. ಆಗ ಸೀತೆಯು ಆ ರಾಜಪತ್ನಿಯರನ್ನೂ ಋಷಿಪತ್ನಿಯರನ್ನೂ ಆಲಂಗಿಸಿಕೊಂಡು ಉತ್ತಮವಾದ ಪೀಠದಲ್ಲಿ ಕೂರಿಸಿ ತಾನೂ ಸಖಿಯರೊಂದಿಗೆ ಸುಖವಾಗಿ ಕುಳಿತುಕೊಂಡಳು.

೬. ಈ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಲೋಪಾಮುದ್ರೆಯು ಸೀತೆಯಿಂದ ಗೌರವವನ್ನು ಹೊಂದಿ ಕುಳಿತಿದ್ದು ಆ ರಾಜಪತ್ನಿಯರ ಮಧ್ಯದಲ್ಲಿ ಸೀತೆಯನ್ನು ಸಂತೋಷಪಡಿಸುತ್ತ ಇಂತೆಂದಳು.

ಹೇ ಸೀತೇ ಕಂಜನಯನೇ ಧನ್ಯಾಸಿ ಗಜಗಾಮಿನಿ ।
ಕಿಂಚಿದ್ವರ್ಣಯ ರಾಮಸ್ಯ ಪೌರುಷಂ ಶ್ರುತಿತೋಷದಂ ॥ ೭ ॥

ತತ್ತಸ್ಯಾ ವಚನಂ ಶ್ರುತ್ವಾ ವರ್ಣಯಾಮಾಸ ಜಾನಕೀ ।
ಸ್ವಪಾಣಿಗ್ರಹಣಾತ್ಪತ್ಯುಃ ಕುರುಕ್ಷೇತ್ರಾವಧಿಂ ಕಥಾಂ ॥ ೮ ॥

ಲೋಪಾಮುದ್ರಾಪಿ ತತ್ ಶ್ರುತ್ವಾ ವಿಹಸ್ಯ ಪ್ರಾಹ ಜಾನಕೀಂ ।
ಸರ್ವಂ ಯೋಗ್ಯಂ ಕೃತಂ ಸೀತೇ ರಾಘವೇಣ ಮಹಾತ್ಮನಾ ॥ ೯ ॥

ಏಕ ಏವ ವೃಥಾ ಕ್ಲೇಶಃ ಕೃತಸ್ತೇನೇತಿ ವೇದ್ಮ್ಯಹಂ ।
ಮಹಾರ್ಣ ಶ್ರಮಸ್ಸೇತುಬಂಧೇ ಕಿಮರ್ಥಂ ಹಿ ಕೃತಃ ಪುರಾ ॥ ೧೦ ॥

---

೭. ಎಲೈ ಪದ್ಮನಯನೆಯಾದ ಸೀತೆಯೇ ! ಗಜಗಾಮಿನಿಯೇ ! ನೀನೇ ಧನ್ಯಳು. ಕಿವಿಗೆ ಇಂಪಾಗಿರುವ ಆ ರಾಮಚರಿತ್ರೆಯನ್ನು ಸ್ವಲ್ಪ ವರ್ಣಿಸು ಎಂದಳು.

೮. ಈ ಮಾತನ್ನು ಕೇಳಿ ಜಾನಕಿಯು ರಾಮನು ತನ್ನನ್ನು ಮದುವೆಯಾದಂದಿನಿಂದ ಮೊದಲುಗೊಂಡು ಕುರುಕ್ಷೇತ್ರಕ್ಕೆ ಬಂದವರೆಗೂ ಆ ರಾಮನ ಕಥೆಯನ್ನು ವರ್ಣಿಸಿದಳು.

೯. ಲೋಪಾಮುದ್ರೆಯು ಅದನ್ನು ಕೇಳಿ ನಕ್ಕು ಜಾನಕಿಯನ್ನು ಕುರಿತು ಇಂತೆಂದಳು. ಎಲೈ ಸೀತೆಯೇ ! ಮಹಾತ್ಮನಾದ ರಾಮನು ಎಲ್ಲವನ್ನೂ ಧರ್ಮದ ರೀತಿಯಿಂದಲೇ ಮಾಡಿದ್ದಾನೆ.

೧೦. ಆದರೆ ಅವನು ವ್ಯರ್ಥವಾಗಿ ಒಂದು ಕ್ಲೇಶವನ್ನು ಹೊಂದಿದನು. ಎಂದು ನನಗೆ ತೋರುತ್ತದೆ. ಹಿಂದೆ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದನಷ್ಟೆ ! ಆ ಶ್ರಮವನ್ನು ಅವನು ಏತಕ್ಕೆ ಹೊಂದಿದನು ?

ಕಥಂ ನ ಕಥಿತಂ ಕುಂಭಜನ್ಮನೇ ರಾಘವೇಣ ಹಿ ।
ಕ್ಷಣಾತ್ತ್ವಂ ಚುಲುಕೇ ಕೃತ್ವಾ ಪೀತ್ವೇಮಂ ಲವಣಾರ್ಣವಂ ॥ ೧೧ ॥

ಶುಷ್ಕಂ ಕೃತ್ವಾ ಕಪೀನ್ಮಾರ್ಗೋ ಭವಿಷ್ಯದತ ಏವ ಹಿ ।
ವೃಥಾ ತೇ ಶ್ರಮಿತಾಸ್ಸರ್ವೇ ವಾನರಾಸ್ಸೇತುಬಂಧನೇ ॥ ೧೨ ॥

ಇತಿ ತಸ್ಯಾಃ ವಚಃ ಶ್ರುತ್ವಾ ಸಗರ್ವಂ ವೈ ವಿದೇಹಜಾ ।
ಲೋಪಾಮುದ್ರಾಂ ವಿಹಸ್ಯಾಹ ಲೋಪಾಮುದ್ರೇ ಪತಿವ್ರತೇ ॥ ೧೩ ॥

ಸಮ್ಯಕ್ಕೃತಂ ರಾಘವೇಣ ತತ್ಸೇತೋರ್ಬಂಧನಂ ವರಂ ।
ತತ್ಕಾರಣಂ ವದಾಮ್ಯದ್ಯ ಶ್ರುಣು ತ್ವಂ ಸ್ವಸ್ಥಮಾನಸಾ ॥ ೧೪ ॥

ಶ್ರುಣ್ವಂತ್ವಿಮಾಸ್ಸಮಾಯಾತಾ ಮದ್ವಾಕ್ಯಂ ಪಾರ್ಥಿವಸ್ತ್ರಿಯಃ ।
ಬಾಣೇನ ಶೋಷಣೇಯಶ್ಚೇತ್ಸಾಗರೋ ರಾಘವೇಣ ಹಿ ॥ ೧೫ ॥

೧೧-೧೨. ರಾಮನು ಅಗಸ್ತ್ಯನಿಗೆ ಒಂದೇ ಒಂದು ಮಾತನ್ನು ಹೇಳಲಿಲ್ಲವಲ್ಲ ! ಅದೇತಕ್ಕೆ ಹಾಗೆ ಮಾಡಿದನು ? ಎಲೈ ಅಗಸ್ತ್ಯನೇ ! ಈ ಸಮುದ್ರವನ್ನು ಅಂಗೈಯ್ಯಲ್ಲಿಟ್ಟುಕೊಂಡು ಕುಡಿದು ಬಿಡು. ಅದರಿಂದ ಸಮುದ್ರವು ಒಣಗಿಹೋಗಿ ಕಪಿಗಳಿಗೆ ಮಾರ್ಗವು ಸುಖವಾಗಿ ಆಗುತ್ತದೆ ಎಂದು ಹೇಳಬಹುದಾಗಿದ್ದಿತು ! ಹಾಗೆ ಮಾಡಲಿಲ್ಲ. ಆದ್ದರಿಂದ ಸೇತು ಬಂಧನದಲ್ಲಿ ಕಪಿಗಳೆಲ್ಲವನ್ನೂ ವ್ಯರ್ಥವಾಗಿ ಕಷ್ಟಪಡಿಸಿದನು. ಎಂದಳು.

೧೩. ಲೋಪಾಮುದ್ರೆಯು ಹೇಳಿದ ಈ ಮಾತನ್ನು ಕೇಳಿ ಸೀತೆಯು ಹೆಮ್ಮೆಯಿಂದ ನಗುತ್ತ ಎಲೈ ಪತಿವ್ರತೆಯಾದ ಲೋಪಾಮುದ್ರೆಯೇ ! ಕೇಳು.

೧೪. ರಾಮನು ಸೇತುವೆಯನ್ನು ಕಟ್ಟಿಸಿದುದು ಒಳ್ಳೆಯದಾಯಿತು. ಅದರ ಕಾರಣವನ್ನು ಹೇಳುತ್ತೇನೆ. ಒಂದೇ ಮನಸ್ಸಿನಿಂದ ಕೇಳು.

೧೫-೧೭. ಇಲ್ಲಿ ಬಂದಿರತಕ್ಕ ರಾಜಪತ್ನಿಯರೂ ಕೂಡ ನಾನು ಹೇಳುವುದನ್ನು ಕೇಳಲಿ. ರಾಮನು ಬಾಣವನ್ನು ಬಿಟ್ಟು ಸಮುದ್ರವನ್ನು ಬತ್ತಿಸಿದರೆ ಆಗಬಹುವಾದ ಪ್ರಾಣಿಹತ್ಯೆಗಳುಂಟಾಗುವುವು. ಎಂಬ ಶಂಕೆಯು

ಭವಿಷ್ಯಂತಿ ತದಾ ಹತ್ಯಾ ಬಹವಶ್ಚೇತಿ ಶಂಕಿತಂ ।
ಉಲ್ಲಂಘನೀಯೋ ಜಲಧಿಶ್ಚೇದ್ರಾಮೇಣ ವಿಹಾಯುಸಾ ॥ ೧೬ ॥

ತದಾ ರಾಮಂ ಮನುಷ್ಯಂ ಚ ಕಥಂ ಜ್ಞಾಸ್ಯತಿ ರಾವಣಃ ।
ಹನುಮತ್ಪೃಷ್ಠಮಾರುಹ್ಯ ಗಂತವ್ಯಂ ಚೇತ್ಪರೇ ತಟೇ ॥ ೧೭ ॥

ಲಂಕಾಂ ಪ್ರತಿ ತದಾ ರಾಮಪೌರುಷಂ ಕಿಂ ವದಂತಿ ಹಿ ।
ಯದಿ ತೀರ್ತ್ವಾರ್ಣ ಪ್ರಗಂತವ್ಯಂ ಬಾಹುಭ್ಯಾಂ ರಾಘವೇಣ ಹಿ ॥ ೧೮ ॥

ನೋಲ್ಲಂಘನೀಯಂ ವಿಪ್ರಸ್ಯ ಮೂತ್ರಂ ಚೇತಿ ವಿಶಂಕಿತಂ ।
ಚೇನ್ಮುನಿಃ ಕುಂಭಜನ್ಮಾನ್ಯೈ ಪ್ರಾರ್ಥನೀಯಃ ಪತಿಸ್ತವ ॥ ೧೯ ॥

ರಾಮೇಣ ಚುಲಕಂ ಕರ್ತುಂ ತದಾ ತಲ್ಲವಣಾಂಬುಧೇಃ ।
ಮಂತ್ರಿತಂ ರಾಘವೇಣಾಪಿ ತದಾ ಹೃದಿ ವಿಶಂಕಿತಂ ॥ ೨೦ ॥

ಬಂದಿತು. ಆದ್ದರಿಂದ ಬಾಣವನ್ನು ಬಿಟ್ಟು ಶೋಷಿಸಲಿಲ್ಲ, ಹಾಗಿಲ್ಲದೆ ರಾಮನು ಆಕಾಶಮಾರ್ಗದಲ್ಲಿ ಹಾರಿಹೋಗಬಹುದಾಗಿದ್ದಿತು. ಹಾಗೆ ಹಾರಿಹೋದರೆ ರಾಮನು ಮನುಷ್ಯನೆಂದು ರಾವಣನು ಹೇಗೆ ತಿಳಿದಾನು? ಅದಲ್ಲದೆ ಹನುಮಂತನ ಬೆನ್ನಿನಮೇಲೆ ಕುಳಿತು ಸಮುದ್ರವನ್ನು ದಾಟಬಹುದಾಗಿದ್ದಿತು. ಹಾಗೆ ದಾಟಿದರೆ ಆಗ ರಾಮನ ಪೌರುಷವು ಎಂಥದು? ಎಂಬದಾಗಿ ಜನಗಳು ಹೇಳುವರು?

೧೮. ಅಥವಾ ತೋಳುಗಳಿಂದ ಈಜಿಕೊಂಡು ಆಚೆಯ ದಡಕ್ಕೆ ಹೋಗಬಹುದಾಗಿದ್ದಿತು. ಹಾಗೆ ಹೋಗೋಣವೆಂದರೆ ಬ್ರಾಹ್ಮಣನ ಮೂತ್ರವನ್ನು ದಾಟಬಾರದು ಎಂಬ ಶಾಸ್ತ್ರದ ಶಂಕೆಯು ಬಂದಿತು.

೧೯. ಇರಲಿ ಒಂದುವೇಳೆ. ನಿನ್ನ ಗಂಡನಾದ ಅಗಸ್ತ್ಯನನ್ನು ಪ್ರಾರ್ಥಿಸೋಣವೆಂದರೆ ರಾಮನ ಕೈಯ್ಯಲ್ಲಿಯೇ ಆ ಕೆಲಸವಾಗುವುದು. ಅದನ್ನೂ ಯೋಚಿಸಿದನು.

೨೦-೨೨. ಈ ಸಮುದ್ರವನ್ನು ಕೋಪದಿಂದ ಪೂರ್ವದಲ್ಲಿ ಅಗಸ್ತ್ಯನು ಕುಡಿದು ಮೂತ್ರದ್ವಾರದಿಂದ ಹೊರಕ್ಕೆ ಬಿಟ್ಟನು. ಎಂದು ಕೇಳಿದ್ದೇನೆ.

ಪೀತೋಽಯಂ ಜಲಧಿಃ ಪೂರ್ವಂ ಶ್ರುತಂ ಕ್ರೋಧಾದಗಸ್ತಿನಾ
ಮೂತ್ರದ್ವಾರಾದ್ಬಹಿಸ್ತ್ಯಕ್ತಸ್ತಸ್ಮಾತ್ ಕ್ಷಾರತ್ವಮಾಗತಃ ॥ ೨೧ ॥

ಸರ್ವದಾ ಮೂತ್ರವತ್ ಕ್ಷಾರಸ್ಸ ಕಥಂ ಪಾತುಮರ್ಹತಿ ।
ಸ ಋಷಿರ್ಮಮ ವಾಕ್ಯೇನ ಚುಲುಕಂ ತು ಕರಿಷ್ಯತಿ ॥ ೨೨ ॥

ಭವಿಷ್ಯತಿ ಮಮಾಕೀರ್ತಿಸ್ಸರ್ವತ್ರ ಜಗತೀತಲೇ ।
ಮೂತ್ರಪಾನಂ ಬ್ರಾಹ್ಮಣೇನ ಸ್ವಕಾರ್ಯಾರ್ಥಂ ನಿಜೋಕ್ತಿಭಿಃ ॥ ೨೩ ॥

ಕಾರಿತಂ ಯೇನ ರಾಮೇಣ ಸೋಽಯಂ ಚೇತೀವಶಂಕಿತಃ ।
ನ ಮುನಿಂ ಪ್ರಾರ್ಥಯಾಮಾಸ ರಾಘವೋ ಧರ್ಮತತ್ಪರಃ ॥ ೨೪ ॥

ಏವಂ ಸಮ್ಮಂತ್ರ್ಯ ರಾಮೇಣ ಸ್ವಕೀರ್ತ್ಯೈ ಸೇತುಬಂಧನಂ ।
ಕೃತಂ ಕೇನಾಪಿ ನ ಕೃತಂ ನ ಕೋಽಪ್ಯಗ್ರೇ ಕರಿಷ್ಯತಿ ॥ ೨೫ ॥

ಆದ್ದರಿಂದ ಇದು ಉಪ್ಪಾಗಿರುವುದು. ಯಾವಾಗಲೂ ಮೂತ್ರದಂತೆ ಉಪ್ಪಾಗಿರುವುದನ್ನು ಕುಡಿಯುವುದು ಹೇಗೆ? ಆದರೆ ಆ ಋಷಿಗೆ ಹೇಳಿದರೆ ಅವನೇನೋ ನನ್ನ ಮಾತಿನಂತೆ ಅಂಗೈಯ್ಯಲ್ಲಿ ಇಟ್ಟುಕೊಂಡು ಕುಡಿಯುವನು.

೨೩–೨೪. ಆಗ ಪ್ರಪಂಚದಲ್ಲೆಲ್ಲಾ ರಾಮನು ತನ್ನ ಕೆಲಸಕ್ಕೋಸ್ಕರ ಬ್ರಾಹ್ಮಣನಿಗೆ ಮೂತ್ರಪಾನಮಾಡಿಸಿದನೆಂದು ಅಪಕೀರ್ತಿಯು ಬರುವುದು. ಎಂಬುದಾಗಿ ಮನಸ್ಸಿನಲ್ಲಿ ಆ ರಾಮನು ಬಹುವಾಗಿ ಶಂಕಿಸಿದನು. ಆದ್ದರಿಂದ ಧರ್ಮತತ್ಪರನಾದ ರಾಮನು ಆ ಮುನಿಯನ್ನು ಪ್ರಾರ್ಥಿಸಲಿಲ್ಲ.

೨೫. ಆ ರಾಮನು ಈ ರೀತಿಯಾಗಿ ಎಲ್ಲವನ್ನೂ ಯೋಚಿಸಿ ತನಗೆ ಕೀರ್ತಿ ಬರುವುದಕ್ಕೋಸ್ಕರ ಸೇತುವೆಯನ್ನು ಕಟ್ಟಿದನು. ಹಿಂದೆ ಯಾರೂ ಇಂತಹ ಸೇತುವೆಯನ್ನು ಕಟ್ಟಲಿಲ್ಲ. ಮುಂದೆಯೂ ಕಟ್ಟುವುದಿಲ್ಲ.

ಯೇನ ರಾಮೇಣ ಜಲಧೌ ಶಿಲಾಸ್ಸಂತಾರಿತಾಃ ಪುನಃ ।
ಸೋಽಯಂ ದಾಶರಥೀ ರಾಮಶ್ಚೇತಿ ಖ್ಯಾತಿಂ ಗತೋ ಭುವಿ ॥ ೨೬ ॥

ಇತಿ ಸೀತಾವಚೋಭಿಸ್ಸಾ ಲೋಪಮುದ್ರಾ ಜಿತಾ ತದಾ ।
ತೂಷ್ಣೀಮಾಸ ಕ್ಷಣಂ ನಾರೀಸಭಾಯಾಂ ಲಜ್ಜಿತಾಭವತ್ ॥ ೨೭ ॥

ತತೋ ವಿಹಸ್ಯ ವೈದೇಹೀ ಲೋಪಾಮುದ್ರಾಂ ಪ್ರಪೂಜಯತ್ ।
ಮುನಿಪತ್ನೀಶ್ಚ ಸಂಪೂಜ್ಯ ಪ್ರಾರ್ಥಯಾಮಾಸ ತಾಂ ಪುನಃ ॥ ೨೮ ॥

ಮಯಾಪರಾಧಿತಂ ತೇದ್ಯ ತತ್ ಕ್ಷಮಸ್ವ ಪತಿವ್ರತೇ ।
ಸ್ನೇಹಾತ್ಪ್ರಸಂಗತಶ್ಚೋಕ್ತಂ ತ್ವದಗ್ರೇ ರಾಮ ಪೌರುಷಂ ॥ ೨೯ ॥

---

೨೬. ರಾಮನು ಸಮುದ್ರದಲ್ಲಿ ಕಲ್ಲುಗಳು ತೇಲುವಂತೆ ಮಾಡಿದನಷ್ಟೆ ! ಆ ರೀತಿಯಾದ ಕೆಲಸವನ್ನು ಮತ್ತಾವನೂ ಮಾಡಲಾರನು. ಅವನೇ ಈ ದಾಶರಥಿಯಾದ ರಾಮನು. ಎಂದು ಪ್ರಪಂಚವೆಲ್ಲವೂ ಹೊಗಳುವುದು. ಎಂದಳು.

೨೭. ಸೀತೆಯ ಈ ಮಾತುಗಳಿಂದ ಲೋಪಾಮುದ್ರೆಯು ಸೋತು ಹೋದಳು ಆ ಸಭೆಯಲ್ಲಿ ಆಕೆಯು ನಾಚಿಕೆಗೊಂಡು ಕ್ಷಣಕಾಲ ಸುಮ್ಮನಿದ್ದಳು.

೨೮. ಆಗ ವೈದೇಹಿಯು ನಕ್ಕು ಲೋಪಾಮುದ್ರೆಯನ್ನು ಪೂಜಿಸಿ ಗೌರವಿಸಿದಳು. ಮುನಿಪತ್ನಿಯರನ್ನೂ ಪೂಜಿಸಿ ಮತ್ತೆ ಆಕೆಯನ್ನು ಕುರಿತು ಇಂತೆಂದು ಪ್ರಾರ್ಥಿಸಿದಳು.

೨೯. ಎಲೈ ಪತಿವ್ರತೆಯೆ ! ನಾನು ನಿನಗೆ ಎದುರುವಾದಿಸಿ ಅಪರಾಧಿನಿಯಾಗಿದ್ದೇನೆ. ಅದನ್ನು ಕ್ಷಮಿಸು. ರಾಮನಲ್ಲಿರುವ ಸ್ನೇಹದಿಂದಲೂ ಹೇಳಬೇಕಾದ ಕಾರಣ ಬಂದುದರಿಂದಲೂ ನಿನ್ನ ಎದುರಿನಲ್ಲಿ ರಾಮನ ಪೌರುಷವನ್ನು ಹೇಳಿದೆನು.

ತ್ವದ್ಭರ್ತುರಾಶಿಷಾ ರಾಮೋ ಪೌರುಷಂ ಚೇತಿ ವೇದ್ಮ್ಯಹಂ ।
ಇತಿ ಸಂಪ್ರಾರ್ಥ್ಯ ತಾಸ್ಸರ್ವಾ ಮುನಿಪತ್ನೀರ್ವ್ಯಸರ್ಜಯತ್ ॥ ೩೦ ॥

ಪೂಜಿತಾ ನೃಪಪತ್ನೀಭಿರ್ಯಯೌ ಸೀತಾ ರಘೂತ್ತಮಂ ।
ತತೋ ರಾಮೋಽಪಿ ಪೃಥ್ವೀಶೈಃ ಪೂಜಿತೋ ಗಜವಾಜಿಭಿಃ ॥ ೩೧ ॥

ಯಯೌ ಸ ನಗರೀಂ ತುಷ್ಟಸ್ಸೀತಯಾ ಗರುಡೇ ಸ್ಥಿತಃ ।
ಯೇ ಯೇ ಸಮಾಗತಾಸ್ತತ್ರ ಕುರುಕ್ಷೇತ್ರೇ ರವಿಗ್ರಹೇ ॥ ೩೨ ॥

ತೇ ಸರ್ವೇ ಸ್ವಸ್ಥಲಂ ಜಗ್ಮೂ ರಾಮದರ್ಶನಹರ್ಷಿತಾಃ ।
ರಾಮೋಽಪಿ ನಗರೀಮಧ್ಯೇ ಪುರಸ್ತ್ರೀಭಿರ್ಮುಹುಃ ಪಥಿ ॥ ೩೩ ॥

---

೩೦. ಆದರೆ ನಿನ್ನ ಗಂಡನ ಆಶೀರ್ವಾದದಿಂದಲೇ ರಾಮನು ಈ ರೀತಿಯಾದ ಪೌರುಷವನ್ನು ಹೊಂದಿರುವನೆಂಬುದನ್ನು ನಾನು ಬಲ್ಲೆನು. ಎಂಬುದಾಗಿ ಹೇಳಿ ಅವರನ್ನೆಲ್ಲಾ ಪ್ರಾರ್ಥಿಸಿ ಉಪಚಾರೋಕ್ತಿಗಳನ್ನು ಹೇಳಿ ಕಳುಹಿಸಿದಳು.

೩೧. ಅನಂತರ ಆ ರಾಜಪತ್ನಿಯರಿಂದ ಗೌರವಿತಳಾದ ಸೀತೆಯು ಅವರೆಲ್ಲರೂ ಹೋದಮೇಲೆ ಗಂಡನ ಬಳಿಗೆ ಹೊರಟುಹೋದಳು. ರಾಮನೂ ಕೂಡ ರಾಜರಿಂದ ಅನೇಕ ಬಗೆಯ ಕಪ್ಪಕಾಣಿಕೆಗಳಿಂದ ಗೌರವಿತನಾಗಿ ಸಂತೋಷದಿಂದ ಸೀತೆಯೊಡನೆ ಗರುಡನ ಮೇಲೆ ಕುಳಿತು ತನ್ನ ಪಟ್ಟಣಕ್ಕೆ ಹೋದನು.

೩೨. ಸೂರ್ಯಗ್ರಹಣ ಕಾಲದಲ್ಲಿ ಆ ಕುರುಕ್ಷೇತ್ರಕ್ಕೆ ಬಂದಿದ್ದ ರಾಜರೆಲ್ಲರೂ ರಾಮನ ದರ್ಶನದಿಂದ ಸಂತೋಷಗೊಂಡು ತಾವೂ ಸ್ನಾನದಾನಗಳನ್ನು ಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

೩೩–೩೪. ರಾಮನು ಅಯೋಧ್ಯಾಪಟ್ಟಣದಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಪಟ್ಟಣದ ಮುತ್ತೈದೆಯರು ಗುಂಬಾರತಿಯನ್ನು ಎತ್ತಿದರು.

ನೀರಾಜಿತಃ ಕುಂಭದೀಪ್ತೈರ್ಯಯೌ ನಿಜಗೃಹಂ ಮುದಾ ।
ರೇಮೇ ಜನಕನಂದಿನ್ಯಾ ಚಿರಕಾಲಂ ಯಥಾಸುಖಂ ॥ ೩೪ ॥

ಏವಂ ರಾಮೇಣ ಸಾಕೇತಪುರ್ಯಾಮವನಿಕನ್ಯಯಾ ।
ನಾನಾಕ್ರೀಡಾಕೌತುಕಾನಿ ಕೃತಾನ್ಯಪಿ ಮಹಾಂತಿ ಚ ॥ ೩೫ ॥

ಯಥಾ ಕೃತಾ ರಾಘವೇಣ ಸುಖಕ್ರೀಡಾಸ್ತು ಸೀತಯಾ ।
ತಥೈವೋರ್ಮಿಲಯಾ ರೇಮೇ ಲಕ್ಷ್ಮಣೋಽಪಿ ಯಥಾಸುಖಂ ॥ ೩೬ ॥

ಮಾಂಡವ್ಯಾ ಭರತಶ್ಚಾಪಿ ರೇಮೇ ರಾಮೋ ಯಥಾ ಪ್ರಿಯಾ ।
ತಥೈವ ಶ್ರುತಕೀರ್ತ್ಯಾಽಪಿ ಶತ್ರುಘ್ನಃ ಕ್ರೀಡನಂ ವ್ಯಧಾತ್ ॥ ೩೭ ॥

ಏವಂ ತೇ ಸ್ವೀಯಪತ್ನೀಭಿಃ ಪೌರಾಃ ಕ್ರೀಡಾ ಪ್ರಚಕ್ರಿರೇ ।
ನಾನಾದೇಶವಾಸಿನಶ್ಚ ನಾನಾದ್ವೀಪನಿವಾಸಿನಃ ॥ ೩೮ ॥

ಅವನ್ನೆಲ್ಲಾ ಸ್ವೀಕರಿಸಿಕೊಂಡು ಮನೆಗೆ ಹೋಗಿ ಜನಕನಂದಿನಿಯಾದ ಸೀತೆಯೊಡನೆ ಬಹುಕಾಲದವರೆಗೆ ಸುಖಿಸಿದನು.

೩೫. ಈ ರೀತಿಯಾಗಿ ರಾಮನು ಅಯೋಧ್ಯೆಯಲ್ಲಿ ಆ ಸೀತೆಯೊಡನೆ ಸುಖಪಡುತ್ತ ಅನೇಕವಾದ ಆಶ್ಚರ್ಯವಾದ ಕಾರ್ಯಗಳನ್ನೂ ಉತ್ಕೃಷ್ಟವಾದ ಕಾರ್ಯಗಳನ್ನೂ ಮಾಡಿದನು.

೩೬–೩೭. ರಾಮನು ಸೀತೆಯೊಡನೆ ಯಾವ ರೀತಿಯಾಗಿ ಸುಖಿಸುತ್ತಿದ್ದನೋ ಹಾಗೆಯೇ ಲಕ್ಷ್ಮಣನು ಊರ್ಮಿಳೆಯೊಡನೆ ಅದೇ ರೀತಿಯಾಗಿ ಸುಖಿಸಿದನು. ಮಾಂಡವಿಯೊಡನೆ ಭರತನೂ ಶ್ರುತಕೀರ್ತಿಯೊಡನೆ ಶತ್ರುಘ್ನನೂ ರಾಮನಂತೆಯೇ ರಮಿಸುತ್ತಿದ್ದರು.

೩೮–೩೯. ಇದೇ ರೀತಿಯಲ್ಲಿಯೇ ಪಟ್ಟಣಿಗರೂ ಕೂಡ ಅವರವರ ಹೆಂಡತಿಯರೊಡನೆ ಕ್ರೀಡಿಸುತ್ತಿದ್ದರು. ರಾಮನು ರಾಜ್ಯವಾಳುತ್ತಿರುವಾಗ ಇತರದೇಶಗಳ ಮತ್ತು ಇತರ ದ್ವೀಪಗಳ ಜನರೂ ಅವರವರ ಹೆಂಡಿರೊಡನೆ

ರೇಮಿರೇ ತೇಽಪಿ ಪತ್ನೀಭಿಃ ಸ್ವೀಯಾಭಿರ್ಮುದಿತಾಸ್ಸುಖಂ ।
ಸೀತಯಾ ರಾಘವೋ ರೇಮೇ ಯಥಾ ಗೌರ್ಯಾ ಸ ಶಂಕರಃ ॥ ೩೯ ॥

ರಾಮೇ ಶಾಸತಿ ರಾಜ್ಯೇಽತ್ರ ನ ಕೋಽಪಿ ಜಗತೀತಲೇ ।
ಪರದಾರರತೋ ವೈಶ್ಯಾಗಾಮೀ ಮಾದಕವಸ್ತುಭುಕ್ ॥ ೪೦ ॥

ನ ದರಿದ್ರೋ ನೈವ ರೋಗೀ ಚಿಂತಾಗ್ರಸ್ತೋ ನ ವಿಹ್ವಲಃ ।
ನ ಪಾಪಾತ್ಮಾ ಜಡೋ ನಾಸೀನ್ನ ಚೋರೋ ನಾಪಿ ಹಿಂಸಕಃ ॥ ೪೧ ॥

ಏವಂ ಶಿಷ್ಯ ಯಥಾ ಪ್ರೋಕ್ತಂ ವಿಲಾಸಚರಿತಂ ವರಂ ।
ಸೀತಯಾ ರಾಮಚಂದ್ರಸ್ಯ ಸಾಕೇತೇ ಸೌಖ್ಯದಂ ನೃಣಾಂ ॥ ೪೨ ॥

ಸುಖವಾಗಿ ಕ್ರೀಡಿಸುತ್ತಿದ್ದರು. ಸೀತೆಯೊಡನೆ ರಾಮನು ಗೌರಿಯೊಡನೆ ಶಂಕರನು ರಮಿಸುತ್ತಿದ್ದಂತೆ ರಮಿಸಿದನು.

೪೦. ರಾಮನು ರಾಜ್ಯಭಾರಮಾಡುತ್ತಿರಲು ಒಬ್ಬನೂ ಪರರಹೆಂಡಿರಲ್ಲಿ ರಮಿಸುತ್ತಿರಲಿಲ್ಲ. ವೇಶ್ಯರ ಸಹವಾಸವನ್ನೂ ಮಾಡುತ್ತಿರಲಿಲ್ಲ. ಮಾದಕ ವಸ್ತುಗಳನ್ನೂ ಸೇವಿಸುತ್ತಿರಲಿಲ್ಲ.

೪೧. ರೋಗಿಯಾಗಲಿ, ದರಿದ್ರನಾಗಲಿ, ಇರಲಿಲ್ಲ. ಯಾವನಿಗೂ ಚಿಂತೆಯೆಂಬುದೇ ಇರಲಿಲ್ಲ. ದೀನತೆಯನ್ನು ಯಾವನೂ ಹೊಂದುತ್ತಿರಲಿಲ್ಲ. ಪಾಪಕೆಲಸವನ್ನೂ ಮಾಡುತ್ತಿರಲಿಲ್ಲ. ಸೋಮಾರಿಯಾಗಿರುತ್ತಿರಲಿಲ್ಲ. ಕಳ್ಳತನವನ್ನು ಮಾಡುತ್ತಿರಲಿಲ್ಲ. ಹಿಂಸೆಯೆಂಬುದೇ ಇರಲಿಲ್ಲ.

೪೨. ಎಲೈ ಶಿಷ್ಯನೆ! ರಾಮನ ವಿಲಾಸಚರಿತ್ರೆಯನ್ನು ಹೀಗೆ ವರ್ಣಿಸಿದ್ದೇನೆ. ಸೀತೆಯೊಡನೆ ರಾಮಚಂದ್ರನು ಅಯೋಧ್ಯೆಯಲ್ಲಿ ಈರೀತಿ ನಡೆಯುತ್ತಿದ್ದನು. ಇದನ್ನು ಕೇಳಿದರೆ ಮನುಷ್ಯರಿಗೆ ಸೌಖ್ಯವುಂಟಾಗುತ್ತದೆ.

ವಿಲಾಸಕಾಂಡಮೇತದ್ವೈ ಯಃ ಪಠಿಷ್ಯತಿ ಮಾನವಃ ।
ಪ್ರಾತಃಕಾಲೇ ಚ ಮಧ್ಯಾಹ್ನೇ ನಿಶಾಯಾಂ ರಾಮಸನ್ನಿಧೌ ॥ ೪೩ ॥

ಸ ಜ್ಞೇಯೋ ರಾಘವಸ್ಸಾಕ್ಷಾದ್ಭುವಿ ಮಾನವರೂಪಧೃಕ್ ।
ವಿಲಾಸಕಾಂಡಪಠನಾದ್ಧನಾರ್ಥೀ ಧನಮಾಪ್ನುಯಾತ್ ॥ ೪೪ ॥

ಭೋಗಾನಾಪ್ನೋತಿ ಭೋಗಾರ್ಥೀ ಪುತ್ರಾರ್ಥೀ ಪುತ್ರಮಾಪ್ನುಯಾತ್ ।
ವಿಲಾಸಕಾಂಡಮೇತದ್ವೈ ರಾಮಭಕ್ತ್ಯೈಕಮಾನಸಃ ॥ ೪೫ ॥

ಯಃ ಶೃಣೋತಿ ನರಃ ಕಶ್ಚಿತ್ಸ ಸುಖಂ ಪ್ರಾಪ್ನುಯಾದ್ಭುವಿ ।
ವಿಲಾಸಕಾಂಡಶ್ರವಣಾನ್ನರಃ ಪಾಪಾತ್ಪ್ರಮುಚ್ಯತೇ ॥ ೪೬ ॥

ವಿಲಾಸಕಾಂಡಂ ಪರಮಂ ರಮ್ಯಂ ಜನಮನೋಹರಂ ।
ಆನಂದದಾಯಕಂ ಚಿತ್ರಂ ಶ್ರುತಿಸೌಖ್ಯಪ್ರದಂ ಮಹತ್ ॥ ೪೭ ॥

---

೪೩. ಈ ವಿಲಾಸಕಾಂಡವನ್ನು ಯಾವನು ರಾಮನ ಸನ್ನಿಧಿಯಲ್ಲಿ ಪ್ರಾತಃಕಾಲ ಮಧ್ಯಾಹ್ನ ಸಾಯಂಕಾಲಗಳಲ್ಲಿ ಓದುತ್ತಾನೆಯೋ ಅವನನ್ನು ಭೂಮಿಯಲ್ಲಿ ಅವತರಿಸಿರುವ ರಾಮನ ರೂಪವೆಂದೇ ತಿಳಿಯಬೇಕು.

೪೪. ಈ ವಿಲಾಸಕಾಂಡವನ್ನು ಓದುವುದರಿಂದ ಧನಾರ್ಥಿಯು ಧನವನ್ನೂ ಭೋಗಾರ್ಥಿಯು ಭೋಗವನ್ನೂ, ಪುತ್ರಾರ್ಥಿಯು ಪುತ್ರನನ್ನೂ ಹೊಂದುತ್ತಾರೆ.

೪೫–೪೬. ರಾಮನಲ್ಲಿಯೇ ಭಕ್ತಿಯುಳ್ಳವನಾಗಿ ಒಂದೇ ಮನಸ್ಸಿನಿಂದ ಈ ವಿಲಾಸಕಾಂಡವನ್ನು ಕೇಳಿದರೆ ಅವನು ಈ ಭೂಲೋಕದಲ್ಲಿ ಸುಖವನ್ನು ಹೊಂದುತ್ತಾನೆ. ಈ ವಿಲಾಸಕಾಂಡ ಶ್ರವಣದಿಂದ ಪಾಪಗಳೆಲ್ಲವೂ ಹೋಗುತ್ತವೆ.

೪೭. ಈ ವಿಲಾಸಕಾಂಡವು ಉತ್ತಮವಾದುದು. ರಮ್ಯವಾದುದು. ಜನಮನೋಹರವಾದುದು. ಆನಂದವನ್ನು ಕೊಡುತ್ತದೆ. ಚಿತ್ರವಿಚಿತ್ರವಾಗಿರುತ್ತದೆ. ಕಿವಿಗೆ ಇಂಪಾಗಿರುತ್ತದೆ.

ಯೇ ಪಠಂತಿ ನಿಶ್ರುಣ್ವಂತಿ ಸರ್ವಾನ್ ಕಾಮಾನ್ ಲಭಂತಿ ತೇ ।
ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಂಧನಾರ್ಥೀ ಪ್ರಾಪ್ನುಯಾಚ್ಛ್ರಿಯಂ॥

ಕಾಮಾನಾಪ್ನೋತಿ ಕಾಮಾರ್ಥೀ ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್।
ನಿಶಾಯಾಂ ಮಂಚಕೇ ಸ್ಥಿತ್ವಾ ನಿಜಪತ್ನ್ಯಾ ಪಠೇತ್ತು ಯಃ ॥ ೪೯ ॥

ವಿಲಾಸಕಾಂಡಂ ಷಣ್ಮಾಸಂ ತಸ್ಯ ಪುತ್ರೋ ಭವಿಷ್ಯತಿ ।
ಅಥವಾ ಮಂಚಕೇ ವ್ಯಾಸಂ ಸನ್ನಿವೇಶ್ಯಾಥ ತತ್ಪುರಃ ॥ ೫೦ ॥

ದ್ವಿತೀಯೇ ಮಂಚಕೇ ಸ್ಥಿತ್ವಾ ಸ್ವಯಂ ದಯಿತಯಾ ಸಹ ।
ಯಃ ಶೃಣೋತಿ ನಿಶಾಯಾಂ ಹಿ ವಿಲಾಸಾಖ್ಯಂ ಮನೋರಮಂ ॥ ೫೧ ॥

---

೪೮. ಇದನ್ನು ಯಾರು ಕೇಳುವರೋ, ಯಾರು ಓದುವರೋ, ಅವರು ಸಕಲ ಇಷ್ಟಾರ್ಥಗಳನ್ನೂ ಹೊಂದುತ್ತಾರೆ. ಧರ್ಮಾರ್ಥಿಯು ಧರ್ಮವನ್ನೂ ಧನಾರ್ಥಿಯು ಧನವನ್ನೂ ಹೊಂದುತ್ತಾರೆ.

೪೯. ಕಾಮಾರ್ಥಿಯು ಕಾಮಗಳನ್ನೂ, ಮೋಕ್ಷಾರ್ಥಿಯು ಮೋಕ್ಷವನ್ನೂ ಹೊಂದುತ್ತಾರೆ. ರಾತ್ರಿಯಲ್ಲಿ ಹೆಂಡತಿಯೊಡನೆ ಮಂಚದಮೇಲೆ ಕುಳಿತು ಕೊಂಡು ಈ ವಿಲಾಸಕಾಂಡವನ್ನು ಆರುತಿಂಗಳವರೆಗೆ ಓದಿದರೆ ಅವನಿಗೆ ಪುತ್ರರಾಗುತ್ತಾರೆ.

೫೦. ಅದಾಗದಿದ್ದರೆ ಮಂಚದಮೇಲೆ ವ್ಯಾಸರೂಪನಾದ ಪುರಾಣಿಕನನ್ನು ಕೂರಿಸಿ ಆ ಮಂಚದ ಎದುರಿಗೆ ಮತ್ತೊಂದು ಮಂಚವನ್ನು ಹಾಕಿಕೊಂಡು ತಾನು ತನ್ನ ಹೆಂಡತಿಯೊಡನೆ ಅದರಲ್ಲಿ ಕೂತುಕೊಳ್ಳಬೇಕು.

೫೧. ಅನಂತರ ರಾತ್ರಿಯಲ್ಲಿ ಅವನಿಂದ ಈ ವಿಲಾಸಕಾಂಡವನ್ನು ಓದಿಸಿ ಕೇಳಬೇಕು ಹಾಗೆ ಮಾಡಿದರೆ ಆರುತಿಂಗಳು ಕೇಳಿದರೆ ಮಕ್ಕಳಾಗುತ್ತವೆ.

ಏತತ್ಕಾಂಡಂ ಪವಿತ್ರಂ ಚ ನವಮಾಸಾ್ ಪುನಃ ಪುನಃ ।
ತಸ್ಯಾಪುತ್ರಸ್ಯ ಪುತ್ರಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೫೨ ॥

ಪುತ್ರಾರ್ಥಮೇವ ಶ್ರೋತವ್ಯಂ ಮಂಚಕೇ ಹ್ಯುಪವಿಶ್ಯ ಚ ।
ಶ್ರೋತವ್ಯಂ ನಾನ್ಯಕಾಮೇಷು ಮಂಚಕಸ್ಥೈರ್ನರೈಃ ಕದಾ ॥ ೫೩ ॥

ವಿಲಾಸಕಾಂಡಮೇತದ್ವೈ ಸ್ತ್ರೀಕಾಮಾದ್ಯಃ ಪಠೇನ್ನರಃ ।
ಸ ಭಾರ್ಯಾಂ ಪ್ರಾಪ್ನುಯಾದ್ರಮ್ಯಾಂ ನವಮಾಸೈರ್ನ ಸಂಶಯಃ ॥ ೫೪ ॥

ಕುಮಾರೀ ಶ್ರುಣುಯಾದೇತತ್ಪತ್ಯರ್ಥಂ ಕಾಂಡಮುತ್ತಮಂ ।
ಪುನಃ ಪುನಸ್ತು ಷಣ್ಮಾಸಂ ಲಭಿಷ್ಯತಿ ವರಂ ಪತಿಂ ।
ವಿಲಾಸಕಾಂಡಮೇತದ್ವೈ ಯಾಃ ಶ್ರುಣ್ವಂತಿ ವರಾಃ ಸ್ತ್ರಿಯಃ ॥ ೫೫ ॥

---

೫೨. ಪವಿತ್ರವಾದ ಈ ವಿಲಾಸಕಾಂಡವನ್ನು ಆರುತಿಂಗಳ ಕಾಲವಾಗದಿದ್ದರೆ ಒಂಭತ್ತುತಿಂಗಳಕಾಲ ಮತ್ತೆ ಮತ್ತೆ ಕೇಳುತ್ತಿರಬೇಕು. ಹೀಗೆ ಮಾಡಿದರೆ ಮಕ್ಕಳಿಲ್ಲದ ಎಂತಹವರಿಗಾದರೂ ಮಕ್ಕಳಾಗುತ್ತವೆ. ಇದರಲ್ಲಿ ಸಂದೇಹಪಡಬೇಕಾದುದೇ ಇಲ್ಲ.

೫೩-೫೪. ಮಂಚದಲ್ಲಿ ಕುಳಿತುಕೊಂಡು ಕೇಳಬೇಕಾದರೆ ಪುತ್ರಾರ್ಥಿಯೇ ಕೇಳಬೇಕು. ಮಿಕ್ಕ ಯಾವಬಗೆಯಾದ ಇಷ್ಟವನ್ನು ಇಟ್ಟುಕೊಂಡೂ ಮಂಚದ ಮೇಲೆ ಕುಳಿತು ಕೇಳಬಾರದು. ಈ ವಿಲಾಸಕಾಂಡವನ್ನು ಹೆಂಡತಿಯ ಅಪೇಕ್ಷೆಯಿಂದ ಓದುವವನು ಒಂಭತ್ತುತಿಂಗಳೊಳಗೆ ಸ್ತ್ರೀಯನ್ನು ಹೊಂದಿ ಮದುವೆಯಾಗುತ್ತಾನೆ. ಸಂಶಯವಿಲ್ಲ.

೫೫. ಮದುವೆಯಾಗದವಳು ಈ ವಿಲಾಸಕಾಂಡವನ್ನು ಕೇಳಿದರೆ ಆರು ತಿಂಗಳಲ್ಲಿ ಉತ್ತಮವಾದ ಪತಿಯನ್ನು ಹೊಂದುತ್ತಾಳೆ. ಈ ವಿಲಾಸಕಾಂಡವನ್ನು ಉತ್ತಮರಾದ ಹೆಂಗಸರು ಕೇಳಿದರೆ ಅವರಿಗೆ ಸೌಭಾಗ್ಯಲಕ್ಷ್ಮಿಯು ಯಾವಾಗಲೂ ನಾಶಹೊಂದುವುದೇ ಇಲ್ಲ.

ಸೌಭಾಗ್ಯಲಕ್ಷ್ಮ್ಯಾ ನ ಕದಾ ತಾ ವಿಹೀನಾ ಭವಂತಿ ಹಿ ।
ಭರ್ತುರ್ರಾಯುಷ್ಯವೃದ್ಧ್ಯರ್ಥಂ ಸ್ತ್ರೀಭಿಶ್ಚ ಸ್ನಾನಪೂರ್ವಕಂ ।
ಶ್ರವಣೀಯಂ ವಿಲಾಸಾಖ್ಯಮೇತತ್ಕಾಂಡಂ ಮನೋಹರಂ || ೫೬ ||

ರಮ್ಯಂ ವಿಚಿತ್ರಂ ಮಧುರಂ ಪವಿತ್ರಂ
ವಿಲಾಸಕಾಂಡಂ ಹಿ ಯಥೇಕ್ಷುದಂಡಂ ।
ಪಾಠಾದಿನಾ ಪಾಪಚಯಪ್ರಚಂಡಂ
ಧರ್ಮೈಕಕುಂಡಂ ಭವರೋಗದಂಡಂ || ೫೭ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ವಿಲಾಸಕಾಂಡೇ ಕುರುಕ್ಷೇತ್ರ ವರ್ಣನಂ
ನಾಮ ನವಮಸ್ಸರ್ಗಸ್ಸಮಾಪ್ತಃ

---

೫೬. ಹೆಂಗಸರಾದವರು ಸ್ನಾನಮಾಡಿ ಈ ವಿಲಾಸಕಾಂಡವನ್ನು ಕೇಳಿದರೆ ಗಂಡನಿಗೆ ಆಯುಷ್ಯವು ಹೆಚ್ಚುತ್ತದೆ. ಈ ವಿಲಾಸಕಾಂಡವು ಮನೋಹರವಾದುದು.

೫೭. ಈ ವಿಲಾಸಕಾಂಡವು ಪಟಾಪಟಿಯ ಕಬ್ಬಿನ ಜಲ್ಲೆಯಂತೆ ರಮ್ಯವಾಗಿದೆ. ವಿಚಿತ್ರವಾಗಿದೆ. ಮಧುರವಾಗಿದೆ. ಪವಿತ್ರವಾಗಿದೆ. ಇದನ್ನು ಓದುವುದರಿಂದ ಪಾಪಗಳೆಲ್ಲವೂ ಹೋಗುತ್ತವೆ. ಧರ್ಮಕ್ಕೆ ಇದು ಸ್ಥಾನವು. ಸಂಸಾರವೆಂಬ ರೋಗಕ್ಕೆ ನಾಶಕವಾದ ಔಷಧವು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ ಕುರುಕ್ಷೇತ್ರ
ವರ್ಣನವೆಂಬ ಒಂಭತ್ತನೆಯ ಸರ್ಗವು ಸಮಾಪ್ತವು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ವಿಲಾಸಕಾಂಡದಲ್ಲಿ
|| ಒಂಭತ್ತನೆಯ ಸರ್ಗದ ಸಾರಾಂಶವು ||

ಒಂದುಸಾರಿ ರಾಮನು ಸೂರ್ಯಗ್ರಹಣಕಾಲದಲ್ಲಿ ಸ್ನಾನಕ್ಕೋಸ್ಕರ ಎಲ್ಲರೊಡನೆಯೂ ಕುರುಕ್ಷೇತ್ರಕ್ಕೆ ಹೋದನು ಅಲ್ಲಿಗೆ ದೇವತೆಗಳೂ, ಋಷಿಗಳೂ, ರಾಜರೂ ಬಂದಿದ್ದರು.

ಅಲ್ಲಿ ರಾಮನು ಗ್ರಹಣಸ್ನಾನವನ್ನು ಮಾಡಿ ಸೀತೆಯೊಡನೆ ಅನೇಕವಾದ ದಾನಗಳನ್ನು ಮಾಡಿದನು. ಅನಂತರ ರಾಜರೆಲ್ಲರೂ ಕಪ್ಪಕಾಣಿಕೆಗಳನ್ನು ಕೊಟ್ಟು ಶ್ರೀರಾಮನ ದರ್ಶನವನ್ನು ಮಾಡಿದರು. ಅಂತೆಯೇ ರಾಜಪತ್ನಿಯರೂ ಕಾಣಿಕೆಯನ್ನು ಕೊಟ್ಟು ಸೀತೆಯ ದರ್ಶನವನ್ನು ಮಾಡಿದರು. ಆಗ ಸೀತೆಯು ಅವರಿಂದ ಕಾಣಿಕೆಗಳನ್ನು ತೆಗೆದುಕೊಳ್ಳುತ್ತ ಒಡ್ಡೋಲಗದಲ್ಲಿರುತ್ತ ಎಲ್ಲರೊಡನೆಯೂ ಕುಳಿತಿದ್ದಳು.

ಆ ಸಭೆಯಲ್ಲಿ ರಾಜಪತ್ನಿಯರೂ, ದೇವಪತ್ನಿಯರೂ, ಋಷಿಪತ್ನಿಯರೂ ಎಲ್ಲರೂ ಇದ್ದರು. ಈ ಸಮಯದಲ್ಲಿ ಅಗಸ್ತ್ಯನ ಹೆಂಡತಿಯಾದ ಲೋಪಾಮುದ್ರೆಯು ರಾಮನ ಚರಿತ್ರೆಯನ್ನು ಕೇಳಲು ಇಚ್ಛಿಸಿ ಆ ವಿಷಯವನ್ನು ಹೇಳಬೇಕೆಂದು ಸೀತೆಯನ್ನು ಕೇಳಲು ಆ ಸೀತೆಯು ತಾನು ರಾಮನನ್ನು ಮದುವೆಯಾದಂದಿನಿಂದ ಮೊದಲುಗೊಂಡು ಈಗ ತಾನು ಕುರುಕ್ಷೇತ್ರಕ್ಕೆ ಬಂದಿರುವವರೆಗೂ ಆ ರಾಮನ ಕಥೆಯನ್ನು ಹೇಳಿದಳು.

ಇದೆಲ್ಲವನ್ನೂ ಕೇಳಿ ಆ ಲೋಪಾಮುದ್ರೆಯು ಜಾನಕಿಯನ್ನು ಕುರಿತು, “ ಎಲೈ ಜಾನಕಿಯೇ ! ರಾಮನು ಮಾಡಿದ ಎಲ್ಲಾ ಕೆಲಸವೂ ಸರಿಹೋದುವು.

ಆದರೆ ಒಂದು ವಿಷಯದಲ್ಲಿ ಅವನು ವ್ಯರ್ಥವಾಗಿ ಶ್ರಮಪಟ್ಟನು. ಸಮುದ್ರವು ದೊಡ್ಡದಾಗಿದೆಯೆಂದು ತಿಳಿದು ರಾಮನು ಅದಕ್ಕೆ ಸೇತುವೆಯನ್ನು ಕಟ್ಟಲು ಏತಕ್ಕೆ ಪ್ರಯತ್ನಪಡಬೇಕಾಗಿದ್ದಿತು? ಅಗಸ್ತ್ಯನೊಡನೆ ಒಂದು ಮಾತನ್ನು ಹೇಳಿದ್ದರೆ ಆ ಅಗಸ್ತ್ಯನು ಒಂದೇ ಕ್ಷಣದಲ್ಲಿ ಸಮುದ್ರವೆಲ್ಲವನ್ನೂ ಅಂಗೈಯ್ಯಲ್ಲಿ ಟ್ಟುಕೊಂಡು ಕುಡಿದುಬಿಡುತ್ತಿದ್ದನು. ಆಗ ಸಮುದ್ರವು ಬರಿದಾಗಿ ನೆಲವು ಕಾಣುತ್ತಿದ್ದಿತು. ಕಪಿಗಳೆಲ್ಲವೂ ಮಾರ್ಗಮಾಡಿಕೊಂಡು ಸುಖವಾಗಿ ಹೋಗ ಬಹುದಾಗಿದ್ದಿತು. ಹಾಗೆ ಮಾಡದೆ ಆ ರಾಮನು ಕಪಿಗಳನ್ನೂ ಕಷ್ಟಪಡಿಸಿ ತಾನೂ ಶ್ರಮಪಟ್ಟನು '' ಎಂದಳು.

ಜಾನಕಿಯು ಇದನ್ನು ಕೇಳಿ ನಕ್ಕು "ಎಲೈ ಪತಿವ್ರತೆಯಾದ ಲೋಪಾ ಮುದ್ರೆಯೇ! ರಾಮನು ಮಾಡಿದ ಕೆಲಸವೇ ಸರಿಯಾದುದು. ಅದಕ್ಕೆ ಕಾರಣ ವನ್ನು ಹೇಳುತ್ತೇನೆ. ಕೇಳು. ಅಲ್ಲದೆ ಈ ಸಭೆಯಲ್ಲಿರುವವರೆಲ್ಲರೂ ಮನಸ್ಸಿಟ್ಟು ಕೇಳಲಿ.

ಶ್ರೀರಾಮನು ಬಾಣವನ್ನು ಬಿಟ್ಟು ಆ ಸಮುದ್ರವನ್ನು ನೀರಿಲ್ಲದಂತೆ ಶೋಷಿ ಸಬಹುದಾಗಿದ್ದಿತು. ಹಾಗೆ ಮಾಡಿದರೆ ನೀರಿನಲ್ಲಿರುವ ಪ್ರಾಣಿಗಳು ಸಾಯುವುದ ರಿಂದ ಬಹುವಾಗಿ ಪ್ರಾಣಿವಧೆಯಾಗುವುದೆಂದು ಹಾಗೆ ಮಾಡಲಿಲ್ಲ.

ರಾಮನು ಆಕಾಶಮಾರ್ಗವಾಗಿಯೇ ಹಾರಿ ಸಮುದ್ರವನ್ನು ದಾಟಬಹು ದಾಗಿದ್ದಿತು. ಹಾಗೆ ಮಾಡಿದರೆ ರಾಮನು ಮನುಷ್ಯನೆಂಬ ಭಾವನೆಯು ರಾವಣ ನಿಗೆ ಬಾರದೇ ಹೋದೀತೆಂದು ತಿಳಿದು ಹಾಗೆ ಮಾಡಲಿಲ್ಲ.

ಹನುಮಂತನಮೇಲೆ ಕುಳಿತು ಆ ರಾಮನು ಸಮುದ್ರವನ್ನು ದಾಟಿ ಹೋಗ ಬಹುದಾಗಿದ್ದಿತು. ಹಾಗೆ ಮಾಡಿದರೆ ಜನರು ಆ ರಾಮನ ಪೌರುಷದಲ್ಲಿ ತಿರಸ್ಕಾರ ಭಾವವನ್ನು ಹೊಂದಿಯಾರೆಂದು ಹಾಗೆ ಮಾಡಲಿಲ್ಲ.

ಕೈಗಳಿಂದ ಈಜಿಕೊಂಡೇ ದಾಟಬಹುದಾಗಿತ್ತಲ್ಲ! ಎಂದರೆ ಬ್ರಾಹ್ಮಣನ ಮೂತ್ರವನ್ನು ದಾಟಬಾರದು ಎಂದು ಶಾಸ್ತ್ರದಲ್ಲಿ ಹೇಳಿರುವುದರಿಂದ ಹಾಗೆ ಮಾಡಲಿಲ್ಲ.

ನಿನ್ನ ಗಂಡನಾದ ಅಗಸ್ತ್ಯನನ್ನೇ ಪ್ರಾರ್ಥಿಸಿಕೊಳ್ಳೋಣವೆಂದರೆ ಅವನು ಈ ಸಮುದ್ರವನ್ನು ಮೊದಲೇ ಕುಡಿದು ಮೂತ್ರದ್ವಾರದಿಂದ ಬಿಟ್ಟುಬಿಟ್ಟಿರುವನು. ಆದರಿಂದ ಇದು ಯಾವಾಗಲೂ ಉಪ್ಪಾಗಿರುವುದು. ಅಂತಹ ಉಪ್ಪಾದ ನೀರನ್ನು ಮತ್ತೆ ಕುಡಿಯಿರಿ ಎಂದು ಹೇಗೆ ಹೇಳುವುದು? ಕುಡಿಯಲು ಹೇಗೆ ತಾನೆ ಸಾಧ್ಯವಾಗುವುದು? ಎಂದು ಹಾಗೆ ಮಾಡಲಿಲ್ಲ.

ಒಂದುವೇಳೆ ನನ್ನ ಮಾತನ್ನು ಮೀರದೆ ಆ ಋಷಿಯು ಸಮುದ್ರವನ್ನು ಕುಡಿದರೆ "ರಾಮನು ಬ್ರಾಹ್ಮಣನ ಕೈಯ್ಯಿಂದ ತನ್ನ ಕೆಲಸಕ್ಕೋಸ್ಕರ ಮೂತ್ರವನ್ನು ಕುಡಿಸಿದನು" ಎಂದು ಜನಗಳು ನಿಂದಿಸುತ್ತಾರೆ. ತನಗೆ ಅಪಕೀರ್ತಿಯು ಬರುವುದು ಎಂದು ತಿಳಿದೂ ಹಾಗೆ ಮಾಡಲಿಲ್ಲ.

ಇವೆಲ್ಲವನ್ನೂ ಯೋಚಿಸಿ ಶ್ರೀರಾಮನು ತನಗೆ ಕೀರ್ತಿ ಹೆಚ್ಚಲೆಂದೇ ಸೇತುವೆಯನ್ನು ಕಟ್ಟಿದನು. ಅಲ್ಲದೆ ಈ ರಾಮನು ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದಂತೆ ಹಿಂದೆ ಯಾವನೂ ಕಟ್ಟಿರಲಿಲ್ಲ. ಮುಂದೆ ಕಟ್ಟುವುದೂ ಇಲ್ಲ. ಎಂದು ಜನರು ಹೊಗಳುತ್ತಾರೆ. ಅಲ್ಲದೆ ಸಮುದ್ರದಲ್ಲಿ ಕಲ್ಲುಗಳನ್ನು ತೇಲಾಡುವಂತೆ ಈ ಶ್ರೀರಾಮನು ಮಾಡಿದನೆಂದು ಅವನನ್ನು ಹೊಗಳುತ್ತಾರೆ. ಎಂದಳು.

ಸೀತೆಯು ಈ ಮಾತನ್ನು ಕೇಳಿ ಆ ಲೋಪಾಮುದ್ರೆಯು ಸೋತುಹೋದಳು. ಮತ್ತು ಸುಮ್ಮನಾಗಿಬಿಟ್ಟಳು. ಜಾನಕಿಯು ನಗುತ್ತ ಆಕೆಯನ್ನು ಗೌರವಿಸಿದಳು. ಅಲ್ಲದೆ "ಎಲೈ ಲೋಪಾಮುದ್ರೆಯೇ! ನನ್ನ ತಪ್ಪನ್ನು ಕ್ಷಮಿಸು. ನಿನ್ನಲ್ಲಿರುವ ಸ್ನೇಹದಿಂದಲೂ ಪ್ರಸಂಗ ಬಂದುದರಿಂದಲೂ ರಾಮನಲ್ಲಿರುವ ಸ್ನೇಹದಿಂದಲೂ ಈ ವಿಷಯವನ್ನು ಹೇಳಿದೆನು. ಅಷ್ಟೆ! ಆದರೆ ನಿನ್ನ ಗಂಡನ ಆಶೀರ್ವಾದದಿಂದಲೇ ರಾಮನಲ್ಲಿ ಈ ಪೌರುಷವಿರುವುದು ಎಂಬುದನ್ನು ನಾನು ಬಲ್ಲೆನು." ಎಂದು ಹೇಳಿ ಉಳಿದವರನ್ನೂ ಗೌರವಿಸಿ ಎಲ್ಲರನ್ನೂ ಕಳುಹಿಸಿದಳು. ತಾನೂ ರಾಮನ ಬಳಿಗೆ ಹೊರಟುಹೋದಳು.

ಆನಂತರ ಅವರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಇದೇ ರೀತಿಯಾಗಿ ಸುಖಿಸುತ್ತ ರಾಮ ಲಕ್ಷ್ಮಣ ಭರತ ಶತ್ರುಘ್ನರೂ ಇದ್ದರು.

ಆಗ ಪ್ರಪಂಚವೆಲ್ಲವೂ ಕೆಟ್ಟಕೆಲಸಕ್ಕೆ ಹೋಗದೆ ಸ್ವಧರ್ಮವನ್ನು ಬಿಡದೆ ಸುಖದಿಂದಿರುತ್ತಿದ್ದಿತು.

ಈ ವಿಲಾಸಕಾಂಡವನ್ನು ಓದುವುದರಿಂದ ಇಷ್ಟಾರ್ಥಗಳೆಲ್ಲವೂ ಕೈಗೂಡುತ್ತವೆ. ಪವಿತ್ರವಾದ ಈ ವಿಲಾಸಕಾಂಡವನ್ನು ಕೇಳುವುದರಿಂದ ಅಪುತ್ರವಂತರು ಪುತ್ರವಂತರಾಗುವರು. ವಿವಾಹವಿಲ್ಲದ ಕನ್ಯೆಯು ಆರು ತಿಂಗಳೊಳಗಾಗಿ ಉತ್ತಮಪತಿಯನ್ನು ಹೊಂದುವಳು. ಹೆಂಗಸರು ಸ್ನಾನಮಾಡಿ ಭಕ್ತಿಯಿಂದ ಇದನ್ನು ಕೇಳಿದರೆ ಅವರ ಗಂಡಂದಿರ ಆಯುಷ್ಯವು ಹೆಚ್ಚುತ್ತದೆ. ಇದನ್ನು ಓದುವುದರಿಂದ ಪಾಪಗಳೆಲ್ಲವೂ ನಾಶವಾಗುತ್ತವೆ. ಧರ್ಮಕ್ಕೆ ಇದು ಸ್ಥಾನವು. ಇದನ್ನು ಯಾರು ಓದುವರೋ ಯಾರು ಕೇಳುವರೋ ಅವರು ಸಕಲ ಇಷ್ಟಾರ್ಥಗಳನ್ನೂ ಹೊಂದುತ್ತಾರೆ. ಧರ್ಮಾರ್ಥಿಯು ಧರ್ಮವನ್ನೂ ಧನಾರ್ಥಿಯು ಧನವನ್ನೂ ಪುತ್ರಾರ್ಥಿಯು ಪುತ್ರರನ್ನೂ ಮೋಕ್ಷಾರ್ಥಿಯು ಮೋಕ್ಷವನ್ನೂ ಪಡೆಯುವರು. ಸಂದೇಹವಿಲ್ಲ.

ಶ್ರೀಮದಾನಂದರಾಮಾಯಣೇ ವಿಲಾಸಕಾಂಡಃ ಚತುರ್ಥಃ ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ನಾಲ್ಕನೆಯದಾದ ವಿಲಾಸಕಾಂಡವು ಮುಗಿದುದು

॥ ಶ್ರೀಃ ॥

॥ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

ಪಂಚಮಃ ಜನ್ಮಕಾಂಡಃ

॥ ಪ್ರಥಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ರಾಮಸ್ಸೀತಯಾ ಸ ಸಾಕೇತೇ ಬಂಧುಭಿಶ್ಚಿರಂ ।
ಕ್ರೀಡಾಂ ಚಕಾರ ವಿವಿಧಾಂ ದುರ್ಲಭಾಂ ತ್ರಿದಶೈರಪಿ ॥ ೧ ॥

ಏಕದಾ ರಘುವೀರಸ್ತು ಸೋಂತರ್ವತ್ನೀಂ ವಿದೇಹಜಾಂ ।
ಜ್ಞಾತ್ವಾ ಧಾತ್ರೀ ಮುಖಾತ್ತುಷ್ಟೋ ದದೌ ದಾನಾನ್ಯನೇಕಶಃ ॥ ೨ ॥

ಶ್ರೀಮದಾನಂದರಾಮಾಯಣದಲ್ಲಿ ಜನ್ಮಕಾಂಡವು

ಒಂದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀರಾಮನು ಸೀತೆಯೊಡನೆಯೂ ತಮ್ಮಂದಿರೊಡನೆಯೂ ಅಯೋಧ್ಯೆಯಲ್ಲಿ ದೇವತೆಗಳಿಗೂ ಅಸಾಧ್ಯವಾದ ಕ್ರೀಡೆಗಳನ್ನು ಕ್ರೀಡಿಸುತ್ತಿದ್ದನು.

೨. ಒಂದುಸಾರಿ ಶ್ರೀರಾಮನು ಸೀತೆಯು ಗರ್ಭಿಣಿಯಾಗಿರುವಳೆಂಬುದನ್ನು ದಾದಿಯ ಮುಖದಿಂದ ತಿಳಿದು ಸಂತೋಷಗೊಂಡು ಅನೇಕವಾದ ದಾನಗಳನ್ನು ಮಾಡಿದನು.

ಬ್ರಾಹ್ಮಣಾನ್ ಭೋಜಯಾಮಾಸ ಕೋಟಿಶಃ ಪ್ರತ್ಯಹಂ ಮುದಾ ।
ಚಕಾರ ನಾನಾಲಂಕಾರಾನ್ನವೀನಾನ್ರತ್ನನಿರ್ಮಿತಾನ್ ॥ ೩ ॥

ಸೀತಾಯೈ ದಿವ್ಯವಾಸಾಂಸಿ ಹೇಮತಂತೂದ್ಭವಾನಿ ಚ ।
ಹರಿತಾನ್ಯಥ ಪೀತಾನಿ ರಕ್ತಾನಿ ಚಿತ್ರಿತಾನ್ಯಪಿ ॥ ೪ ॥

ಕಾರಯಿತ್ವಾಥ ಕುಶಲೈರ್ಜನೈಸ್ಸೂಕ್ಷ್ಮಾಣಿ ರಾಘವಃ ।
ವಿಸ್ತೃತಾನ್ಯತಿದೀರ್ಘಾಣಿ ಪುಷ್ಪವತ್ಸುಲಘೂನ್ಯಪಿ ॥ ೫ ॥

ಮಹಾರ್ಘಾಣ್ಯತಿರಮ್ಯಾಣಿ ದದೌ ಪತ್ನ್ಯೈ ಮುದಾನ್ವಿತಃ ।
ಅಥ ಮಾಸೇ ದ್ವಿತೀಯೇಹ್ನಿ ರಾಮೋ ದ್ವಿಜವರೈಸ್ಸಹ ॥ ೬ ॥

ವಸಿಷ್ಠೇನ ಪುಂಸವನವಿಧಾನಂ ವಿಧಿಪೂರ್ವಕಂ ।
ಸ ಚಕಾರೋತ್ಸವೈರ್ದಿವ್ಯೈಸ್ಸೀತಾಯಾಃ ಪರಮಾದರಾತ್ ॥ ೭ ॥

---

೩. ಪ್ರತಿದಿನವೂ ಕೋಟಿಗಟ್ಟಲೆಯಲ್ಲಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುತ್ತಿದ್ದನು. ಆಗ ಆಕೆಗೆ ರತ್ನನಿರ್ಮಿತವಾದ ಬಗೆ ಬಗೆಯ ಅಲಂಕಾರಗಳನ್ನು ಬಹುವಾಗಿ ಮಾಡಿಸುತ್ತಿದ್ದನು.

೪-೫. ಆ ಸೀತೆಗೆ ಚಿನ್ನದ ಜರಿಗಳಿರುವ ಹೊಂಬಣ್ಣ, ಹಸುರುಬಣ್ಣ, ಕೆಂಪುಬಣ್ಣ, ಚಿತ್ರಬಣ್ಣಗಳಿರುವ ಹೊಸ ಹೊಸ ಸೀರೆಗಳನ್ನು ಜಾಣರಾದವರಿಂದ ನೇಯಿಸಿ ಭಾರವಿಲ್ಲದಂತೆ ಸೂಕ್ಷ್ಮವಾಗಿ ಮಾಡಿಸಿ ತಂದುಕೊಡುತ್ತಿದ್ದನು. ಅವುಗಳಲ್ಲಿ ಅಗಲವಾಗಿಯೂ, ಉದ್ದವಾಗಿಯೂ ಇರುವ ಹೂವುಗಳನ್ನು ಚಿತ್ರಿಸುತ್ತಿದ್ದನು.

೬. ಅವು ಬಹು ಬೆಲೆಯುಳ್ಳವಾಗಿಯೂ ಮನೋಹರವಾಗಿಯೂ ಇರುತ್ತಿದ್ದುವು. ಅಂತೆಯೇ ಎರಡನೆಯ ತಿಂಗಳೂ ಬಂದಿತು.

೭. ಆಗ ರಾಮನು ಬ್ರಾಹ್ಮಣರನ್ನು ಕರೆಸಿ ವಸಿಷ್ಠನಿಂದ ವಿಧಿಪೂರ್ವಕವಾಗಿ ಪುಂಸವನವನ್ನು ಸಂತೋಷದಿಂದಲೂ, ವಿಜೃಂಭಣೆಯಿಂದಲೂ ಮಾಡಿಸಿದನು.

ಸುಮೇಧಾಂ ಜನಕಂ ಚಾಪಿ ಸಮಾಹೂಯ ಸವಿಸ್ತರಂ ।
ಜನಕಃ ಪರಮುಸ್ತುಷ್ಟಸ್ಸೋಂತರ್ವತ್ನೀಂ ನಿಜಾಂ ಸುತಾಂ ॥ ೮ ॥

ದೃಷ್ಟ್ವಾ ಪುಂಸವನೋತ್ಸಾಹೇ ಸೀತಾರಾಮೌ ಪ್ರಪೂಜಯತ್ ।
ನಾನಾಲಂಕಾರವಾಸಾಂಸಿ ಹೇಮುತಂತೂದ್ಭವಾನಿ ಚ ॥ ೯ ॥

ಹರಿತಾನ್ಯಥ ಪೀತಾನಿ ಸೂಕ್ಷ್ಮಾಣ್ಯಪಿ ಲಘೂನಿ ಚ ।
ವಿಸ್ತೀರ್ಣಾನ್ಯಥ ದೀರ್ಘಾಣಿ ಸೀತಾಯೈ ಸ ದದೌ ಮುದಾ ॥ ೧೦ ॥

ಹಸ್ತ್ಯುಷ್ಟ್ರರಥತುರಗಾನ್ ದಾಸೀರ್ದಾಸಾನ್ ಮನೋರಮಾನ್ ।
ಶಿಬಿಕಾಶ್ಚಾಪಿ ವಾಸಾಂಸಿ ದದೌ ರಾಮಾಯ ಸಾದರಂ ॥ ೧೧ ॥

ಏವಂ ಸಂಪೂಜ್ಯ ಶ್ರೀರಾಮಂ ಸೀತಾಂ ಚ ಜನಕಃ ಸ್ತ್ರಿಯಾ ।
ಸಂಮಾನಿತೋ ರಾಘವೇಣ ಯಯೌ ಸ್ವಾಂ ಮಿಥಿಲಾಂ ಪುರೀಂ ॥ ೧೨ ॥

೮-೯. ಸೀತೆಯ ತಾಯಿ ತಂದೆಯರಾದ ಸುಮೇಧೆ ಜನಕರನ್ನು ಕರೆಸಿದನು. ಜನಕನು ತನ್ನ ಮಗಳು ಗರ್ಭಿಣಿಯಾಗಿರುವುದನ್ನು ತಿಳಿದು ಆ ಪುಂಸವನೋತ್ಸವದಲ್ಲಿ ಸೀತಾರಾಮರಿಗೆ ಬಹುವಾದ ಬಹುಮಾನಗಳನ್ನು ಕೊಟ್ಟನು.

೧೦. ಆಗ ಜರಿಯಿರುವಂತಹ ಹಸುರು, ಹಳದಿ, ಕೆಂಪುಬಣ್ಣಗಳುಳ್ಳ ಸೂಕ್ಷ್ಮವೂ, ಹಗುರುವೂ ಆಗಿರುವ, ಉದ್ದವೂ ಅಗಲವೂ ಆಗಿರುವ ಬಟ್ಟೆಗಳನ್ನು ಕೊಟ್ಟನು.

೧೧. ಆನೆ, ಒಂಟೆ, ಕುದುರೆ, ರಥ, ಉತ್ತಮರಾದ ದಾಸಿಯರು ದಾಸರು, ಪಲ್ಲಕ್ಕಿಗಳು ಮೇನೆಗಳು, ಬಟ್ಟೆಗಳು ಇವನ್ನು ರಾಮನಿಗೆ ಬಹು ಸಂತೋಷದಿಂದ ಕೊಟ್ಟನು.

೧೨. ಜನಕನು ರಾಮನಿಗೆ ಮೇಲೆ ಹೇಳಿದುವೆಲ್ಲವನ್ನೂ ಕೊಟ್ಟು ಗೌರವಿಸಿ ತಾನೂ ಅವರಿಂದ ಗೌರವಿತನಾಗಿ ಹೆಂಡತಿಯೊಡನೆ ತನ್ನ ಪಟ್ಟಣಕ್ಕೆ ಹೋದನು.

ಅಥ ರಾಮಸ್ಸೀತಯಾ ಸ ರೇಮೇ ಸಂತುಷ್ಟಮಾನಸಃ ।
ಗರ್ಭಾತಿಭಾರಾಕ್ರಾಂತಾ ಸಾ ಸೀತಾ ಸನ್ಯಸ್ತಭೂಷಣಾ ॥ ೧೩ ॥

ಪಾಂಡುವರ್ಣಾನನಾ ದೀನಾ ಕೃಶಾಪಿ ನಿತರಾಂ ಬಭೌ ।
ಏಕದಾ ರಾಘವಂ ಧಾತ್ರ್ಯಾ ಸೂಚಯಾಮಾಸ ರಾಘವಂ ॥ ೧೪ ॥

ಮಮೇಚ್ಛಾಽರಣ್ಯಮಧ್ಯೇದ್ಯ ರಂತುಮಸ್ತಿ ತ್ವಯಾ ಸಹ ।
ತಥೋಪವನಮಧ್ಯೇಪಿ ಸಾಕೇತನಗರಾದ್ಬಹಿಃ ॥ ೧೫ ॥

ತದ್ಧಾತ್ರ್ಯಾಸ್ಯಾತ್ಪ್ರಿಯಾವಾಕ್ಯಂ ಶ್ರುತ್ವಾ ಚಾಹೂಯ ಲಕ್ಷ್ಮಣಂ ।
ರಾಮೋಽಬ್ರವೀಚ್ಛುಭಾಂ ವಾಚಂ ಮಧುರಾಂ ಸ್ಮಿತಪೂರ್ವಿಕಾಂ ॥ ೧೬ ॥

---

೧೩. ಅನಂತರ ರಾಮನು ಸೀತೆಯೊಡನೆ ಸಂತೋಷದಿಂದ ಕ್ರೀಡಿಸುತ್ತಿದ್ದನು. ಸೀತೆಗೆ ಗರ್ಭದ ಭಾರವು ಹೆಚ್ಚಾಗುತ್ತ ಬರಲು ಅಲಂಕಾರಗಳನ್ನು ತೆಗೆದಿಟ್ಟಳು.

೧೪. ಮತ್ತು ಬೆಳ್ಳಗಾಗುತ್ತ ಬಂದಳು. ಮುಖದಲ್ಲಿ ಆಲಸ್ಯವು ಕಂಡು ಬಂದಿತು. ಹೀಗಾದರೂ ಅವಳು ರಮ್ಯವಾಗಿಯೇ ಇದ್ದಳು. ಆಗ ಆ ಜಾನಕಿಯು ದಾದಿಯರಿಂದ ತನ್ನ ಇಚ್ಛೆಯನ್ನು ರಾಮನಿಗೆ ಸೂಚಿಸಿದಳು.

೧೫. ಆ ಸೂಚನೆಯು, ಎಲೈ ನಾಥನೇ ! ನನಗೆ ಅಯೋಧ್ಯೆಯ ಹೊರಗಡೆಯಲ್ಲಿರುವ ತೋಟಗಳ ಮಧ್ಯದಲ್ಲಿಯೂ, ಕೈತೋಟಗಳ ಮಧ್ಯದಲ್ಲಿಯೂ ನಿನ್ನೊಡನೆ ವಿಹರಿಸಬೇಕೆಂಬ ಆಸೆಯು ಇದೆ ಎಂಬುದಾಗಿದ್ದಿತು.

೧೬. ಪ್ರಿಯೆಯು ಹೇಳಿದ ಈ ಮಾತನ್ನು ದಾದಿಯ ಮುಖದಿಂದ ಕೇಳಿ ಒಡನೆಯೇ ಲಕ್ಷ್ಮಣನನ್ನು ಕರೆದು ರಾಮನು ನಗುತ್ತ ಅವನಿಗೆ ಇಂತೆಂದು ಹೇಳಿದನು.

ಹೇ ಸೌಮಿತ್ರೇದ್ಯ ಸೀತಾಯಾ ಜಾತಾರಾಮಸ್ಪೃಹಾಸ್ತಿ ಹಿ |
ಮಯಾ ರಂತುಂ ತತಸ್ತ್ವಂ ಹಿ ಸೂಚಿತೋಽಸಿ ಮಯಾಧುನಾ ॥ ೧೭ ॥

ತಥೇತಿ ರಾಮವಾಕ್ಯಂ ಸೋಽಪ್ಯುರರೀಕೃತ್ಯ ಲಕ್ಷ್ಮಣಃ |
ಗತ್ವಾ ಸಭಾಯಾಮಾಹೂಯ ತ್ವರಯಾಮಾಸ ಸೇವಕಾನ್ ॥ ೧೮ ॥

ಚಿತ್ರೋಷ್ಣೀಷಾನ್ ವೇತ್ರಪಾಣೀನ್ ಪ್ರಾಹ ವಾಕ್ಯಂ ಸ್ಮಿತಾನನಃ |
ಕಥನೀಯಂ ಹಟ್ಟಮಧ್ಯೇ ಹ್ಯಾರಾಮಂ ಯಾತಿ ಜಾನಕೀ ॥ ೧೯ ॥

ರಾಘವೇಣ ತತೋ ಯೂಯಂ ವಣಿಜಸ್ತ್ವರಯಂತ್ವಿತಿ |
ತತಸ್ಸೌಮಿತ್ರಿವಚನಾತ್ ಶ್ರುತ್ವಾ ತೇ ವೇತ್ರಪಾಣಯಃ ॥ ೨೦ ॥

---

೧೭. ಎಲೈ ಸೌಮಿತ್ರಿಯೇ! ಸೀತೆಗೆ ಆರಾಮಗಳಲ್ಲಿ ಕ್ರೀಡಿಸಬೇಕೆಂಬ ಇಚ್ಛೆಯಿದೆಯಂತೆ. ನಾನು ಆಕೆಯ ಜೊತೆಯಲ್ಲಿರಬೇಕಂತೆ. ಈ ರೀತಿಯಾಗಿ ಹೇಳಿ ಕಳುಹಿಸಿರುವಳು. ಅದನ್ನು ನಿನಗೆ ಸೂಚಿಸಿದ್ದೇನೆ. ಎಂದನು.

೧೮. ರಾಮನ ಆ ಮಾತನ್ನು ಲಕ್ಷ್ಮಣನು ಕೇಳಿ ಹಾಗೆಯೇ ಆಗಲೆಂದು ಒಪ್ಪಿಕೊಂಡು ಸಭೆಗೆ ಹೋಗಿ ಸೇವಕರನ್ನು ಕರೆಸಿ ಅವರೆಲ್ಲರನ್ನೂ ಇಂತೆಂದು ಅವಸರಪಡಿಸಿ ಕರೆಸಿದನು.

೧೯-೨೦. ಚಿತ್ರವಾಗಿರುವ ಪಾಗುಳ್ಳವರೂ ಕೈಯ್ಯಲ್ಲಿ ಬೆತ್ತವನ್ನು ಹಿಡಿದಿರುವವರೂ ಆದ ಸೇವಕರು ಅಲ್ಲಿಗೆ ಲಕ್ಷ್ಮಣನಮಾತಿನಂತೆ ಬರಲು ಅವರನ್ನು ಕುರಿತು ನೀವೆಲ್ಲರೂ ರಾಜಬೀದಿಗಳಲ್ಲಿ ಹೋಗುತ್ತ "ಜಾನಕಿಯು ತೋಟಗಳಿಗೆ ವಿಹಾರಕ್ಕೋಸ್ಕರ ಹೋಗುವಳು. ರಾಮನೂ ಹೋಗುವನು. ವರ್ತಕರೆಲ್ಲರೂ ಸಿದ್ಧರಾಗಿರಿ" ಎಂದು ಹೇಳಬೇಕೆಂದನು.

ಚಿತ್ರೋಷ್ಣೀಷಾ ರುಕ್ಮದಂಡಾ ರಾಜಮಾರ್ಗೇ ಚತುಷ್ಪಥೇ ।
ಹಟ್ಟೇ ವೀಥ್ಯಾಮೂರ್ಧ್ವಹಸ್ತಾಸ್ತದಾ ಪ್ರೋಚುರ್ಮಹಾಸ್ವರೈಃ ॥ ೨೧ ॥

ಪೌರಾಶ್ಚ ವಣಿಜಸ್ಸರ್ವೇ ತಥಾನ್ಯೇ ವ್ಯವಸಾಯಿನಃ ।
ಶ್ರುಣ್ವಂತು ಹೃಷ್ಟಹೃದಯಾಸ್ಸೀತೋದ್ಯಾನಂ ಪ್ರಗಚ್ಛತಿ ॥ ೨೨ ॥

ರಾಘವೇಣಾಭ್ಯನುಜ್ಞಾತೈರ್ಭವದ್ಭಿರ್ಗಮ್ಯತಾಂ ಪುರಃ ।
ಏವಂ ಸರ್ವಾನ್ನಿವೇದ್ಯಾಥ ಜಗ್ಮುಸ್ತೇ ಲಕ್ಷ್ಮಣಂ ಚರಾಃ ॥ ೨೩ ॥

ದೂತಾನಾಜ್ಞಾಪಯಾಮಾಸ ಪುನಸ್ಸೌಮಿತ್ರಿರಾದರಾತ್ ।
ವಾಸೋಗೇಹಾನಿ ಚಿತ್ರಾಣಿ ಹ್ಯಾರಾಮೇಷು ಸಮಂತತಃ ॥ ೨೪ ॥

ಕಲ್ಪನೀಯಾನಿ ವೇಗೇನ ಶೋಧನೀಯಾ ಭುವಶ್ಶುಭಾಃ ।
ಜಲಯಂತ್ರಾಣಿ ಸರ್ವಾಣಿ ಶೋಧನೀಯಾನಿ ಸಾದರಂ ॥ ೨೫ ॥

---

೨೧. ಅಂತೆಯೇ ಸೌಮಿತ್ರಿಯ ಮಾತನ್ನು ಕೇಳಿ ಆಳುಗಳು ತಮ್ಮ ವೇಷಭೂಷಣಗಳನ್ನು ಧರಿಸಿಕೊಂಡು ರಾಜಬೀದಿಯಲ್ಲಿಯೂ ಚೌಕಗಳಲ್ಲಿಯೂ ಅಂಗಡಿಬೀದಿಯಲ್ಲಿಯೂ, ಬೀದಿ ಬೀದಿಗಳಲ್ಲಿಯೂ, ಕೈಗಳನ್ನು ಮೇಲಕ್ಕೆತ್ತಿ ಕೊಂಡು ಗಟ್ಟಿಯಾಗಿ ಕೂಗುತ್ತ ಲಕ್ಷ್ಮಣನು ಅಪ್ಪಣೆಮಾಡಿದುದನ್ನೇ ಹೇಳಿದರು.

೨೨. ಪಟ್ಟಣಿಗರು, ವರ್ತಕರು, ಮತ್ತು ವ್ಯವಸಾಯಗಾರರು ಇವರೆಲ್ಲರೂ ಮನಸ್ಸಿಟ್ಟು ಕೇಳಿರಿ. ಸೀತೆಯು ಊರಹೊರಗಿನ ಉದ್ಯಾನಕ್ಕೆ ಹೋಗುವಳು.

೨೩. ರಾಮನೂ, ಸೀತೆಯೂ ಬರುತ್ತಿರುವರು. ರಾಮನ ಅಪ್ಪಣೆಯ ಪ್ರಕಾರ ನೀವೆಲ್ಲರೂ ಮೊದಲೇ ಹೋಗಿರಿ. ಎಂಬುದಾಗಿ ಎಲ್ಲರಿಗೂ ದೂತರು ಹೇಳಿ ಲಕ್ಷ್ಮಣನ ಬಳಿಗೆ ಹೋದರು.

೨೪–೨೫. ಸೌಮಿತ್ರಿಯು ಮತ್ತೆ ದೂತರನ್ನು ಕರೆದು ಇಂತೆಂದು ಅಪ್ಪಣೆ ಮಾಡಿದನು. ಆ ವನಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಗುಡಾರಗಳನ್ನು ಹಾಕಿರಿ. ದಾರಿಗಳೆಲ್ಲವನ್ನೂ ಹಳ್ಳತಿಟ್ಟುಗಳಿಲ್ಲದಂತೆಯೂ, ಕಲ್ಲುಮುಳ್ಳುಗಳಿಲ್ಲದಂತೆಯೂ, ಸರಿಮಾಡಿರಿ. ಜಲಯಂತ್ರಗಳನ್ನು ಬಹು ಜಾಗರೂಕತೆಯಿಂದ ಶುದ್ಧಿಮಾಡಿರಿ.

ನಾನಾಮಾಂಗಲ್ಯವಸ್ತೂನಿ ಸುಗಂಧೀನಿ ಮಹಾಂತಿ ಚ ।
ಸ್ಥಾಪನೀಯಾನಿ ವೈ ತತ್ರ ವಸ್ತ್ರಾಣ್ಯತಿಲಘೂನಿ ಚ ॥ ೨೬ ॥

ಏವಮಾದೀನ್ಯನೇಕಾನಿ ಕಲ್ಪನೀಯಾನಿ ಸಾದರಂ ।
ಶೃಂಗಾರಣೀಯಾಃ ಪ್ರಾಸಾದಾಸ್ಸರ್ವೇ ಹ್ಯಾರಾಮಸಂಭವಾಃ ॥ ೨೭ ॥

ದಿವ್ಯವಸ್ತ್ರೈಸ್ತೋರಣಾದ್ಯೈರ್ಮುಕ್ತಾಗುಚ್ಛೈರ್ವಿರಾಜಿತಾಃ ।
ತಥೇತಿ ದೂತಾಸ್ತೇ ಸರ್ವೇ ತಥಾ ಚಕ್ರುಸ್ತ್ವರಾನ್ವಿತಾಃ ॥ ೨೮ ॥

ಲಕ್ಷ್ಮಣೋ ರಾಘವಂ ಗತ್ವಾ ನತ್ವಾ ತಂ ಪ್ರಾಹ ಸಾದರಂ ।
ಉದ್ಯೋಗಸಮಯೋದ್ಯೈವ ವರ್ತತೇ ರಘುನಂದನಾ ॥ ೨೯ ॥

ಕುರ್ಯಾಂ ಸಿದ್ಧಂ ಹಿ ಕಿಂ ಯಾನಂ ಸೀತಾಯಾಸ್ತವ ವಾ ವಿಭೋ ।
ತತ್ಸೌಮಿತ್ರೇರ್ವಚಶ್ಶ್ರುತ್ವಾ ಜಾನಕೀಂ ರಾಘವೋಽಬ್ರವೀತ್ ॥ ೩೦ ॥

---

೨೬. ಮಂಗಳಕರವಾದ ಪದಾರ್ಥಗಳನ್ನೂ, ಸುಗಂಧವುಳ್ಳ ಪದಾರ್ಥಗಳನ್ನೂ, ಸೂಕ್ಷ್ಮವೂ, ಉತ್ತಮವೂ ಆದ ವಸ್ತ್ರಗಳನ್ನೂ ಅಲ್ಲಲ್ಲಿ ಇಟ್ಟಿರಿ.

೨೭. ಇನ್ನೂ ಉತ್ತಮವಾದ ಅನೇಕ ಪದಾರ್ಥಗಳನ್ನೂ ಇಡಿರಿ. ಆ ವನದಲ್ಲಿರುವ ಮನೆಗಳನ್ನು ರಮ್ಯವಾಗಿರುವಂತೆ ಶೃಂಗರಿಸಿರಿ.

೨೮. ಅವೆಲ್ಲಕ್ಕೂ ದಿವ್ಯವಾದ ವಸ್ತ್ರಗಳನ್ನೂ ತೋರಣಗಳನ್ನೂ ಕಟ್ಟಿರಿ. ಮುತ್ತಿನಗೊಂಚಲನ್ನು ಅಲ್ಲಲ್ಲಿ ನೇತುಬೀಳುವಂತೆ ಕಟ್ಟಿರಿ. ಎಂದು ಅಪ್ಪಣೆ ಮಾಡಲು ದೂತರು ಅಂತೆಯೇ ಮಾಡಿದರು.

೨೯–೩೦. ಅನಂತರ ಲಕ್ಷ್ಮಣನು ರಾಮನ ಬಳಿಗೆ ಹೋಗಿ ನಮಸ್ಕರಿಸಿ ಎಲೈ ರಘುನಂದನನೇ ! ಎಲ್ಲವೂ ಸಿದ್ಧವಾಗಿದೆ. ಇದೇ ಪ್ರಯಾಣ ಸಮಯವು. ಸೀತೆಗೆ ಯಾವ ಬಗೆಯ ಯಾನವನ್ನು ಸಿದ್ಧಮಾಡಲಿ ? ನಿನಗೆ ಯಾವ ಬಗೆಯ ಯಾನವನ್ನು ಸಿದ್ಧಪಡಿಸಲಿ ? ಎಂದನು. ಸೌಮಿತ್ರಿಯು ಹೀಗೆ ಹೇಳಿದುದನ್ನು ಕೇಳಿ ರಾಮನು ಜಾನಕಿಯನ್ನು ಕುರಿತು ಇಂತೆಂದನು.

ಸೀತೇ ಯಾನಂ ವದಾದ್ಯ ತ್ವಂ ಯತ್ತೇ ಮನಸಿ ವರ್ತತೇ ।
ತದ್ರಾಮವಚನಂ ಶ್ರುತ್ವಾ ಶಿಬಿಕಾಂ ಪ್ರಾಹ ಜಾನಕೀ ॥ ೩೧ ॥

ರಾಮೋಽಪಿ ರೋಚಯಾಮಾಸ ಶಿಬಿಕಾಮೇವ ವೈ ತದಾ ।
ತತ್ ಶ್ರುತ್ವಾ ಲಕ್ಷ್ಮಣಶ್ಚಾಪಿ ಶಿಬಿಕೇ ರತ್ನಭೂಷಿತೇ ॥ ೩೨ ॥

ಹೇಮತಂತೂದ್ಭವೈರ್ವಸ್ತ್ರೈಸ್ಸರ್ವತ್ರ ವೇಷ್ಟಿತೇ ಶುಭೇ ।
ಆನಯಾಮಾಸ ದೂತೈಸ್ಸನ್ಮುಕ್ತಾಜಾಲವಿರಾಜಿತೇ ॥ ೩೩ ॥

ಆರುರೋಹಾಥ ಶ್ರೀರಾಮಶ್ಶಿಬಿಕಾಂ ಪರಯಾ ಮುದಾ ।
ತತಸ್ಸೀತಾ ಪಾಂಡುರಾಂಗೀ ಪರಿಮೇಯವಿಭೂಷಣಾ ॥ ೩೪ ॥

---

೩೧. ಎಲೈ ಸೀತೆಯೇ! ನಿನಗೆ ಯಾವ ಯಾನವನ್ನು ಸಿದ್ಧಪಡಿಸ ಬೇಕು? ಯಾವುದು ನಿನ್ನ ಮನಸ್ಸಿನಲ್ಲಿದೆಯೋ ಅದನ್ನು ಹೇಳು. ಎಂದ ರಾಮನ ಈ ಮಾತನ್ನು ಕೇಳಿ ಸೀತೆಯು ಪಲ್ಲಕ್ಕಿಯನ್ನು ಸಿದ್ಧಪಡಿಸಲಿ ಎಂದು ಹೇಳಿದಳು.

೩೨. ಆಗ ರಾಮನೂ ಕೂಡ ತನಗೂ ಪಲ್ಲಕ್ಕಿಯೇ ಇರಲೆಂದು ಹೇಳಿದನು. ಇದನ್ನು ಕೇಳಿ ಲಕ್ಷ್ಮಣನು ರತ್ನಭೂಷಿತವಾದ ಎರಡು ಪಲ್ಲಕ್ಕಿಗಳನ್ನು ಸಿದ್ಧಪಡಿಸಿದನು.

೩೩. ಚಿನ್ನದ ಸರಿಗೆಯ ಬಟ್ಟೆಯಿಂದ ಪಲ್ಲಕ್ಕಿಗಳನ್ನು ಮುಚ್ಚಿದ್ದರು. ಮುತ್ತಿನಸರಗಳನ್ನು ನೇತುಹಾಕಿದ್ದರು. ಇಂತಹ ಪಲ್ಲಕ್ಕಿಗಳನ್ನು ತರಿಸಿದನು.

೩೪. ಆನಂತರ ಶ್ರೀರಾಮನು ಆ ಪಲ್ಲಕ್ಕಿಯನ್ನು ಸಂತೋಷದಿಂದ ಹತ್ತಿದನು. ಗರ್ಭಿಣಿಯಾದುದರಿಂದ ಬೆಳ್ಳಗಾಗಿರುವ ಸೀತೆಯು ಆಲಸ್ಯದಿಂದ ಉಪಯುಕ್ತವಾದ ಒಡವೆಗಳನ್ನು ಮಾತ್ರ ತೊಟ್ಟುಕೊಂಡಿದ್ದಳು.

ಕೃಶಾಂಗಯಷ್ಟಿರ್ದಾಸೀಭಿರ್ದತ್ತಹಸ್ತಾ ಯಯೌ ಶನೈಃ ।
ಶಿಬಿಕಾಮಾರುರೋಹಾಥ ಪೃಷ್ಠಲಗ್ನೋಪಬರ್ಹಣಾ ॥ ೩೫ ॥

ದಾಸೀಭಿರ್ವೀಜಿತಾ ಚಾಪಿ ದೃತಾಥೋಂಕೋಪಬರ್ಹಣಾ ।
ದಧಾರ ಶಿಬಿಕಾಗುಚ್ಛಂ ಹೇಮತಂತುವಿನಿರ್ಮಿತಂ ॥ ೩೬ ॥

ವಿಗುಂಫಿತಂ ಚ ಮುಕ್ತಾಭಿಸ್ಸೀತಾ ಸ್ವೀಯಕರೇಣ ತಂ ।
ಮುಕ್ತಾಜಾಲಗವಾಕ್ಷೈಶ್ಚ ಪಶ್ಯಂತೀ ಸಾ ಮುಹುರ್ಮುಹುಃ ॥ ೩೭ ॥

ರಾಜಮಾರ್ಗಗತಾನ್ಯೇವ ಕೌತುಕಾನಿ ಸಮಂತತಃ ।
ದದರ್ಶ ನೃತ್ತಂ ವೇಶ್ಯಾನಾಂ ಸಖೀಭಿಃ ಪರಿತೋ ವೃತಾ ॥ ೩೮ ॥

---

೩೫. ಕೈಕಾಲುಗಳು ಕೃಶವಾಗಿದ್ದುವು. ದಾಸಿಯರು ಕೈಯ್ಯನ್ನು ಹಿಡಿದುಕೊಂಡು ಬರುತ್ತಿದ್ದರು. ಆ ಸೀತೆಯು ಹತ್ತುವಾಗ ದಾಸಿಯರು ಹಿಂಭಾಗದಲ್ಲಿ ಆಕೆಯನ್ನು ಹಿಡಿದುಕೊಂಡು ಹತ್ತಿಸಿದರು. ಈ ರೀತಿಯಾಗಿ ಸೀತೆಯು ಪಲ್ಲಕ್ಕಿಯನ್ನು ಹತ್ತಿದಳು.

೩೬. ದಾಸಿಯರು ಆಕೆಗೆ ಗಾಳಿಯನ್ನು ಬೀಸುತ್ತಿದ್ದರು. ಸೀತೆಯು ಅತ್ತಿತ್ತಲಿರುವ ಒರಗುದಿಂಬುಗಳನ್ನು ಒರಗಿಕೊಂಡಿದ್ದಳು. ಮೇಲಿನಿಂದ ನೇತಾಡುತ್ತಿರುವ ಪಲ್ಲಕ್ಕಿಯ ಇಳಿಗೊಂಚಲನ್ನು ಹಿಡಿದುಕೊಂಡಿದ್ದಳು.

೩೭. ಆ ಗೊಂಚಲನ್ನು ಚಿನ್ನದ ಸರಿಗೆಗಳಿಂದ ಕಟ್ಟಿದ್ದರು. ಮುತ್ತುಗಳ ಗೊಂಚಲುಗಳನ್ನು ಸುತ್ತಲೂ ಕಟ್ಟಿದ್ದರು. ಅಂತಹ ಗೊಂಚಲನ್ನು ಹಿಡಿದುಕೊಂಡು ಮುತ್ತಿನ ಸರಗಳನ್ನು ಇಳಿಬಿಟ್ಟಿರುವ ಗವಾಕ್ಷಗಳಿಂದ ಆಗಾಗ್ಗೆ ಹೊರಗೆ ನೋಡುತ್ತಿದ್ದಳು.

೩೮. ರಾಜಬೀದಿಯಲ್ಲಿ ನಡೆಯುತ್ತಿರುವ ಆಶ್ಚರ್ಯಗಳನ್ನು ಆಗಾಗ್ಗೆ ನೋಡುತ್ತಲೂ, ವೇಶ್ಯೆಯರ ನರ್ತನವನ್ನು ಒಂದೊಂದು ವೇಳೆ ನೋಡುತ್ತಲೂ ಇದ್ದಳು. ಸಖಿಯರು ಅವಳ ಸುತ್ತಲೂ ಸುತ್ತುವರಿದಿದ್ದರು.

ತತಸ್ತೇ ಬಂಧವಸ್ಸರ್ವೇ ಬಂಧುಪತ್ನ್ಯಶ್ಚ ಮಾತರಃ ।
ಶಿಬಿಕಾಸೂಪಸಂವಿಷ್ಟಾ ದಿವ್ಯಾಸು ಚ ಪೃಥಕ್ ಪೃಥಕ್ ॥ ೩೯ ॥

ಅಗ್ರೇ ತೇ ಭ್ರಾತರಸ್ಸರ್ವೇ ತತಸ್ಸರ್ವಾಶ್ಚ ಮಾತರಃ ।
ಸೀತಾದ್ಯಾ ಬಂಧುಪತ್ನ್ಯಶ್ಚ ಸರ್ವೇಷಾಂ ಪುರತೋ ಗುರುಃ ॥ ೪೦ ॥

ಏವಂ ತೇ ಪ್ರಯಯುಸ್ಸರ್ವೇ ಪಶ್ಯಂತೋ ರಾಘವಂ ಮುಹುಃ ।
ನನೃತುರ್ವಾರನಾರ್ಯಶ್ಚ ನೇದುರ್ವಾದ್ಯಾನ್ಯನೇಕಶಃ ॥ ೪೧ ॥

ತುಷ್ಟುವುರ್ಬಂದಿನಸ್ಸರ್ವೇ ಸೀತಾಂ ಚ ರಘುನಾಯಕಂ ।
ಏವಂ ನಾನಾಸಮುತ್ಸಾಹೈರಾರಾಮಂ ಸ ಯಯೌ ಮುದಾ ॥ ೪೨ ॥

---

೩೯. ಅನಂತರ ಲಕ್ಷ್ಮಣ, ಭರತ, ಶತ್ರುಘ್ನರೂ ಅವರ ಹೆಂಡತಿಯರೂ ರಾಮನ ತಾಯಿಯರೂ ಎಲ್ಲರೂ ಬೇರೆ ಬೇರೆಯಾಗಿ ಪಲ್ಲಕ್ಕಿಯಲ್ಲಿ ಕುಳಿತು ಹೊರಟರು.

೪೦. ಮುಂದುಗಡೆಯಲ್ಲಿ ರಾಮನೂ ಅವನ ತಮ್ಮಂದಿರೂ ಹೊರಟರು. ಅವರ ಹಿಂದೆ ತಾಯಂದಿರು ಹೊರಟರು. ಅವರ ಹಿಂದೆ ಸೀತೆಯೂ ಅವಳ ಓರಗಿತ್ತಿಯರೂ ಹೊರಟರು. ಎಲ್ಲರಿಗೂ ಮುಂದೆಯೇ ಗುರುವಾದ ವಸಿಷ್ಠನೂ ಹೊರಟನು.

೪೧ ಇವರೆಲ್ಲರೂ ಕೂಡ ಆಗಾಗ್ಗೆ ಶ್ರೀರಾಮನನ್ನೇ ನೋಡುತ್ತಾ ಹೊರಟರು. ಆಗ ಸೂಳೆಯರು ಕುಣಿಯುತ್ತಿದ್ದರು ವಾದ್ಯಗಳೆಲ್ಲವೂ ಮೊಳಗುತ್ತಿದ್ದುವು. ವಿಧವಿಧವಾದ ವಿನೋದಗಳು ನಡೆಯುತ್ತಿದ್ದುವು.

೪೨. ಹೊಗಳಭಟರು ಸೀತೆಯನ್ನೂ, ರಾಮನನ್ನೂ ಹೊಗಳುತ್ತಿದ್ದರು. ಈ ರೀತಿಯಾಗಿ ಅನೇಕ ಉತ್ಸವಗಳೊಡನೆ ಶ್ರೀರಾಮನು ಊರಹೊರಗಿರುವ ಉದ್ಯಾನವನಕ್ಕೆ ಹೋದನು.

ರಾಘವಸ್ಸೀತಯಾ ಯುಕ್ತಸ್ಸೈನ್ಯೈಸ್ಸರ್ವತ್ರ ವೇಷ್ಟಿತೈಃ ।
ವಿವೇಶ ವಾಸೋಗೇಹಂ ಸ ಸಸೀತೋ ರಘುನಂದನಃ ॥ ೪೩ ॥

ವಾಸೋಗೇಹೇಷು ಸರ್ವೇ ತೇ ತಸ್ಥುಃ ಪೌರಾಸ್ಸಮಂತತಃ ।
ಹಟ್ಟಾಸ್ಸಮಂತತಶ್ಚಾಸನ್ನೃತುರ್ವಾರಯೋಷಿತಃ ॥ ೪೪ ॥

ವಾಸೋಗೇಹಸ್ಸಸೀತಾಯಾ ಭಿತ್ತಯೋ ವಸ್ತ್ರನಿರ್ಮಿತಾಃ ।
ಪಂಚಕ್ರೋಶಮಿತಾಯಾಮಾಶ್ಚಾಸ್ ವಿಸ್ತಾರತೋಽಪಿ ಚ ॥ ೪೫ ॥

ಪಂಚಕ್ರೋಶಮಿತಾಶ್ಚಾಸ್ ತತ್ರ ರೇಮೇ ವಿದೇಹಜಾ ।
ದದರ್ಶ ಜಾನಕೀ ಸಮ್ಯಗಾರಾಮಂ ನೃಪಸೌಖ್ಯದಂ ॥ ೪೬ ॥

---

೪೩. ಸೀತೆಯಿಂದ ಕೂಡಿದ ಈ ರಾಘವನನ್ನು ಸುತ್ತಲೂ ಸೈನಿಕರು ಆವರಿಸಿಕೊಂಡಿದ್ದರು. ಹೀಗೆ ಹೋದಮೇಲೆ ರಾಮನು ಸೀತೆಯೊಡನೆ ಆ ಗುಡಾರದ ಒಳಹೊಕ್ಕನು.

೪೪. ಆ ಪಟ್ಟಣಿಗರೂ ಕೂಡ ಸುತ್ತಲೂ ಇರುವ ಗುಡಾರಗಳಲ್ಲಿ ಇಳಿದುಕೊಂಡರು. ವೈಶ್ಯರು ಸುತ್ತಲೂ ಅಂಗಡಿಗಳನ್ನಿಟ್ಟರು. ವಾರಾಂಗನೆಯರು ಕುಣಿಯುತ್ತಿದ್ದರು.

೪೫. ಆ ಸೀತೆಯು ಇಳಿದುಕೊಂಡಿದ್ದ ಗುಡಾರವು ಐದುಕ್ರೋಶಗಳ ವಿಸ್ತಾರವಿದ್ದಿತು. ಅದಕ್ಕೆ ಬಟ್ಟೆಗಳಿಂದಲೇ ಗೋಡೆಗಳನ್ನು ನಿರ್ಮಿಸಿದ್ದರು.

೪೬. ಆ ಐದುಕ್ರೋಶಗಳ ವಿಸ್ತಾರವುಳ್ಳ ಆ ಗುಡಾರದಲ್ಲಿ ಸೀತೆಯು ವಿನೋದವಾಗಿದ್ದಳು. ಅಲ್ಲಿ ರಾಜರಿಗೆ ಸೌಖ್ಯವನ್ನುಂಟುಮಾಡುವ ಆ ಉಪವನವನ್ನು ಸೀತೆಯು ನೋಡಿ ಸುಖಿಸಿದಳು.

ರಸಾಲಯುಂ ರಸಾಲೈಸ್ತೈರಶೋಕೈಶ್ಶೋಕವಾರಣಂ |
ತಾಲೈಸ್ತಮಾಲೈರ್ಹಿಂತಾಲೈಶ್ಶಾಲೈಃಸ್ಸರ್ವತ್ರ ಶಾಲಿನಂ || ೪೭ ||

ಖಪುರೈಃ ಖಪುರಾಕಾರಂ ಶ್ರೀಫಲೈಶ್ಶ್ರೀಫಲಂ ಕಿಲ |
ಗುರುಶ್ರಿಯಂ ತ್ವಗುರುಭಿಃ ಕಪಿಪಿಂಗಂ ಕಪಿತ್ಥಕೈಃ || ೪೮ ||

ವನಶ್ರಿಯಃ ಕುಚಾಕಾರೈರ್ಲಕುಚೈಶ್ಚ ಮನೋರಮಂ |
ಸುಧಾಫಲಸಮಾರಂಭೈರಂಭಾಭಿಃ ಪರಿಭಾಷಿತಂ || ೪೯ ||

ಸುರಂಗೈಶ್ಚಾಪಿ ನಾರಂಗೈರಂಗಮಂಟಪವಚ್ಛ್ರಿಯಃ |
ವಾನೀರೈಶ್ಚಾಪಿ ಜಂಬೀರೈರ್ಬೀಜಪೂರೈಃ ಪ್ರಪೂರಿತಂ || ೫೦ ||

---

೪೭. ಆ ಉಪವನದಲ್ಲಿ ಸಿಹಿಮಾವಿನ ಮರಗಳು ಅನೇಕವಾಗಿದ್ದುವು. ಅವನ್ನು ನೋಡಿದರೆ ಬಹು ಮನೋಹರವಾಗಿದ್ದಿತು. ಅಲ್ಲಿರುವ ಅಶೋಕ ಮರಗಳನ್ನು ನೋಡಿದರೆ ಮನುಷ್ಯನು ಎಂತಹ ಶೋಕಕ್ಕೆ ಒಳಗಾಗಿದ್ದರೂ ಅವೆಲ್ಲವೂ ನಾಶವಾಗುವುದು. ತಾಳೆಯುಮರಗಳು, ಹೊಂಗೆಯುಮರಗಳು, ಹಿಂತಾಳಮರಗಳು, ತೇಗದ ಮರಗಳು, ಅಲ್ಲಿ ಬಹುವಾಗಿ ಪ್ರಕಾಶಿಸುತ್ತಿದ್ದುವು.

೪೮. ಕರ್ಪೂರದ ಮರಗಳು ಅಂತರಿಕ್ಷವನ್ನು ಚುಚ್ಚುವುವೋ ಎಂಬಂತಿದ್ದುವು. ಬಿಲ್ವದಮರಗಳಿಂದ ಲಕ್ಷ್ಮಿಗೆ ವಾಸಸ್ಥಾನವಾಗಿದ್ದಿತು. ಅಗರು ಮರಗಳು ಹೆಚ್ಚು ಸೌಂದರ್ಯವನ್ನುಂಟುಮಾಡುತ್ತಿದ್ದುವು. ಬೇಲದ ಮರಗಳು ಮನೋಹರವಾಗಿದ್ದುವು.

೪೯. ಕಿತ್ತಿಲೆಯ ಮರಗಳು ಬಹುವಾದ ಹಣ್ಣುಗಳನ್ನು ಬಿಟ್ಟಿದ್ದುದರಿಂದ ಆ ವನಕ್ಕೇ ಉತ್ತಮವಾದ ಕಳೆಯೇರಿದ್ದಿತು. ಬಾಳೆಯ ಮರಗಳಲ್ಲಿದ್ದ ಹಣ್ಣುಗಳನ್ನು ನೋಡಿದರೆ ಇವು ಅಮೃತದ ಹಣ್ಣುಗಳೇ ಎಂಬಂತಿದ್ದುವು.

೫೦. ಹೇರಳೆಯ ಹಣ್ಣುಗಳು ಒಳ್ಳೆಯ ರಂಗನ್ನು ಆ ವನಕ್ಕೆ ಉಂಟು ಮಾಡಿದ್ದುವು. ಇವು ನೇತಾಡುತ್ತಿದ್ದುದನ್ನು ನೋಡಿದರೆ ರಂಗಮಂಟಪಕ್ಕೆ ಅಲಂಕರಿಸಿರುವಂತೆ ಕಾಣುತ್ತಿದ್ದಿತು. ನೀರುಹಚ್ಚೆಗಿಡವು ಮನೋಹರವಾಗಿ ಕಾಣುತ್ತಿದ್ದಿತು. ಛಿಂಬೆ, ಸೀಬೆ ಗಿಡಗಳು ಬಹು ಪ್ರಕಾಶವಾಗಿದ್ದುವು.

ಮಂದಾಂದೋಲಿತಕರ್ಪೂರ ಕದಲೀದಲಸಂಜ್ಞಯಾ ।
ವಿಶ್ರಾಮಾಯ ಸಮಾಹ್ವಯಂತಮಿವಾಧ್ವಗಾನ್ ॥ ೫೧ ॥

ಪುನ್ನಾಗ ಇವ ಪುನ್ನಾಗಪಲ್ಲವೈಃ ಕರಪಲ್ಲವೈಃ ।
ಕಲಯಂತಮಿವಾಲೋಲೈರ್ಮಲ್ಲಿಕಾಸ್ತಬಕಸ್ತನಂ ॥ ೫೨ ॥

ವಿದೀರ್ಣದಾಡಿಮ್ಯೈಃ ಸ್ವಾಂತಂ ದರ್ಶಯಂತಂ ಸುರಾಗವತ್ ।
ಮಾಧವೀಧವರೂಪೇಣ ಶ್ಲಿಷ್ಯಂತಮಿವ ಸರ್ವತಃ ॥ ೫೩ ॥

ಉದುಂಬರೈರಂಬರಗೈರನಂತಫಲಶಾಲಭಿಃ ।
ಬ್ರಹ್ಮಾಂಡಕೋಟಿಬಿಭ್ರಂತಮನಂತಮಿವ ಸರ್ವತಃ ॥ ೫೪ ॥

---

೫೧. ಕರ್ಪೂರ ಬಾಳೆಯ ಮರಗಳು ನಿದಾನವಾಗಿ ಗಾಳಿಬೀಸುತ್ತಿರುವುದರಿಂದ ತಮ್ಮ ವಾಸನೆಯನ್ನು ಹರಡುತ್ತಿದ್ದುವು. ಮತ್ತು ತಮ್ಮ ಎಲೆಗಳನ್ನು ಅಲ್ಲಾಡಿಸುತ್ತಿದ್ದರೆ ಶ್ರಮಪಟ್ಟಿರುವ ದಾರಿಗರನ್ನು ವಿಶ್ರಾಂತಿಗೋಸ್ಕರ ಕರೆಯುತ್ತಿರುವಂತೆ ಕಾಣುತ್ತಿದ್ದುವು.

೫೨–೫೩. ಪುನ್ನಾಗವು ಚಿಗುರಿದ್ದರೆ ಸರ್ಪಗಳಂತೆ ಕಾಣುತ್ತಿದ್ದಿತು. ಮಲ್ಲಿಗೆಯ ಗೊಂಚಲುಗಳು ಮನೋಹರವಾಗಿದ್ದುವು. ದಾಳಿಂಬೆಯ ಹಣ್ಣು ಬಿರಿದಿದ್ದರೆ ಅದು ಅನುರಾಗದಿಂದ ತನ್ನ ಹೃದಯವನ್ನೇ ಬಿಚ್ಚಿ ತೋರುತ್ತಿರುವಂತಿದ್ದಿತು. ಜಾಜಿಯ ಬಳ್ಳಿಯು ಹೆಂಡತಿಯು ಗಂಡನನ್ನು ಅಪ್ಪಿಕೊಳ್ಳುವಂತೆ ಎಲ್ಲಾ ಮರವನ್ನೂ ಅಪ್ಪಿಕೊಳ್ಳುತ್ತಿದ್ದಿತು.

೫೪. ಅತ್ತಿಯ ಮರಗಳು ಬಹು ಎತ್ತರವಾಗಿ ಬೆಳೆದು ಬಹುವಾದ ಹಣ್ಣುಗಳನ್ನು ಬಿಟ್ಟಿದ್ದುವು. ಇವೆಲ್ಲವೂ ಆ ಬ್ರಹ್ಮಾಂಡವನ್ನೇ ತಮ್ಮ ತುದಿಗಳಿಂದ ಎತ್ತಿ ಹಿಡಿದಿರುವಂತೆ ಕಾಣುತ್ತಿದ್ದುವು.

ಪನಸೈರ್ವನವಾಸಾಭೈಶ್ಶುಕನಾಸೈಃ ಪಲಾಶಕೈಃ ।
ಪಲಾಶನಾದ್ವಿರಹಿಣಾಂ ಪತ್ರತ್ಯಕ್ತೈರಿವಾವೃತಂ ॥ ೫೫ ॥

ಕದಂಬವಾದಿನೋ ನೀಪಾನ್ದೃಷ್ಟ್ವಾ ಕಂಟಕಿತೈರಿವ ।
ಸಮಂತತೋ ಭ್ರಾಜಮಾನಂ ಕದಂಬಕಕದಂಬಕೈಃ ॥ ೫೬ ॥

ನಮೇರುಭಿಶ್ಚ ಮೇರೋಶ್ಚ ಶಿಖರೈರಿವ ರಾಜಿತಂ ।
ರಾಜಾದನೈಶ್ಚ ಮದನೈಸ್ಸದನೈರಿವ ಕಾಮಿನಾಂ ॥ ೫೭ ॥

ಸಮಂತತಃ ಪಟುವಟೈರುಚ್ಚೈಃ ಪಟಕುಟೀಕೃತಂ ।
ಕುಟಜಸ್ತಬಕೈರ್ಭಾತ ಮಧಿಷ್ಠಿತ ಬಕೈರಿವ ॥ ೫೮ ॥

---

೫೫. ಹಲಸು ಬಹುವಾಗಿ ಹಣ್ಣುಗಳನ್ನು ಬಿಟ್ಟದ್ದಿತು. ಮುತ್ತುಗದ ಹೂವು ಗಿಳಿಯ ಮೂಗಿನಂತಿದ್ದಿತು; ಈ ಮರಗಳು ವಿರಹಿಗಳ ಮಾಂಸವನ್ನೇ ತಿನ್ನುತ್ತಿದ್ದುದರಿಂದ ಎಲೆಗಳನ್ನು ಕಳೆದುಕೊಂಡಂತೆ ಇದ್ದುವು. (ಮುತ್ತುಗದ ಹೂವು ವಿರಹಿಗಳಿಗೆ ವ್ಯಥೆಯನ್ನು ಹೆಚ್ಚಿಸುವುದರಿಂದ ಅವರು ಕ್ಷೀಣರಾಗುವರು. ಇದರಿಂದ ಅವರ ಮಾಂಸವನ್ನು ಪಲಾಶವು ತಿಂದಂತಾಯಿತು. ಮನುಷ್ಯರ ಮಾಂಸವನ್ನು ತಿನ್ನುವ ಹುಲಿ, ನಾಯಿ ಮುಂತಾದುವುಗಳಿಗೆ ಮೈಗೂದಲು ಉದುರಿ ಹೋಗುತ್ತದೆ. ಸ್ವಭಾವವಾಗಿ ಉದುರಿಹೋಗಿರುವ ಎಲೆಗಳನ್ನು ನೋಡಿ ಮನುಷ್ಯರ ಮಾಂಸವನ್ನು ತಿಂದುದರಿಂದ ಉದುರಿ ಹೋಗಿವೆ ಎಂದು ವರ್ಣಿಸುತ್ತಾನೆ.)

೫೬. ಕಡಹದ ಮರಗಳು ನೀರಂಜಿಯ ಮರಗಳನ್ನು ನೋಡಿ ಮೈನವಿರೆದ್ದಂತೆ ಕಂಡು ಬರುತ್ತಿದ್ದುವು. ಕಿರೀಚಿಲು ಮರಗಳು ಎಲ್ಲಾ ಕಡೆಯಲ್ಲಿಯೂ ಪ್ರಕಾಶಿಸುತ್ತಿದ್ದುವು.

೫೭. ನಮೇರುವೃಕ್ಷವು ಮೇರುವಿನ ಶಿಖರದಂತೆ ಕಾಣುತ್ತಿದ್ದಿತು. ರಾಜಾದನವೂ ಮದನವೂ ಕಾಮಿಗಳಿಗೆ ಜಾಗದಂತಿದ್ದುವು.

೫೮. ಆಲದಮರವು ಎಲ್ಲ ಕಡೆಯಲ್ಲಿಯೂ ಇದ್ದುಕೊಂಡು ಗಾಳಿಗೆ ಅಲ್ಲಾಡುತ್ತ ಪಟ ಪಟ ಎನ್ನುತ್ತಿದ್ದಿತು. ಕಾಡುಮಲ್ಲಿಗೆಯ ಗೊಂಚಲುಗಳು ಬಕಗಳು ಕುಳಿತಿರುವಂತೆ ಕಾಣುತ್ತಿದ್ದುವು.

ಕರಮರ್ದೈಃ ಕರೀರೈಶ್ಚ ಕರಂಜೈಶ್ಚ ಕದಂಬಕೈಃ ।
ಸಹಸ್ರಕರವದ್ಭಾತಮರ್ಥಿ ಪ್ರತ್ಯುದ್ಗತೈಃ ಕರೈಃ ॥ ೫೯ ॥

ನೀರಾಜಿತಮಿವೋದ್ದೀಪ್ತೈ ರಾಜಚಂಪಕಕೋರಕೈಃ ।
ಸ ಪುಷ್ಪಶಾಲ್ಮಲೀಭಿಶ್ಚ ಜಿತಪದ್ಮಾಕರಶ್ರಿಯಂ ॥ ೬೦ ॥

ಕ್ವಚಿಚ್ಚಲದಲೈರುಚ್ಚೈಃ ಕ್ವಚಿತ್ಕಾಂಚನಕೇತಕೈಃ ।
ಕೃತಮಾಲೈರ್ನಕ್ತಮಾಲೈಶ್ಶೋಭಮಾನಂ ಕ್ವಚಿತ್ ಕ್ವಚಿತ್ ॥ ೬೧ ॥

ಕರ್ಕಂಧುಬಂಧುಜೀವೈಶ್ಚ ಪುತ್ರಜೀವೈರ್ವಿರಾಜಿತಂ ।
ಸತಿಂದುಕೇಂಗುದೀಭಿಶ್ಚ ಕರುಣೈಃ ಕರುಣಾಲಯಂ ॥ ೬೨ ॥

ಗಲನ್ಮಧೂಕಕುಸುಮೈರ್ಧರಾರೂಪಧರಂ ಹರಂ ।
ಸ್ವಹಸ್ತಮುಕ್ತಮುಕ್ತಾಭಿರರ್ಚಯಂತಮಿವಾನಿಶಂ ॥ ೬೩ ॥

---

೫೯. ಕರಮರ್ದ, ಕರೀರ, ಕರಂಜ, ಕದಂಬಕ ಇವುಗಳು ಅತಿಥಿಗಳನ್ನು ಕರೆಯಲು ಸಾವಿರ ಕೈಗಳನ್ನು ಮೇಲಕ್ಕೆ ಎತ್ತಿಕೊಂಡಿರುವಂತೆ ಕಾಣುತ್ತಿದ್ದುವು.

೬೦. ಸಂಪಿಗೆಯ ಮೊಗ್ಗುಗಳನ್ನು ನೋಡಿದರೆ ಆರತಿ ಎತ್ತುವ ದೀಪದಂತೆ ಕಾಣುತ್ತಿದ್ದುವು. ಬೂರಗದ ಮರವು ಹೂಬಿಟ್ಟಿರುವುದನ್ನು ನೋಡಿದರೆ ಕಮಲದ ಹೂವುಳ್ಳ ಕೊಳದಂತಿದ್ದಿತು.

೬೧. ತಾಳೆಯ ಹೂಗಳು ಮೇಲಕ್ಕೆದ್ದು ಅಲ್ಲಾಡುತ್ತಿದ್ದುವು. ಕೃತಮಾಲ ನಕ್ತಮಾಲಗಳು ಅಲ್ಲಲ್ಲಿ ಪ್ರಕಾಶಿಸುತ್ತಿದ್ದುವು.

೬೨. ಕರಂಧು, ಬಂಧುಜೀವ, ಪುತ್ರಜೀವ ಮರಗಳು ಅನೇಕವಾಗಿದ್ದುವು. ತಿಂದುಕ, ಇಂಗುದಿ, ಕರುಣ ವೃಕ್ಷಗಳು ಅನೇಕವಾಗಿದ್ದುವು.

೬೩. ಹಿಪ್ಪೆಯ ಮರಗಳು ಹೂಬಿಟ್ಟು ಆ ಹೂವು ಕೆಳಕ್ಕೆ ಉದುರುತ್ತಿದ್ದುದನ್ನು ನೋಡಿದರೆ ಭೂಮಿಯ ರೂಪವನ್ನು ಹೊಂದಿರುವ ಹರನನ್ನು ತಮ್ಮ ಕೈಗಳಿಂದ ಹೂವನ್ನು ಹಾಕಿ ಪೂಜಿಸುವಂತೆ ಕಾಣುತ್ತಾ ಇದ್ದಿತು.

ಸರ್ಜಾರ್ಜುನಾಂಜನೈರ್ಬೀಜ್ಯೈರ್ವ್ಯಜನೈರ್ವೀಜ್ಯಮಾನವತ್ ।
ನಾರಿಕೇಳೈಸ್ಸಖರ್ಜೂರೈರ್ಧೃತಚ್ಛತ್ರ ಮಿವಾಂಬರೇ ॥ ೬೪ ॥

ಅಮಂದ್ಯೈಃ ಪಿಚುಮಂದ್ಯೈಶ್ಚ ಮಂದಾರೈಃ ಕೋವಿದಾರಕೈಃ ।
ಪಾಟಲಾಂ ತಿಂತಿಣೀಂ ಘೋಟಾಂ ಶಾಖೋಟ್ಯೈಃ ಕರಹಾಟಕೈಃ ॥ ೬೫ ॥

ಉದ್ದಂಡ್ಯೈಶ್ಚಾಪಿ ಶೇಹುಂಡ್ಯೈರ್ಗಂಡಪುಷ್ಪೈರ್ವಿರಾಜಿತಂ ।
ವಕುಲೈಸ್ತಿಲಕೈಶ್ಚೈವ ತಿಲಕಾಂಕಿತ ಮಸ್ತಕಂ ॥ ೬೬ ॥

ಅಕ್ಷೈಃ ಪ್ಲಕ್ಷೈಸ್ಸಲ್ಲಕೀಭಿರ್ದೇವದಾರುಹರಿದ್ರುಮೈಃ ।
ಸದಾಫಲಸದಾಪುಷ್ಪವೃಕ್ಷವಲ್ಲೀ ವಿರಾಜಿತಂ ॥ ೬೭ ॥

ಏಲಾಲವಂಗಮರಿಚಕುಲಂಜನವನಾವೃತಂ ।
ಜಂಬ್ವಾಮ್ರಾತಕಭಲ್ಲಾತ ಶೇಲುಶ್ರೀಪರ್ಣಿವರ್ಣಿತಂ ॥ ೬೮ ॥

---

೬೪. ಸರ್ಜ, ಅರ್ಜುನ, ಅಂಜನ ವೃಕ್ಷಗಳು ತಮ್ಮ ಎಲೆಗಳೆಂಬ ಬೀಸಣಿಗೆಯಿಂದ ಬೀಸುವಂತೆ ಕಾಣುತ್ತಿದ್ದುವು. ತೆಂಗಿನ ಮರಗಳೂ, ಖರ್ಜೂರದ ಮರಗಳೂ ಕಾಯನ್ನು ಬಿಟ್ಟುಕೊಂಡಿದ್ದರೆ ಛತ್ರಿಯನ್ನು ಹಿಡಿದಂತೆ ಕಾಣುತ್ತಿದ್ದಿತು.

೬೫–೬೬. ಅಮಂದ, ಪಿಚುಮಂದ, ಮಂದಾರ, ಕೋವಿದಾರ, ಪಾಟಲ, ತಿಂತ್ರಿಣಿ, ಘೋಟಾ, ಶಾಖೋಟ, ಕರಹಾಟಕ, ಶೇಹುಂಡ, ಗಂಡ ವೃಕ್ಷಗಳು ಹೂವಿನಿಂದ ಪ್ರಕಾಶಿಸುತ್ತಿದ್ದುವು. ಪಗಡೆಯೂ ತಿಲಕವೂ ಬಹುವಾಗಿ ಹೂಬಿಟ್ಟಿದ್ದುವು.

೬೭–೬೮. ಅಕ್ಷ, ಪ್ಲಕ್ಷ, ಸಲ್ಲಕೀ, ದೇವದಾರು, ಹರಿದ್ರುಮ ಇವೆಲ್ಲವೂ ಹೂವು, ಹಣ್ಣುಗಳಿಂದ ಯಾವಾಗಲೂ ತುಂಬಿದ್ದುವು. ಏಲಾ, ಲವಂಗ, ಮೆಣಸು, ಕುಲಂಜನಗಳು ವನಗಳೇ ಇದ್ದುವು. ಜಂಬು, ಆಮ್ರ, ಭಲ್ಲಾತಕ, ಶೇಲು, ಶ್ರೀಪರ್ಣಿಗಳೂ ಅನೇಕವಾಗಿದ್ದುವು.

ಶಾಖಶಂಖವನೈರಮ್ಯಂ ಚಂದನೈರಕ್ತಚಂದನೈಃ ।
ಹರೀತಕೀಕರ್ಣಿಕಾರಧಾತ್ರೀವನವಿಭೂಷಿತಂ ॥ ೭೯ ॥

ದ್ರಾಕ್ಷಾವಲ್ಲೀ ನಾಗವಲ್ಲೀ ಕಣಾವಲ್ಲೀಶತಾವೃತಂ ।
ಮಲ್ಲಿಕಾಯೂಥಿಕಾಕುಂದಮದಯಂತೀಸುಗಂಧಿತಂ ॥ ೭೦ ॥

ತುಲಸೀವೃಕ್ಷ ಖಂಡೈಶ್ಚ ಶಿಗ್ರ್ವಗಸ್ತಿದ್ರುಮೈರ್ಯುತಂ ।
ಭ್ರಮದ್ಭ್ರಮರಮಾಲಾಭಿರ್ಮಾಲತೀಭಿರಲಂಕೃತಂ ॥ ೭೧ ॥

ಅಲಿಚ್ಛಲಾಗತಂ ಕೃಷ್ಣಂ ಗೋಪೀ ರಂತುಮನೇಕಶಃ ।
ಸುಗಂಧವಾತಂ ಸುಖದಂ ಕಾಮಸಂಜನಕಂ ಪರಂ ॥ ೭೨ ॥

ನಾನಾಮೃಗಗಣಾಕೀರ್ಣಂ ನಾನಾಪಕ್ಷಿನಿನಾದಿತಂ ।
ನಾನಾಸರಿತ್ಸರಸ್ಸ್ರೋತೈಃ ಪಲ್ವಲೈಃ ಪರಿತೋವೃತಂ ॥ ೭೩ ॥

---

೭೯. ಶಾಕ, ಶಂಖವನಗಳಿಂದಲೂ ಶ್ರೀಚಂದನ, ರಕ್ತಚಂದನಗಳಿಂದಲೂ ಹರೀತಕಿ, ಕರ್ಣಿಕಾರ, ಧಾತ್ರಿಗಳಿಂದಲೂ ಆ ವನವು ಭೂಷಿತವಾಗಿದ್ದಿತು.

೭೦. ದ್ರಾಕ್ಷಿ, ವೀಳೆದೆಲೆ ಕಣವಲ್ಲಿಗಳಿಂದಲೂ ಮಲ್ಲಿಗೆ, ಯೂಥಿಕೆ, ಕುಂದ, ಮದಯಂತಿಗಳಿಂದಲೂ ಸುಗಂಧವುಳ್ಳದ್ದಾಗಿದ್ದಿತು.

೭೧. ತುಲಸಿ, ಶಿಗ್ರು, ಅಗಸ್ತಿ ವೃಕ್ಷಗಳು ಅನೇಕವಾಗಿದ್ದುವು. ಮಾಲತಿಯು ಹೂಬಿಟ್ಟದ್ದರೆ ಅದರಲ್ಲಿ ಅನೇಕ ದುಂಬಿಗಳು ಹಾರಾಡುತ್ತಿದ್ದುವು.

೭೨. ಇದನ್ನು ನೋಡಿದರೆ ದುಂಬಿಯ ವೇಷವನ್ನು ಹಾಕಿಕೊಂಡು ಗೋಪಿಯರೊಡನೆ ರಮಿಸಲು ಬಂದ ಕೃಷ್ಣನಂತೆ ಕಾಣುತ್ತಿದ್ದಿತು. ಸುಗಂಧದ ಗಾಳಿಯು ಸುಖವಾಗಿ ಬೀಸುತ್ತಿದ್ದರೆ ಕಾಮೋದ್ದೀಪನವಾಗುತ್ತಿದ್ದಿತು.

೭೩. ಅನೇಕ ಮೃಗಗಳು ಅಲ್ಲಿದ್ದುವು. ಅನೇಕ ಪಕ್ಷಿಗಳು ಅಲ್ಲಿ ಕೂಗುತ್ತಿದ್ದುವು. ಅನೇಕವಾದ ಕೊಳಗಳೂ, ನದಿಗಳೂ, ಝರಿಗಳೂ, ಕುಂಟೆಗಳೂ ಅಲ್ಲಿದ್ದುವು.

ಉತ್ಸೃಜಂತಮಿವಾರ್ಥಂ ವೈ ಪತತ್ಪುಷ್ಪೈರಿತಸ್ತತಃ ।
ಕೇಕಿಕೇಕಾರವೈರ್ದೂರಾತ್ಕುರ್ವಂತಂ ಸ್ವಾಗತಂ ಕಿಲ ॥ ೭೪ ॥

ಏತಾದೃಶಂ ಹ್ಯುಪವನಂ ಜಾನಕೀ ತಂ ದದರ್ಶ ಸಾ ।
ತುಷ್ಟಾಭೂದ್ದರ್ಶನೇನೈವ ವಿಚಚಾರ ತ್ವಿತಸ್ತತಃ ॥ ೭೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಜನ್ಮಕಾಂಡೇ ಸೀತಾ ಉಪವನ ದರ್ಶನಂ ನಾಮ ಪ್ರಥಮಸ್ಸರ್ಗಸ್ಸಮಾಪ್ತಃ

---

೭೪. ಹೂವುಗಳು ಅತ್ತಿತ್ತ ಬೀಳುತ್ತಿರುವುದನ್ನು ನೋಡಿದರೆ ಮರಗಳು ಇಷ್ಟಾರ್ಥಗಳನ್ನು ಸುರಿಸುವಂತಿದ್ದುವು. ನವಿಲುಗಳು ಕೇಕೆಹಾಕುತ್ತಿದ್ದರೆ ದೂರದಲ್ಲಿದ್ದವರನ್ನು ಕೂಗುತ್ತಿರುವುವೋ ಎಂಬಂತಿದ್ದುವು.

೭೫. ಈ ರೀತಿಯಾದ ಉಪವನವನ್ನು ನೋಡಿ ಜಾನಕಿಯು ಸಂತೋಷ ಪಟ್ಟಳು. ಆ ವನದ ದರ್ಶನದಿಂದಲೇ ಜಾನಕಿಯು ಬಹುವಾಗಿ ಸಂತೋಷ ಗೊಂಡಳು. ಅನಂತರ ಅತ್ತಿತ್ತ ಸಂಚರಿಸಲು ಮೊದಲು ಮಾಡಿದಳು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಸೀತೆಯ ಉಪವನ ದರ್ಶನವೆಂಬ ಒಂದನೆಯ ಸರ್ಗವು ಸಮಾಪ್ತವು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

|| ಒಂದನೆಯ ಸರ್ಗದ ಸಾರಾಂಶವು ||

ಶ್ರೀರಾಮನು ಅಯೋಧ್ಯೆಯಲ್ಲಿ ರಾಜ್ಯಭಾರವನ್ನು ಮಾಡುತ್ತ ಸೀತೆಯೊಡನೆ ಕ್ರೀಡಿಸುತ್ತಿರಲು ಆಕೆಯು ಗರ್ಭಿಣಿಯಾದಳು. ಇದನ್ನು ತಿಳಿದ ರಾಮನು ಅನೇಕ ದಾನಗಳನ್ನು ಮಾಡಿದನು. ಆಕೆಯು ಅಪೇಕ್ಷಿಸಿದ ಬಟ್ಟೆಗಳನ್ನೂ ಒಡವೆಗಳನ್ನೂ ಕೊಟ್ಟನು. ಎರಡನೆಯ ತಿಂಗಳಲ್ಲಿಯೇ ಪುಂಸವನನೆಂಬ ಗರ್ಭಸಂಸ್ಕಾರವು ನಡೆಯಿತು. ಆಗ ಆ ಸೀತೆಯ ತಾಯಿತಂದೆಯರೂ ಬಂದು ಆ ಉತ್ಸವದಲ್ಲಿ ಭಾಗಿಗಳಾಗಿದ್ದು ಆ ದಂಪತಿಗಳನ್ನು ಗೌರವಿಸಿದರು.

ಇಂತಿರಲು ಸೀತೆಗೆ ಉದ್ಯಾನದಲ್ಲಿ ವಿಹರಿಸಬೇಕೆಂಬ ಆಸೆಯುಂಟಾಯಿತು. ಅದು ರಾಮನಿಗೆ ತಿಳಿಯಿತು. ಅವನು ಲಕ್ಷ್ಮಣನಿಗೆ ಅಪ್ಪಣೆಮಾಡಿ ಎಲ್ಲಾ ಸಲಕರಣೆಗಳೊಡನೆ ಉದ್ಯಾನಕ್ಕೆ ಆ ಸೀತೆಯೊಡನೆ ಹೋದನು. ಜೊತೆಯಲ್ಲಿ ಲಕ್ಷ್ಮಣ ಭರತ ಶತ್ರುಘ್ನರೂ ಅವರ ಹೆಂಡತಿಯರೂ ಕೌಸಲ್ಯೆಯೇ ಮುಂತಾದ ತಾಯಿಯರೂ ಹೋದರು.

ಆ ವನವು ಅನೇಕ ವಿಧವಾದ ಮರಗಳಿಂದಲೂ ಬಳ್ಳಿಗಳಿಂದಲೂ ಪ್ರಕಾಶಮಾನವಾಗಿ ಆ ಸೀತೆಗೆ ಸಂತೋಷಪ್ರದವಾಗಿದ್ದಿತು. ಅಲ್ಲಿ ಈ ಸೀತೆಯು ತನಗೆ ಇಷ್ಟಬಂದಂತೆಲ್ಲಾ ಕ್ರೀಡಿಸಲು ಉಪಕ್ರಮಿಸಿದಳು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ದ್ವಿತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಸೀತಾ ರಾಘವೇಣ ರಮ್ಯೋಪವನಭೂಮಿಷು ।
ಕ್ರೀಡಾಶ್ಚಕಾರ ವಿವಿಧಾಸ್ತ್ರಿದಶೈರಪಿ ಸಂಸ್ತುತಾಃ ॥ ೧ ॥

ಕದಾ ವನಾಂತಃಪ್ರಾಸಾದೇ ಕದಾ ವಸ್ತ್ರಗೃಹೇಷ್ವಪಿ ।
ಕದಾಮ್ರವೃಕ್ಷಚ್ಛಾಯಾಯಾಂ ಕದಾ ಪುಷ್ಪವನೇಷು ಸಾ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಎರಡನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಆ ಉಪವನದಲ್ಲಿ ಸೀತೆಯು ರಾಘವನೊಡನೆ ಅನೇಕ ಬಗೆಯಾದ ಕ್ರೀಡೆಗಳನ್ನಾಡುತ್ತಿದ್ದಳು. ಇದನ್ನು ನೋಡಿ ದೇವತೆಗಳೂ ಕೂಡ ಅವನ್ನು ಹೊಗಳುತ್ತಿದರು.

೨-೩. ಒಂದೊಂದುಸಾರಿ ಆ ವನದ ಒಳಗಿರುವ ಅರಮನೆಯಲ್ಲಿಯೂ ಒಂದೊಂದುಸಾರಿ ಗುಡಾರದಲ್ಲಿಯೂ ಒಂದೊಂದುಸಾರಿ ಮಾವಿನಮರದ ನೆರಳಿನಲ್ಲಿಯೂ ಒಂದೊಂದುಸಾರಿ ಹೂಬಿಟ್ಟಿರುವ ಬಳ್ಳಿಗಳ ಮಧ್ಯದಲ್ಲಿಯೂ

ಕದಾ ಸಾ ಜಲಯಂತ್ರಾಣಾಂ ಸಮೀಪಸ್ಯ ವರಾಸನೇ ।
ಕದಾ ಸರೋವರತಟೇ ಕದಾ ನದ್ಯಾಸ್ತಟೇಽಪಿ ಚ ॥ ೩ ॥

ನೌಕಾಸ್ಥಾ ಸರಯೂತೋಯೇ ಸಾ ರಾಮೇಣಾ ಕರೋತ್ಕದಾ ।
ಕದಾ ರಾತ್ರೌ ಜಲಕ್ರೀಡಾಂ ಸಾ ದಿವಾಪಿ ಕದಾ ಮುದಾ ॥ ೪ ॥

ಕದಾ ತಟಾಕೇ ನೌಕಾಸ್ಥಾ ಕದಾ ರಂಭಾವನೇಷು ಸಾ ।
ಕದಾ ವೃಕ್ಷೋರ್ಧ್ವಗೇಹೇಷು ಕದೋಶೀರಗೃಹೇಷ್ವಪಿ ॥ ೫ ॥

ಕದಾ ಸಾ ಸರಯೂನದ್ಯಾಂ ನಿರ್ಮಿತೇಷು ಗೃಹೇಷು ಸಾ ।
ಕದಾ ಕೃತ್ರಿಮಗೇಹೇಷು ಪುಷ್ಪಗೇಹೇಷು ಸಾ ಕದಾ ॥ ೬ ॥

ಕದಾ ಸಾ ಚಿತ್ರಶಾಲಾಯಾಂ ಪುಷ್ಪಕೇ ವಾ ಕದಾ ಮುದಾ ।
ಕದಾ ಸಾ ಕೇತಕೀಖಂಡೇ ಕದ್ವೈವ ಸ್ತಂಭಸದ್ಮನಿ ॥ ೭ ॥

ಒಂದೊಂದುಸಾರಿ ಜಲಯಂತ್ರಗಳ ಬಳಿಯಲ್ಲಿಯೂ ಒಂದೊಂದುಸಾರಿ ಸರೋವರದ ದಡದಲ್ಲಿಯೂ ಒಂದೊಂದುಸಾರಿ ನದಿಯ ದಡದಲ್ಲಿಯೂ ಕ್ರೀಡಿಸುತ್ತಿದ್ದರು.

೪–೭. ಒಂದೊಂದುಸಾರಿ ಸರಯೂ ನದಿಯಲ್ಲಿ ದೋಣಿಯಲ್ಲಿ ರಾಮನೊಡನೆ ಕುಳಿತುಕೊಂಡೂ, ಒಂದೊಂದುಸಾರಿ ರಾತ್ರಿಯಲ್ಲಿ ಜಲಕ್ರೀಡೆಯಲ್ಲಿಯೂ ಒಂದೊಂದುಸಾರಿ ದೋಣಿಯಲ್ಲಿ ಕುಳಿತು ಕೊಳದಲ್ಲಿಯೂ ಒಂದೊಂದುಸಾರಿ ಬಾಳೆಯ ತೋಟದಲ್ಲಿಯೂ ಒಂದೊಂದುಸಾರಿ ಮರದಮೇಲಿರುವ ಅಟ್ಟಣೆಗಳಲ್ಲಿಯೂ, ಒಂದೊಂದುಸಾರಿ ಲಾವಂಚದಮನೆಗಳಲ್ಲಿಯೂ ಒಂದೊಂದುಸಾರಿ ಸರಯೂ ನದಿಯಲ್ಲಿ ನಿರ್ಮಿತವಾದ ಮನೆಗಳಲ್ಲಿಯೂ ಒಂದೊಂದುಸಾರಿ ಕೃತ್ರಿಮವಾದ ಮನೆಗಳಲ್ಲಿಯೂ, ಒಂದೊಂದುಸಾರಿ ಪುಷ್ಪಗೃಹಗಳಲ್ಲಿಯೂ ಒಂದೊಂದುಸಾರಿ ಚಿತ್ರಶಾಲೆಯಲ್ಲಿಯೂ ಒಂದೊಂದುಸಾರಿ ಪುಷ್ಪಕದಲ್ಲಿಯೂ ಒಂದೊಂದುಸಾರಿ ತಾಳೆಯ ವನಗಳಲ್ಲಿಯೂ ಒಂದೊಂದುಸಾರಿ ಒಂದೇ ಕಂಬದಮೇಲೆ ಕಟ್ಟಿರುವ ಮನೆಯಲ್ಲಿಯೂ ಕ್ರೀಡಿಸಿದರು.

ಕದಾ ನೌಕೋರ್ಧ್ವಗೇಹಸ್ಥಾ ಸರಯ್ವಾಸ್ಸೈಕತೇ ಕದಾ ।
ಏಕಸ್ತಂಭೋರ್ಧ್ವಗೇಹೇಪಿ ಸಖೀಭಿಃ ಪರಿವೇಷ್ಟಿತಾ ॥ ೮ ॥

ಕದಾ ರಾಮೇಣ ರಹಸಿ ಕದಾಂದೋಲಕೆ ಸಂಸ್ಥಿತಾ ।
ಪರ್ಯಂಕಚಕ್ರಮಧ್ಯಸ್ಥಾ ಕದಾ ಸಾ ದಾಡಿಮೀವನೇ ॥ ೯ ॥

ವೃಕ್ಷಸಂಬದ್ಧಪರ್ಯಂಕೆ ಸಂಸ್ಥಿತಾ ರಾಘವೇಣ ಹಿ ।
ಚಕಾರ ಸಾ ಕದಾ ಕ್ರೀಡಾಂ ಪಾಂಡುರಾಂಗೀ ಪೃಥೂದರೀ ॥ ೧೦ ॥

ಹರಿದ್ವಸ್ತ್ರಯುತಾ ರಕ್ತಕಂಚುಕ್ಯಾ ಜಾನಕೀ ಬಭೌ ।
ಗೋಪಯಿತ್ವಾ ನಿಜಂ ದೇಹಂ ತದಾ ವೃಕ್ಷದಳೈರ್ಘನೈಃ ॥ ೧೧ ॥

ಚಕಾರ ವ್ಯಾಕುಲಂ ರಾಮಂ ವಿನೋದೇನ ಸ್ಮಿತಾನನಾ ।
ಜ್ಞಾತ್ವಾತ್ಮಾನಂ ರಾಘವೇಣ ದೃಷ್ಟ್ವಾಂ ಸಮುಗ್ನಿವಿಜ್ಯ ಚ ॥ ೧೨ ॥

೮–೯. ಒಂದೊಂದುಸಾರಿ ದೋಣಿಯಮೇಲಿರುವ ಮನೆಯಲ್ಲಿಯಲ್ಲಿಯೂ ಒಂದೊಂದುಸಾರಿ ಸರಯೂ ನದಿಯ ಮರಳಿನಮೇಲೆಯೂ ಒಂದೊಂದುಸಾರಿ ಒಂದೇ ಕಂಬದಮೇಲೆ ಕಟ್ಟಿರುವ ಅಟ್ಟಣೆಯಲ್ಲಿಯೂ, ಒಂದೊಂದುಸಾರಿ ಸಖಿಯ ರೊಡನೆಯೂ, ಒಂದೊಂದುಸಾರಿ ರಾಮನೊಡನೆ ರಹಃ ಪ್ರದೇಶದಲ್ಲಿಯೂ, ಒಂದೊಂದುಸಾರಿ ಉಯ್ಯಾಲೆಯಲ್ಲಿಯೂ ಒಂದೊಂದುಸಾರಿ ತೂಗುಮಂಚದ ಮೇಲೆಯೂ, ಒಂದೊಂದುಸಾರಿ ದಾಳಿಂಬೆ ವನದಲ್ಲಿಯೂ ಕ್ರೀಡಿಸಿದಳು.

೧೦. ಒಂದೊಂದುಸಾರಿ ಮರಗಳ ಮಧ್ಯದಲ್ಲಿ ಮಂಚವನ್ನು ಹಾಕಿಕೊಂಡು ಗರ್ಭಿಣಿಯಾಗಿ, ಪಾಂಡುವರ್ಣವೂ ದೊಡ್ಡದಾದ ಹೊಟ್ಟೆಯೂ ಉಳ್ಳ ಆ ಸೀತೆಯು ರಮಿಸಿದಳು.

೧೧–೧೨. ಆ ಸೀತೆಯು ಗರ್ಭಿಣಿಯಾದುದರಿಂದ ಬೆಳ್ಳಗಿರುವ ಬಣ್ಣವನ್ನು ಹೊಂದಿದ್ದಳು. ಹೊಟ್ಟೆಯು ದಪ್ಪವಾಗಿದ್ದಿತು. ಹಸುರು ಬಣ್ಣದ ಸೀರೆಯನ್ನುಟ್ಟಿದ್ದಳು. ಕೆಂಪುಬಣ್ಣದ ಕುಪ್ಪಸವನ್ನು ತೊಟ್ಟಿದ್ದಳು. ಒಂದೊಂದುಸಾರಿ ಮರಗಳ ಗುಂಪಿನಲ್ಲಿ ಮರೆಯಾಗುತ್ತ ರಾಮನನ್ನು ವ್ಯಾಕುಲಪಡಿಸುತ್ತಿದ್ದಳು. ಆಗ

ಮುದ್ರಾವ ಸಂಭ್ರಮಾದ್ರಾಮಂ ತತ್ಕಂಠೇ ದೋರ್ಲತೇಕರೋತ್ |
ಏವಂ ಸೀತಾರಾಘವಯೋಃ ಕ್ರೀಡನಂ ಪರಮಾದ್ಭುತಂ ॥ ೧೩ ॥

ವಿಸ್ತಾರೇಣೇಹ ಕೋ ವಕ್ತುಂ ಸಮರ್ಥಃ ಪೃಥಿವೀತಲೇ |
ಏಕ ಏವ ಸಮರ್ಥೋಽಭೂದ್ವಾಲ್ಮೀಕಿಮುನಿಸತ್ತಮಃ ॥ ೧೪ ॥

ಶತಕೋಟಿಮಿತಂ ಯೇನ ವರ್ಣಿತಂ ಚರಿತಂ ತಯೋಃ |
ಸಾರಂ ಸಾರಂ ಮಯಾ ಯಸ್ಮಾದ್ವಿವಿಚ್ಯ ತತ್ಪ್ರವರ್ಣ್ಯತೇ ॥ ೧೫ ॥

ವಾರಸ್ತ್ರೀಣಾಂ ಕದಾ ನೃತ್ಯಂ ಸೀತಾಽಽರಾಮೇ ದದರ್ಶ ಸಾ |
ಕದಾ ಶುಶ್ರಾವ ವಾದ್ಯಾನಿ ಮಂಜುಲಾನಿ ಮಹಾಂತಿ ಚ ॥ ೧೬ ॥

ಕದಾ ಚಿತ್ರಕಥಾ ರಮ್ಯಾಶ್ಚೇಂದ್ರಜಾಲಾನಿ ವಾ ಕದಾ |
ಕದಾ ವಂಶಾರೋಹಣಾದಿ ಕೌತುಕಾನಿ ದದರ್ಶ ಸಾ ॥ ೧೭ ॥

ರಾಮನು ಆಕೆಯನ್ನು ಕಂಡುಹಿಡಿಯಲು ಅದನ್ನು ತಿಳಿದು ಓಡಿಬಂದು ರಾಮನ ಕತ್ತನ್ನು ಅಪ್ಪಿಕೊಳ್ಳುತ್ತಿದ್ದಳು. ಈ ರೀತಿಯಾಗಿ ಸೀತಾರಾಮರು ಕ್ರೀಡಿಸುತ್ತಿದ್ದುದು ಬಹು ಅದ್ಭುತವಾಗಿದ್ದಿತು.

೧೪–೧೫. ಅವರ ಕ್ರೀಡೆಯೆಲ್ಲವನ್ನೂ ವಿಸ್ತಾರವಾಗಿ ಹೇಳಲು ಭೂಮಿಯಲ್ಲಿ ಯಾವನಿಗೂ ಸಾಧ್ಯವಿಲ್ಲ. ಆದರೆ ಮುನಿಶ್ರೇಷ್ಠನಾದ ವಾಲ್ಮೀಕಿಯೊಬ್ಬನೇ ಸಮರ್ಥನಾಗಿರುವನು. ಅವನು ಅದಕ್ಕೋಸ್ಕರಲೇ ರಾಮಚರಿತ್ರೆಯನ್ನು ಶತಕೋಟಿ ಸಂಖ್ಯೆಯಲ್ಲಿ ಬರೆದಿರುವನು. ನಾನು ಆ ನೂರುಕೋಟಿ ಗ್ರಂಥದಲ್ಲಿ ಸಾರವನ್ನು ತೆಗೆದುಕೊಂಡು ಹೇಳಿದ್ದೇನೆ.

೧೬–೧೭. ಆ ಸೀತೆಯು ಒಂದೊಂದುಸಾರಿ ಆ ವನದಲ್ಲಿ ಸೂಳೆಯರ ಕುಣಿತವನ್ನು ನೋಡುತ್ತಿದ್ದಳು. ಒಂದೊಂದುಸಾರಿ ಮನೋಹರವಾದ ವಾದ್ಯಗಳನ್ನು ಕೇಳುತ್ತಿದ್ದಳು. ಒಂದೊಂದುಸಾರಿ ಮನೋಹರವಾದ ಕಥೆಗಳನ್ನು ಕೇಳುತ್ತ ಒಂದೊಂದುಸಾರಿ ಇಂದ್ರಜಾಲದ ಆಟಗಳನ್ನು ನೋಡುತ್ತ ಕ್ರೀಡಿಸಿದಳು.

ಕದಾ ಸ್ತಂಭೋದ್ಭವಂ ದಿವ್ಯಂ ದದರ್ಶ ಕೌತುಕಂ ಮಹತ್ ।
ಕದಾ ಕಲಾನಾಂ ಕೌಶಲ್ಯಂ ಸೂತ್ರಬಂಧೈರ್ವಿನಿರ್ಮಿತಂ ॥ ೧೮ ॥

ಕದಾ ಕೃತ್ರಿಮಮತ್ಸ್ಯಾದಿ ನಾನಾರೂಪಾಣಿ ನೈ ಪತೇಃ ।
ಸೀತಾ ದದರ್ಶ ಕುಶಲೈರ್ಧೃತಾನ್ಯಾತ್ಮಯುತಾನ್ಯಪಿ ॥ ೧೯ ॥

ಏವಂ ಸೀತಾಽಽರಾಮಮಧ್ಯೇ ಮಾಸಮೇಕಂ ನಿನಾಯ ಸಾ ।
ಯಯೌ ಶಾನೇಣ ನಗರೀಂ ನೃತ್ಯಗೀತಾದಿಭಿಶ್ಚ ನೈಃ ॥ ೨೦ ॥

ಸೌಧಸ್ಥಾಭಿಃ ಪುರಸ್ತ್ರೀಭಿರ್ವರ್ಷಿತಾ ಕುಸುಮಾದಿಭಿಃ ।
ನೀರಾಜಿತಾ ಕುಂಭದೀಪೈರ್ದೀಪೈರ್ದಧ್ಯೋದನೋದ್ಭವೈಃ ॥ ೨೧ ॥

ಒಂದೊಂದುಸಾರಿ ದೊಂಬರು ಗಣೆಹತ್ತುವುದನ್ನು ನೋಡುತ್ತಿದ್ದಳು. ಒಂದೊಂದು ಸಾರಿ ಅವರು ಆ ಗಣೆಯಮೇಲಿದ್ದು ಆಟವಾಡುತ್ತಿದ್ದುದ್ದನ್ನು ನೋಡುತ್ತಿದ್ದಳು. ಒಂದೊಂದುಸಾರಿ ನೂಲಿನಿಂದ ಹೆಣೆದಿರುವ ಕೌಶಲವನ್ನು ನೋಡಿ ಸಂತೋಷ ಪಡುತ್ತಿದ್ದಳು.

೧೯. ಒಂದೊಂದುಸಾರಿ ತನ್ನ ಗಂಡನ ಅವತಾರವಾದ ಮೀನು ಮುಂತಾದುವುಗಳ ಚಿತ್ರವನ್ನೂ ಒಂದೊಂದುಸಾರಿ ಚಿತ್ರದಲ್ಲಿರುವ ಅನೇಕ ರೂಪಗಳನ್ನು ನೋಡಿ ಸುಖಿಸುತ್ತಿದ್ದಳು.

೨೦. ಸೀತೆಯು ಆ ಕಾಡಿನ ಮಧ್ಯದಲ್ಲಿ ಈ ರೀತಿಯಾಗಿ ಒಂದು ತಿಂಗಳನ್ನು ಕಳೆದಳು. ಅನಂತರ ವಾದ್ಯಗಳನ್ನು ನಾಟ್ಯಗಳನ್ನೂ ಮಾಡಿಸಿ ಕೊಂಡು ಪಟ್ಟಣಕ್ಕೆ ಹೋದಳು.

೨೧. ಆಗ ಮಹಡಿಯ ಮೇಲಿರುವ ಪಟ್ಟಣಿಗರು ಹೂಮಳೆಯನ್ನು ಆ ಸೀತೆಯಮೇಲೆ ಕರೆದರು. ಗಂಬದೀಪವನ್ನು ತಂದು ಎತ್ತಿದರು ಆರತಿ ದೀಪವನ್ನೂ ಮೊಸರನ್ನದ ಆರತಿಯನ್ನೂ ಎತ್ತಿದರು

ಮಾಷತೈಲಸರ್ಷಪಾದ್ಯೈರ್ನ್ನಾನಾಬಲಿಭಿರಾದರಾತ್ ।
ಯಯೌ ನಿಜಗೃಹಂ ಸೀತಾ ರಾಘವೇಣ ಸಮನ್ವಿತಾ ॥ ೨೨ ॥

ಏವಂ ನಾನಾಕೌತುಕೈಶ್ಚ ನಾನಾದೋಹದಪೂರಣೈಃ ।
ರಾಮಸ್ತಾಂ ರಂಜಯಾಮಾಸ ಸಾಪಿ ರಾಮಂ ಸ್ವಲೀಲಯಾ ॥ ೨೩ ॥

ಷಷ್ಠೇ ಮಾಸೇ ತ್ವಥ ಪ್ರಾಪ್ತೇ ಸೀತಾಯಾ ರಾಘವೋ ಮುದಾ ।
ಸೀಮಂತೋನ್ನಯನಂ ವಿಪ್ರೈರ್ವಸಿಷ್ಠೇನ ಚಕಾರ ಸಃ ॥ ೨೪ ॥

ಸುಮೇಧಾಂ ಜನಕಂ ಚಾಪಿ ಸಮಾಹೂಯಾದರೇಣ ಹಿ ।
ದದೌ ದಾನಾನ್ಯನೇಕಾನಿ ಬ್ರಾಹ್ಮಣೇಭ್ಯೋ ರಘೂತ್ತಮಃ ॥ ೨೫ ॥

ಜನಕಃ ಪೂಜಯಾಮಾಸ ರಾಮಂ ಸ್ತ್ರೀಬಂಧುಸಂಯುತಂ ।
ಕೌಸಲ್ಯಾದೀಂಶ್ಚ ಸಾಕೇತ ವಾಸಿನೋ ವಸನಾದಿಭಿಃ ॥ ೨೬ ॥

---

೨೨. ಉದ್ದನ್ನು ನಿವಾಳಿಸುವುದು, ಎಣ್ಣೆಯನ್ನು ನಿವಾಳಿಸುವುದು ಸಾಸುವೆಯನ್ನು ನಿವಾಳಿಸುವುದು, ಇವೆಲ್ಲವನ್ನೂ ಆ ಪಟ್ಟಣಿಗರು ಮಾಡಿದರು. ಈ ರೀತಿಯಾದ ಸೇವೆಯನ್ನು ಹೊಂದುತ್ತ ಸೀತೆಯು ಮನೆಗೆ ಹೋದಳು.

೨೩. ಈ ರೀತಿಯಾಗಿ ಅನೇಕ ನೋಟಗಳನ್ನು ತೋರಿಸುತ್ತ ಬಯಕೆಯನ್ನು ಪೂರ್ಣಮಾಡಿಸುತ್ತ ರಾಮನು ಆಕೆಯನ್ನು ಸಂತೋಷಪಡಿಸಿದನು. ಆಕೆಯೂ ಕೂಡ ರಾಮನನ್ನು ಸಂತೋಷಪಡಿಸಿದಳು.

೨೪. ಆನಂತರ ಆರನೆಯ ತಿಂಗಳು ಬರಲು ರಾಮನು ಸೀತೆಗೆ ಸೀಮಂತೋತ್ಸವವನ್ನು ವಿಪ್ರರೊಡನೆ ವಸಿಷ್ಠನಿಂದ ಮಾಡಿಸಿದನು.

೨೫–೨೬. ಆಗ ಸುಮೇಧೆಯನ್ನೂ ಜನಕನನ್ನೂ ಕರೆಸಿದ್ದನು. ಬ್ರಾಹ್ಮಣರಿಗೆ ಅನೇಕವಾದ ದಾನಗಳನ್ನೂ ಕೊಟ್ಟನು. ಜನಕನೂ ಕೂಡ ಮಕ್ಕಳಿಗೂ ಅಳಿಯಂದಿರಿಗೂ ಅನೇಕವಾದ ಬಳುವಳಿಗಳನ್ನು ಕೊಟ್ಟನು. ಕೌಸಲ್ಯೆಯೇ ಮೊದಲಾದವರಿಗೂ ಉತ್ತಮವಾದ ಬಟ್ಟೆಗಳನ್ನು ಕೊಟ್ಟನು

ಪೌರಾಶ್ಚ ಸುಹೃದಸ್ಸರ್ವೇ ಭೋಜನಾರ್ಥಂ ವಿದೇಹಜಾಂ ।
ಸ್ವಂ ಸ್ವಂ ಗೇಹಂ ಪೃಥಙ್ನಿನ್ಯುಃ ಶ್ರೀರಾಮಾದಿಭಿರುತ್ಸವೈಃ ॥ ೨೭ ॥

ನಾನಾವಾದ್ಯನಿನಾದೈಶ್ಚ ವಾರಸ್ತ್ರೀನೃತ್ಯಗಾಯನೈಃ ।
ಸ್ತ್ರೀಮುಕ್ತಪುಷ್ಪವರ್ಷಾಭಿರ್ನಾನಾಕೌತುಕದರ್ಶನೈಃ ॥ ೨೮ ॥

ನಾನಾದೇಶನಿವಾಸಿನ್ಯಃ ಕೋಟಿಶಸ್ತತ್ರ ನೃಪಸ್ತ್ರಿಯಃ ।
ಸಮಾಜಗ್ಮುರಯೋಧ್ಯಾಯಾಂ ಸೀತಾಂ ದ್ರಷ್ಟುಂ ಮುದಾನ್ವಿತಾಃ ॥ ೨೯ ॥

ತಾಸಾಂ ಸೈನ್ಯೈಶ್ಚ ಸರ್ವತ್ರ ವೇಷ್ಟಿತಾ ನಗರೀ ಬಭೌ ।
ತಾಸ್ಸರ್ವಾ ನೃಪಪತ್ನ್ಯಶ್ಚ ಸೀತಾಯಾಃ ಪರಮಾ ವರಾ ॥ ೩೦ ॥

ದೋಹದಾ ಪೂರಯಾಮಾಸುರ್ದಿವ್ಯಾನ್ನಾದಿಭಿರಾದರಾತ್ ।
ದದುರ್ವಸ್ತ್ರಾಣ್ಯಲಂಕಾರಾನ್ ದಿವ್ಯಾಶ್ಚಿತ್ರ ವಿಚಿತ್ರಿತಾನ್ ॥ ೩೧ ॥

---

೨೭. ಆಗ ಪಟ್ಟಣಿಗರೂ ಸ್ನೇಹಿತರೂ ಆ ಸೀತೆಯನ್ನೂ ರಾಮನನ್ನೂ ತಮ್ಮ ತಮ್ಮ ಮನೆಗೆ ಕರೆದುಕೊಂಡು ಹೋಗಿ ಔತಣಮಾಡಿ ಭೋಜನ ಮಾಡಿಸಿದರು.

೨೮. ಆಗ ಅವರನ್ನು ನಾನಾವಾದ್ಯಗಳಿಂದಲೂ, ಕೌತುಕಗಳಿಂದಲೂ, ಗಾಯನಗಳಿಂದಲೂ, ಸೂಳೆಯರ ಕುಣಿತದಿಂದಲೂ ಅವರ ಮೇಲೆ ಪುಷ್ಪವೃಷ್ಟಿಯನ್ನು ಮಾಡುವುದರಿಂದಲೂ ಇಂದ್ರಜಾಲಗಳನ್ನು ತೋರಿಸುವುದರಿಂದಲೂ ಸಂತೋಷಪಡಿಸಿದರು.

೨೯-೩೧. ನಾನಾದೇಶಗಳಿಂದ ರಾಜಪತ್ನಿಯರು ಆ ಸೀತೆಯನ್ನು ನೋಡಲು ಗುಂಪು ಗುಂಪಾಗಿ ಬರುತ್ತಿದ್ದರು. ಅವರ ಸೈನ್ಯಗಳು ಆ ಅಯೋಧ್ಯೆಯಲ್ಲಿ ಸುತ್ತಲೂ ಇದ್ದುದರಿಂದ ಬಹು ಮನೋಹರವಾಗಿದ್ದಿತು. ಆ ರಾಜಪತ್ನಿಯರು ಸೀತೆಯ ಬಯಕೆಯನ್ನು ಅನೇಕ ಬಗೆಗಳಿಂದ ಪೂರ್ಣ ಮಾಡಿದರು. ಉತ್ತಮವೂ ಚಿತ್ರಿತವೂ ಆದ ಅನೇಕ ಬಟ್ಟೆಗಳನ್ನೂ ಆ ಸೀತೆಗೆ ಕೊಟ್ಟರು.

ಸ್ವಸ್ವದೇಶೋದ್ಭವೈರ್ದಿವ್ಯೈರ್ನಾನಾವಸ್ತುಭಿರಾದರಾತ್ ।
ಜಾನಕೀಂ ಪೂಜಯಾಮಾಸುರ್ತಾಸ್ಸರ್ವಾಃ ಪಾರ್ಥಿವಸ್ತ್ರಿಯಃ ॥ ೩೨ ॥

ಸ್ಥಿತ್ವಾ ತಾ ಮಾಸಮೇಕಂ ತು ಜಗ್ಮುರ್ದೇಶಂ ನಿಜಂ ನಿಜಂ ।
ಅಥೈಕದಾ ತು ಶ್ರೀರಾಮಸ್ಸುಮೇಧಾಂ ಜನಕಂ ತಥಾ ॥ ೩೩ ॥

ಸೀತಾಯಾಃ ಪುರತಃ ಪ್ರಾಹ ಗುಹ್ಯಂ ರಹಸಿ ಹೃತ್‌ಸ್ಥಿತಂ ।
ಸೀತಾಮದೃಷ್ಟ್ವಾ ಸಾನ್ನಿಧ್ಯೇ ಕ್ಷಣಾಚ್ಚ ವಿರಹೇಣ ತಾಂ ॥ ೩೪ ॥

ಮಯಾಗತ್ಯ ತನ್ಮುಖೇಂದುಸುಧಯಾ ಸ್ವಾಸ್ಥ್ಯಮಾಪ್ಯತೇ ।
ಆತ್ಮಾನಂ ವಿಹ್ವಲಂ ದೃಷ್ಟ್ವಾ ಸೀತಾಸಾನ್ನಿಧ್ಯಮಾಶ್ರಯೇ ॥ ೩೫ ॥

ಅಧುನಾ ಜಾನಕೀಂ ದೃಷ್ಟ್ವಾ ಕಾಮೋ ಮೇತೀವ ಬಾಧತೇ ।
ಪಂಚಮಾಸೋರ್ಧ್ವತಸ್ಸಂಗಂ ಗರ್ಹಯಂತೀ ಮುನೀಶ್ವರಾಃ ॥ ೩೬ ॥

---

೩೨. ಅಲ್ಲದೆ ಅವರು ತಮ್ಮ ತಮ್ಮ ದೇಶದಲ್ಲಿ ಉತ್ಪನ್ನವಾದ ಅಪೂರ್ವ ವಸ್ತುಗಳನ್ನೂ ತಂದುಕೊಟ್ಟರು. ಮತ್ತು ಅಮೋಘವಾದ ಉಪಾಯನಗಳನ್ನು ಕೊಟ್ಟು ಸೀತೆಯನ್ನು ಪೂಜಿಸಿದರು.

೩೩–೩೫. ಅವರೆಲ್ಲರೂ ಜಾನಕಿಯನ್ನು ಸಂತೋಷಪಡಿಸುತ್ತ ಒಂದು ತಿಂಗಳವರೆಗೂ ಇದ್ದರು. ಅನಂತರ ಒಬ್ಬೊಬ್ಬರಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಒಂದುಸಾರಿ ರಾಮನು ಸುಮೇಧೆ, ಜನಕ, ಸೀತೆ ಇವರ ಎದುರಿಗೆ ತನ್ನ ಮನಸ್ಸಿನಲ್ಲಿರುವುದನ್ನು ಇಂತೆಂದು ಹೇಳಿದನು. ಸೀತೆಯು ಹತ್ತಿರದಲ್ಲಿದ್ದುಕೊಂಡು ಇರುವಾಗ ಆಕೆಯನ್ನು ನೋಡದಿದ್ದರೆ ನನಗೆ ಆಗುವುದೇ ಇಲ್ಲ. ಕ್ಷಣಕಾಲ ನೋಡದಿದ್ದರೂ ಬಹುವಾಗಿ ಕಳವಳವಾಗುತ್ತದೆ. ಒಡನೆಯೇ ಬಂದು ಆಕೆಯ ಮುಖವನ್ನು ನೋಡಿದರೆ ಮನಸ್ಸಿಗೆ ಸಮಧಾನವಾಗುತ್ತದೆ. ಆದುದರಿಂದಲೇ ಆಕೆಯನ್ನು ಕ್ಷಣಕಾಲವೂ ಬಿಟ್ಟಿರಲಾರೆನು.

೩೬. ಈಗಲಂತೂ ಈ ಜಾನಕಿಯನ್ನು ನೋಡಿದರೆ ನನಗೆ ಕಾಮವು ಹೆಚ್ಚುತ್ತಿದೆ. ಆದರೆ ಗರ್ಭಕ್ಕೆ ಐದುತಿಂಗಳಾದಮೇಲೆ ಆ ಸ್ತ್ರೀಸಂಗವನ್ನು ಮಾಡಬಾರದೆಂದು ಮುನಿಗಳು ಹೇಳಿದ್ದಾರೆ.

ಪ್ರಸೂತ್ಯಗ್ರೇ ಪಂಚಮಾಸ್ಯೈಃ ಸ್ತ್ರೀ ಸ್ವಾಸ್ಥ್ಯಂ ಪ್ರಾಪ್ಯತೇ ಪುನಃ ।
ಪಂಚಮಾಸ್ಯೈರ್ವಿನಾ ಸಂಗಾದ್ದಂಪತ್ಯೋಃ ಕ್ಷೀಣತೇರಿತಾ ॥ ೩೭ ॥

ಅತ್ರ ಕಿಂ ಕರಣೀಯಂ ಹಿ ವದ ತ್ವಂ ಶ್ವಶುರಾದ್ಯ ಮಾಂ ।
ಚೇತ್ಪ್ರೇಷಣೀಯಾ ಸೀತೇಯಂ ಮಿಥಿಲಾಂ ಪ್ರತಿ ವೈ ಮಯಾ ॥ ೩೮ ॥

ತರ್ಹಿ ತತ್ರಾಪಿ ಮೇ ಗಂತುಂ ಭವಿಷ್ಯತಿ ಸಮುದ್ಯಮಃ ।
ಕಿಂಚಿತ್ಕಾಲಂ ತು ಸೀತಾಯಾ ವಿಯೋಗೋ ಯೇನ ಮೇ ಭವೇತ್॥೩೯॥

ಉಪಾಯಸ್ಸವಿಧಾತವ್ಯಶ್ಚಿಂತಿತೋಽಸ್ತಿ ಮಯಾಪಿ ಚ ।
ಲೋಕಾಪವಾದಭೀತ್ಯಾಹಂ ರಜತೋಕ್ತಿಚ್ಛಲಾದಪಿ ॥ ೪೦ ॥

ಗಂಗಾಯಾ ದಕ್ಷಿಣೇತೀರೇ ವಾಲ್ಮೀಕೇರಾಶ್ರಮೇ ಶುಭೇ ।
ತ್ಯಜಾಮಿ ಜಾನಕೀಂ ಶುದ್ಧಾಂ ಕಿಂಚಿತ್ಕಾಲಾಂತರಾತ್ಪುನಃ ॥ ೪೧ ॥

---

೩೭. ಹೆತ್ತಮೇಲೆ ಐದುತಿಂಗಳಾಗುತ್ತಲೂ ಹೆಂಗಸು ತನ್ನ ದೇಹದ ಸ್ವಾಸ್ಥ್ಯವನ್ನು ಹೊಂದುತ್ತಾಳೆ. ಆವಾಗ ಸ್ತ್ರೀಸಂಗಮವನ್ನು ಪುರುಷನು ಮಾಡದಿದ್ದರೆ ಆಕೆಯು ಕ್ಷೀಣಿಸುತ್ತಾಳೆ.

೩೮–೩೯ ಎಲೈ ಮಾವನೆ! ಈಗ ನಾನೇನು ಮಾಡಬೇಕೆಂಬುದನ್ನು ತಿಳಿಸು. ಸೀತೆಯನ್ನು ನಿನ್ನೊಡನೆ ಮಿಥಿಲೆಗೆ ಕಳುಹಿಸಿದರೆ ಆಗ ನಾನೂ ಆಕೆಯ ಜೊತೆಯಲ್ಲಿ ಬರಲೇ ಬೇಕಾಗುವುದು. ಅಂತೂ ನಾನು ಸೀತೆಯನ್ನು ಬಿಟ್ಟು ಕೊಂಚಕಾಲ ಇರಬೇಕು. ಅಂತಹ ಒಂದು ಉಪಾಯವನ್ನು ಮಾಡಬೇಕು. ಅದನ್ನು ನಾನು ಇಂತೆಂದು ಯೋಚಿಸಿದ್ದೇನೆ.

೪೦–೪೧. ಲೋಕಾಪವಾದದ ಭೀತಿಯಿಂದಲೂ, ಅಗಸನ ಮಾತಿನ ನೆವದಿಂದಲೂ ಗಂಗೆಯ ದಕ್ಷಿಣ ದಡದಲ್ಲಿರುವ ಉತ್ತಮವಾದ ವಾಲ್ಮೀಕಿಯ ಆಶ್ರಮದಲ್ಲಿ ಜಾನಕಿಯು ಶುದ್ಧಳಾಗಿದ್ದರೂ ಅಪವಾದದ ನೆವದಿಂದ ಬಿಟ್ಟು ಬಿಡುತ್ತೇನೆ. ಆ ರೀತಿಯಾಗಿ ಆಕೆಯು ಕೊಂಚಕಾಲ ಅಲ್ಲಿರಲಿ.

ಏನಾಂ ಸಮಾನಯಿಷ್ಯಾಮಿ ಪ್ರತ್ಯಯಂ ಮಾಂ ಪ್ರದಾಸ್ಯತಿ |
ತತೋಽ ನಯಾ ಚಿರಂ ಕಾಲಂ ನಾನಾಭೋಗಾರ್ ಭಜಾಮ್ಯಹಂ ॥ ೪೨ ||

ಜನಕಾದ್ಯ ತ್ವಯಾ ತತ್ರ ನಿಜಪತ್ನ್ಯಾ ಸುಮೇಧಯಾ |
ವಾಲ್ಮೀಕೇರಾಶ್ರಮೇ ಗತ್ವಾ ಸ್ಥೇಯಂ ವರ್ಷಾಣಿ ಪಂಚ ವೈ ॥ ೪೩ ||

ತಥೇತ್ಯಂಗೀಚಕಾರಾಥ ಜನಕೋಪಿ ಸುಮೇಧಯಾ |
ಸೀತಾಪ್ಯಂಗೀಚಕಾರಾಥ ಪತ್ಯುರ್ವಿಹಸ್ಯ ತದ್ವಚಃ || ೪೪ ||

ಅಥ ರಾಮೋ ದದಾವಾಜ್ಞಾಂ ಸಸ್ತ್ರಿಯಂ ಜನಕಂ ಮುದಾ |
ಸ ಗತ್ವಾ ಮಿಥಿಲಾರಾಜ್ಯೇ ಸ್ವೀಯಂ ಸಂಸ್ಥಾಪ್ಯ ಮಂತ್ರಿಣಂ || ೪೫ ||

---

೪೨. ಸ್ವಲ್ಪಕಾಲವಾದಮೇಲೆ ಅವಳನ್ನು ನಾನು ಕರೆತರುತ್ತೇನೆ. ಆಕೆಯು ನನಗೆ ತಾನು ಶುದ್ಧಳೆಂದು ನಂಬುಗೆಯನ್ನುಂಟುಮಾಡುತ್ತಾಳೆ. ಅನಂತರವೂ ನಾನು ಆಕೆಯೊಡನೆ ನಾನಾ ಭೋಗಗಳನ್ನು ಅನುಭವಿಸುತ್ತಲಿರುವೆನು.

೪೩-೪೪. ಎಲೈ ಜನಕನೇ! ನೀನು ಸುಮೇಧೆಯೊಡನೆ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ಐದು ವರ್ಷಗಳವರೆಗೂ ಇರಬೇಕು. ಎನ್ನಲು ಜನಕನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಸೀತೆಯೂ ಕೂಡ ನಗುತ್ತ ಅಂತೆಯೇ ಆಗಲೆಂದು ಒಪ್ಪಿದಳು.

೪೫. ಒಡನೆಯೇ ರಾಮನ ಅಪ್ಪಣೆಯನ್ನು ಹೊಂದಿ ತಾನೂ ತನ್ನ ಹೆಂಡತಿಯೂ ತಮ್ಮ ರಾಜ್ಯಕ್ಕೆ ಹೋದರು. ಅಲ್ಲಿ ಆ ಜನಕನು ತನ್ನ ಮಂತ್ರಿಯನ್ನು ರಾಜ್ಯದಲ್ಲಿ ಪ್ರತಿನಿಧಿಯನ್ನಾಗಿಟ್ಟು ಅವನಿಗೆ ರಾಜ್ಯಭಾರವನ್ನು ವಹಿಸಿದನು.

ಯಯೌ ಸುಮೇಧಯಾ ಶೀಘ್ರಂ ವಾಲ್ಮೀಕೇರಾಶ್ರಮಂ ಮುದಾ ।
ಕಿಂಚಿದ್ದಾಸೀದಾಸಸೈನ್ಯವಾಜಿವಾರಣವೇಷ್ಟಿತಃ ॥ ೪೬ ॥

ನಾನೋಪಚಾರಾರ್ಸೀತಾರ್ಥಂ ಸಂಗೃಹ್ಯ ಶಕಟಾದಿಭಿಃ ।
ಚಕಾರ ಗೇಹಂ ವಿಪುಲಂ ವಾಲ್ಮೀಕೇಸ್ಯ ಸುಖಾವಹಂ ॥ ೪೭ ॥

ಸರ್ವಸಂಪತ್ತಿಸಂಯುಕ್ತಂ ಬಹುಗೋಮಹಿಷೀಯುತಂ ।
ಪೂರಿತಂ ಧಾನ್ಯಸಂಘೈಶ್ಚ ವಸ್ತ್ರೈರಾಭರಣಾದಿಭಿಃ ॥ ೪೮ ॥

ಕಾಸಾರೋಪವನಾರಾಮ ಪುಷ್ಪವಾಟಿಶತಾವೃತಂ ।
ಗವಾಕ್ಷೈಶ್ಚಂದ್ರಕಾಂತಾನಾಂ ಕಪಾಟೈಶ್ಚ ಸಮನ್ವಿತಂ ॥ ೪೯ ॥

---

೪೬. ಅನಂತರ ಸುಮೇಧೆಯನ್ನು ಕರೆದುಕೊಂಡು ಆ ಜನಕನು ವಾಲ್ಮೀಕಿಯ ಆಶ್ರಮಕ್ಕೆ ಹೋದನು. ಜೊತೆಯಲ್ಲಿ ಮಿತವಾದ ದಾಸಿಯರನ್ನೂ ದಾಸರನ್ನೂ ಕರೆದುಕೊಂಡು ಕೊಂಚವೇ ಸೈನ್ಯವನ್ನೂ ತೆಗೆದುಕೊಂಡು ಹೋದನು.

೪೭. ಸೀತೆಗೆ ಬೇಕಾದ ಉಪಚಾರದ ಪದಾರ್ಥಗಳನ್ನು ಗಾಡಿಗಳಲ್ಲಿ ತುಂಬಿಕೊಂಡು ಹೋದನು. ಆ ವಾಲ್ಮೀಕಿಯ ಆಶ್ರಮದಲ್ಲಿ ಸುಖವಾದ ಚೆನ್ನಾಗಿರುವ ಮನೆಯನ್ನು ಮಾಡಿಕೊಂಡನು.

೪೮. ಅಲ್ಲಿ ಬೇಕು ಬೇಕಾದ ಪದಾರ್ಥಗಳನ್ನು ಸಂಗ್ರಹಿಸಿಕೊಂಡನು. ಅನೇಕ ಹಸುಗಳನ್ನೂ ಎಮ್ಮೆಗಳನ್ನೂ ಇಟ್ಟುಕೊಂಡನು. ಧಾನ್ಯಗಳನ್ನೂ ವಸ್ತ್ರಗಳನ್ನೂ ತುಂಬಿಕೊಂಡನು. ಆಭರಣಗಳನ್ನೂ ಸಂಗ್ರಹಿಸಿದನು.

೪೯. ಅನೇಕ ಉಪವನಗಳನ್ನೂ, ಕೊಳಗಳನ್ನೂ, ಹೂ ತೋಟಗಳನ್ನೂ ಆ ಮನೆಯ ಬಳಿಯಲ್ಲಿ ನಿರ್ಮಿಸಿದನು. ಆ ಮನೆಗೆ ಅನೇಕ ಗವಾಕ್ಷಗಳನ್ನೂ ಮಾಡಿಸಿ ಅವಕ್ಕೆ ಚಂದ್ರಕಾಂತ ಶಿಲೆಯ ಕದಗಳನ್ನು ಮಾಡಿಸಿದನು.

ಕೃಷ್ಣಾಗರುಸಕರ್ಪೂರರೋಶೀರಮಾಲ್ಯಾದಿಮೋದಿತಂ ।
ಕಾಂಚನಶೃಂಖಲಾಬದ್ಧರತ್ನ ಪರ್ಯಂಕ ಮಂಡಿತಂ ॥ ೫೦ ॥

ಹಂಸಪಾರಾವತಪಿಕಕೇಕೀಶುಕನಿನಾದಿತಂ ।
ಮುಕ್ತಾಗುಚ್ಛವಿತಾನಾದ್ಯೈಶ್ಶೋಭಿತಂ ಚಿತ್ರಚಿತ್ರಿತಂ ॥ ೫೧ ॥

ಏವಂ ಮನೋಹರಂ ಗೇಹಂ ಸೀತಾರ್ಥಂ ಜನಕೋಽಕರೋತ್ ।
ಶ್ರೀಸ್ಸಾಕ್ಷಾದ್ಗಂತುಮುದ್ಯುಕ್ತಾ ಯಸ್ಮಿನ್ನಿವಸಿತುಂ ಚಿರಂ ॥ ೫೨ ॥

ಕಿಂ ದುರ್ಲಭಂ ಹಿ ತತ್ರಾಸ್ತಿ ವರ್ಣನೀಯಂ ಮಯಾದ್ಯ ಕಿಂ ।
ಯಸ್ಯಾ ನೇತ್ರಕಟಾಕ್ಷೇಣ ಶಕ್ರಾದೀನಾಂ ವಿಭೂತಯಃ ॥ ೫೩ ॥

---

೫೦. ಕೃಷ್ಣಾಗರು, ಕರ್ಪೂರ, ಲಾಮಂಚ, ಮಾಲೆಗಳು ಇವುಗಳಿಂದ ತುಂಬಿರುವಂತೆ ಅವೆಲ್ಲವನ್ನೂ ಅಲ್ಲಿಟ್ಟನು. ಚಿನ್ನದ ಸರಪಣಿಗಳುಳ್ಳ ಅನೇಕ ಮಂಚಗಳನ್ನು ಅಲ್ಲಿ ಕಟ್ಟಿಸಿದನು.

೫೧. ಹಂಸ, ಪಾರಿವಾಳ, ಕೋಗಿಲೆ, ನವಿಲು, ಗಿಳಿ ಇವೆಲ್ಲವೂ ಅಲ್ಲಿದ್ದು ಮನೋಹರವಾಗಿ ಕೂಗುತ್ತಿದ್ದುವು. ಮುತ್ತಿನ ಗೊಂಚಲುಗಳಿಂದಲೂ ಮೇಲ್ಕಟ್ಟುಗಳಿಂದಲೂ ಚಿತ್ರವಿಚಿತ್ರವಾಗಿ ಆ ಮನೆಯು ಅಲಂಕೃತವಾಗಿದ್ದಿತು.

೫೨–೫೩. ಈ ರೀತಿಯಾದ ಸುಂದರವಾದ, ಆಹ್ಲಾದ ಕರವಾದ ಮನೆಯನ್ನು ಜನಕನು ಸೀತೆಗೋಸ್ಕರ ನಿರ್ಮಿಸಿದನು. ಅದರಲ್ಲಿ ವಾಸಮಾಡಲು ಸಾಕ್ಷಾತ್ ಲಕ್ಷ್ಮಿಯು ಹೋಗುವಳಷ್ಟೆ! ಆದ್ದರಿಂದ ಅಲ್ಲಿ ದುರ್ಲಭವಾದ ಒಂದು ವಸ್ತುವೂ ಇರುವುದಿಲ್ಲ. ಯಾವಳು ಕಡೆಗಣ್ಣಿನಿಂದ ನೋಡಿದ ಕೂಡಲೆ ಇಂದ್ರಾದಿಗಳಿಗೂ ಕೂಡ ಸಂಪತ್ತು ಒದಗುವುದೋ ಆಕೆಯು ಬಂದರೆ ಯಾವುದು ತಾನೆ ದುರ್ಲಭವಾದೀತು ?

ವಾಲ್ಮೀಕಯೇ ಸರ್ವವೃತ್ತಂ ಜನಕೋಽಪಿ ನ್ಯವೇದಯತ್ ।
ಮುನಿಶ್ಚಾಪ್ಯತಿ ಸಂತುಷ್ಟೋ ಮೇನೇ ಸ್ವತಪಸಃ ಫಲಂ ॥ ೫೪ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಜನ್ಮಕಾಂಡೇ ಸೀತಾವಿಹಾರ ವರ್ಣನಂ
ನಾಮ ದ್ವಿತೀಯಸ್ಸರ್ಗಸ್ಸಮಾಪ್ತಃ

---

೫೪. ಜನಕನು ವಾಲ್ಮೀಕಿಗೂ ಕೂಡ ಎಲ್ಲಾ ವಿಷಯಗಳನ್ನೂ ತಿಳಿಸಿದನು. ಆ ವಾಲ್ಮೀಕಿಯು ಬಹು ಸಂತೋಷಗೊಂಡವನಾಗಿ ಆಕೆಯು ತನ್ನ ಆಶ್ರಮಕ್ಕೆ ಬರುವುದು ತನ್ನ ತಪಸ್ಸಿನ ಫಲವೆಂದು ತಿಳಿದು ಸಂತೋಷಪಟ್ಟನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಸೀತಾವಿಹಾರ
ವರ್ಣನ ಎಂಬ ಎರಡನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

॥ ಎರಡನೆಯ ಸರ್ಗದ ಸಾರಾಂಶವು ॥

ಸೀತೆಯು ಶ್ರೀರಾಮನೊಡನೆ ಉಪವನಕ್ಕೆ ಹೋಗಿ ಅಲ್ಲಿ ಹವಮಾನಕ್ಕೆ ಅನುಕೂಲವಾದ ಸ್ಥಳಗಳಲ್ಲಿಯೂ ಕ್ರೀಡೆಗೆ ಅನುಕೂಲವಾದ ಸ್ಥಳಗಳಲ್ಲಿಯೂ ಅಪೂರ್ವವಾಗಿ ಆಟಕ್ಕೆಂದೇ ನಿರ್ಮಿಸಿರುವ ಸ್ಥಳಗಳಲ್ಲಿಯೂ ಕ್ರೀಡಿಸಿದಳು.

ರಾಮನೂ ಕೂಡ ಆಕೆಯು ಮನಸ್ಸಿಗೆ ಸ್ವಲ್ಪವೂ ಖೇದಗೊಳ್ಳದಂತೆ ಆಕೆಗೆ ಬೇಕಾದುವನ್ನು ಒದಗಿಸಿಕೊಡುತ್ತ ಆಕೆಯ ಜೊತೆಯಲ್ಲಿ ಕ್ರೀಡಿಸಿದನು. ಸೀತೆಯ ವಿನೋದಕ್ಕೋಸ್ಕರ ರಾಮನು ಸೂಳೆಯರ ಕುಣಿತ, ಡೊಂಬರ ಆಟ, ಉತ್ತಮ ವಸ್ತುಪ್ರದರ್ಶನ, ಸಂಗೀತದ ಸಭೆ, ಮುಂತಾದುವನ್ನು ಏರ್ಪಡಿಸುತ್ತಿದ್ದನು.

ಸೀತೆಯು ಈ ರೀತಿಯಾಗಿ ವಿಹರಿಸಿಕೊಂಡು ತಿಂಗಳಕಾಲವಿದ್ದಳು. ಅನಂತರ ಪಟ್ಟಣಕ್ಕೆ ಬಂದು ಬಿಟ್ಟಳು. ಪಟ್ಟಣದಲ್ಲಿರುತ್ತಿರಲು ಐದುತಿಂಗಳು ತುಂಬಿತು ಆರನೆಯ ತಿಂಗಳು ಪ್ರಾರಂಭವಾಯಿತು. ಆಗ್ಗೆ ರಾಮನು ಗುರುವಾದ ವಸಿಷ್ಠನಿಂದ ಸೀಮಂತವನ್ನು ಮಾಡಿಸಿದನು. ಆಗ ಸುಮೇಧೆ ಜನಕರೂ ಬಂದಿದ್ದರು. ಈ ಕಾಲದಲ್ಲಿ ಸ್ನೇಹಿತರೂ ಪಟ್ಟಣಿಗರೂ ಸೀತೆಯನ್ನು ಕರೆದು ಕೊಂಡು ಹೋಗಿ ಆರತಿ ಔತಣಗಳನ್ನು ಮಾಡಿ ಉತ್ಸವವನ್ನು ಆಚರಿಸಿದರು.

ರಾಜರೂ ಕೂಡ ತಮ್ಮ ಪತ್ನಿಯರೊಂದಿಗೆ ಅಯೋಧ್ಯೆಗೆ ಬಂದು ಆ ಸೀತೆಯನ್ನು ಗೌರವಿಸುತ್ತಿದ್ದರು. ಮತ್ತು ತಾವೂ ಆಕೆಯೊಡನೆ ಅನೇಕ ದಿನಗಳವರೆಗಿದ್ದು ಹೋಗುತ್ತಿದ್ದರು.

ಹೀಗಿರುತ್ತಿರಲು ಒಂದುದಿನ ರಾಮನು ಸುಮೇಧೆ ಜನಕರ ಎದುರಿಗೆ ಸೀತೆಯನ್ನೂ ಕೂರಿಸಿಕೊಂಡು ಇಂತೆಂದನು. “ ನನಗೆ ಸೀತೆಯನ್ನು ಒಂದು ಕ್ಷಣವೂ ಬಿಟ್ಟಿರುವುದಕ್ಕೆ ಆಗುವುದಿಲ್ಲ. ಸೀತೆಯನ್ನು ನೋಡಿದೊಡನೆಯೇ ನನಗೆ ಮನಸ್ಸು ಸ್ತಿಮಿತವಾಗುತ್ತದೆ. ನನಗೆ ಮನಸ್ಸಿಗೆ ವ್ಯಾಕುಲಬಂದಾಗಲೆಲ್ಲಾ ಈ ಸೀತೆಯ ಬಳಿಗೆ ಬಂದು ಅದೆಲ್ಲವನ್ನೂ ಕಳೆದುಕೊಳ್ಳುತ್ತೇನೆ. ಈಗಲೂ ಈ ಸೀತೆಯನ್ನು ನೋಡಿದರೆ ನನಗೆ ಕಾಮಬಾಧೆಯು ಹೆಚ್ಚುತ್ತಿದೆ. ಆದರೆ ಹೆಂಗಸು ಗರ್ಭಿಣಿಯಾದ ಐದುತಿಂಗಳಮೇಲೆ ಆ ಸ್ತ್ರೀಸಂಗವನ್ನು ಮಾಡಕೂಡದೆಂದು ಮುನಿಗಳು ಹೇಳಿರುತ್ತಾರೆ. ಅಲ್ಲದೆ ಹೆತ್ತಮೇಲೂ ಐದುತಿಂಗಳು ಕಳೆಯುವವರೆಗೆ ಆಕೆಯ ಸಂಗವನ್ನು ಮಾಡಬಾರದು. ಹಾಗೆ ಮಾಡಿದರೆ ಆಕೆಯು ಕಂಗೆಟ್ಟು ಕ್ಷೀಣಿಸಿ ಹೋಗುತ್ತಾಳೆ. ಸ್ಥಿತಿಯು ಈ ರೀತಿಯಾಗಿರುವುದರಿಂದ ಈಗ ನಾನು ಮಾಡತಕ್ಕದ್ದೇನು ? ಈ ಸೀತೆಯನ್ನು ಮಿಥಿಲೆಗೆ ನಿಮ್ಮ ಜೊತೆಯಲ್ಲಿ ಕಳುಹಿಸಿದರೆ ಆಗ ನನಗೂ ಬರಬೇಕೆಂಬ ಮನಸ್ಸು ಹುಟ್ಟಿ ಬರಬೇಕಾಗುತ್ತದೆ. ಆದ್ದರಿಂದ ನಾನು ಕೆಲವುದಿನಗಳವರೆಗೆ ಈ ಸೀತೆಯನ್ನು ಬಿಟ್ಟು ಬಿಟ್ಟು ಇರಬೇಕು. ಅದಕ್ಕಾಗಿ ನಾನು ಒಂದು ಉಪಾಯವನ್ನು ಯೋಚಿಸಿದ್ದೇನೆ. ಅದನ್ನು ಕೇಳು. ಈಗ ಅಗಸನ ಮಾತಿನ ನೆಪವನ್ನಿಟ್ಟುಕೊಂಡು ಲೋಕಾಪವಾದದ ಹೆದರಿಕೆಯಿಂದ ಸೀತೆಯನ್ನು ಗಂಗೆಯ ಬಲಗಡೆಯದಡದಲ್ಲಿರುವ ವಾಲ್ಮೀಕಿಯ ಆಶ್ರಮದಲ್ಲಿ ಬಿಟ್ಟು ಬಿಡುತ್ತೇನೆ. ಕೆಲವುಕಾಲದಮೇಲೆ ಶುದ್ಧಳಾದ ಆಕೆಯನ್ನು ಕರೆತರುತ್ತೇನೆ. ಆಗ ಅವಳು ನನಗೆ ನಂಬುಗೆಯನ್ನುಂಟುಮಾಡುತ್ತಾಳೆ. ಅನಂತರ ಆಕೆಯನ್ನು ಕರೆದುಕೊಂಡು ಆಕೆಯೊಡನೆ ಬಹುಕಾಲದವರೆಗೆ ರಾಜ್ಯಭಾರಮಾಡುತ್ತೇನೆ. ಆದ್ದರಿಂದ ಎಲೈ ಜನಕನೆ ! ಈಗ ನೀನು ನಾನು ಹೇಳುವಂತೆ ಮಾಡು. ನೀನೂ ನಿನ್ನ ಹೆಂಡತಿಯಾದ ಸುಮೇಧೆಯೂ ವಾಲ್ಮೀಕಿಯ ಆಶ್ರಮಕ್ಕೆ ಸಕಲ ಸಂಭಾರಗಳೊಡನೆ ಹೋಗಿ ಐದುವರ್ಷಗಳವರೆಗೆ ವಾಸಮಾಡಿರಿ. ಆಗ ಈ ಸೀತೆಗೂ ಅನುಕೂಲವಾಗುವುದು. ”

ಈ ಮಾತನ್ನು ಕೇಳಿ ಜನಕನೂ ಸುಮೇಧೆಯೂ ಒಪ್ಪಿಕೊಂಡರು. ಸೀತೆಯೂ ಕೂಡ ನಗುತ್ತ ಗಂಡನ ಮಾತಿಗೆ ಒಪ್ಪಿಗೆಯನ್ನಿತ್ತಳು. ಜನಕನೂ

ಅವನ ಹೆಂಡತಿಯೂ ಮಿಥಿಲೆಗೆ ಹೋಗಿ ತಮ್ಮ ರಾಜ್ಯವನ್ನು ತಂತ್ರಜ್ಞನಾದ ಮಂತ್ರಿಗೆ ಒಪ್ಪಿಸಿ ಅಲ್ಲಿಂದ ವಾಲ್ಮೀಕಿಯ ಆಶ್ರಮಕ್ಕೆ ಹೋದರು. ಅವರಿಗೆ ಆಗ ಬೇಕಾದುವೆಲ್ಲವನ್ನೂ ಜೊತೆಯಲ್ಲಿಯೇ ತೆಗೆದುಕೊಂಡು ಹೋಗಿ ಆ ಆಶ್ರಮದಲ್ಲಿ ದೊಡ್ಡದಾದ ಒಂದು ಮನೆಯನ್ನೇ ಕಟ್ಟಿಸಿ ಅಲ್ಲಿ ಅನೇಕ ಬಗೆಯಾದ ಅನುಕೂಲ ಗಳನ್ನು ಕಲ್ಪಿಸಿಕೊಂಡರು. ಲಕ್ಷ್ಮಿಯು ತಾನಾಗಿಯೇ ಅಲ್ಲಿಗೆ ಹೋಗಲು ಇಷ್ಟಪಡುತ್ತಿರುವಾಗ ಅಲ್ಲಿ ಯಾವುದರ ಕೊರತೆ ತಾನೆ ಇದ್ದೀತು !

ಜನಕನು ವಾಲ್ಮೀಕಿಋಷಿಗೂ ಎಲ್ಲಾ ವಿಷಯವನ್ನೂ ಹೇಳಿದನು. ಆ ವಾಲ್ಮೀಕಿಯೂ ಕೂಡ ಬಹುವಾಗಿ ಸಂತೋಷಗೊಂಡನಲ್ಲದೆ ಆಕೆಯು ಬರುವುದು ತನ್ನ ತಪಸ್ಸಿನ ಫಲವೆಂದೂ ತಿಳಿದುಕೊಂಡನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ತೃತೀಯಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ರಾಮಂ ತು ಕೌಸಲ್ಯಾಬ್ರವೀದ್ರಹಸಿ ಸಂಸ್ಥಿತಾ ।
ಸೀತಾಂ ಸೀಮೋಲ್ಲಂಘನಾರ್ಥಂ ಶೀಘ್ರಂ ಪ್ರೇಷಯ ರಾಘವ ॥ ೧ ॥

ತನ್ಮಾತುರ್ವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸವಿಸ್ತರಾತ್ ।
ಸ ಲಕ್ಷ್ಮಣೋ ನಿಜಾಮಂಬಾಂ ಪ್ರಾಹ ಯನ್ಮಂತ್ರಿತಂ ಪುರಾ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ
ಮೂರನೆಯ ಸರ್ಗವು

೧. ರಾಮದಾಸನು ಹೇಳಿದನು–ಒಂದುಸಾರಿ ರಹಃ ಪ್ರದೇಶದಲ್ಲಿ ತಾಯಿಯಾದ ಕೌಸಲ್ಯೆಯು ರಾಮನನ್ನು ಕುರಿತು ಇಂತೆಂದಳು. ಎಲೈ ರಾಘವನೆ! ಸೀತೆಯು ಗರ್ಭಿಣಿಯಾಗಿರುವಾಗ ಸೀಮೋಲ್ಲಂಘನೆಯನ್ನು ಮಾಡಬೇಕು. ಅದಕ್ಕೋಸ್ಕರ ಬೇಗನೆ ಕಳುಹಿಸು.

೨. ತಾಯಿಯ ಆ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ಲಕ್ಷ್ಮಣನನ್ನೂ ಜೊತೆಯಲ್ಲಿ ಕೂರಿಸಿಕೊಂಡು ತಾಯಿಗೆ ತಾನು ಮೊದಲು ಯೋಚನೆಮಾಡಿದ ವಿಷಯಗಳೆಲ್ಲವನ್ನೂ ಹೇಳಿದನು.

ವಾಲ್ಮೀಕೇರಾಶ್ರಮೇ ಸೀತಾತ್ಯಾಗಾದಿ ಚ ಸಕಾರಣಂ ।
ಅಥ ಮಾಸೇಷ್ಟಮೇ ಪ್ರಾಪ್ತೇ ರಾಮೋ ರಾಜೀವಲೋಚನಃ ॥ ೩ ॥

ಏಕಾಂತೇ ಜಾನಕೀಂ ಪ್ರಾಹ ವೀಜಿತೋ ಲಕ್ಷ್ಮಣೇನ ಹಿ ।
ಕಲ್ಪಯಿತ್ವಾ ಮಿಷಂ ದೇವಿ ರಜಕೋಕ್ತಂ ತ್ವದಾಶ್ರಯಂ ॥ ೪ ॥

ತ್ಯಜಾಮಿ ತ್ವಾಂ ವನೇ ಲೋಕವಾದಾದ್ಭೀತ ಇವಾಪರಃ ।
ತ್ರಿಮಾಸಾತ್ಪಂಚಮಾಸಾದ್ವಾ ಸಪ್ತಮಾಸಾತ್ಸುಬುದ್ಧಿಭಿಃ ॥ ೫ ॥

ಅಂತರ್ವತ್ನೀ ನ ಗಮ್ಯೇತಿ ಶಾಸ್ತ್ರಾಜ್ಞಾಂ ರಜಕಚ್ಛಲಾತ್ ।
ತ್ವಾಂ ತ್ಯಕ್ತ್ವಾ ಪಾಲಯಿಷ್ಯಾಮಿ ನಿಕಟೇ ವಸ್ತುಮಕ್ಷಮಃ ॥ ೬ ॥

---

೩. ಸೀತೆಯನ್ನು ವಾಲ್ಮೀಕಿಯ ಆಶ್ರಮದಲ್ಲಿ ಬಿಡಲು ಉದ್ದೇಶಿಸಿರುವುದನ್ನೂ ಅದಕ್ಕೆ ಕಾರಣವನ್ನೂ ವಿಸ್ತಾರವಾಗಿ ತಿಳಿಸಿದನು. ಹೀಗಿರುತ್ತಿರಲು ಜಾನಕಿಗೆ ಎಂಟನೆಯತಿಂಗಳು ಪ್ರಾಪ್ತವಾಯಿತು.

೪. ಆಗ ರಾಮನೂ ಸೀತೆಯೂ ಏಕಾಂತದಲ್ಲಿ ಕುಳಿತಿರಲು ಲಕ್ಷ್ಮಣನು ಬೀಸಣಿಗೆಯಿಂದ ಬೀಸುತ್ತಿದ್ದನು. ಆಗ ರಾಮನು ಸೀತೆಯನ್ನು ಕುರಿತು ಎಲೈ ದೇವಿಯೆ! ಅಗಸನು ಹೇಳಿದ ದೋಷವನ್ನೇ ನೆವವನ್ನಾಗಿ ಇಟ್ಟುಕೊಂಡು ಲೋಕಾಪವಾದಕ್ಕೆ ಹೆದರಿದ ಪ್ರಾಕೃತಮನುಷ್ಯನಂತೆ ನಿನ್ನನ್ನು ಕಾಡಿನಲ್ಲಿ ಬಿಟ್ಟು ಬಿಡುತ್ತೇನೆ.

೫-೬. ಮೂರುತಿಂಗಳಾದಮೇಲಾಗಲಿ, ಐದುತಿಂಗಳಾದಮೇಲಾಗಲಿ, ಕೊನೆಗೆ ಏಳುತಿಂಗಳಾದಮೇಲಾಗಲಿ, ಗರ್ಭಿಣಿಯ ಸಂಗವನ್ನು ಮಾಡಬಾರದು ಎಂದು ಶಾಸ್ತ್ರದಲ್ಲಿ ಹೇಳಿರುವುದನ್ನು ಈ ಅಗಸನ ಮಾತನ್ನೇ ನೆವವನ್ನಾಗಿ ಇಟ್ಟುಕೊಂಡು ನಿನ್ನನ್ನು ಬಿಟ್ಟು ಬಿಡುತ್ತೇನೆ. ಏತಕ್ಕೆಂದರೆ ನಿನ್ನ ಹತ್ತಿರದಲ್ಲಿ ರಮಿಸದೆ ಇರಲು ನನಗೆ ಸಾಧ್ಯವಿಲ್ಲವಾಗಿರುವುದು.

ತ್ವಾಂ ದೃಷ್ಟ್ವಾ ಚಂದ್ರವದನಾಂ ಕಾಮೋ ಮೇತೀವ ಬಾಧತೇ ।
ತ್ವದ್ವಿಯೋಗಸ್ತು ನಿರ್ಬಂಧಾದ್ವಿನಾ ಮೇತ್ರ ಕಥಂ ಭವೇತ್ ॥ ೭ ॥

ತಸ್ಮಾತ್ಕೃತೋಽಯಂ ನಿರ್ಬಂಧಸ್ಸತ್ಯಂ ವಿದ್ಧಿ ಮನೋರಮೇ ।
ಪಂಚವರ್ಷಾನಂತರೇಣ ಪುನರಾಗತ್ಯ ಮೇಂತಿಕಂ ॥ ೮ ॥

ಲೋಕಾನಾಂ ಪ್ರತ್ಯಯಾರ್ಥಂ ತ್ವಂ ಶಪಥಂ ಹಿ ಕರಿಷ್ಯಸಿ ।
ಭೂಮೇರ್ವಿವರಮಾರ್ಗೇಣ ಸ್ಥಿತ್ವಾ ಸಿಂಹಾಸನೋಪರಿ ॥ ೯ ॥

ಯದಾ ಗಚ್ಛಸಿ ಪಾತಾಲಂ ಜಗತ್ಯಾ ಪೂಜಿತಾ ತದಾ ।
ಭುವಂ ಸ್ತುತ್ವಾ ಭೀಷಯಿತ್ವಾ ತ್ವಾಮಂಕೇ ಸ್ಥಾಪಯಾಮ್ಯಹಂ ॥ ೧೦ ॥

೭-೮. ಚಂದ್ರವದನೆಯಾದ ನಿನ್ನನ್ನು ನೋಡಿದರೆ ನನಗೆ ಕಾಮವು ಬಹುವಾಗಿ ಬಾಧಿಸುತ್ತದೆ. ಈ ನಿರ್ಬಂಧವಿಲ್ಲದಿದ್ದರೆ ನಿನ್ನನ್ನು ಅಗಲುವುದಕ್ಕೆ ಆಗುವುದಿಲ್ಲ. ಆದ್ದರಿಂದಲೇ ನಾನು ಈ ರೀತಿಯಾಗಿ ನಿರ್ಬಂಧಿಸುತ್ತಿರುವುದು. ಇದು ಸತ್ಯವೆಂದು ತಿಳಿ. ಐದುವರ್ಷಗಳಾಗುತ್ತಲೂ ಮತ್ತೆ ನೀನು ನನ್ನನ್ನು ಹೊಂದುತ್ತೀಯೆ.

೯. ಆಗ ನೀನು ಬಂದು ಜನಗಳಿಗೆ ನಂಬುಗೆಯನ್ನುಂಟುಮಾಡಲು ಪ್ರಮಾಣಗಳನ್ನು ಮಾಡುತ್ತೀಯೆ. ಅನಂತರ ಭೂಮಿಯು ಬಿರುಕು ಬಿಟ್ಟು ಅಲ್ಲಿಂದ ಒಂದು ಸಿಂಹಾಸನವು ಬರುವುದು. ಅದರಲ್ಲಿ ಕುಳಿತುಕೊಳ್ಳುತ್ತೀಯೆ.

೧೦. ಆಗ ನೀನು ಪಾತಾಳಕ್ಕೆ ಹೋಗಲು ಪ್ರಯತ್ನಿಸುತ್ತೀಯೆ. ಜನವೆಲ್ಲವೂ ನಿನ್ನನ್ನು ಗೌರವಿಸುತ್ತಾರೆ. ಆಗ ನಾನು ಭೂದೇವಿಯನ್ನು ಹೆದರಿಸಿ ನಿನ್ನನ್ನು ತೊಡೆಯಮೇಲೆ ಕೂರಿಸಿಕೊಳ್ಳುವೆನು.

ಪುತ್ರಾಭ್ಯಾಂ ಚ ಮಯಾ ಸೀತೇ ತತೋ ಭೋಗಾನವಾಪ್ಸ್ಯಸಿ ।
ಮತ್ತಸ್ತ್ವೇಕಃ ಕುಶೋ ಜ್ಯೇಷ್ಠಸ್ತವ ಪುತ್ರೋ ಭವಿಷ್ಯತಿ ॥ ೧೧ ॥

ಮುನೇಸ್ತಪಃಪ್ರಭಾವೇಣ ಭವಿಷ್ಯತ್ಯಪರೋ ಲವಃ ।
ವಾಲ್ಮೀಕೇರಾಶ್ರಮೇ ಚೈವ ಕುಮಾರೌ ದ್ವೌ ಭವಿಷ್ಯತಃ ॥ ೧೨ ॥

ಗತ್ವಾಗ್ರೇ ಜನಕೇನೈವ ತ್ವದ್ಯೋಗ್ಯಂ ಚ ಗೃಹಾದಿಕಂ ।
ಸಸುಮೇಧೇನ ಸಕಲಂ ಕೃತಮಸ್ತಿ ಮಮಾಜ್ಞಯಾ ॥ ೧೩ ॥

ಕುರುಷ್ವಾದ್ಯ ಮಯಾ ಯತ್ಪ್ರಾಮುಚ್ಯತೇ ಜನಕಾತ್ಮಜೇ ।
ಸಾತ್ವಿಕೀ ತ್ವಂ ಯಥಾಪೂರ್ವಂ ದಂಡಕೇ ಗೌತಮೀತಟೇ ॥ ೧೪ ॥

ಮದ್ವಾಮಾಂಗೇ ಸ್ಥಿತಾ ತದ್ವನ್ಮೇ ವಾಮಾಂಗೇ ವಸಾಧುನಾ ।
ವಾಲ್ಮೀಕೇರಾಶ್ರಮೇ ಗಂತುಂ ಗುಣದ್ವಯವಿಮಿಶ್ರಿತಾ ॥ ೧೫ ॥

---

೧೧. ಅನಂತರ ನೀನು ಹೆರತಕ್ಕ ಇಬ್ಬರು ಮಕ್ಕಳೊಡನೆಯೂ ನನ್ನೊಡನೆ ಬಹುವಾದ ಭೋಗಗಳನ್ನು ಅನುಭವಿಸುತ್ತೀಯೆ. ನನ್ನ ದೆಸೆಯಿಂದ ನಿನ್ನಲ್ಲಿ ದೊಡ್ಡವನಾದ ಕುಶನೆಂಬುವನು ಹುಟ್ಟುವನು.

೧೨. ಆ ಮುನಿಯ ತಪಸ್ಸಿನ ಪ್ರಭಾವದಿಂದ ಲವನೆಂಬ ಮತ್ತೊಬ್ಬ ಮಗನಾಗುವನು. ಈ ಇಬ್ಬರು ಮಕ್ಕಳೂ ವಾಲ್ಮೀಕಿಯ ಆಶ್ರಮದಲ್ಲೇ ಆಗುವರು.

೧೩. ನಾನು ಇದೆಲ್ಲವನ್ನೂ ನಿನ್ನ ತಂದೆಗೆ ಹೇಳಿರುವೆನು. ಅವನು ತನ್ನ ಹೆಂಡತಿಯಾದ ಸುಮೇಧೆಯೊಡನೆ ಆ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ನಿನಗೆ ತಕ್ಕುದಾದ ಮನೆಗಳನ್ನೂ ಮತ್ತು ಇತರವಾದುವುಗಳನ್ನೂ ಸಿದ್ಧಪಡಿಸಿರುವನು.

೧೪-೧೫. ನಾನು ಈಗ ನಿನಗೆ ಹೇಳಿದಂತೆ ಎಲ್ಲವನ್ನೂ ಮಾಡು. ನೀನು ದಂಡಕಾರಣ್ಯದಲ್ಲಿ ಗೌತಮೀ ನದಿಯ ದಡದಲ್ಲಿ ಆಗಿದ್ದಂತೆ ಸಾತ್ವಿಕವಾದ ರೂಪಿನಿಂದ ನನ್ನಲ್ಲಿ ಇರು. ವಾಲ್ಮೀಕಿಯ ಆಶ್ರಮಕ್ಕೆ ಹೋಗಲು ರಜಸ್ತಮೋಗುಣಗಳಿಂದ ಕೂಡಿದವಳಾಗು.

ಭೂತ್ವಾ ತ್ವಮಾಶ್ರಮೇ ಸ್ಥಿತ್ವಾ ಮದ್ವಿಯೋಗಂ ಪ್ರದರ್ಶಯ |
ತತ್ರಾಪಿ ತ್ವಾಂ ಕುಶೋತ್ಪತ್ತೌ ದಾಸ್ಯಾಮಿ ದರ್ಶನಂ ರಹಃ ॥ ೧೬ ॥

ತಥೇತಿ ರಾಮವಚನಾಜ್ಜಾನಕೀ ವಿಸ್ಮಿತಾನನಾ |
ರಜಸ್ತಮೋಮಯಾಂ ಸ್ವೀಯಾಂ ಛಾಯಾಂ ನಿರ್ಮಾಯ ಸಾದರಂ ॥ ೧೭ ॥

ಶ್ರೀರಾಘವಸ್ಯ ವಾಮಾಂಗೇ ಸತ್ವರೂಪಾ ಲಯಂ ಯಯೌ ।
ತತೋ ರಾಮಸ್ಸಭಾಂ ಗತ್ವಾ ರಾತ್ರೌ ಜ್ಞಾನೈಕವಿಗ್ರಹಃ ॥ ೧೮ ॥

ಮಂತ್ರಿಭಿರ್ಮಂತ್ರತತ್ತ್ವಜ್ಞೈರ್ಬಲಮುಖ್ಯೈರ್ವಯೋಧಿಕೈಃ ।
ಸಮಂತತೋ ವೇಷ್ಟಿತಸ್ಸಂಸ್ತಸ್ಥೌ ಸಿಂಹಾಸನೋಪರಿ ॥ ೧೯ ॥

---

೧೬. ಈ ರೀತಿಯಾಗಿ ರಜಸ್ತಮೋಗುಣಗಳಿಂದ ಕೂಡಿದವಳಾಗಿ ವಾಲ್ಮೀಕಿಯ ಆಶ್ರಮದಲ್ಲಿದ್ದುಕೊಂಡು ನನ್ನ ಸಂಬಂಧವಾದ ವಿಯೋಗವನ್ನು ಎಲ್ಲರಿಗೂ ಪ್ರಕಾಶಪಡಿಸು. ಅಲ್ಲಿಯೂ ಕೂಡ ಕುಶನು ಹುಟ್ಟುವಾಗ ನಾನು ನಿನಗೆ ರಹಸ್ಯದಲ್ಲಿ ದರ್ಶನವನ್ನು ಕೊಡುತ್ತೇನೆ.

೧೭. ರಾಮನು ಹೀಗೆಂದೆನ್ನಲು ಸೀತೆಯು ಹುಸಿನಗುವಿನಿಂದ ಹಾಗೆಯೇ ಆಗಲೆಂದು ಹೇಳಿ ರಜಸ್ತಮೋಗುಣಗಳಿಂದ ಕೂಡಿದ ತನ್ನ ಪ್ರತಿಕೃತಿಯನ್ನು ನಿರ್ಮಿಸಿದಳು.

೧೮. ರಾಮನ ಬಲಭಾಗದಲ್ಲಿ ಸತ್ವರೂಪಿನಿಂದ ತನ್ನ ಭಾಗವು ಸೇರಿಕೊಂಡಿತು. ಅನಂತರ ರಾಮನು ರಾತ್ರಿಯಲ್ಲಿ ಸಭೆಗೆ ಹೋದನು. ಇವನು ಮಹಾಜ್ಞಾನವುಳ್ಳವನಷ್ಟೆ !

೧೯. ಆಗ ಆ ಸಭೆಯು ಮಂತ್ರಾಲೋಚನೆಯನ್ನು ಬಲ್ಲ ಮಂತ್ರಿಗಳಿಂದಲೂ, ತತ್ವವನ್ನು ಬಲ್ಲ ವಿದ್ವಾಂಸರಿಂದಲೂ ಸೇನಾಪತಿಗಳಿಂದಲೂ ಹಿರಿಯುವರಿಂದಲೂ, ಸುತ್ತಲೂ ಆವರಿಸಲ್ಪಟ್ಟಿದ್ದಿತು. ಅಂತಹ ಸಭೆಯಲ್ಲಿ ರಾಮನು ಸಿಂಹಾಸನದಲ್ಲಿ ಕುಳಿತನು.

ತತ್ರೋಪವಿಷ್ಟಂ ರಾಜಾನಂ ಸುಹೃದಃ ಪರ್ಯುಪಾಸಿರೇ ।
ಹಾಸ್ಯಪ್ರಾಯಕಥಾಭಿಶ್ಚ ಹಾಸಯಂತಃ ಸ್ಥಿತಾಃ ಪ್ರಭುಂ ॥ ೨೦ ॥

ಕಥಾಪ್ರಸಂಗಾತ್ಪಪ್ರಚ್ಛ ರಾಮೋ ವಿಜಯನಾಮಕಂ ।
ಪೌರಾ ಜಾನಪದಾ ವಾ ಮೇ ಕಿಂ ವದಂತಿ ಶುಭಾಶುಭಂ ॥ ೨೧ ॥

ಸೀತಾಂ ತಾಂ ಮಾತರಂ ವಾ ಮೇ ಭ್ರಾತೄನ್ವಾ ಕೈಕಯೀಮಥ ।
ನ ಭೇತವ್ಯಂ ತ್ವಯಾ ಬ್ರೂಹಿ ಶಾಪಿತೋಸಿ ಮಮೋಪರಿ ॥ ೨೨ ॥

ಇತ್ಯುಕ್ತಃ ಪ್ರಾಹ ವಿಜಯೋ ದೇವ ಸರ್ವೇ ವದಂತಿ ತೇ ।
ಕೃತಂ ಸುದುಷ್ಕರಂ ಕರ್ಮ ರಾಮೇಣ ವಿದಿತಾತ್ಮನಾ ॥ ೨೩ ॥

---

೨೦. ರಾಮನು ಸಿಂಹಾಸನದಲ್ಲಿ ಕುಳಿತುಕೊಳ್ಳಲು ಸ್ನೇಹಿತರು ಅವನನ್ನು ಸೇವಿಸುತ್ತಿದ್ದರು. ಆ ಸ್ನೇಹಿತರು ಹಾಸ್ಯವೇ ಪ್ರಧಾನವಾಗಿ ಉಳ್ಳ ಮಾತುಗಳಿಂದ ಅವನನ್ನು ನಗಿಸುತ್ತ ಸಂತೋಷಪಡಿಸುತ್ತಿದ್ದರು.

೨೧. ಹೀಗೆಯೇ ಮಾತು ಕಥೆಗಳು ನಡೆಯುತ್ತಿರಲು ದೂತನಾದ ವಿಜಯನೆಂಬುವನನ್ನು ಕುರಿತು ರಾಮನು ಎಲೈ ವಿಜಯನೇ ! ಈ ಪಟ್ಟಣಿಗ ರಾಗಲಿ, ದೇಶದವರಾಗಲಿ ನನ್ನ ವಿಷಯದಲ್ಲಿ ಒಳ್ಳೆಯದನ್ನಾಗಲಿ, ಕೆಟ್ಟ ದನ್ನಾಗಲೀ ಏನನ್ನು ಹೇಳುತ್ತಾರೆ !

೨೨. ನನ್ನ ವಿಷಯದಲ್ಲಾಗಲೀ, ಸೀತೆಯ ವಿಷಯದಲ್ಲಾಗಲೀ, ನನ್ನ ತಾಯಿಯಾದ ಕೌಸಲ್ಯೆಯ ವಿಷಯದಲ್ಲಾಗಲೀ, ನನ್ನ ತಮ್ಮಂದಿರ ವಿಷಯ ದಲ್ಲಾಗಲೀ, ಕೈಕೇಯಿಯ ವಿಷಯದಲ್ಲಾಗಲೀ ಏನನ್ನು ಹೇಳುತ್ತಾರೆ ? ಹೆದರಬೇಡ. ಹೇಳು. ನನ್ನ ಮೇಲಿನ ಆಣೆಯಿರುವುದು ಎಂದನು.

೨೩. ರಾಮನು ಹೀಗೆನ್ನಲು ವಿಜಯನು ಎಲೈ ದೇವನೇ ! ರಾಮನು ಬಹು ಬಲಿಷ್ಠನು. ತನ್ನ ಯೋಗ್ಯತೆಯನ್ನು ತಾನು ತಿಳಿದುಕೊಂಡು ತನಗೆ ಮೀರಿದ ಬಹು ಕಷ್ಟಕರವಾದ ಕೆಲಸವನ್ನೂ ಮಾಡಿದನು. ಎಂಬುದಾಗಿ ಎಲ್ಲರೂ ನಿನ್ನನ್ನು ಹೊಗಳುತ್ತಾರೆ.

ತಥಾಪ್ಯೇವಂ ವದಂತಿ ತ್ವಾಂ ಜನಾಸ್ತತ್ತೇ ವದಾಮ್ಯಹಂ ।
ಕಿಂ ತು ಹತ್ವಾ ದಶಗ್ರೀವಂ ಸೀತಾಮಾವೃತ್ಯ ರಾಘವಃ ॥ ೨೪ ॥

ಅಮರ್ಷಂ ಪೃಷ್ಠತಃ ಕೃತ್ವಾ ಸ್ವವೇಶ್ಮ ಪ್ರತ್ಯಪಾದಯುತ್ ।
ಕೀದೃಶಂ ಹೃದಯಂ ತಸ್ಯ ಸೀತಾಸಂಭೋಗಜಂ ಸುಖಂ ॥ ೨೫ ॥

ಯಾ ಹೃತಾ ವಿಜನೇ ಪೂರ್ವಂ ರಾವಣೇನ ವನೇ ತದಾ ।
ಅಕಸ್ಮಾದಪಿ ದುಷ್ಕರ್ಮ ಯೋಷಿತ್ಸ್ವಮರ್ಷದಂ ಭವೇತ್ ॥ ೨೬ ॥

ಯಾದೃಗ್ಭವತಿ ವೈ ರಾಜಾ ತಾದೃಶ್ಯೋ ನಿಯತಾಃ ಪ್ರಜಾಃ ।
ಇತಿ ನಾನಾವಿಧಾ ವಾಚಃ ಪ್ರವದಂತಿ ಪುರೌಕಸಃ ॥ ೨೭ ॥

೨೪–೨೫. ಆದರೂ ಕೂಡ ಆ ಜನರು ಒಂದು ನಿಂದ್ಯವಾದ ವಿಷಯವನ್ನು ಹೇಳುತ್ತಾರೆ. ಅದನ್ನು ನಿನಗೆ ಹೇಳುತ್ತೇನೆ ಕೇಳು. ರಾಮನು ದಶಗ್ರೀವನನ್ನು ಕೊಂದು ಸೀತೆಯು ಪರರ ಮನೆಯಲ್ಲಿದ್ದರೂ ದ್ವೇಷಿಸದೆ ಅದನ್ನು ಹಿಂದಿಕ್ಕಿ ಆಕೆಯನ್ನು ತನ್ನ ಮನೆಗೆ ಕರೆತಂದು ಸೇರಿಸಿಕೊಂಡನು. ಅವನ ಮನಸ್ಸು ತಾನೇ ಹೇಗಿರಬೇಕು ? ಸೀತೆಯಲ್ಲಿ ಅವನು ಸುಖಪಡುವುದು ತಾನೆ ಹೇಗಿರಬೇಕು ?

೨೬. ದಂಡಕಾರಣ್ಯದಲ್ಲಿ ಯಾರೂ ಇಲ್ಲದಿದ್ದಾಗ ರಾವಣನು ಆಕೆಯನ್ನು ಕದ್ದುಕೊಂಡು ಹೋಗಿದ್ದನಲ್ಲ ! ಹೆಂಗಸಾದವಳು ಅಕಸ್ಮಾತ್ತಾಗಿ ಇತರರಲ್ಲಿ ರಮಿಸುವ ಕೆಟ್ಟಕೆಲಸವನ್ನು ಮಾಡಿದರೆ ಅದೇನೇ ಗಂಡನಾದವನಿಗೆ ದ್ವೇಷವನ್ನು ಹುಟ್ಟಿಸುತ್ತದೆ.

೨೭. ಲೋಕದಲ್ಲಿ ಪ್ರಜೆಗಳನ್ನು ಆಳುವ ರಾಜನು ಯಾವ ರೀತಿಯವನಾಗಿರುತ್ತಾನೆಯೋ ಅವನ ಪ್ರಜೆಗಳೂ ಹಾಗೆಯೇ ಆಗುತ್ತಾರೆ. ಇದು ಖಂಡಿತವು. ಈ ರೀತಿಯಾಗಿ ಬಗೆ ಬಗೆಯಾದ ಮಾತುಗಳನ್ನು ಪಟ್ಟಣಿಗರು ಹೇಳುತ್ತಿರುತ್ತಾರೆ.

ಅನ್ಯತ್ಕಿಂಚಿತ್ಪ್ರವಕ್ಷ್ಯಾಮಿ ಸಾಂಪ್ರತಂ ರಜಕೋದಿತಂ ।
ದುರ್ಮಾರ್ಗಗಾಂ ಸ್ವರಜಕೀಂ ಭಾರ್ಯಾಂ ಕ್ರೋಧವಶೇನ ಸಃ ॥ ೨೮ ॥

ರಜಕಃ ಪ್ರಾಹ ಭೋ ರಂಡೇ ಸೋಽಹಂ ರಾಮೋ ನ ಮೈಥಿಲೀಂ ।
ರಾವಣಸ್ಯ ಗೃಹೇ ಸ್ಪಷ್ಟಂ ಸ್ಥಿತಾಮಂಗೀಚಕಾರ ಯಃ ॥ ೨೯ ॥

ಯಥೇಚ್ಛಂ ಗಚ್ಛ ರಂಡೇ ತ್ವಂ ನಾಹಂ ರಾಮವದಾಚರೇ ।
ಗಚ್ಛತಾ ಚ ಮಯಾ ಮಾರ್ಗೇ ರಜಕೇನ ಸಮೀರಿತಂ ॥ ೩೦ ॥

ಇತಿ ರಾಮ ಶ್ರುತಂ ಪೂರ್ವಂ ತ್ವಯಾ ಪೃಷ್ಟಂ ನಿವೇದಿತಂ ।
ಯತ್ಪಶ್ಯಸಿ ಹಿತಂ ಚಾತ್ರ ತತ್ಕುರುಷ್ವ ರಘೂತ್ತಮ ॥ ೩೧ ॥

ಶ್ರುತ್ವಾ ತದ್ವಚನಂ ರಾಮಃ ಸ್ವಜನಾನ್ಪರ್ಯಪೃಚ್ಛತ ।
ತೇಽಪಿ ನತ್ವಾಬ್ರುವನ್ ರಾಮಮೇವಮೇತನ್ನ ಸಂಶಯಃ ॥ ೩೨ ॥

೨೮-೩೦. ಇದಲ್ಲದೆ ಒಬ್ಬ ಅಗಸನು ಹೇಳಿದ ಇನ್ನೊಂದು ಮಾತನ್ನು ಈಗ ಹೇಳುತ್ತೇನೆ. ಅವನು ದುರ್ಮಾರ್ಗದಲ್ಲಿ ಹೋಗುತ್ತಿರುವ ತನ್ನ ಹೆಂಡತಿಯನ್ನು ನೋಡಿ ಕೋಪಕ್ಕೊಳಗಾಗಿ “ ಎಲೈ ರಂಡೆಯೇ ! ರಾವಣನ ಮನೆಯಲ್ಲಿ ಸ್ಪಷ್ಟವಾಗಿಯೇ ಇದ್ದುಬಿಟ್ಟ ಸೀತೆಯನ್ನು ಪರಿಗ್ರಹಿಸಿದ ರಾಮನು ನಾನಲ್ಲ. ಎಲೈ ರಂಡೆಯೇ ! ನೀನು ನಿನಗೆ ಇಷ್ಟಬಂದಂತೆ ಹೋಗು. ನಾನು ರಾಮನಂತೆ ನಿನ್ನನ್ನು ಕರೆದುಕೊಂಡು ಸಂಸಾರ ಮಾಡಲು ಮನೆಯನ್ನು ಸೇರಿಸಿಕೊಳ್ಳುವುದಿಲ್ಲ. ” ಎಂಬದಾಗಿ ಆ ರಜಕನು ಹೇಳಿದುದನ್ನು ದಾರಿಯಲ್ಲಿ ಹೋಗುತ್ತಿರುವಾಗ ಕೇಳಿದೆನು.

೩೧. ಎಲೈ ರಾಮನೇ ! ಇದನ್ನು ನಾನು ಹಿಂದೆ ಕೇಳಿದ್ದೆನು. ಅದನ್ನೇ ನಿನಗೆ ನಾನು ಈಗ ನೀನು ಕೇಳಿದುದರಿಂದ ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ಯಾವುದು ನಿನಗೆ ಸರಿಯಾಗಿ ಕಾಣುವುದೋ ಹಾಗೆ ಮಾಡು.

೩೨. ಇದನ್ನು ಕೇಳಿ ರಾಮನು ತನ್ನ ಕಡೆಯವರನ್ನು ಕುರಿತು ಇದರ ಅಭಿಪ್ರಾಯವೇನೆಂದು ಕೇಳಲು ಅವರೆಲ್ಲರೂ ಅವನು ಹೇಳಿದುದು ಸರಿಯೇ ! ಅದಕ್ಕೆ ಸಂಶಯವೇನು ? ಏನೂ ಇಲ್ಲ ಎಂದರು.

ತತೋ ವಿಸೃಜ್ಯ ಸಚಿವಾನ್ವಿಜಯಂ ಸುಹೃದಸ್ತಥಾ ।
ಆಹೂಯ ಲಕ್ಷ್ಮಣಂ ರಾಮೋ ವಚನಂ ಚೇದಮಬ್ರವೀತ್ ॥ ೩೩ ॥

ಲೋಕಾಪವಾದಸ್ತು ಮಹಾನ್ ಸೀತಾಮಾಶ್ರಿತ್ಯ ಮೇಽಭವತ್ ।
ಸೀತಾಂ ಪ್ರಾತಸ್ಸಮಾನೀಯ ವಾಲ್ಮೀಕೇರಾಶ್ರಮಾಂತಿಕೇ ॥ ೩೪ ॥

ತ್ಯಕ್ತ್ವಾ ಶೀಘ್ರಂ ರಥೇನ ತ್ವಂ ಪುನರಾಯಾಹಿ ಲಕ್ಷ್ಮಣ ।
ವಕ್ಷ್ಯಸೇ ಯದಿ ವಾ ಕಿಂಚಿದತ್ರ ಮಾಂ ಹತವಾನಸಿ ॥ ೩೫ ॥

ಛಿತ್ವಾ ಸೀತಾಭುಜಂ ಲೋಕಪ್ರತ್ಯಯಾರ್ಥಂ ಸಮಾನಯ ।
ಇತ್ಯುಕ್ತ್ವಾ ಲಕ್ಷ್ಮಣಂ ರಾಮೋ ಕೈಕೇಯೀಂ ದ್ರಷ್ಟುಮಾಯಯೌ ॥೩೬॥

ಏತಸ್ಮಿನ್ನಂತರೇ ಸೀತಾಂ ಕೈಕೇಯೀ ರಹಸಿ ಸ್ಥಿತಾ ।
ಪಪ್ರಚ್ಛ ಕೌತುಕಾತ್ಸೀತೇ ಭಿತ್ತೌ ಲೇಖ್ಯ ದಶಾನನಂ ॥ ೩೭ ॥

---

೩೩. ಅನಂತರ ರಾಮನು ಮಂತ್ರಿಗಳನ್ನೂ, ವಿಜಯನನ್ನೂ, ಸ್ನೇಹಿತರನ್ನೂ ಕಳುಹಿಸಿ ಬಿಟ್ಟನು. ಲಕ್ಷ್ಮಣನನ್ನು ಕರೆದು ಇಂತೆಂದನು.

೩೪–೩೫. ಎಲೈ ಲಕ್ಷ್ಮಣನೇ ! ಸೀತೆಯನ್ನು ಆಶ್ರಯಿಸಿಕೊಂಡ ಬಹು ದೊಡ್ಡದಾದ ಅಪವಾದವು ನನಗೆ ಬಂದು ಬಿಟ್ಟಿತು. ಆದ್ದರಿಂದ ಸೀತೆಯನ್ನು ಬೆಳಗ್ಗೆ ರಥದಲ್ಲಿ ಕರೆದುಕೊಂಡು ಹೋಗಿ ವಾಲ್ಮೀಕಿಯ ಆಶ್ರಮದ ಬಳಿಯಲ್ಲಿ ಬಿಟ್ಟುಬಿಡು. ಅನಂತರ ಮತ್ತೆ ಹೊರಟು ಬಂದುಬಿಡು. ನೀನು ಇದಕ್ಕೆ ಪ್ರತಿಯನ್ನು ಹೇಳಿದರೆ ನನ್ನನ್ನು ಕೊಂದಂತೆ ತಿಳಿ.

೩೬. ಅಲ್ಲದೆ ಸೀತೆಯ ಭುಜವನ್ನು ಕತ್ತರಿಸಿತಂದು ತೋರಿಸಿ ಜನಗಳಿಗೆ ನಂಬುಗೆ ಹುಟ್ಟುವಂತೆ ಮಾಡು. ಆದ್ದರಿಂದ ಅದನ್ನು ತೆಗೆದುಕೊಂಡು ಬಾ. ಎಂದು ಲಕ್ಷ್ಮಣನಿಗೆ ಹೇಳಿ ಕೈಕೇಯಿಯನ್ನು ನೋಡಲು ಅಲ್ಲಿಗೆ ಹೋದನು.

೩೭–೩೮. ಇಷ್ಟರೊಳಗೆ ಕೈಕೇಯಿಯು ಸೀತೆಯನ್ನು ಕುರಿತು ರಹಸ್ಯದಲ್ಲಿ ಕೌತುಕದಿಂದ ಎಲೈ ಸೀತೆಯೇ ! ದಶಾನನನಾದ ರಾವಣನನ್ನು ಈ ಗೋಡೆಯ

ಮಾಮತ್ರ ದರ್ಶಯಸ್ವಾದ್ಯ ತಾಂ ಪ್ರಾಹ ಜಾನಕೀ ತದಾ ।
ಮಯಾವಲೋಕಿತೋ ನೈವ ಕದಾಪಿ ಸ ದಶಾನನಃ ॥ ೩೮ ॥

ಯದಾ ಹರ್ತುಂ ಪಂಚವಟ್ಯಾಂ ಮಾಂ ಪ್ರಾಪ್ತೋ ಗೌತಮಿತಟೇ ।
ತದಾ ದೃಷ್ಟಸ್ತದಂಗುಷ್ಠೋ ಮಯಾ ದಕ್ಷಿಣಪಾದಜಃ ॥ ೩೯ ॥

ತತ್ಸೀತಾವಚನಂ ಶ್ರುತ್ವಾ ಕೈಕೇಯೀ ಪ್ರಾಹ ತಾಂ ಪುನಃ ।
ಯಥಾ ದೃಷ್ಟಸ್ತ್ವಯಾಂಗುಷ್ಠಸ್ತಥಾ ಭಿತ್ತೌ ಲಿಖಸ್ವ ಹಿ ॥ ೪೦ ॥

ತಥೇತಿ ಜಾನಕೀ ಲೇಖ್ಯ ತದಂಗುಷ್ಠಂ ಭಯಾನಕಂ ।
ಕೈಕೇಯ್ಯೈ ದರ್ಶಯಾಮಾಸ ತಾಮಾಮಂತ್ರ್ಯ ಗೃಹಂ ಯಯೌ ॥ ೪೧ ॥

ಮೇಲೆ ಬರೆದು ನನಗೆ ತೋರಿಸು, ಎಂದಳು. ಅದಕ್ಕೆ ಜಾನಕಿಯು ಎಲೈ ಅತ್ತೆಯೇ ! ನಾನು ದಶಾನನನನ್ನು ಯಾವಾಗಲೂ ನೋಡಿಯೇ ಇಲ್ಲ.

೩೯. ಅವನು ನನ್ನನ್ನು ಕದ್ದುಕೊಂಡು ಹೋಗಲು ಗೌತಮೀನದಿಯ ದಡಕ್ಕೆ ಬಂದಿದ್ದಾಗ ನಾನು ಅವನ ಬಲಗಡೆಯ ಕಾಲಿನ ಹೆಬ್ಬೆರಳನ್ನು ಮಾತ್ರ ನೋಡಿದ್ದೆನು ಎಂದಳು.

೪೦. ಸೀತೆಯು ಇಂತು ಹೇಳಿದುದನ್ನು ಕೇಳಿ ಕೈಕೇಯಿಯು ನೀನು ಅವನ ಅಂಗುಷ್ಠವನ್ನು ಹೇಗೆ ನೋಡಿದೆಯೋ ಅಂತೆಯೇ ಈ ಗೋಡೆಯಲ್ಲಿ ಚಿತ್ರಿಸು, ಎಂದಳು.

೪೧. ಜಾನಕಿಯು ಹಾಗೆಯೇ ಆಗಲೆಂದು ಬಹುಭಯಂಕರವಾದ ಅವನ ಹೆಬ್ಬೆಟ್ಟನ್ನು ಬರೆದು ಕೈಕೇಯಿಗೆ ತೋರಿಸಿದಳು. ಅನಂತರ ಅವಳ ಅಪ್ಪಣೆಯನ್ನು ಪಡೆದು ತನ್ನ ಮನೆಗೆ ಹೊರಟು ಹೋದಳು.

ಅಂಗುಷ್ಠೋಪರಿ ಕೈಕೇಯ್ಯಾ ಯಥಾಯೋಗ್ಯೋ ದಶಾನನಃ ।
ಲಿಖಿತಸ್ಸ ಸ್ವಹಸ್ತೇನ ರಾಮಂ ದ್ರಷ್ಟುಂ ಕುಬುದ್ಧಿತಃ ॥ ೪೨ ॥

ತಾವದ್ರಾಮಂ ಸಮಾಯಾತಂ ದೃಷ್ಟ್ವಾ ಸಾ ಸಂಭ್ರಮಾನ್ವಿತಾ ।
ಭಿತ್ತ್ಯಂತಿಕಂ ರಾಘವಾಯ ದದಾವಾಸನಮುತ್ತಮಂ ॥ ೪೩ ॥

ರಾಮೋಽಪಿ ನತ್ವಾ ಕೈಕೇಯೀಮಾಸನೇ ಸಂಸ್ಥಿತೋಽಭವತ್ ।
ದದರ್ಶ ಭಿತ್ತೌ ಲಿಖಿತಂ ಚಿತ್ರಿತಂ ತಂ ದಶಾನನಂ ॥ ೪೪ ॥

ರಾಮಃ ಪಪ್ರಚ್ಛ ಕೇನಾತ್ರ ಲಿಖಿತೋಽಯಂ ದಶಾನನಃ ।
ಕೈಕೇಯೀ ಕಥಯಾಮಾಸ ಸೀತಯಾ ಲಿಖಿತಸ್ತ್ವಿತಿ ॥ ೪೫ ॥

---

೪೨. ಅನಂತರ ಆ ಕೈಕೇಯಿಯು ಮನಸ್ಸಿನಲ್ಲಿ ಕೆಟ್ಟ ಅಭಿಪ್ರಾಯವನ್ನು ಹೊಂದಿದವಳಾಗಿ ಆ ಹೆಬ್ಬೆಟ್ಟನ್ನೇ ಆಶ್ರಯಿಸಿಕೊಂಡು ಊಹೆಮಾಡುತ್ತ ಅದಕ್ಕೆ ಯೋಗ್ಯವಾಗಿರುವಂತೆ ರಾವಣನ ಆಕಾರವನ್ನು ಚಿತ್ರಿಸಿದಳು.

೪೩. ಅಷ್ಟರೊಳಗೆ ರಾಮನು ಅಲ್ಲಿಗೆ ಬರಲು ಕೈಕೇಯಿಯು ಅವನನ್ನು ನೋಡಿ ಅವಸರಪಟ್ಟುಕೊಂಡು ರಾವಣನನ್ನು ಬರೆದಿದ್ದ ಆ ಗೋಡೆಯ ಹತ್ತಿರದಲ್ಲಿಯೇ ಆ ರಾಮನಿಗೆ ಆಸನವನ್ನು ಕೊಟ್ಟಳು.

೪೪–೪೫. ರಾಮನು ಕೈಕೇಯಿಗೆ ನಮಸ್ಕರಿಸಿ ಆ ಆಸನದಲ್ಲಿ ಕುಳಿತುಕೊಂಡನು. ಅನಂತರ ಆ ಗೋಡೆಯಲ್ಲಿ ಬರೆದಿದ್ದ ದಶಾನನನ ಚಿತ್ರವನ್ನು ನೋಡಿದನು. ಆಗ ರಾಮನು ಈ ರಾವಣನ ಚಿತ್ರವನ್ನು ಇಲ್ಲಿ ಯಾರು ಬರೆದರು ? ಎಂದನು. ಅದಕ್ಕೆ ಕೈಕೇಯಿಯು ಸೀತೆಯು ಬರೆದಳು ಎಂದು ಹೇಳಿದಳು.

ಯತ್ರ ಯತ್ರ ಮನೋಲಗ್ನಂ ಸ್ಮರ್ಯತೇ ಹೃದಿ ತತ್ಸದಾ ।
ಸ್ತ್ರಿಯಾಶ್ಚರಿತ್ರಂ ಕೋ ವೇತ್ತಿ ಶಿವಾದ್ಯಾಃ ಮೋಹಿತಾಃ ಸ್ತ್ರಿಯಾ ॥ ೪೬ ॥

ಕೈಕೇಯೀವಚನಂ ಚೇತ್ಥಂ ಶ್ರುತ್ವಾ ರಾಮೋ ಮಹಾಮನಾಃ ।
ಸೀತಾಶ್ರಯಂ ಸಭಾವೃತ್ತಂ ಕೈಕೇಯೀಮಾಹ ವಿಸ್ತರಾತ್ ॥ ೪೭ ॥

ಲಕ್ಷ್ಮಣೇನ ತ್ಯಜಾಮ್ಯಂಬ ಶ್ವಸ್ಸೀತಾಂ ಜಾಹ್ನವೀತಟೇ ।
ಸೀತಾಭುಜಂ ವನೇ ಛಿತ್ವಾ ಸಮಾನೀಯಾತ್ರ ಮದ್ಗಿರಾ ॥ ೪೮ ॥

ಸೌಮಿತ್ರಿಸ್ತ್ವಾಂ ತಥಾ ಪೌರಾನ್ ದರ್ಶಯಿಷ್ಯತಿ ನಿಶ್ಚಯಾತ್ ।
ಸೀತಯಾ ಲಿಖಿತೋ ಯಸ್ಮಾತ್ಸ್ವಭುಜೇನ ದಶಾನನಃ ॥ ೪೯ ॥

---

೪೬. ಮತ್ತು ಹೆಂಗಸಾದವಳಿಗೆ ಮನಸ್ಸು ಎಲ್ಲೆಲ್ಲಿ ನಟ್ಟಿರುವುದೋ ಅವುಗಳನ್ನು ಮನಸ್ಸಿನಲ್ಲಿ ಆಗಾಗ್ಗೆ ಜ್ಞಾಪಿಸಿಕೊಳ್ಳುತ್ತಿರುತ್ತಾಳೆ. ಹೆಂಗಸರ ಚರಿತ್ರೆಯನ್ನು ಬಲ್ಲವರಾರು? ಶಿವನೇ ಆದಿಯಾದ ದೇವತೆಗಳೂ ಕೂಡ ಹೆಂಗಸರ ಮೋಹಕ್ಕೆ ಬಿದ್ದು ಅವರ ವಿಷಯವನ್ನೇ ತಿಳಿಯದವರಾಗಿದ್ದಾರೆ. ಎಂದಳು.

೪೭. ಬುದ್ಧಿವಂತನಾದ ರಾಮನು ಕೈಕೇಯಿಯು ಹೇಳಿದ ಮಾತನ್ನು ಕೇಳಿದನು. ಸೀತೆಯ ವಿಷಯದಲ್ಲಿ ಸಭೆಯಲ್ಲಿ ನಡೆದ ವಿಚಾರವನ್ನು ಕೈಕೇಯಿಗೆ ವಿಸ್ತಾರವಾಗಿ ಹೇಳಿದನು.

೪೮. ಆದ್ದರಿಂದ ಎಲೈ ತಾಯಿಯೇ! ನಾಳೆಯದಿನವೇ ಸೀತೆಯನ್ನು ಲಕ್ಷ್ಮಣನೊಡನೆ ಕಳುಹಿಸಿ ಗಂಗೆಯ ದಡದಲ್ಲಿ ಬಿಡಿಸುತ್ತೇನೆ. ಆ ಲಕ್ಷ್ಮಣನಿಗೆ ಎಲೈ ಲಕ್ಷ್ಮಣನೇ! ಸೀತೆಯ ಭುಜವನ್ನು ಕತ್ತರಿಸಿ ತರಬೇಕೆಂದು ಹೇಳಿರುವೆನು.

೪೯. ಲಕ್ಷ್ಮಣನು ಹಾಗೆಯೇ! ಆಕೆಯನ್ನು ಆ ಕಾಡಿನಲ್ಲಿ ಬಿಟ್ಟು ಬಿಟ್ಟು ಆಕೆಯ ಭುಜವನ್ನು ಕತ್ತರಿಸಿತಂದು ನಿನಗೂ, ಪಟ್ಟಣಿಗರಿಗೂ ತೋರಿಸುವನು. ಸೀತೆಯು ತನ್ನ ಕೈಯ್ಯಿಂದಲೇ ಈ ದಶಾನನನ ಚಿತ್ರವನ್ನು ಬರೆದಿರುವುದಕ್ಕೆ ಅದೇ ಸರಿಯಾದ ಶಿಕ್ಷೆಯು.

ಸ್ತ್ರೀಹತ್ಯಾಭಯಮಾಲಕ್ಷ್ಯ ತದ್ವಧೇ ಲಕ್ಷ್ಮಣೋ ಮಯಾ ।
ನ ಚೋದಿತಶ್ಚ ತಾಂ ಹಿಂಸ್ರಾ ಭಕ್ಷಯಿಷ್ಯಂತಿ ವೈ ಕ್ಷಣಾತ್ ॥ ೫೦ ॥

ಇತಿ ರಾಮವಚಶ್ಶ್ರುತ್ವಾ ಕೈಕೇಯೀ ಮುದಿತಾಽಭವತ್ ।
ಸೀತಾಯಾ ವಿರಹಾದ್ರಾಮೋ ನೇದಂ ರಾಜ್ಯಂ ಪ್ರಶಾಸ್ಯತಿ ॥ ೫೧ ॥

ಸೇವಾರ್ಥಂ ರಾಮಚಂದ್ರಸ್ಯ ಲಕ್ಷ್ಮಣೋಪಿ ನ ಶಾಸ್ಯತಿ ।
ತದಾ ಶ್ರೀರಾಮವಾಕ್ಯೇನ ಭರತೋ ಮೇ ಪ್ರಶಾಸ್ಯತಿ ॥ ೫೨ ॥

ಇತಿ ಸಂಚಿತ್ಯ ಹೃದಯೇ ಕೈಕೇಯೀ ಮುದಿತಾಽಭವತ್ ।
ರಾಮೋಪಿ ನತ್ವಾ ಕೈಕೇಯೀಂ ಸುಮಿತ್ರಾಂ ಚ ಸ್ವಮಾತರಂ ॥ ೫೩ ॥

---

೫೦. ಸೀತೆಯನ್ನು ಕೊಲ್ಲಿಸಿದರೆ ಸ್ತ್ರೀಹತ್ಯೆಯ ಪಾಪವು ಬರುವುದೆಂದು ಯೋಚಿಸಿ ಆಕೆಯನ್ನು ಕೊಲ್ಲುವಂತೆ ಲಕ್ಷ್ಮಣನಿಗೆ ನಾನು ಆಜ್ಞಾಪಿಸಲಿಲ್ಲ. ಆದರೆ ಆಕೆಯನ್ನು ಕಾಡಿನಲ್ಲಿ ಬಿಟ್ಟೊಡನೆಯೇ ಕ್ರೂರಮೃಗಗಳು ಆಕೆಯನ್ನು ಖಂಡಿತವಾಗಿಯೂ ತಿಂದುಬಿಡುವುವು. ಎಂದನು.

೫೧-೫೨. ರಾಮನು ಹೀಗೆ ಹೇಳಿದುದನ್ನು ಕೇಳಿ ಕೈಕೇಯಿಗೆ ಬಹುವಾಗಿ ಸಂತೋಷವಾಯಿತು. ಏತಕ್ಕೆಂದರೆ ಸೀತೆಯ ವಿರಹದಿಂದ ರಾಮನು ರಾಜ್ಯವನ್ನು ಆಳಲು ಮನಸ್ಸು ಮಾಡುವುದಿಲ್ಲ. ರಾಮನ ಸೇವೆಯಲ್ಲಿ ನಿರತನಾದ ಲಕ್ಷ್ಮಣನೂ ಕೂಡ ರಾಜ್ಯಭಾರದಲ್ಲಿ ಕೈಹಾಕುವುದಿಲ್ಲ. ಆಗ ಶ್ರೀರಾಮನು ರಾಜ್ಯಭಾರ ಮಾಡುವಂತೆ ಭರತನಿಗೆ ಹೇಳುವನು. ಎಂದು ಯೋಚಿಸಿದ್ದಳು.

೫೩. ಈ ರೀತಿಯಾಗಿ ಯೋಚಿಸಿಕೊಂಡು ಕೈಕೇಯಿಯು ಸಂತೋಷಗೊಂಡಳು. ಅನಂತರ ರಾಮನು ಕೈಕೇಯಿಗೆ ನಮಸ್ಕರಿಸಿ ತನ್ನ ತಾಯಿಯಾದ ಕೌಸಲ್ಯೆಯ ಮನೆಗೂ, ಸುಮಿತ್ರೆಯ ಮನೆಗೂ ಹೋದನು.

ಸಭಾವೃತ್ತಂ ಚ ಕೈಕೇಯೀಗೇಹೇ ಯಜ್ಜಾತಮಾದರಾತ್ ।
ಶ್ರಾವಯಾಮಾಸ ಸಕಲಂ ವೃತ್ತಂ ಸೀತಾಶ್ರಯಂ ಪ್ರಭುಃ ॥ ೫೪ ॥

ನತ್ವಾ ಸುಮಿತ್ರಾಂ ಕೌಶಲ್ಯಾಂ ರಾಮಸ್ಸೀತಾಗೃಹಂ ಯಯೌ ।
ಸೀತಯಾ ದತ್ತಪಾದ್ಯಾರ್ಘಾಸನಮಂಗೀಚಕಾರ ಸಃ ॥ ೫೫ ॥

ಸಭಾವೃತ್ತಂ ಚ ಕೈಕೇಯೀಗೇಹೇ ಯಜ್ಜಾತಮಾದರಾತ್ ।
ಶ್ರಾವಯಾಮಾಸ ತತ್ಕೃತ್ಸ್ನಂ ವೃತ್ತಂ ತಾಂ ಜಾನಕೀಂ ಮುದಾ॥ ೫೬ ॥

ತತ್ ಶ್ರುತ್ವಾ ಜಾನಕೀ ಪ್ರಾಹ ಕೈಕೇಯ್ಯಾ ವಚನಾನ್ಮಯಾ ।
ಅಂಗುಷ್ಠ ಏವ ಲಿಖಿತಸ್ತಯೋರ್ಧ್ವಂ ಲಿಖಿತೋ ಧಿಯಾ ॥ ೫೭ ॥

---

೫೪. ರಾಮನು ಅಲ್ಲಿ ಅವರಿಗೆ ಸಭೆಯಲ್ಲಿ ನಡೆದ ವಿಷಯವನ್ನೂ ಕೈಕೇಯಿಯ ಮನೆಯಲ್ಲಿ ನಡೆದ ವಿಷಯವನ್ನೂ, ಇನ್ನೂ ಸೀತೆಯ ವಿಷಯವಾದ ವಿಷಯಗಳನ್ನೂ ತಿಳಿಸಿದನು.

೫೫. ಆಮೇಲೆ ರಾಮನು ಆ ಕೌಸಲ್ಯೆ ಸುಮಿತ್ರೆಯರಿಬ್ಬರಿಗೂ ನಮಸ್ಕರಿಸಿ ಸೀತೆಯ ಮನೆಗೆ ಹೋದನು. ಸೀತೆಯು ಆ ರಾಮನಿಗೆ ಅರ್ಘ್ಯಪಾದ್ಯಗಳನ್ನು ಕೊಟ್ಟು ಆಸನವನ್ನು ಕೊಡಲು ಅದೆಲ್ಲವನ್ನೂ ಅವನು ಅಂಗೀಕರಿಸಿದನು.

೫೬. ರಾಮನು ಸಭೆಯಲ್ಲಿ ನಡೆದ ವಿಷಯಗಳನ್ನೂ, ಕೈಕೇಯಿಯ ಮನೆಯಲ್ಲಿ ನಡೆದ ವಿಷಯಗಳನ್ನೂ ವಿಸ್ತಾರವಾಗಿ ಸೀತೆಗೆ ತಿಳಿಸಿದನು.

೫೭. ಅದನ್ನು ಕೇಳಿ ಸೀತೆಯು ರಾಮನನ್ನು ಕುರಿತು ಎಲೈ ರಾಮನೇ ! ನಾನು ಕೈಕೇಯಿಯ ಮಾತಿನಂತೆ ಆ ರಾವಣನ ಅಂಗುಷ್ಠವನ್ನು ಮಾತ್ರ ಬರೆದೆನು. ಅದರಮೇಲಿನ ಚಿತ್ರವನ್ನೆಲ್ಲಾ ಬುದ್ಧಿವಂತಿಕೆಯನ್ನು ಉಪಯೋಗಿಸಿ ಆ ಕೈಕೇಯಿಯೇ ಬರೆದಿರುವಳು.

ಅಂಗುಷ್ಠಸ್ಯಾನುರೂಪೇಣ ದಶಾಸ್ಯೋ ದುಷ್ಟಬುದ್ಧಿತಃ ।
ತತ್ಸೀತಾವಚನಂ ಶ್ರುತ್ವಾ ಜಾನಕೀಮಾಹ ರಾಘವಃ ॥ ೫೮ ॥

ಕೌಟಿಲ್ಯಬುದ್ಧಿಂ ಕೈಕೇಯ್ಯಾಸ್ಸಮಗ್ರಾಂ ವೇದ್ಮ್ಯಹಂ ಪ್ರಿಯೇ ।
ಇತ್ಯುಕ್ತ್ವಾ ರಾಘವಸ್ಸೀತಾಮಾಲಿಂಗ್ಯಾಸ್ಯಂ ಚುಚುಂಬ ಸಃ ॥ ೫೯ ॥

ಸೀತಯಾ ಹೇಮಪರ್ಯಂಕೇ ಭುಕ್ತ್ವಾ ಭೋಗಾನ್ ಸುಪುಷ್ಕಲಾನ್ ।
ವಿನೋದಾರ್ಥಂ ರಘುಪತಿಃ ಪ್ರಾಹ ರಾತ್ರೌ ವಿದೇಹಜಾಂ ॥ ೬೦ ॥

ಸ್ತ್ರೀಣಾಂ ಸೀತೇ ಸಗರ್ಭಾಣಾಂ ವಾಂಛಿತಂ ವಾಂಛತೇ ಮನಃ ।
ಕಾ ತೇ ವಾಂಛಾ ವದಸ್ವ ತ್ವಂ ತಾಂ ತೇ ದಾಸ್ಯಾಮಿ ನಿಶ್ಚಿತಂ ॥ ೬೧ ॥

---

೫೮. ನಾನು ಅಂಗುಷ್ಠವನ್ನು ಬರೆದುದರಿಂದ ಕೈಕೇಯಿಯು ತನ್ನ ದುಷ್ಟಬುದ್ಧಿಯಿಂದ ಮೇಲಕ್ಕೆಲ್ಲವನ್ನೂ ಬರೆದಿರುವಳು ಎಂದು ಸೀತೆಯು ಹೇಳಿದುದನ್ನು ರಾಮನು ಕೇಳಿ ಇಂತೆಂದನು.

೫೯. ಎಲೈ ಪ್ರಿಯಳೇ! ಕೈಕೇಯಿಯ ದುಷ್ಟಬುದ್ಧಿಯನ್ನು ನಾನು ಪೂರ್ಣವಾಗಿ ತಿಳಿದಿದ್ದೇನೆ. ನೀನು ಯೋಚಿಸಬೇಡ, ಎಂದು ಹೇಳಿ ಆಕೆಯನ್ನು ಆಲಂಗಿಸಿಕೊಂಡು ಮುಖವನ್ನು ಚುಂಬಿಸಿದನು.

೬೦. ಅನಂತರ ರಾಮನು ಸೀತೆಯೊಡನೆ ಚಿನ್ನದ ಮಂಚದಮೇಲೆ ಬಹುವಾದ ಭೋಗಗಳನ್ನು ಅನುಭವಿಸಿ ವಿನೋದಕ್ಕೋಸ್ಕರ ಆಕೆಯನ್ನು ಕುರಿತು ಇಂತೆಂದನು.

೬೧. ಎಲೈ ಸೀತೆಯೇ! ಗರ್ಭಿಣಿಯರಾದ ಸ್ತ್ರೀಯರ ಮನಸ್ಸು ಅನೇಕ ಬಗೆಯಾದುವನ್ನು ಅಪೇಕ್ಷಿಸುತ್ತದಲ್ಲದೆ ಕೇಳಿದುದನ್ನೇ ಕೇಳುವುದೂ ಉಂಟು. ಆದ್ದರಿಂದ ಯಾವ ಕಾಲದಲ್ಲಿ ನಿನ್ನ ಮನಸ್ಸಿಗೆ ಯಾವುದು ಅಪೇಕ್ಷಿತವಾಗುತ್ತದೆಯೋ ಅದನ್ನು ಕೇಳು. ಅವನ್ನು ಖಂಡಿತವಾಗಿಯೂ ಕೊಡುತ್ತೇನೆ.

ಇತಿ ರಾಮವಚಶ್ಶ್ರುತ್ವಾ ಭಾವಿಕಾರ್ಯೇಣ ಯಂತ್ರಿತಾ |
ಸಾ ಪ್ರಾಹ ರಾಘವಂ ರಾಮಂ ಗಂಗಾತೀರಸ್ಥಿತಾಂಸ್ತರೂನ್ || ೬೨ ||

ಮುನೀನಾವಗಾಶ್ರಮಾಂಶ್ಚಾಪಿ ಋಷಿಪತ್ನೀಶ್ಚ ತದ್ವನಂ |
ವಾಂಛತೇ ಮೇ ಮನೋ ದ್ರಷ್ಟುಂ ಶೀಘ್ರಂ ಪ್ರೇಷಯ ತತ್ರ ಮಾಂ||೬೩||

ಇತಿ ಸೀತಾ ವಚಶ್ಶ್ರುತ್ವಾ ತಥಾಸ್ತ್ವಿತಿ ರಘೂತ್ತಮಃ ।
ಪ್ರಾಹ ಸೀತೇ ಲಕ್ಷ್ಮಣಶ್ತ್ವಾಂ ನೇಷ್ಯತಿ ತ್ವಾಂ ಮಮಾಜ್ಞಯಾ || ೬೪ ||

ಪುನಃ ಪ್ರಾಹ ರಘುಶ್ರೇಷ್ಠಸ್ಸೀತೇ ತೇ ಕ್ರೀಡನಾದಿಭಿಃ |
ಜಪಧ್ಯಾನಾದಿಕಂ ಸರ್ವಂ ವಿಸ್ಮೃತಂ ಯನ್ಮಯಾ ಪುರಾ || ೬೫ ||

---

೬೨ ರಾಮನ ಈ ಮಾತನ್ನು ಕೇಳಿ ಸೀತೆಯು ಮುಂದಾಗಬೇಕಾದ ಕೆಲಸವನ್ನೂ ಯೋಚಿಸಿ ತಾನು ಗಂಗಾತೀರದಲ್ಲಿರುವ ಮರಗಳನ್ನು ನೋಡಬೇಕೆಂದಳು.

೬೩. ಅಲ್ಲದೆ ಅಲ್ಲಿರುವ ವನಗಳನ್ನೂ ಆ ಋಷಿಪತ್ನಿಯರನ್ನೂ ನೋಡಬೇಕೆಂದು ಅಪೇಕ್ಷೆಯಾಗುತ್ತದೆ. ಆದ್ದರಿಂದ ಬೇಗನೇ ಅಲ್ಲಿಗೆ ಕಳುಹಿಸಿಕೊಡು. ಎಂದಳು.

೬೪. ಸೀತೆಯು ಹೀಗೆ ಹೇಳಿದುದನ್ನು ಕೇಳಿ ಎಲೈ ಸೀತೆಯೇ ! ಲಕ್ಷ್ಮಣನು ನನ್ನ ಅಪ್ಪಣೆಯಂತೆ ನಾಳೆಯದಿನ ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಎಂದನು.

೬೫. ಆಮೇಲೆ ಮತ್ತೆ ಸೀತೆಯನ್ನು ಕುರಿತು ಎಲೈ ಸೀತೆಯೇ ! ನಿನ್ನೊಡನೆ ಕ್ರೀಡನವಾಡುತ್ತಿದ್ದುದರಿಂದ ನನ್ನ ಜಪಧ್ಯಾನಾದಿಗಳೆಲ್ಲವೂ ಮರೆತು ಹೋಗಿವೆ.

ತತ್ಕರೋಮ್ಯಧುನಾ ಸೀತೇ ಗತಾಯಾಂ ತ್ವಯಿ ಕಾನನಂ ।
ಇತ್ಯುಕ್ತ್ವಾ ಜಾನಕೀಂ ರಾಮೋ ಸುಖಂ ಸುಷ್ವಾಪ ಮಂಚಕೇ ॥ ೬೬ ॥

ಸೀತಾಪಿ ಚಿಂತಯಾಮಾಸ ಯತ್ರ ಮಾತಾ ಪಿತಾ ಮಮ ।
ಕಿಂ ಮಾಂ ನ್ಯೂನಂ ಹಿ ತತ್ರಾಸ್ತಿ ಕಿಂಚಿದ್ವಸ್ತ್ವಾದಿಕಂ ಸಹ ॥ ೬೭ ॥

ನಾಹಂ ನೇಷ್ಯಾಮಿ ಶ್ವಸ್ತೂಷ್ಣೀಂ ಸಖ್ಯಾ ದಾಸ್ಯಾ ಸಮನ್ವಿತಾ ।
ಲಕ್ಷ್ಮಣೇನ ರಥೇ ಸ್ಥಿತ್ವಾ ಗಚ್ಛಾಮಿ ಮುದಿತಾ ಸುಖಂ ॥ ೬೮ ॥

ಇತಿ ನಿಶ್ಚಿತ್ಯ ಸಾ ರಾತ್ರೌ ಸುಖಂ ಸುಷ್ವಾಪ ಮಂಚಕೇ ।
ಅಥ ಪ್ರಭಾತೇ ಸೋತ್ಥಾಯ ಸ್ನಾತ್ವಾ ಸ್ನಾತಂ ರಘೂತ್ತಮಂ ॥ ೬೯ ॥

---

೬೬. ನೀನು ಕಾಡಿಗೆ ಹೋದಮೇಲೆ ಅವೆಲ್ಲವನ್ನೂ ಮತ್ತೆ ವಿಸ್ತರಿಸಿಕೊಳ್ಳುತ್ತೇನೆ. ಹೀಗೆಂಬುದಾಗಿ ಆ ರಾಮನು ಸೀತೆಗೆ ಹೇಳಿ ಸುಖವಾಗಿ ಮಂಚದಮೇಲೆ ಮಲಗಿಕೊಂಡನು.

೬೭. ಅನಂತರ ಸೀತೆಯೂ ಕೂಡ ನಾನು ಹೋಗುವ ಜಾಗದಲ್ಲಿ ನನ್ನ ತಾಯಿತಂದೆಗಳಿರುವಾಗ ನನಗೆ ಯಾವುದು ತಾನೆ ಕಡಿಮೆಯಾಗಿರುವುದು! ಎಲ್ಲವೂ ಅಲ್ಲಿ ಸಿದ್ಧವಾಗಿಯೇ ಇರುವುವು. ಆದುದರಿಂದ ನಾನು ನನ್ನೊಡನೆ ಒಂದು ಪದಾರ್ಥವನ್ನೂ ತೆಗೆದುಕೊಂಡು ಹೋಗುವುದಿಲ್ಲ.

೬೮. ಅಲ್ಲದೆ ನಾಳೆಯದಿವಸ ಸಖಿಯರನ್ನಾಗಲಿ, ದಾಸಿಯರನ್ನಾಗಲಿ, ಜೊತೆಯಲ್ಲಿ ಕರೆದುಕೊಂಡು ಹೋಗುವುದಿಲ್ಲ. ಲಕ್ಷ್ಮಣನೊಡನೆ ಮಾತ್ರ ರಥದಲ್ಲಿ ಕುಳಿತು ಹೋಗುವೆನು.

೬೯. ಆಕೆಯು ಹೀಗೆಂಬುದಾಗಿ ನಿಶ್ಚಯಿಸಿಕೊಂಡು ಮಂಚದಮೇಲೆ ಸುಖವಾಗಿ ಮಲಗಿಕೊಂಡಳು. ಅನಂತರ ಬೆಳಗ್ಗೆ ಎದ್ದು ಸೀತೆಯೂ ರಾಮನೂ ಸ್ನಾನ ಮುಂತಾದುವುಗಳನ್ನು ಮಾಡಿದರು.

ಪಕ್ವಾನ್ನಾದೀನಿ ಸತ್ಪಾತ್ರೇ ಪರಿವೇಷಯದುತ್ತಮಂ ।
ಉಪಹಾರೇ ಕೃತೇ ಭರ್ತ್ರಾ ಸ್ವಯಂ ಕೃತ್ವೋಪಹಾರಕಂ ॥ ೭೦ ॥

ಪೃಷ್ಟ್ವೋರ್ಮಿಲಾದಿಕಾಃ ಸ್ತ್ರೀಶ್ಚ ತತಃ ಶ್ವಶ್ರೂಃ ಪ್ರಣಮ್ಯ ಚ ।
ಗಂಗಾತೀರಸ್ಥಿತಾನ್ ವೃಕ್ಷಾನ್ ಮುನೀನ್ ದ್ರಷ್ಟುಂ ಸಮುದ್ಯತಾ ॥ ೭೧ ॥

ತಾಃ ಪಪ್ರಚ್ಛ ಸಖೀಯುಕ್ತಾ ದಾಸ್ಯಾ ಸಸ್ಮಾರ ಲಕ್ಷ್ಮಣಂ ।
ತತೋಽಸೌ ಲಕ್ಷ್ಮಣೋ ಭ್ರಾತ್ರಾ ಚೋದಿತಸ್ತಾಂ ಯಯೌ ಜವಾತ್ ॥

ದಾಸ್ಯಾ ಸಖ್ಯಾ ತುಲಸ್ಯಾಥ ಸೀತಾಂ ಕೃತ್ವಾ ರಥಸ್ಥಿತಾಂ ।
ಯಯೌ ದಕ್ಷಿಣಮಾರ್ಗೇಣ ವಾಯುವೇಗಾತ್ಸ ಜಾಹ್ನವೀಂ ॥ ೭೩ ॥

---

೭೦. ಅನಂತರ ಸೀತೆಯು ರಾಮನಿಗೆ ಉತ್ತಮವಾದ ಪಕ್ವಾನ್ನಗಳನ್ನು ಬಡಿಸಿದಳು. ರಾಮನು ಊಟಮಾಡಿಯಾಗುತ್ತಲೂ ತಾನೂ ಕೂಡ ಊಟ ಮಾಡಿದಳು.

೭೧. ತನಗೆ ಭೋಜನವಾದಮೇಲೆ ಊರ್ಮಿಳೆಯೇ ಮೊದಲಾದ ಓರಗಿತ್ತಿಯರಿಗೆ ಹೇಳಿ ಅತ್ತೆಯರಿಗೆ ನಮಸ್ಕರಿಸಿ ಗಂಗಾತೀರಕ್ಕೆ ಹೋಗಿ ಅಲ್ಲಿರುವ ಮುನಿಗಳನ್ನೂ, ವೃಕ್ಷಗಳನ್ನೂ ನೋಡಲು ಸಿದ್ಧಳಾದಳು.

೭೨. ಅನಂತರ ಸಖಿಯರ ಜೊತೆಯಲ್ಲಿ ಹೋಗಿ ಅತ್ತೆಯರಿಗೆಲ್ಲಾ ಹೇಳಿದಳು. ದಾಸಿಯ ಕೈಯ್ಯಲ್ಲಿ ಲಕ್ಷ್ಮಣನಿಗೆ ಹೇಳಿ ಕಳುಹಿಸಿದಳು. ಅನಂತರ ಲಕ್ಷ್ಮಣನು ರಾಮನ ಅಪ್ಪಣೆಯಂತೆ ಬೇಗನೆ ಅಲ್ಲಿಗೆ ಬಂದನು.

೭೩. ದಾಸಿಯೂ ಸಖಿಯೂ ಆದ ತುಲಸಿಯೆಂಬ ಸಖಿಯೊಡನೆ ಸೀತೆಯನ್ನು ರಥದಲ್ಲಿ ಕೂರಿಸಿದನು. ದಕ್ಷಿಣದಕಡೆಯ ರಸ್ತೆಯಿಂದ ಜಾಹ್ನವಿಯ ಬಳಿಗೆ ರಥವನ್ನು ನಡೆಸಿದನು.

ಇಂದ್ರಾದ್ಯಾ ನಿರ್ಜರಾಶ್ಚಕ್ರುಃ ಸೀತಾಸನ್ಮಾರ್ಗಸತ್ಕ್ರಿಯಾಂ ।
ಉಲ್ಲಂಘ್ಯ ತಮಸಾಂ ಪುಣ್ಯಾಂ ಗೌತಮೀಂ ಜಾಹ್ನವೀಮಪಿ ॥ ೭೪ ॥

ಯಮುನಾಂ ತಾಂ ಮಹಾಪುಣ್ಯಾಂ ತಥಾ ಮಂದಾಕಿನೀಂ ನದೀಂ ।
ದ್ವಿತೀಯಾಂ ತಮಸಾಂ ಪುಣ್ಯಾಂ ಸಮುಲ್ಲಂಘ್ಯಾಥ ಲಕ್ಷ್ಮಣಃ ॥ ೭೫ ॥

ಚಿತ್ರಕೂಟೋಪತ್ಯಕಾಯಾಂ ವಾಲ್ಮೀಕೇರಾಶ್ರಮಾಂತಿಕೇ ।
ಪಿಪ್ಪಲಾಧೋ ಮೈಥಿಲೀಂ ತಾಂ ಸಖ್ಯಾ ದಾಸ್ಯಾ ವರಾಸನೇ ॥ ೭೬ ॥

ನಿವೇಶ್ಯ ನತ್ವಾ ಸ ಪ್ರಾಹ ಸಾಶ್ರುನೇತ್ರಸ್ಸಗದ್ಗದಃ ।
ಲೋಕಾಪವಾದಭೀತ್ಯಾ ತ್ವಾಂ ತ್ಯಕ್ತವಾನ್ ರಾಘವೋ ವನೇ ॥ ೭೭ ॥

೭೪–೭೫. ಸೀತೆಯು ಬರುವ ದಾರಿಯಲ್ಲಿ ಬೇಕಾದ ಸತ್ಕ್ರಿಯೆಗಳನ್ನು ಇಂದ್ರನೇ ಮುಂತಾದ ದೇವತೆಗಳು ಮಾಡಿದರು. ಮೊದಲು ತಮಸಾ ನದಿಯನ್ನೂ ಅನಂತರ ಗೌತಮೀ ನದಿಯನ್ನೂ, ಅನಂತರ ಜಾಹ್ನವೀ ನದಿಯನ್ನೂ, ಯಮುನಾ ನದಿಯನ್ನೂ ಮತ್ತೆ ಮಂದಾಕಿನೀ ನದಿಯನ್ನೂ ಅನಂತರ ಎರಡನೆಯ ತಮಸಾ ಎಂಬ ನದಿಯನ್ನೂ ದಾಟಿದರು.

೭೬. ಅಲ್ಲಿ ಚಿತ್ರಕೂಟ ಪರ್ವತವು ಸಿಕ್ಕಿತು. ಅದರ ತಪ್ಪಲಲ್ಲಿ ಆ ವಾಲ್ಮೀಕಿಯ ಆಶ್ರಮವಿದ್ದಿತು. ಅದರ ಸಮೀಪದಲ್ಲಿ ಒಂದು ಅರಳಿಯ ಮರವಿದ್ದಿತು. ಅದರ ಕೆಳಗೆ ಆ ಸಖಿಯನ್ನೂ, ದಾಸಿಯನ್ನೂ ಇಳಿಸಿದನು.

೭೭. ಅನಂತರ ಲಕ್ಷ್ಮಣನು ಆಕೆಗೆ ನಮಸ್ಕರಿಸಿ ಕಣ್ಣೀರನ್ನು ಸುರಿಸುತ್ತ ಗದ್ಗದ ಧ್ವನಿಯಿಂದ ಎಲೈ ತಾಯಿಯೇ ! ರಾಘವನು ನಿನ್ನನ್ನು ಲೋಕಾಪವಾದದ ಭೀತಿಯಿಂದ ಬಿಟ್ಟಿರುವನು.

ದೋಷೋ ನ ಕಶ್ಚಿನ್ಮೇ ಮಾತರ್ಗಚ್ಛಾಶ್ರಮುಪದಂ ಮುನೇಃ ।
ಇತ್ಯುಕ್ತ್ವಾ ತಾಂ ಪರಿಕ್ರಮ್ಯ ಸಖ್ಯಾ ದಾಸ್ಯಾಪಿ ವೀಜಿತಾಂ ॥ ೭೮ ॥

ಯಯೌ ರಥೇನ ಸೌಮಿತ್ರಿಃ ಪೂರ್ವಮಾರ್ಗೇಣ ಜಾಹ್ನವೀಂ ।
ಶಿಷ್ಯೈಃ ಶ್ರುತ್ವಾಥ ವಾಲ್ಮೀಕಿರ್ಜನಕೇನ ಸುಮೇಧಯಾ ॥ ೭೯ ॥

ಯಯೌ ಸ್ತ್ರೀಭಿರ್ದ್ವಿಜೈರ್ಯುಕ್ತಃ ಪೂಜಯಾಮಾಸ ಜಾನಕೀಂ ।
ಶಿಬಿಕಾಯಾಂ ಸನ್ನಿವೇಶ್ಯ ವೀಜಿತಾ ಚಾಮರಾದಿಭಿಃ ॥ ೮೦ ॥

ನಾನಾವಾದ್ಯನಿನಾದೈಶ್ಚ ವೇಶ್ಯಾನಾಂ ನರ್ತನೈರ್ವರೈಃ ।
ಸ್ತವನೈರ್ಮಾಗಧಾದೀನಾಂ ನಟಾದೀನಾಂ ಸುಗಾಯನೈಃ ॥ ೮೧ ॥

---

೭೮. ಅಮ್ಮ! ಈ ವಿಷಯದಲ್ಲಿ ನನ್ನದೇನೂ ದೋಷವಿಲ್ಲ. ಇಲ್ಲಿಂದ ಮುಂದೆ ನೀನು ಆ ಋಷಿಯ ಆಶ್ರಮಕ್ಕೆ ಹೋಗು. ಎಂದನು ಅನಂತರ ಸಖಿಯು ಆಕೆಯನ್ನು ಬೀಸುತ್ತಿರಲು ಲಕ್ಷ್ಮಣನು ನಮಸ್ಕರಿಸಿ ಹೊರಟ ದಾರಿಯಲ್ಲಿಯೇ ಹಿಂತಿರುಗಿ ಜಾಹ್ನವಿಗೆ ಬಂದನು.

೭೯-೮೦. ಸೀತೆಯು ಆಶ್ರಮದ ಬಳಿ ಇರುವುದನ್ನು ಶಿಷ್ಯರು ವಾಲ್ಮೀಕಿಗೆ ಹೇಳಲು ಅವನು ಜನಕನೊಡನೆಯೂ, ಸುಮೇಧೆಯೊಡನೆಯೂ ಅಲ್ಲಿಗೆ ಹೋದನು. ಮತ್ತು ಶಿಷ್ಯರನ್ನೂ, ಮುನಿಗಳನ್ನೂ ಕರೆದುಕೊಂಡು ಹೋಗಿ ಅಲ್ಲಿ ಅವಳನ್ನು ಗೌರವಿಸಿ ಪೂಜಿಸಿದನು.

೮೧. ಅನಂತರ ಆಕೆಯನ್ನು ಮೇನದಲ್ಲಿ ಕೂರಿಸಿಕೊಂಡನು. ದಾಸಿಯರು ಚಾಮರವನ್ನು ಬೀಸುತ್ತಿದ್ದರು. ವಾದ್ಯಗಾರರು ವಾದ್ಯವನ್ನು ಮಾಡುತ್ತಿದ್ದರು. ನರ್ತಕಿಯರು ಕುಣಿಯುತ್ತಿದ್ದರು. ಹೊಗಳು ಭಟರು ಹೊಗಳುತ್ತಿದ್ದರು. ನಟರು ಗಾಯನ ಮಾಡುತ್ತಿದ್ದರು.

ನಿನಾಯ ಜನಕಸ್ಸೀತಾಂ ವಾಲ್ಮೀಕೇರಾಶ್ರಮೇ ಮುದಾ ।
ವನಪುಷ್ಪೈರ್ಮುನಿಪತ್ನ್ಯೋ ವವರ್ಷುರ್ಜಾನಕೀಂ ಮುದಾ ॥ ೮೨ ॥

ಜಾನಕೀಶಿಬಿಕಾಗ್ರೇ ತೇ ದುದ್ರುವುರ್ವೇತ್ರಪಾಣಯಃ ।
ಏವಂ ವಿವೇಶ ಸಾ ಸೀತಾ ವಾಲ್ಮೀಕೇರಾಶ್ರಮಂ ಶನೈಃ ॥ ೮೩ ॥

ಚಕ್ರುರ್ನೀರಾಜನಂ ದೀಪೈರ್ಮುನಿಪತ್ನ್ಯಶ್ಚ ಜಾನಕೀಂ ।
ಜಾನಕೀ ಹೇಮಪರ್ಯಂಕೇ ಧೃತಾಧೋಂಕೋಪಬರ್ಹಣಾ ॥ ೮೪ ॥

ಸುಖಮಾಪಾಶ್ರಮೇ ತಸ್ಯ ವಾಲ್ಮೀಕೇಶ್ಚ ತಪಸ್ವಿನಃ ।
ಜಾನಕೀಂ ಪೂಜಯಾಮಾಸುರ್ಮುನಿಪತ್ನ್ಯಃ ಪೃಥಕ್ ಪೃಥಕ್ ॥ ೮೫ ॥

ದಿವ್ಯಾನ್ನೈರ್ವನಸಂಭೂತೈಃ ವನ್ಯಪುಷ್ಪೈರ್ನಿರಂತರಂ ।
ಜ್ಞಾತ್ವಾ ಪರಾತ್ಮನೋ ಲಕ್ಷ್ಮೀಂ ಮುನಿವಾಕ್ಯೇನ ಭಕ್ತಿತಃ ॥ ೮೬ ॥

---

೮೨. ಈ ರೀತಿಯಾಗಿ ವೈಭವದಿಂದ ಸೀತೆಯನ್ನು ಜನಕನೂ ಆ ವಾಲ್ಮೀಕಿಯೂ ಮೇನದಲ್ಲಿ ಆಶ್ರಮಕ್ಕೆ ಕರೆತಂದರು. ಅಲ್ಲಿನ ಋಷಿಪತ್ನಿಯರು ಜಾನಕಿಗೆ ಹೂಮಳೆಯನ್ನು ಕರೆದರು.

೮೩. ಜಾನಕಿಯ ಮೇನೆಯ ಎದುರಿನಲ್ಲಿ ಕಟ್ಟಿಗೆಯನ್ನು ಹಿಡಿದವರು ಓಡಿಹೋಗುತ್ತಿದ್ದರು. ಈ ರೀತಿಯಾಗಿ ಸೀತೆಯು ನಿಧಾನವಾಗಿ ವಾಲ್ಮೀಕಿಯ ಆಶ್ರಮಕ್ಕೆ ಹೋದಳು.

೮೪-೮೫. ಆ ಆಶ್ರಮದಲ್ಲಿ ಮುನಿಪತ್ನಿಯರು ಜಾನಕಿಗೆ ಆರತಿಯನ್ನು ಎತ್ತಿದರು. ಆ ಆಶ್ರಮಕ್ಕೆ ಸೀತೆಯು ಹೋಗಿ ಅಲ್ಲಿ ಒಂದು ಮಂಚದಮೇಲೆ ದಿಂಬುಗಳನ್ನು ಹಾಕಿ ಒರಗಿಕೊಂಡು ಕುಳಿತಿರುತ್ತ ಸುಖವಾಗಿದ್ದಳು. ಮುನಿ ಪತ್ನಿಯರೆಲ್ಲರೂ ಆ ಸೀತೆಯನ್ನೇ ಪ್ರತ್ಯೇಕ ಪ್ರತ್ಯೇಕವಾಗಿ ಪೂಜಿಸಿದರು.

೮೬. ಕಾಡಿನಲ್ಲಿ ಉತ್ಪನ್ನವಾದ ದಿವ್ಯವಾದ ಧಾನ್ಯಗಳ ಅನ್ನಗಳಿಂದಲೂ, ಕಾಡಿನ ಹೂಗಳಿಂದಲೂ ಪೂಜಿಸಿ ಸಂತೋಷಪಡಿಸುತ್ತಿದ್ದರು. ಆ ವಾಲ್ಮೀಕಿಯ ಮಾತಿನಿಂದ ಅವರು ಜ್ಞಾನವನ್ನು ಹೊಂದಿ ಸೀತೆಯನ್ನು ಪರಮಾತ್ಮನ ಹೆಂಡತಿಯಾದ ಲಕ್ಷ್ಮಿಯೆಂದು ತಿಳಿದು ಎಲ್ಲರೂ ಭಕ್ತಿಯಿಂದ ಗೌರವಿಸಿದರು.

ದೋಹದಾ್ ಪೂರಯಾಮಾಸುಃ ಸೀತಾಯಾಸ್ತಾ ಮುನಿಸ್ತ್ರಿಯಃ |
ಶಿಬಿಕಾಸಂಸ್ಥಿತಾ ಸೀತಾ ದದರ್ಶ ವನಕೌತುಕಂ || ೮೭ ||

ಯಥಾ ಸುಖಂ ತು ಸಾಕೇತೇ ಪೂರ್ವಮಾಪ ವಿದೇಹಜಾ |
ತಥಾ ಮುನೇರಾಶ್ರಮೇಽಪಿ ಸುಖಮಾಪ ವಿದೇಹಜಾ || ೮೮ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಜನ್ಮಕಾಂಡೇ ಸೀತಾತ್ಯಾಗ ವರ್ಣನಂ
ನಾಮ ತೃತೀಯಸ್ಸರ್ಗಸ್ಸಮಾಪ್ತಃ

---

೮೭. ಆ ಮುನಿಪತ್ನಿಯರು ಆ ಸೀತೆಯ ಬಯಕೆಗಳನ್ನು ಪೂರ್ಣ ಮಾಡುತ್ತಿದ್ದರು. ಆ ಮೇನೆಯಲ್ಲಿಯೇ ಕುಳಿತುಕೊಂಡು ಹೋಗಿ ಸೀತೆಯು ಆ ವನದ ಸೊಬಗನ್ನು ನೋಡುತ್ತಿದ್ದಳು.

೮೮. ಆ ಸೀತೆಯು ಅಯೋಧ್ಯೆಯಲ್ಲಿ ಮೊದಲು ಹೇಗೆ ಸುಖವನ್ನು ಹೊಂದುತ್ತಿದ್ದಳೋ ಹಾಗೆಯೇ ಆಕೆಯು ಈ ಮುನಿಯ ಆಶ್ರಮದಲ್ಲಿಯೂ ಸುಖವನ್ನು ಹೊಂದಿದಳು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಸೀತೆಯ ತ್ಯಾಗ
ವರ್ಣನವೆಂಬ ಮೂರನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

॥ ಮೂರನೆಯ ಸರ್ಗದ ಸಾರಾಂಶವು ॥

ಸೀತೆಗೆ ಏಳನೆಯ ತಿಂಗಳು ತುಂಬುತ್ತ ಬಂದಿತು. ಆಗ ಕೌಸಲ್ಯೆಯು ರಾಮನನ್ನು ಕುರಿತು ಸೀತೆಗೆ ಆರು ತಿಂಗಳು ತುಂಬಿತು. ಈಗ ಸೀಮೋಲ್ಲಂಘನವನ್ನು ಮಾಡಬೇಕು. ಆದ್ದರಿಂದ ಎಲ್ಲಿಗಾದರೂ ಕಳುಹಿಸಿದ್ದು ಕರೆದುಕೊಂಡು ಬಾ. ಎಂದಳು. ಆಗ ಜನಕನೊಡನೆ ಮಾಡಿರುವ ಆಲೋಚನೆಯನ್ನು ಆಕೆಗೆ ತಿಳಿಸಿದನು.

ಅನಂತರ ಸೀತೆಗೆ ಎಂಟನೆಯ ತಿಂಗಳು ಬಂದಿತು. ಸೀತೆಯೂ ರಾಮನೂ ಏಕಾಂತದಲ್ಲಿ ಕುಳಿತಿದ್ದರು. ಲಕ್ಷ್ಮಣನು ಅವರಿಗೆ ಗಾಳಿಯನ್ನು ಬೀಸುತ್ತಿದ್ದನು. ಆಗ ರಾಮನು ಸೀತೆಯನ್ನು ಕುರಿತು " ಎಲೈ ಜಾನಕಿಯೇ! ನಾನು ಅಗಸನು ಹೇಳುವ ಅಪವಾದವನ್ನೇ ನೆವವನ್ನಾಗಿ ಇಟ್ಟುಕೊಂಡು ಲೋಕಾಪವಾದದ ಭೀತಿಯಿಂದ ವಾಲ್ಮೀಕಿಯ ಆಶ್ರಮದಲ್ಲಿ ಬಿಟ್ಟುಬಿಡುತ್ತೇನೆ. ಹೆಂಗಸು ಗರ್ಭಿಣಿಯಾದ ಮೂರು ಐದು ಕೊನೆಗೆ ಏಳು ತಿಂಗಳಾದ ಮೇಲಾದರೂ ಆಕೆಯ ಸಂಗವನ್ನು ಮಾಡದೆ ಬಿಡಬೇಕೆಂದು ಶಾಸ್ತ್ರದಲ್ಲಿ ಹೇಳಿರುವುದು. ಅದನ್ನೂ ಪಾಲಿಸಿದಂತಾಗುತ್ತದೆ. ನೀನು ನನ್ನ ಹತ್ತಿರದಲ್ಲಿದ್ದುಕೊಂಡಿದ್ದರೆ ನನಗೆ ನಿನ್ನ ಸಂಗವನ್ನು ಮಾಡದಿರುವುದಕ್ಕಾಗುವುದಿಲ್ಲ. ಆದ್ದರಿಂದ ಈ ನಿರ್ಬಂಧದಿಂದಲಾದರೂ ಬೇರೆಯಾಗಿರುತ್ತೇನೆ.

ಐದು ವರ್ಷಗಳಾದ್ದ ಮೇಲೆ ನೀನು ನನ್ನನ್ನು ಮತ್ತೆ ಸೇರುತ್ತೀಯೆ. ಆಗ ಜನಗಳಿಗೆ ನಂಬುಗೆಯನ್ನು ತೋರಿಸುತ್ತೀಯೆ. ಆ ಕಾಲದಲ್ಲಿಯೇ ಭೂಮಿಯು

ಒಳಗಿನಿಂದ ಬಿರುಕುಬಿಟ್ಟುಕೊಂಡು ಒಂದು ಸಿಂಹಾಸನವನ್ನು ತಂದು ಅದರ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋಗಲು ಪ್ರಯತ್ನಪಡುವಳು. ಆಗ ನಾನು ಆ ಭೂಮಿಯನ್ನು ಹೆದರಿಸಿ ನಿನ್ನನ್ನು ನನ್ನಲ್ಲಿಯೇ ಇಟ್ಟುಕೊಳ್ಳುತ್ತೇನೆ. ನಿನಗೆ ಇಬ್ಬರು ಮಕ್ಕಳಾಗುವರು. ಅವರೊಡಗೂಡಿಕೊಂಡು ನನ್ನ ಬಳಿ ಇದ್ದು ಕೊಂಡು ಸುಖಪಡುತ್ತೀಯೆ.

ನಿನ್ನ ತಾಯಿತಂದೆಗಳು ಮೊದಲೇ ಆ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ನಿನಗೆ ಬೇಕಾದ ಎಲ್ಲ ಸಲಕರಣೆಗಳನ್ನು ಸಿದ್ಧಪಡಿಸಿರುವರು. ಈಗ ನೀನು ಸತ್ವರೂಪದಿಂದ ನನ್ನಲ್ಲಿ ಸೇರಿಕೊಂಡು ರಜಸ್ತಮೋರೂಪದಿಂದ ಆ ಕಾಡಿನಲ್ಲಿರು." ಎಂದನು. ಆಕೆಯೂ ಅಂತೆಯೇ ಆಗಲೆಂದು ಒಪ್ಪಿಕೊಂಡು ಆಚರಿಸಿದಳು.

ಅನಂತರ ಶ್ರೀರಾಮನು ಸಭೆಗೆ ಹೋದನು. ಅಲ್ಲಿ ಮಾತುಕಥೆಗಳು ನಡೆಯುತ್ತಿರಲು ರಾಮನು ತನ್ನ ವಿಷಯದಲ್ಲಾಗಲಿ, ತನ್ನವರ ವಿಷಯದಲ್ಲಾಗಲಿ ಜನರು ನಿಂದೆಯ ಮಾತುಗಳನ್ನಾಡುವರೇ ? ಎಂದನು. ಅದಕ್ಕೆ ವಿಜಯನೆಂಬು ವನು " ಎಲೈ ರಾಮನೇ ! ಜನರು ರಾಮನು ರಾವಣನನ್ನು ಕೊಂದು ದುಷ್ಕರವಾದ ಕೆಲಸವನ್ನು ಮಾಡಿರುವನು. ಎಂದು ಹೊಗಳುತ್ತಾರೆ. ಆದರೆ ಪರರ ಮನೆಯಲ್ಲಿದ್ದ ಸೀತೆಯನ್ನು ತಂದಿಟ್ಟುಕೊಂಡಿದ್ದರೂ ಅವನಿಗೆ ಮನಸ್ಸಿಗೆ ನೆಮ್ಮದಿಯಿಲ್ಲ. ಹೆಂಡತಿಯಾದವಳು ಪರನ ಸಂಗವನ್ನು ಒಂದುಸಾರಿ ಮಾಡಿದರೂ ಆಕೆಯಲ್ಲಿ ದ್ವೇಷವು ಹುಟ್ಟುವಾಗ ಪರರ ಮನೆಯಲ್ಲಿಯೇ ಇದ್ದ ಸೀತೆಯನ್ನು ಹೊಂದಿದ ಅವನಿಗೆ ಸುಖವಿಲ್ಲ. ಆದರೂ ಅದನ್ನು ಹಿಂದಿಟ್ಟು ತೋರಿಸುತ್ತಿಲ್ಲ." ಎಂದನು.

ಇದೂ ಅಲ್ಲದೆ ಒಬ್ಬ ಅಗಸನು ಕೆಟ್ಟಕೆಲಸವನ್ನು ಮಾಡಿದ ತನ್ನ ಹೆಂಗಸನ್ನು ಕುರಿತು " ಎಲೈ ರಂಡೆಯೇ ! ಕೆಟ್ಟಹೆಂಗಸನ್ನು ಕರೆದುಕೊಂಡು ಸಂಸಾರವನ್ನು ಮಾಡಲು ನಾನು ರಾಮನಲ್ಲ. ನೀನು ನಿನ್ನ ಇಷ್ಟಬಂದಂತೆ ಹೋಗು" ಎಂದನು. ನಾನು ಸ್ವಾಮಿಗೆ ದ್ರೋಹಮಾಡಿದಂತಾಗಬಾರದೆಂದು ಈ ವಿಷಯವನ್ನು ಹೇಳಿದ್ದೇನೆ. ಚಿತ್ತಕ್ಕೆ ಬಂದಂತೆ ಮಾಡು. ಎಂದನು.

ಇದೆಲ್ಲವನ್ನೂ ಕೇಳಿದ ರಾಮನು ತನ್ನ ಸಭಿಕರನ್ನು ನೋಡಿ ಇದರ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂದನು. ಅವರು ರಾಜನಂತೆ ಪ್ರಜೆಗಳೂ ಆಗುವರು. ಇದರಲ್ಲಿ ಸಂದೇಹವಿಲ್ಲವೆಂದರು.

ಅನಂತರ ರಾಮನು ಒಡ್ಡೋಲಗವನ್ನು ವಿಸರ್ಜಿಸಿ ಲಕ್ಷ್ಮಣನನ್ನು ಕರೆದು ಎಲೈ ಲಕ್ಷ್ಮಣನೇ! ಸೀತೆಯ ದೆಸೆಯಿಂದ ನನಗೆ ಬಹುವಾದ ಲೋಕಾಪವಾದವು ಬಂದಿತು. ಆದ್ದರಿಂದ ಈ ಸೀತೆಯನ್ನು ಬೆಳಗ್ಗೆ ಕರೆದುಕೊಂಡು ಹೋಗಿ ವಾಲ್ಮೀಕಿಯ ಆಶ್ರಮದ ಬಳಿಯಲ್ಲಿ ಬಿಟ್ಟು ಆಕೆಯ ಒಂದು ತೋಳನ್ನು ಕಡಿದು ತೆಗೆದುಕೊಂಡು ಬಂದು ನಮಗೆಲ್ಲರಿಗೂ ತೋರಿಸು. ಇದನ್ನು ನೀನು ನೆರವೇರಿಸ ದಿದ್ದರೆ ನನ್ನ ಆಣೆ, ಹೋಗು, ಎಂದನು.

ರಾಮನು ಲಕ್ಷ್ಮಣನಿಗೆ ಇಂತೆಂದು ಹೇಳಿ ಕೈಕೇಯಿಯನ್ನು ನೋಡಲು ಅವಳ ಮನೆಗೆ ಹೋದನು. ಅಷ್ಟರೊಳಗೆ ಸೀತೆಯೂ ಕೈಕೇಯಿಯೂ ಗುಟ್ಟಾಗಿ ಮಾತನಾಡುತ್ತಿದ್ದರು. ಆಗ ಕೈಕೇಯಿಯು ದಶಾನನನನ್ನು ಗೋಡೆಯಮೇಲೆ ಬರೆದು ತೋರಿಸು. ಎಂದು ಸೀತೆಯನ್ನು ಕೇಳಲು ಅದಕ್ಕೆ ಆಕೆಯು "ನಾನು ದಶಾನನನನ್ನು ನೋಡಿಯೇ ಇಲ್ಲ. ಅವನು ನನ್ನನ್ನು ಕದ್ದುಕೊಂಡು ಹೋಗಲು ಪಂಚವಟಿಗೆ ಬಂದಿದ್ದಾಗ ಅವನ ಬಲದಕಾಲಿನ ಹೆಬ್ಬೆರಳನ್ನು ಮಾತ್ರ ನೋಡಿ ದೆನು ಎಂದಳು ಅದನ್ನು ಕೇಳಿ ಕೈಕೇಯಿಯು ಆ ಹೆಬ್ಬೆರಳನ್ನೇ ಬರೆದು ತೋರಿಸು. ಎಂದಳು. ಸೀತೆಯು ಹಾಗೆಯೇ ಆಗಲೆಂದು ಹೇಳಿ ಆ ಬೆರಳನ್ನು ರೆದುಬ ತೋರಿಸಿದಳು. ಅನಂತರ ಮನೆಗೆ ಹೊರಟುಹೋದಳು.

ಅನಂತರ ಕೈಕೇಯಿಯು ಆ ಹೆಬ್ಬೆರಳಿನ ಪ್ರಮಾಣಕ್ಕೆ ತಕ್ಕಂತೆ ಆ ದಶಾನನನ ಆಕಾರವನ್ನು ಬರೆದಳು. ಇದನ್ನು ರಾಮನು ನೋಡಬೇಕೆಂದೇ ಆಕೆಯ ದುರ್ಬುದ್ಧಿಯಾಗಿದ್ದಿತು. ಅಷ್ಟರೊಳಗೆ ರಾಮನು ಆ ಕೈಕೇಯಿಯ ಮನೆಗೆ ಬರಲು ಆಕೆಯು ಆ ದಶಾನನನ ಚಿತ್ರವನ್ನು ಬರೆದಿರುವ ಗೋಡೆಯ ಬಳಿಯಲ್ಲಿಯೇ ಆತನಿಗೆ ಆಸನವನ್ನು ಕೊಟ್ಟಳು. ಆಗ ರಾಮನು ಆ ಚಿತ್ರವನ್ನು ನೋಡಿ ಈ ಚಿತ್ರವನ್ನು ಯಾರು ಬರೆದರು? ಎಂದನು. ಆಗ ಕೈಕೇಯಿಯು

"ಇದನ್ನು ಸೀತೆಯು ಬರೆದಳು. ಹೆಂಗಸು ಯಾವು ಯಾವುದನ್ನು ಅಪೇಕ್ಷಿಸಿ ಕೊಳ್ಳುತ್ತಾಳೆಯೋ ಅದನ್ನೇ ಯಾವಾಗಲೂ ಸ್ಮರಿಸುತ್ತಿರುತ್ತಾಳೆ. ಹೆಂಗಸಿನ ಚರಿತ್ರೆಯನ್ನು ತಿಳಿಯಲು ಯಾರುತಾನೆ ಶಕ್ತರು ?" ಎಂದಳು.

ಆಗ ರಾಮನು ಸಭೆಯಲ್ಲಿ ನಡೆದ ಸೀತೆಯ ವಿಷಯವನ್ನೆಲ್ಲಾ ಕೈಕೇಯಿಗೆ ಹೇಳಿದನು. ಮತ್ತು ಆಕೆಯನ್ನು ಕಾಡಿನಲ್ಲಿ ಬಿಟ್ಟು ಕೈಯ್ಯನ್ನು ಕತ್ತರಿಸಿ ತರಬೇಕೆಂದು ಹೇಳಿರುವುದನ್ನೂ ತಿಳಿಸಿದನು. ಆಗ ಕೈಕೇಯಿಯು "ಸೀತೆಯ ವಿರಹದಿಂದ ರಾಮನು ರಾಜ್ಯಭಾರವನ್ನು ಮಾಡುವುದಿಲ್ಲ. ಲಕ್ಷ್ಮಣನು ರಾಮನ ಸೇವೆಯಲ್ಲಿರುವುದರಿಂದ ಅವನೂ ಆಳುವುದಿಲ್ಲ. ಆಗ ರಾಮನ ಮಾತಿನಂತೆ ಭರತನೇ ರಾಜ್ಯವಾಳುವನು" ಎಂದು ಸಂತಸಗೊಂಡಳು. ಅನಂತರ ರಾಮನು ಕೈಕೇಯಿಗೆ ನಮಸ್ಕರಿಸಿ ಸುಮಿತ್ರೆ ಕೌಸಲ್ಯೆಯರ ಮನೆಗೂ ಹೋಗಿ ಅವರಿಗೂ ನಮಸ್ಕರಿಸಿ ಅವರಿಗೆ ಸಭೆಯಲ್ಲಿ ನಡೆದುದನ್ನೂ ಕೈಕೇಯಿಯ ಮನೆಯಲ್ಲಿ ನಡೆದುದನ್ನೂ ತಿಳಿಸಿದನು.

ಅನಂತರ ಸೀತೆಯ ಮನೆಗೆ ಬಂದು ಆಕೆಗೂ ಸಭೆಯ ವಿಷಯವನ್ನೂ ಕೈಕೇಯಿ ಮನೆಯ ವಿಷಯವನ್ನು ಹೇಳಿದನು. ಆಗ ಸೀತೆಯು "ಕೈಕೇಯಿಯ ಮಾತಿನಂತೆ ನಾನು ಹೆಬ್ಬೆರಳನ್ನು ಬರೆದನು. ಅವಳು ಮೇಲಿನ ಎಲ್ಲವನ್ನೂ ಬುದ್ಧಿವಂತಿಕೆಯಿಂದ ಬರೆದಿರುವಳು" ಎಂದಳು. ಅದಕ್ಕೆ ರಾಮನು "ಎಲೈ ಪ್ರಿಯೆಯೆ ! ಆಕೆಯ ದುಷ್ಟಬುದ್ಧಿಯನ್ನು ನಾನು ಬಲ್ಲೆನು. ನೀನು ಯೋಚಿಸ ಬೇಡ. ನಿನಗೆ ಆಗುವ ಬಯಕೆಗಳನ್ನು ನನಗೆ ತಿಳಿಸು" ಎಂದನು.

ಇದನ್ನು ಕೇಳಿ ಸೀತೆಯು ಮುಂದಿನ ವಿಷಯವನ್ನು ಮನಸ್ಸಿಗೆ ತಂದು ಕೊಂಡು ತಾನು ಗಂಗಾ ತೀರಕ್ಕೆ ಹೊಗಬೇಕೆಂದೂ ಅಲ್ಲಿರುವ ಋಷಿ ಪತ್ನಿಯರನ್ನು ನೋಡಬೇಕೆಂದೂ ಕೇಳಿದಳು. ಅದಕ್ಕೆ ರಾಮನು ನಾಳೆಯೇ ಲಕ್ಷ್ಮಣನು ಕರೆದುಕೊಂಡು ಹೋಗುವನು. ಎಂದನು.

ಸೀತೆಯೂ ಕೂಡ ನನ್ನ ತಾಯಿತಂದೆಗಳಿರುವಲ್ಲಿ ನನಗೆ ಎಲ್ಲವೂ ಸಂಪೂರ್ಣ ವಾಗಿರುವುದು. ಎಂದು ತಿಳಿದು ಏನನ್ನೂ ತೆಗೆದುಕೊಂಡು ಹೋಗಲಿಚ್ಛಿಸಲಿಲ್ಲ.

ಬೆಳಗ್ಗೆ ಎದ್ದು ಸೀತೆಯು ಸ್ನಾನಮಾಡಿ ರಾಮನಿಗೆ ಉತ್ತಮವಾದ ಆಹಾರಗಳನ್ನು ಕೊಟ್ಟು ತಾನೂ ತಿಂದು ಎಲ್ಲರಿಗೂ ಹೇಳಿ ಗಂಗಾ ತೀರಕ್ಕೆ ಹೋಗಲು ಸಿದ್ಧಳಾದಳು. ಲಕ್ಷ್ಮಣನೂ ಬಂದನು. ಜೊತೆಯಲ್ಲಿ ತುಲಸಿಯೆಂಬ ದಾಸಿಯೂ ಬಂದಳು. ಇವರನ್ನು ಕರೆದುಕೊಂಡು ಲಕ್ಷ್ಮಣನು ಹೊರಟು ವಾಲ್ಮೀಕಿಯ ಆಶ್ರಮದ ಬಳಿಯಲ್ಲಿರುವ ಒಂದು ಅರಳಿಯಮರದ ಕೆಳಗೆ ಆಕೆಯನ್ನು ಬಿಟ್ಟು ನಮಸ್ಕರಿಸಿ ಕಣ್ಣೀರಿಟ್ಟು ಅಳುತ್ತಾ " ಅಮ್ಮ? ಲೋಕಾಪವಾದದಿಂದ ಹೆದರಿದ ರಾಮನ ಅಪ್ಪಣೆಯಮೇರೆಗೆ ನಿನ್ನನ್ನು ಇಲ್ಲಿ ಬಿಟ್ಟಿರುವೆನು ನನ್ನ ತಪ್ಪೇನೂ ಇಲ್ಲ ನೀನು ಮುಂದಿರುವ ವಾಲ್ಮೀಕಿಯ ಆಶ್ರಮಕ್ಕೆ ಹೋಗು" ಎಂದು ಹೇಳಿ ಹಿಂದಕ್ಕೆ ಹೊರಟನು.

ಸೀತೆಯು ಅಲ್ಲಿಗೆ ಬಂದಿರುವುದನ್ನು ವಾಲ್ಮೀಕಿಯು ಶಿಷ್ಯರಿಂದ ತಿಳಿದು ಉತ್ಸವದೊಡನೆ ಆಕೆಯನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಬಂದನು. ಅಲ್ಲಿ ಸೀತೆಯು ತಾಯಿತಂದೆಯರೊಡನೆ ಸುಖವಾಗಿದ್ದಳು. ಅಲ್ಲಿರುವ ತಪಸ್ವಿಗಳೂ ತಪಸ್ವಿನಿಯರೂ ವಾಲ್ಮೀಕಿಯ ಮಾತಿನಿಂದ ಸೀತೆಯು ಲಕ್ಷ್ಮಿಯೆಂದೇ ತಿಳಿದು ಅನೇಕ ಉಪಚಾರಗಳನ್ನು ಮಾಡುತ್ತಿದ್ದರು. ಸೀತೆಯು ಅವರೊಡನೆ ಸುಖಿಸುತ್ತಾ ಸಂತೋಷದಿಂದಿದ್ದಳು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ಚತುರ್ಥಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಗಂಗಾತಟಂ ಗತ್ವಾ ಲಕ್ಷ್ಮಣಶ್ಚಿಂತಯತ್ ಹೃದಿ ।
ಸ್ವೇಚ್ಛಯಾ ಕೌತುಕಾತ್ಸೀತಾಂ ಮಯಾ ಶುದ್ಧಾಂ ಸ ತ್ಯಕ್ತವಾನ್ ॥ ೧ ॥

ಸ್ತ್ರೀಯಕಾಮಪ್ರಶಾಂತ್ಯರ್ಥಂ ಶಾಸ್ತ್ರಾಜ್ಞಾಂ ಪ್ರತಿಪಾಲಯನ್ ।
ಏವಂ ಸತಿ ಪುನಸ್ತೇನ ಕಿಂ ಮಮಾಜ್ಞಾಪಿತಂ ರಹಃ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ನಾಲ್ಕನೆಯ ಸರ್ಗವು

೧-೨ ಶ್ರೀರಾಮದಾಸನು ಹೇಳಿದನು—ಇತ್ತ ಲಕ್ಷ್ಮಣನು ಗಂಗೆಯ ದಡಕ್ಕೆ ಹೋದಮೇಲೆ ಮನಸ್ಸಿನಲ್ಲಿ ಇಂತೆಂದು ಯೋಚಿಸಿದನು. ಸೀತೆಯು ಶುದ್ಧಳಾಗಿದ್ದರೂ ರಾಮನು ಕೌತುಕದಿಂದಲೂ, ಸ್ವೇಚ್ಛೆಯಿಂದಲೂ ನನಗೆ ಹೇಳಿ ಕಾಡಿನಲ್ಲಿ ಬಿಡಿಸಿ ಬಿಟ್ಟನು. ಇದಕ್ಕೆ ಕಾರಣವು ಶಾಸ್ತ್ರಾಜ್ಞೆಯ ಪರಿಪಾಲನೆಯ ನೆವದಿಂದ ತನ್ನ ಕಾಮವನ್ನು ಶಾಂತಿಗೊಳಿಸುವುದೇ ಆಗಿರುವುದು. ಆದರೂ ಕೂಡ ನನಗೇಕೆ ಗುಟ್ಟಾಗಿ ಇಂತೆಂದು ಹೇಳಿದನು !

ವನಾತ್ಸೀತಾಭುಜಂ ಛಿತ್ವಾ ನಯಸ್ವೇತ್ಯತಿದುರ್ಘಟಂ ।
ಮಯಾಪಿ ಶಪಥಂ ಶ್ರುತ್ವಾ ನ ಪೃಷ್ಟಸ್ಸ ವಿಚಿಂತ್ಯ ಚ ॥ ೩ ॥

ಅಧುನಾ ಕಿಂ ಕರೋಮ್ಯತ್ರ ಕಥಂ ರಾಮಂ ಪ್ರಗಮ್ಯತೇ ।
ಸೀತಾಭುಜಂ ವಿನಾ ದೃಷ್ಟ್ವಾ ರಾಮೋ ಮಾಂ ಕಿಂ ವದಿಷ್ಯತಿ ॥ ೪ ॥

ಛೇತ್ತುಂ ಸೀತಾಭುಜಂ ಶಕ್ತೋ ಭವಿಷ್ಯಾಮಿ ಕಥಂ ತ್ವಹಂ ।
ಯಯಾಹಂ ಪುತ್ರವನ್ನಿತ್ಯಂ ಪಾಲಿತೋ ಲಾಲಿತಸ್ತ್ವಿತಿ ॥ ೫ ॥

ಅಧುನಾಗ್ನಿಂ ವಿಶಾಮ್ಯತ್ರ ರಾಮಾಯಾಸ್ಯಂ ನ ದರ್ಶಯೇ ।
ಏವಂ ನಿಶ್ಚಿತ್ಯ ಸೌಮಿತ್ರಿಶ್ಚಿತಾಂ ಕರ್ತುಂ ಮನೋ ದಧೇ ॥ ೬ ॥

---

೩. ಸೀತೆಯ ಭುಜವನ್ನು ಕತ್ತರಿಸಿ ನನಗೆ ತಂದುಕೊಡು ಎಂಬುದಾಗಿ ಕಷ್ಟವಾದ ಕೆಲಸವನ್ನು ಹೇಳಿರುವನಲ್ಲ! ಆಗ ನಾನೂ ಕೂಡ ಅವನ ಪ್ರತಿಜ್ಞೆಯನ್ನು ಕೇಳಿ ವಿಮರ್ಶಿಸಿ ಅದನ್ನು ಕೇಳಲೇ ಇಲ್ಲ.

೪. ಈಗ ಏನುಮಾಡಲಿ ? ರಾಮನ ಬಳಿಗೆ ಹೇಗೆ ಹೋಗಲಿ ? ನಾನು ಸೀತೆಯ ಭುಜವನ್ನು ತೆಗೆದುಕೊಂಡು ಹೋಗದಿದ್ದರೆ ಆ ರಾಮನು ನನ್ನನ್ನು ನೋಡಿ ಏನೆಂದು ಎನ್ನುವನು ?

೫. ನಾನು ಸೀತೆಯ ಭುಜವನ್ನು ಹೇಗೆ ತಾನೇ ಕತ್ತರಿಸಲಿ ? ಅವಳಿಂದಲೇ ಮಗನಂತೆ ನಾನು ಪಾಲಿತನಾಗಿಯೂ ಲಾಲಿತನಾಗಿಯೂ ಇರುವೆನಲ್ಲಾ !

೬. ಆದ್ದರಿಂದ ನಾನು ಈಗ ಇಲ್ಲಿಯೇ ಅಗ್ನಿಯನ್ನು ಹತ್ತಿಸಿ ಅದರಲ್ಲಿ ಬಿದ್ದು ಬಿಡುವೆನು. ರಾಮನಿಗೆ ಮುಖವನ್ನೇ ತೋರಿಸುವುದಿಲ್ಲ. ಎಂಬುದಾಗಿ ನಿಶ್ಚಯಿಸಿ ಲಕ್ಷ್ಮಣನು ಚಿತೆಯನ್ನು ಮಾಡಲು ಮನಸ್ಸು ಮಾಡಿದನು.

ಏತಸ್ಮಿನ್ನಂತರೇ ತತ್ರ ವಿಶ್ವಕರ್ಮಾ ವಿಧೇರ್ಗಿರಾ ।
ಕುಠಾರಹಸ್ತೋ ವಿಪಿನೇ ಬಭ್ರಾಮ ತಕ್ಷರೂಪಧೃತ್ ॥ ೭ ॥

ತಂ ದೃಷ್ಟ್ವಾ ಲಕ್ಷ್ಮಣಃ ಪ್ರಾಹ ತ್ವಂ ಮೇ ಸಾಹಾಯ್ಯಮಾಚರ ।
ಕುಠಾರೇಣ ತರೂಂಶ್ಛಿತ್ವಾ ಚಿತಾರ್ಥೇ ದೇಹಿ ಮಾಂ ಜವಾತ್ ॥ ೮ ॥

ಯಥೇಚ್ಛಂ ವಸು ದಾಸ್ಯಾಮಿ ತ್ವಾಮಹಂ ನಿಶ್ಚಯೇನ ಹಿ ।
ಸೋಪ್ಯಾಹ ಲಕ್ಷ್ಮಣಂ ವೀರ ಚಿತಾಹೇತುಂ ವದಸ್ವ ಮಾಂ ॥ ೯ ॥

ಸೌಮಿತ್ರಿಃ ಕಥಯಾಮಾಸ ಪೂರ್ವವೃತ್ತಂ ಸವಿಸ್ತರಂ ।
ತಚ್ಛ್ರುತ್ವಾ ಸಕಲಂ ತಕ್ಷಾ ಸೌಮಿತ್ರಿಂ ಪ್ರಾಹ ಸಸ್ಮಿತಃ ॥ ೧೦ ॥

---

೭. ಈ ಸಮಯದಲ್ಲಿ ವಿಶ್ವಕರ್ಮನು ಬ್ರಹ್ಮನ ಹೇಳಿಕೆಯಂತೆ ಕೈಯ್ಯಲ್ಲಿ ಕೊಡಲಿಯನ್ನು ಹಿಡಿದುಕೊಂಡು ಮರಗಳನ್ನು ಕಡಿಯುವುದಕ್ಕೋಸ್ಕರ ಆ ಕಾಡಿನಲ್ಲಿ ಸುತ್ತಾಡುತ್ತಿದ್ದನು.

೮. ಲಕ್ಷ್ಮಣನು ಆ ಕೊಡಲಿಯನ್ನು ಹಿಡಿದಿರುವ ಮನುಷ್ಯನನ್ನು ನೋಡಿ ಅಯ್ಯಾ! ನೀನು ನಿನ್ನ ಕೊಡಲಿಯಿಂದ ಮರಗಳನ್ನು ಕಡಿದು ನನಗೊಂದು ಚಿತೆಯನ್ನು ಮಾಡಿಕೊಡು ಈ ರೀತಿಯಾದ ಸಹಾಯವು ನಿನ್ನಿಂದಾಗಬೇಕು. ಅದನ್ನು ಬೇಗನೆ ಮಾಡಿಕೊಡು.

೯. ನಿನಗೆ ಬೇಕಾದಷ್ಟು ಹಣವನ್ನು ಕೊಡುತ್ತೇನೆ. ಇದು ಖಂಡಿತ. ಎಂದನು. ಲಕ್ಷ್ಮಣನ ಈ ಮಾತನ್ನು ಕೇಳಿ ಆ ವಿಶ್ವಕರ್ಮನು ಎಲೈ ವೀರನೇ! ಚಿತೆಯನ್ನು ಏತಕ್ಕೋಸ್ಕರ ಮಾಡಬೇಕು? ಅದರ ಕಾರಣವನ್ನು ನನಗೆ ಮೊದಲು ಹೇಳು. ಎಂದನು.

೧೦. ಆಗ ಲಕ್ಷ್ಮಣನು ಹಿಂದಿನ ವಿಷಯವನ್ನೆಲ್ಲಾ ವಿಸ್ತಾರವಾಗಿ ಹೇಳಿದನು. ಅದೆಲ್ಲವನ್ನೂ ಆ ಮರಕಡಿಯುವವನು ಕೇಳಿ ಲಕ್ಷ್ಮಣನನ್ನು ಕುರಿತು ನಗುತ್ತ ಇಂತೆಂದನು.

ಅಲ್ಪಾರ್ಥಂ ಸ್ವೀಯಕೌಣಪಂ ಮಾ ಜುಹಾವ ಸ್ವಬಾಹುಜ ।
ಅಹಂ ಸೀತಾಭುಜಂ ಕೃತ್ವಾಽಧುನಾ ದಾಸ್ಯಾಮಿ ತೇ ಕ್ಷಣಾತ್ ॥ ೧೧ ॥

ಇತ್ಯುಕ್ತ್ವಾ ಲಕ್ಷ್ಮಣಂ ಕೃತ್ವಾ ಜಾನಕೀಭುಜಮುತ್ತಮಂ ।
ತ್ವಕ್ಮಾಂಸಾಸ್ಥಿಸ್ನಾಯುರಕ್ತಪೂರಿತಂ ಕಂಚುಕೀಯುತಂ ॥ ೧೨ ॥

ಸೀತಾಲಂಕಾರಸಹಿತಂ ತಸ್ಯಾಶ್ಚಿಹ್ನವಿಚಿಹ್ನಿತಂ ।
ದದೌ ಲಕ್ಷ್ಮಣಹಸ್ತೇ ತಂ ಸ್ವಯಮಂತರ್ದಧೇ ಕ್ಷಣಂ ॥ ೧೩ ॥

ಸೀತಾಭುಜಂ ಸಮಾದಾಯ ಲಕ್ಷ್ಮಣೋಽಪಿ ಪುರೀಂ ಯಯೌ ।
ಗತಶ್ರಿಯಂ ನಿರುತ್ಸಾಹಾಂ ವಾತ್ಯಾತಿಧೂಲಿಧೂಸರಾಂ ॥ ೧೪ ॥

---

೧೧ ಎಲೈ ಕ್ಷತ್ರಿಯನೇ! ಈ ಅಲ್ಪಕಾರಣಕ್ಕೋಸ್ಕರವಾಗಿ ನಿನ್ನ ದೇಹವನ್ನು ಬೆಂಕಿಯಲ್ಲಿ ಹಾಕಬೇಡ. ನಾನು ಸೀತೆಯ ಭುಜವನ್ನೇ ಮಾಡಿ ಈಗಲೇ ನಿನಗೆ ಕೊಡುತ್ತೇನೆ.

೧೨. ಹೀಗೆಂದು ಲಕ್ಷ್ಮಣನಿಗೆ ಹೇಳಿ ಸೀತೆಯ ಭುಜವನ್ನು ಚೆನ್ನಾಗಿ ಮಾಡಿ ಅದಕ್ಕೆ ಚರ್ಮ, ಮಾಂಸ, ಮೂಳೆ ರಕ್ತಗಳನ್ನು ತುಂಬಿ ಕುಪ್ಪಸವಿರುವಂತೆಯೂ ಮಾಡಿದನು.

೧೩. ಮತ್ತು ಆ ಸೀತೆಯು ತೋಳಿಗೆ ಯಾವ ಅಲಂಕಾರಗಳನ್ನು ಇಟ್ಟುಕೊಂಡಿದ್ದಳೋ ಅವೆಲ್ಲವನ್ನೂ ನಿರ್ಮಿಸಿದನು. ಮತ್ತು ಅದರಲ್ಲಿ ಯಾವ ಯಾವ ಗುರುತುಗಳಿದ್ದುವೋ ಅವೆಲ್ಲವನ್ನೂ ಮಾಡಿದನು. ಅದನ್ನು ಆ ಲಕ್ಷ್ಮಣನ ಕೈಗೆಕೊಟ್ಟು ತಾನು ಆ ಕ್ಷಣದಲ್ಲಿಯೇ ಅಂತರ್ಧಾನನಾದನು.

೧೪. ಆ ರೀತಿಯಾದ ಸೀತೆಯ ಭುಜವನ್ನು ತೆಗೆದುಕೊಂಡು ಲಕ್ಷ್ಮಣನು ತನ್ನ ಪಟ್ಟಣಕ್ಕೆ ಹೋದನು. ಆ ಪಟ್ಟಣವು ಸೀತೆಯಿಲ್ಲದುದರಿಂದ ಕಳೆಗುಂದಿದ್ದಿತು. ಉತ್ಸಾಹವೇ ಇರಲಿಲ್ಲ. ಸುಂಟರಗಾಳಿಯಿಂದಲೂ ಧೂಳಿಸಿಂದಲೂ ಕೂಡಿದ್ದಿತು.

ದದರ್ಶ ನಗರೀಂ ಸ್ವೀಯಾಂ ನಾರೀಹೀನಗೃಹೋಪಮಾಂ ।
ವಿವೇಶಾಧೋಮುಖಃ ಪುರ್ಯಾಂ ನತ್ವಾ ಸದಸಿ ರಾಘವಂ ॥ ೧೫ ॥

ಧರ್ಶಯಾಮಾಸ ಸೀತಾಯಾ ಭುಜಂ ಕಂಕಣಮಂಡಿತಂ ।
ತನ್ನಿರೀಕ್ಷ್ಯ ಭುಜಂ ರಾಮೋಽಧೋಮುಖಃ ಪ್ರಾಹ ಲಕ್ಷ್ಮಣಂ ॥ ೧೬ ॥

ಕೈಕೇಯೀಂ ಸುಹೃದಃ ಪೌರಾನ್ ಸರ್ವಾನ್ ಜಾನಪದಾನ್ ನೃಪಾನ್ ।
ಸೀತಾಭುಜೋ ದರ್ಶನೀಯಸ್ತ್ವಯಾದ್ಯ ಮಮ ಶಾಸನಾತ್ ॥ ೧೭ ॥

ತಥೇತ್ಯುಕ್ತ್ವಾ ಲಕ್ಷ್ಮಣೋಽಪಿ ಸ ಚಕಾರ ಯಥೋದಿತಃ ।
ಭುಜಂ ಸಂರಕ್ಷಯಾಮಾಸ ಪೇಟಿಕಾಯಾಂ ನಿಧಾಯ ಸಃ ॥
ಕೈಕೇಯೀ ತಂ ಭುಜಂ ದೃಷ್ಟ್ವಾ ತುತೋಷ ನಿತರಾಂ ಹೃದಿ ॥ ೧೮ ॥

---

೧೫. ಲಕ್ಷ್ಮಣನು ಹೆಂಗಸಿಲ್ಲದೆ ಅನಾಥವಾಗಿರುವ ಮನೆಯಂತಿರುವ ಆ ನಗರವನ್ನು ನೋಡಿದನು. ತಲೆಯನ್ನು ತಗ್ಗಿಸಿಕೊಂಡು ಪಟ್ಟಣಕ್ಕೆ ಹೋಗಿ ಅಂತೆಯೇ ಬೀದಿಯಲ್ಲಿ ಹೋಗುತ್ತಾ ಸಭೆಗೆ ಹೋಗಿ ರಾಮನಿಗೆ ನಮಸ್ಕರಿಸಿದನು.

೧೬. ಮತ್ತು ಬಳೆ ಮುಂತಾದುವುಗಳಿಂದ ಕೂಡಿರುವ ಸೀತೆಯ ಆ ಕೈಯ್ಯನ್ನು ರಾಮನಿಗೆ ತೋರಿಸಿದನು. ರಾಮನು ಆ ಕೈಯ್ಯನ್ನು ನೋಡಿ ತಲೆಯನ್ನು ತಗ್ಗಿಸಿಕೊಂಡು ಲಕ್ಷ್ಮಣನನ್ನು ಕುರಿತು ಇಂತೆಂದನು.

೧೭. ಎಲೈ ಲಕ್ಷ್ಮಣನೇ ! ಸೀತೆಯ ಈ ತೋಳನ್ನು ಕೈಕೇಯಿಗೂ, ಸ್ನೇಹಿತರಿಗೂ, ಪಟ್ಟಣಿಗರಿಗೂ ದೇಶದ ಜನರಿಗೂ, ಸಾಮಂತರಾಜರಿಗೂ ನೀನು ತೋರಿಸಬೇಕು. ನನ್ನ ಅಪ್ಪಣೆಯಂತೆ ಹೀಗೆ ಮಾಡಿಯೇ ತೀರಬೇಕು. ಎಂದನು.

೧೮. ಲಕ್ಷ್ಮಣನು ಅದನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ರಾಮನು ಹೇಳಿದಂತೆಯೇ ಮಾಡಿದನು. ಅನಂತರ ಆ ಭುಜವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಕಾಪಾಡುತ್ತಿದ್ದನು. ಕೈಕೇಯಿಯು ಆ ತೋಳನ್ನು ನೋಡಿ ತನ್ನ ಮನಸ್ಸಿನಲ್ಲಿ ಬಹುವಾಗಿ ಸಂತೋಷವನ್ನು ಪಟ್ಟುಕೊಂಡಳು

ರಾಮೋಽಪಿ ಸೀತಾರಹಿತಃ ಪರಾತ್ಮಾ
ವಿಜ್ಞಾನದೃಕ್ಕೇವಲ ಆದಿದೇವಃ ।
ಸಂತ್ಯಜ್ಯ ಭೋಗಾನಖಿಲಾನ್ವಿರಕ್ತೋ
ಮುನಿವ್ರತೋಽಭೂನ್ಮುನಿಸೇವಿತಾಂಘ್ರಿಃ ॥ ೧೯ ॥

ಅಥ ಸೀತಾಪಿ ವಾಲ್ಮೀಕೇರ್ಮುನಿಪತ್ನೀಭಿರಾಶ್ರಮೇ ।
ಪ್ರತ್ಯಹಂ ಪೂಜಿತಾ ವನ್ಯೈಸ್ಸುಖಂ ತಸ್ಥೌ ಮುದಾನ್ವಿತಾ ॥ ೨೦ ॥

ಏವಂ ಮಾಸದ್ವಯಂ ತತ್ರ ನೀತ್ವಾ ಸೀತಾಶ್ರಮೇ ಮುನೇಃ ।
ಸುದಿನೇ ಸುಷುವೇ ರಾತ್ರೌ ಪುತ್ರರತ್ನಂ ರವಿಪ್ರಭಂ ॥ ೨೧ ॥

ಏತಸ್ಮಿನ್ನಂತರೇ ರಾತ್ರೌ ಜ್ಞಾತ್ವಾ ತಂ ಸಮಯಂ ಪ್ರಭುಃ ।
ರಾಘವಃ ಕಿಂಕಿಣೀಮಾಲಾಂ ಘಂಟಾಂ ಮುಕ್ತ್ವಾಥ ಬಂಧುನಾ ॥ ೨೨ ॥

---

೧೯. ಪರಮಾತ್ಮನೂ, ದೇವದೇವನೂ, ಜ್ಞಾನಿಯೂ ಆದ ರಾಮನು ಸೀತೆಯಿಲ್ಲದುದರಿಂದ ಎಲ್ಲಾ ಭೋಗಗಳನ್ನೂ ಬಿಟ್ಟು ಬಿಟ್ಟು ವಿರಕ್ತನಾಗಿ ಮುನಿಗಳ ವ್ರತವನ್ನೇ ಹಿಡಿದು ಆಚರಿಸುತ್ತಿದ್ದನು.

೨೦. ಇತ್ತ ಸೀತೆಯು ಆಶ್ರಮದಲ್ಲಿ ಮುನಿಪತ್ನಿಯರಿಂದ ಪ್ರತಿದಿನವೂ ಗೌರವವನ್ನು ಹೊಂದುತ್ತ ಉಪಚಾರವನ್ನೂ ಹೊಂದುತ್ತ ಸಂತೋಷಪಟ್ಟು ಕೊಂಡು ಸುಖವಾಗಿದ್ದಳು.

೨೧. ಇಂತು ಸೀತೆಯು ವಾಲ್ಮೀಕಿಯ ಆಶ್ರಮದಲ್ಲಿ ಎರಡು ತಿಂಗಳು ಗಳನ್ನು ಕಳೆದಳು. ಅನಂತರ ಒಂದು ಒಳ್ಳೆಯ ದಿನ ರಾತ್ರಿಯಲ್ಲಿ ಸೂರ್ಯನಂತೆ ತೇಜಸ್ಸುಳ್ಳ ಒಂದು ಗಂಡುಮಗುವನ್ನು ಹೆತ್ತಳು.

೨೨-೨೩. ಈ ಸಮಯವನ್ನು ತಿಳಿದು ರಾಮನು ರಾತ್ರಿಯಲ್ಲಿ ಪುಷ್ಪಕದ ಗಂಟೆ ಗೆಜ್ಜೆಗಳನ್ನೆಲ್ಲಾ ತೆಗೆದಿಟ್ಟು ಲಕ್ಷ್ಮಣನನ್ನು ಜೊತೆಯಲ್ಲಿ ಆ ಪುಷ್ಪಕದಲ್ಲಿ

ಪುಷ್ಪಕಸ್ಯ ತತಸ್ತಸ್ಮಿಂಸ್ಥಿತ್ವಾಕಾಶಪಥಾ ಯಯೌ ।
ವಾಲ್ಮೀಕೇರಾಶ್ರಮೇ ವೇಗಾತ್ಸಬಂಧುಸ್ತಂ ನನಾಮ ಸಃ ॥ ೨೩ ॥

ತತೋ ವಾಲ್ಮೀಕಿನಾ ವಿಪ್ರೈರ್ಮಿತ್ರೈರೇವ ರಘೂತ್ತಮಃ ।
ಜಾತಕರ್ಮಾದಿ ಸಂಸ್ಕಾರಾಂಶ್ಚಕಾರ ವಿಧಿಪೂರ್ವಕಂ ॥ ೨೪ ॥

ಸೀತಾಯಾಃ ಪುರತಃ ಪುತ್ರಾನನಮಾಲೋಕಯನ್ಮುದಾ ।
ದದೌ ದಾನಾನ್ಯನೇಕಾನಿ ಸ್ವವಸ್ತ್ರಾಭರಣಾನ್ಯಪಿ ॥ ೨೫ ॥

ಚಕಾರ ವಿಧಿವಚ್ಛ್ರಾದ್ಧಂ ಪುತ್ರಜನ್ಮಮಹೋತ್ಸವೇ ।
ದೇವದುಂದುಭಯೋ ನೇದುರ್ವವರ್ಷುಃ ಪುಷ್ಪವೃಷ್ಟಿಭಿಃ ॥ ೨೬ ॥

ಕುಳ್ಳಿರಿಸಿಕೊಂಡು ಆಕಾಶಮಾರ್ಗದಲ್ಲಿಯೇ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ಲಕ್ಷ್ಮಣನೊಡನೆ ಆ ವಾಲ್ಮೀಕಿಗೆ ನಮಸ್ಕರಿಸಿದನು.

೨೪. ಆಗ ರಾಮನು ವಾಲ್ಮೀಕಿಯೊಡನೆಯೂ ಮಿತ್ರರಾದ ಬ್ರಾಹ್ಮಣರೊಡನೆಯೂ, ಮಿತ್ರರೊಡನೆಯೂ, ಕೂಡಿಕೊಂಡು ಜಾತಕರ್ಮಾದಿ ಸಂಸ್ಕಾರಗಳನ್ನು ವಿಧಿವತ್ತಾಗಿ ಮಾಡಿದನು.

೨೫. ಆಗ ಸೀತೆಯು ಎದುರಿಗೇನೇ ಮಗುವಿನ ಮುಖವನ್ನು ನೋಡಿದನು. ಮತ್ತು ಬಹುವಾಗಿ ಸಂತೋಷಪಟ್ಟನು. ಆಗ ಅಲ್ಲಿದ್ದವರಿಗೆ ತನ್ನ ಮೈಮೇಲಿದ್ದ ಆಭರಣಗಳನ್ನೂ ವಸ್ತ್ರಗಳನ್ನೂ ಕೊಟ್ಟುದಲ್ಲದೆ ಅನೇಕ ದಾನಗಳನ್ನೂ ಕೊಟ್ಟನು.

೨೬. ಆ ಪುತ್ರಜನ್ಮದ ಅಂಗವಾದ ನಾಂದೀಶ್ರಾದ್ಧವನ್ನು ಆ ಮಹೋತ್ಸವದಲ್ಲಿ ಮಾಡಿದನು. ಆಗ ದೇವದುಂದುಭಿಗಳು ಮೊಳಗಿದುವು. ಅಂತರಿಕ್ಷದಿಂದ ಪುಷ್ಪವೃಷ್ಟಿಯು ಸುರಿಯಿತು.

ಸುರಾಸ್ಸೀತಾಂ ಶಿಶುಂ ರಾಮಂ ನನೃತುಃ ಖೇ ಸುರಸ್ತ್ರಿಯಃ ।
ನೇದುರ್ಜನಕವಾದ್ಯಾನಿ ನನೃತುರ್ವಾರಯೋಷಿತಃ ॥ ೨೭ ॥

ತುಷ್ಟುವುರ್ಮಾಗಧಾದ್ಯಾಶ್ಚ ಸೀತಾಂ ರಾಮಂ ಶಿಶುಂ ಮುಹುಃ ।
ಋಷಿಪತ್ನ್ಯಶ್ಶಿಶುಂ ಸೀತಾಂ ರಾಮಂ ದೀಪೈಸ್ಸುಭೂಷಿತಾಃ ॥ ೨೮ ॥

ಪೃಥಙ್ನೀರಾಜನಂ ಕೃತ್ವಾ ಜಗುರ್ಗೀತಂ ಹಿ ಸುಸ್ವರಂ ।
ವಸ್ತ್ರಾದ್ಯೈಃ ಪೂಜಯಾಮಾಸ ತಾಸ್ಸರ್ವಾ ರಘುನಂದನಃ ॥ ೨೯ ॥

ಸೀತಾರಾಮೌ ವಿದೇಹೋಽಪಿ ಪೂಜಯಾಮಾಸ ವಿಸ್ತರಾತ್ ।
ವಾಲ್ಮೀಕಿಸ್ತು ಕುಶೈಶ್ಶಾಂತಿಂ ಚಕಾರ ವಿಧಿನಾ ಶಿಶೋಃ ॥ ೩೦ ॥

ಶಾಂತ್ಯರ್ಥಂ ಪ್ರೋಕ್ಷಿತೋ ಯಸ್ಮಾತ್ಕುಶೈಸ್ತಸ್ಮಾತ್ಕುಶಃ ಸ್ಮೃತಃ ।
ವಾಲ್ಮೀಕಿನಾ ರಾಘವಾಗ್ರೇ ನಿಶ್ಚಿತಂ ಬಾಲಕಸ್ಯ ಹಿ ॥ ೩೧ ॥

---

೨೭. ಸೀತೆಯಮೇಲೆಯೂ, ಮಗುವಿನಮೇಲೆಯೂ, ರಾಮನಮೇಲೆಯೂ ದೇವತೆಗಳು ಹೂಮಳೆಯನ್ನು ಬಹುವಾಗಿ ಕರೆದರು. ಅಪ್ಸರ ಸ್ತ್ರೀಯರು ಕುಣಿದರು. ಜನಕನ ಕಡೆಯವರು ಉತ್ತಮವಾದ ವಾದ್ಯಗಳನ್ನು ಬಾಜಿಸಿದರು. ವೇಶ್ಯಾಸ್ತ್ರೀಯರು ನರ್ತನವನ್ನು ಮಾಡಿದರು.

೨೮–೨೯. ಸೀತೆಯನ್ನೂ, ಮಗುವನ್ನೂ, ರಾಮನನ್ನೂ ಹೊಗಳು ಭಟರು ಹೋಗಳಿದರು ಋಷಿಪತ್ನಿಯರು ಸೀತೆಗೂ, ರಾಮನಿಗೂ, ಮಗುವಿಗೂ, ಬೇರೆ ಬೇರೆಯಾಗಿ ಆರತಿಯನ್ನೆತ್ತಿದರು. ಮಂಗಳ ಗೀತಗಳನ್ನು ಹಾಡಿದರು. ರಾಮನು ಅವರೆಲ್ಲರಿಗೂ ವಸ್ತ್ರಾಭರಣಗಳನ್ನು ಕೊಟ್ಟು ಗೌರವಿಸಿದನು.

೩೦. ಜನಕನೂ ಕೂಡ ಸೀತಾರಾಮರಿಗೆ ವಸ್ತ್ರಗಳನ್ನು ಕೊಟ್ಟು ಗೌರವಿಸಿದನು. ವಾಲ್ಮೀಕಿಯು ದರ್ಭೆಯನ್ನು ತೆಗೆದುಕೊಂಡು ಮಗುವಿಗೆ ಶಾಸ್ತ್ರೋಕ್ತವಾಗಿ ಶಾಂತಿಯನ್ನು ಮಾಡಿದನು.

೩೧. ಆ ಮಗುವಿಗೆ ವಾಲ್ಮೀಕಿಯು ಕುಶದಿಂದ ಶಾಂತಿಯನ್ನು ಮಾಡಿ ಪ್ರೋಕ್ಷಿಸಿದುದರಿಂದ ಕುಶನೆಂದು ಹೆಸರು ಬಂದಿತು. ಈ ಹೆಸರನ್ನು ರಾಮನ ಎದುರಿಗೇನೇ ವಾಲ್ಮೀಕಿಯು ಆ ಮಗುವಿಗೆ ನಿಶ್ಚಯಿಸಿದನು.

ಏವಂ ನಾನಾಸಮುತ್ಸಾಹೈರ್ನೀತ್ವಾ ತತ್ರ ನಿಶಾಂ ಸುಖಂ ।
ತತ್ರಸ್ಥಾನ್ ಸಕಲಾನಾಹ ಮಮಾತ್ರ ಗಮನಸ್ಯ ಹಿ ॥ ೩೨ ॥

ಯಸ್ಮಾದ್ವಾರ್ತಾಂ ಬಹಿರ್ಗಚ್ಛೇದಾಶ್ರಮಾದಸ್ಯ ವೈ ಮುನೇಃ ।
ಸ ಮೇ ದಂಡ್ಯೋ ಭವೇದೇವ ಶತ್ರುರೂಪೋ ನ ಸಂಶಯಃ ॥ ೩೩ ॥

ಇತ್ಯುಕ್ತ್ವಾ ಸಕಲಾನ್ ಪೃಷ್ಟ್ವಾ ಮುನಿಂ ನತ್ವಾ ಪುನಃ ಪುನಃ ।
ಸೀತಾಮಾಮಂತ್ರ್ಯ ಶ್ರೀರಾಮೋ ಯಾನಂ ಭ್ರಾತ್ರಾರುರೋಹ ಸಃ ॥ ೩೪ ॥

ವಿಹಾಯಸಾ ಕ್ಷಣಾತ್ಪ್ರಾಪ ಸಾಕೇತಂ ರಘುನಂದನಃ ।
ಅವರುಹ್ಯ ವಿಮಾನಾತ್ಸ ಪೂರ್ವವನ್ನಿದ್ರಿತೋ ಗೃಹೇ ॥ ೩೫ ॥

೩೨–೩೩ ರಾಮನು ಅನೇಕವಾದ ಉತ್ಸವಗಳಿಂದ ಅಲ್ಲಿ ಆ ರಾತ್ರಿಯನ್ನು ಕಳೆದನು ಮತ್ತು ಅಲ್ಲಿರುವವರನ್ನೆಲ್ಲಾ ಕುರಿತು ನಾನು ಇಲ್ಲಿಗೆ ಬಂದಿರುವ ವಿಷಯವನ್ನು ಹೊರಗಿನವರಾರಿಗೂ ತಿಳಿಸಕೂಡದು. ಹಾಗೆ ತಿಳಿಸಿದರೆ ಅವರು ನನ್ನ ಶಿಕ್ಷೆಗೆ ಗುರಿಯಾಗುವರು. ಅವರು ನನಗೆ ಶತ್ರುರೂಪರು. ಇದರಲ್ಲಿ ಸಂಶಯವಿಲ್ಲ. ಎಂದನು.

೩೪. ರಾಮನು ಹೀಗೆಂದು ಹೇಳಿ ಎಲ್ಲರನ್ನೂ ನೋಡಿಕೊಂಡು ಆ ಋಷಿಗೆ ಮತ್ತೆ ನಮಸ್ಕರಿಸಿ ಸೀತೆಗೆ ಹೋಗುತ್ತೇನೆಂದು ಹೇಳಿ ಲಕ್ಷ್ಮಣನೊಡನೆ ಪುಷ್ಪಕವನ್ನು ಹತ್ತಿದನು.

೩೫. ಅವರಿಬ್ಬರೂ ಪುಷ್ಪಕದಲ್ಲಿ ಆಕಾಶಮಾರ್ಗದಿಂದಲೇ ಹೊರಟು ಅಯೋಧ್ಯೆಗೆ ಬಂದರು. ಮತ್ತು ವಿಮಾನದಿಂದ ಇಳಿದು ಮೊದಲಿನಂತೆ ಮನೆಯಲ್ಲಿ ನಿದ್ರೆಮಾಡುತ್ತಿದ್ದರು.

ಅಥ ರಾಮೋ ವಾಜಿಮೇಧಶತಂ ತತರ್ುಂ ಮನೋ ದಧೇ ।
ಕೃತ್ವಾ ಸ್ವರ್ಣಮಯೀಂ ಸೀತಾಂ ವಸ್ತ್ರಾಲಂಕಾರಭೂಷಿತಾಂ ॥ ೩೬ ॥

ಪಾಪಿನೀಂ ಮಲಿನಾಂ ದುಷ್ಟಾಂ ಭರ್ತೃನಿಂದಾ ಪರಾಯಣಾಂ ।
ಭರ್ತೃವಿದ್ವೇಷಿಣೀಂ ಕ್ರೂರಾಂ ಚೌರಕರ್ಮಣಿ ತತ್ಪರಾಂ ॥ ೩೭ ॥

ಭರ್ತಾರಂ ಘಾತುಮಿಚ್ಛಂತೀಂ ಸದಾ ಕಲಹಕಾರಿಣೀಂ ।
ಪರಭುಕ್ತಾಂ ಪಾಪರತಾಂ ಭರ್ತೃವಾಕ್ಯವಿಲೋಪಿನೀಂ ॥ ೩೮ ॥

ಸ್ವೇಚ್ಛಾವರ್ತಿನೀಂ ನಷ್ಟಾಂ ಗತಾಂ ನೀತಾಂ ಮೃತಾಂ ಸ್ತ್ರಿಯಂ ।
ತ್ಯಕ್ತ್ವಾ ಕುಶಮಯೀಂ ಕಾರ್ಯಾ ಪತ್ನೀ ವಿಪ್ರೈಃ ಸ್ವಕರ್ಮಸು ॥ ೩೯ ॥

---

೩೬. ಅನಂತರ ರಾಮನು ನೂರು ಅಶ್ವಮೇಧಯಾಗಗಳನ್ನು ಮಾಡಬೇಕೆಂದು ಮನಸ್ಸುಮಾಡಿದನು. ಇದನ್ನು ಮಾಡಬೇಕಾದರೆ ಹೆಂಡತಿಯು ಹತ್ತಿರದಲ್ಲಿರಬೇಕು. ಆದಕ್ಕೋಸ್ಕರ ಚಿನ್ನದಲ್ಲಿ ಸೀತೆಯ ಪ್ರತಿಮೆಯೊಂದನ್ನು ಮಾಡಿಸಿ ಅದನ್ನು ಸರ್ವಾಲಂಕಾರಗಳಿಂದಲೂ ಭೂಷಿಸಿದನು.

೩೭–೩೯. ಹೆಂಡತಿಯು ಪಾಪಿನಿಯಾಗಿದ್ದರೂ, ಮಲಿನಳಾಗಿದ್ದರೂ, (ಮುಟ್ಟಾಗಿದ್ದರೂ) ಗಂಡನನ್ನು ದೂಷಿಸುತ್ತಿದ್ದರೂ, ಗಂಡನನ್ನು ದ್ವೇಷಿಸುತ್ತಿದ್ದರೂ, ಕ್ರೂರಳಾಗಿದ್ದರೂ, ಕಳ್ಳತನಮಾಡುತ್ತಿದ್ದರೂ, ಗಂಡನನ್ನು ಕೊಲ್ಲಲು ಪ್ರಯತ್ನಪಡುತ್ತಿದ್ದರೂ, ಯಾವಾಗಲೂ ಜಗಳವಾಡುತ್ತಿದ್ದರೂ, ಪರರನ್ನು ಅನುಭವಿಸುತ್ತಿದ್ದರೂ, ಪಾಪಕಾರ್ಯದಲ್ಲಿ ಆಸಕ್ತಳಾಗಿದ್ದರೂ, ಗಂಡನು ಹೇಳಿದಂತೆ ಕೇಳದಿದ್ದರೂ, ಗಂಡನು ಹೇಳಿದಂತೆ ಕೇಳದೆ ತನ್ನ ಇಚ್ಛೆಯಂತೆ ನಡೆಯುತ್ತಿದ್ದರೂ, ಎಲ್ಲಿಯಾದರೂ ಕಾಣದಂತೆ ಹೊರಟುಹೋಗಿದ್ದರೂ, ಯಾರಾದರೂ ಹೊತ್ತುಕೊಂಡು ಹೋಗಿದ್ದರೂ, ಸತ್ತುಹೋಗಿದ್ದರೂ ಅಂತಹ ಸಂದರ್ಭದಲ್ಲಿ ಆಕೆಯನ್ನು ಬಿಟ್ಟು ಬ್ರಾಹ್ಮಣರಾದವರು ಶಾಸ್ತ್ರದ ಕೆಲಸಗಳಿಗೆ ದರ್ಭೆಯಿಂದ ಹೆಂಡತಿಯ ಪ್ರತಿಕೃತಿಯನ್ನು ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡು ಇಟ್ಟುಕೊಂಡರೇನೇ ಅವರ ಆ ಕರ್ಮವು ಸಿದ್ಧಿಯನ್ನು ಕೊಡುವುದು.

ಹೈಮೀ ಕಾರ್ಯಾ ಬಾಹುಜೈಶ್ಚ ವೈಶ್ಯೈಃ ಕಾರ್ಯಾ ತು ರಾಜತೀ ।
ಶೂದ್ರೈಃ ಕಾರ್ಯಾ ತಾಮ್ರಮಯೀ ಸ್ವಸ್ವಕರ್ಮಪ್ರಸಿದ್ಧಯೇ　　॥ ೪೦ ॥

ಅಥವಾ ಸರ್ವವರ್ಣೈಶ್ಚ ಕಾರ್ಯಾ ಪತ್ನೀ ತು ಕಾಂಚನೀ ।
ರಾಮೋಽಪಿ ಕೃತ್ವಾ ಸೌವರ್ಣೀಮಗ್ನಿಹೋತ್ರಂ ಚಕಾರ ಸಃ　　॥ ೪೧ ॥

ರಾವಣೇನ ಯದಾ ನೀತಾ ಸೀತಾ ಸಾ ದಂಡಕೇ ತದಾ ।
ಹೇಮಾಭಾವತ್ಕುಶಮಯೀ ಕೃತಾ ರಾಮೇಣ ಜಾನಕೀ　　॥ ೪೨ ॥

ಅನ್ಯೇ ಕುಶಮಯೀಂ ಪತ್ನೀಂ ವಿಧಾಯ ಗೃಹಮೇಧಿನಃ ।
ಅಗ್ನಿಹೋತ್ರಮುಪಾಸಂತೇ ನಿತ್ಯತ್ಯಾಗೋಽತಿಗರ್ಹಿತಃ　　॥ ೪೩ ॥

---

೪೦. ಕ್ಷತ್ರಿಯರಾದವರು ಹೆಂಡತಿಯಂತೆ ಚಿನ್ನದಿಂದ ಪ್ರತಿಮೆಯನ್ನು ಮಾಡಿಸಿಕೊಳ್ಳಬೇಕು. ವೈಶ್ಯರು ಬೆಳ್ಳಿಯಲ್ಲಿ ಆ ಪ್ರತಿಕೃತಿಯನ್ನು ಮಾಡಿಕೊಳ್ಳಬೇಕು. ಶೂದ್ರರು ತಾಮ್ರದ ಪ್ರತಿಕೃತಿಯನ್ನು ಮಾಡಿಕೊಳ್ಳಬೇಕು. ಆ ರೀತಿಯಾಗಿ ಮಾಡಿಸಿಕೊಂಡು ತಮ್ಮ ಕರ್ಮಗಳನ್ನು ಮಾಡಿದರೆ ಆ ಕರ್ಮಗಳು ಸಿದ್ಧಿಸುತ್ತವೆ.

೪೧. ಅದಿಲ್ಲದಿದ್ದರೆ ಯಾರುಬೇಕಾದರೂ ಚಿನ್ನದ ಪ್ರತಿಕೃತಿಯನ್ನು ಮಾಡಿಸಿಕೊಳ್ಳಬಹುದು ರಾಮನಾದರೋ ಚಿನ್ನದ ಮೂರ್ತಿಯನ್ನೇ ಮಾಡಿಸಿ ಹತ್ತಿರ ಇಟ್ಟುಕೊಂಡು ಅಗ್ನಿಹೋತ್ರವನ್ನು ಮಾಡಿದನು.

೪೨. ದಂಡಕಾರಣ್ಯದಲ್ಲಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದಾಗಲೂ ಚಿನ್ನವಿಲ್ಲದುದರಿಂದ ಆ ರಾಮನು ಅಗ್ನಿಹೋತ್ರಕ್ಕೋಸ್ಕರವಾಗಿ ದರ್ಭೆಯಿಂದಲೇ ಸೀತೆಯ ಪ್ರತಿಕೃತಿಯನ್ನು ಮಾಡಿಕೊಂಡಿದ್ದನು.

೪೩. ಗೃಹಸ್ಥರಾದವರೆಲ್ಲರೂ ಹೆಂಡತಿಯಿಲ್ಲದಿರುವಾಗ ದರ್ಭೆಯಲ್ಲಿ ಹೆಂಡತಿಯ ಪ್ರತಿಕೃತಿಯನ್ನು ಮಾಡಿಕೊಂಡು ಅಗ್ನಿಹೋತ್ರವನ್ನು ಮಾಡುತ್ತಾರೆ. ನಿತ್ಯವಾದ ತ್ಯಾಗವು ಬಹು ನಿಂದಿತವು.

ವ್ಯಭಿಚಾರವತೀ ಪಾಪಾ ಭರ್ತೃವಿದ್ವೇಷಿಣೀ ತಥಾ ।
ಅಧಾನೇ ಸಾ ಪರಿತ್ಯಾಜ್ಯಾ ನ ವಾ ತ್ಯಾಜ್ಯಾ ಮತಾಂತರಾತ್ ॥ ೪೪ ॥

ಪಕ್ಷೇ ಪಕ್ಷೇ ನವಮ್ಯಾಂ ಹಿ ಸ್ನಾನಂ ಹ್ಯವಭೃಥಾಭಿಧಂ ।
ಕರ್ತುಂ ನಿಶ್ಚಿತವಾನ್ ರಾಮಸ್ತದಾ ವಿಪ್ರೈಃ ಪುರೋಧಸಾ ॥ ೪೫ ॥

ಭಾಗೀರಥ್ಯುತ್ತರೇ ತೀರೇ ಯಜ್ಞಭೂಮಿಂ ಚಕಾರ ಸಃ ।
ಆಪ್ರಯಾಗಾನ್ಮುದ್ಗಲಸ್ಯಾಶ್ರಮೋ ಯಾವಚ್ಚ ದಕ್ಷಿಣೇ ॥ ೪೬ ॥

ಜಾಹ್ನವ್ಯುತ್ತರತಸ್ತಾವಚ್ಚಕಾರ ಸ್ವರ್ಣಲಾಂಗಲೈಃ ।
ಯಸ್ಯಾಶ್ರಮಸ್ಯ ಸಾನ್ನಿಧ್ಯೇ ಭಾಗೀರಥ್ಯಸ್ತ್ಯುದಗ್ವಹಾ ॥ ೪೭ ॥

---

೪೪. ಹೆಂಡತಿಯು ವ್ಯಭಿಚಾರಿಣಿಯಾದರೂ, ಪಾಪಿನಿಯಾದರೂ, ಗಂಡನನ್ನು ದ್ವೇಷಿಸುತ್ತಿದ್ದರೂ, ಆಕೆಯನ್ನು ಆಧಾನಕರ್ಮದಲ್ಲಿ ಬಿಟ್ಟು ಬಿಡಬೇಕು. ಅಂತಹವಳಿಗೆ ಪ್ರಾಯಶ್ಚಿತ್ತವನ್ನು ಮಾಡಿ ಪರಿಗ್ರಹಿಸಬಹುದೆಂದೂ ಕೆಲವರು ಹೇಳುತ್ತಾರೆ.

೪೫. ಪ್ರತಿ ಪಕ್ಷದ ನವಮಿಯ ದಿವಸವೂ ಅವಭೃತಸ್ನಾನವನ್ನು ಮಾಡಲು ರಾಮನು ಬ್ರಾಹ್ಮಣರಿಂದಲೂ, ಪುರೋಹಿತರಿಂದಲೂ ಕೂಡಿಕೊಂಡು ನಿಶ್ಚಯಿಸಿಕೊಂಡನು.

೪೬. ಅಂತೆಯೇ ಭಾಗೀರಥಿಯ ಉತ್ತರ ದಡದಲ್ಲಿ ಯಜ್ಞಭೂಮಿಯನ್ನು ಮಾಡಿಸಿದನು. ಆ ಯಜ್ಞಭೂಮಿಯು ಪ್ರಯಾಗದಿಂದ ಮೊದಲುಮಾಡಿ ಕೊಂಡು ಮುದ್ಗಲನ ಆಶ್ರಮದವರೆಗೂ ಸಿದ್ಧವಾಯಿತು.

೪೭. ಆ ಜಾಹ್ನವಿಯ ಬಲದಡದಲ್ಲಿ ಉದ್ದಕ್ಕೂ ಕೂಡ ಯಜ್ಞಭೂಮಿ ಯನ್ನು ಚಿನ್ನದ ನೇಗಿಲಿನಿಂದ ಸರಿಪಡಿಸಿದನು. ಆ ಮುದ್ಗಲನ ಆಶ್ರಮದ ಬಳಿಯಲ್ಲಿ ಭಾಗೀರಥಿಯು ಉತ್ತರವಾಹಿನಿಯಾಗಿ ಹರಿಯುತ್ತಿರುವುದು.

ರುಕ್ಮಮಯ್ಯಾಥ ಜಾನಕ್ಯಾ ಯಜ್ಞಾರಂಭಂ ಚಕಾರ ಸಃ ।
ಅಜ್ಞಾನದೃಗ್ಭ್ಯೋ ದ್ರಷ್ಟುಂ ವೈ ಚಕಾರ ಸ್ವರ್ಣನಿರ್ಮಿತಾಂ ॥ ೪೮ ॥

ವಾಮಾಂಗಸ್ಥಾಂ ಗುಪ್ತರೂಪಾಂ ಜ್ಞಾನದೃಗ್ಭ್ಯಶ್ಚ ಸಾತ್ವಿಕೀಂ ।
ಬಿಭ್ರತ್ಸದೈವ ಶ್ರೀರಾಮೋ ಜಾನಕೀಂ ಲೋಕಮಾತರಂ ॥ ೪೯ ॥

ಯಜ್ಞಾಂತೇ ಸ್ವರ್ಣಜಾಂ ಸೀತಾಂ ದದೌ ಸ್ವಗುರವೇ ಪ್ರಭುಃ ।
ಏವಂ ಯಜ್ಞಶತೇಷ್ವತ್ರ ಗುರವೇ ಶತಮೂರ್ತಯಃ ॥ ೫೦ ॥

ಯಾಸ್ಸಮರ್ಪಿತಾ ರಾಮೇಣ ತಾಸಾಂ ದಾನಫಲೇನ ಹಿ ।
ಷೋಡಶಸ್ತ್ರೀಸ್ಸಹಸ್ರೇಭ್ಯಶ್ಚೋರ್ಧ್ವಂ ಸ್ತ್ರೀಣಾಂ ಶತಂ ಪುನಃ ॥ ೫೧ ॥

---

೪೮. ಅನಂತರ ರಾಮನು ಚಿನ್ನದ ಪ್ರತಿಕೃತಿಯ ಸೀತೆಯನ್ನು ಇಟ್ಟು ಕೊಂಡು ಯಜ್ಞಕ್ಕೆ ಮೊದಲು ಮಾಡಿದನು. ಆ ಪ್ರತಿಕೃತಿಯು ಯಾರು ಅಜ್ಞಾನದಿಂದ ರಾಮನಲ್ಲಿ ಸೇರಿಕೊಂಡಿರುವ ಸೀತೆಯನ್ನು ನೋಡಲಾರರೋ ಅವರು ನೋಡುವುದಕ್ಕೋಸ್ಕರವಾಗಿದ್ದಿತು.

೪೯. ಒಬ್ಬರಿಗೂ ಕಾಣದಂತೆ ಜ್ಞಾನಿಗಳಿಗೆ ಮಾತ್ರ ಗೋಚರಳಾಗುವ ಸಾತ್ವಿಕರೂಪಳಾದ ಲೋಕಮಾತೆಯಾದ ಆ ಜಾನಕಿಯನ್ನು ಶ್ರೀರಾಮನು ತನ್ನ ಎಡಭಾಗದಲ್ಲಿ ಯಾವಾಗಲೂ ಧರಿಸಿಕೊಂಡಿರುವನು.

೫೦. ಯಜ್ಞವೆಲ್ಲವೂ ಮುಗಿದಮೇಲೆ ಆ ಸ್ವರ್ಣಮಯವಾದ ಸೀತೆಯ ಪ್ರತಿಕೃತಿಯನ್ನು ರಾಮನು ತನ್ನ ಗುರುವಾದ ವಸಿಷ್ಠನಿಗೆ ದಾನಮಾಡಿದನು. ಈ ರೀತಿಯಾಗಿ ನೂರು ಯಜ್ಞಗಳಲ್ಲಿಯೂ ನೂರು ಮೂರ್ತಿಗಳನ್ನು ಗುರುವಿಗೆ ಕೊಟ್ಟನು.

೫೧-೫೨. ರಾಮನು ಈ ರೀತಿಯಾಗಿ ಚಿನ್ನದ ಸ್ತ್ರೀಪ್ರತಿಮೆಯನ್ನು ದಾನಮಾಡಿದ ಫಲದಿಂದಲೇ ಮುಂದೆ ಕೃಷ್ಣಾವತಾರದಲ್ಲಿ ಹದಿನಾರುಸಾವಿರ

ದ್ವಾರಕಾಯಾಂ ಕೃಷ್ಣರೂಪೋ ವಿವಾಹೇನೋದ್ವಹಿಷ್ಯತಿ ।
ಪ್ರತಿಯಜ್ಞೇ ಶ್ಯಾಮಕರ್ಣಮಶ್ವಂ ರಾಮೋ ಮುಮೋಚ ಹ ॥ ೫೨ ॥

ಚತುರ್ದಿನೈಶ್ಚತುರ್ದಿಕ್ಷು ಪರಿಕ್ರಮ್ಯ ಯಯೌ ಹಯಃ ।
ಏವಂ ಸರ್ವೇಷು ಯಾಗೇಷು ಯಯೌ ವಾಜೀ ಪೃಥಕ್ ಜವಾತ್॥ ೫೩ ॥

ಪುಷ್ಪಕಸ್ಥಸ್ಸಶತ್ರುಘ್ನೋ ಹಯರಕ್ಷಾಂ ಚಕಾರ ವೈ ।
ಏವಂ ಸದಾ ಯಜ್ಞವಾಟೇ ವಿರೇಜೇ ದೀಕ್ಷಯಾ ಪ್ರಭುಃ ॥ ೫೪ ॥

ನವನವತಿಯಜ್ಞಾಃ ಶ್ರೀರಾಮೇಣೈವ ಕೃತಾಶ್ಶುಭಾಃ ।
ಚರಮಸ್ಯಾಪಿ ಪ್ರಾರಂಭಂ ರಾಮೋ ಯಜ್ಞಸ್ಯ ಸೋಕರೋತ್ ॥ ೫೫ ||

ಹೆಂಗಸರನ್ನು ಮದುವೆಮಾಡಿಕೊಂಡನು. ಒಂದೊಂದು ಯಜ್ಞದಲ್ಲಿಯೂ ರಾಮನು ಶ್ಯಾಮಕರ್ಣವುಳ್ಳ ಕುದುರೆಗಳನ್ನು ಬಿಡುತ್ತಿದ್ದನು.

೫೩. ಕುದುರೆಯು ನಾಲ್ಕುದಿನಗಳಲ್ಲಿಯೇ ನಾಲ್ಕುದಿಕ್ಕುಗಳನ್ನೂ ಸುತ್ತಿಕೊಂಡು ಬರುತ್ತಿದ್ದಿತು. ಈ ರೀತಿಯಾಗಿ ಪ್ರತಿಯಜ್ಞದಲ್ಲಿಯೂ ಒಂದೊಂದು ಕುದುರೆಯು ಬೇರೆ ಬೇರೆಯಾಗಿ ಹೋಗುತ್ತಿದ್ದಿತು.

೫೪. ಶತ್ರುಘ್ನನು ಪುಷ್ಪಕದಲ್ಲಿ ಕುಳಿತು ಹೋಗುತ್ತಾ ಕದುರೆಯನ್ನು ರಕ್ಷಿಸುತ್ತಿದ್ದನು. ಈ ರೀತಿಯಾಗಿ ಪ್ರಭುವಾದ ರಾಮನು ದೀಕ್ಷೆಯಿಂದಲೇ ಯಜ್ಞಮಂಟಪದಲ್ಲಿ ಯಾವಾಗಲೂ ಪ್ರಕಾಶಿಸುತ್ತಿದ್ದನು.

೫೫–೫೬. ರಾಮನು ಈ ರೀತಿಯಾಗಿ ತೊಂಭತ್ತೊಂಭತ್ತು ಯಾಗಗಳನ್ನು ತೊಂದರೆಯಿಲ್ಲದಂತೆ ಸರಾಗವಾಗಿ ಮಾಡಿದನು. ಅನಂತರ ರಾಮನು ನೂರನೆಯದಾದ ಕೊನೆಯ ಯಜ್ಞಕ್ಕೆ ಪ್ರಾರಂಭಿಸಿದನು. ಶ್ರೀರಾಮನು ಪ್ರಯಾಗದಿಂದ ಮೊದಲುಕೊಂಡು ಮುದ್ಗಲ ಆಶ್ರಮದ ಕಡೆಗೆ ಒಂದೊಂದು

ಗಂಗಾಯಾ ದಕ್ಷಿಣೇ ತೀರೇ ಮುದ್ಗಲಸ್ಯಾಶ್ರಮೋಽಸ್ತಿ ಹಿ ।
ಯತ್ರ ತಸ್ಯಾಂತಿಕೇ ಗಂಗೋದಕ್ತೀರೇ ಚ ಉದಗ್ವಹೇ ॥ ೫೬ ॥

ದಿನಾನಿ ದಶ ವಾಲ್ಮೀಕಿರ್ನಿಶಾಯಾಂ ಸಂಧ್ಯಯೋರಪಿ ।
ಶ್ರೀರಾಮರಕ್ಷಯಾ ಚಕ್ರೇ ಬಾಲಕಾಯಾಭಿಮಂತ್ರಣಂ ॥ ೫೭ ॥

ಕುಶಂ ನಾಮ ತದಾ ಚಕ್ರೇ ಮುನಿರೇಕಾದಶೇ ದಿನೇ ।
ಚಕಾರ ಸರ್ವಸಂಸ್ಕಾರಾನ್ ಮುನಿಶ್ಶ್ರೀರಾಘವಾಜ್ಞಯಾ ॥ ೫೮ ॥

ಏವಂ ಸ ಬಾಲಕಸ್ತತ್ರ ವವೃಧೇ ಮಾತೃಲಾಲಿತಃ ।
ಜನಕಶ್ಚ ಸುಮೇಧಾ ಚ ನಾನಾವಸ್ತ್ರೈಸ್ಸುಶೋಭನೈಃ ॥ ೫೯ ॥

ಯಾಗಮಂಟಪವನ್ನು ಮಾಡುತ್ತಾ ಕೊನೆಗೆ ಮುದ್ಗಲಾಶ್ರಮದ ಬಳಿಯಲ್ಲಿ ಗಂಗೆಯು ಉತ್ತರವಾಹಿನಿಯಾಗಿರುವಲ್ಲಿ ಕೊನೆಯದಾದ ಯಜ್ಞಕ್ಕೆ ಮಂಟಪವನ್ನು ಮಾಡಿಸಿದನು.

೫೭. ಇತ್ತ ವಾಲ್ಮೀಕಿಯು ಸೀತೆಗೆ ಮಗುವು ಹುಟ್ಟಿದಂದಿನಿಂದಲೂ ಮೊದಲುಗೊಂಡು ರಾತ್ರಿಯಲ್ಲಿಯೂ, ಸಂಧ್ಯಾಕಾಲಗಳಲ್ಲಿಯೂ ರಾಮರಕ್ಷಾಸ್ತೋತ್ರವನ್ನು ಹೇಳಿ ಆ ಮಗುವಿಗೆ ಅಭಿಮಂತ್ರಿಸುತ್ತಿದ್ದನು.

೫೮. ಆನಂತರ ರಾಮನು ಹೋಗುವಾಗ ಅಪ್ಪಣೆಮಾಡಿದ್ದಂತೆ ಹನ್ನೊಂದನೆಯ ದಿನದಲ್ಲಿ ಆ ಮಗುವಿಗೆ ಕುಶನೆಂದು ಹೆಸರನ್ನಿಟ್ಟನು. ಅನಂತರವೂ ಕೂಡ ರಾಮನ ಅಪ್ಪಣೆಯಂತೆ ಆ ಮಗುವಿಗೆ ಎಲ್ಲಾ ಸಂಸ್ಕಾರವನ್ನೂ ಮಾಡಿದನು.

೫೯. ಈ ರೀತಿಯಾಗಿ ಆ ಬಾಲಕನು ಸಂಸ್ಕಾರವನ್ನು ಹೊಂದಿ ತಾಯಿಯಿಂದ ಲಾಲಿತನಾಗಿ ವೃದ್ಧಿಹೊಂದಿದನು. ಜನಕನೂ ಸುಮೇಧೆಯೂ ಅಲ್ಲಿದ್ದುಕೊಂಡು ಉತ್ತಮವಾದ ಬಟ್ಟೆಗಳಿಂದಲೂ, ಒಡವೆಗಳಿಂದಲೂ ಆ ಮಗುವನ್ನು ಅಲಂಕರಿಸುತ್ತಿದ್ದರು.

ಶೋಭಯಾಮಾಸ ದೌಹಿತ್ರಂ ನಾನಾವ್ಯಾಘ್ರನಖಾದಿಭಿಃ ।
ಬಾಲೋಽಪಿ ರಂಜಯಾಮಾಸ ಸ್ವಕ್ರೀಡಾಭಿರ್ವಿದೇಹಜಾಂ ॥ ೬೦ ॥

ಏಕದಾ ನಿದ್ರಿತಂ ಪ್ರೇಂಖೇ ದೃಷ್ಟ್ವಾ ಬಾಲಂ ಮುನೇಃ ಪುರಃ ।
ಅನ್ಯಕರ್ಮಣಿ ವ್ಯಗ್ರಾಂ ಚ ಸಖೀಂ ಸ್ವೀಯಾಂ ಸ್ವಮಾತರಂ ॥ ೬೧ ॥

ಜನಕಂ ಚಾಪಿ ಸಾ ಸೀತಾ ದೃಷ್ಟ್ವಾ ಸರ್ವಾನ್ ಬಹಿರ್ಗತಾನ್ ।
ಆಶ್ವಿನೇ ರವಿವಾರೇ ಚ ನದ್ಯಾಂ ಸ್ನಾತುಂ ಸಮುದ್ಯತಾ ॥ ೬೨ ॥

ಮುನಿಂ ತಂ ಬಾಲರಕ್ಷಾಯಾಂ ಕೃತ್ವಾಥ ತಮಸಾಂ ಯಯೌ ।
ದಾಸ್ಯಾ ಮಾರ್ಗೇಣ ಗಚ್ಛಂತೀ ದದರ್ಶ ಪಥಿ ವಾನರೀಂ ॥ ೬೩ ॥

---

೬೦. ಮತ್ತು ಅವರು ಆ ಮಗುವಿಗೆ ಬಾಲರಕ್ಷಾರ್ಥವಾಗಿ ಹುಲಿಯುಗುರು ಮುಂತಾದುವನ್ನು ಕಟ್ಟಿದ್ದರು. ಆ ಮಗುವೂ ಕೂಡ ತನ್ನ ಆಟಗಳಿಂದ ಸೀತೆಯನ್ನು ಸಂತೋಷಪಡಿಸುತ್ತಿದ್ದಿತು.

೬೧-೬೨. ಒಂದುಸಾರಿ ಮಗುವು ತೊಟ್ಟಲಿನಲ್ಲಿ ನಿದ್ರಿಸುತ್ತಿದ್ದಿತು ವಾಲ್ಮೀಕಿಯು ಅದರ ಎದುರಿನಲ್ಲಿಯೇ ಕುಳಿತಿದ್ದನು. ಆಗ ಸೀತೆಯ ಸಖಿಯೂ ತಾಯಿಯೂ, ಬೇರೆ ಕೆಲಸದಲ್ಲಿದ್ದರು. ಜನಕನೂ ಬೇರೆಯ ಕೆಲಸದಮೇಲಿದ್ದನು. ಆದ್ದರಿಂದ ಇವರೆಲ್ಲರೂ ಹೊರಗೆಲ್ಲಿಗೋ ಹೋಗಿದ್ದರು. ಇದನ್ನು ಸೀತೆಯು ನೋಡಿದಳು. ಆ ದಿನ ಆಶ್ವಯುಜಮಾಸದ ಭಾನುವಾರವಾಗಿದ್ದಿತು. ಆದಿನ ನದಿಯ ಸ್ನಾನವು ಶ್ರೇಷ್ಠವೆಂದು ತಿಳಿದು ಸ್ನಾನಕ್ಕೆ ಹೋಗಲು ಆ ಸೀತೆಯು ಪ್ರಯತ್ನಿಸಿದಳು.

೬೩. ವಾಲ್ಮೀಕಿಗೆ ಆ ಮಗುವನ್ನು ನೋಡಿಕೊಳ್ಳುವಂತೆ ಹೇಳಿ ದಾಸಿಯೊಡನೆ ತಮಸಾನದಿಗೆ ಸ್ನಾನಕ್ಕೆ ಹೊರಟಳು. ದಾಸಿಯೊಡನೆ ದಾರಿಯಲ್ಲಿ ಹೋಗುತ್ತ ಒಂದು ಹೆಣ್ಣು ಕಪಿಯನ್ನು ನೋಡಿದಳು.

ಕಟಿಸ್ಕಂಧಮಸ್ತಕೇಷು ಬಿಭ್ರತೀಂ ಪಂಚಬಾಲಕಾನ್ ।
ತಾಂ ದೃಷ್ಟ್ವಾ ಸ್ವಶಿಶುಂ ಸ್ಮೃತ್ವಾ ಚಿಂತಯಜ್ಜಾನಕೀ ಹೃದಿ ॥ ೬೪ ॥

ತಿರ್ಯಗ್ಯೋನೌ ಜನ್ಮವತ್ಯಾ ವಾನರ್ಯಾ ಬಾಲಕಾನ್ಯಹೋ ।
ಸ್ನೇಹಾತ್ಸಹೈವ ನೀಯಂತೇ ಧಿಙ್ಮಾಂ ಮಾನವದೇಹಜಾಂ ॥ ೬೫ ॥

ಏಕಂ ಚಾಪಿ ನಿಜಂ ಬಾಲಂ ತ್ಯಕ್ತ್ವಾ ಗೇಹೇದ್ಯ ಗಮ್ಯತೇ ।
ಮಯಾ ವಿಮೂಢಯಾ ಸ್ನಾತುಂ ಭುವ್ಯತ್ರ ಕ್ಷಣಿಕಂ ಸುಖಂ ॥ ೬೬ ॥

ಇತಿ ಧಿಕ್ಕೃತ್ಯ ಚಾತ್ಮಾನಂ ಪರಿವೃತ್ಯಾಶ್ರಮಂ ಯಯೌ ।
ಏತಸ್ಮಿನ್ನಂತರೇ ಗೇಹೇ ವಾಲ್ಮೀಕಿರ್ಮುನಿಪುಂಗವಃ ॥ ೬೭ ॥

ಗತಸ್ಸಲಘುಶಂಕಾರ್ಥಂ ಕಾರ್ಯಾರ್ಥಂ ವಟವೋ ಗತಾಃ ।
ಗೃಹೀತ್ವಾ ಸಾ ಕುಶಂ ಪ್ರೇಂಖಾದ್ಯಯೌ ಸೀತಾ ಬಹಿಃ ಪುನಃ ॥ ೬೮ ॥

---

೬೪. ಆ ಕಪಿಯು ನಡು ಕತ್ತುಗಳು ತಲೆ ಇವುಗಳಮೇಲೆ ಐದು ಮರಿಗಳನ್ನು ಎತ್ತಿಕೊಂಡು ಹೋಗುತ್ತಿದ್ದಿತು. ಆ ಕಪಿಯನ್ನೂ ಅದರ ಮರಿಗಳನ್ನೂ ನೋಡಿ ಜಾನಕಿಯು ಮನಸ್ಸಿನಲ್ಲಿ ಇಂತೆಂದು ಯೋಚಿಸಿದಳು.

೬೫. ಕೀಳುಜನ್ಮದಲ್ಲಿ ಜನ್ಮವನ್ನು ತಾಳಿದ್ದರೂ ಈ ಕಪಿಯು ತನ್ನ ಮರಿಗಳನ್ನು ಅವುಗಳಲ್ಲಿರುವ ಸ್ನೇಹದಿಂದ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದೆ. ನಾನು ಉತ್ತಮವಾದ ಮಾನವಜನ್ಮದಲ್ಲಿ ಹುಟ್ಟಿದ್ದರೂ ಕೂಡ ಅದಕ್ಕಿಂತಲೂ ಕೀಳಾದೆನಲ್ಲಾ ! ನನ್ನ ಜನ್ಮವು ವ್ಯರ್ಥವು. ನನಗೆ ಧಿಕ್ಕಾರವಿರಲಿ.

೬೬. ನಾನು ಉತ್ತಮವಾದ ದೇಹವನ್ನು ಹೊಂದಿದ್ದರೂ ಇರುವುದೊಂದು ಮಗುವನ್ನು ಬಿಟ್ಟು ಒಬ್ಬಳೇನೇ ಸ್ನಾನಕ್ಕೆ ಹೋಗುತ್ತಿರುವೆನಲ್ಲಾ ! ನಾನು ಮೂಢಳು. ಈ ಭೂಮಿಯಲ್ಲಾದರೋ ಸುಖವೆಂಬುದು ಕ್ಷಣಿಕವಾದುದು.

೬೭–೬೮. ಹೀಗೆಂಬುದಾಗಿ ತನ್ನನ್ನು ತಾನೇ ನಿಂದಿಸಿಕೊಂಡು ಹಿಂದಿರುಗಿ ಆಶ್ರಮಕ್ಕೆ ಹೋದಳು. ಆ ಕಾಲದಲ್ಲಿ ಮುನಿಶ್ರೇಷ್ಠನಾದ ವಾಲ್ಮೀಕಿಯು ಲಘುಶಂಕಗೋಸ್ಕರ ಹೊರಗೆ ಹೋಗಿದ್ದನು. ಶಿಷ್ಯರೂ ಕೆಲಸಕ್ಕೋಸ್ಕರ ಹೊರಗೆ ಹೋಗಿದ್ದರು. ಈ ರೀತಿಯಾಗಿ ಅವರೊಬ್ಬರೂ ಇಲ್ಲದಿರುವಾಗ ಸೀತೆಯು ಆ ಮಗುವನ್ನು ತೊಟ್ಟಿಲಿನಿಂದ ಎತ್ತಿಕೊಂಡು ಮತ್ತೆ ಹೊರಟುಹೋದಳು.

ದಾಸ್ಯಾ ಸಹ ನದೀಂ ಗತ್ವೋಷಸಿ ಸ್ನಾನಂ ಚಕಾರ ವೈ ।
ಅದೃಷ್ಟ್ವಾಥ ಮುನಿರ್ಬಾಲಂ ದೀರ್ಘಂ ನಿಶ್ವಸ್ಯ ವೈ ಮುಹುಃ ॥ ೬೯ ॥

ಸೀತಾಶಾಪಭಯಾಚ್ಚಕ್ರೇ ಲವೈರ್ಬಾಲಂ ಸ ಪೂರ್ವವತ್ ।
ತಪೋಬಲೇನ ತಂ ಪ್ರೋಕ್ಷ್ಯ ಜೀವಯಾಮಾಸ ವೇಗತಃ ॥ ೭೦ ॥

ಜ್ಞಾನದೃಷ್ಟ್ಯಾ ವ್ಯಗ್ರತಯಾ ಮುನಿನಾ ನಾವಲೋಕಿತಂ ।
ತತಸ್ಸೀತಾಪಿ ಸುಸ್ನಾತಾ ದಾಸ್ಯಾ ಗೇಹಂ ಶನೈರ್ಯಯೌ ॥ ೭೧ ॥

ಕಟ್ಯಾಂ ಗೃಹೀತ್ವಾ ತಂ ಬಾಲಂ ರುಕ್ಮನೂಪುರನಿಸ್ಸ್ವನಾ ।
ಪ್ರೇಂಖೇನ್ಯಂ ಬಾಲಕಂ ದೃಷ್ಟ್ವಾ ಮುನಿಂ ಪಪ್ರಚ್ಛ ಜಾನಕೀ ॥ ೭೨ ॥

---

೬೯. ದಾಸಿಯೊಡನೆ ಆ ತಮಸಾನದಿಗೆ ಹೋಗಿ ಸ್ನಾನವನ್ನು ಮಾಡಿದಳು. ಲಘುಶಂಕೆಯನ್ನು ಮುಗಿಸಿಕೊಂಡು ವಾಲ್ಮೀಕಿಯು ಒಳಗೆ ಬಂದನು. ಅಲ್ಲಿ ಮಗುವನ್ನು ಕಾಣದೆ ನಿಟ್ಟುಸಿರನ್ನು ಬಿಟ್ಟನು.

೭೦. ಆಗ ಅವನು ಸೀತೆಯು ಎಲ್ಲಿ ಶಾಪವನ್ನು ಕೊಡುವಳೋ ಎಂದು ಆ ಸೀತೆಯ ಶಾಪದ ಭಯದಿಂದ ಲವವೆಂಬ (ದಾನ್ಯದಿಂದ ಇದನ್ನು ಒಂದು ಬಗೆಯ ಕಡಲೆಯನ್ನುತ್ತಾರೆ) ಒಂದು ಮಗುವನ್ನೇ ಮೊದಲಿನಂತೆ ಮಾಡಿ ಅಲ್ಲಿಟ್ಟು ತನ್ನ ತಪೋಬಲದಿಂದ ಅದಕ್ಕೆ ಜೀವಬರುವಂತೆ ಮಾಡಿದನು.

೭೧. ಆಗ ಅವಸರವಾದುದರಿಂದ ವಾಲ್ಮೀಕಿಯು ಸೀತೆಯು ಮಗುವನ್ನು ಎತ್ತಿಕೊಂಡು ಹೋಗಿರುವುದನ್ನು ಜ್ಞಾನದೃಷ್ಟಿಯಿಂದ ನೋಡಲಿಲ್ಲ. ಅನಂತರ ಸೀತೆಯು ಸ್ನಾನಮಾಡಿಕೊಂಡು ನಿಧಾನವಾಗಿ ಮನೆಗೆ ಬಂದಳು.

೭೨. ಆಕೆಯು ನಡುವಿನಮೇಲೆ ಮಗುವನ್ನು ಎತ್ತಿಕೊಂಡು ಕಾಲುಬಳೆಗಳನ್ನು ಸದ್ದುಮಾಡುತ್ತ ಮಗುವನ್ನು ಬಿಡಲು ತೊಟ್ಟಲಿನ ಬಳಿಗೆ ಬಂದು ಆ ತೊಟ್ಟಲಿನಲ್ಲಿ ಮತ್ತೊಂದು ಮಗುವನ್ನು ನೋಡಿ ಜಾನಕಿಯು ಋಷಿಯನ್ನು ಕುರಿತು ಇಂತೆಂದು ಕೇಳಿದಳು.

ಪ್ರೇಂಖೇ ಕಸ್ಯಾಃಶ್ಶಿಶುಶ್ಚಾಯಂ ಸೋಽಪಿ ದೃಷ್ಟ್ವಾ ತದಾ ಕುಶಂ |
ಕಟಿಪ್ರದೇಶೇ ಜಾನಕ್ಯಾ ವಿಸ್ಮಯಂ ಪರಮಂ ಗತಃ || ೭೩ ||

ನಮಸ್ಕೃತ್ಯ ತದಾ ಸೀತಾಂ ಸರ್ವಂ ವೃತ್ತಂ ನ್ಯವೇದಯತ್ |
ಅಂಕೇ ನಿಧಾಯ ತಂ ಬಾಲಂ ಸೀತಾಯಾ ಅಬ್ರವೀನ್ಮುನಿಃ || ೭೪ ||

ಪ್ರಸಾದಾನ್ಮಮ ವೈದೇಹಿ ದ್ವಿತೀಯೋಽಯಂ ಸುತಸ್ತವ |
ಭವತ್ವದ್ಯ ಲವೋ ನಾಮ್ನಾ ಲವೈರ್ಯಸ್ಮಾದ್ವಿನಿರ್ಮಿತಃ || ೭೫ ||

ವಾಲ್ಮೀಕೇರ್ವಚನಾತ್ಸಾಪಿ ಶಿಶುಂ ಜಗ್ರಾಹ ಜಾನಕೀ |
ಮುನಿಸ್ತಯೋರ್ನಾಮ ಚಕ್ರೇ ಕುಶೋ ಜ್ಯೇಷ್ಠೋಽನುಜೋ ಲವಃ || ೭೬ ||

---

೭೩. ಎಲೈ ಋಷಿಯೇ ! ತೊಟ್ಟಿಲಿನಲ್ಲಿರುವ ಮಗುವು ಯಾರದು ? ಇಂತೆಂದು ಕೇಳಲು ವಾಲ್ಮೀಕಿಯು ಸೀತೆಯ ನಡುವಿನಮೇಲೆ ಕುಶನಿರುವುದನ್ನು ನೋಡಿ ಬಹುವಾಗಿ ಆಶ್ಚರ್ಯಗೊಂಡನು.

೭೪. ಒಡನೆಯೇ ಸೀತೆಗೆ ನಮಸ್ಕರಿಸಿ ನಡೆದ ವಿದ್ಯಮಾನವನ್ನೆಲ್ಲಾ ತಿಳಿಸಿದನು. ಆಗ ವಾಲ್ಮೀಕಿಯು ಆ ಮಗುವನ್ನು ಸೀತೆಯ ತೊಡೆಯಮೇಲಿಟ್ಟು ಇಂತೆಂದನು.

೭೫. ಎಲೈ ವೈದೇಹಿಯೇ ! ನಿನ್ನ ಅನುಗ್ರಹದಿಂದ ನಿನಗೆ ಇದೂ ಒಂದು ಎರಡನೆಯ ಮಗುವಾಗಿರಲಿ. ಇದನ್ನು ಲವದಿಂದ ನಾನು ನಿರ್ಮಾಣ ಮಾಡಿದುದರಿಂದ ಇದಕ್ಕೆ ಲವನೆಂದು ಹೆಸರಾಗಲಿ.

೭೬. ವಾಲ್ಮೀಕಿಯ ಮಾತಿನಂತೆ ಸೀತೆಯು ಆ ಮಗುವನ್ನು ತನ್ನ ಮಗುವೆಂದೇ ಪರಿಗ್ರಹಿಸಿದಳು. ಮುನಿಯೂ ಕೂಡ ಹಿರಿಯವನಿಗೆ ಕುಶನೆಂದೂ ಕಿರಿಯವನಿಗೆ ಲವನೆಂದೂ ಹೆಸರಿರಲೆಂದನು.

ಜಾತಕರ್ಮಾದಿ ಸಂಸ್ಕಾರಾನ್ ಲವಸ್ಯಾಪಿ ಚಕಾರ ಸಃ ।
ತದಾ ನಿನೇದುರ್ವಾದ್ಯಾನಿ ಭೂಮ್ಯಾಂ ಖೇಪಿ ದಿವೌಕಸಾಂ ॥ ೭೭ ॥

ವವರ್ಷುರ್ಜಾನಕೀಂ ಬಾಲೌ ವಾಲ್ಮೀಕಿಂ ಕುಸುಮೈಸ್ಸುರಾಃ ।
ಚಕಾರ ಜನಕಶ್ಚಾಪಿ ಸುಮೇಧಾ ಪರಮೋತ್ಸವಾ ॥ ೭೮ ॥

ಕ್ರಮೇಣ ವಿದ್ಯಾಸಂಪನ್ನೌ ಸೀತಾಪುತ್ರೌ ವಿರೇಜತುಃ ।
ಧನುರ್ವಿದ್ಯಾ ಮಸ್ತ್ರವಿದ್ಯಾಂ ಶಿಕ್ಷಯಾಮಾಸ ತೌ ಮುನಿಃ ॥ ೭೯ ॥

ಕೃತ್ಸ್ನಂ ರಾಮಾಯಣಂ ಸ್ವೀಯಂ ಕೃತಂ ತೇನ ಸುಶಿಕ್ಷಿತಂ ।
ಯಸ್ಮಿನ್ನಾನಂದರಮ್ಯಂ ಚ ಚರಿತ್ರಂ ರಾಘವಸ್ಯ ಹಿ ॥ ೮೦ ॥

---

೭೭. ಆ ವಾಲ್ಮೀಕಿಯು ಲವನಿಗೂ ಕೂಡ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿದನು. ಆಗ ಭೂಮಿಯಲ್ಲಿಯೂ ಅನೇಕ ಬಗೆಯಾದ ವಾದ್ಯಗಳು ಮೊಳಗಿದುವು. ಅಂತರಿಕ್ಷದಲ್ಲಿ ದೇವತೆಗಳು ದುಂದುಭಿಯನ್ನು ಮೊಳಗಿಸಿದರು.

೭೮. ಆಗ ದೇವತೆಗಳು ಆ ಮಗುವಿನಮೇಲೆಯೂ, ಜಾನಕಿಯ ಮೇಲೆಯೂ ಹೂಮಳೆಯನ್ನು ಸುರಿಸಿದರು ಜನಕನೂ, ಸುಮೇಧೆಯೂ ಅವರಿಗೆ ಉತ್ಸವಗಳನ್ನು ಮಾಡಿದರು.

೭೯. ಈ ಸೀತೆಯ ಮಕ್ಕಳು ಕ್ರಮವಾಗಿ ವಿದ್ಯಾಸಂಪನ್ನರಾಗಿ ಪ್ರಕಾಶಿಸಿದರು. ಆ ವಾಲ್ಮೀಕಿಯು ಧನುರ್ವಿದ್ಯೆಯನ್ನೂ, ಅಸ್ತ್ರವಿದ್ಯೆಯನ್ನೂ ಕಲಿಸಿದನು.

೮೦. ಯಾವ ಗ್ರಂಥದಲ್ಲಿ ಆನಂದದಾಯಕವೂ, ರಮ್ಯವೂ ಆದ ರಾಘವನ ಚರಿತ್ರೆಯು ಇದೆಯೋ ತಾನು ಮಾಡಿದ ಅಂತಹ ರಾಮಾಯಣವನ್ನೆಲ್ಲಾ ಆ ವಾಲ್ಮೀಕಿಯು ಆ ಮಕ್ಕಳಿಗೆ ಹೇಳಿಕೊಟ್ಟನು.

ಕುಮಾರೌ ಸ್ವರಸಂಪನ್ನೌ ಸುಂದರಾವಶ್ವಿನಾವಿವ ।
ತಂತ್ರೀಲಯ ಸಮಾಯುಕ್ತೌ ಗಾಯಂತೌ ಚೇರತುರ್ವನೇ ॥ ೮೧ ॥

ತತ್ರ ತತ್ರ ಮುನೀನಾಂತು ಸಮಾಜೇಷು ಸುರೂಪಿಣೌ ।
ಗಾಯಂತಾವಪಿ ತೌ ದೃಷ್ಟ್ವಾ ವಿಸ್ಮಿತಾ ಮುನಯೋಽಬ್ರುವನ್ ॥ ೮೨ ॥

ಗಂಧರ್ವೇಷ್ವಿಹ ಕಿನ್ನರೇಷು ಭುವಿ ವಾ ದೇವೇಷು ದೇವಾಲಯೇ ।
ಪಾತಾಲೇಷ್ವಥ ವಾ ಚತುರ್ಮುಖಗೃಹೇ ಲೋಕೇಷು ಸರ್ವೇಷು ಚ ॥
ಅಸ್ಮಾಭಿಶ್ಚಿರಜೀವಿಭಿಶ್ಚಿರತರಂ ದೃಷ್ಟ್ವಾ ದಿಶಸ್ಸರ್ವತೋ ।
ನಾಜ್ಞಾಯೀದೃಶಗೀತವಾದ್ಯಗರಿಮಾ ನಾದರ್ಶಿ ನಾಶ್ರಾವಿ ಚ ॥ ೮೩ ॥

---

೮೧. ಆ ಕುಮಾರರೂ ಕೂಡ ಒಳ್ಳೆಯ ಕಂಠಸ್ವರವುಳ್ಳವರಾಗಿಯೂ, ಅಶ್ವಿನೀದೇವತೆಗಳಂತೆ ಸುಂದರರಾಗಿಯೂ, ಇದ್ದರು. ವೀಣೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಕಾಲಲಯಕ್ಕನುಗುಣವಾಗಿ ಆ ರಾಮಾಯಣವನ್ನು ಹಾಡುತ್ತಾ ಆ ವನದಲ್ಲಿ ತಿರುಗುತ್ತಿದ್ದರು.

೮೨. ಮುನಿಗಳು ಎಲ್ಲೆಲ್ಲಿ ಸಭೆ ಸೇರುವರೋ ಅಲ್ಲೆಲ್ಲವೂ ಈ ಸುಂದರರೂ ಬುದ್ಧಿಶಾಲಿಗಳೂ ಆದ ಹುಡುಗರು ಹಾಡುತ್ತಿರಲು ಆ ಮುನಿಗಳು ವಿಸ್ಮಿತರಾಗಿ ಇಂತೆನ್ನುತ್ತಿದ್ದರು.

೮೩. ಗಂಧರ್ವಲೋಕದಲ್ಲಿಯೂ ಕಿನ್ನರಲೋಕದಲ್ಲಿಯೂ, ಭೂಲೋಕದಲ್ಲಿಯೂ, ದೇವಲೋಕದಲ್ಲಿಯೂ, ಪಾತಾಳಲೋಕದಲ್ಲಿಯೂ, ಸತ್ಯಲೋಕ ಲೋಕದಲ್ಲಿಯೂ, ಒಟ್ಟಿನಲ್ಲಿ ಎಲ್ಲಾ ಲೋಕದಲ್ಲಿಯೂ ಚಿರಜೀವಿಗಳಾದ ನಾವು ಬಹುಕಾಲ ಸುತ್ತುತ್ತಾ ನೋಡುತ್ತಲಿದ್ದೆವು. ಆದರೆ ಈ ರೀತಿಯಾದ ಗಾನದ ಸೊಂಪನ್ನಾಗಲಿ, ವಾದ್ಯದ ಕೌಶಲ್ಯವನ್ನಾಗಲೀ, ಬುದ್ಧಿವಂತಿಕೆಯನ್ನಾಗಲಿ, ನೋಡಿಯೂ ಇಲ್ಲ. ಕೇಳಿಯೂ ಇಲ್ಲ

ಏವಂಸ್ತುವದ್ಭಿರಖಿಲೈರ್ಮುನಿಭಿಃ ಪ್ರತಿವಾಸರಂ ।
ಆಸಾತೇ ಸುಖಮೇಕಾಂತೇ ವಾಲ್ಮೀಕೇರಾಶ್ರಮೇ ಚಿರಂ ॥ ೮೪ ॥

ರುಕ್ಮಕಂಕಣಮಂಜೀರನೂಪುರೈಸ್ತೌ ವಿಭೂಷಿತೌ ।
ಕೇಯೂರ ರಶನಾಹಾರ ಕುಂಡಲೈರತಿಶೋಭಿತೌ ॥ ೮೫ ॥

ನಿಜಕ್ರೀಡಾಕೌತುಕೈಸ್ತೌ ಬಾಲವಾಕ್ಯೈರ್ಮನೋಹರೈಃ ।
ಸೀತಾಂ ಸುಮೇಧಾಂ ಜನಕಂ ರಂಜಯಾಮಾಸತುರ್ಮುದಾ ॥ ೮೬ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಜನ್ಮಕಾಂಡೇ ಕುಶಲವ ಜನ್ಮಕಥನಂ ನಾಮ ಚತುರ್ಥಸ್ಸರ್ಗಸ್ಸಮಾಪ್ತಃ

---

೮೪. ಮುನಿಗಳಿಂದ ಪ್ರತಿನಿತ್ಯವೂ ಹೀಗೆ ಹೊಗಳಿಸಿಕೊಳ್ಳುತ್ತಾ ಆ ವಾಲ್ಮೀಕಿಯ ಆಶ್ರಮದಲ್ಲಿ ಸುಖವಾಗಿದ್ದುಕೊಂಡು ಇದ್ದರು.

೮೫. ಅವರು ಬಾಲಕರಾದುದರಿಂದ ಚಿನ್ನದ ಕೈಬಳೆಗಳನ್ನು ತೊಟ್ಟುಕೊಂಡು ಕಾಲುಬಳೆಗಳಿಂದ ಭೂಷಿತರಾಗಿ ಭುಜಕೀರ್ತಿಗಳನ್ನು ತೊಟ್ಟುಕೊಂಡು ಉಡಿದಾರಗಳನ್ನು ಸುತ್ತಿಕೊಂಡು ಕರ್ಣಾಭರಣಗಳನ್ನು ಧರಿಸಿ ಶೋಭಿಸುತ್ತಿದ್ದರು.

೮೬. ಆ ಮಕ್ಕಳು ತಮ್ಮ ಮನೋಹರವಾದ ಆಟಗಳಿಂದಲೂ, ಮನೋಹರವಾದ ಮತ್ತು ಬಾಲಕರಿಗೆ ಯೋಗ್ಯವಾದ ಬಾಲವಾಕ್ಯದಿಂದಲೂ ಸೀತೆಯನ್ನೂ ಸುಮೇಧೆ ಜನಕರನ್ನೂ ವಾಲ್ಮೀಕಿಯನ್ನೂ ಸಂತೋಷಪಡಿಸುತ್ತಾ ಇದ್ದರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಕುಶಲವರ ಜನ್ಮಕಥನವೆಂಬ ನಾಲ್ಕನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ
॥ ನಾಲ್ಕನೆಯ ಸರ್ಗದ ಸಾರಾಂಶವು ॥

ಲಕ್ಷ್ಮಣನು ಸೀತೆಯನ್ನು ಬಿಟ್ಟುಬಿಟ್ಟು ಹಿಂದಿರುಗಿ ಹೋಗುತ್ತ ಗಂಗೆಯ ದಡಕ್ಕೆ ಬಂದನು. ಅಲ್ಲಿ " ರಾಮನು ತನ್ನ ಕಾಮವನ್ನು ಶಾಂತವನ್ನಾಗಿ ಮಾಡಿಕೊಳ್ಳಲು ಶಾಸ್ತ್ರಾಧಾರವನ್ನು ಹೊಂದಿ ರಜಕನ ಅಪವಾದದ ನೆವದಿಂದ ಸೀತೆಯನ್ನು ಕಾಡಿಗೆ ಕಳುಹಿಸಿದನು. ಆಕೆಯು ಶುದ್ಧಳೆಂಬುದು ಅವನಿಗೆ ಗೊತ್ತು. ಇದನ್ನು ನನಗೆ ಗುಟ್ಟಾಗಿ ತಿಳಿಸಿರುವನು. ಆದರೂ ಕೂಡ ಆ ಸೀತೆಯ ಭುಜವನ್ನು ಕತ್ತರಿಸಿಕೊಂಡು ಬಾ ಎಂದೇಕೆ ಅಪ್ಪಣೆಮಾಡಿರುವನು? ನಾನೂ ಕೂಡ ಯೋಚಿಸದೆ ಹಾಗೆಯೇ ಆಗಲೆಂದು ಹೇಳಿದೆನು. ನಾನು ಸೀತೆಯ ಭುಜವನ್ನು ತೆಗೆದುಕೊಂಡು ಹೋಗದಿದ್ದರೆ ಸುಮ್ಮನಿರುವನೇ? ನಾನಾದರೋ ಆ ಸೀತೆಯ ಭುಜವನ್ನು ಕಡಿಯಲಾರೆ. ಆಕೆಯಾದರೋ ನನ್ನನ್ನು ಮಗನಂತೆ ಯಾವಾಗಲೂ ಕಾಪಾಡುತ್ತಿದ್ದುದರಿಂದ ನನಗೆ ಅದನ್ನು ಕಡಿಯಲು ಕೈತಾನೇ ಹೇಗೆ ಬಂದೀತು? ಆದ್ದರಿಂದ ಈಗ ಒಂದು ಕೆಲಸವನ್ನು ಮಾಡುತ್ತೇನೆ. ಇಲ್ಲಿ ಸೌದೆಯನ್ನು ತಂದು ಚಿತಿಯನ್ನು ನಿರ್ಮಿಸಿ ಬೆಂಕಿಯನ್ನು ಹತ್ತಿಸಿ ಅದರಲ್ಲಿ ಬಿದ್ದು ಪ್ರಾಣವನ್ನು ಬಿಟ್ಟುಬಿಡುತ್ತೇನೆ. ರಾಮನಿಗೆ ಮುಖವನ್ನು ತೋರಿಸುವುದೇ ಇಲ್ಲ." ಎಂದು ಯೋಚಿಸಿ ಚಿತೆಯನ್ನು ಮಾಡಲು ನಿಶ್ಚಯಿಸಿಕೊಂಡನು.

ಅಷ್ಟರೊಳಗೆ ವಿಶ್ವಕರ್ಮನು ಬ್ರಹ್ಮನಿಂದ ಅಪ್ಪಣೆಮಾಡಲ್ಪಟ್ಟವನಾಗಿ ಲಕ್ಷ್ಮಣನಿಗೆ ಸಹಾಯಮಾಡಲು ಬಂದು ಕೈಯ್ಯಲ್ಲಿ ಕೊಡಲಿಯನ್ನು ಹಿಡಿದುಕೊಂಡು ಅಲ್ಲಿ ಓಡಾಡುತ್ತಿದ್ದನು. ಅವನನ್ನು ನೋಡಿ ಲಕ್ಷ್ಮಣನು " ಅಯ್ಯಾ! ಕೊಡಲಿಯಿಂದ ಮರಗಳನ್ನು ಕತ್ತರಿ ನನಗೊಂದು ಚಿತೆಯನ್ನು ಮಾಡಿಕೊಡು.

ನಿನಗೆ ಬಹುವಾದ ಧನವನ್ನು ಕೊಡುತ್ತೇನೆ" ಎಂದನು. ಅದಕ್ಕೆ ಅವನು ಕಾರಣ ವನ್ನು ಕೇಳಲು ಲಕ್ಷ್ಮಣನು ವಿಸ್ತಾರವಾಗಿ ಎಲ್ಲವನ್ನೂ ಹೇಳಿದನು. ಆಗ ವಿಶ್ವ ಕರ್ಮನು "ಅಯ್ಯಾ! ನೀನು ಈ ಸಣ್ಣ ವಿಷಯಕ್ಕೋಸ್ಕರ ಪ್ರಾಣತ್ಯಾಗವನ್ನು ಮಾಡಬೇಡ. ನಾನು ಸೀತೆಯ ಭುಜದಂತೆ ಒಂದು ಭುಜವನ್ನು ಮಾಡಿಕೊಡು ತ್ತೇನೆ" ಎಂದು ಹೇಳಿ ಅಂತೆಯೇ ಲಕ್ಷಣಗಳೂ ಆಭರಣಗಳೂ ಉಳ್ಳ ಭುಜವನ್ನು ಮಾಡಿಕೊಟ್ಟನು. ಲಕ್ಷ್ಮಣನು ಅದನ್ನು ತೆಗೆದುಕೊಂಡು ಅಯೋಧ್ಯೆಗೆ ಹೋಗಿ ರಾಮನಿಗೆ ತೋರಿಸಿದನು. ಆ ರಾಮನ ಮಾತಿನಂತೆ ಎಲ್ಲರಿಗೂ ತೋರಿಸಿದನು.

ಇತ್ತ ಸೀತೆಯು ವಾಲ್ಮೀಕಿಯ ಆಶ್ರಮದಲ್ಲಿ ಸುಖವಾಗಿದ್ದಳು. ಎರಡು ತಿಂಗಳು ಕಳೆದಮೇಲೆ ಗಂಡು ಮಗುವನ್ನು ಒಂದು ದಿನ ರಾತ್ರಿಯಲ್ಲಿ ಹೆತ್ತಳು. ಆಗ ರಾಮಲಕ್ಷ್ಮಣರೂ ಅಲ್ಲಿಗೆ ಬಂದು ನೋಡಿಕೊಂಡು ಹೋದರು. ಮತ್ತು ಅಲ್ಲಿದ್ದವರೊಬ್ಬರೂ ತಾನು ಬಂದುದನ್ನು ಹೊರಗೆ ಹೇಳದಂತೆ ಕಟ್ಟುಮಾಡಿದನು.

ಅನಂತರ ಶ್ರೀರಾಮನು ಅಯೋಧ್ಯೆಯಲ್ಲಿ ನೂರು ಅಶ್ವಮೇಧಯಾಗ ಗಳನ್ನು ಮಾಡಲು ನಿಶ್ಚಯಿಸಿ ಹೆಂಡತಿಯಿಲ್ಲದ್ದರಿಂದ ಚಿನ್ನದಲ್ಲಿ ಪ್ರತಿಮೆಯನ್ನು ಮಾಡಿಸಿಕೊಂಡನು. ಹೀಗೆ ಯಾಗಗಳನ್ನು ಮಾಡುತ್ತ ತೊಂಭತ್ತೊಂಭತ್ತು ಯಾಗಗಳನ್ನು ಮಾಡಿದನು. ಆಗ ಆ ಪ್ರತಿಮೆಗಳನ್ನು ಗುರುವಿಗೇ ದಾನಮಾಡು ತ್ತಿದ್ದನು. ಆ ಯಜ್ಞಗಳನ್ನು ಮಾಡಿದಾಗಲೆಲ್ಲ ಶತ್ರುಘ್ನನು ಕುದುರೆಯ ರಕ್ಷಣೆ ಯನ್ನು ಮಾಡುತ್ತಿದ್ದನು. ಇಂತಿರಲು ಕೊನೆಯದಾದ ನೂರನೆಯ ಯಾಗವನ್ನು ಮಾಡಲು ಆ ರಾಮನು ದೀಕ್ಷೆಯನ್ನು ಕೈಗೊಂಡನು.

ಇತ್ತ ವಾಲ್ಮೀಕಿಯು ಸೀತೆಯ ಮಗುವಿಗೆ ರಾಮರಕ್ಷಾಸ್ತೋತ್ರದಿಂದ ಅಭಿ ಮಂತ್ರಿಸುತ್ತ ಕುಶನೆಂದು ಹೆಸರಿಟ್ಟನು. ಆ ಮಗುವು ಎಲ್ಲರಿಗೂ ಆನಂದವ ನ್ನುಂಟುಮಾಡುತ್ತಾ ಬೆಳೆಯುತ್ತಿದ್ದಿತು.

ಹೀಗಿರುತ್ತಿರಲು ಒಂದು ಸಾರಿ ಸೀತೆಯು ಸ್ನಾನಮಾಡಲು ತಮಸಾನದಿಗೆ ಹೋದಳು. ಮಗುವನ್ನು ನೋಡಿಕೊಳ್ಳುವಂತೆ ಹತ್ತಿರದಲ್ಲಿದ್ದ ವಾಲ್ಮೀಕಿಗೆ ಹೇಳಿದ್ದಳು.

ಸೀತೆಯು ತಾನು ದಾರಿಯಲ್ಲಿ ಸ್ನಾನಕ್ಕೆ ಹೋಗುತ್ತಾ ಅಲ್ಲೊಂದು ಕಪಿಯು ಎರಡು ಕಂಕುಳಲ್ಲಿ ಎರಡು ಮಕ್ಕಳನ್ನೂ ಎರಡು ಹೆಗಲುಗಳ ಮೇಲೆ ಎರಡು ಮಕ್ಕಳನ್ನೂ ತಲೆಯ ಮೇಲೆ ಒಂದು ಮಗುವನ್ನೂ ಕೂರಿಸಿಕೊಂಡು ಹೋಗುತ್ತಿರುವುದನ್ನು ನೋಡಿದಳು. ಆಗ ಆಕೆಯು ಕೀಳುಪ್ರಾಣಿಯು ಮಕ್ಕಳ ಮಮತೆಯಿಂದ ಮಗುವನ್ನು ಬಿಡದೆ ಇಂತು ಕರೆದುಕೊಂಡು ಹೋಗುತ್ತಿರುವಾಗ ಉತ್ತಮ ಜನ್ಮದಲ್ಲಿ ಹುಟ್ಟಿದ ನಾನು ಮಗುವನ್ನು ಬಿಟ್ಟು ಬಂದುದು ತಪ್ಪೆಂದು ತಿಳಿದು ಮತ್ತೆ ಮನೆಗೆ ಹೋಗಿ ತೊಟ್ಟಿಲಲ್ಲಿದ್ದ ಮಗುವನ್ನು ಎತ್ತಿಕೊಂಡು ಹೋದಳು. ಆಗ ಅಲ್ಲಿ ಯಾರೂ ಇರಲಿಲ್ಲ.

ಮುನಿಯು ಬಂದು ತೊಟ್ಟಲಿನಲ್ಲಿ ಮಗುವಿಲ್ಲದ್ದನ್ನು ನೋಡಿ ಗಾಬರಿಗೊಂಡು ಒಂದು ಮಗುವನ್ನು ನಿರ್ಮಿಸಿ ಆ ತೊಟ್ಟಲಿನಲ್ಲಿಟ್ಟನು. ಪತಿವ್ರತೆಯಾದ ಸೀತೆಯು ಎಲ್ಲಿ ಶಾಪಕೊಡುವಳೋ ಎಂದು ಬಹುವಾಗಿ ಹೆದರಿದನು. ಅವಸರಪಟ್ಟು ಜ್ಞಾನದೃಷ್ಟಿಯಿಂದ ನೋಡಲಿಲ್ಲ.

ಸೀತೆಯು ಸ್ನಾನಮಾಡಿಕೊಂಡು ಮನೆಗೆ ಬಂದು ಮಗುವನ್ನು ಮಲಗಿಸಲು ತೊಟ್ಟಲಿನ ಬಳಿಗೆ ಹೋಗಿ ಅಲ್ಲೊಂದು ಮಗುವಿರುವುದನ್ನು ನೋಡಿ ಮುನಿಯನ್ನು ಪ್ರಶ್ನಿಸಿದಳು. ಆಗ ಋಷಿಯು ನಡೆದ ವಿಷಯವನ್ನು ಹೇಳಿ ಈ ಮಗುವನ್ನು ನಿನ್ನ ಮಗುವೆಂದೇ ಕಾಪಾಡು. ಹಿರಿಯವನು ಕುಶನೆಂದೂ, ಕಿರಿಯವನಾದ ಇವನು ಲವನೆಂದೂ, ಹೆಸರನ್ನು ಹೊಂದಿರಲಿ, ಎಂದು ಹೇಳಿದನು.

ಈ ಮಕ್ಕಳಿಬ್ಬರೂ ಸುಂದರರೂ, ಬುದ್ಧಿವಂತರೂ, ಆಗಿದ್ದರು. ಕಂಠಸ್ವರವು ಬಹು ಇಂಪಾಗಿದ್ದಿತು. ಇವರಿಗೆ ವಾಲ್ಮೀಕಿಯು ತಾಳಲಯಗಳೊಡನೆ ತಾನು ರಚಿಸಿದ್ದ ರಾಮಾಯಣವೆಲ್ಲವನ್ನೂ ಕಲಿಸಿದನು. ಅವರು ಅದನ್ನು ಎಲ್ಲೆಲ್ಲಿಯೂ ಹಾಡುತ್ತಾ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದರು.

ತಾಯಿಯನ್ನೂ ಅಜ್ಜಿ ಮತ್ತು ತಾತರನ್ನೂ ಋಷಿಯನ್ನೂ ತಮ್ಮ ಬಾಲಲೀಲೆಗಳಿಂದ ಬಹುವಾಗಿ ಆನಂದಪಡಿಸುತ್ತ ಬೆಳೆಯುತ್ತಿದ್ದರು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

|| ಪಂಚಮಸ್ಸರ್ಗಃ ||

|| ವಿಷ್ಣುದಾಸ ಉವಾಚ ||

ಶ್ರೀರಾಮರಕ್ಷಯಾ ಪ್ರೋಕ್ತಂ ಕುಶಾಯ ಹ್ಯಭಿಮಂತ್ರಣಂ ।
ಕೃತಂ ತೇನೈವ ಮುನಿನಾ ಗುರೋ ತಾಂ ಮೇ ಪ್ರಕಾಶಯ || ೧ ||

ರಾಮರಕ್ಷಾಂ ವರಾಂ ಪುಣ್ಯಾಂ ಬಾಲಾನಾಂ ಶಾಂತಿಕಾರಿಣೀಂ ।
ಇತಿ ಶಿಷ್ಯವಚಃ ಶ್ರುತ್ವಾ ರಾಮದಾಸೋಽಬ್ರವೀದ್ವಚಃ || ೨ ||

|| ಶ್ರೀರಾಮದಾಸ ಉವಾಚ ||

ಸಮ್ಯಕ್ ಪೃಷ್ಟಂ ತ್ವಯಾ ಶಿಷ್ಯ ರಾಮರಕ್ಷಾಧುನೋಚ್ಯತೇ ।
ಯಾ ಪ್ರೋಕ್ತಾ ಶಂಭುನಾ ಪೂರ್ವಂ ಸ್ಕಂದಾರ್ಥಂ ಗಿರಿಜಾಂ ಪ್ರತಿ || ೩ ||

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಐದನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು–ಎಲೈ ಗುರುವೇ ! ರಾಮರಕ್ಷಾಸ್ತೋತ್ರವನ್ನು ಹೇಳಿ ವಾಲ್ಮೀಕಿಯು ಕುಶನಿಗೆ ಅಭಿಮಂತ್ರಿಸುತ್ತಿದ್ದನು, ಎಂದು ಹೇಳಿದೆಯಷ್ಟೆ ! ಆ ರಾಮರಕ್ಷಾಸ್ತೋತ್ರವನ್ನು ನನಗೆ ಹೇಳಿಕೊಡು.

೨. ಆ ರಾಮರಕ್ಷಾಸ್ತೋತ್ರವು ಬಾಲರಿಗೆ ಶಾಂತಿಯನ್ನುಂಟುಮಾಡತಕ್ಕದ್ದು. ಉತ್ತಮವಾದುದು. ಪುಣ್ಯಕರವಾದುದು. ಅಲ್ಲವೇ ! ಹೀಗೆಂದು ಹೇಳಿದ ಶಿಷ್ಯನ ಮಾತನ್ನು ಕೇಳಿ ರಾಮದಾಸನು ಇಂತೆಂದನು.

೩. ಶ್ರೀರಾಮದಾಸನು ಹೇಳಿದನು–ಎಲೈ ಶಿಷ್ಯನೇ ! ನೀನು ಕೇಳಿದುದು ಬಹು ಚೆನ್ನಾಗಿದೆ. ಈಗ ಆ ರಾಮರಕ್ಷಾಸ್ತೋತ್ರವನ್ನು ಹೇಳುತ್ತೇನೆ, ಕೇಳು. ಅದನ್ನೇ ಶಂಭುವು ಸ್ಕಂದನ ರಕ್ಷೆಗೋಸ್ಕರ ಗಿರಿಜೆಗೆ ಹೇಳಿದನು.

॥ ಶ್ರೀ ಶಿವ ಉವಾಚ ॥

ದೇವ್ಯದ್ರ ಸ್ಕಂದಪುತ್ರಾಯ ರಾಮರಕ್ಷಾಭಿಮಂತ್ರಣಂ ।
ಕುರು ತಾರಕಘಾತಾಯ ಸಮರ್ಥೋಽಯಂ ಭವಿಷ್ಯತಿ ॥ ೪ ॥

ಇತ್ಯುಕ್ತ್ವಾ ಕಥಯಾಮಾಸ ರಾಮರಕ್ಷಾಂ ಶಿವಃ ಸ್ತ್ರಿಯೈ ।
ನಮಸ್ಕೃತ್ಯ ರಾಮಚಂದ್ರಂ ಶುಚಿರ್ಭೂತ್ವಾ ಜಿತೇಂದ್ರಿಯಃ ॥ ೫ ॥

॥ ಅಥ ಧ್ಯಾನಂ ॥

ವಾಮೇ ಕೋದಂಡದಂಡಂ ನಿಜಕರಕಮಲೇ ದಕ್ಷಿಣೇ ಬಾಣಮೇಕಂ ।
ಪಶ್ಚಾದ್ಭಾಗೇ ಚ ನಿತ್ಯಂ ದಧತಮಭಿಮತಂ ಸಾಸಿತೂಣೀರಭಾರಂ ॥
ವಾಮೇಽವಾಮೇ ವಸದ್ಭ್ಯಾಂ ಸಹ ಮಿಲಿತತನುಂ ಜಾನಕೀಲಕ್ಷ್ಮಣಾಭ್ಯಾಂ
ಶ್ಯಾಮಂ ರಾಮಂ ಭಜೇಹಂ ಪ್ರಣತಜನಮನಃಖೇದವಿಚ್ಛೇದದಕ್ಷಂ ॥ ೬ ॥

೪-೫. ಶ್ರೀ ಶಿವನು ಹೇಳಿದನು–ಎಲೈ ದೇವಿಯೇ! ಈ ಸ್ಕಂದನೆಂಬ ನಿನ್ನ ಮಗನಿಗೆ ರಾಮರಕ್ಷಾಸ್ತೋತ್ರದಿಂದ ಅಭಿಮಂತ್ರಿಸು. ಇದು ಆ ತಾರಕಾಸುರನನ್ನು ಕೊಲ್ಲಲು ಆ ಮಗುವನ್ನು ಸಮರ್ಥನನ್ನಾಗಿ ಮಾಡುತ್ತದೆ. ಹೀಗೆಂದು ಹೇಳಿ ಶಿವನು ರಾಮರಕ್ಷಾಸ್ತೋತ್ರವನ್ನು ಪಾರ್ವತಿಗೆ ಹೇಳಿದನು. ಅದನ್ನು ಹೇಳುವಾಗ ಶುಚಿಯಾಗಿ ಜಿತೇಂದ್ರಿಯನಾಗಿ ರಾಮಚಂದ್ರನಿಗೆ ನಮಸ್ಕರಿಸಿದನು.

೬. ಧ್ಯಾನವು–ಎಡಗೈಯ್ಯಲ್ಲಿ ಧನುಸ್ಸಿನ ದಂಡವನ್ನೂ, ಬಲಗೈಯಲ್ಲಿ ಒಂದು ಬಾಣವನ್ನೂ, ಹಿಡಿದು ಹಿಂದುಗಡೆಯಲ್ಲಿ ಕತ್ತಿಯನ್ನೂ, ಬತ್ತಳಿಕೆಬಾಣಗಳನ್ನೂ, ಕಟ್ಟಿಕೊಂಡು ಎಡಗಡೆಯಲ್ಲಿ ಸೀತೆಯನ್ನೂ ಬಲಗಡೆಯಲ್ಲಿ ಲಕ್ಷ್ಮಣನನ್ನೂ ನಿಲ್ಲಿಸಿಕೊಂಡು ಅವರೊಡನೆ ಸೇರಿಕೊಂಡಿರುವ ದೇಹವುಳ್ಳವನಾಗಿ, ಶ್ಯಾಮವರ್ಣನಾಗಿ ಶರಣು ಹೊಂದಿದವರ ಮನಸ್ಸಿನ ಖೇದವನ್ನೆಲ್ಲಾ ನಾಶಮಾಡುವ ರಾಮನನ್ನು ಭಜಿಸುತ್ತೇನೆ

ಓಮಸ್ಯ ಶ್ರೀರಾಮರಕ್ಷಾಸ್ತೋತ್ರಮಂತ್ರಸ್ಯ, ಬುಧಕೌಶಿಕಋಷಿಃ, ಶ್ರೀರಾಮಚಂದ್ರೋ ದೇವತಾ, ರಾಮ ಇತಿ ಬೀಜಂ, ಅನುಷ್ಟುಪ್ ಛಂದಃ, ಶ್ರೀರಾಮಪ್ರೀತ್ಯರ್ಥೇ ಜಪೇ ವಿನಿಯೋಗಃ

|| ಓಂ ||

ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಂ ।
ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಂ || ೭ ||

ಧ್ಯಾತ್ವಾ ನೀಲೋತ್ಪಲಶ್ಯಾಮಂ ರಾಮಂ ರಾಜೀವಲೋಚನಂ ।
ಜಾನಕೀಲಕ್ಷ್ಮಣೋಪೇತಂ ಜಟಾಮುಕುಟಮಂಡಿತಂ || ೮ ||

ಸಾಸಿತೂಣಧನುರ್ಬಾಣಪಾಣಿಂ ನಕ್ತಂಚರಾಂತಕಂ ।
ಸ್ವಲೀಲಯಾ ಜಗತ್ತ್ರಾತುಮಾವಿರ್ಭೂತಮಜಂ ವಿಭುಂ || ೯ ||

ಓಂ|| ಈ ರಾಮರಕ್ಷಾಸ್ತೋತ್ರಮಹಾಮಂತ್ರಕ್ಕೆ ಬುಧಕೌಶಿಕ ಋಷಿಯು. ಶ್ರೀರಾಮಚಂದ್ರನು ದೇವತೆಯು. ರಾಮ ಎಂಬುದು ಬೀಜವು. ಅನುಷ್ಟುಪ್ ಛಂದಸ್ಸು, ಶ್ರೀರಾಮನ ಪ್ರೀತಿಯನ್ನು ಹೊಂದುವುದಕ್ಕೋಸ್ಕರ ಜಪವನ್ನು ಮಾಡುವುದರಲ್ಲಿ ವಿನಿಯೋಗವು.

೭. ಓಂ|| ರಮಾನಾಥನ ಚರಿತ್ರೆಯು ಶತಕೋಟಿಗ್ರಂಥಗಳಷ್ಟು ವಿಸ್ತಾರವಾಗಿದೆ. ಅವುಗಳಲ್ಲಿ ಒಂದೊಂದಕ್ಷರವೂ ಮಹಾಪಾಪಗಳನ್ನು ನಾಶಮಾಡುತ್ತದೆ.

೮–೯. ಕನ್ನೈದಿಲೆಯಂತೆ ನೀಲವಾದ ಬಣ್ಣವುಳ್ಳ, ಕಮಲದಂತೆ ಕಣ್ಣುಗಳುಳ್ಳ ಜಾನಕಿಲಕ್ಷ್ಮಣರಿಂದ ಕೂಡಿದ ಜಟೆಕಿರೀಟಗಳಿಂದ ಕೂಡಿಕೊಂಡಿರುವ ಖಡ್ಗ, ಬಾಣ, ಧನುಸ್ಸು, ಬತ್ತಳಿಕೆಗಳನ್ನು ಧರಿಸಿರುವ ರಾಕ್ಷಸರಿಗೆ ಯಮಸ್ವರೂಪನಾದ ತನ್ನ ಲೀಲೆಯಿಂದಲೇ ಜಗತ್ತನ್ನು ಕಾಪಾಡಲು ಅವತರಿಸಿರುವ ಅಜನೂ, ಪ್ರಭುವೂ, ಆದ ಶ್ರೀರಾಮಚಂದ್ರನನ್ನು ಧ್ಯಾನಿಸಬೇಕು.

ರಾಮರಕ್ಷಾಂ ಪಠೇತ್ಪ್ರಾಜ್ಞಃ ಪಾಪಘ್ನೀಂ ಸರ್ವಕಾಮದಾಂ ।
ಶಿರೋ ಮೇ ರಾಘವಃ ಪಾತು ಫಾಲಂ ದಶರಥಾತ್ಮಜಃ ॥ ೧೦ ॥

ಕೌಸಲ್ಯೇಯೋ ದೃಶೌ ಪಾತು ವಿಶ್ವಾಮಿತ್ರಪ್ರಿಯಃ ಶ್ರುತೀ ।
ಘ್ರಾಣಂ ಪಾತು ಮಖತ್ರಾತಾ ಮುಖಂ ಸೌಮಿತ್ರಿವತ್ಸಲಃ ॥ ೧೧ ॥

ಜಿಹ್ವಾಂ ವಿದ್ಯಾನಿಧಿಃ ಪಾತು ಕಂಠಂ ಭರತವಂದಿತಃ ।
ಸ್ಕಂಧೌ ದಿವ್ಯಾಯುಧಃ ಪಾತು ಭುಜೌ ಭಗ್ನೇಶಕಾರ್ಮುಕಃ ॥ ೧೨ ॥

ಕರೌ ಸೀತಾಪತಿಃ ಪಾತು ಹೃದಯಂ ಜಾಮದಗ್ನ್ಯಜಿತ್ ।
ಪಾರ್ಶ್ವೇ ರಘುವರಃ ಪಾತು ಕುಕ್ಷೀ ಇಕ್ಷ್ವಾಕುನಂದನಃ ॥ ೧೩ ॥

ಮಧ್ಯಂ ಪಾತು ಖರಧ್ವಂಸೀ ನಾಭಿಂ ಜಾಂಬವದಾಶ್ರಯಃ ।
ಸುಗ್ರೀವೇಶಃ ಕಟಿಂ ಪಾತು ಸಕ್ಥಿನೀ ಹನುಮತ್ಪ್ರಭುಃ ॥ ೧೪ ॥

೧೦–೧೬. ಹೀಗೆ ಆ ಸ್ವಾಮಿಯನ್ನು ಧ್ಯಾನಿಸಿ ಪ್ರಾಜ್ಞನಾದವನು ರಾಮರಕ್ಷಾಸ್ತೋತ್ರವನ್ನು ಪಠಿಸಬೇಕು ಆ ರಾಮರಕ್ಷಾಸ್ತೋತ್ರವು ಪಾಪವನ್ನು ನಾಶಮಾಡಿ ಸಕಲ ಇಷ್ಟಗಳನ್ನೂ ಕೊಡುತ್ತದೆ. ರಾಘವನು ನನ್ನ ತಲೆಯನ್ನು ರಕ್ಷಿಸಲಿ. ದಶರಥಾತ್ಮಜನು ಹಣೆಯನ್ನು ರಕ್ಷಿಸಲಿ. ಕೌಸಲ್ಯೆಯ ಮಗನು ಕಣ್ಣುಗಳನ್ನು ರಕ್ಷಿಸಲಿ. ವಿಶ್ವಾಮಿತ್ರಪ್ರಿಯನು ಕಿವಿಗಳನ್ನು ರಕ್ಷಿಸಲಿ. ಯಜ್ಞರಕ್ಷಕನು ಮೂಗನ್ನು ರಕ್ಷಿಸಲಿ. ಸೌಮಿತ್ರಿಯಲ್ಲಿ ಪ್ರೀತಿಯುಳ್ಳವನು ಮುಖವನ್ನು ರಕ್ಷಿಸಲಿ. ವಿದ್ಯಾನಿಧಿಯು ನಾಲಗೆಯನ್ನು ರಕ್ಷಿಸಲಿ. ಭರತನಿಂದ ನಮಸ್ಕೃತನಾದ ರಾಮನು ಕಂಠವನ್ನು ರಕ್ಷಿಸಲಿ. ಆ ದಿವ್ಯಾಯುಧವನ್ನು ಧರಿಸಿರುವ ರಾಮನು ಕತ್ತನ್ನು ರಕ್ಷಿಸಲಿ. ಶಿವಧನುಸ್ಸನ್ನು ಮುರಿದ ರಾಮನು ಭುಜಗಳನ್ನು ರಕ್ಷಿಸಲಿ. ಸೀತಾಪತಿಯು ಕೈಗಳನ್ನು ರಕ್ಷಿಸಲಿ. ಜಮದಗ್ನಿಯನ್ನು ಜಯಿಸಿದ ರಾಮನು ಹೃದಯವನ್ನು ರಕ್ಷಿಸಲಿ. ರಘುವರನು ಪಾರ್ಶ್ವಗಳನ್ನು ರಕ್ಷಿಸಲಿ. ಇಕ್ಷ್ವಾಕುನಂದನನು ಕುಕ್ಷಿಯನ್ನು ರಕ್ಷಿಸಲಿ. ಖರಧ್ವಂಸಿಯಾದ ರಾಮನು ಮಧ್ಯವನ್ನು ರಕ್ಷಿಸಲಿ. ಜಾಂಬವಂತನಿಗೆ ಆಶ್ರಯನಾದ ರಾಮನು ಹೊಕ್ಕಳನ್ನು ರಕ್ಷಿಸಲಿ. ಸುಗ್ರೀವನಿಗೆ ಒಡೆಯನಾದ ರಾಮನು ಸೊಂಟವನ್ನು ರಕ್ಷಿಸಲಿ. ಹನುಮಂತನಿಗೆ ಪ್ರಭುವಾದ ರಾಮನು ಮೇಲಿನ ತೊಡೆಗಳನ್ನು ರಕ್ಷಿಸಲಿ. ರಘೂತ್ತಮನು

ಊರೂ ರಘೂತ್ತಮಃ ಪಾತು ಗುಹ್ಯಂ ರಕ್ಷಃಕುಲಾಂತಕೃತ್ ।
ಜಾನುನೀ ಸೇತುಕೃತ್ಪಾತು ಜಂಘೇ ದಶಮುಖಾಂತಕಃ ॥ ೧೫ ॥

ಪಾದೌ ವಿಭೀಷಣಶ್ರೀದಃ ಪಾತು ರಾಮೋಽಖಿಲಂ ವಪುಃ ।
ಏತಾಂ ರಾಮಬಲೋಪೇತಾಂ ರಕ್ಷಾಂ ಯಸ್ಸುಕೃತೀ ಪಠೇತ್ ।
ಸ ಚಿರಾಯುಸ್ಸುಖೀ ಪುತ್ರೀ ವಿಜಯೀ ವಿನಯೀ ಭವೇತ್ ॥ ೧೬ ॥

ಪಾತಾಲಭೂತಲವ್ಯೋಮಚಾರಿಣಶ್ಛದ್ಮಚಾರಿಣಃ ।
ನ ದ್ರಷ್ಟುಮಪಿ ಶಕ್ತಾಸ್ತೇ ರಕ್ಷಿತಂ ರಾಮನಾಮಭಿಃ ॥ ೧೭ ॥

ರಾಮೇತಿ ರಾಮಭದ್ರೇತಿ ರಾಮಚಂದ್ರೇತಿ ವಾ ಸ್ಮರನ್ ।
ನರೋ ನ ಲಿಪ್ಯತೇ ಪಾಪೈರ್ಭುಕ್ತಿಂ ಮುಕ್ತಿಂ ಚ ವಿಂದತಿ ॥ ೧೮ ॥

೧೫–೧೬. ರಘೂತ್ತಮನು ಕೆಳಗಿನ ತೊಡೆಗಳನ್ನು ರಕ್ಷಿಸಲಿ ರಾಕ್ಷಸರ ಕುಲವನ್ನೇ ನಾಶಮಾಡುವ ರಾಮನು ಗುಹ್ಯಪ್ರದೇಶವನ್ನು ರಕ್ಷಿಸಲಿ. ಸೇತುವೆಯನ್ನು ಕಟ್ಟಿದವನು ಮಂಡಿಗಳನ್ನು ರಕ್ಷಿಸಲಿ. ದಶಮುಖಾಂತಕನು ಮೊಣಕಾಲುಗಳನ್ನು ರಕ್ಷಿಸಲಿ. ವಿಭೀಷಣನಿಗೆ ಸಂಪತ್ತನ್ನು ಕೊಟ್ಟವನು ಹೆಜ್ಜೆಗಳನ್ನು ರಕ್ಷಿಸಲಿ. ರಾಮನು ಶರೀರವನ್ನೆಲ್ಲಾ ರಕ್ಷಿಸಲಿ. ರಾಮಬಲದಿಂದ ಕೂಡಿದ ಈ ರಕ್ಷೆಯನ್ನು ಯಾವ ಸುಕೃತಿಯು ಓದುವನೋ ಅವನು ಚಿರಾಯುವಾಗಿಯೂ, ಪುತ್ರರನ್ನು ಪಡೆಯುವವನಾಗಿಯೂ, ವಿಜಯವನ್ನು ಹೊಂದುವವನಾಗಿಯೂ, ವಿನಯವುಳ್ಳವನಾಗಿಯೂ, ಆಗುವನು.

೧೭. ಈ ರಾಮನಾಮಗಳಿಂದ ರಕ್ಷಿತನಾದವನನ್ನು ಪಾತಾಳ, ಭೂಮಿ, ಅಂತರಿಕ್ಷ(ಸ್ವರ್ಗ)ಗಳಲ್ಲಿ ಸಂಚರಿಸುವವರೊಬ್ಬರೂ ನೋಡಲೂ ಕೂಡ ಶಕ್ತರಾಗುವುದಿಲ್ಲ.

೧೮. ರಾಮನೆಂದಾಗಲೀ, ರಾಮಭದ್ರನೆಂದಾಗಲೀ, ರಾಮಚಂದ್ರನೆಂದಾಗಲೀ, ಸ್ಮರಿಸುವವನು ಪಾಪಗಳ ಲೇಪವನ್ನೂ ಹೊಂದುವುದೇ ಇಲ್ಲ. ಭುಕ್ತಿ (ಊಟವನ್ನೂ) ಮುಕ್ತಿಗಳನ್ನೂ ಹೊಂದುತ್ತಾನೆ.

ಜಗಜ್ಜೈತ್ರೈಕಮಂತ್ರೇಣ ರಾಮನಾಮ್ನಾಭಿರಕ್ಷಿತಂ ।
ಯಃ ಕಂಠೇ ಧಾರಯೇತ್ತಸ್ಯ ಕರಸ್ಥಾಸ್ಸರ್ವಸಿದ್ಧಯಃ ॥ ೧೯ ॥

ವಜ್ರಪಂಜರನಾಮೇದಂ ಯೋ ರಾಮಕವಚಂ ಪಠೇತ್ ।
ಅವ್ಯಾಹತಾಜ್ಞಸ್ಸರ್ವತ್ರ ಲಭತೇ ಜಯಮಂಗಳಂ ॥ ೨೦ ॥

ಆದಿಷ್ಟವಾನ್ ಯಥಾ ಸ್ವಪ್ನೇ ರಾಮರಕ್ಷಾಮಿಮಾಂ ಹರಃ ।
ತಥಾ ಲಿಖಿತವಾನ್ ಪ್ರಾತಃ ಪ್ರಬುದ್ಧೋ ಬುಧಕೌಶಿಕಃ ॥ ೨೧ ॥

ರಾಮೋ ದಾಶರಥಿಶ್ಶೂರೋ ಲಕ್ಷ್ಮಣಾನುಚರೋ ಬಲೀ ।
ಕಾಕುತ್ಸ್ಥಃ ಪುರುಷಃ ಪೂರ್ಣಃ ಕೌಸಲ್ಯಾನಂದವರ್ಧನಃ ॥ ೨೨ ॥

---

೧೯. ಜಗತ್ತನ್ನೇ ಜಯಿಸಲು ಒಂದೇ ಒಂದು ಮಂತ್ರವಾದ ಈ ರಾಮನಾಮಗಳಿಂದ ರಕ್ಷಿತವಾದ ಈ ಮಂತ್ರವನ್ನು ಯಾವನು ಕಂಠದಲ್ಲಿಟ್ಟುಕೊಂಡಿರುವನೋ ಅವನಿಗೆ ಸಿದ್ಧಿಯೆಲ್ಲವೂ ಕೈಯ್ಯಲ್ಲಿದ್ದಂತೆಯೇ.

೨೦. ವಜ್ರಪಂಜರವೆಂಬ ಹೆಸರುಳ್ಳ ರಾಮಕವಚವನ್ನು ಯಾವನು ಹೇಳುತ್ತಾನೆಯೋ ಅವನ ಆಜ್ಞೆಯು ಎಲ್ಲಾ ಕಡೆಯಲ್ಲಿಯೂ ತಡೆಯಿಲ್ಲದೆ ನಡೆಯುತ್ತದೆ. ಅವನು ಎಲ್ಲಾ ಕಡೆಯಲ್ಲಿಯೂ ಜಯವನ್ನೂ ಮಂಗಳವನ್ನೂ ಹೊಂದುವನು.

೨೧. ಹರನು ಬುಧಕೌಶಿಕನಿಗೆ ಸ್ವಪ್ನದಲ್ಲಿ ಈ ರಾಮರಕ್ಷಾಮಂತ್ರವನ್ನು ಹೇಳಿದನು. ಅನಂತರ ಆ ಬುಧಕೌಶಿಕನು ಎಚ್ಚೆತ್ತು ಆ ಹರನು ಹೇಳಿದಂತೆಯೇ ಬರೆದುಕೊಂಡನು.

೨೨. ದಾಶರಥಿಯಾದ ರಾಮನು ಬಹುಶೂರನು. ಅವನನ್ನು ಲಕ್ಷ್ಮಣನು ಯಾವಾಗಲೂ ಅನುಸರಿಸುತ್ತಿರುವನು. ಬಲಿಷ್ಠನು. ಕಕುಸ್ಥನ ವಂಶದಲ್ಲಿ ಹುಟ್ಟಿದವನು. ಪೂರ್ಣಪುರುಷನು. ಕೌಸಲ್ಯೆಗೆ ಆನಂದವನ್ನು ಹೆಚ್ಚಿಸುವವನು.

ವೇದಾಂತವೇದ್ಯೋ ಯಜ್ಞೇಶಃ ಪುರಾಣಪುರುಷೋತ್ತಮಃ ।
ಜಾನಕೀವಲ್ಲಭಶ್ಶ್ರೀಮಾನಪ್ರಮೇಯ ಪರಾಕ್ರಮಃ ॥ ೨೩ ॥

ಇತ್ಯೇತಾನಿ ಜಪೇನ್ನಿತ್ಯಂ ಮದ್ಭಕ್ತಶ್ಶ್ರದ್ಧಯಾನ್ವಿತಃ ।
ಅಶ್ವಮೇಧಾಧಿಕಂ ಪುಣ್ಯಂ ಲಭತೇ ನಾತ್ರ ಸಂಶಯಃ ॥ ೨೪ ॥

ಸನ್ನದ್ಧಃ ಕವಚೀ ಖಡ್ಗೀ ಚಾಪಬಾಣಧರೋ ಯುವಾ ।
ಗಚ್ಛನ್ ಮನೋರಥೋಽಸ್ಮಾಕಂ ರಾಮಃ ಪಾತು ಸ ಲಕ್ಷ್ಮಣಃ ॥ ೨೫ ॥

ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ।
ಪುಂಡರೀಕವಿಶಾಲಾಕ್ಷೌ ಚೀರಕೃಷ್ಣಾಜಿನಾಂಬರೌ ॥ ೨೬ ॥

---

೨೩. ಅವನ ಸ್ವರೂಪವು ವೇದಾಂತದಿಂದ ತಿಳಿಯಲು ಮಾತ್ರ ಶಕ್ಯವು. ಯಜ್ಞಕ್ಕೆ ಒಡೆಯನು. ಉತ್ತಮನಾದ ಪುರಾಣಪುರುಷನು. ಜಾನಕಿಗೆ ವಲ್ಲಭನು. ಶ್ರೀಮಂತನು. ಬಹುವಾದ ಪರಾಕ್ರಮವುಳ್ಳವನು.

೨೪. ಈ ರೀತಿಯಾದ ರಾಮನಾಮಗಳನ್ನು ಭಕ್ತಿಯಿಂದಲೂ, ಶ್ರದ್ಧೆಯಿಂದಲೂ, ಜಪಿಸಬೇಕು. ಇದನ್ನು ಜಪಿಸಿದರೆ ಅಶ್ವಮೇಧಯಾಗವನ್ನು ಮಾಡಿದರೆ ಬರುವ ಪುಣ್ಯಕ್ಕಿಂತಲೂ ಹೆಚ್ಚು ಪುಣ್ಯವು ಬರುವುದು. ಇದರಲ್ಲಿ ಸಂಶಯವಿಲ್ಲ.

೨೫. ಕವಚವನ್ನು ತೊಟ್ಟುಕೊಂಡು ಖಡ್ಗವನ್ನು ಹಿಡಿದು ಧನುರ್ಬಾಣಗಳನ್ನು ಧರಿಸಿ ಸಿದ್ಧನಾಗಿರುವ ಯುವಕನಾಗಿರುವ, ದಾರಿಯಲ್ಲಿ ಪ್ರಯಾಣ ಮಾಡುತ್ತಿರುವ, ಲಕ್ಷ್ಮಣನೊಡಗೂಡಿದ ರಾಮನು ನಮಗೆ ಇಷ್ಟಾರ್ಥಗಳನ್ನು ಕೊಟ್ಟು ಕಾಪಾಡಲಿ.

೨೬–೨೭. ತರುಣರಾದ, ರೂಪವಂತರಾದ, ಸುಕುಮಾರರೂ ಬಲಿಷ್ಠರೂ ಆದ, ಪುಂಡರೀಕದಂತೆ ವಿಶಾಲವಾದ ಕಣ್ಣುಗಳುಳ್ಳ, ನಾರುಮಡಿಯನ್ನೂ, ಕೃಷ್ಣಾಜಿನವನ್ನೂ ಧರಿಸಿರುವ, ಗೆಡ್ಡೆಗೆಣಸುಗಳನ್ನೂ ಹಣ್ಣುಹಂಪಲುಗಳನ್ನೂ,

ಫಲಮೂಲಾಶನೌ ದಾಂತೌ ತಾಪಸೌ ಬ್ರಹ್ಮಚಾರಿಣೌ ।
ಪುತ್ರೌ ದಶರಥಸ್ಯೈತೌ ಭ್ರಾತರೌ ರಾಮಲಕ್ಷ್ಮಣೌ ॥ ೨೭ ॥

ಧನ್ವಿನೌ ಬದ್ಧನಿಸ್ತ್ರಿಂಶೌ ಕಾಕಪಕ್ಷಧರೌ ಶ್ರುತೌ ।
ವೀರೌ ಮಾಂ ಪಥಿ ರಕ್ಷೇತಾಂ ತಾವುಭೌ ರಾಮಲಕ್ಷ್ಮಣೌ ॥ ೨೮ ॥

ಶರಣ್ಯೌ ಸರ್ವಸತ್ತ್ವಾನಾಂ ಶ್ರೇಷ್ಠೌ ಸರ್ವಧನುಷ್ಮತಾಂ ।
ರಕ್ಷಃ ಕುಲನಿಹಂತಾರೌ ತ್ರಾಯೇತಾಂ ನೋ ರಘೂತ್ತಮೌ ॥ ೨೯ ॥

ಆತ್ತಸಜ್ಜಧನುಷಾವಿಷುಸ್ಪೃಶಾ
ವಕ್ಷಯಾಶುಗನಿಷಂಗಸಂಗಿನೌ ।
ರಕ್ಷಣಾಯ ಮಮ ರಾಮಲಕ್ಷ್ಮಣಾ
ವಗ್ರತಃ ಪಥಿ ಸದೈವ ಗಚ್ಛತಾಂ ॥ ೩೦ ॥

ತಿಂದುಕೊಂಡಿರುವ, ಇಂದ್ರಿಯನಿಗ್ರಹಿಗಳಾದ ತಾಪಸರೂ ಬ್ರಾಹ್ಮಣರೂ ಬ್ರಹ್ಮಚಾರಿಗಳೂ ಆದ, ಸಹೋದರರಾದ, ದಶರಥನ ಮಕ್ಕಳಾದ, ರಾಮಲಕ್ಷ್ಮಣರು ನಮ್ಮ ಇಷ್ಟಾರ್ಥಗಳನ್ನು ಕೊಟ್ಟು ಕಾಪಾಡಲಿ.

೨೮. ಧನುಸ್ಸನ್ನು ಧರಿಸಿರುವ, ಸೊಂಟಕ್ಕೆ ಕತ್ತಿಯನ್ನು ಕಟ್ಟಿಕೊಂಡಿರುವ ಕಾಕಪಕ್ಷವೆಂಬ ಜುಟ್ಟನ್ನು ಧರಿಸಿರುವ, ಪ್ರಸಿದ್ಧರಾದ, ವೀರರಾದ, ರಾಮಲಕ್ಷ್ಮಣರಿಬ್ಬರೂ ನನ್ನನ್ನು ದಾರಿಯಲ್ಲಿ ರಕ್ಷಿಸಲಿ.

೨೯. ಎಲ್ಲಾ ಪ್ರಾಣಿಗಳಿಗೂ ರಕ್ಷಕರಾದ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದ, ರಾಕ್ಷಸರ ಕುಲವನ್ನೇ ನಾಶಮಾಡುವಂಥ, ರಘೂತ್ತಮರು ನಮ್ಮನ್ನು ರಕ್ಷಿಸಲಿ.

೩೦. ಧನುಸ್ಸನ್ನು ಸಿದ್ಧಮಾಡಿ ಹಿಡಿದುಕೊಂಡಿರುವ, ಬಾಣಗಳನ್ನು ಕೈಯ್ಯಲ್ಲಿ ಹಿಡಿದುಕೊಂಡಿರುವ, ಅಕ್ಷಯಬಾಣದ ಬತ್ತಳಿಕೆಯನ್ನು ಧರಿಸಿರುವ, ರಾಮಲಕ್ಷ್ಮಣರು ನನ್ನನ್ನು ಕಾಪಾಡುವುದಕ್ಕೋಸ್ಕರ ದಾರಿಯಲ್ಲಿ ನನ್ನ ಮುಂದುಗಡೆಯಲ್ಲಿ ಯಾವಾಗಲೂ ಹೋಗಲಿ.

ಆರಾಮಃ ಕಲ್ಪವೃಕ್ಷಾಣಾಂ ವಿರಾಮಸ್ಸಕಲಾಪದಾಂ ।
ಅಭಿರಾಮಸ್ತ್ರಿಲೋಕಾನಾಂ ರಾಮಶ್ಶ್ರೀಮಾನ್ ಸ ನಃ ಪ್ರಭುಃ ॥ ೩೧ ॥

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇನಮಃ ॥ ೩೨ ॥

ಶ್ರೀರಾಮ ರಾಮ ರಘುನಂದನ ರಾಮ ರಾಮ
ಶ್ರೀರಾಮ ರಾಮ ಭರತಾಗ್ರಜ ರಾಮ ರಾಮ
ಶ್ರೀರಾಮ ರಾಮ ರಣಕರ್ಕಶ ರಾಮ ರಾಮ
ಶ್ರೀರಾಮ ರಾಮ ಶರಣಂ ಭವ ರಾಮ ರಾಮ ॥ ೩೩ ॥

ಲೋಕಾಭಿರಾಮಂ ರಣರಂಗಧೀರಂ
ರಾಜೀವನೇತ್ರಂ ರಘುವಂಶನಾಥಂ ।
ಕಾರುಣ್ಯಪಾತ್ರಂ ಕರುಣಾಕರಂ ತಂ
ಶ್ರೀರಾಮಚಂದ್ರಂ ಶರಣಂ ಪ್ರಪದ್ಯೇ ॥ ೩೪ ॥

೩೧–೩೨. ಕಲ್ಪವೃಕ್ಷಗಳಿಗೆ ತೋಟದಂತಿರುವ, ಸಕಲ ಆಪತ್ತುಗಳನ್ನೂ ಕೊನೆಗಾಣಿಸುವ, ಮೂರುಲೋಕಗಳಿಗೂ ಮನೋಹರನಾದ, ಶ್ರೀಮಂತನಾದ, ರಾಮನೇ ನನಗೆ ಪ್ರಭುವು. ರಾಮನೇ! ನಿನಗೆ ನಮಸ್ಕಾರವು. ರಾಮಭದ್ರನೇ! ನಿನಗೆ ನಮಸ್ಕಾರವು. ರಾಮಚಂದ್ರನೇ! ನಿನಗೆ ನಮಸ್ಕಾರವು. ವೇಧಸ್ಸಿ ರೂಪನೇ! ನಿನಗೆ ನಮಸ್ಕಾರವು. ರಘುನಾಥನೇ! ನಿನಗೆ ನಮಸ್ಕಾರವು. ನಾಥನೇ! ನಿನಗೆ ನಮಸ್ಕಾರವು. ಸೀತಾಪತಿಯೇ! ನಿನಗೆ ನಮಸ್ಕಾರವು.

೩೩. ಶ್ರೀರಾಮರಾಮನೇ! ರಘುನಂದನಾದ ರಾಮರಾಮನೇ! ಶ್ರೀರಾಮ ರಾಮನೇ! ಭರತಾಗ್ರಜನಾದ ರಾಮರಾಮನೇ! ಶ್ರೀರಾಮರಾಮನೇ! ರಣ ಕರ್ಕಶನಾದ ರಾಮರಾಮನೇ! ಶ್ರೀರಾಮರಾಮನೇ! ನನಗೆ ರಕ್ಷಕನಾಗು.

೩೪. ಲೋಕಗಳಿಗೆ ಮನೋಹರನಾದ, ರಣರಂಗದಲ್ಲಿ ಧೀರನಾದ, ಕಮಲದಂತೆ ಕಣ್ಣುಗಳುಳ್ಳ, ರಘುವಂಶಕ್ಕೆ ಒಡೆಯನಾದ, ಕೃಪೆಗೆ ಪಾತ್ರನಾದ, ಕರುಣೆಗೆ ಗಣಿಯಾದ, ಶ್ರೀರಾಮಚಂದ್ರನನ್ನು ಶರಣು ಹೊಂದುತ್ತೇನೆ.

ದಕ್ಷಿಣೇ ಲಕ್ಷ್ಮಣೋ ಯಸ್ಯ ವಾಮೇ ಚ ಜನಕಾತ್ಮಜಾ ।
ಪುರತೋ ಮಾರುತಿರ್ಯಸ್ಯ ತಂ ವಂದೇ ರಘುನಂದನಂ ॥ ೩೫ ॥

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಂ ।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಂ ॥ ೩೬ ॥

ಅಘೌಘ ತಿಷ್ಠ ದೂರೇ ತ್ವಂ ರೋಗಾಸ್ತಿಷ್ಠಂತು ದೂರತಃ ।
ವರೀವರ್ತಿ ಸದಾಸ್ಮಾಕಂ ಹೃದಿ ರಾಮೋ ಧನುರ್ಧರಃ ॥ ೩೭ ॥

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶರಣಂ ಪ್ರಪದ್ಯೇ ॥ ೩೮ ॥

೩೫–೩೬. ಯಾವ ರಾಮನ ಬಲಗಡೆಯಲ್ಲಿ ಲಕ್ಷ್ಮಣನೂ, ಎಡಗಡೆಯಲ್ಲಿ ಸೀತೆಯೂ, ಎದುರಿಗೆ ಹನುಮಂತನೂ, ಇರುವರೋ ಅಂತಹ ರಘುನಾಯಕನನ್ನು ನಮಸ್ಕರಿಸುತ್ತೇನೆ. ಸಮುದ್ರವನ್ನು ಗೋವಿನ ಪಾದದಂತೆ ಸುಲಭವಾಗಿ ದಾಟಿದ, ರಾವಣನೆಂಬ ರಾಕ್ಷಸನನ್ನು ಸೊಳ್ಳೆಯಂತೆ ತಿರಸ್ಕರಿಸಿದ, ರಾಮಾಯಣವೆಂಬ ದೊಡ್ಡ ಹಾರಕ್ಕೆ ರತ್ನಪ್ರಾಯನಾದ, ವಾಯುಪುತ್ರನಾದ ಹನುಮಂತನನ್ನು ನಮಸ್ಕರಿಸುತ್ತೇನೆ.

೩೭. ಎಲೈ ಪಾಪಗಳ ಗುಂಪೇ! ನೀನು ದೂರದಲ್ಲಿರು. ರೋಗಗಳಿರಾ! ನೀವು ದೂರವಾಗಿ ಹೋಗಿರಿ. ನನ್ನ ಹೃದಯದಲ್ಲಿ ಧನುರ್ಧರನಾದ ರಾಮನು ಯಾವಾಗಲೂ ಇರುವನು.

೩೮. ಮನಸ್ಸಿನಂತೆ ವೇಗವುಳ್ಳ ಗಾಳಿಗೆ ಸಮವಾದ ವೇಗವುಳ್ಳ, ಜಿತೇಂದ್ರಿಯನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ, ವಾಯುಪುತ್ರನಾದ, ವಾನರ ಗುಂಪಿನಲ್ಲಿ ಮುಖ್ಯನಾದ, ಶ್ರೀರಾಮ ದೂತನಾದ, ಹನುಮಂತನನ್ನು ಶರಣು ಹೊಂದುತ್ತೇನೆ.

ರಾಮ ರಾಮ ತವ ಪಾದಪಂಕಜಂ
ಚಿಂತಯಾಮಿ ಭವಬಂಧಮುಕ್ತಯೇ ।
ವಂದಿತಂ ಸುರನರೇಂದ್ರಮೌಲಿಭಿಃ
ಧ್ಯಾಯಿತಂ ಮನಸಿ ಯೋಗಿಭಿಸ್ಸದಾ ॥ ೩೯ ॥

ರಾಮಂ ಲಕ್ಷ್ಮಣಪೂರ್ವಜಂರಘುವರಂ ಸೀತಾಪತಿಂ ಸುಂದರಂ ।
ಕಾಕುತ್ಸ್ಥಂ ಕರುಣಾರ್ಣವಂ ಗುಣನಿಧಿಂ ವಿಪ್ರಪ್ರಿಯಂ ಧಾರ್ಮಿಕಂ ।
ರಾಜೇಂದ್ರಂ ಸತ್ಯಸಂಧಂ ದಶರಥತನಯಂ ಶ್ಯಾಮಲಂ ಶಾಂತಿಮೂರ್ತಿಂ ।
ವಂದೇ ಲೋಕಾಭಿರಾಮಂ ರಘುಕುಲತಿಲಕಂ ರಾಘವಂ ರಾವಣಾರಿಂ॥೪೦॥

ಏತಾನಿ ರಾಮನಾಮಾನಿ ಪ್ರಾತರುತ್ಥಾಯ ಯಃ ಪಠೇತ್ ।
ಅಪುತ್ರೋ ಲಭತೇ ಪುತ್ರಂ ಧನಾರ್ಥೀ ಲಭತೇ ಧನಂ ॥ ೪೧ ॥

---

೩೯. ರಾಮ! ರಾಮನೇ! ದೇವತೆಗಳ ತಲೆಯಿಂದಲೂ, ರಾಜರ ತಲೆಯಿಂದಲೂ, ನಮಸ್ಕೃತವಾದ ಯೋಗಿಗಳಿಂದ ಮನಸ್ಸಿನಲ್ಲಿ ಧ್ಯಾನಮಾಡಲ್ಪಟ್ಟ, ನಿನ್ನ ಪಾದಕಮಲಗಳನ್ನು ಈ ಸಂಸಾರವೆಂಬ ಬಂಧದ ಮುಕ್ತಿಗೋಸ್ಕರ ಯಾವಾಗಲೂ ಚಿಂತಿಸುತ್ತೇನೆ.

೪೦. ಲಕ್ಷ್ಮಣನಿಗೆ ಅಣ್ಣನಾದ, ರಘುವಂಶದಲ್ಲಿ ಶ್ರೇಷ್ಠನಾದ, ಸೀತೆಗೆ ಗಂಡನಾದ, ಸುಂದರನಾದ, ಕಕುಸ್ಥನವಂಶದಲ್ಲಿ ಹುಟ್ಟಿದ, ಕರುಣಾಸಮುದ್ರನಾದ, ಗುಣನಿಧಿಯಾದ, ಬ್ರಾಹ್ಮಣರಿಗೆ ಪ್ರಿಯನಾದ, ಧಾರ್ಮಿಕನಾದ, ರಾಜೇಂದ್ರನಾದ, ಸತ್ಯಸಂಧನಾದ, ದಶರಥನ ತನಯನಾದ, ಶ್ಯಾಮಲವರ್ಣವುಳ್ಳ ಶಾಂತಮೂರ್ತಿಯಾದ, ಲೋಕಕ್ಕೆ ಅಭಿರಾಮನಾದ, ರಘುಕುಲಕ್ಕೆ ತಿಲಕನಾದ, ರಾಘವನಾದ, ರಾವಣಾರಿಯಾದ, ಶ್ರೀರಾಮನನ್ನು ವಂದಿಸುತ್ತೇನೆ.

೪೧. ಈ ರಾಮನಾಮಗಳನ್ನು ಬೆಳಗ್ಗೆ ಎದ್ದು ಯಾವನು ಹೇಳುವನೋ ಅವನು ಪುತ್ರಾರ್ಥಿಯಾಗಿದ್ದರೆ ಪುತ್ರರನ್ನೂ ಧನಾರ್ಥಿಯಾಗಿದ್ದರೆ ಧನವನ್ನೂ ಹೊಂದುತ್ತಾನೆ.

ಮಾತಾ ರಾಮೋ ಮತ್ಪಿತಾ ರಾಮಚಂದ್ರಃ
ಸ್ವಾಮೀ ರಾಮೋ ಮತ್ಸಖಾ ರಾಮಚಂದ್ರಃ ।
ಸರ್ವಸ್ವಂ ಮೇ ರಾಮಚಂದ್ರೋ ದಯಾಳುಃ
ನಾನ್ಯಂ ಜಾನೇ ನೈವ ಜಾನೇ ನ ಜಾನೇ ॥ ೪೨ ॥

ಶ್ರೀರಾಮನಾಮಾಮೃತಮಂತ್ರಬೀಜ
ಸಂಜೀವನೀ ಚೇನ್ಮನಸಿ ಪ್ರವಿಷ್ಟಾ ।
ಹಾಲಾಹಲಂ ವಾ ಪ್ರಳಯಾನಲಂ ವಾ
ಮೃತ್ಯೋರ್ಮುಖಂ ವಾ ವಿಶತಾಂ ಕುತೋ ಭೀಃ ॥ ೪೩ ॥

ಶ್ರೀಶಬ್ದಪೂರ್ವಂ ಜಯಶಬ್ದಮಧ್ಯಂ
ಜಯದ್ವಯೇನಾಪಿ ಪುನಃ ಪ್ರಯುಕ್ತಂ ।
ತ್ರಿಸ್ಸಪ್ತಕೃತ್ವೋ ರಘುನಾಥನಾಮ
ಜಪಾನ್ನಿಹನ್ಯಾದ್ದ್ವಿಜಕೋಟಿಹತ್ಯಾಃ ॥ ೪೪ ॥

---

೪೨ ನನಗೆ ತಾಯಿಯು ರಾಮನು. ನನಗೆ ತಂದೆಯೂ ರಾಮಚಂದ್ರನು. ನನಗೆ ಸ್ವಾಮಿಯೂ ರಾಮನು. ನನಗೆ ಸ್ನೇಹಿತನೂ ರಾಮಚಂದ್ರನು. ನನಗೆ ಎಲ್ಲವೂ ಕೂಡ ಆ ದಯಾಳುವಾದ ರಾಮಚಂದ್ರನೇ ಆಗಿರುವನು. ಬೇರೆ ಯಾದವರೊಬ್ಬರನ್ನೂ ನಾನು ತಿಳಿದೇ ಇಲ್ಲ. ಖಂಡಿತವಾಗಿಯೂ ತಿಳಿದೇ ಇಲ್ಲ.

೪೩. ಅಮೃತದಂತಿರುವ ಶ್ರೀರಾಮನಾಮವೆಂಬ ಸಂಜೀವಿನಿಯ ಬಳ್ಳಿಯು ಮನಸ್ಸನ್ನು ಹೊಕ್ಕರೆ ಹಲಾಹಲವೆಂಬ ವಿಷವನ್ನಾಗಲೀ, ಪ್ರಳಯಾನಲವನ್ನಾಗಲಿ, ಮೃತ್ಯುಮುಖವನ್ನಾಗಲೀ, ಯಾವುದನ್ನು ಬೇಕಾದರೂ ಆಗಲಿ ಪ್ರವೇಶಿಸಿದರೆ ತಾನೇ ಭಯವೆಲ್ಲಿಂದ ಬಂದೀತು?

೪೪. ಶ್ರೀಶಬ್ದವನ್ನು ಆದಿಯಲ್ಲಿ ಹೊಂದಿರುವ ಜಯಶಬ್ಧವನ್ನು ಮಧ್ಯದಲ್ಲಿ ಹೊಂದಿ ಅದರ ಮಧ್ಯದಲ್ಲಿ ರಘುನಾಥನೆಂಬ ನಾಮವು ತಾನಿದ್ದು ಕೊನೆಯಲ್ಲಿ ಜಯ ಜಯ ಎಂಬ ಎರಡು ಜಯ ಕಾರಗಳಿಂದ ಕೂಡಿದ "ಶ್ರೀಜಯ ರಘುನಾಥ ಜಯ ಜಯ" ಎಂಬ ನಾಮವನ್ನು ಇಪ್ಪತ್ತೊಂದುಬಾರಿ ಜಪಿಸಿದರೆ ಕೋಟಿ ಬ್ರಹ್ಮಹತ್ಯೆಗಳೂ ಹೋಗುವುವು. || ?

ಏವಂ ಗಿರೀಂದ್ರಜೇ ಪ್ರೋಕ್ತಾ ರಾಮರಕ್ಷಾ ಮಯಾ ತವ |
ಮಯೋಪದಿಷ್ಟಾ ಯಥಾ ಸ್ವಪ್ನೇ ವಿಶ್ವಾಮಿತ್ರಾಯ ವೈ ಪುರಾ ॥ ೪೫ ॥

॥ ರಾಮದಾಸ ಉವಾಚ ॥

ಏವಂ ಶಿವೇನೋಪದಿಷ್ಟಾಂ ಶ್ರುತ್ವಾ ದೇವೀ ಗಿರೀಂದ್ರಜಾ |
ರಾಮರಕ್ಷಾಂ ಪಠಿತ್ವಾ ಸಾ ಸ್ಕಂದಂ ಸಮಭಿಮಂತ್ರಯತ್ ॥ ೪೬ ॥

ತಸ್ಯಾಸ್ತೇಜೋಬಲೇನೈವ ಜಘಾನ ತಾರಕಾಸುರಂ |
ಷಡಾನನಃ ಕ್ಷಣಾದೇವ ಕೃತಕೃತ್ಯೋಽಭವತ್ಪುರಾ ॥ ೪೭ ॥

ಸೈವೇಯಂ ರಾಮರಕ್ಷಾ ತೇ ಮಯಾಖ್ಯಾತಾತಿಪುಣ್ಯದಾ |
ಯಸ್ಯಾಃ ಶ್ರವಣಮಾತ್ರೇಣ ಕಸ್ಯಾಪಿ ನ ಭಯಂ ಭವೇತ್ ॥ ೪೮ ॥

ವಾಲ್ಮೀಕಿನಾನಯಾ ಪೂರ್ವಂ ಕುಶಾಯ ಹ್ಯಭಿಷೇಚನಂ |
ಕೃತಂ ಬಾಲಗ್ರಹಾಣಾಂ ಚ ಶಾಂತ್ಯರ್ಥಂ ಸಾ ಮಯೋದಿತಾ ॥ ೪೯ ॥

---

೪೫ ಎಲೈ ಗಿರೀಂದ್ರನ ತನಯಳೇ ! ಈ ರೀತಿಯಾಗಿರುವ ರಾಮರಕ್ಷಾ ಮಂತ್ರವನ್ನು ನಿನಗೆ ಉಪದೇಶಮಾಡಿದ್ದೇನೆ. ಇದನ್ನೇ ನಾನು ಸ್ವಪ್ನದಲ್ಲಿ ವಿಶ್ವಾಮಿತ್ರನಿಗೆ ಉಪದೇಶಿಸಿದುದು.

೪೬–೪೮. ರಾಮದಾಸನು ಹೇಳಿದನು—ಶಿವನು ಉಪದೇಶಮಾಡಿದ ರಾಮರಕ್ಷಾಮಂತ್ರವನ್ನು ಗಿರಿಜೆಯು ತಿಳಿದುಕೊಂಡು ರಾಮರಕ್ಷೆಯನ್ನು ಹೇಳಿ ಸ್ಕಂದನಿಗೆ ಮಂತ್ರಿಸಿದಳು. ಆ ಷಡಾನನನಾದ ಸ್ಕಂದನು ಕ್ಷಣಕಾಲದಲ್ಲಿಯೇ ಆ ರಾಮರಕ್ಷೆಯ ತೇಜೋಬಲದಿಂದ ತಾರಕಾಸುರನನ್ನು ಕೊಂದು ಕೃತಕೃತ್ಯನಾದನು. ಪುಣ್ಯಪ್ರದವಾದ ಆ ರಾಮರಕ್ಷಾಸ್ತೋತ್ರವನ್ನೇ ನಾನು ನಿನಗೆ ಹೇಳಿದ್ದೇನೆ. ಇದನ್ನು ಕೇಳಿದರೇನೇ ಯಾವನಿಗೂ ಭಯವೆಂಬುದೇ ಇರುವುದಿಲ್ಲ.

೪೯. ಬಾಲಗ್ರಹದ ಶಾಂತಿಗೋಸ್ಕರವಾಗಿ ವಾಲ್ಮೀಕಿಯು ಈ ರಾಮರಕ್ಷಾಸ್ತೋತ್ರವನ್ನು ಹೇಳಿಕೊಂಡು ಕುಶನಿಗೆ ಅಭಿಷೇಕಮಾಡಿದನು. ಅದನ್ನೇ ಈಗ ನಾನು ನಿನಗೆ ಹೇಳಿದ್ದೇನೆ.

ಬಾಲಾನಾಂ ಗ್ರಹಶಾಂತ್ಯರ್ಥಂ ಜಪನೀಯಾ ನಿರಂತರಂ ।
ರಾಮರಕ್ಷಾ ಮಹಾಶ್ರೇಷ್ಠಾ ಮಹಾಘೌಘನಿವಾರಿಣೀ ॥ ೫೦ ॥

ನಾಸ್ಯಾಃ ಪರತರಂ ಸ್ತೋತ್ರಂ ನಾಸ್ಯಾಃ ಪರತರೋ ಜಪಃ ।
ನಾಸ್ಯಾಃ ಪರತರಂ ಕಿಂಚಿತ್ಸತ್ಯಂ ಸತ್ಯಂ ವದಾಮ್ಯಹಂ ॥ ೫೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಜನ್ಮಕಾಂಡೇ ರಾಮರಕ್ಷಾಸ್ತೋತ್ರ
ಕಥನಂ ನಾಮ ಪಂಚಮಸ್ಸರ್ಗಸ್ಸಮಾಪ್ತಃ

---

೫೦. ಇದನ್ನು ಯಾವಾಗಲೂ ಜಪಿಸುತ್ತಿದ್ದರೆ ಬಾಲಕರಿಗೆ ಬಾಲಗ್ರಹವು ಶಾಂತವಾಗಿರುತ್ತದೆ. ಈ ರಾಮರಕ್ಷೆಯು ಮಹಾಶ್ರೇಷ್ಠವಾದುದು. ಮಹಾ ಪಾಪಗಳನ್ನು ನಾಶಮಾಡುತ್ತದೆ.

೫೧. ಇದಕ್ಕಿಂತಲೂ ಬೇರೆಯಾದ ಸ್ತೋತ್ರವಿಲ್ಲ. ಇದಕ್ಕಿಂತಲೂ ಬೇರೆಯಾದ ಜಪವಿಲ್ಲ. ಇದಕ್ಕಿಂತಲೂ ಶ್ರೇಷ್ಠವಾದುದು ಒಂದೂ ಇಲ್ಲವೇ ಇಲ್ಲ. ಇದುಸತ್ಯವು. ಸತ್ಯವಾಗಿಯೂ ನಾನು ಹೇಳುತ್ತೇನೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ರಾಮರಕ್ಷಾಸ್ತೋತ್ರ
ಕಥನವೆಂಬ ಐದನೆಯ ಸರ್ಗವು ಸಮಾಪ್ತವು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

|| ಐದನೆಯ ಸರ್ಗದ ಸಾರಾಂಶವು ||

ವಾಲ್ಮೀಕಿಯು ಕುಶನಿಗೆ ರಾಮರಕ್ಷೆಯಿಂದ ಅಭಿಮಂತ್ರಿಸಿದನಷ್ಟೆ! ಅದನ್ನು ಹೇಳೆಂದು ವಿಷ್ಣುದಾಸನು ಕೇಳಲು ರಾಮದಾಸನು ಅದನ್ನು ಹೇಳಿದನು. ಇದನ್ನು ಹೇಳಿದರೆ ಮಕ್ಕಳಿಲ್ಲದವರಿಗೆ ಮಕ್ಕಳೂ ಹಣವಿಲ್ಲದವರಿಗೆ ಹಣವೂ ಲಭಿಸುತ್ತವೆ. ಎಲ್ಲಿಯೂ ಭಯವೆಂಬುದೇ ಇರುವುದಿಲ್ಲ. ಶಿವನ ಅಪ್ಪಣೆಯಂತೆ ಪಾರ್ವತಿಯು ಕುಮಾರಸ್ವಾಮಿಗೆ ಈ ರಾಮರಕ್ಷಾಸ್ತೋತ್ರದಿಂದ ಅಭಿಮಂತ್ರಿಸಲು ಆ ಕುಮಾರಸ್ವಾಮಿಯು ತಾರಕಾಸುರನನ್ನು ಕೊಲ್ಲಲು ಶಕ್ತನಾದನು. ಇದು ಬಾಲರಿಗೆ ಬರುವ ಬಾಲಗ್ರಹಗಳನ್ನು ನಾಶಮಾಡುವುದು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ಷಷ್ಠಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಏಕದಾ ಜಾನಕೀ ಪ್ರಾಹ ವಾಲ್ಮೀಕಿಂ ಮುನಿಪುಂಗವಂ ।
ಕಥಯಸ್ವ ವ್ರತಂ ಯೇನ ರಾಮಯೋಗೋ ಭವೇನ್ಮಮ ॥ ೧ ॥

ತತ್ಸೀತಾವಚನಂ ಶ್ರುತ್ವಾ ವಾಲ್ಮೀಕಿಸ್ತಾಂ ವಚೋಽಬ್ರವೀತ್ ।
ಪ್ರತಿಪದ್ದಿನಮಾರಭ್ಯ ಯಾವತ್ಸಾ ನವಮೀ ಸಿತಾ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಆರನೆಯ ಸರ್ಗವು

೧. ರಾಮದಾಸನು ಹೇಳಿದನು—ಹೀಗಿರುತ್ತಿರಲು ಒಂದುಸಾರಿ ಸೀತಾದೇವಿಯು ವಾಲ್ಮೀಕಿಯನ್ನು ಕುರಿತು ಎಲೈ ಮುನಿಯೇ! ನನಗೆ ಶ್ರೀರಾಮನ ಪ್ರಾಪ್ತಿಯಾಗುವಂತಹ ಒಂದು ವ್ರತವನ್ನು ಉಪದೇಶಿಸು ಎಂದು ಕೇಳಿದಳು.

೨. ಸೀತೆಯ ಈ ಮಾತನ್ನು ಕೇಳಿ ವಾಲ್ಮೀಕಿಯು ಎಲೈ ಸೀತೆಯೇ! ಶುಕ್ಲಪಕ್ಷದಲ್ಲಿ ಪಾಡ್ಯದಿಂದ ಮೊದಲುಗೊಂಡು ನವಮಿಯವರೆಗೂ ಒಂಭತ್ತು ದಿನಗಳೂ ಪೂರ್ತಿಯಾಗಿ ನಾನು ಹೇಳುವ ವ್ರತವನ್ನು ಮಾಡು.

ತಾವನ್ನವದಿನಂ ಸೀತೇ ವ್ರತಂ ಕುರು ಮಯೋಚ್ಯತೇ ।
ಪ್ರತಿಪದ್ಯಾಂ ರಾಮಚಂದ್ರಪಾದುಕೇ ಧಾತುನಿರ್ಮಿತೇ ॥ ೩ ॥

ಕೃತ್ವಾರ್ಘ್ಯನವಕಮುಲೈರ್ದೇಹಿ ಮಂತ್ರಾಂಜಲಿಂ ಶುಭಾಂ ।
ತತಃ ಪುತ್ರಾನನಾಭ್ಯಾಂ ತ್ವಂ ಜನ್ಮಕಾಂಡಂ ಶುಭಂ ಶ್ರುಣು ॥ ೪ ॥

ಅಷ್ಟಾದಶಕಮುಲೈಶ್ಚ ದ್ವಿತೀಯಾಯಾಂ ಶುಭಾಂಜಲಿಂ ।
ಮಂತ್ರೈರ್ದೇಹಿ ಪೂಜನಾಂತೇ ಪತಿಪಾದುಕಯೋರ್ಮುದಾ ॥ ೫ ॥

ಪತಿಂ ವಿನಾ ಸ್ತ್ರಿಯಾ ನಾನ್ಯತ್ಪೂಜನೀಯಂ ಹಿ ದೈವತಂ ।
ಜನ್ಮಕಾಂಡಂ ದ್ವಿವಾರಂ ತು ಶ್ರುಣು ಭಕ್ತ್ಯಾ ಶುಚಿವ್ರತೇ ॥ ೬ ॥

೩-೪. ಶ್ರೀರಾಮನ ಪಾದುಕೆಗಳನ್ನು ಗೈರಿಕಾದಿಧಾತುಗಳಿಂದ ಮಾಡಿಸಿ ಪ್ರತಿಪತ್ತಿನದಿನ ಅದನ್ನು ಸ್ಥಾಪಿಸಿ ಆವಾಹಿಸಬೇಕು. ಅದನ್ನು ಪೂಜಿಸಿ ಒಂಭತ್ತು ಕಮಲದ ಹೂಗಳಿಂದ ಮಂತ್ರವನ್ನು ಹೇಳಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು. ಅನಂತರ ಮಕ್ಕಳಿಂದ ಶುಭವಾದ ಜನ್ಮಕಾಂಡದ ಕಥೆಯನ್ನು ಕೇಳು.

೫. ಎರಡನೆಯದಿನ ಆ ಪಾದುಕೆಗಳನ್ನು ಪೂಜಿಸಿ ಕೊನೆಗೆ ಹದಿನೆಂಟು ಕಮಲದ ಹೂಗಳಿಂದ ಮೂಲಮಂತ್ರವನ್ನು ಹೇಳಿ ಹೊಗಳಿ ಆ ಪಾದುಕೆಗಳ ಮೇಲೆ ಅರ್ಪಿಸು.

೬. ಹೆಂಡತಿಯಾದವಳು ಗಂಡನನ್ನು ಬಿಟ್ಟು ಮತ್ತೊಂದು ದೈವವನ್ನು ಪೂಜಿಸಕೂಡದು. ಹೆಂಡತಿಗೆ ಗಂಡನೇ ದೇವರು. ಮತ್ತೊಂದಿಲ್ಲ. ಅನಂತರ ಆ ಜನ್ಮಕಾಂಡವನ್ನು ಎರಡನೆಯ ದಿವಸ ಎರಡುಬಾರಿ ಕೇಳು

ಏವಂ ವೃದ್ಧಿರ್ನವಾಬ್ಜೈಶ್ಚ ಕಾರ್ಯಾ ಸೀತೇ ದಿನೇ ದಿನೇ ।
ನವಮ್ಯಾಮೇಕಾಶೀತ್ಯಬ್ಜೈಃ ಪೂಜ್ಯ ಸ್ವಭರ್ತೃಪಾದುಕೇ ॥ ೭ ॥

ನವವಾರಂ ಜನ್ಮಕಾಂಡಂ ಪುತ್ರಾಸ್ಯಾಭ್ಯಾಂ ಸುಖಂ ಶ್ರುಣು ।
ತತೋದಶಮ್ಯಾಂ ಸುಸ್ನಾತೈಕಾಶೀತಿದ್ವಿಜದಂಪತೀ ॥ ೮ ॥

ಸಂಪೂಜ್ಯ ವಸ್ತ್ರಾಭರಣೈರ್ಭೋಜಯಸ್ವಾತ್ರ ಮೈಥಿಲಿ ।
ದತ್ವಾ ತೇಭ್ಯೋ ದಕ್ಷಿಣಾಸ್ತ್ವಂ ವಿಸರ್ಜಯ ಪ್ರಣಮ್ಯ ತಾ ॥ ೯ ॥

ಅನೇನ ವ್ರತರಾಜೇನ ಜನ್ಮಕಾಂಡಶ್ರವೇಣ ಹಿ ।
ಅಚಿರಾತ್ಪತಿನಾ ಯೋಗಂ ಪ್ರಾಪ್ಸ್ಯಸಿ ತ್ವಂ ವಿದೇಹಜೇ ॥ ೧೦ ॥

---

೭. ಎಲೈ ಸೀತೆಯೇ ! ಇದೇ ರೀತಿಯಾಗಿ ಒಂದುದಿನದಿಂದ ಮತ್ತೊಂದು ದಿನಕ್ಕೆ ಒಂಭತ್ತೊಂಭತ್ತರಂತೆ ಕಮಲಗಳನ್ನು ಹೆಚ್ಚಿಸಿಕೊಂಡು ಹೋಗಬೇಕು. ಕಥೆ ಕೇಳುವುದನ್ನೂ ಒಂದೊಂದು ಬಾರಿಯಂತೆ ಹೆಚ್ಚಿಸಿಕೊಂಡು ಹೋಗಬೇಕು. ಈ ರೀತಿಯಾಗಿ ಒಂಭತ್ತೊಂಭತ್ತು ಕಮಲಗಳಿಂದ ವೃದ್ಧಿಯನ್ನು ಮಾಡಿಕೊಂಡು ಹೋಗುತ್ತಾ ಕೊನೆಗೆ ನವಮಿಯದಿನ ಎಂಭತ್ತೊಂದು ಕಮಲಗಳನ್ನು ಆ ಪಾದುಕೆಗಳಿಗೆ ಅರ್ಪಿಸಬೇಕು.

೮. ಮಕ್ಕಳ ಮುಖದಿಂದ ಕೊನೆಯದಿನ ಒಂಬತ್ತುಬಾರಿ ಜನ್ಮಕಾಂಡದ ಕಥೆಯನ್ನು ಕೇಳಬೇಕು. ಅನಂತರ ದಶಮಿಯ ದಿನ ಸ್ನಾನಮಾಡಿದ ಎಂಭತ್ತೊಂದು ಜನ ದಂಪತಿಗಳಿಗೆ ಆಹ್ವಾನವನ್ನು ಕೊಡಬೇಕು.

೯. ಅವರನ್ನು ವಸ್ತ್ರಗಳಿಂದಲೂ ಆಭರಣಗಳಿಂದಲೂ ಪೂಜಿಸಿ ಊಟ ಮಾಡಿಸಬೇಕು. ಅವರಿಗೆ ದಕ್ಷಿಣೆಯನ್ನು ಕೊಟ್ಟು ನಮಸ್ಕರಿಸಿ ಕಳುಹಿಸಿ ಕೊಡಬೇಕು.

೧೦. ಉತ್ತಮವಾದ ಈ ವ್ರತದಿಂದಲೂ ಜನ್ಮಕಾಂಡವನ್ನು ಕೇಳುವುದರಿಂದಲೂ, ಸ್ವಲ್ಪಕಾಲದಲ್ಲಿಯೇ ಗಂಡನೊಡನೆ ಕೂಡಿಕೊಂಡು ಆತನನ್ನು ಹೊಂದಿಕೊಂಡಿರುತ್ತೀಯೆ.

ಸಂಯೋಗಕರಣಂ ನಾಮ ವ್ರತಂ ಚೇದಂ ಸುಪುಣ್ಯದಂ ।
ಯೇ ಕುರ್ವಂತ್ಯತ್ರ ಮನುಜಾಃ ಸ್ವೀಯೈರ್ಯೋಗಂ ಲಭಂತಿ ತೇ ॥ ೧೧ ॥

ತನ್ಮಾನೇರ್ವಚನಂ ಶ್ರುತ್ವಾ ಜಾನಕೀ ಪ್ರಾಹ ತಂ ಪುನಃ ।
ಬಹೂನ್ಯಬ್ಜಾನಿ ಸಾಕೇತೇ ಪುಷ್ಪಾರಾಮಜಲಾಶಯೇ ॥ ೧೨ ॥

ಸಂತಿ ಕಸ್ತತ್ರ ವೈ ಗಂತುಂ ಸಮರ್ಥಸ್ತ್ವಿಹ ವರ್ತತೇ ।
ರಾಮಾಜ್ಞಯಾ ರಾಮದೂತೈಃ ಕ್ರಿಯತೇ ರಕ್ಷಣಂ ಸದಾ ॥ ೧೩ ॥

ತತ್ಸೀತಾವಚನಂ ಶ್ರುತ್ವಾ ತತ್ಪುರಸ್ಸಂಸ್ಥಿತೋ ಲವಃ ।
ಅಬ್ರವೀನ್ಮಾತರಂ ವಾಕ್ಯಂ ಪಂಚವರ್ಷವಯಸ್ಸ್ಥಿತಃ ॥ ೧೪ ॥

ಅಂಬಾರಂಭಂ ವ್ರತಸ್ಯಾದ್ಯ ತ್ವಂ ಕುರುಷ್ವಾಚಿರಾದಿಹ ।
ಅಬ್ಜಾನ್ಯಹಂ ಪ್ರದಾಸ್ಯಾಮಿ ಸಮಾನೀಯ ನಿರಂತರಂ ॥ ೧೫ ॥

---

೧೧. ಈ ವ್ರತಕ್ಕೆ ಸಂಯೋಗಕರಣವೆಂದು ಹೆಸರು. ಇದು ಬಹು ಪುಣ್ಯಪ್ರದವಾದುದು. ಯಾವ ಮನುಷ್ಯರು ಈ ವ್ರತವನ್ನು ಮಾಡುತ್ತಾರೆಯೋ ಅವರು ತಾವು ಉದ್ದೇಶಪಟ್ಟವರೊಡನೆ ಸೇರುತ್ತಾರೆ.

೧೨-೧೩. ಜಾನಕಿಯು ವಾಲ್ಮೀಕಿಯು ಹೇಳಿದ ಈ ಮಾತನ್ನು ಕೇಳಿ ಬಹುವಾದ ಕಮಲಗಳು ಅಯೋಧ್ಯೆಯಲ್ಲಿರುವ ಉಪವನದ ಕೊಳಗಳಲ್ಲಿವೆ. ಅಲ್ಲಿಗೆ ಹೋಗಲು ಇಲ್ಲಿ ಯಾರು ಸಮರ್ಥರಾದವರು ಇದ್ದಾರೆ? ರಾಮನ ಅಪ್ಪಣೆಯಮೇರೆಗೆ ರಾಮದೂತರು ಅದನ್ನು ಯಾವಾಗಲೂ ರಕ್ಷಿಸುತ್ತಿದ್ದಾರೆ. ಎಂದಳು.

೧೪. ತಾಯಿಯು ಈ ಮಾತನ್ನು ಕೇಳಿ ಆಕೆಯ ಎದುರಿನಲ್ಲಿದ್ದ ಲವನು ತಾನು ಐದುವರ್ಷದ ಮಗುವಾದರೂ ತಾಯಿಯನ್ನು ಕುರಿತು ಇಂತೆಂದನು.

೧೫. ಅಮ್ಮ! ನೀನು ಈ ವ್ರತವನ್ನು ಬೇಗನೆ ಮಾಡಲು ಪ್ರಾರಂಭಿಸು. ಕಮಲಗಳನ್ನು ನಿತ್ಯವೂ ನಾನು ತಂದುಕೊಡುತ್ತೇನೆ.

ತಲ್ಲವಸ್ಯ ವಚಃ ಶ್ರುತ್ವಾ ವಿಹಸ್ಯಾಲಿಂಗ್ಯ ಬಾಲಕಂ ।
ಚುಚುಂಬ ತನ್ಮುಖಂ ಸೀತಾ ಲವಂ ವಚನಮಬ್ರವೀತ್ ॥ ೧೬ ॥

ಪಂಕಜಾನಿ ಕಥಂ ವತ್ಸ ತ್ವಂ ಸಮಾನೀಯ ದಾಸ್ಯಸಿ ।
ಅಸಂಖ್ಯಾತೈ ರಾಮದೂತೈಃ ಕ್ರಿಯತೇ ರಕ್ಷಣಂ ಸದಾ ॥ ೧೭ ॥

ತನ್ಮಾತೃವಚನಂ ಶ್ರುತ್ವಾ ಲವಃ ಪ್ರಾಹಾಥ ಮಾತರಂ ।
ಅಂಬ ತ್ವತ್‌ಸ್ತನ್ಯಪಾನೇನ ವಾಲ್ಮೀಕೇಶ್ಶಸ್ತ್ರವಿದ್ಯಯಾ ॥ ೧೮ ॥

ತಥಾಶೀರ್ಭಿರ್ಮುನೇಶ್ಚಾಪಿ ರಾಮಸ್ಯಾಪಿ ಭಯಂ ನ ಮೇ ।
ಪಶ್ಯಾಂಬ ಪೌರುಷಂ ಮೇಽದ್ಯ ಮಾಮನುಜ್ಞಾತುಮರ್ಹಸಿ ॥ ೧೯ ॥

ಇತ್ಯುಕ್ತ್ವಾ ಮಾತರಂ ನತ್ವಾ ವಾಲ್ಮೀಕಿಂ ಪ್ರಣಿಪತ್ಯ ಚ ।
ಆಶೀರ್ಭಿರೀಡಿತಸ್ತಾಭ್ಯಾಂ ಧೃತತೂಣೀರಕಾರ್ಮುಕಃ ॥ ೨೦ ॥

---

೧೬. ಸೀತೆಯು ಲವನ ಈ ಮಾತನ್ನು ಕೇಳಿ ನಕ್ಕು ಅವನ ಮುಖವನ್ನು ಸಂತೋಷದಿಂದ ಚುಂಬಿಸಿದಳು. ಮತ್ತು ಅವನನ್ನು ಕುರಿತು ಇಂತೆಂದಳು.

೧೭. ಎಲೈ ವತ್ಸನೇ! ಕಮಲಗಳನ್ನು ನೀನು ಹೇಗೆ ತಂದುಕೊಡುತ್ತೀಯೆ? ಆ ವನದಲ್ಲಿ ಅಸಂಖ್ಯಾತರಾದ ರಾಮದೂತರು ಅದನ್ನು ಯಾವಾಗಲೂ ರಕ್ಷಿಸುತ್ತಿರುವವರಲ್ಲ!

೧೮-೧೯. ತಾಯಿಯ ಈ ಮಾತನ್ನು ಕೇಳಿ ಲವನು ಇಂತೆಂದನು. ಅಮ್ಮ! ನಿನ್ನ ಎದೆ ಹಾಲನ್ನು ಕುಡಿದಿರುವ ಮಹಿಮೆಯಿಂದಲೂ, ವಾಲ್ಮೀಕಿಯು ಉಪದೇಶಿಸಿರುವ ಶಸ್ತ್ರವಿದ್ಯಯ ಪ್ರಭಾವದಿಂದಲೂ ಆ ಋಷಿಯ ಆಶೀರ್ವಾದದ ಬಲದಿಂದಲೂ ರಾಮನಿಗೂ ಕೂಡ ನಾನು ಹೆದರುವುದಿಲ್ಲ. ನನಗೆ ಅನುಜ್ಞೆಯನ್ನು ಕೊಡು. ಈಗ ನನ್ನ ಪೌರುಷವನ್ನು ನೋಡು.

೨೦. ಹೀಗೆಂದು ಹೇಳಿ ತಾಯಿಗೆ ನಮಸ್ಕರಿಸಿ ವಾಲ್ಮೀಕಿಗೂ ಪ್ರಣಾಮವನ್ನು ಮಾಡಿ ಅವರ ಆಶೀರ್ವಾದಗಳನ್ನು ಹೊಂದಿ ಬಾಣಬತ್ತಳಿಕೆಗಳನ್ನು ಧರಿಸಿದನು.

ವಸ್ತ್ರಾಲಂಕಾರಸಂಯುಕ್ತಸ್ತ್ವೇಕಾಕೀ ರಥಮಾಸ್ಥಿತಃ ।
ಯಯೌ ಲವಸ್ತ್ವಯೋಧ್ಯಾಯಾಂ ಶ್ರೀವಿಹೀನಾಂ ಜವೇನ ಸಃ ॥ ೨೧ ॥

ಕ್ರೋಶೋಪರಿ ರಥಂ ಸ್ಥಾಪ್ಯ ಪದ್ಭ್ಯಾಮಾರಾಮಮಾಯಯೌ ।
ತಾವನ್ಮಧ್ಯಾಹ್ನಸಮಯೇ ಗತಾ ಆರಾಮರಕ್ಷಕಾಃ ॥ ೨೨ ॥

ಭೋಜನಾರ್ಥಂ ಸ್ವಗೇಹಾನಿ ಲವೋಬ್ಜಾನಿ ತದಾಹರತ್ ।
ಪುನಃ ಸ್ವಸ್ಯಂದನೇ ಸ್ಥಿತ್ವಾ ಗತ್ವಾಶ್ರಮಪದಂ ಮುನೇಃ ॥ ೨೩ ॥

ನತ್ವಾ ಮುನಿಂ ಮಾತರಂ ಸ್ವಾಂ ಪಂಕಜಾನ್ಯರ್ಪಯನ್ಮುದಾ ।
ಮುದಿತಾ ಜಾನಕೀ ಚಾಪಿ ವ್ರತಾರಂಭಮಥಾಕರೋತ್ ॥ ೨೪ ॥

---

೨೧. ವಸ್ತ್ರಗಳಿಂದಲೂ, ಅಲಂಕಾರದಿಂದಲೂ, ಅಲಂಕರಿಸಿಕೊಂಡು ಒಬ್ಬಂಟಿಗನಾಗಿಯೇ ರಥದಲ್ಲಿ ಕುಳಿತನು. ಅನಂತರ ಶ್ರೀದೇವಿಯಿಲ್ಲದಿರುವ ಅಯೋಧ್ಯೆಗೆ ಜಾಗ್ರತೆಯಾಗಿ ಹೋದನು.

೨೨. ಉಪವನಕ್ಕೆ ಒಂದು ಕ್ರೋಶದಷ್ಟು ದೂರದಲ್ಲಿಯೇ ರಥವನ್ನು ನಿಲ್ಲಿಸಿ ಕಾಲುನಡುಗೆಯಿಂದಲೇ ಉಪವನದೊಳಕ್ಕೆ ಹೋದನು. ಅಷ್ಟರಲ್ಲಿ ಮಧ್ಯಾಹ್ನದ ಸಮಯವಾಗಿರಲು ಆ ಉಪವನದ ಕಾವಲುಗಾರರೆಲ್ಲರೂ ಊಟಕ್ಕೆ ಹೊರಟುಹೋಗಿದ್ದರು.

೨೩. ಮಧ್ಯಾಹ್ನದ ಸಮಯದ ಊಟವನ್ನು ಮಾಡಿಕೊಂಡು ಅವರೆಲ್ಲರೂ ಹಿಂದಿರುಗುವ ವೇಳೆಗೆ ಲವನು ಕಮಲಗಳನ್ನು ಕೊಯ್ದಿದ್ದನು. ಆದ್ದರಿಂದ ಅವರು ಕಾಣುವುದಕ್ಕೆ ಮೊದಲೇ ಲವನು ಹೋಗಿ ರಥದಲ್ಲಿ ಕುಳಿತು ಆ ವಾಲ್ಮೀಕಿಯ ಆಶ್ರಮಕ್ಕೆ ಹೊರಟು ಹೋದನು.

೨೪. ಆಶ್ರಮಕ್ಕೆ ಹೋಗಿ ತಾಯಿಗೂ ಮುನಿಗೂ ನಮಸ್ಕರಿಸಿ ಕಮಲಗಳನ್ನು ಕೊಟ್ಟನು. ಆದರಿಂದ ಜಾನಕಿಯು ಸಂತೋಷಗೊಂಡು ವ್ರತಕ್ಕೆ ಆರಂಭವನ್ನು ಮಾಡಿದಳು.

ಏವಂ ಸಪ್ತದಿನಾನ್ಯಬ್ಜಾನ್ಯಾನಯಾಮಾಸ ಬಾಲಕಃ ।
ನ ವಿದೂ ರಾಮದೂತಾಸ್ತೇ ನೀಯಂತೇಬ್ಜಾನಿ ಚೇತಿ ಹಿ ॥ ೨೫ ॥

ಅಥಾಷ್ಟಮದಿನೇಽಯೋಧ್ಯಾಂ ಪೂರ್ವವತ್ಸಲವೋ ಯಯೌ ।
ಆರಾಮಸ್ಯ ಬಹಿಃ ಸ್ಥಾಪ್ಯ ರಥಂ ಪದ್ಭ್ಯಾಂ ಯಯೌ ಲವಃ ॥ ೨೬ ॥

ಗತ್ವಾರಾಮಸ್ಥಕಾಸಾರಂ ಗೃಹೀತ್ವಾಬ್ಜಾನಿ ನಿರ್ಭಯಃ ।
ಶನೈರ್ಯಾವದ್ರಥಂ ಪ್ರಾಪ ತಾವದಾರಾಮಪಾ ಯಯುಃ ॥ ೨೭ ॥

ತೇ ತಂ ದೃಷ್ಟ್ವಾ ಲವಂ ಸಾಬ್ಜಂ ಪಪ್ರಚ್ಛುರ್ವಿಸ್ಮಯಾನ್ವಿತಾಃ ।
ನ ತ್ವಂ ದೃಷ್ಟಃ ಕದಾಸ್ಮಾಭಿಃ ಶ್ರೀರಾಮಾನುಚರೇಷು ಹಿ ॥ ೨೮ ॥

---

೨೫. ಆ ಲವನು ಇದೇ ರೀತಿಯಾಗಿ ಏಳುದಿನಗಳವರೆಗೂ ಕಮಲಗಳನ್ನು ತಂದನು. ಆ ರಾಮದೂತರಿಗೆ ಲವನು ಕಮಲಗಳನ್ನು ಕೊಯ್ದು ತೆಗೆದುಕೊಂಡು ಹೋಗುವುದು ತಿಳಿಯಲೇ ಇಲ್ಲ.

೨೬. ಅನಂತರ ಎಂಟನೆಯದಿನ ಲವನು ಮೊದಲಿನಂತೆ ಅಯೋಧ್ಯೆಯ ಆರಾಮಕ್ಕೆ ಹೋದನು. ಹಿಂದಿನಂತೆಯೇ ಆರಾಮದ ಹೊರಗೆ ರಥವನ್ನು ನಿಲ್ಲಿಸಿ ಕಾಲುನಡಗೆಯಿಂದಲೇ ಒಳಗೆ ಹೋದನು.

೨೭. ತೋಟಕ್ಕೆ ಹೋಗಿ ಅಲ್ಲಿನ ಕೊಳಕ್ಕೂ ಹೋಗಿ ಭಯಪಡದೇನೇ ಕಮಲಗಳನ್ನು ಕೊಯ್ದುಕೊಂಡು ರಥದ ಬಳಿಗೆ ಮೆಲ್ಲಗೆ ಬರುತ್ತಿರಲು ಆಗ ಆ ತೋಟದಕಾವಲುಗಾರರು ಅಲ್ಲಿಗೆ ಬಂದು ನೋಡಿದರು.

೨೮. ಅವರು ಈ ಲವನು ಕೈಯ್ಯಲ್ಲಿ ಕಮಲಗಳನ್ನು ಹಿಡಿದಿರುವುದನ್ನು ನೋಡಿ ಆಶ್ಚರ್ಯಪಟ್ಟು ಅಯ್ಯಾ! ಶ್ರೀರಾಮನ ಸೇವಕರಲ್ಲಿ ನಿನ್ನನ್ನು ಯಾವಾಗಲೂ ನಾವು ನೋಡಲೇ ಇಲ್ಲ.

ಕದಾರಭ್ಯ ರಾಮಸೇವಾ ತ್ವಯಾ ಚಾಂಗೀಕೃತಾ ವದ ।
ಯತಸ್ತ್ವಂ ನಿರ್ಭಯೋಬ್ಜಾನಿ ಗೃಹೀತ್ವಾ ಗಚ್ಛಸಿ ಪ್ರಭುಂ ॥ ೨೯ ॥

ರಾಮದೂತವಚಃ ಶ್ರುತ್ವಾ ವಿಹಸ್ಯಾಹ ಲವೋಪಿ ಸಃ ।
ವಾಲ್ಮೀಕ್ಯನುಚರಶ್ಚಾಹಂ ನ ರಾಮದರ್ಶನಂ ಮಮ ॥ ೩೦ ॥

ವಾಲ್ಮೀಕೇರಾಜ್ಞಯಾಬ್ಜಾನಿ ನೀಯಂತೇ ಪ್ರತ್ಯಹಂ ತ್ವಿತಃ ।
ಮಯಾ ಯುಷ್ಮಾಭಿರದ್ಯೈವ ದೃಷ್ಟೋಽಹಂ ನ ಪುರಾ ಕದಾ ॥ ೩೧ ॥

ಇತಿ ತದ್ವಚನಂ ಶ್ರುತ್ವಾ ವಾಲ್ಮೀಕೀಯಂ ಲವಂ ತದಾ ।
ಜ್ಞಾತ್ವಾ ದೂತಾಃ ಪಾರಕೀಯಂ ಕ್ರೋಧಾದ್ವಚನಮಬ್ರುವನ್ ॥ ೩೨ ॥

---

೨೯. ನೀನು ಎಂದಿನಿಂದ ಮೊದಲುಗೊಂಡು ರಾಮನ ಸೇವೆಯನು ಅಂಗೀಕರಿಸಿ ಸೇವಕನಾಗಿದ್ದೀಯೆ ? ಅದನ್ನು ಹೇಳು. ನೀನು ನಿರ್ಭಯವಾಗಿ ಕಮಲಗಳನ್ನು ಕುಯ್ದುಕೊಂಡು ಪ್ರಭುವಾದ ರಾಮನಲ್ಲಿಗೆ ಹೋಗುತ್ತಿರುವೆಯಲ್ಲ ! ಎಂದು ಆ ದೂತರು ಕೇಳಿದರು.

೩೦. ರಾಮದೂತರ ಈ ಮಾತನ್ನು ಕೇಳಿ ಲವನು ನಕ್ಕು ಎಲೈ ದೂತರಿರಾ ! ನಾನು ವಾಲ್ಮೀಕಿಯ ಸೇವಕನು. ರಾಮನ ದರ್ಶನವೇ ನನಗಾಗಿಲ್ಲ.

೩೧. ಆ ವಾಲ್ಮೀಕಿಯ ಅಪ್ಪಣೆಯಂತೆ ನಿತ್ಯವೂ ಇಲ್ಲಿಂದ ಕಮಲಗಳನ್ನು ತೆಗೆದುಕೊಂಡು ಹೋಗುತ್ತಿದ್ದೇನೆ. ನಾನಾದರೋ ನಿಮ್ಮನ್ನು ನೋಡಿದುದು ಈಗಲೇ. ನನ್ನನ್ನು ನೀವು ಯಾವಾಗಲೂ ನೋಡಿಯೂ ಇಲ್ಲ. ಎಂದನು.

೩೨. ಆ ದೂತರು ಲವನ ಮಾತನ್ನು ಕೇಳಿ ಈತನು ವಾಲ್ಮೀಕಿಯ ಸೇವಕನು. ಪರರವನು ನಮ್ಮ ಕಡೆಯುವನಲ್ಲ. ಎಂದು ತಿಳಿದು ಕೋಪದಿಂದ ಇಂತೆಂದರು.

ರಾಮಸ್ತ್ವಯಾ ನ ದೃಷ್ಟೋತ್ರ ನ ನಃ ಪೃಷ್ಟಂ ತ್ವಯಾ ಪುನಃ ।
ನಾಜ್ಞಾಪಿತೋಸಿ ರಾಮೇಣ ನೀಯಂತೇಬ್ಜಾನಿ ಪ್ರತ್ಯಹಂ ॥ ೩೩ ॥

ನ ಜ್ಞಾತಮೇತದಸ್ಮಾಭಿಸ್ತ್ವಿದಾನೀಂ ತಿಷ್ಠ ಮಾ ವ್ರಜ ।
ಅಪರಾಧ್ಯಸಿ ರಾಮಸ್ಯ ತ್ವಾಂ ನೇಷ್ಯಾಮೋ ವಯಂ ಪ್ರಭುಂ ॥ ೩೪ ॥

ಇತ್ಯುಕ್ತ್ವಾ ತಸ್ಯ ಪಂಥಾನಂ ರುರುಧೂ ರಾಮಸೇವಕಾಃ ।
ಚತುರ್ದಶಶಸ್ತ್ರಹಸ್ತಾಸ್ಸಶತಾರಾಮತೋಯದಾಃ ॥ ೩೫ ॥

ತಾನ್ ದೃಷ್ಟ್ವಾ ಸ್ಯಂದನಸ್ಥಸ್ಸ ಲವೋಪ್ಯಾಹ ವಿಹಸ್ಯ ಚ ।
ಯೂಯಂ ಗಚ್ಛತ ಶ್ರೀರಾಮಂ ಮದ್ವೃತ್ತಂ ಬ್ರೂತ ಸಾದರಾತ್ ॥ ೩೬ ॥

---

೩೩. ಎಲೈ ಬಾಲಕನೇ! ರಾಮನನ್ನು ನೀನು ನೋಡಲೂ ಇಲ್ಲ. ನಮ್ಮನ್ನು ಕೇಳಲೂ ಇಲ್ಲ. ರಾಮನ ಅಪ್ಪಣೆಯನ್ನು ಪಡೆದೂ ಇಲ್ಲ. ನಿತ್ಯವೂ ಕಮಲಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಿದ್ದೀಯೆ?

೩೪. ಈ ವಿಷಯವು ನಮಗೆ ತಿಳಿಯಲೇ ಇಲ್ಲ. ಈಗ ನಿಲ್ಲು. ನೀನು ಹೋಗಬೇಡ. ರಾಮನಿಗೆ ನೀನು ಅಪರಾಧಿಯಾಗಿದ್ದೀಯೆ. ನಿನ್ನನ್ನು ನಾವು ಪ್ರಭುವಾದ ರಾಮನ ಬಳಿಗೆ ಕರೆದುಕೊಂಡು ಹೋಗುತ್ತೇವೆ.

೩೫. ಹೀಗೆಂದು ಹೇಳುತ್ತಾ ಆ ರಾಮಸೇವಕರು ಲವನ ದಾರಿಗೆ ಅಡ್ಡಲಾಗಿ ನಿಂತು ತಡೆದರು. ಅವರಲ್ಲಿ ರಾಮನ ತೋಟಕ್ಕೆ ನೀರುಹಾಕುವವರು ಒಂದುನೂರು ಆಳುಗಳಿದ್ದರು. ಹದಿನಾಲ್ಕು ಜನರು ಶಸ್ತ್ರಧಾರಿಗಳಾಗಿದ್ದರು.

೩೬–೩೭. ರಥದಮೇಲೆ ಕುಳಿತುಕೊಂಡಿದ್ದ ಆ ಲವನು ಅವರನ್ನು ನೋಡಿ ನಗುತ್ತ ನೀವು ಶ್ರೀರಾಮನ ಬಳಿಗೆ ಹೋಗಿರಿ. ನನ್ನ ವಿಷಯವನ್ನು

ಯದ್ಯಸ್ತಿ ಪೌರುಷಂ ರಾಮೋ ತರ್ಹಿ ಯಾಸ್ಯತಿ ಮಾಂ ಪ್ರತಿ ।
ತತ್ತಸ್ಯ ವಚನಂ ಶ್ರುತ್ವಾ ಕ್ರೋಧಾದ್ದೂತಾ ವಚೋಬ್ರುವನ್ ॥ ೩೭ ॥

ಮರ್ತುಕಾಮಃ ಕಥಂ ವತ್ಸ ತ್ವಮಿತ್ಥಂ ವಲ್ಗಸೇ ಮುದಾ ।
ತ್ವಾಂ ಬಧ್ವಾ ವಯಮೇವಾದ್ಯ ನೇಷ್ಯಾಮೋ ರಘೂತ್ತಮಂ ॥ ೩೮ ॥

ಇತ್ಯುಕ್ತ್ವಾ ತೇ ಲವಂ ಧರ್ತುಂ ಯಯುಸ್ತಸ್ಯ ರಥಾಂತಿಕಂ ।
ತಾನ್ ದೃಷ್ಟ್ವಾ ನಿಕಟಂ ಪ್ರಾಪ್ತಾನ್ ರಾಮದೂತಾನ್ ಲವೋಪಿ ಸಃ ॥ ೩೯ ॥

ಆಕೃಷ್ಯ ಚ ಮಹಚ್ಚಾಪಂ ಶರಾನ್ಸಂಧಾಯ ವೇಗತಃ ।
ಅಬ್ರವೀತ್ತಾನ್ ಪುನರ್ವಾಕ್ಯಂ ಮಾ ಗಂತವ್ಯಂ ಮಮಾಂತಿಕಂ ॥ ೪೦ ॥

ಒಡನೆಯೇ ಹೇಳಿರಿ. ರಾಮನಿಗೆ ಪೌರುಷವಿದ್ದರೆ ನನ್ನನ್ನು ಬಂದು ತಡೆಯಲಿ. ಎಂದು ಹೇಳಿದನು. ಅವನ ಈ ಮಾತನ್ನು ಕೇಳಿ ಕೋಪದಿಂದ ದೂತರು ಇಂತೆಂದರು.

೩೮. ಎಲೈ ವತ್ಸನೇ ! ನೀನು ಸಾಯುವುದಕ್ಕೆ ಸಿದ್ಧನಾಗಿದ್ದೀಯೇ ! ಆದ್ದರಿಂದಲೇ ಹೀಗೆ ವ್ಯರ್ಥವಾಗಿ ತಲೆಹರಟ್ಟೆಯನ್ನು ಹರಟುತ್ತಿದ್ದೀಯೆ. ನಾವೇ ನಿನ್ನನ್ನು ಕಟ್ಟಿಹಾಕಿ ರಾಮನ ಬಳಿಗೆ ಕರೆದುಕೊಂಡು ಹೋಗುತ್ತೇವೆ.

೩೯. ರಕ್ಷಕರು ಹೀಗೆಂದು ಹೇಳಿ ಅವನನ್ನು ಹಿಡಿದುಕೊಳ್ಳಲು ಅವನ ರಥದ ಹತ್ತಿರಕ್ಕೆ ಹೋದರು. ಲವನೂ ಕೂಡ ಆ ರಾಮದೂತರು ತನ್ನನ್ನು ಹಿಡಿದುಕೊಳ್ಳುವುದಕ್ಕೆ ಹತ್ತಿರ ಬಂದುದನ್ನು ನೋಡಿದನು.

೪೦. ಒಡನೆಯೇ ದೊಡ್ಡ ಧನುಸ್ಸನ್ನು ತೆಗೆದು ಬಗ್ಗಿಸಿ ಹೆದೆಯನ್ನೇರಿಸಿ ಬೇಗನೆ ಬಾಣವನ್ನು ಹೂಡಿ ಎಲೈ ರಕ್ಷಕರಿರಾ ! ನನ್ನ ಹತ್ತಿರಕ್ಕೆ ಬರಬೇಡಿರಿ.

ಮಾರ್ಗಣೈರಧುನಾ ಯುಷ್ಮಾನ್ ತ್ಯಜಾಮಿ ರಾಘವಾಂತಿಕೇ ।
ಇತ್ಯುಕ್ತ್ವಾ ತಾನ್ ಪುನಃ ದೃಷ್ಟ್ವಾತ್ಮಾನಂ ಧರ್ತುಂ ಸಮುದ್ಯತಾನ್ ॥ ೪೧ ॥

ರಾಮಾಗ್ರೇ ಪ್ರಾಕ್ಷಿಪದ್ಬಾಣೈರ್ಲೀಲಯಾಧ್ವರಮಂಟಪೇ ।
ಚತುರ್ದಶರಾಮದೂತಾ ಲವಮಾರ್ಗಣತಾಡಿತಾಃ ॥ ೪೨ ॥

ನಿಪೇತುರ್ಮೂರ್ಛಿತಾಸ್ಸರ್ವೇ ರಾಮಾಗ್ರೇ ಜಾಹ್ನವೀತಟೇ ।
ಶತಶೋ ರಾಮದೂತಾಸ್ತೇ ದೃಷ್ಟ್ವಾ ಚಕ್ರುಃ ಪಲಾಯನಂ ॥ ೪೩ ॥

ಲವೋಽಪಿ ವಿಜಯೀ ಶೀಘ್ರಂ ಪೂರ್ವವಚ್ಚಾಶ್ರಮಂ ಯಯೌ ।
ಸಮರ್ಪ್ಯಾಬ್ಜಾನಿ ಸೀತಾಯೈ ಸರ್ವಂ ವೃತ್ತಂ ನ್ಯವೇದಯತ್ ॥ ೪೪ ॥

---

೪೧. ಈಗಲೇ ನಿಮ್ಮನ್ನು ಈ ಬಾಣಗಳಿಂದ ರಾಮನ ಹತ್ತಿರಕ್ಕೆ ಹೋಗುವಂತೆ ಮಾಡುತ್ತೇನೆ. ಎಂಬುದಾಗಿ ಹೇಳಿದನು. ಆದರೂ ಅವರು ಬಿಡದೆ ತನ್ನನ್ನು ಹಿಡಿಯಲು ಬರುತ್ತಿದ್ದರು.

೪೨–೪೩. ಒಡನೆಯೇ ಲವನು ಬಾಣಗಳನ್ನು ಬಿಟ್ಟು ಅವರನ್ನು ರಾಮನು ಯಾಗಮಾಡುತ್ತಿದ್ದ ಯಾಗಮಂಟಪದ ಬಳಿಯಲ್ಲಿ ರಾಮನ ಎದುರಿನಲ್ಲಿ ಬೀಳುವಂತೆ ಎಸೆದನು ಅವರಲ್ಲಿ ಹದಿನಾಲ್ಕು ಮಂದಿ ರಾಮದೂತರು ಲವನ ಬಾಣದ ಏಟಿನಿಂಡ ಮೂರ್ಛೆಗೊಂಡು ಆ ರಾಮನ ಎದುರಿಗೆ ಗಂಗಾನದಿಯ ದಡದಲ್ಲಿ ಬಿದ್ದು ಬಿಟ್ಟರು. ಉಳಿದ ನೂರುಜನ ದೂತರು ಇದನ್ನು ನೋಡಿ ಓಡಿ ಹೋದರು.

೪೪. ಲವನು ವಿಜಯವನ್ನು ಹೊಂದಿ ಬೇಗನೆ ಮೊದಲಿನಂತೆ ವಾಲ್ಮೀಕಿಯ ಆಶ್ರಮಕ್ಕೆ ಹೋದನು. ಸೀತೆಗೆ ಕಮಲಗಳನ್ನು ಕೊಟ್ಟು ಎಲ್ಲಾ ವಿಷಯಗಳನ್ನೂ ಹೇಳಿದನು.

ಚತುರ್ದಶರಾಮದೂತಾಃ ಸ್ವಸ್ಥಚಿತ್ತಾಶ್ಚಿರೇಣ ತೇ ।
ಸರ್ವಂ ವೃತ್ತಂ ರಾಘವಾಯ ಕಥಯಾಮಾಸುರಾದರಾತ್ ॥ ೪೫ ॥

ತಚ್ಛ್ರುತ್ವಾ ರಾಮಚಂದ್ರೋಽಪಿ ವಿಸ್ಮಯಾವಿಷ್ಟಮಾನಸಃ ।
ಸಹಸ್ರದೂತಾನಾರಾಮರಕ್ಷಣಾರ್ಥಂ ಪ್ರಚೋದಯತ್ ॥ ೪೬ ॥

ಲವೋಽಪ್ಯಥ ನವಮ್ಯಾಂ ಸ ಸಾಕೇತಂ ಪೂರ್ವವದ್ಯಯೌ ।
ಸಹಸ್ರಂ ರಾಮದೂತಾಸ್ತೇ ಲವಂ ಯೋದ್ಧುಂ ಸಮುದ್ಯತಾಃ ॥ ೪೭ ॥

ಲವಸ್ತಾನಾಹ ಯುಷ್ಮಾಕಂ ಸ್ವಾಮಿನಾ ರಾಘವೇಣ ಹಿ ।
ಯದಾ ಸೀತಾ ವನೇ ತ್ಯಕ್ತಾ ಜಯಶ್ರೀಶ್ಚ ಗತಾ ತದಾ ॥ ೪೮ ॥

---

೪೫. ಹದಿನಾಲ್ಕು ಜನ ರಾಮದೂತರು ಸ್ವಲ್ಪಹೊತ್ತಿನಮೇಲೆ ಎಚ್ಚತ್ತರು. ಸುಧಾರಿಸಿಕೊಂಡು ಎಲ್ಲಾ ವಿಷಯವನ್ನೂ ರಾಮನಿಗೆ ಹೇಳಿದರು.

೪೬. ಇದನ್ನು ಕೇಳಿ ರಾಮನೂ ಕೂಡ ಆಶ್ಚರ್ಯಪಟ್ಟನು. ಅನಂತರ ಸಾವಿರಜನ ದೂತರನ್ನು ತೋಟವನ್ನು ಕಾಯಲು ಕಳುಹಿಸಿದನು.

೪೭. ಲವನು ಮೊದಲಿನಂತೆ ನವಮಿಯ ದಿನವೂ ಕೂಡ ಹೂವನ್ನು ತರಲು ಅಯೋಧ್ಯೆಯ ಉಪವನಕ್ಕೆ ಹೋದನು. ಆಗ ಆ ತೋಟವನ್ನು ಕಾಯಲು ಬಂದಿದ್ದ ಸಾವಿರಜನ ರಾಮದೂತರೂ ಕೂಡ ಆ ಲವನನ್ನು ನೋಡಿ ಯುದ್ಧಮಾಡಲು ಪ್ರಯತ್ನಪಟ್ಟರು.

೪೮. ಆಗ ಲವನು ಅವರನ್ನು ಕುರಿತು ಎಲೈ ರಾಮದೂತರಿರಾ! ನಿಮ್ಮ ಸ್ವಾಮಿಯಾದ ರಾಮನು ಸೀತೆಯನ್ನು ಕರೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟಾಗಲೇ ಅವನ ಮತ್ತು ನಿಮ್ಮ ಶಕ್ತಿಯೂ, ಸಂಪತ್ತೂ ಎಲ್ಲವೂ ಹೊರಟು ಹೋದುವು.

ಯುಷ್ಮಾಕಂ ರಾಘವಸ್ಯಾಪಿ ಗಚ್ಛಧ್ವಂ ರಾಘವಂ ಪುನಃ ।
ಯುಷ್ಮಾಭಿಶ್ಮಾ ಮಯಾ ಯುದ್ಧಂ ಕರ್ತವ್ಯಂ ಮರಣೋಸ್ತು ಮೈಃ ॥ ೪೯ ॥

ಸೀತಾತ್ಯಾಗೇ ತು ಯುಷ್ಮಾಕಂ ಸ್ವಾಮಿನಃ ಪೌರುಷಂ ನ ಮಾಂ ।
ಇತಿ ತೇ ಲವವಾಗ್ಬಾಣೈರ್ಭಿನ್ನಮರ್ಮಸ್ಥಲಾಸ್ತದಾ ॥ ೫೦ ॥

ದೂತಾಶ್ಮಸ್ತ್ರಾಣಿ ಮುಮುಚುರ್ಲವೋಪರಿ ಮಹಾಸ್ವನೈಃ ।
ಲವೋಪಿ ಚಾಪಮಾಕೃಷ್ಯ ರಾಮದೂತಾನ್ ಸ್ವಮಾರ್ಗಣೈಃ ॥ ೫೧ ॥

ಪ್ರಾಕ್ಷಿಪತ್ಪೂರ್ವವದ್ರಾಮಂ ತಚ್ಛಸ್ತ್ರೌಘಂ ನಿವಾರ್ಯ ಚ ।
ಆರಾಮತೋ ಯದಾ ದೂತಾಶ್ಚಕ್ರುಸ್ಸರ್ವೇ ಪಲಾಯನಂ ॥ ೫೨ ॥

---

೪೯. ನೀವು ವ್ಯರ್ಥವಾಗಿ ಯುದ್ಧಕ್ಕೆ ನಿಲ್ಲದೆ ರಾಘವನ ಬಳಿಗೆ ಹೋಗಿರಿ. ನಿಮಗೆ ಜೀವದಮೇಲೆ ಆಸೆಯಿದ್ದರೆ ನನ್ನೊಡನೆ ಯುದ್ಧಕ್ಕೆ ಬರಬೇಡಿರಿ. ಸಾಯಲು ನಿಶ್ಚಯಿಸಿಕೊಂಡಿದ್ದರೆ ಯುದ್ಧಕ್ಕೆ ಸಿದ್ಧವಾಗಿ ಬನ್ನಿರಿ.

೫೦. ನಿಮ್ಮ ಸ್ವಾಮಿಯ ಪೌರುಷವು ಸೀತೆಯನ್ನು ಬಿಡುವುದರಲ್ಲಿಯೇ ಹೊರತು ನನ್ನ ಮೇಲೆ ನಡೆಯುವಂತಿಲ್ಲ. ತಿಳಿಯಿರಿ. ಎಂದನು. ಲವನ ಮಾತನ್ನು ಅವರು ಕೇಳಿ ಅವನ ಮಾತೆಂಬ ಬಾಣಗಳಿಂದ ಮರ್ಮಸ್ಥಳದಲ್ಲಿ ಬಹುವಾಗಿ ನೊಂದರು.

೫೧. ಇದರಿಂದ ಸಿಟ್ಟುಗೊಂಡ ಆ ದೂತರು ಲವನಮೇಲೆ ಬಾಣಗಳನ್ನು ಬಿಡಲು ಮೊದಲುಮಾಡಿದರು. ಅಲ್ಲದೆ ಸಿಂಹನಾದವನ್ನು ಮಾಡಲು ಮೊದಲಿಟ್ಟರು ಇದರಿಂದ ಲವನೂ ಕೂಡ ಸಿಟ್ಟುಗೊಂಡು ತನ್ನ ಧನುಸ್ಸಿಗೆ ಹೆದೆಯನ್ನೇರಿಸಿ ಬಾಣವನ್ನು ಹೂಡಿದನು.

೫೨. ಬಾಣಗಳನ್ನು ಬಿಡುತ್ತಾ ಶಸ್ತ್ರಗಳನ್ನೆಲ್ಲಾ ಖಂಡಿಸಿದನು. ಮತ್ತು ಮೊದಲಿನಂತೆಯೇ ಅವನ ಬಾಣದಿಂದ ಎಸೆಯಲ್ಪಟ್ಟ ಕೆಲವು ದೂತರು ರಾಮನ ಯಾಗಮಂಟಪಕ್ಕೆ ಹೋಗಿ ಬಿದ್ದರು. ಉಳಿದವರು ಹೆದರಿಕೊಂಡು ಓಡಿಹೋದರು.

ಯಯೌ ಲವಸ್ಸ ವಿಜಯೀ ಪೂರ್ವವತ್ಕಮಲಾನ್ವಿತಃ |
ಆಶ್ರಮಂ ಮಾತರಂ ನತ್ವಾ ಸರ್ವಂ ವೃತ್ತಂ ನ್ಯವೇದಯತ್ ॥ ೫೩ ॥

ಪುತ್ರಸ್ಯ ಪೌರುಷಂ ಶ್ರುತ್ವಾ ತುತೋಷ ಜಾನಕೀ ತದಾ |
ವೃತ್ತಂ ನಿವೇದಯಾಮಾಸೂ ರಾಮದೂತಾ ರಘೂತ್ತಮಂ ॥ ೫೪ ॥

ಗತಮೂರ್ಛಾಲವಶರೈರ್ಭಿನ್ನದೇಹಾ ಮುಖಾಂಗಣೇ |
ರಾಮ ರಾಮ ಮಹಾಬಾಹೋ ಶೃಣುಷ್ವಾಪೂರ್ವಮಾದರಾತ್ ॥ ೫೫ ॥

ಪಂಚವರ್ಷೀಯಬಾಲೇನ ವಯಮದ್ಯ ಪರಾಜಿತಾಃ |
ವಾಲ್ಮೀಕೇರ್ಲಬ್ಧವಿದ್ಯಸ್ಸ ನ ಜೇಯೋ ಲಕ್ಷ್ಮಣಾದಿಭಿಃ ॥ ೫೬ ॥

---

೫೩. ಲವನು ವಿಜಯವನ್ನು ಹೊಂದಿ ಕಮಲವನ್ನು ತೆಗೆದುಕೊಂಡು ಮೊದಲಿನಂತೆ ಹೊರಟು ಹೋದನು. ಆಶ್ರಮಕ್ಕೆ ಹೋಗಿ ತಾಯಿಗೆ ನಮಸ್ಕರಿಸಿ ಇಲ್ಲಿ ನಡೆದ ವಿಷಯಗಳೆಲ್ಲವನ್ನೂ ಸಾಂಗವಾಗಿ ತಿಳಿಸಿದನು.

೫೪. ಜಾನಕಿಯು ಮಗನ ಈ ಪೌರುಷವನ್ನು ಕೇಳಿ ಬಹುವಾಗಿ ಸಂತೋಷಪಟ್ಟಳು. ಇತ್ತ ರಾಮದೂತರು ರಾಮನಿಗೆ ತಾವು ಮಾಡಿದುದನ್ನೂ ಲವನ ಕೆಲಸವನ್ನೂ ಅವನ ಮಾತನ್ನೂ ತಿಳಿಸಿದರು.

೫೫. ಅವರೆಲ್ಲರೂ ಬಾಣದೇಟಿನಿಂದ ಮೂರ್ಛೆಹೊಂದಿದ್ದರು. ಮೈಮೇಲೆಯೂ ಮುಖದಮೇಲೆಯೂ ಗಾಯಗಳಾಗಿದ್ದುವು. ಅವರೆಲ್ಲರೂ ರಾಮನನ್ನು ಕುರಿತು ಮಹಾಬಾಹುವಾದ ರಾಮನೇ! ನಾವು ಹೇಳುವುದನ್ನು ಮೊದಲು ಜಾಗ್ರತೆಯಾಗಿ ಕೇಳು.

೫೬. ಐದುವರ್ಷದ ಬಾಲನು ನಮ್ಮೆಲ್ಲರನ್ನೂ ಈದಿನ ಪರಾಜಯಗೊಳಿಸಿದನು. ಅವನು ವಾಲ್ಮೀಕಿಯ ಶಿಷ್ಯನಂತೆ. ಆ ವಾಲ್ಮೀಕಿಯಿಂದ ಧನುರ್ವಿದ್ಯೆಯನ್ನು ಕಲಿತು ಬಹು ಶೂರನಾಗಿರುವನು. ಭರತನಾಗಲಿ, ಶತ್ರುಘ್ನನಾಗಲಿ, ಲಕ್ಷ್ಮಣನೇ ಆಗಲಿ ಅವನನ್ನು ಜಯಿಸಲಾರರು.

ತದ್ವಧೇ ಮಂತ್ರಯಸ್ವಾದ್ಯ ತ್ವಮುಪಾಯಂ ರಘೂತ್ತಮ ।
ಸೀತಾತ್ಯಾಗಾದಿವಚನೈರ್ನಸ್ತ್ವಯಾಪಿ ಚ ಬಾಲಕಃ ॥ ೫೭ ॥

ಚಕಾರ ನಿಂದಾಂ ಶ್ರೀರಾಮಗತಭೀಸ್ತ್ವೇಕ ಏವ ಯಃ ।
ತತ್ತೇಷಾಂ ವಚನೈರ್ವೃತ್ತಂ ಕೃತ್ಸ್ನಮಾಕರ್ಣ್ಯ ರಾಘವಃ ॥ ೫೮ ॥

ಸಮ್ಮಂತ್ರ್ಯ ಸಚಿವೈರ್ದೂತಂ ವಾಲ್ಮೀಕಿಂ ಪ್ರೇಷಯಜ್ಜವಾತ್ ।
ನತ್ವಾ ಮುನಿಂ ರಾಮದೂತೋ ರಾಮವಾಕ್ಯಂ ನ್ಯವೇದಯತ್ ॥ ೫೯ ॥

ಯಸ್ತೇ ಶಿಷ್ಯೋ ಮಹಾವೀರಸ್ಸೋಽಪರಾಧ್ಯಸ್ತಿ ವೈ ಮಮ ।
ತಂ ಪ್ರೇಷಯಾಥ ವಾ ತೇನ ತ್ವಮಾಗಚ್ಛಸ್ವ ಮನ್ಮಖಂ ॥ ೬೦ ॥

ವಿಸ್ಮೃತ್ಯಾಪೂರ್ವಮೇವ ತ್ವಂ ನಾಹೂತೋಽಸಿ ಕ್ಷಮಸ್ವ ತತ್ ।
ತದ್ದೂತವಚನಂ ಶ್ರುತ್ವಾ ರಾಮಮಿಯಂ ಮುನಿರಬ್ರವೀತ್ ॥ ೬೧ ॥

೫೭–೫೯. ಎಲೈ ರಘೂತ್ತಮನೇ! ಅವನನ್ನು ಕೊಲ್ಲಲು ಯಾವುದಾದರೂ ಒಂದು ಯೋಚನೆಯನ್ನು ಮಾಡಿ ಉಪಾಯವನ್ನು ಹುಡುಕು. ಸೀತೆಯನ್ನು ಬಿಟ್ಟುದೇ ಮೊದಲಾದ ಮಾತುಗಳನ್ನು ತೆಗೆದುಕೊಂಡು ಅವನು ನಮ್ಮನ್ನೂ, ನಿನ್ನನ್ನೂ ಬಹುವಾಗಿ ನಿಂದಿಸಿದನು. ಅವನು ಒಬ್ಬಂಟಿಗನಾಗಿದ್ದರೂ ಹೆದರಿಕೆಯೆಂಬುದೇ ಅವನಿಗಿಲ್ಲ. ಎಂಬುದಾಗಿ ದೂತರು ಹೇಳಿದುದನ್ನು ಕೇಳಿ ಅವನ ವಿಷಯವೆಲ್ಲವನ್ನೂ ಆ ದೂತರಿಂದ ತಿಳಿದುಕೊಂಡನು. ಅನಂತರ ಮಂತ್ರಿಗಳನ್ನು ಕರೆಸಿ ಅವರೊಡನೆ ಮಂತ್ರಾಲೋಚನೆಯನ್ನು ಮಾಡಿ ವಾಲ್ಮೀಕಿಯ ಬಳಿಗೆ ದೂತನನ್ನು ಕಳುಹಿಸಿದನು. ಆ ದೂತನು ವಾಲ್ಮೀಕಿಯ ಬಳಿಗೆ ಹೋಗಿ ಆತನಿಗೆ ನಮಸ್ಕರಿಸಿ ರಾಮನು ಹೇಳಿದ ಮಾತನ್ನು ವಿಜ್ಞಾಪಿಸಿದನು.

೬೦. ಎಲೈ ವಾಲ್ಮೀಕಿಯೇ ! ಮಹಾ ವೀರನಾದ ನಿನ್ನ ಶಿಷ್ಯನು ನಮಗೆ ಮಹಾಪರಾಧಿಯಾಗಿದ್ದಾನೆ. ಅವನನ್ನು ಈಗಲೇ ನೀನು ನಮ್ಮ ಬಳಿಗೆ ಕಳುಹಿಸಿಕೊಡು. ಅದಿಲ್ಲದಿದ್ದರೆ ಕರೆದುಕೊಂಡು ನೀನು ನನ್ನ ಯಜ್ಞಕ್ಕೆ ಬಾ.

೬೧. ನನಗೆ ಮರೆತುಹೋದುದರಿಂದ ಮೊದಲೇನೇ ನಿನ್ನನ್ನು ಯಜ್ಞಕ್ಕೆ ಕರೆಸಲಿಲ್ಲ. ಅದನ್ನು ಕ್ಷಮಿಸು. ಎಂದು ಹೇಳಿದನು. ದೂತನಿಂದ ರಾಮನು ಹೇಳಿಕಳುಹಿಸಿದ ಈ ಮಾತನ್ನು ಕೇಳಿ ಮುನಿಯು ಇಂತೆಂದನು.

ಶಿಷ್ಯಾಭ್ಯಾಮಧ್ವರಂ ಚಾಹಮೇವ ಯಾಸ್ಯಾಮಿ ತ್ವಂ ವ್ರಜ ।
ತಥೇತಿ ರಾಮದೂತೋಽಪಿ ಮುನಿಂ ನತ್ವಾ ಯಯೌ ಮಖಂ ॥ ೬೨ ॥

ಜಾನನ್ನೇವಂ ಭಾವಿವೃತ್ತಮಾದೌ ರಾಮೋ ಮುನಿಂ ಮಖಂ ।
ನಾಹ್ವಯಾಮಾಸ ಶಿಷ್ಯಾಭ್ಯಾಂ ಲೌಕಿಕೀಂ ವೃತ್ತಿಮಾಶ್ರಿತಃ ।
ಸ್ವೀಯವ್ರತಸಮಾಪ್ತಿಂ ಸಾಕರೋತ್ಸೀತಾಪಿ ಸಾದರಂ ॥ ೬೩ ॥

॥ ವಿಷ್ಣುದಾಸ ಉವಾಚ ॥

ಅಶಕ್ತೈಶ್ಚ ಕಥಂ ಕಾರ್ಯಂ ವ್ರತಮೇತದ್ವದಸ್ವ ಮಾಂ ॥ ೬೪ ॥

॥ ರಾಮದಾಸ ಉವಾಚ ॥

ಕಾಂಚನಸ್ಯಾಥ ವಾ ರೌಪ್ಯಸ್ಯಾಥ ವಾ ತಾಮ್ರನಿರ್ಮಿತೇ ।
ಕಾರ್ಯೇ ದ್ವೇ ಪಾತುಕೇ ರಮ್ಯೇ ರಾಘವಸ್ಯ ಯಥಾಸುಖಂ ॥ ೬೫ ॥

---

೬೨. ಎಲೈ ದೂತನೇ ! ಶಿಷ್ಯರನ್ನು ಕರೆದುಕೊಂಡು ನಾನೇ ಯಜ್ಞಕ್ಕೆ ಬರುತ್ತೇನೆ. ನೀನು ಹೋಗು ಎಂದನು. ಅನಂತರ ಆ ದೂತನು ಹಾಗೆಯೇ ಆಗಲೆಂದು ಮುನಿಗೆ ನಮಸ್ಕರಿಸಿ ರಾಮನ ಯಾಗಮಂಟಕ್ಕೆ ಬಂದನು.

೬೩. ರಾಮನಿಗೆ ಮುಂದಿನ ಈ ವಿಷಯವೆಲ್ಲವೂ ತಿಳಿದಿದ್ದುದರಿಂದಲೇ ಅವನು ವಾಲ್ಮೀಕಿಯನ್ನು ಮೊದಲು ಶಿಷ್ಯರೊಡನೆ ಯಾಗಕ್ಕೆ ಕರೆಸಿರಲಿಲ್ಲ. ಇದಕ್ಕೆ ಆ ರಾಮನ ಲೌಕಿಕವ್ಯವಹಾರವೇ ಕಾರಣವಾಗಿರುವುದು. ಇತ್ತ ಸೀತೆಯು ತಾನು ಕೈಗೊಂಡಿದ್ದ ವ್ರತವನ್ನು ಬಹುವಾದ ವೈಭವದಿಂದ ಆಚರಿಸಿ ಅದನ್ನು ಸಾಂಗವಾಗಿ ನೆರವೇರಿಸಿಕೊಂಡಳು.

೬೪. ವಿಷ್ಣುದಾಸನು ಹೇಳಿದನು—ಎಲೈ ಗುರುವೇ ! ಶಕ್ತಿಯಿದ್ದವರ ವಿಷಯದಲ್ಲಿ ನೀನು ಈ ವ್ರತವನ್ನು ಹೇಳಿದ ಹಾಗಾಯಿತು. ಅಶಕ್ತರಾದವರು ಈ ವ್ರತವನ್ನು ಹೇಗೆ ಮಾಡಬೇಕು ? ಎಂಬುದನ್ನು ಈಗ ಹೇಳು.

೬೫. ರಾಮದಾಸನು ಹೇಳಿದನು–ಎಲೈ ಶಿಷ್ಯನೇ ! ಚಿನ್ನದಿಂದಾಗಲೀ, ಬೆಳ್ಳಿಯಿಂದಾಗಲಿ, ಆದಾಗದಿದ್ದರೆ ತಾಮ್ರದಿಂದಾಗಲಿ ರಾಮನ ಎರಡು ಪಾದುಕೆಗಳನ್ನು ಸುಂದರವಾಗಿ ಮಾಡಿಸಬೇಕು. ಅವನ್ನು ಅವರ ಶಕ್ತಿಗನುಗುಣವಾಗಿ ಮಾಡಿಸಬೇಕು.

ಅಭಾವೇ ಕಮಲ ನಾಂ ಚ ಪುಷ್ಪೈರಂಜಲಿರೀರಿತಃ ।
ಏಕಾಶೀತಿದಂಪತೀನಾಂ ನ ಶಕ್ತಿಃ ಪೂಜನೇ ತದಾ ॥ ೬೬ ॥

ಪೂಜನೀಯಾನಿ ಯುಗ್ಮಾನಿ ನವ ಶಕ್ತ್ಯಾಥ ವಾ ಸುಖಂ ।
ಸ್ವಶಕ್ತ್ಯಾ ಪೂಜನಂ ಕಾರ್ಯಂ ವಿತ್ತಶಾಠ್ಯಂ ಪರಿತ್ಯಜೇತ್ ॥ ೬೭ ॥

ಅನೇನ ದೂರಗಸ್ಯಾಪಿ ಸಂಯೋಗಶ್ಚ ಭವೇಜ್ಜವಾತ್ ।
ಭಾವಿಕಾರ್ಯಾಣಿ ವೇಗೇನ ಭವಿಷ್ಯಂತಿ ನ ಸಂಶಯಃ ॥ ೬೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಜನ್ಮಕಾಂಡೇ ಸಂಯೋಗಕರಣ ವ್ರತ
ಕಥನಂ ನಾಮ ಷಷ್ಠಸ್ಸರ್ಗಸ್ಸಮಾಪ್ತಃ

---

೬೬. ಕಮಲಗಳು ಸಿಕ್ಕದೆ ಹೋದರೆ ಸಾಮಾನ್ಯವಾಗಿ ಪೂಜೆಗೆ ಯೋಗ್ಯವಾದ ಹೂಗಳಿಂದಲೇ ಪುಷ್ಪಾಂಜಲಿಯನ್ನು ಸಮರ್ಪಿಸಬಹುದು. ಎಂಭತ್ತೊಂದು ದಂಪತಿಗಳನ್ನು ಪೂಜಿಸಲು ಶಕ್ತಿಯಿಲ್ಲದಿರಬಹುದು.

೬೭. ಹಾಗೆ ಶಕ್ತಿಯಿಲ್ಲದಿದ್ದರೆ ಒಂಭತ್ತುಮಂದಿ ದಂಪತಿಗಳನ್ನು ಪೂಜಿಸಬಹುದು. ಅದರಮೇಲೆ ಅವರಿಗೆ ಶಕ್ತಿಯಿದ್ದಂತೆ ಹೆಚ್ಚು ಹೆಚ್ಚಾಗಿ ಪೂಜಿಸಬಹುದು. ಖಂಡಿತವಾಗಿಯೂ ಲೋಭಿತನವನ್ನು ಮಾಡಬಾರದು.

೬೮. ಇದರಿಂದ ತಮಗೆ ಬೇಕಾದವರು ದೂರದಲ್ಲಿದ್ದರೂ ಅವರು ಬೇಗ ಬಂದು ಸೇರುವರು. ಮುಂದೆ ಆಗ ಬೇಕಾದ ಕೆಲಸಗಳೂ ಕೂಡ ಜಾಗ್ರತೆಯಾಗಿ ಆಗುತ್ತವೆ. ಇದರಲ್ಲಿ ಸಂಶಯವಿಲ್ಲ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಸಂಯೋಗಕರಣ
ವ್ರತವೆಂಬ ಆರನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

॥ ಆರನೆಯ ಸರ್ಗದ ಸಾರಾಂಶವು ॥

ವಾಲ್ಮೀಕಿಯ ಆಶ್ರಮದಲ್ಲಿದ್ದುಕೊಂಡು ಮಕ್ಕಳನ್ನು ಬೆಳೆಸುತ್ತಿದ್ದ ಸೀತೆಯು ಒಂದುಸಾರಿ ಆ ವಾಲ್ಮೀಕಿಯನ್ನು ಕುರಿತು "ಎಲೈ ಮುನಿಪುಂಗವನೇ! ನನಗೆ ಶ್ರೀರಾಮನ ಸಂಗಡ ಸೇರುವಿಕೆಯುಂಟಾಗುವಂತೆ ಮಾಡುವ ಒಂದು ವ್ರತವನ್ನು ಉಪದೇಶಿಸು" ಎಂದಳು.

ಅದನ್ನು ಕೇಳಿ ಆ ಮುನಿಯು ಎಲೈ ಸೀತೆಯೇ! ಪಾಡ್ಯದಿಂದ ಮೊದಲುಗೊಂಡು ನವಮಿಯವರೆಗೆ ಪೂರ್ತಿಯಾಗಿ ಒಂದು ವ್ರತವನ್ನು ಮಾಡು. ಇದು ಒಂಭತ್ತು ದಿನಗಳ ವ್ರತವು. ಧಾತುವಿನಿಂದ ನಿರ್ಮಿತವಾದ ರಾಮಚಂದ್ರನ ಎರಡು ಪಾದುಕೆಗಳನ್ನು ಮಾಡಿಸು. ಪಾಡ್ಯದ ದಿನ ಅದನ್ನು ಪೂಜಿಸಿ ಕೊನೆಗೆ ಒಂಭತ್ತು ಕಮಲಗಳಿಂದ ಪುಷ್ಪಾಂಜಲಿಯನ್ನು ಸಮರ್ಪಿಸು. ಅನಂತರ ನಿನ್ನ ಮಕ್ಕಳಬಾಯಿಂದ ಶುಭವಾದ ಜನ್ಮಕಾಂಡವನ್ನು ಹೇಳಿಸಿ ಕೇಳು. ದ್ವಿತೀಯೆಯ ದಿವಸ ಮತ್ತೆ ಆ ಪಾದುಕೆಗಳನ್ನು ಪೂಜಿಸಿ ಹದಿನೆಂಟು ಕಮಲಗಳಿಂದ ಪುಷ್ಪಾಂಜಲಿಯನ್ನರ್ಪಿಸು. ಎರಡುಬಾರಿ ಜನ್ಮಕಾಂಡದ ಕಥೆಯನ್ನು ಕೇಳು. ಇದೇ ರೀತಿಯಾಗಿ ಒಂಭತ್ತೊಂಭತ್ತು ಕಮಲಗಳನ್ನು ಹೆಚ್ಚಿಸುತ್ತ ಒಂದೊಂದು ಬಾರಿ ಕಥೆಯನ್ನು ಹೆಚ್ಚಿಸುತ್ತ ಕೇಳು. ಕೊನೆಗೆ ನವಮಿಯದಿನ ಎಂಭತ್ತೊಂದು ಕಮಲಗಳಿಂದ ಪುಷ್ಪಾಂಜಲಿಯನ್ನರ್ಪಿಸಿ ಒಂಭತ್ತುಬಾರಿ ಜನ್ಮಕಾಂಡದ ಕಥೆಯನ್ನು ಕೇಳು.

ಅನಂತರ ಆ ನವಮಿಯದಿನ ಎಂಭತ್ತೊಂದು ಜನ ದಂಪತಿಗಳಿಗೆ ಹೇಳಿ ಅವರನ್ನು ಪೂಜಿಸಿ ಉಡಿಗೆ ತೊಡಿಗೆಗಳಿಂದಲೂ, ಭೋಜನದಿಂದಲೂ ತೃಪ್ತಿಪಡಿಸಿ

ನಮಸ್ಕರಿಸಿ ಕಳುಹಿಸು. ಈ ವ್ರತಾಚರಣೆಯಿಂದ ನಿನಗೆ ಪತಿಯ ಸಮಾಗಮವು ಬೇಗನೆ ಆಗುತ್ತದೆ. ಇದಕ್ಕೆ ಸಂಯೋಗಕರಣವ್ರತವೆಂದು ಹೆಸರು. ಇದನ್ನು ಯಾರು ಯಾರು ಯಾವ ಯಾವ ಅಪೇಕ್ಷೆಯಿಂದ ಮಾಡುವರೋ ಅವರು ಅದದನ್ನು ಪಡೆಯುವರು. ಎಂದನು.

ಇದನ್ನು ಕೇಳಿ ಸೀತೆಯು ಎಲೈ ಋಷಿಶ್ರೇಷ್ಠನೇ ! ಅಯೋಧ್ಯೆಯಲ್ಲಿಯಾದರೆ ಬಹುವಾಗಿ ಕಮಲಗಳಿದ್ದುವು. ಈಗ ಅಲ್ಲಿಂದ ಇಲ್ಲಿಗೆ ತರಲು ಸಮರ್ಥರಾದವರು ಯಾರು ತಾನೆ ಇರುವರು ? ಅಲ್ಲಿಯೂ ಕೂಡ ರಾಮದೂತರು ಬಹು ಜೋಪಾನ ದಿಂದ ಕಾಪಾಡುತ್ತಿರುವರು. ಎನ್ನಲು ಅವಳ ಎದುರಿಗೇನೆ ಇದ್ದ ಲವನು ಅಮ್ಮಾ ! ನೀನು ವ್ರತವನ್ನು ಪ್ರಾರಂಭಿಸು. ಯೋಚಿಸಬೇಡ. ನಾನು ಪ್ರತಿದಿನವೂ ನಿನಗೆ ಕಮಲಗಳನ್ನು ತಂದುಕೊಡುತ್ತೇನೆ ಎಂದನು.

ಐದು ವರ್ಷದ ಮಗುವು ಹೀಗೆ ಹೇಳುತ್ತಿರುವುದನ್ನು ಕೇಳಿ ಸೀತೆಯು ನಕ್ಕು ಆ ಮಗುವನ್ನು ಅಪ್ಪಿಕೊಂಡು ಮುತ್ತಿಕ್ಕಿದಳು. ಮತ್ತು ಎಲೈ ವತ್ಸನೇ ! ಅಲ್ಲಿ ರಾಮದೂತರು ಅನೇಕರು ರಕ್ಷಿಸುತ್ತಿರುವರು. ನೀನು ಹೇಗೆತಾನೆ ತರಲು ಸಾಧ್ಯವಾದೀತು ? ಎಂದಳು.

ಆದಕ್ಕೆ ಲವನು ಅಮ್ಮ ! ನಿನ್ನ ಸ್ತನ್ಯಪಾನದ ಬಲದಿಂದಲೂ ವಾಲ್ಮೀಕಿಯ ಶಸ್ತ್ರವಿದ್ಯೆಯ ಪ್ರಭಾವದಿಂದಲೂ ಅಂತೆಯೇ ಅವನ ಆಶೀರ್ವಾದದ ಮಹತ್ತಿ ನಿಂದಲೂ ಆ ರಾಮನಿಗೂ ನಾನು ಭಯಪಡುವುದಿಲ್ಲ. ನನ್ನ ಪೌರುಷವನ್ನು ನೋಡುವಿಯಂತೆ. ನನಗೆ ಅಪ್ಪಣೆಯನ್ನು ಕೊಡು. ಎಂದು ಹೇಳಿ ಆಕೆಗೆ ನಮಸ್ಕರಿಸಿ, ವಾಲ್ಮೀಕಿಗೆ ಅಭಿವಂದಿಸಿ, ಬಾಣಬತ್ತಲಿಕೆಗಳಿಂದ ಸಿದ್ಧನಾಗಿ ರಥದಲ್ಲಿ ಕುಳಿತು ಅಯೋಧ್ಯೆಗೆ ಹೊರಟನು.

ಅಯೋಧ್ಯೆಯ ಬಳಿಯಲ್ಲಿರುವ ಉದ್ಯಾನಕ್ಕೆ ಸ್ವಲ್ಪ ದೂರದಲ್ಲಿ ರಥವನ್ನು ನಿಲ್ಲಿಸಿ ಕಾಲುನಡಿಗೆಯಲ್ಲಿಯೇ ಕಮಲಾಕರಕ್ಕೆ ಹೋದನು. ಆಗ ಮಧ್ಯಾಹ್ನ ವಾಗಿದ್ದುದರಿಂದ ರಕ್ಷಕರು ಮನೆಗೆ ಊಟಕ್ಕೆ ಹೋಗಿದ್ದರು. ಈ ಲವನು

ಹೂಗಳನ್ನು ಕೊಯ್ದುಕೊಂಡು ಮತ್ತೆ ರಥವಲ್ಲಿ ಕುಳಿತು ಆಶ್ರಮಕ್ಕೆ ಬಂದು ಸೀತೆಗೆ ಒಪ್ಪಿಸಿದನು ಸೀತೆಯು ಸಂತೋಷದಿಂದ ವ್ರತವನ್ನು ಪ್ರಾರಂಭಿಸಿದಳು.

ಇದೇ ರೀತಿಯಾಗಿ ಏಳು ದಿನಗಳವರೆಗೂ ಹೂವನ್ನು ತಂದನು. ಆ ರಾಮ ದೂತರಿಗೆ ಈತನು ಹೂವನ್ನು ತೆಗೆದುಕೊಂಡು ಹೋಗುತ್ತಿದ್ದುದು ತಿಳಿಯಲೇ ಇಲ್ಲ. ಎಂಟನೆಯ ದಿನವೂ ಅಂತೆಯೇ ಲವನು ಹೂವಿಗೆ ಬಂದನು. ಹೂವನ್ನು ಕೊಯ್ದು ತೆಗೆದುಕೊಂಡು ಹಿಂದಿರುಗಿ ಹೋಗುತ್ತಿದ್ದಾಗ ರಕ್ಷಕರು ಅವನನ್ನು ಕಂಡರು. ಆಗ ಅವರು ಆಶ್ಚರ್ಯದಿಂದ ಅಪ್ಪ ! ರಾಮನಿಗೆ ಹೂತರುವವರೊಳಗೆ ನಿನ್ನನ್ನು ಎಂದೂ ನೋಡಿಯೇ ಇಲ್ಲ. ನೀನು ಯಾವಾಗಿನಿಂದ ರಾಮನ ಸೇವೆಗೆ ಬಂದಿದ್ದೇಯೆ? ನಿರ್ಭಯವಾಗಿ ಹೂವನ್ನು ತೆಗೆದುಕೊಂಡು ಹೋಗುತ್ತಿರುವೆಯಲ್ಲ ಎಂದರು.

ಅದನ್ನು ಕೇಳಿ ಲವನು ನಗುತ್ತ ಎಲೈ ರಾಮದೂತರಿರಾ ! ನಾನು ವಾಲ್ಮೀಕಿಯ ಶಿಷ್ಯನು. ರಾಮನನ್ನು ಯಾವಾಗಲೂ ನೋಡಿಯೇ ಇಲ್ಲ. ನಿಮ್ಮನ್ನು ಕೂಡ ನೋಡಿಯೂ ಇಲ್ಲ. ಆ ವಾಲ್ಮೀಕಿಯ ಅಪ್ಪಣೆಯಂತೆ ಹೂವನ್ನು ತೆಗೆದು ಕೊಂಡು ಹೋಗುತ್ತಿದ್ದೇನೆ. ಎಂದನು.

ಇದನ್ನು ಕೇಳಿದ ರಾಮದೂತರು ಈತನು ವಾಲ್ಮೀಕಿಯ ಕಡೆಯವನಂತೆ ಇವನು ನಮ್ಮ ಕಡೆಯುವನಲ್ಲ. ಎಂದು ತಿಳಿದು ಕೋಪಗೊಂಡು ನೀನು ರಾಮ ನನ್ನು ನೋಡಿಯೂ ಇಲ್ಲ. ನಮ್ಮನ್ನು ಕೇಳಲೂ ಇಲ್ಲ. ರಾಮನ ಅಪ್ಪಣೆಯಿಲ್ಲದೆ ದಿನವೂ ಕಮಲಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಿದ್ದೀಯೆ. ಇದು ನಮಗೆ ತಿಳಿಯಲೇ ಇಲ್ಲ. ಈದಿನ ಸಿಕ್ಕಿದ್ದೀಯೆ. ನಿಂತುಕೋ. ಹೋಗಬೇಡ. ನೀನು ಅಪರಾಧಿಯಾಗಿರುವುದರಿಂದ ನಿನ್ನನ್ನು ರಾಮನ ಬಳಿಗೆ ಕರೆದುಕೊಂಡು ಹೋಗುತ್ತೇವೆ. ಎಂದು ಹೇಳುತ್ತ ಅವನ ದಾರಿಗೆ ಅಡ್ಡಲಾಗಿ ಹದಿನಾಲ್ಕುಜನ ಶಸ್ತ್ರಪಾಣಿಗಳಾದ ಭಟರೂ ನೂರುಜನ ನೀರುಹಾಕುವ ಆಳುಗಳೂ ಹೋದರು. ಇವರನ್ನು ನೋಡಿ ರಥದಲ್ಲಿ ಕುಳಿತ ಲವನು " ಎಲೈ ದೂತರಿರಾ ! ನೀವು ರಾಮನ ಬಳಿಗೆ ಹೋಗಿರಿ. ಅವನಿಗೆ ಪೌರುಷವಿದ್ದರೆ ಅವನೇ ನನ್ನ ಬಳಿಗೆ ಬರಲಿ " ಎಂದನು. ಅದಕ್ಕೆ ದೂತರು ನಿನಗೆ ಜೀವದಮೇಲೆ ಆಸೆಯಿಲ್ಲ.

ಆದ್ದರಿಂದ ಈ ಮಾತನ್ನು ಆಡುತ್ತಿದ್ದೀಯೆ. ಈಗಲೇ ನಿನ್ನನ್ನು ಹೆಡೆಗಟ್ಟು ಕಟ್ಟಿ ನಾವೇ ಆ ರಾಮನ ಬಳಿಗೆ ತೆಗೆದುಕೊಂಡು ಹೋಗುತ್ತೇವೆ. ಎಂದು ಮೇಲೆಬೀಳಲು ಹೋದರು. ಆಗ ಲವನು ಧನುಸ್ಸನ್ನು ಠಣ್ ಎಂದು ಶಬ್ದ ಮಾಡುತ್ತ ಬಾಣಗಳನ್ನು ಬಿಟ್ಟು ಅವರು ಯಾಗಮಂಟಪಕ್ಕೆ ಹೋಗಿ ಬೀಳು ವಂತೆ ಹೊಡೆದು ತಾನು ಆಶ್ರಮಕ್ಕೆ ಹೊರಟು ಹೋದನು. ಮತ್ತೆ ಸೀತೆಗೆ ಕಮಲ ಗಳನ್ನು ಕೊಟ್ಟು ಎಲ್ಲಾ ವಿಷಯವನ್ನೂ ಹೇಳಿದನು.

ಇತ್ತ ದೂತರು ಉಪವನದಲ್ಲಿ ನಡೆದ ವಿಷಯವನ್ನು ರಾಮನಿಗೆ ತಿಳಿಸಿದರು. ರಾಮನೂ ಇದನ್ನು ಕೇಳಿ ಮಾರನೆಯದಿನ ಆ ತೋಟವನ್ನು ಕಾಯಲು ಸಾವಿರಜನ ಆಳುಗಳನ್ನು ಕಳುಹಿಸಿದನು. ಲವನು ಮರುದಿನವೂ ಬರಲು ಇವರೆಲ್ಲರೂ ಯುದ್ಧಕ್ಕೆ ನಿಂತರು. ಆಗ ಲವನು ಎಲೈ ದೂತರಿರಾ! ನಿಮ್ಮ ರಾಮನು ಸೀತೆಯನ್ನು ಬಿಟ್ಟಾಗಲೇ ಅವನ ವಿಜಯಲಕ್ಷ್ಮಿಯು ಹೊರಟು ಹೋದಳು. ನೀವು ರಾಮನ ಬಳಿಗೆ ಸುಮ್ಮನೆ ಹೊರಟುಹೋಗಿರಿ. ನಿಮ್ಮ ಸ್ವಾಮಿಯ ಪೌರುಷವು ಸೀತೆಯನ್ನು ಓಡಿಸುವುದರಲ್ಲಿಯೇ ಹೊರತು ನನ್ನ ಮೇಲೆ ಯುದ್ಧಮಾಡುವುದರಲ್ಲಿ ಇಲ್ಲ. ಎಂದು ಮೂದಲಿಸಿದನು. ಮತ್ತು ಬಾಣಗಳನ್ನು ಬಿಟ್ಟು ಎಲ್ಲರನ್ನೂ ಓಡಿಸಿ ಕಮಲಗಳನ್ನು ಕೊಂಡುಹೋದನು.

ದೂತರು ಮತ್ತೆ ರಾಮನ ಬಳಿಗೆ ಹೋಗಿ "ಎಲೈ ಸ್ವಾಮಿಯೆ! ಅವನು ಐದುವರ್ಷದ ಹುಡುಗನಾದರೂ ಬಹು ಪರಾಕ್ರಮಿಯು. ವಾಲ್ಮೀಕಿಯ ಶಿಷ್ಯನಂತೆ. ನಮ್ಮನ್ನೂ ತಮ್ಮನ್ನೂ ಬಹುವಾಗಿ ನಿಂದಿಸಿದನು." ಎನ್ನಲು ಆ ರಾಮನು ಮಂತ್ರಿಗಳೊಡನೆ ಯೋಚಿಸಿ "ನಿನ್ನ ಶಿಷ್ಯನನ್ನೂ ಕರೆದುಕೊಂಡು ನೀನೂ ಬರಬೇಕು" ಎಂದು ವಾಲ್ಮೀಕಿಯ ಬಳಿಗೆ ಆಳನ್ನು ಕಳುಹಿಸಿದನು.

ದೂತನು ಹೋಗಿ ರಾಮನ ಅಪ್ಪಣೆಯನ್ನು ತಿಳಿಸಲು ವಾಲ್ಮೀಕಿಯು ತಾನು ಶಿಷ್ಯರೊಡನೆ ಬರುವುದಾಗಿ ಹೇಳಿ ಅವನನ್ನು ಕಳುಹಿಸಿಬಿಟ್ಟನು. ಈ ವಿಷಯವೆಲ್ಲವೂ ರಾಮನಿಗೆ ತಿಳಿದಿದ್ದುದರಿಂದಲೇ ಅವನು ಯಾಗಕ್ಕೆ ವಾಲ್ಮೀಕಿ ಯನ್ನು ಮೊದಲು ಕರೆಸಿರಲಿಲ್ಲ.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ
|| ಸಪ್ತಮಸ್ಸರ್ಗಃ ||

|| ಶ್ರೀರಾಮದಾಸ ಉವಾಚ ||

ಅಥ ರಾಮೋಪಿ ಧರ್ಮಾತ್ಮಾ ಚರಮೇ ತುರಗಾಧ್ವರೇ |
ಹಯಂ ಮುಮೋಚ ಶತ್ರುಘ್ನಸ್ತಸ್ಯ ಪೃಷ್ಠೇ ಯಯೌ ಜವಾತ್ || ೧ ||

ದಕ್ಷಿಣಾಂ ಪಶ್ಚಿಮಾಮಾಶಾಮುತ್ತರಾಂ ತುರಗೋತ್ತಮಃ |
ಅತಿಕ್ರಮ್ಯ ತಥಾ ಪ್ರಾಚೀಂ ಯಜ್ಞಸ್ಥಾನಂ ನ್ಯವರ್ತತ || ೨ ||

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ
ಏಳನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಶ್ರೀರಾಮನು ಹೀಗೆ ಅಶ್ವಮೇಧ ಯಾಗಮಾಡುತ್ತ ಇರುವಲ್ಲಿ ಕೊನೆಯದಾದ ಅಶ್ವಮೇಧಯಾಗಕ್ಕೆ ಮೊದಲುಮಾಡಿ ಕುದುರೆಯನ್ನು ಪೂಜಿಸಿ ಬಿಟ್ಟನು. ಅದನ್ನು ರಕ್ಷಿಸಲು ಆದರ ಹಿಂದೆ ಎಂದಿನಂತೆ ಶತ್ರುಘ್ನನು ಹೊರಟನು.

೨. ಆ ಯಾಗದ ಕುದುರೆಯು ದಕ್ಷಿಣದಲ್ಲಿ ತಿರುಗಾಡಿ ಅನಂತರ ಪಶ್ಚಿಮದಲ್ಲಿಯೂ, ಉತ್ತರದಲ್ಲಿಯೂ ಸಂಚರಿಸಿ ಪೂರ್ವದಿಕ್ಕಿನಲ್ಲಿ ಸಂಚರಿಸುತ್ತ ಕೊನೆಗೆ ಯಜ್ಞಸ್ಥಾನಕ್ಕೆ ಬಂದಿತು.

ನೃಪತಿಭ್ಯಸ್ಸನುಸ್ತೇಭ್ಯಃ ಶತ್ರುಘ್ನೋ ವಸು ಕೋಟಿಶಃ ।
ಗೃಹೀತ್ವಾ ತೈರ್ನೃಪೈರ್ಯುಕ್ತಸ್ತುರಗಸ್ಯಾನುಗೋ ಯಯೌ ॥ ३ ॥

ಸೇನಯಾ ಚತುರಂಗಿಣ್ಯಾ ದಶಸಾಹಸ್ರಸಂಖ್ಯಯಾ ।
ತಸ್ಮಿನ್ವಿತಾನೇ ಋಷಯಸ್ಸರ್ವೇ ರಾಜರ್ಷಯಸ್ತಥಾ ॥ ೪ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ಸಮಾಜಗ್ಮುಸ್ಸಹಸ್ರಶಃ ।
ಚರಮಾಧ್ವರೇ ತೇ ದ್ರಷ್ಟುಂ ರಾಮಸ್ಯೋತ್ಸವಮಾಗತಾಃ ॥ ೫ ॥

ವಾಲ್ಮೀಕಿರಪಿ ಸಂಗೃಹ್ಯ ಗಾಯಂತೌ ಭೂಮಿಜಾತ್ಮಜೌ ।
ಜಗಾಮ ಋಷಿವಾಟಸ್ಯ ಸಮೀಪಂ ಸೀತಯಾ ಸುಖಂ ॥ ೬ ॥

---

೩. ಶತ್ರುಘ್ನನು ರಾಜರುಗಳನ್ನು ತನ್ನೊಡನೆ ಕರೆದುಕೊಂಡು ಕೋಟಿ ಗಟ್ಟಲೆಯಲ್ಲಿ ಹಣವನ್ನೂ ತೆಗೆದುಕೊಂಡು ಕುದುರೆಯನ್ನು ರಕ್ಷಿಸುತ್ತ ಅದರ ಹಿಂದೆಯೇ ತಾನೂ ಬಂದನು.

೪-೫. ಈ ಶತ್ರುಘ್ನನು ಹತ್ತುಸಾವಿರ ಸಂಖ್ಯೆಯುಳ್ಳ ಚತುರಂಗ ಬಲದೊಡನೆ ಯಾಗಮಂಟಪಕ್ಕೆ ಹಿಂದಿರುಗಿ ಬರಲು ಇದನ್ನು ಕೇಳಿ ಆ ಕೊನೆಯ ಯಾಗವನ್ನು ನೋಡಲು ಋಷಿಗಳೂ, ರಾಜರ್ಷಿಗಳೂ, ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಸಾವಿರಸಂಖ್ಯೆಯಲ್ಲಿ ಬಂದರು. ಕೊನೆಯ ಯಾಗದಲ್ಲಿ ರಾಮನು ಬಹುವಾಗಿ ಉತ್ಸವವನ್ನು ಮಾಡಿಕೊಳ್ಳುವನೆಂದೇ ಅವರೆಲ್ಲರೂ ಹೀಗೆ ಬಹುವಾಗಿ ಬಂದರು.

೬. ಇತ್ತ ವಾಲ್ಮೀಕಿಯೂ ಕೂಡ ಸೀತೆಯ ಮಕ್ಕಳಾದ ಲವ, ಕುಶರನ್ನು ಕರೆದುಕೊಂಡು ಸೀತೆಯೊಡನೆ ಹೊರಟು ಬಂದು ಋಷಿಗಳಿರುವ ಮನೆಯ ಕಡೆಯಲ್ಲಿ ಇಳಿದನು.

ಮಾರ್ಗೇ ನೃಪಸಮೂಹೇಷು ಶಿಬಿಕಾಸ್ಥಾಂ ಹಿ ಜಾನಕೀಂ ।
ನ ವಿದುಃ ಪಾರ್ಥಿವಾಸ್ಸರ್ವೇ ಜನಾಸ್ತೇಽಪಿ ತಥೇತರೇ ॥ ೭ ॥

ಸುಮೇಧಯಾ ಜನಕೋಽಪಿ ಯಯೌ ರಾಮಾಧ್ವರಂ ಪ್ರತಿ ।
ಕ್ರೋಶದ್ವಯಾಂತರೇ ಪೂರ್ವೇ ಯಜ್ಞವಾಟಾನ್ಮುನೀಶ್ವರಃ ॥ ೮ ॥

ಕೃತ್ವಾ ಪರ್ಣಕುಟೀಂ ರಮ್ಯಾಂ ತಾಭ್ಯಾಂ ತಸ್ಥೌ ಸ ಸೀತಯಾ ।
ವಾಲ್ಮೀಕಿರ್ಗೋಪಯಾಮಾಸ ಪರ್ಣಕುಟ್ಯಾಂ ವಿದೇಹಜಾಂ ॥ ೯ ॥

ನೃಪಸೇನಾನಿವಾಸೇಷು ಜನಕಶ್ಚ ಸುಮೇಧಯಾ ।
ಸ್ವಸೈನ್ಯೇನ ಯಯೌ ತೂಷ್ಣೀಂ ರಾಮೇಣಾಸೌ ನಿರೀಕ್ಷಿತಃ ॥ ೧೦ ॥

---

೭. ಅನೇಕಜನ ರಾಜರೂ, ರಾಜಪತ್ನಿಯರೂ ಪಲ್ಲಕ್ಕಿಯಲ್ಲಿಯೂ ಮೇನದಲ್ಲಿಯೂ ಸಾವಿರಾರು ಸಂಖ್ಯೆಯಲ್ಲಿ ಬಂದು ಹೋಗುತ್ತಿದ್ದುದರಿಂದ ಪಲ್ಲಕ್ಕಿಯಲ್ಲಿ ಬಂದ ಜಾನಕಿಯನ್ನು ರಾಜರಾಗಲಿ, ಇತರರಾಗಲಿ ತಿಳಿಯಲಿಲ್ಲ.

೮-೯. ಜನಕನೂ ಸುಮೇಧೆಯೊಡನೆ ರಾಮನ ಯಾಗಕ್ಕೆ ಹೋದನು. ಈ ವಾಲ್ಮೀಕಿಯು ಯಜ್ಞಮಂಟಪಕ್ಕೆ ಎರಡು ಕ್ರೋಶಗಳ ದೂರದಲ್ಲಿಯೇ ಒಂದು ರಮ್ಯವಾದ ಪರ್ಣಶಾಲೆಯನ್ನು ಮಾಡಿ ಅದರಲ್ಲಿ ತಾನೂ ಸೀತೆಯೂ ಲವಕುಶರೂ ಇದ್ದರು. ಆ ಪರ್ಣಶಾಲೆಯಲ್ಲಿ ವಾಲ್ಮೀಕಿಯು ಸೀತೆಯನ್ನು ಇತರರು ನೋಡದಂತೆ ಬಚ್ಚಿಟ್ಟಿದ್ದನು.

೧೦. ರಾಜರು ಇಳಿದುಕೊಳ್ಳುವ ಸ್ಥಳಕ್ಕೆ ಜನಕನು ಸುಮೇಧೆಯೊಡನೆ ಹೋದನಷ್ಟೆ! ಹೋಗುವಾಗ ಸೈನ್ಯವನ್ನು ಕರೆದುಕೊಂಡು ಹೋದನು. ಇದರಿಂದ ರಾಮನು ಅವನನ್ನು ನೋಡಿದನು. ಆದರೆ ಇವರು ಒಬ್ಬರಿಗೊಬ್ಬರು ಮಾತನಾಡಿಸಲಿಲ್ಲ.

ವಾಲ್ಮೀಕಿರಪಿ ತೌ ಪ್ರಾಹ ನ್ಯಸ್ತಾಲಂಕಾರಮುಂಡಿತೌ ।
ಜಟಾಚೀರಾಜಿನಧರೌ ಸೀತಾಪುತ್ರೌ ಮಹಾಧಿಯೌ ॥ ೧೧ ॥

ಯತ್ರ ತತ್ರ ಚ ಗಾಯಂತೌ ಪುರೇ ವೀಥಿಷು ಸರ್ವತಃ ।
ರಾಮಸ್ಯಾಗ್ರೇ ಪ್ರಗಾಯೇತಾಂ ಶುಶ್ರೂಷುರ್ಯದಿ ರಾಘವಃ ॥ ೧೨ ॥

ಆಜನ್ಮಕಾಂಡಾತ್ಕಾಂಡಾನಿ ನ ಗೇಯಾನ್ಯತ್ರ ಬಾಲಕೌ ।
ಯದಾಕರೋಮ್ಯಹಂ ಚಾಜ್ಞಾಂ ಗಾಯೇತಾಂ ಸಕಲಂ ತದಾ ॥ ೧೩ ॥

ನ ಗ್ರಾಹ್ಯಂ ತದ್ಯುವಾಭ್ಯಾಂ ಸ ಯದಿ ಕಿಂ ಚಿತ್ಪ್ರದಾಸ್ಯತಿ ।
ಇತಿ ತೌ ಚೋದಿತೌ ತತ್ರ ಗಾಯಮಾನೌ ವಿಚೇರತುಃ ॥ ೧೪ ॥

---

೧೧. ಅಲಂಕಾರಗಳನ್ನು ತೆಗೆದಿಟ್ಟು ಜಟೆಗಳನ್ನು ಕಟ್ಟಿಕೊಂಡು ನಾರುಡೆಯನ್ನು ಉಟ್ಟು ಬಹುಬುದ್ಧಿವಂತರಾದ, ಸೀತೆಯ ಮಕ್ಕಳಾದ ಲವ, ಕುಶರನ್ನು ನೋಡಿ ಆ ವಾಲ್ಮೀಕಿಯು ಇಂತೆಂದನು.

೧೨. ಎಲೈ ಬುದ್ಧಿವಂತರಾದ ಹುಡುಗರಿರಾ ! ಈ ಅಯೋಧ್ಯೆಯಲ್ಲಿ ಬೀದಿ ಬೀದಿಯಲ್ಲಿಯೂ ಮನೆ ಮನೆಯಲ್ಲಿಯೂ ಗಾನಮಾಡಿರಿ. ಎಲ್ಲಿ ಬೇಕೆಂದರೂ ಅಲ್ಲಿ ಗಾನಮಾಡಿರಿ. ಒಂದುವೇಳೆ ರಾಮನು ಕೇಳಬೇಕೆಂದು ಇಚ್ಛಿಸಿದರೆ ಅಲ್ಲಿಯೂ ಗಾನಮಾಡಿರಿ.

೧೩. ಎಲೈ ಬಾಲಕರಿರಾ ! ಜನ್ಮಕಾಂಡವನ್ನು ಮೊದಲುಮಾಡಿಕೊಂಡು ಉಳಿದಕಾಂಡಗಳನ್ನು ಎಲ್ಲಿಯೂ ಹೇಳಿ ಗಾನಮಾಡಬೇಡಿರಿ. ನಾನು ನಿಮಗೆ ಅಪ್ಪಣೆಮಾಡಿದಾಗ ಸ್ವಲ್ಪವನ್ನೂ ಬಿಡದೆ ಎಲ್ಲವನ್ನೂ ಗಾನಮಾಡಿರಿ.

೧೪. ಒಂದುವೇಳೆ ಆ ರಾಮನು ನಿಮ್ಮ ಗಾನವನ್ನು ಕೇಳಿ ಯಾವುದಾದರೂ ಬಹುಮಾನವನ್ನು ಕೊಡಲು ಬಂದರೆ ಅದನ್ನು ತೆಗೆದುಕೊಳ್ಳಬೇಡಿರಿ. ಎಂದೆನ್ನಲು ವಾಲ್ಮೀಕಿಯ ಈ ಮಾತಿನಂತೆ ಆ ಬಾಲಕರು ಎಲ್ಲ ಕಡೆಯಲ್ಲಿಯೂ ಗಾನಮಾಡುತ್ತ ಓಡಾಡುತ್ತಿದ್ದರು.

ಯಥೋಕ್ತಂ ಋಷಿಣಾ ಪೂರ್ವಂ ತತ್ರ ತತ್ರಾಭ್ಯಗಾಯತಾಂ ।
ತಾಂ ತು ಶುಶ್ರಾವ ಕಾಕುತ್‌ಸ್ಥಃ ಪೂರ್ವಚರ್ಯಾಕೃತಿಂ ತತಃ ॥ ೧೫ ॥

ಅಪೂರ್ವಪದ್ಯವೃತ್ತಾದಿಗೇಯೈಶ್ಚ ಸಮಭಿಪ್ಲುತಾಂ ।
ಬಾಲಾಭ್ಯಾಂ ರಾಘವಃ ಶ್ರುತ್ವಾ ಕೌತೂಹಲಮುಪೇಯಿವಾನ್ ॥ ೧೬ ॥

ಅಥ ಕರ್ಮಾಂತರೇ ರಾಮಸ್ಸಮಾಹೂಯ ಮುನೀಶ್ವರಾನ್ ।
ರಾಜ್ಞಶ್ಚೈವ ನರವ್ಯಾಘ್ರಃ ಪಂಡಿತಾಂಶ್ಚೈವ ನೈಗಮಾನ್ ॥ ೧೭ ॥

ಪೌರಾಣಿಕಾನ್ ಶಬ್ದವಿದೋ ಗಣಕಾಂಶ್ಚ ಚಿಕಿತ್ಸಕಾನ್ ।
ನಾನಾಕೌಶಲ್ಯನಿಪುಣಾಂಸ್ತಥಾ ವೃದ್ಧಾನ್ ದ್ವಿಜಾದಿಕಾನ್ ॥ ೧೮ ॥

---

೧೫. ವಾಲ್ಮೀಕಿಯು ಹೇಳಿದಂತೆಯೇ ಅಲ್ಲಲ್ಲಿಯೇ ಅವರು ಗಾನಮಾಡುತ್ತಿದ್ದರು. ರಾಮನು ಅವರು ಗಾನಮಾಡುತ್ತಿದ್ದ ತನ್ನ ಪೂರ್ವದ ನಡತೆಯ ಕಥೆಯನ್ನು ಜನರಿಂದ ಕೇಳಿದನು.

೧೬. ಆ ಕಥೆಯು ಅಪೂರ್ವವಾದ ಪದ್ಯಗಳಿಂದಲೂ ವಿಷಯಗಳಿಂದಲೂ ಕೂಡಿಕೊಂಡಿದ್ದಿತು. ಗಾನಮಾಡಲು ಬಹು ಯೋಗ್ಯವಾಗಿಯೂ ಇದ್ದಿತು. ಅದನ್ನು ಕೇಳಿ ಆ ಹುಡುಗರನ್ನು ಕರೆಸಿ ಅವರಿಂದ ತನ್ನ ಈ ಚರಿತ್ರೆಯನ್ನು ಹೇಳಿಸಿ ಕೇಳಿ ಆ ರಾಮನು ಬಹು ಸಂತೋಷಪಟ್ಟನು.

೧೭–೧೮. ಒಂದುದಿನ ಯಜ್ಞದ ಕೆಲಸವೆಲ್ಲವೂ ಮುಗಿದಮೇಲೆ ರಾಮನು ಮುನೀಶ್ವರರನ್ನೂ, ಪಂಡಿತರನ್ನೂ, ವೈದೀಕರನ್ನೂ, ಪೌರಾಣಿಕರನ್ನೂ, ವೈಯ್ಯಾಕರಣರನ್ನೂ, ಜೋತಿಷ್ಕರನ್ನೂ, ವೈದ್ಯರನ್ನೂ, ಕುಶಲವಿದ್ಯೆಯಲ್ಲಿ ನಿಪುಣರಾದವರನ್ನೂ, ಮುದುಕರನ್ನೂ, ಬ್ರಾಹ್ಮಣರನ್ನೂ ಸಭಾಮಂಟಪಕ್ಕೆ ಕರೆಸಿದನು.

ಯಜ್ಞವಾಟೇ ತು ತಾನ್ ಪೂಜ್ಯ ಗಾಯಕೌ ಸಂಪ್ರವೇಶಯತ್ ।
ತೇ ಸರ್ವೇ ಹೃಷ್ಟಮನಸೋ ರಾಜಾನೋ ಬ್ರಾಹ್ಮಣಾದಯಃ ॥ ೧೯ ॥

ರಾಮಂ ತೌ ದಾರಕೌ ದೃಷ್ಟ್ವಾ ವಿಸ್ಮಿತಾ ನಿರ್ನಿಮೇಷಕಾಃ ।
ಅವೋಚನ್ ಸರ್ವ ಏವೈತೇ ಪರಸ್ಪರಮಥಾಗತಾಃ ॥ ೨೦ ॥

ಇಮೌ ರಾಮಸ್ಯ ಸದೃಶೌ ಬಿಂಬಾದ್ಬಿಂಬಮಿವೋದಿತೌ ।
ಜಟಿಲೌ ಯದಿ ನ ಸ್ಯಾತಾಂ ನ ಚ ವಲ್ಕಲಧಾರಿಣೌ ॥ ೨೧ ॥

ವಿಶೇಷಂ ನಾಧಿಗಚ್ಛಾಮೋ ರಾಘವಸ್ಯಾನಯೋಸ್ತದಾ ।
ಏವಂ ಸಂವದತಾಂ ತೇಷಾಂ ವಿಸ್ಮಿತಾನಾಂ ಪರಸ್ಪರಂ ॥ ೨೨ ॥

---

೧೯. ಅಲ್ಲಿ ಬಂದವರೆಲ್ಲರನ್ನು ಗೌರವಿಸಿ ಅನಂತರ ಗಾನಮಾಡುವ ಈ ಬಾಲಕರನ್ನೂ ಕರೆಸಿದನು. ಆ ಬಾಲಕರನ್ನು ನೋಡಿ ಆ ಸಭೆಯಲ್ಲಿದ್ದ ಬ್ರಹ್ಮ, ಕ್ಷತ್ರಿಯ, ವೈಶ್ಯರೇ ಮೊದಲಾದವರೆಲ್ಲರೂ ಸಂತೋಷಗೊಂಡರು.

೨೦. ಅವರೆಲ್ಲರೂ ಅನಂತರ ಆ ರಾಮನನ್ನೂ, ಬಾಲಕರನ್ನೂ ನೋಡುತ್ತಾ ಆಶ್ಚರ್ಯಪಟ್ಟುಕೊಂಡು ಕಣ್ಣುಮುಚ್ಚದೆ ನೋಡುತ್ತಿದ್ದರು. ಆಗ ಅಲ್ಲಿ ಬಂದಿದ್ದವರೆಲ್ಲರೂ ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಂಡರು.

೨೧. ಈ ಬಾಲಕರು ರಾಮನಂತೆಯೇ ಇದ್ದಾರೆ. ಬಿಂಬದಿಂದ ಹುಟ್ಟಿದ ಪ್ರತಿಬಿಂಬದಂತೆಯೇ ಇದ್ದಾರೆ. ಆದರೆ ಈ ಬಾಲಕರು ಜಟೆಯನ್ನೂ ನಾರುಡೆಯನ್ನೂ ಧರಿಸಿರುವರು.

೨೨. ಅವರು ಆ ಜಟೆಯನ್ನೂ ನಾರುಡೆಯನ್ನೂ ಧರಿಸಿಲ್ಲದಿದ್ದರೆ ರಾಮನಿಗೂ ಈ ಹುಡುಗರಿಗೂ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಅವರೆಲ್ಲರೂ ಇಂತೆಂದು ಮಾತನಾಡಿಕೊಳ್ಳುತ್ತ ಆಶ್ಚರ್ಯಪಡುತ್ತಿದ್ದರು.

ತದಾಹ ರಾಮದೂತೋಽಪಿ ಲವಬಾಣರುಜಂ ಸ್ಮರ್ರ್ |
ರಾಮಚಂದ್ರಂ ಯಜ್ಞವಾಟಸ್ಥಿತಂ ವೈ ಸಂಭ್ರಮೇಣ ಹಿ || ೨೩ ||

ಲವಮಂಗುಳಿನಾ ವೀರಂ ದರ್ಶಯಂಶ್ಚ ಮುಹುರ್ಮುಹುಃ |
ರಾಮ ರಾಮ ಮಹಾಬಾಹೋ ತಮೇನಂ ಪಶ್ಯ ವೈ ಲವಂ || ೨೪ ||

ಯೇನಾಸ್ಮಾಕಂ ಶರೌಘೈಶ್ಚ ಪ್ರಕ್ಷಿಪ್ಯ ತವ ಸನ್ನಿಧೌ |
ನೀತಾನಿ ಕನಕಾಬ್ಜಾನಿ ಸುಗಂಧೀನಿ ನಿರಂತರಂ || ೨೫ ||

ಸೀತಾತ್ಯಾಗನಿಮಿತ್ತೇನ ಯೇನ ತೇನಾಪಿ ವೈ ಮುಹುಃ |
ಕೃತಾ ನಿಂದಾ ಗರ್ವಿತೇನ ತ್ವದ್ದಂಡೈಕಾರ್ಥಿನಾ ಪ್ರಭೋ || ೨೬ ||

---

೨೩. ಲವನ ಬಾಣದ ಏಟನ್ನು ತಿಂದಿದ್ದ ಅಲ್ಲಿದ್ದ ಒಬ್ಬ ರಾಮದೂತನು ಆ ಏಟನ್ನು ಸ್ಮರಿಸಿಕೊಳ್ಳುತ್ತ ಗಾಯವನ್ನು ಮುಟ್ಟಿನೋಡಿಕೊಳ್ಳುತ್ತ ಆ ಯಜ್ಞಮಂಟಪದಲ್ಲಿದ್ದ ರಾಮಚಂದ್ರನನ್ನು ನೋಡಿ ಅವಸರವಸರದಿಂದ ಇಂತೆಂದನು.

೨೪. ಆ ರಾಮನನ್ನು ಕುರಿತು ಲವನನ್ನು ಬೆರಳಿನಿಂದ ಆಗಾಗ್ಗೆ ತೋರಿಸುತ್ತ ಎಲೈ ಮಹಾಬಾಹುವುಳ್ಳ ರಾಮನೆ! ಈ ಲವನನ್ನು ನೋಡು ನೋಡು.

೨೫. ಇವನೇ ನಮ್ಮಮೇಲೆ ಬಾಣಗಳನ್ನು ಬಿಟ್ಟು ಎಸೆಯುವಂತೆ ಮಾಡಿ ನಿನ್ನ ಹತ್ತಿರದಲ್ಲಿ ಬಂದು ಬೀಳುವಂತೆ ಮಾಡಿದವನು. ಮತ್ತು ಸುಗಂಧವುಳ್ಳ ಕನಕಾಂಬುಜಗಳನ್ನು ಕೂಡ ನಿತ್ಯವೂ ತೆಗೆದುಕೊಂಡು ಹೋಗುತ್ತಿದ್ದವನೂ ಇವನೇನೇ.

೨೬. ಇವನು ಸೀತೆಯ ತ್ಯಾಗವನ್ನೇ ನೆವವನ್ನಾಗಿ ಮಾಡಿಕೊಂಡು ನಿನ್ನನ್ನು ಬಹುವಾಗಿ ನಿಂದಿಸುತ್ತಿದ್ದನು. ಬಹು ಗರ್ವಿಯು. ನಿನ್ನಿಂದ ಶಿಕ್ಷೆಯನ್ನು ಅಪೇಕ್ಷಿಸುತ್ತಿದ್ದನು.

ತವ ದಂಡಭಯಾದೇವ ಪೂರ್ವವೇಷೋ ವಿಲೋಪಿತಃ ।
ರಥವಸ್ತ್ರಾಭರಣಾನಿ ಶಸ್ತ್ರಾಣ್ಯಪಿ ವಿಹಾಯ ಚ ॥ ೨೭ ॥

ಧೃತಾನಿ ವಲ್ಕಲಾದೀನಿ ದೀನರೂಪಾನ್ನ ದೃಶ್ಯತೇ ।
ತ್ವಯಾದ್ಯ ದಂಡನೀಯೋಽಯಂ ಬಂಧುಸಾರಾತಿಗರ್ವಿತಃ ॥ ೨೮ ॥

ಇತಿ ಸ್ವದೂತವಾಕ್ಯಾನಿ ಶೃಣ್ವನ್ನಪಿ ರಘೂತ್ತಮಃ ।
ಪ್ರೇಮ್ಣಾವಲೋಕಯಾಮಾಸ ಸುಧಾಕ್ಷಿಭ್ಯಾಂ ಶಿಶೂ ಮುಹುಃ ॥ ೨೯ ॥

ಬಾಲಾವಪಿ ಸಭಾಸಂಸ್ಥಾನ್ನಮಸ್ಕೃತ್ಯ ಯಥಾಕ್ರಮಂ ।
ರಾಘವಂ ಸ್ವಪಿತೃವ್ಯಾಂಶ್ಚ ವಸಿಷ್ಠಂ ಪ್ರಣಿಪತ್ಯ ಚ ॥ ೩೦ ॥

---

೨೭. ಈಗಲಾದರೋ ಈತನು ನಿನ್ನಿಂದ ಶಿಕ್ಷೆಯು ಒದಗುವುದೆಂಬ ಭಯದಿಂದ ಮೊದಲಿನ ವೇಷವನ್ನು ಬದಲಾಯಿಸಿಕೊಂಡಿರುವನು. ರಥವನ್ನೂ ಶಸ್ತ್ರವನ್ನೂ ಆಭರಣವನ್ನೂ, ವಸ್ತ್ರಗಳನ್ನೂ ಬಿಟ್ಟು ಬಿಟ್ಟು ಬಂದಿರುವನು.

೨೮. ಈಗ ನಾರುಡೆಯನ್ನುಟ್ಟಿರುವನು. ಈ ನಾರುಡೆಯು ಅವನಿಗೆ ದೀನತೆಯನ್ನು ತೋರಿಸುತ್ತಿರುವುದರಿಂದ ಅವನ ರೀತಿಯು ತಿಳಿಯುವುದಿಲ್ಲವಾಗಿದೆ. ಇವನು ಬಲಿಷ್ಠನಾದ ಸಹೋದರನಿಂದ ಕೂಡಿಕೊಂಡಿರುವುದರಿಂದ ಬಹುವಾಗಿ ಕೊಬ್ಬಿರುವನು. ನೀನು ಇವನನ್ನು ಖಂಡಿತವಾಗಿಯೂ ದಂಡಿಸಬೇಕು.

೨೯. ಶ್ರೀರಾಮನು ದೂತನ ಈ ರೀತಿಯಾದ ಮಾತನ್ನು ಕೇಳುತ್ತಿದ್ದರೂ ಕೂಡ ತಾನು ಪ್ರೇಮಪೂರಿತವಾದ ಅಮೃತದ ಕಣ್ಣಿನ ನೋಟದಿಂದ ಆ ಬಾಲಕರನ್ನೇ ಆಗಾಗ್ಗೆ ನೋಡುತ್ತಿದ್ದನು.

೩೦. ಆ ಬಾಲಕರು ಆ ಸಭೆಯಲ್ಲಿ ಕುಳಿತಿದ್ದವರಿಗೆ ಕ್ರಮವರಿತು ನಮಸ್ಕರಿಸಿದರು. ಅನಂತರ ರಾಮನನ್ನೂ, ಲಕ್ಷ್ಮಣಾದಿಗಳನ್ನೂ ವಸಿಷ್ಠನನ್ನೂ ನಮಸ್ಕರಿಸಿದರು.

ಉಪಚಕ್ರಮತುರ್ಗಾತುಂ ವೀಣೇ ರಣಯುತಶ್ಶುಭೇ ।
ತತಃ ಪ್ರವೃತ್ತಂ ಮಧುರಂ ಗಾಂಧರ್ವಂ ಗೀತಮುತ್ತಮಂ ॥ ೩೧ ॥

ಶ್ರುತ್ವಾ ತನ್ಮಧುರಂ ಗೀತಂ ರಾಮಸ್ತೋಷಮವಾಪ ಹ ।
ತಾಭ್ಯಾಂ ಶ್ರುತಂ ಸ್ವಚರಿತಂ ವಿಲಾಸಾವಧ್ಯನುಕ್ರಮಾತ್ ॥ ೩೨ ॥

ಯದ್ಯದಾಚರಿತಂ ಪೂರ್ವಂ ಸೀತಯಾ ಸಹ ಸೌಖ್ಯದಂ ।
ತತೋಽಪರಾಹ್ಣೇ ಶ್ರೀರಾಮಃ ಪ್ರಸನ್ನವದನಾಂಬುಜಃ ॥ ೩೩ ॥

ಉವಾಚ ತೌ ಸಮಗ್ರಂ ವೈ ಶ್ವೋ ಗೇಯಂ ಮಮ ಸನ್ನಿಧೌ ।
ತಥೇತಿ ರಾಮವಚನಂ ತಾವಂಗೀಚಕ್ರತುಸ್ತದಾ ॥ ೩೪ ॥

---

೩೧. ಅನಂತರ ವೀಣೆಯನ್ನು ನುಡಿಸುತ್ತ ಗಾನಮಾಡುವುದಕ್ಕೆ ಮೊದಲು ಮಾಡಿದರು. ಆಗ ಮಧುರವೂ, ಉತ್ತಮೋತ್ತಮವೂ ಆದ ಗಾನಕ್ಕೆ ಮೊದಲಾಯಿತು.

೩೨. ಆ ಬಾಲಕರ ಇಂತಹ ಮಧುರವಾದ ಗಾನವನ್ನು ಕೇಳಿ ರಾಮನು ಸಂತೋಷಗೊಂಡನು. ವಿಲಾಸಕಾಂಡದವರೆಗೂ ರಾಮನು ತನ್ನ ಚರಿತ್ರೆಯನ್ನು ಕ್ರಮವಾಗಿ ಕೇಳಿದನು.

೩೩. ಸೀತೆಯೊಡನೆ ಸೌಖ್ಯವನ್ನು ಅನುಭವಿಸುತ್ತ ತಾನು ಮಾಡಿದ ಕ್ರೀಡೆಗಳೆಲ್ಲವನ್ನೂ ಕೇಳಿದನು. ಇದರಿಂದ ರಾಮನಿಗೆ ಬಹು ಸಂತೋಷವಾಯಿತು. ಅಷ್ಟುಹೊತ್ತಿಗೆ ಅಪರಾಹ್ಣದ ಸಮಯವೂ ಆಯಿತು.

೩೪. ಆಗ ರಾಮನು ಆ ಬಾಲಕರನ್ನು ಕುರಿತು ಎಲೈ ಬಾಲಕರಿರಾ! ಈದಿನ ಹೊತ್ತಾಯಿತು. ನಾಳೆಯದಿನ ನನ್ನಬಳಿ ಪೂರ್ಣವಾಗಿ ಇದನ್ನೆಲ್ಲಾ ಗಾನಮಾಡುವಿರಂತೆ ಎಂದನು. ಅವರು ಹಾಗೆಯೇ ಆಗಲೆಂದು ರಾಮನ ಮಾತನ್ನು ಅಂಗೀಕರಿಸಿದರು.

ತತೋ ರಾಮೋ ಲವಂ ಪ್ರಾಹ ಮೇ ಯದ್ಯಪ್ಯಪರಾಧಿತಂ ।
ತ್ವಯಾ ಪೂರ್ವಂ ತಥಾಪಿ ತ್ವಾಂ ತುಷ್ಟೋಽಹಂ ನಾತ್ರ ಶಿಕ್ಷಯೇ ॥ ೩೫ ॥

ತ್ವದ್ಗೀತಮುಚ್ಚರಿತ್ರಾದಿಶ್ರವಣಾದದ್ಯ ಮೇ ಮನಃ ।
ಪರಾಂ ವಿಶ್ರಾಂತಿಮಾಪನ್ನಂ ತ್ವತ್ಕೃತಂ ಕ್ಷಮಿತಂ ಮಯಾ ॥ ೩೬ ॥

ಅಧುನಾ ಮದ್ಭಯಂ ತ್ಯಕ್ತ್ವಾ ತ್ವಂ ಸುಖಂ ವಿಚರಾತ್ರ ಹಿ ।
ತದ್ರಾಮುವಚನಂ ಶ್ರುತ್ವಾ ಲವೋ ರಾಘವಮಬ್ರವೀತ್ ॥ ೩೭ ॥

ಮಯಾಪರಾಧಿತಂ ರಾಜಂಸ್ತವ ದರ್ಶನಕಾಮ್ಯಯಾ ।
ಮಯಾಪರಾಧಿತಂ ಸ್ಮೃತ್ವಾಽತ್ರಾಹೂತೋಽಹಂ ಯತಸ್ತ್ವಯಾ ॥ ೩೮ ॥

---

೩೫. ಆಗ ರಾಮನು ಲವನನ್ನು ಕುರಿತು, ಎಲೈ ಲವನೇ ! ನೀನು ಮೊದಲು ನನ್ನ ವಿಷಯದಲ್ಲಿ ತಪ್ಪುಮಾಡಿದ್ದೀಯೆ. ಆದರೂ ಕೂಡ ನಿನ್ನ ವಿಷಯದಲ್ಲಿ ನನಗೆ ಬಹು ಸಂತೋಷವಾಗಿರುವುದರಿಂದ ನಾನು ಈಗ ನಿನ್ನನ್ನು ಶಿಕ್ಷಿಸುವುದಿಲ್ಲ.

೩೬. ನೀನು ಹಾಡಿದ ನನ್ನ ಚರಿತ್ರೆಯನ್ನು ಕೇಳಿದಾಗಿನಿಂದ ನನ್ನ ಮನಸ್ಸು ಬಹುವಾಗಿ ಸಮಾಧಾನ ಹೊಂದಿ ಶಾಂತಿಯನ್ನು ಪಡೆಯಿತು. ಆದ್ದರಿಂದ ನೀನು ಮಾಡಿದ ತಪ್ಪನ್ನು ಈಗ ನಾನು ಕ್ಷಮಿಸಿರುವೆನು.

೩೭. ಈಗ ನನ್ನಿಂದ ನಿನಗೆ ಶಿಕ್ಷೆಯೊದಗುವುದೆಂಬ ಭಯವನ್ನು ಬಿಟ್ಟು ಸುಖವಾಗಿ ಇಲ್ಲಿ ತಿರುಗುತ್ತಿರು. ಎಂದನು. ಈ ಮಾತನ್ನು ಲವನು ಕೇಳಿ ರಾಮನನ್ನು ಕುರಿತು ಇಂತೆಂದನು.

೩೮. ಎಲೈ ರಾಘವನೇ ! ನಿನ್ನ ದರ್ಶನವನ್ನು ಮಾಡಬೇಕೆಂಬ ಇಚ್ಛೆಯಿಂದ ನಾನು ನಿನಗೆ ಅಪರಾಧಮಾಡಿದೆನು. ನಾನು ತಪ್ಪನ್ನು ಮಾಡಿದರೂ ಅದನ್ನು ಮರೆತು ನನ್ನನ್ನು ಇಲ್ಲಿಗೆ ಕರೆಸಿದ್ದೀಯೆ.

ಅದ್ಯ ತೇ ದರ್ಶನೇನೈವ ಪೌರುಷಂ ವೃದ್ಧಿಮಾಗತಂ |
ಕೀರ್ತಿರ್ನೋ ಮಹತೀ ಜಾತಾ ತವಾಗ್ರೇ ಗಾಯನಾದಪಿ || ೩೯ ||

ಇತ್ಯುಕ್ತ್ವಾಸೀಲ್ಲವಸ್ತೂಷ್ಣೀಂ ಬಂಧುನಾ ಗಂತುಮುದ್ಯತಃ |
ಸಭಾಯಾಸ್ತೌ ಗಂತುಕಾಮೌ ಸ್ಥಲಂ ಸ್ವೀಯಂ ನಿರೀಕ್ಷ್ಯ ಚ || ೪೦ ||

ರಾಮೋಽಯುತಂ ವಸು ತಯೋರ್ಭರತೇನ ಪ್ರದಾಪತ್ |
ದೀಯಮಾನಂ ಸುವರ್ಣಂ ತೌ ನ ತಜ್ಜಗೃಹತುಸ್ತದಾ || ೪೧ ||

ರಾಜನ್ ಹೇಮ್ನಾ ಕಿಮತೇನ ಹ್ಯಾವಾಂ ವೈ ವನ್ಯಭೋಜಿನೌ |
ಕೃಪಾವಲೋಕನೇನೈವ ಪಾಹಿ ತ್ವಮಾವಯೋಸ್ಸದಾ || ೪೨ ||

---

೩೯. ಈಗ ನನಗೆ ನಿನ್ನ ದರ್ಶನವಾದುದರಿಂದಲೇ ನನ್ನ ಪೌರುಷವು ವೃದ್ಧಿಗೊಂಡಿತು. ಅದಲ್ಲದೆ ನಿನ್ನೆದುರಿಗೆ ಗಾನಮಾಡಿದುದರಿಂದ ನನ್ನ ಕೀರ್ತಿಯು ಬಹುವಾಗಿ ಹೆಚ್ಚಿತು.

೪೦. ಲವನು ಹೀಗೆಂದು ಹೇಳಿ ಸುಮ್ಮನಾಗಿ ತಮ್ಮನೊಡನೆ ತನ್ನ ಬಿಡಾರಕ್ಕೆ ಹೋಗಲು ಪ್ರಯತ್ನಪಟ್ಟು ತನ್ನವರನ್ನು ನೋಡಿದನು. ಈ ರೀತಿಯಾಗಿ ಸಭೆಯಿಂದ ಎದ್ದು ಹೋಗಲು ಉದ್ಯುಕ್ತರಾದ ಲವಕುಶರನ್ನು ರಾಮನುನೋಡಿದನು.

೪೧. ಆಗ ಈ ರಾಮನು ಹತ್ತುಸಾವಿರ ಹೊನ್ನುಗಳನ್ನು ಭರತನ ಕೈಯ್ಯಲ್ಲಿ ಕೊಟ್ಟು ಅವರ ಹತ್ತಿರಕ್ಕೆ ಕಳುಹಿಸಿದನು. ಆ ಭರತನು ಹಣವನ್ನು ತಂದುಕೊಡಲು ಅದನ್ನು ಆ ಬಾಲಕರು ನಿರಾಕರಿಸುತ್ತ ತೆಗೆದುಕೊಳ್ಳಲಿಲ್ಲ.

೪೨. ಎಲೈ ರಾಜನೇ! ಈ ಸುವರ್ಣದಿಂದ ನಮಗೆ ಏನು ಪ್ರಯೋಜನ? ನಾವು ಕಾಡಿನಲ್ಲಿರುವ ಗೆಡ್ಡೆಗೆಣಸುಗಳನ್ನು ತಿನ್ನತಕ್ಕವರು. ನಮಗೆ ಬೇಡ. ನೀನು ನಿನ್ನ ಕೃಪಾವಲೋಕನದಿಂದ ನಮ್ಮನ್ನು ಯಾವಾಗಲೂ ಕಾಪಾಡುತ್ತಿರು.

ಇತಿ ಸಂತ್ಯಜ್ಯ ಸಂದತ್ತಂ ಜಗ್ಮತುರ್ಮುನಿಸನ್ನಿಧಿಂ ।
ಆಸೀಚ್ಛ್ರುತ್ವಾ ಸ್ವಚರಿತಂ ರಾಮೋ ಹೃದ್ಯತಿವಿಸ್ಮಿತಃ ॥ ೪೩ ॥

ಕುಶೋಽಪಿ ಸಕಲಂ ವೃತ್ತಂ ವಾಲ್ಮೀಕಿಂ ಮಾತರಂ ತಥಾ ।
ನಿವೇದ್ಯ ಜಾಹ್ನವೀಂ ಸ್ನಾತುಂ ಕೌತುಕೇನ ಯಯೌ ಸುಖಂ ॥ ೪೪ ॥

ಲವೋ ಮುನೀನಾಂ ಶಿಶುಭಿಶ್ಶಿಶುಕ್ರೀಡನಮಾಚರತ್ ।
ಏತಸ್ಮಿನ್ನಂತರೇ ಯತ್ರ ಲವಃ ಕ್ರೀಡಾಂ ಚಕಾರ ಸಃ ॥ ೪೫ ॥

ಬಾಲಕೈಸ್ತತ್ರ ಸಂಪ್ರಾಪ್ತಸ್ತುರಗೋಧ್ವರಕಾರಿಣಃ ।
ತ್ಯಕ್ತ್ವಾ ಕ್ರೀಡಾಂ ಲವಶ್ಶೀಘ್ರಮಶ್ವಂ ಧೃತ್ವೋಟಜಾಂತಿಕೇ ॥ ೪೬ ॥

---

೪೩. ಈ ರೀತಿಯಾಗಿ ಅವನು ಕೊಟ್ಟ ಹಣವನ್ನು ತೆಗೆದುಕೊಳ್ಳದೆ ಲವಕುಶರು ಮುನಿಯ ಬಳಿಗೆ ಹೊರಟು ಹೋದರು. ರಾಮನು ತನ್ನ ಚರಿತ್ರೆಯನ್ನು ಕೇಳಿ ಮನಸ್ಸಿನಲ್ಲಿ ಬಹುವಾಗಿ ಆಶ್ಚರ್ಯಗೊಂಡನು.

೪೪. ಕುಶನು ಇಲ್ಲಿ ನಡೆದ ವಿಷಯವನ್ನು ತಾಯಿಗೂ, ವಾಲ್ಮೀಕಿಗೂ ತಿಳಿಸಿ ಸ್ನಾನಕ್ಕೋಸ್ಕರ ಜಾಹ್ನವಿನದಿಗೆ ಋಷಿಪುತ್ರರೊಡನೆ ಹೊರಟುಹೋದನು.

೪೫. ಇತ್ತ ಲವನು ಮುನಿಪುತ್ರರೊಡನೆ ಆಟವಾಡುತ್ತಿದ್ದನು. ಇಷ್ಟರೊಳಗೆ ರಾಮನ ಯಾಗದ ಕುದುರೆಯು ದೇಶವನ್ನು ಸುತ್ತುತ್ತ ಲವನು ಬಾಲಕರೊಡನೆ ಆಟವಾಡುತ್ತಿದ್ದ ಆ ಜಾಗಕ್ಕೆ ಬಂದಿತು.

೪೬. ಲವನು ಆ ಕುದುರೆಯನ್ನು ನೋಡಿ ಒಡನೆಯೇ ಆಟವನ್ನು ಬಿಟ್ಟು ಆ ಯಾಗದ ಕುದುರೆಯನ್ನು ಹಿಡಿದು ತಮ್ಮ ಪರ್ಣಶಾಲೆಯ ಬಳಿಯಲ್ಲಿರುವ ಒಂದು ಮರಕ್ಕೆ ಕಟ್ಟಿಹಾಕಿದನು.

ವೃಕ್ಷೇ ಬಂಬಧ ಶಿಶುಭಿಃ ಪೂರ್ವವತ್ಕ್ರೀಡನಂ ವ್ಯಧಾತ್ ।
ತತಃ ಖೇ ಪುಷ್ಪಕಂ ಪ್ರಾಪ್ತಂ ದೃಷ್ಟ್ವಾ ಬದ್ಧಂ ತುರಂಗಮಂ ॥ ೪೭ ॥

ಜ್ಞಾತ್ವಾ ಬಾಲಕೃತಂ ಸರ್ವೇ ಶತ್ರುಘ್ನಾದ್ಯಾ ವಿಹಸ್ಯ ತೇ ।
ದೂತಾನಾಜ್ಞಾಪಯಮಾಸುರ್ಮುಚ್ಯತಾಂ ತುರಗಸ್ಸುಖಂ ॥ ೪೮ ॥

ಲವಸ್ತಾನಾಗತಾನ್ ದೃಷ್ಟ್ವಾ ವಾಯುವ್ಯಾಸ್ತ್ರೇಣ ವೈ ತೃಣಂ ।
ಸಂಮಂತ್ರ್ಯ ತಾನ್ಮುಮೋಚಾಥ ಲೀಲಯಾ ಶಿಶುಸಂಯುತಃ ॥ ೪೯ ॥

ಜಂಗ್ಮಾವಾತ್ಯೈಸ್ತದಾ ಯಾನಂ ಹಸ್ತ್ಯಶ್ವರಥಪೂರಿತಂ ।
ಶತ್ರುಘ್ನೇನಾಪಿ ತೈರ್ದೂತೈಃ ಖೇಽಭೂತ್ತದ್ಭ್ರಮರೋಪಮಂ ॥ ೫೦ ॥

---

೪೭. ಅಲ್ಲದೆ ಮತ್ತೆ ಆಟಕ್ಕೆ ಹೊರಟು ಹೋದನು. ಅನಂತರ ಆ ಕುದುರೆಯನ್ನು ಕಾಯುತ್ತಿದ್ದವರ ಪುಷ್ಪಕವು ಅಂತರಿಕ್ಷದಲ್ಲಿ ಬಂದು ಕುದುರೆಯನ್ನು ಕಂಡಿತು.

೪೮. ಮಗುವಾದ ಲವನು ಈ ಕುದುರೆಯನ್ನು ಹಿಡಿದುಕಟ್ಟಿರುವುದನ್ನು ನೋಡಿ ಶತ್ರುಘ್ನನೇ ಮುಂತಾದವರು ಆತನ ಬಾಲಭಾವಕ್ಕೆ ನಕ್ಕು ತಮ್ಮ ದೂತರನ್ನು ಕರೆದು ಆ ಕುದುರೆಯನ್ನು ಬಿಚ್ಚಿಬಿಟ್ಟು ಬಿಡುವಂತೆ ಹೇಳಿದರು

೪೯. ಆ ಸೇವಕರು ಕುದುರೆಯ ಬಳಿಗೆ ಬಂದುದನ್ನು ಲವನು ನೋಡಿ ಅಲ್ಲಿದ್ದ ಒಂದು ಹುಲ್ಲಿನಕಡ್ಡಿಯನ್ನು ತೆಗೆದುಕೊಂಡು ಅದನ್ನು ವಾಯುವ್ಯಾಸ್ತ್ರದಿಂದ ಅಭಿಮಂತ್ರಿಸಿ ಆ ಮುನಿಪುತ್ರರೆದುರಿಗೇನೇ ಆಳುಗಳಮೇಲೆ ಬಿಟ್ಟನು.

೫೦. ಆನೆ, ಕುದುರೆ, ರಥಗಳಿಂದಲೂ, ಶತ್ರುಘ್ನನಿಂದಲೂ ಕೂಡಿಕೊಂಡಿರುವ ಆ ಪುಷ್ಪಕವು ಲವನು ಬಿಟ್ಟ ಈ ವಾಯುವ್ಯಾಸ್ತ್ರದಿಂದುಂಟಾದ ಮಳೆಯೊಡನೆ ಕೂಡಿದ ಬಿರುಗಾಳಿಯಿಂದ ಅಂತರಿಕ್ಷದಲ್ಲಿಯೇ ದುಂಬಿಯಂತೆ ಗಿರ್ರನೆ ಸುತ್ತಲು ಮೊದಲು ಮಾಡಿತು.

ತಚ್ಛ್ರುತ್ವಾ ರಾಮಚಂದ್ರೋऽಪಿ ಪ್ರೇಷಯಾಮಾಸ ಸಾದರಂ ।
ಸುಗ್ರೀವಮಂಗದಂ ನೀಲಂ ಮೈಂದಂ ಜಾಂಬವತಂ ನಲಂ ॥ ೩೧ ॥

ಸುಮಂತ್ರಂ ಭರತಂ ವಾಯುಪುತ್ರಂ ತಾರ್ಕ್ಷ್ಯಂ ವಿಭೀಷಣಂ ।
ಸುಷೇಣಂ ಪಾರ್ಥಿವಾನ್ ಸರ್ವಾನ್ ಸ್ವಸ್ವಾಮಿತಬಲೈರ್ಯುತಾನ್ ॥ ೩೨ ॥

ದ್ವಿವಿದಂ ದಧಿವಕ್ತ್ರಂ ಚ ವಾನರಾನ್ಮಕರಧ್ವಜಂ ।
ತೇ ಲವಂ ದುದ್ರುವುರ್ಗರ್ವಾದ್ಯುದ್ಧಂ ಚಕ್ರುಸ್ತ್ವರಾನ್ವಿತಾಃ ॥ ೩೩ ॥

ತಾನಾಗತಾನ್ ಲವೋ ದೃಷ್ಟ್ವಾ ಕಸ್ಯ ಚಿತ್ಪತಿತಂ ಭುವಿ ।
ದೂತಸ್ಯಾಶ್ವಮೋಚನಾರ್ಥಮಾಗತಸ್ಯ ಶರಾಸಂ ॥ ೩೪ ॥

ತೂಣೀರಂ ಚ ಸ್ವಯಂ ಧೃತ್ವಾ ಯಯೌ ಯೋದ್ಧುಂ ತ್ವರಾನ್ವಿತಃ ।
ಶಣತ್ಕೃತ್ಯ ಮಹಚ್ಚಾಪಂ ಚಿಂತಯಾಮಾಸ ಚೇತಸಿ ॥ ೩೫ ॥

೩೧–೩೩. ರಾಮಚಂದ್ರನು ಲವನು ಕುದುರೆಕಟ್ಟಿದುದನ್ನೂ ಶತ್ರುಘ್ನಾದಿಗಳಿಗೆ ತೊಂದರೆಬಂದುದನ್ನೂ ಕೇಳಿ ಸುಗ್ರೀವ, ಅಂಗದ, ನೀಲ, ಮೈಂದ, ಜಾಂಬವಂತ, ನಲ, ಸುಮಂತ್ರ, ಭರತ, ಹನುಮಂತ, ಗರುಡ, ವಿಭೀಷಣ, ಸುಷೇಣ, ಅನೇಕಜನ ರಾಜರು ತನ್ನ ಬಹುವಾದ ಸೈನ್ಯ, ದ್ವಿವಿದ, ದಧಿವಕ್ತ್ರ ಅನೇಕ ಶಕ್ತರಾದ ಕಪಿಗಳು, ಮಕರಧ್ವಜ ಇವರನ್ನೂ ಕಳುಹಿಸಿದನು. ಇವರೆಲ್ಲರೂ ಗರ್ವದಿಂದ ಬಂದವರಾಗಿ ಬಹುವಾಗಿ ಅವಸರಪಡುತ್ತ ಆ ಲವನ ಮೇಲೆ ಯುದ್ಧಕ್ಕೆ ಹೋದರು.

೩೪. ಅವರೆಲ್ಲರೂ ಬಂದು ಯುದ್ಧಕ್ಕೆ ಮೇಲೆ ಬೀಳಲು ಅವರಲ್ಲಿ ಒಬ್ಬ ದೂತನು ಕುದುರೆಯನ್ನು ಬಿಚ್ಚಿ ಬಿಡಲು ಹೋಗಿ ಬಾಣ ಬತ್ತಳಿಕೆಗಳನ್ನು ಕೆಳಗೆ ಇಟ್ಟನು. ಆಗ ಲವನು ಅವನ ಬಾಣಬತ್ತಳಿಕೆಗಳನ್ನು ತೆಗೆದುಕೊಂಡನು.

೩೫. ಅವೆಲ್ಲವನ್ನೂ ಸರಿಪಡಿಸಿಕೊಂಡು ಧರಿಸಿಕೊಂಡು ಯುದ್ಧಕ್ಕೆ ಜಾಗ್ರತೆಯಾಗಿ ಆ ಲವನು ಹೊರಟನು. ಆಗ ತನ್ನ ಚಾಪವನ್ನು ಠಣ್ ಎಂದು ಸದ್ದುಮಾಡುತ್ತ ಇವರನ್ನು ಯಾವರೀತಿಯಲ್ಲಿ ಸೋಲಿಸಬೇಕೆಂದು ತನ್ನ ಮನಸ್ಸಿನಲ್ಲಿಯೇ ಯೋಚಿಸಿದನು

ಪಿತೃವ್ಯಾದ್ಯಾಃ ಸ್ಥಿತಾ ಯೋದ್ಧುಂ ಮಯಾದ್ಯ ಪುರತಸ್ತ್ವಿಹ ।
ಕಥಮೇಭಿಶ್ಚ ಯೋದ್ಧವ್ಯಂ ಮಯಾ ಚ ಸಮರಾಂಗಣೇ ॥ ೫೬ ॥

ಕಥಂ ತೀಕ್ಷ್ಣಾನದ್ಯಶರಾನೇತೇಷು ಪ್ರಕ್ಷಿಪಾಮ್ಯಹಂ ।
ಸ್ವೀಯಾನಾಂ ವಧಕರ್ತಾರಂ ಮಾಂ ಸೀತಾ ಮುನಿರಾಘವಾಃ ॥ ೫೭ ॥

ಸಹಿಷ್ಯಂತಿ ಕಥಂ ದೃಷ್ಟ್ವಾ ಕರ್ತವ್ಯಂ ಕಿಂ ಮಯಾಧುನಾ ।
ಯುದ್ಧಾತ್ಪರಾಙ್ಮುಖೋಽಹಂ ಚೇದ್ಭೂತ್ವಾ ಗಚ್ಛಾಮಿ ತಂ ಮುನಿಂ॥ ೫೮ ॥

ವಾಲ್ಮೀಕಿಶಿಕ್ಷಿತಾ ವಿದ್ಯಾ ತರ್ಹಿ ಸಾ ವಿಫಲಾ ಭವೇತ್ ।
ಅತಃ ಕೇಷಾಮಪಿ ವಧಂ ವಿನಾ ಯುದ್ಧಂ ಕರೋಮ್ಯಹಂ ॥ ೫೯ ॥

---

೫೬. ಅನೇಕಜನ ವೀರರೂ ಇರುವುದಲ್ಲದೆ ನನ್ನ ಚಿಕ್ಕಪ್ಪಂದಿರೇ ಇಲ್ಲಿ ನನ್ನ ಎದುರಿಗೆ ಯುದ್ಧಕ್ಕೋಸ್ಕರ ನಿಂತಿರುವರು ಇವರೊಡನೆ ನಾನು ಈಗ ಯುದ್ಧರಂಗದಲ್ಲಿ ಹೇಗೆತಾನೇ ಯುದ್ಧಮಾಡಲಿ?

೫೭. ನಾನು ನನ್ನ ಕ್ರೂರವಾದ ಬಾಣಗಳನ್ನು ಹೇಗೆ ತಾನೆ ಇವರ ಮೇಲೆ ಬಿಡಲಿ? ನಮ್ಮವರನ್ನೇ ನಾನು ಕೊಲ್ಲಬೇಕಾಗುವುದು. ನಮ್ಮವರನ್ನೇ ನಾನು ಕೊಂದರೆ ಆಗ ಸೀತೆ, ವಾಲ್ಮೀಕಿ, ರಾಮರು ನನ್ನನ್ನು ನೋಡಿ ಹೇಗೆತಾನೇ ಸಹಿಸಿಯಾರು?

೫೮–೫೯. ಆದ್ದರಿಂದ ಈಗ ನಾನು ಮಾಡತಕ್ಕದ್ದೇನು? ನಮ್ಮವರು ಯುದ್ಧದಲ್ಲಿ ಸಾಯುವರಲ್ಲ! ಆದ್ದರಿಂದ ಯುದ್ಧವೇ ಬೇಡ. ಎಂದು ನಾನು ಹಿಂತಿರುಗಿ ಹೊರಟುಹೋದರೆ ಆಗ ವಾಲ್ಮೀಕಿಯು ಉಪದೇಶಿಸಿದ ಈ ವಿದ್ಯೆಯು ಸಾರ್ಥಕವಿಲ್ಲದೆ ಹೋಗುವುದು. ಆದ್ದರಿಂದ ಒಬ್ಬರಿಗೂ ಪ್ರಾಣಹೋಗದ ರೀತಿಯಲ್ಲಿ ನಾನು ಯುದ್ಧವನ್ನು ಮಾಡುತ್ತೇನೆ.

ಇತಿ ನಿಶ್ಚಿತ್ಯ ಮನಸಿ ಮೇಘಶಬ್ದವದಾಹ ತಾನ್ ।
ಆಗಮ್ಯತೇ ಕಿಮರ್ಥಂ ಮಾಂ ಯುಷ್ಮಾಭಿಃ ಬ್ರೂತ ವೇಗತಃ ॥ ೬೦ ॥

ಯೂಯಂ ಸೀತಾವತ್ಸಲಂ ಮಾಂ ಪೀಡನಾರ್ಥಮಿಹಾಗತಾಃ ।
ಸೀತಾಕ್ಲೇಶಾನಲಹರಂ ಮಾಮದ್ಯ ವೇತ್ಥ ಭೋ ಖಲಾಃ ॥ ೬೧ ॥

ಸೀತೋಷ್ಣೋಚ್ಛ್ವಸಿತೋಗ್ರಾಗ್ನಿಜ್ವಾಲಾಭಿರ್ವೋದ್ಯ ಪೌರುಷಂ ।
ವಿದಗ್ಧಂ ನ ಸ್ಫುಟಂ ಲೋಕಾನ್ದರ್ಶನೀಯಂ ಮಮಾಪಿ ಚ ॥ ೬೨ ॥

ಇತಿ ಸ್ವವಾಕ್ಯೈರ್ಭಿನ್ನಹೃದಯಾನ್ ಸ ಲವಃ ಪುನಃ ।
ಮೋಹಯಾಮಾಸ ಸಕಲಾನ್ ಮೋಹನಾಸ್ತ್ರಂ ವಿಸೃಜ್ಯ ಚ ॥ ೬೩ ॥

---

೬೦. ಅವನು ಈರೀತಿಯಾಗಿ ಮನಸ್ಸಿನಲ್ಲಿ ಯೋಚಿಸಿ ನಿಶ್ಚಯಿಸಿಕೊಂಡು ತನ್ನ ಮೇಲೆ ಯುದ್ಧಕ್ಕೆ ಬಂದವರನ್ನು ಕುರಿತು ಗುಡುಗಿನಂತೆ ಗಟ್ಟಿಯಾಗಿ ಕೂಗುತ್ತ ಎಲೈ ಯೋಧರಿರಾ! ನನ್ನ ಮೇಲೆ ನೀವೇತಕ್ಕೆ ಯುದಕ್ಕೆ ಬರುತ್ತಿದ್ದೀರಿ? ನನ್ನಿಂದ ಆಗಬೇಕಾದುದೇನು? ಎಂಬುದನ್ನು ಬೇಗನೆ ಹೇಳಿರಿ.

೬೧. ಸೀತೆಗೆ ಪ್ರೀತಿಪಾತ್ರನಾದ ನನ್ನನ್ನು ಪೀಡಿಸಲು ಇಲ್ಲಿಗೆ ಬಂದಿರುವಿರಾ! ಎಲೈ ದುಷ್ಟರಿರಾ! ಸೀತೆಗೆ ಬಂದಿರುವ ಕ್ಲೇಶವೆಂಬ ಕಾಳ್ಗಿಚ್ಚನ್ನು ನಾಶಮಾಡತಕ್ಕವನನ್ನಾಗಿ ನನ್ನನ್ನು ತಿಳಿಯಿರಿ.

೬೨. ಎಲೈ ದುಷ್ಟರಿರಾ! ಕಷ್ಟಪಡುತ್ತಿರುವ ಆ ಸೀತೆಯ ಉಷ್ಣವಾದ ನಿಟ್ಟುಸಿರಿನ ಬೆಂಕಿಯ ಜ್ವಾಲೆಯಿಂದಲೇ ನಿಮ್ಮ ಪೌರುಷವು ಸುಟ್ಟುಹೋಗಿದೆ. ಅದನ್ನು ನಾನು ಲೋಕಕ್ಕೆಲ್ಲಾ ಚೆನ್ನಾಗಿ ತೋರಿಸುತ್ತೇನೆ. ಅಲ್ಲದೆ ನನ್ನ ಪೌರುಷವನ್ನೂ ತೋರಿಸುತ್ತೇನೆ. ಎಂದನು.

೬೩. ಲವನ ಈ ಮಾತೆಂಬ ಬಾಣದಿಂದಲೇ ಆ ಯೋಧರ ಹೃದಯವೆಲ್ಲವೂ ಸೀಳಿಹೋಯಿತು. ಅನಂತರ ಮೋಹನಾಸ್ತ್ರವನ್ನು ಬಿಟ್ಟು ಅವರಿಗೆಲ್ಲಾ ಸ್ಮೃತಿತಪ್ಪುವಂತೆ ಮಾಡಿದನು.

ತತೋ ಲವಸ್ಸ ವಿಜಯೀ ಸುಮಂತ್ರಂ ಭರತಂ ತಥಾ ।
ದೃಷ್ಟ್ವಾ ಸ್ವಕಕ್ಷಯೋಶ್ಶೀಘ್ರಂ ಕರಾಭ್ಯಾಂ ವಾಯುನಂದನಂ ॥ ೬೪ ॥

ಸುಗ್ರೀವಂ ಚ ಮುದಾ ಧೃತ್ವಾ ಸೀತಾಯೈ ತಾನ್ ಪ್ರದರ್ಶಯತ್ ।
ದೃಷ್ಟ್ವಾ ಸೀತಾಪಿ ತಾನ್ ವೀರಾನ್ ಮೋಹನಾಸ್ತ್ರೇಣ ಮೋಹಿತಾನ್ ॥ ೬೫ ॥

ಪುತ್ರಾತ್ತಾನ್ಮೋಚಯಾಮಾಸ ರಕ್ಷಯಾಮಾಸ ತಾನ್ರಹಃ ।
ತಾನ್ನೀತಾನ್ರಾಘವಃ ಶ್ರುತ್ವಾ ಲಕ್ಷ್ಮಣಂ ವಾಕ್ಯಮಬ್ರವೀತ್ ॥ ೬೬ ॥

ಈದೃಶಂ ಪೌರುಷಂ ಬಂಧೋ ರಾವಣೇನಾಪಿ ನೋ ಕೃತಂ ।
ಯಥಾ ಕೃತಂ ಬಾಲಕೇನ ಕರಣೀಯಂ ಕಿಮತ್ರ ವೈ ॥ ೬೭ ॥

೬೪–೬೫. ಇದರಿಂದ ಅವರೆಲ್ಲರೂ ಜ್ಞಾನತಪ್ಪಿ ಬೀಳಲು ವಿಜಯವನ್ನು ಹೊಂದಿದ ಲವನು ಸುಮಂತ್ರನನ್ನೂ, ಭರತನನ್ನೂ ನೋಡಿ ಅವರಿಬ್ಬರನ್ನೂ ತನ್ನ ಕಂಕುಳಲ್ಲಿ ಇರುಕಿಕೊಂಡನು. ಅನಂತರ ಹನುಮಂತನನ್ನೂ, ಸುಗ್ರೀವನನ್ನೂ ಕೈಯ್ಯಲ್ಲಿ ಹಿಡಿದುಕೊಂಡನು. ಅವರನ್ನು ತೆಗೆದುಕೊಂಡು ಹೋಗಿ ಸೀತೆಗೆ ತೋರಿಸಿದನು. ಸೀತೆಯೂ ಕೂಡ ಮೋಹನಾಸ್ತ್ರದಿಂದ ಮೋಹಗೊಂಡಿರುವ ಅವರನ್ನು ನೋಡಿದಳು.

೬೬. ಆಗ ಮಗನಿಗೆ ಅವರನ್ನು ಬಿಟ್ಟು ಬಿಡುವಂತೆ ಹೇಳಿ ಬಿಡಿಸಿದಳು. ಇದರಿಂದ ಅವರನ್ನು ರಕ್ಷಿಸಿದಳು. ಇತ್ತ ಅವರನ್ನು ಲವನು ಹೊತ್ತುಕೊಂಡು ಹೋದುದನ್ನು ಕೇಳಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು.

೬೭. ಎಲೈ ತಮ್ಮನಾದ ಲಕ್ಷ್ಮಣನೇ! ಈ ರೀತಿಯಾದ ಸಾಹಸ ಕೆಲಸವನ್ನು ರಾವಣನೂ ಕೂಡ ತೋರಿಸಲಿಲ್ಲ. ಅಂತಹ ಸಾಹಸವನ್ನು ಈ ಬಾಲಕನು ಮಾಡಿರುವನು. ಆದುದರಿಂದ ನಾವು ಈಗ ಮಾಡಬೇಕಾದುದೇನು? ಎಂದನು.

ತದ್ರಾಮವಚನಂ ಶ್ರುತ್ವಾ ಲಕ್ಷ್ಮಣಃ ಪ್ರಾಹ ರಾಘವಂ ।
ಮಾ ಚಿಂತೇಯಂ ತ್ವಯಾ ಕಾರ್ಯಾ ಧೃತ್ವಾಹಂ ತಂ ಶಿಶುಂ ಕ್ಷಣಾತ್ ॥

ತ್ವತ್ಸನ್ನಿಧಾವಾನಯಾಮಿ ಸಿಂಹೋ ಮೃಗಶಿಶುಂ ಯಥಾ ।
ಇತ್ಯುಕ್ತ್ವಾ ರಾಘವಂ ನತ್ವಾ ರಥಾರೂಢೋ ಯಯೌ ಜವಾತ್ ॥ ೬೯ ॥

ಸೇನಯಾ ಸಚಿವೈರ್ಯುಕ್ತೋ ವಾಲ್ಮೀಕೇರ್ವಸತಿಸ್ಥಲಂ ।
ತಮಾಗತಂ ವಿಬುದ್ಧ್ಯಾಥ ಲವೋಽಪಿ ತತ್ಪುರೋ ಯಯೌ ॥ ೭೦ ॥

ತಂ ದೃಷ್ಟ್ವಾ ಬಾಲಕಂ ರಮ್ಯಂ ಕೃಪಯಾ ಲಕ್ಷ್ಮಣೋಽಬ್ರವೀತ್ ।
ಮಾ ಶಿಶೋ ತ್ವಂ ಕುರುಷ್ವಾದ್ಯ ಸಾಹಸಂ ಮತ್ಪುರಸ್ತ್ವಿಹ ॥ ೭೧ ॥

೬೮–೬೯. ರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ರಾಮನನ್ನು ಕುರಿತು ಎಲೈ ರಾಮನೇ! ನೀನು ಚಿಂತಿಸಬೇಡ. ಕ್ಷಣಕಾಲದಲ್ಲಿ ಆ ಬಾಲಕನನ್ನು ಹಿಡಿದುಕೊಂಡು ನಿನ್ನ ಬಳಿಗೆ ಸಿಂಹವು ಹುಲ್ಲೆಯನ್ನು ಹಿಡಿದು ತರುವಂತೆ ತರುತ್ತೇನೆ. ಎಂದು ಹೇಳಿ ರಾಮನಿಗೆ ನಮಸ್ಕರಿಸಿ ರಥವನ್ನು ಏರಿ ಕ್ಷಣ ಕಾಲದಲ್ಲಿಯೇ ಬೇಗನೇ ರಣರಂಗಕ್ಕೆ ಹೊರಟುಹೋದನು.

೭೦. ಅವನ ಜೊತೆಯಲ್ಲಿ ಸೇನೆಯೂ, ಸಚಿವರೂ, ಹೊರಟರು. ಲಕ್ಷ್ಮಣನು ಆ ಭಟರೊಡನೆ ಆ ವಾಲ್ಮೀಕಿಯ ಆಶ್ರಮಕ್ಕೆ ಹೋದನು. ಆ ಲಕ್ಷ್ಮಣನು ಸೇನೆಯೊಡನೆ ಬಂದುದನ್ನು ನೋಡಿ ಲವನು ಅವನೆದುರಿಗೆ ಯುದ್ಧಕ್ಕೆ ಸಿದ್ಧನಾಗಿ ಹೋದನು.

೭೧–೭೨. ಸುಂದರನೂ ಸುಕುಮಾರನೂ ಆಗಿರುವ ಆ ಬಾಲಕನನ್ನು ನೋಡಿ ಲಕ್ಷ್ಮಣನು ಇಂತೆಂದನು. ಎಲೈ ಬಾಲಕನೇ! ನನ್ನೆದುರಿಗೆ ಸಾಹಸ ಕಾರ್ಯವನ್ನು ಮಾಡಬೇಡ. ನನ್ನೆದುರಿಗೆ ಯುದ್ಧಕ್ಕೆ ನಿಲ್ಲಲು ನಿನಗೆ ಸಾಮರ್ಥ್ಯವಿಲ್ಲ.

ನ ಸಮರ್ಥೋಽಸಿ ವೈ ಸ್ಥಾತುಂ ಗಚ್ಛ ನೋ ಚೇನ್ಮರಿಷ್ಯಸಿ ।
ಶೇಷಂ ರಾಮಾಯಣಂ ಶ್ರೋತುಂ ತ್ವತ್ತೋಽಹಂ ತ್ವಾಂ ನಿಹನ್ಮಿ ನ ॥ ೭೨ ॥

ತ್ವಯಾಪರಾಧಿತಂ ಬಾಲ ರಾಘವಸ್ಯ ಮುಹುರ್ಮುಹುಃ ।
ತತ್ಸರ್ವಮಪ್ಯಹಂ ವೇದ್ಮಿ ತಥಾಪಿ ತ್ವಾಂ ನಿಹನ್ಮಿ ನ ॥ ೭೩ ॥

ನೀತಾನ್ ವೀರಾನ್ ಸಮರ್ಪ್ಯಾಥ ವಾಜಿನಾ ರಘುನಂದನಂ ।
ಏಹಿ ತ್ವಂ ಶರಣಂ ಬಾಲ ಯದ್ಯಸ್ತಿ ಜೀವಿತಸ್ಪೃಹಾ ॥ ೭೪ ॥

ತತಸ್ಸೌಮಿತ್ರೇರ್ವಚಃ ಶ್ರುತ್ವಾ ಲವೋಽಭೀತಸ್ತಮಬ್ರವೀತ್ ।
ವೇದ್ಮಿ ತ್ವಾಂ ರಾಘವಂ ಚಾಪಿ ಸೀತಾತ್ಯಾಗಾದಪೌರುಷಂ ॥ ೭೫ ॥

ಹೋಗು. ಇಲ್ಲದಿದ್ದರೆ ಸಾಯುತ್ತೀಯೆ. ಆ ಉಳಿದಿರುವ ರಾಮಾಯಣವನ್ನು ನಿನ್ನ ಬಾಯಿಯಿಂದ ಕೇಳಬೇಕೆಂಬ ಆಸೆಯಿರುವುದರಿಂದ ನಿನ್ನನ್ನು ಕೊಲ್ಲುವುದಿಲ್ಲ. ಬಿಟ್ಟುಬಿಡುತ್ತೇನೆ.

೭೩. ಎಲೈ ಬಾಲಕನೇ! ನೀನು ರಾಘವನಿಗೆ ಆಗಾಗ್ಗೆ ಅಪರಾಧವನ್ನು ಮಾಡುತ್ತಲೇ ಇದ್ದೀಯೆ. ಅದೆಲ್ಲವನ್ನೂ ನಾನು ತಿಳಿದಿದ್ದೇನೆ. ಆದರೂ ನಿನ್ನನ್ನು ನಾನು ಕೊಲ್ಲುವುದಿಲ್ಲ.

೭೪. ಎಲೈ ಬಾಲಕನೇ! ನಿನಗೆ ಜೀವದಮೇಲೆ ಆಸೆಯಿದ್ದರೆ ನೀನು ತೆಗೆದುಕೊಂಡು ಹೋಗಿರುವ ಆ ವೀರರನ್ನೂ, ಕುದುರೆಯನ್ನೂ ಹಿಂದಕ್ಕೆ ತಂದು ಒಪ್ಪಿಸಿ ರಘುರಾಮನನ್ನು ಶರಣುಹೊಂದು. ಬಾ. ಹೋಗೋಣ.

೭೫. ಇಂತೆಂದ ಸೌಮಿತ್ರಿಯ ಮಾತನ್ನು ಕೇಳಿ ಲವನು ಹೆದರದೇನೇ ಇಂತೆಂದನು. ಎಲೈ ವೀರನೇ! ನಿನ್ನನ್ನೂ ರಾಘವನನ್ನೂ ನಾನು ತಿಳಿದಿದ್ದೇನೆ. ಸೀತೆಯನ್ನು ತ್ಯಾಗಮಾಡಿದುದರಿಂದ ನಿಮ್ಮಲ್ಲಿ ಪೌರುಷವು ಹೊರಟು ಹೋಗಿರುವುದು.

ಸೀತಾಯಾಮೇವ ಯುವಯೋಃ ಪೌರುಷಂ ನ ಲವೇ ಮಯಿ ।
ಸೀತಾದುಃಖಾಪನೋದಾರ್ಥಂ ಮುನಿನಾ ನಿರ್ಮಿತಸ್ತ್ವಹಂ ॥ ೭೬ ॥

ಯುವಾಂ ಜಿತ್ವಾದ್ಯ ಸಮರೇ ಸೀತಾದುಃಖಂ ಪ್ರಮಾರ್ಜಯೇ ।
ಮುಧಾ ಯುವಾಭ್ಯಾಂ ಸಾ ಸೀತಾ ಛಲಿತಾಸ್ತಿ ಪತಿವ್ರತಾ ॥ ೭೭ ॥

ತಸ್ಯಾ ವಿನಿಷ್ಕೃತಿಂ ಚಾಹಂ ಕರ್ತುಮತ್ರ ಸಮಾಗತಃ ।
ಸೀತಾದುಃಖಾಗ್ನಿನಾ ಯುಷ್ಮತ್ಪೌರುಷಂ ದಗ್ಧಮಸ್ತಿ ತತ್ ॥ ೭೮ ॥

ನ ಸ್ಥಾತವ್ಯಂ ಮಮಾಗ್ರೇತ್ರ ಗಚ್ಛಧ್ವಂ ವಿಧವೋಪಮ್ಯೈಃ ।
ಇತಿ ತಲ್ಲವವಾಗ್ಬಾಣೈರ್ಭಿನ್ನಮರ್ಮಸ್ಥಲಾಶ್ಚ ತೇ ॥ ೭೯ ॥

---

೭೬. ನಿಮ್ಮಗಳ ಪೌರುಷವು ಸೀತೆಯನ್ನು ಬಿಡುವುದರಲ್ಲಿಯೇ ಹೊರತು ಲವನಾದ ನನ್ನಮೇಲೆ ನಡೆಯಲಾರದು. ಆ ಸೀತೆಯ ದುಃಖವನ್ನು ನಾಶಮಾಡುವುದಕ್ಕೋಸ್ಕರವೇ ವಾಲ್ಮೀಕಿಯು ಲವನನ್ನು ನಿರ್ಮಿಸಿರುವನು.

೭೭. ಈಗ ನಿಮ್ಮಿಬ್ಬರನ್ನೂ ಯುದ್ಧದಲ್ಲಿ ಜಯಿಸಿ ಆ ಸೀತೆಯ ದುಃಖವನ್ನು ನಾಶಮಾಡುತ್ತೇನೆ. ಪತಿವ್ರತೆಯಾದ ಆ ಸೀತೆಗೆ ನೀವಿಬ್ಬರೂ ವ್ಯರ್ಥವಾಗಿ ವಂಚಿಸಿ ಮೋಸಮಾಡಿದ್ದೀರಿ.

೭೮. ನೀವು ಮಾಡಿದ ಮೋಸಕ್ಕೆ ಪ್ರತೀಕಾರವನ್ನು ಮಾಡುವುದಕ್ಕೇನೇ ನಾನು ಇಲ್ಲಿ ಯುದ್ಧಕ್ಕೆ ಬಂದಿರುವುದು. ಸೀತೆಯ ದುಃಖವೆಂಬ ಆ ಅಗ್ನಿಯಿಂದಲೇ ನಿಮ್ಮ ಆ ಪೌರುಷವು ಸುಟ್ಟು ಬೂದಿಯಾಗಿರುವುದು.

೭೯. ನೀವುಗಳು ಇಲ್ಲಿ ನನ್ನೆದುರಿಗೆ ನಿಂತುಕೊಳ್ಳಬೇಡಿ. ವಿಧವೆಯಂತಿರುವ ನೀವು ನನ್ನೆದುರಿಗೆ ನಿಲ್ಲದೆ ಇಲ್ಲಿಂದ ಹೊರಡಿ. ಎಂಬುದಾಗಿ ಲವನು ಹೇಳಲು ಈ ಲವನ ಮಾತೆಂಬ ಬಾಣದಿಂದ ಅವರ ಮರ್ಮಸ್ಥಳವು ಬಹುವಾಗಿ ನೊಂದಿತು.

ಲಕ್ಷ್ಮಣಾದ್ಯಾ ವವರ್ಷುಸ್ತಂ ಶಸ್ತ್ರೈರಸ್ತ್ರೈರ್ಲವಂ ಕ್ರುಧಾ ।
ತತೋ ಲವಃ ಸ್ವಬಾಣೈಸ್ತಾಂ ಶಸ್ತ್ರವೃಷ್ಟಿಂ ನಿವಾರ್ಯ ಚ ॥ ೮೦ ॥

ಶ್ರೀರಾಮಸಚಿವಾದೀಂಶ್ಚ ಪ್ರಾಕ್ಷಿಪದ್ಯಜ್ಞಮಂಟಪೇ ।
ತೇ ಸರ್ವೇ ಸಚಿವಾದ್ಯಾಶ್ಚ ಲವಮಾರ್ಗಣತಾಡಿತಾಃ ॥ ೮೧ ॥

ಭಿನ್ನದೇಹಾಃ ಲೋಹಿತಾಕ್ತಾಃ ಪ್ರೋಚೂ ರಾಮಂ ಸ್ಖಲದ್ಗಿರಾ ।
ರಾಮ ತ್ವಂ ನೋ ಪಶ್ಯಸಿ ಕಿಂ ತೂಷ್ಣೀಮಧ್ವರಮಂಟಪೇ ॥ ೮೨ ॥

ಉಪಾಯಂ ಚಿಂತಯಸ್ವಾನ್ಯಂ ವಧೇ ತಸ್ಯ ಲವಸ್ಯ ಚ ।
ಶಸ್ತ್ರೈರಸ್ತ್ರೈರ್ನ್ಮೃತಿಂ ಯುದ್ಧೇ ನ ಗಚ್ಛತಿ ಲವಃ ಪ್ರಭೋ ॥ ೮೩ ॥

---

೮೦. ಆಗ ಲಕ್ಷ್ಮಣನೇ ಮುಂತಾದವರು ಆ ಲವನ ಮೇಲೆ ಶಸ್ತ್ರಗಳ ಮತ್ತು ಅಸ್ತ್ರಗಳ ಮಳೆಯನ್ನು ಸುರಿಸಿದರು. ಲವನೂ ಕೂಡ ತನ್ನ ಬಾಣಗಳಿಂದ ಅವೆಲ್ಲವನ್ನೂ ನಾಶಮಾಡಿದನು.

೮೧. ಮತ್ತು ಬಾಣವನ್ನು ಬಿಟ್ಟು ರಾಮನ ಮಂತ್ರಿಗಳು ರಾಮನ ಆ ಯಜ್ಞಕುಂಡದಲ್ಲಿ ಬೀಳುವಂತೆ ಮಾಡಿದನು. ಆ ಮಂತ್ರಿಗಳೆಲ್ಲರಿಗೂ ಲವನ ಬಾಣದ ಏಟುಬಿದ್ದು ಮೈಗಾಯವಾಗಿ ರಕ್ತದಿಂದ ನೆನೆದು ಇದ್ದಿತು.

೮೨. ಅಲ್ಲಿ ಆ ರಾಮನನ್ನು ನೋಡಿ ಗದ್ಗದ ಸ್ವರದಿಂದ ಇಂತೆಂದರು. ಎಲೈ ರಾಮನೇ ! ಈ ಯಾಗಮಂಟಪದಲ್ಲಿ ಈ ರೀತಿಯಾಗಿ ಏಟನ್ನು ತಿಂದು ಬಂದು ಬಿದ್ದಿರುವ ನಮ್ಮನ್ನು ನೋಡು. ನಾವು ಯಾವ ಅವಸ್ಥೆಯನ್ನು ಹೊಂದಿದ್ದೇವೆ.

೮೩. ಆದ್ದರಿಂದ ಆ ಲವನನ್ನು ಕೊಲ್ಲಲು ಬೇರೆ ಯಾವುದಾದರೂ ಒಂದು ಉಪಾಯವನ್ನು ಯೋಚಿಸು. ಎಲೈ ಪ್ರಭುವೇ ! ಶಸ್ತ್ರದಿಂದಲಾಗಲೀ, ಅಸ್ತ್ರದಿಂದಲಾಗಲಿ, ಆ ಲವನು ಯುದ್ಧದಲ್ಲಿ ಸಾಯುವವನಾಗಿಲ್ಲ.

ಸಾಹಾಯ್ಯಂ ಕುರು ಸೌಮಿತ್ರೇರ್ಯದಿ ಬಂಧುಂ ಸಜೀವಿತಂ ।
ತ್ವಮಿಚ್ಛಸಿ ಲವಶರಪ್ರಹಾರಾದ್ಬಂಧುವತ್ಸಲ ॥ ೮೪ ॥

ಇತ್ಯುಕ್ತ್ವಾ ಲವವಾಕ್ಯಾನಿ ರಾಘವಂ ತೇ ನ್ಯವೇದಯನ್ ।
ತಾನಿ ಶ್ರುತ್ವಾ ರಾಘವೋಽಪಿ ತೂಷ್ಣೀಮಾಸೀತ್ತದಾ ಕ್ಷಣಂ ॥ ೮೫ ॥

ಲವೋಽಪಿ ಲಕ್ಷ್ಮಣಂ ಬಾಣೈರ್ವಿವ್ಯಾಧ ದಶಭಿರ್ದೃಢಂ ।
ಆಪುಂಖಮುಗ್ನಾಸ್ತೇ ಬಾಣಾಶ್ಶರೀರೇ ಲಕ್ಷ್ಮಣಸ್ಯ ಚ ॥ ೮೬ ॥

ತತಃ ಕ್ರೋಧಪರೀತಾತ್ಮಾ ಲಕ್ಷ್ಮಣೋ ವೇಗವತ್ತರಃ ।
ಲವದೇಹೇ ಸ್ವಶಸ್ತ್ರಾಣಿ ಭವಂತಿ ನಿಷ್ಫಲಾನಿ ಹಿ ॥ ೮೭ ॥

---

೮೪. ನಿನ್ನ ತಮ್ಮನಾದ ಲಕ್ಷ್ಮಣನು ಜೀವಿಸಿರಬೇಕೆಂದು ನಿನಗೆ ಮನಸ್ಸಿದ್ದರೆ ಆ ಲಕ್ಷ್ಮಣನಿಗೆ ಯುದ್ಧದಲ್ಲಿ ಈಗಲೇ ಸಹಾಯವನ್ನು ಮಾಡು. ಇಲ್ಲದಿದ್ದರೆ ಆ ಲವನ ಬಾಣದ ಹೊಡೆತದಿಂದ ಆ ನಿನ್ನ ತಮ್ಮನಾದ ಲಕ್ಷ್ಮಣನು ಸಾಯುವನು.

೮೫. ಈ ರೀತಿಯಾಗಿ ಹೇಳಿ ಲವನು ಹೇಳಿದ ಕ್ರೂರವಾದ ಮಾತುಗಳನ್ನು ಅವರು ರಾಮನಿಗೆ ಹೇಳಿದರು. ಅವರು ಹೇಳಿದುದನ್ನೆಲ್ಲಾ ಕೇಳಿ ರಾಮನೂ ಕೂಡ ಕ್ಷಣಕಾಲ ಸುಮ್ಮನಿದ್ದನು.

೮೬. ಇತ್ತ ಲವನು ಹತ್ತು ಬಾಣಗಳನ್ನು ಬಿಟ್ಟು ಲಕ್ಷ್ಮಣನನ್ನು ಬಲವಾಗಿ ಹೊಡೆದನು. ಆ ಬಾಣಗಳೆಲ್ಲವೂ ಲಕ್ಷ್ಮಣನ ದೇಹದಲ್ಲಿ ಬುಡದವರೆಗೂ ಚುಚ್ಚಿಕೊಂಡುವು.

೮೭. ಇದರಿಂದ ಲಕ್ಷ್ಮಣನಿಗೂ ಕೋಪಬಂದು ಬಲವಾಗಿ ಬಾಣಗಳನ್ನು ಲವನಮೇಲೆ ಬಿಟ್ಟನು. ಆದರೂ ಆ ಬಾಣಗಳು ಲವನ ದೇಹದಮೇಲೆ ಬಿದ್ದು ಗಾಯಪಡಿಸಲಾರದೆ ಫಲವಿಲ್ಲದಂತಾದುವು.

ದೃಷ್ಟ್ವೇತಿ ವ್ಯಗ್ರಚಿತ್ತಸ್ಸ ಕ್ಷಣಂ ಸಂಚಿಂತ್ಯ ವೈ ಹೃದಿ ।
ಬ್ರಹ್ಮಾಸ್ತ್ರೇಣ ಲವಂ ಬದ್ಧ್ವಾ ಸಾಶ್ವಂ ರಾಜ್ಞೇ ನ್ಯವೇದಯತ್ ॥ ೮೮ ॥

ಬ್ರಹ್ಮಾಸ್ತ್ರಂ ಮಾನಯನ್ ತೂಷ್ಣೀಂ ಯಯೌ ರಾಮಂ ಲವೋಽಪಿ ಸಃ ।
ರಾಘವಸ್ತಂ ಸಮಾನೀತಂ ದೃಷ್ಟ್ವಾ ಲಕ್ಷ್ಮಣಮಬ್ರವೀತ್ ॥ ೮೯ ॥

ಜಾನನ್ನಪಿ ಸುತಂ ಸ್ವೀಯಂ ಕೌತುಕಂ ದರ್ಶಯನ್ ಜನಾನ್ ।
ಮಹತ್ಕಾರ್ಯಂ ಕೃತಂ ಬಂಧೋ ತ್ವಮೇನಂ ವಿದ್ಧಿ ಬಾಹುಜಂ ॥ ೯೦ ॥

ದ್ವಿಜಹತ್ಯಾ ಭಯಂ ತ್ಯಕ್ತ್ವಾ ಘಾತಯಸ್ವೈನಮದ್ಯ ಹಿ ।
ರಾಮಂ ಪ್ರೋವಾಚ ಸೌಮಿತ್ರಿರ್ನಾಯಂ ಶಸ್ತ್ರೈರ್ಮರಿಷ್ಯತಿ ॥ ೯೧ ॥

---

೮೮. ಇದನ್ನು ನೋಡಿ ಲಕ್ಷ್ಮಣನಿಗೆ ಮನಸ್ಸಿನಲ್ಲಿ ಕಳವಳವುಂಟಾಯಿತು. ಆಗ ಕ್ಷಣಕಾಲ ಮನಸ್ಸಿನಲ್ಲಿಯೇ ಯೋಚಿಸಿ ಬ್ರಹ್ಮಾಸ್ತ್ರವನ್ನು ಬಿಟ್ಟು ಆ ಲವನನ್ನು ಕಟ್ಟಿ ಕುದುರೆಯನ್ನೂ ಲವನನ್ನೂ ತೆಗೆದುಕೊಂಡು ಹೋಗಿ ರಾಮನಿಗೆ ಒಪ್ಪಿಸಿದನು.

೮೯. ಆ ಲವನೂ ಕೂಡ ಬ್ರಹ್ಮಾಸ್ತ್ರವನ್ನು ಗೌರವಿಸುತ್ತ ರಾಮನ ಬಳಿಗೆ ಹೋದನು. ಲಕ್ಷ್ಮಣನು ಆ ಹುಡುಗನನ್ನು ಕರೆತಂದುದನ್ನು ರಾಮನು ನೋಡಿ ಇಂತೆಂದನು.

೯೦. ಆ ರಾಮನಿಗೆ ಲವನು ತಮ್ಮ ಮಗನೆಂದು ತಿಳಿದಿದ್ದರೂ ಜನಗಳಿಗೆ ಕೌತುಕವನ್ನು ತೋರಿಸಲು ಎಲೈ ಲಕ್ಷ್ಮಣನೇ ! ಇವನು ಬಹು ದೊಡ್ಡ ಕೆಲಸವನ್ನು ಮಾಡಿರುವುದರಿಂದ ಇವನನ್ನು ಕ್ಷತ್ರಿಯನೆಂದು ನೀನು ತಿಳಿ.

೯೧. ಆದ್ದರಿಂದ ಇವನನ್ನು ಕೊಂದರೆ ಬ್ರಹ್ಮಹತ್ಯೆಯು ಬರುವುದಿಲ್ಲ. ಆ ಹೆದರಿಕೆಯನ್ನು ಬಿಟ್ಟು ಈಗಲೇ ಇವನನ್ನು ಕೊಂದುಹಾಕು. ಎಂದು ರಾಮನು ಹೇಳಲು ಅದಕ್ಕೆ ಸೌಮಿತ್ರಿಯು ಎಲೈ ರಾಘವನೇ ! ಇವನು ಶಸ್ತ್ರಗಳಿಂದ ಸಾಯುವವನಲ್ಲ.

ಭರತಾದ್ಯೈರ್ಮಯಾ ಚಾಪಿ ನಾಯಂ ಕಿಂ ತಾಡಿತೋಽಸಿಭಿಃ ।
ಅಸ್ಯ ದೇಹೇ ಕ್ಷತಂ ಚೈಕಮಪಿ ಕಿಂ ದೃಶ್ಯತೇ ತ್ವಯಾ ॥ ೯೨ ॥

ತಚ್ಛ್ರುತ್ವಾ ರಾಘವಃ ಪ್ರಾಹ ಪ್ರಷ್ಟವ್ಯೋಽಯಂ ಬಾಲಕಸ್ತ್ವಯಾ ।
ಕೇನೋಪಾಯೇನ ತೇ ಮೃತ್ಯುರ್ಭವೇದಿತಿ ಮಮಾಗ್ರತಃ ॥ ೯೩ ॥

ಗೋಪಾಯಂತಿ ನಿಜಂ ಮೃತ್ಯುಂ ನ ಶೂರಾ ವಧಕಾಂಕ್ಷಯಾ ।
ನ ವದಂತ್ಯನೃತಂ ಕ್ವಾಪಿ ಸ್ವಬಲೇನೈವ ಜೀವಿತಾಃ ॥ ೯೪ ॥

ತತಃ ಪೃಷ್ಟೋಽ ಲಕ್ಷ್ಮಣೇನ ಲವಃ ಪ್ರಾಹಾಥ ಲಕ್ಷ್ಮಣಂ ।
ಜಲಸ್ಯ ಸೇಚನಾದ್ವೃದ್ಧಿಂ ಸ್ವಿಯಾಂ ಜ್ಞಾತ್ವಾ ಮುನೇರ್ಗಿರಾ ॥ ೯೫ ॥

---

೯೨. ಭರತಾದಿಗಳೂ ನಾನೂ ಕೂಡ ಇವನಮೇಲೆ ಬಹುವಾಗಿ ಬಾಣಗಳನ್ನು ಬಿಟ್ಟೆವು. ಆದರೂ ಕೂಡ ಇವನ ದೇಹದಲ್ಲಿ ಒಂದು ಚೂರು ಗಾಯವಾದರೂ ಆಗಿದೆಯೋ ? ನೋಡು.

೯೩. ಲಕ್ಷ್ಮಣನ ಈ ಮಾತನ್ನು ಕೇಳಿ ರಾಮನು ಎಲೈ ಲಕ್ಷ್ಮಣನೇ ! ಈ ಹುಡುಗನನ್ನು ಕುರಿತು ನೀನು ಸಾಯುವ ಉಪಾಯವಾವುದೆಂದು ನನ್ನೆದುರಿಗೆ ಕೇಳು.

೯೪. ಶೂರರಾದವರು ತಾವು ಸಾಯುತ್ತೇವೆಂಬ ಹೆದರಿಕೆಯಿಂದ ಹಿಂದೆಗೆಯದೆ ತಮ್ಮ ಮೃತ್ಯುವಿನ ಉಪಾಯುವನ್ನು ತಾವೇ ಹೇಳುತ್ತಾರೆ. ಅವರು ತಮ್ಮ ಬಲದಿಂದಲೇ ಜೀವಿಸುತ್ತಾರಾದ್ದರಿಂದ ಸುಳ್ಳನ್ನು ಹೇಳುವುದೇ ಇಲ್ಲ.

೯೫. ರಾಮನು ಹೀಗೆ ಹೇಳಲು ಅದರಂತೆಯೇ ಲಕ್ಷ್ಮಣನು ಲವನನ್ನು ಕೇಳಲು ಅದಕ್ಕೆ ಲವನು ನೀರನ್ನು ಚುಮುಕಿಸಿದರೆ ತನ್ನ ಪರಾಕ್ರಮವು ವೃದ್ಧಿಯಾಗುವುದೆಂದು ಮುನಿಯು ಹೇಳಿದುದನ್ನು ಜ್ಞಾಪಿಸಿಕೊಂಡನು.

ಕಾಪಟ್ಯಬುದ್ಧ್ಯಾ ಲೋಕಾನ್ ಹಿ ದರ್ಶಯನ್ ಸ್ವಪರಾಕ್ರಮಂ ।
ಜಲಸ್ಯ ಸೇಚನೇನಾದ್ಯ ಮೃತ್ಯುರ್ಮೇ ನಿಶ್ಚಿತೋ ಭವೇತ್ ॥ ೯೬ ॥

ತತ್ತಸ್ಯ ವಚನಂ ಶ್ರುತ್ವಾ ಶಿಲಾಯಾಂ ತಂ ನಿವೇಶ್ಯ ಚ ।
ಸೇಚನಂ ತೋಯಕಲಶೈಃ ಕಾರಯಾಮಾಸ ಲಕ್ಷ್ಮಣಃ ॥ ೯೭ ॥

ಅಯೋಧ್ಯಾವಾಸಿಭಿರ್ನಾರೀಪುರುಷೈಃ ಪರಮಾದರಾತ್ ।
ಚತುರ್ಮುಖೈಶ್ಚ ಮರ್ಘಟ್ಟೈರ್ವೃಷಾನೀತೈಶ್ಚ ಕೋಟಿಶಃ ।
ತಥಾ ಕಾರ್ಪಟಿಕೈಶ್ಚಾಪಿ ರಥೋಷ್ಟ್ರವಾರಣಾದಿಭಿಃ ॥ ೯೮ ॥

ಆನಯಿತ್ವಾ ಜಲಂ ಶೀಘ್ರಂ ಸಿಷೇಚ ಲವಬಾಲಕಂ ।
ಯಥಾ ಯಥಾ ಜಲೈಸ್ತಂ ಹಿ ಸೇಚನಂ ಚಕ್ರಿರೇ ಜನಾಃ ॥ ೯೯ ॥

---

೯೬. ಆಗ ಕಪಟಬುದ್ಧಿಯನ್ನು ಹೊಂದಿ ಜನಗಳಿಗೆ ತನ್ನ ಪರಾಕ್ರಮವನ್ನು ತೋರಿಸಬೇಕೆಂಬ ಇಚ್ಛೆಯಿಂದ ಎಲೈ ವೀರನೇ! ನೀರನ್ನು ಚುಮುಕಿಸಿದರೆ ನನಗೆ ಮೃತ್ಯುವು ಬರುವುದು. ಇದು ಖಂಡಿತ ಎಂದನು.

೯೭. ಲವನ ಆ ಮಾತನ್ನು ಕೇಳಿ ಕಲ್ಲಿನಮೇಲೆ ಆತನನ್ನು ಕೂರಿಸಿ ಬಿಂದಿಗೆಗಳಲ್ಲಿ ನೀರನ್ನು ತಂದು ಲಕ್ಷ್ಮಣನು ಅವನ ಮೇಲೆ ಆ ನೀರನ್ನು ಸುರಿದನು.

೯೮. ಅಯೋಧ್ಯೆಯಲ್ಲಿರುವ ಹೆಂಗಸರೂ ಗಂಡಸರೂ ಎಲ್ಲರೂ ಬಂದು ನೀರನ್ನು ಅವನಮೇಲೆ ಸುರಿದರು. ಅಲ್ಲದೆ ನಾಲ್ಕು ಮುಖವುಳ್ಳ ಚರ್ಮದ ತಿತ್ತಿಗಳಲ್ಲಿ ಎತ್ತಿನಮೇಲೆ ನೀರನ್ನು ತರಿಸಿ ಅದರಿಂದಲೂ ಹುಯ್ಯಿಸಿದನು. ಅದೂ ಅದೆಲ್ಲ ಅಡ್ಡೆಯನ್ನು ಹೊರುವವರಿಂದಲೂ ಆನೆ, ಒಂಟೆ, ರಥಗಳ ಮೇಲೂ ನೀರನ್ನು ತರಿಸಿ ಸುರಿಸಿದನು.

೯೯-೧೦೦. ಈ ರೀತಿಯಾಗಿ ಎಲ್ಲಾ ರೀತಿಯಿಂದಲೂ ನೀರನ್ನು ತರಿಸಿ ಆ ಬಾಲಕನಮೇಲೆ ಸುರಿಸಿದನು. ಅವನು ನೀರನ್ನು ತರಿಸಿ ಆ ಬಾಲಕನಮೇಲೆ ಸುರಿದಂತೆಲ್ಲಾ ನೀರನ್ನು ಕುಡಿದರೆ ಮೋಡವು ಹೆಚ್ಚುವಂತೆ ಹೆಚ್ಚಾಗಿಯೇ

ತಥಾ ತಥಾ ಲವಸ್ತತ್ರ ವ್ಯವರ್ಧತ ಘನೋ ಯಥಾ ।
ಸಪ್ತತಾಳಪ್ರಮಾಣೋಽಭೂತ್ ವೃದ್ಧ್ಯಾ ಭೀಮಪರಾಕ್ರಮಃ ॥ ೧೦೦ ॥

ತತಸ್ತಂ ಲಕ್ಷ್ಮಣಃ ಪ್ರಾಹ ತ್ವಯಾ ಲವಮೃಷೇರಿತಂ ।
ನಾಯಂ ತವ ವಧೋಪಾಯಃ ಸ್ವವೃದ್ಧ್ಯರ್ಥಂ ಕೃತಃ ಖಲು ॥ ೧೦೧ ॥

ಲವೋ ಪ್ಯಾಹಾಥ ಸೌಮಿತ್ರಿಂ ಕೌಟಿಲ್ಯೇನ ಪ್ರತಾರಯನ್ ।
ಯಥಾ ತೈಲಕ್ಷಯೇ ದೀಪೋ ವೃದ್ಧಿಮಂತೇ ಪ್ರಗಚ್ಛತಿ ॥ ೧೦೨ ॥

ತಥಾಯುಷಃ ಕ್ಷಯೇ ಮೇಽಪಿ ವೃದ್ಧಿಂ ಪಶ್ಯ ಕ್ಷಣಂ ತ್ವಿಮಾಂ ।
ತದ್ವಾಕ್ಯಂ ಮಾನಯನ್ ಸತ್ಯಂ ಸೇಚಯತ್ತಂ ಸ ಲಕ್ಷ್ಮಣಃ ॥ ೧೦೩ ॥

ಅಷ್ಟಷ್ಟು ಇವನ ಶಕ್ತಿಯು ವೃದ್ಧಿಹೊಂದಿತು. ಪರಾಕ್ರಮವು ಬಹುವಾಗಿ ಹೆಚ್ಚಿದುದಲ್ಲದೆ ಉದ್ದದಲ್ಲಿಯೂ ಕೂಡ ಏಳು ತಾಳೆಮರದಷ್ಟಾದನು.

೧೦೧. ಆಗ ಲಕ್ಷ್ಮಣನು ಲವನನ್ನು ಕುರಿತು ಎಲೈ ಬಾಲಕನೇ! ನೀನು ಹೇಳಿದುದು ಸುಳ್ಳು. ಇದು ನೀನು ಸಾಯುವ ಉಪಾಯವಲ್ಲ. ನಿನ್ನ ವೃದ್ಧಿಗೋಸ್ಕರ ಹೀಗೆ ಉಪಾಯವನ್ನು ಮಾಡಿದೆ. ಎಂಬುದಾಗಿ ಹೇಳಿದನು.

೧೦೨–೧೦೩. ಲವನೂ ಕೂಡ ಕುಟಿಲ ಬುದ್ಧಿಯಿಂದ ಲಕ್ಷ್ಮಣನನ್ನು ವಂಚಿಸುತ್ತ ಎಲೈ ಲಕ್ಷ್ಮಣನೇ! ದೀಪವು ಎಣ್ಣೆಮುಗಿದಮೇಲೆ ಕೊನೆಯಲ್ಲಿ ದೊಡ್ಡದಾಗಿ ಉರಿಯುತ್ತ ಕೊನೆಗೆ ಹೇಗೆ ಆರಿಹೋಗುತ್ತದೆಯೋ ಅಂತೆಯೇ ನನ್ನ ಆಯುಸ್ಸಿನ ಕ್ಷಯದಲ್ಲಿಯೂ ಕೂಡ ವೃದ್ಧಿಯು ಉಂಟಾಗುತ್ತಿದೆ. ಕ್ಷಣಕಾಲ ನೋಡುತ್ತಿರು. ಎನ್ನಲು ಅದೂ ನಿಶ್ಚಯವೆಂದು ತಿಳಿದು ಲಕ್ಷ್ಮಣನು ಮತ್ತೆ ನೀರನ್ನು ಸುರಿಸುತ್ತಲೇ ಇದ್ದನು.

ಜಲೈರ್ಗಾಂಗೈಸ್ಸಮಾನೀತೈಃ ಪೂರ್ವವಚ್ಚ ಪುನಃ ಪುನಃ ।
ಕಾಷ್ಠಸೋಪಾನಮಾರ್ಗೇಣ ಸೇಚನಂ ಚಕ್ರಿರೇ ಜನಾಃ ॥ ೧೦೪ ॥

ಬ್ರಹ್ಮಾಸ್ತ್ರೇಣ ವಿನಿರ್ಮುಕ್ತಃ ಪ್ರಚಚಾಲ ಲವಸ್ತದಾ ।
ಭುಜಾವಾಸ್ಫಾಲಯಾಮಾಸ ತಥೋರೂ ಬಾಲಲೀಲಯಾ ॥ ೧೦೫ ॥

ತಂ ದೃಷ್ಟ್ವಾ ದುದ್ರುವುಸ್ಸರ್ವೇ ತ್ಯಕ್ತ್ವಾ ತೋಯಘಟಾನಪಿ ।
ಶಕ್ಛನ್ಮೂತ್ರಂ ಪ್ರಮುಂಚಂತೋ ಮುಕ್ತಕಚ್ಛಾ ಲವೇಕ್ಷಣಾಃ ॥ ೧೦೬ ॥

ಏತಸ್ಮಿನ್ನಂತರೇ ಕ್ರೀಡನ್ ಗಂಗಾಯಾಂ ತಾನ್ ಜನಾನ್ಕುಶಃ ।
ಪಪ್ರಚ್ಛಾದ್ಯ ಮುಹುರ್ನೀರಂ ಕಿಮರ್ಥಂ ನೀಯತೇ ಜವಾತ್ ॥ ೧೦೭ ॥

---

೧೦೪. ಅನಂತರ ಜನಗಳು ಮರದಿಂದ ಕಾಲಾವಧಿಗಳನ್ನು ಕಟ್ಟಿಕೊಂಡು ನೀರನ್ನು ತರುವ ಜಾಗಗಳಿಂದೆಲ್ಲಾ ಗಂಗೆಯ ನೀರನ್ನು ತರುತ್ತ ಅವನ ಮೇಲೆ ಸುರಿಯುತ್ತಿದ್ದರು

೧೦೫. ಆಗ ಬ್ರಹ್ಮಾಸ್ತ್ರವು ಅವನನ್ನು ಬಿಟ್ಟುಬಿಟ್ಟಿತು. ಆ ಲವನು ಬಾಲಲೀಲೆಯಿಂದ ಯುದ್ಧಮಾಡಲು ಭುಜಗಳನ್ನೂ ತೊಡೆಯನ್ನೂ ತಟ್ಟಲು ಮೊದಲು ಮಾಡಿದನು.

೧೦೬. ಲವನು ಈ ರೀತಿಯಾಗಿ ಮಾಡುತ್ತಿದ್ದುದನ್ನು ನೋಡಿ ನೀರನ್ನು ಸುರಿಯುತ್ತಿದ್ದವರೆಲ್ಲರೂ ಓಡಿಹೋದರು. ಈ ಲವನನ್ನು ನೋಡುವುದರಿಂದಲೇ ಕೆಲವರಿಗೆ ಮೂತ್ರವು ಬಂದಿತು. ಕೆಲವರಿಗೆ ಪಾಯಿಖಾನೆಯೂ ಬಂದಿತು.

೧೦೭. ಗಂಗೆಯಲ್ಲಿ ಸ್ನಾನಮಾಡುತ್ತಿದ್ದ ಕುಶನು ಗಂಗೆಯಿಂದ ನೀರನ್ನು ಹೊತ್ತುಕೊಂಡು ಹೋಗುತ್ತಿದ್ದ ಜನರನ್ನು ಕುರಿತು ನೀವು ಈ ನೀರನ್ನು ಹೀಗೇತಕ್ಕೆ ತೆಗೆದುಕೊಂಡು ಹೋಗುತ್ತೀರಿ ? ಇಷ್ಟು ಅವಸರಕ್ಕೂ ಇಷ್ಟು ವೇಗಕ್ಕೂ ಕಾರಣವೇನು ! ಎಂದು ಕೇಳಿದನು.

ಜನಾಃ ಪ್ರೋಚುರ್ಲವಂ ಹಂತುಮಸ್ಮಾಭಿರ್ನೀಯತೇ ಜಲಂ ।
ವಿಶ್ವಸ್ತೈರ್ಲವವಾಕ್ಯೇನ ತಚ್ಛ್ರುತ್ವಾ ಸ ಯಯೌ ಕುಶಃ ॥ ೧೦೮ ॥

ಸಂಗೃಹ್ಯ ಸ್ವಾಶ್ರಮಾಚ್ಚಾಪಂ ತೂಣೀರೇ ವೇಗವತ್ತರಃ ।
ಲವಂ ಮೋಚಯಿತುಂ ಚಾಪಂ ಠಣತ್ಕೃತ್ವಾಧ್ವರಸ್ಥಲೇ ॥ ೧೦೯ ॥

ಕುಶಚಾಪಧ್ವನಿಂ ಶ್ರುತ್ವಾ ತಸ್ಥೌ ತೂಷ್ಣೀಂ ಲವಃ ಕ್ಷಣಂ ।
ತತೋ ದೃಷ್ಟ್ವಾ ಕುಶಂ ಪ್ರಾಪ್ತಂ ಯಯೌ ಯೋದ್ಧುಂ ಸ ಲಕ್ಷ್ಮಣಃ ॥

ತಂ ದೃಷ್ಟ್ವಾ ಸ ಕುಶಃ ಪ್ರಾಹ ಛಲಿತೌ ಜಾನಕೀಲವೌ ।
ತ್ವಯಾ ರಾಮೇಣ ಲೋಕೈಶ್ಚ ತಯೋಃ ಕರ್ತುಂ ವಿನಿಷ್ಕೃತಿಂ ॥ ೧೧೧ ॥

---

೧೦೮. ಅದಕ್ಕೆ ಅವರು ಲವನನ್ನು ಕೊಂದುಹಾಕಲು ನಾವು ನೀರನ್ನು ತೆಗೆದುಕೊಂಡು ಹೋಗುತ್ತೇವೆ. ಲವನು ಹಾಗೆ ಹೇಳಿರುವುದರಿಂದ ಅದರಲ್ಲಿ ನಮಗೆ ನಂಬಿಕೆಯುಂಟಾಗಿದೆ. ಎಂದರು. ಇದನ್ನು ಕೇಳಿ ಅಲ್ಲಿಂದ ಕುಶನು ಆಶ್ರಮಕ್ಕೆ ಹೊರಟುಹೋದನು.

೧೦೯. ಅಲ್ಲಿ ಬೇಗನೆ ತನ್ನ ಧನುರ್ಬಾಣ ಬತ್ತಳಿಕೆಗಳನ್ನು ತೆಗೆದುಕೊಂಡನು. ಲವನನ್ನು ಬಿಡಿಸಲು ತನ್ನ ಧನುಸ್ಸನ್ನು ಠೇಂಕಾರಮಾಡುತ್ತ ಆ ಯಾಗದ ಸ್ಥಳಕ್ಕೆ ಹೋಗಿ ನಿಂತನು.

೧೧೦. ಕುಶನ ಧನುಸ್ಸಿನ ಠೇಂಕಾರವನ್ನು ಕೇಳಿ ಲವನು ಒಂದು ಗಳಿಗೆಯ ಕಾಲ ಸುಮ್ಮನಿದ್ದನು. ಕುಶನು ಯುದ್ಧಕ್ಕೆ ಬಂದಿರುವುದನ್ನು ನೋಡಿ ಲಕ್ಷ್ಮಣನು ಯುದ್ಧಕ್ಕೆ ಹೊರಟನು.

೧೧೧. ಕುಶನು ಲಕ್ಷ್ಮಣನನ್ನು ನೋಡಿ ಎಲೈ ಲಕ್ಷ್ಮಣನೇ ! ನೀನೂ ರಾಮನೂ, ಜನಗಳೂ, ಜಾನಕಿಯನ್ನೂ ಲವನನ್ನೂ ಮೋಸಪಡಿಸಿದ್ದೀರಿ. ಆದ್ದರಿಂದ ನಿಮ್ಮಗಳಿಗೆ ಪ್ರತಿಕ್ರಿಯೆಯನ್ನು ಮಾಡಬೇಕು. ಆದ್ದರಿಂದ ಇಲ್ಲಿಗೆ ನಾನು ಬಂದಿದ್ದೇನೆ.

ಅಹಂ ಪ್ರಾಪ್ತೋಽಸ್ಮಿ ಮಾಂ ಬಾಲಂ ಲವವತ್ತ್ವಂ ನ ಮಾನಯ |
ಯುವಯೋಃ ಪೌರುಷಂ ನಾರ್ಯಾಂ ಶಿಶಾವಸ್ತೀತಿ ವೇದ್ಮ್ಯಹಂ ॥ ೧೧೨ ॥

ಸೀತಾಕ್ಲೇಶಾನಲಜ್ವಾಲಾಸಂದಗ್ಧಂ ಯುವಯೋರ್ಬಲಂ |
ನ ಮಮಾಗ್ರೇ ಸ್ಫುಟಂ ಕಾರ್ಯಂ ಯುವಾಭ್ಯಾಮುಪಹಾಸಕೃತ್ ॥ ೧೧೩ ॥

ವಾಲ್ಮೀಕಿಶಿಕ್ಷಿತಾಂ ವಿದ್ಯಾಂ ರಾಮಂ ತ್ವಾಮದ್ಯ ದರ್ಶಯೇ |
ಇತ್ಯುಕ್ತ್ವಾ ತುಮುಲಂ ಯುದ್ಧಂ ಪಿತೃವ್ಯೇಣ ಚಕಾರ ಸಃ ॥ ೧೧೪ ॥

ಅಸ್ತ್ರ ವೃಥಾ ಜಾನಕೀಯೇ ಲಕ್ಷ್ಮಣೋತ್ಸೃಷ್ಟಮಾರ್ಗಣಾಃ |
ರಾಮಾಯಣಾತ್ಕುಶೋಜ್ಞಾತ್ವಾ ಶೇಷ ಏವಾತ್ರ ಲಕ್ಷ್ಮಣಃ ॥ ೧೧೫ ॥

---

೧೧೨. ನಾನು ಬಾಲಕನೆಂಬುದಾಗಿಯೂ ಲವನಂತೆ ಇರುವನೆಂದೂ ನನ್ನನ್ನು ತಿಳಿಯಬೇಡಿರಿ. ನಿನ್ನ ಮತ್ತು ರಾಮನ ಇಬ್ಬರ ಪೌರುಷವೂ ಹೆಂಗಸಾದ ಸೀತೆಯಮೇಲೆಯೂ ಮಗುವಾದ ಲವನಮೇಲೆಯೂ ಇದೆಯೆಂದು ನಾನು ಬಲ್ಲೆನು.

೧೧೩. ಸೀತೆಯ ದುಃಖವೆಂಬ ಕಾಳ್ಗಿಚ್ಚಿನಿಂದ ನಿಮ್ಮ ಶಕ್ತಿಯೆಲ್ಲವೂ ನಾಶವಾಗಿ ಹೋಗಿರುವುದು. ನೀವುಗಳು ನನ್ನ ಎದುರಿಗೆ ಆ ಪರಾಕ್ರಮವನ್ನು ತೋರಿಸಬೇಡಿರಿ. ಹಾಗೆ ಮಾಡಿದರೆ ನೀವು ಹಾಸ್ಯಕ್ಕೆ ಗುರಿಯಾಗುತ್ತೀರಿ.

೧೧೪ ನಾನು ವಾಲ್ಮೀಕಿಯಲ್ಲಿ ಕಲಿತಿರುವ ವಿದ್ಯೆಯನ್ನು ಈಗ ನಿನಗೂ ರಾಮನಿಗೂ ತೋರಿಸುತ್ತೇನೆ. ಹೀಗೆಂಬುದಾಗಿ ಹೇಳುತ್ತ ಆ ಚಿಕ್ಕಪ್ಪನಾದ ಲಕ್ಷ್ಮಣನೊಡನೆ ಕುಶನು ತುಮುಲಯುದ್ಧಕ್ಕೆ ಮೊದಲು ಮಾಡಿದನು.

೧೧೫. ಲಕ್ಷ್ಮಣನು ಬಿಟ್ಟ ಬಾಣಗಳೆಲ್ಲವೂ ಆ ಕುಶನಲ್ಲಿ ವ್ಯರ್ಥವಾಗುತ್ತ ಹೋದುವು. ಕುಶನು ರಾಮಾಯಣವನ್ನು ಕಲಿತಿದ್ದುದರಿಂದ ಅದರಲ್ಲಿ ಶೇಷನು ಲಕ್ಷ್ಮಣನಾಗಿ ಅವತರಿಸಿರುವುದನ್ನು ನೆನಪಿಗೆ ತಂದುಕೊಂಡನು.

ಜಾತೋಸ್ತೀತಿ ವಧೇ ತಸ್ಯ ಗಾರುಡಾಸ್ತ್ರಂ ಮುಮೋಚ ಸಃ ।
ಕ್ಷಾತ್ರಧರ್ಮಂ ಪುರಸ್ಕೃತ್ಯ ನ ತದ್ಧಿಂಸಾಭಯಂ ದಧೇ ॥ ೧೧೬ ॥

ಜಾನ್ ಯುದ್ಧೇ ಪಿತುರ್ಹಿಂಸಾ ಜಾತಾ ಚೇನ್ನ ಭಯಂ ತ್ವಿತಿ ।
ತದ್ದೃಷ್ಟ್ವಾ ಖಗರಾಜಾಸ್ತ್ರಂ ಸೌಮಿತ್ರೇಃ ಕುಂಠಿತಾ ಗತಿಃ ॥ ೧೧೭ ॥

ಭಯಭೀತಃ ಪೃಥಿವ್ಯಾಂ ಹಿ ಪಪಾತ ಲಕ್ಷ್ಮಣೋ ರಥಾತ್ ।
ತಂ ದೃಷ್ಟ್ವಾ ರಾಮಚಂದ್ರಶ್ಚ ದೀಕ್ಷಾಯುಕ್ತೋಽಪಿ ವೇಗತಃ ॥ ೧೧೮ ॥

ಧೃತ್ವಾ ಚಾಪಂ ಚ ತೂಣೀರಂ ಯಜ್ಞಕುಂಡಾಗ್ರತಃ ಸ್ಥಿತಃ ।
ಚಾಪೇ ಸಂಧಾಯ ಬ್ರಹ್ಮಾಸ್ತ್ರಂ ಸೌಮಿತ್ರೇರ್ಜೀವಿತಾಶಯಾ ॥ ೧೧೯ ॥

---

೧೧೬. ಆದ್ದರಿಂದ ಅವನನ್ನು ಕೊಲ್ಲಲು ಗಾರುಡಾಸ್ತ್ರವನ್ನು ಅವನಮೇಲೆ ಬಿಟ್ಟನು. ಯುದ್ಧಮಾಡುವುದೂ, ಯುದ್ಧದಲ್ಲಿ ಸಾಯುವುದೂ ಕ್ಷಾತ್ರಧರ್ಮವೆಂದು ತಿಳಿದಿದ್ದುದರಿಂದ ಚಿಕ್ಕಪ್ಪನಾದ ಆ ಲಕ್ಷ್ಮಣನ ಕೊಲ್ಲುವಿಕೆಯಲ್ಲಿ ಕುಶನಿಗೆ ಭಯವುಂಟಾಗಲಿಲ್ಲ.

೧೧೭. ಯುದ್ಧದಲ್ಲಿ ಇದರಿಂದ ಲಕ್ಷ್ಮಣನಿಗೆ ತೊಂದರೆಯಾದರೂ ಭಯವಿಲ್ಲವೆಂದು ತಿಳಿದು ಈ ಗಾರುಡಾಸ್ತ್ರವನ್ನು ಪ್ರಯೋಗಿಸಿದನು. ಈ ಗಾರುಡಾಸ್ತ್ರವನ್ನು ನೋಡಿ ಲಕ್ಷ್ಮಣನ ಶೌರ್ಯವು ಕುಂದಿಹೋಯಿತು.

೧೧೮. ಆ ಗಾರುಡಾಸ್ತ್ರವನ್ನು ನೋಡಿದುದರಿಂದಲೇ ಲಕ್ಷ್ಮಣನು ಹೆದರಿ ರಥದಿಂದ ಕೆಳಗೆ ಬಿದ್ದನು. ಹೀಗೆ ಲಕ್ಷ್ಮಣನು ರಥದಿಂದ ಕೆಳಗೆ ಬಿದ್ದುದನ್ನು ಶ್ರೀರಾಮಚಂದ್ರನು ನೋಡಿದನು.

೧೧೯. ಅವನು ಯಾಗದಲ್ಲಿ ದೀಕ್ಷೆಹೊಂದಿದ್ದರೂ ಕೂಡ ಬೇಗನೆ ಧನುರ್ಬಾಣಗಳನ್ನು ತೆಗೆದುಕೊಂಡು ಬತ್ತಳಿಕೆಯನ್ನು ಕಟ್ಟಿಕೊಂಡು ಯಜ್ಞಕುಂಡದ ಎದುರಿಗೆ ಇದ್ದುಕೊಂಡು ಧನುಸ್ಸಿಗೆ ಬ್ರಹ್ಮಾಸ್ತ್ರವನ್ನು ಹೂಡಿದನು.

ಮುಮೋಚ ಬಾಣಮಾಕಾಶೇ ಗಾರುಡೋಪರಿ ಸಾದರಂ ।
ತೇನ ತಚ್ಛಾಂತಿಮಗಮದ್ಬ್ರಹ್ಮಾಸ್ತ್ರೇಣ ತು ಗಾರುಡಂ ॥ ೧೨೦ ॥

ತತಃ ಕುಶಸ್ಸಂದಧೇ ಸ ಸರ್ಪಾಸ್ತ್ರಂ ರಾಘವೋಪರಿ ।
ಉವಾಚ ನಾಹಂ ಸೀತಾವತ್ಸುಲಭಶ್ಛಲಿತುಂ ತ್ವಯಾ ॥ ೧೨೧ ॥

ಜನಾನ್ದರ್ಶಯಿತುಂ ಸ್ವೀಯಂ ಪೌರುಷಂ ಜಾನಕೀ ವನೇ ।
ತ್ಯಕ್ತಾ ತ್ವಯಾ ವೃಥಾ ಪೂರ್ವಂ ಜಾನೇಹಂ ತವ ಚೇಷ್ಟಿತಂ ॥ ೧೨೨ ॥

ವಾಲ್ಮೀಕಿಶಿಕ್ಷಿತಾಂ ವಿದ್ಯಾಂ ಮಮಾದ್ಯ ತ್ವಂ ವಿಲೋಕಯ ।
ನೋ ಚೇತ್ತ್ವಂ ಯಾಹಿ ಶರಣಂ ವಾಲ್ಮೀಕಿಂ ಜಾನಕೀಮಪಿ ॥ ೧೨೩ ॥

---

೧೨೦. ಆ ಗಾರುಡಾಸ್ತ್ರವು ಲಕ್ಷ್ಮಣನನ್ನು ಕೊಲ್ಲದಿರಲೆಂದೂ, ಲಕ್ಷ್ಮಣನು ಬದುಕಲೆಂಬಾಸೆಯಿಂದಲೂ ರಾಮನು ಗಾರುಡಾಸ್ತ್ರದಮೇಲೆ ಆ ಬ್ರಹ್ಮಾಸ್ತ್ರವನ್ನು ಬಿಟ್ಟನು. ರಾಮನು ಬಿಟ್ಟ ಈ ಬ್ರಹ್ಮಾಸ್ತ್ರದಿಂದ ಲವನ ಗಾರುಡಾಸ್ತ್ರವು ಶಾಂತವಾಯಿತು.

೧೨೧. ರಾಮನು ಬ್ರಹ್ಮಾಸ್ತ್ರವನ್ನು ಬಿಟ್ಟು ಗಾರುಡಾಸ್ತ್ರವನ್ನು ನಾಶಪಡಿಸಿದುದನ್ನು ನೋಡಿ ರಾಮನಮೇಲೆ ಕುಶನು ಸರ್ಪಾಸ್ತ್ರವನ್ನು ಹೂಡಿದನು, ಮತ್ತು ರಾಮನನ್ನು ಕುರಿತು ಇಂತೆಂದು ಹೇಳಿದನು.

೧೨೨. ಎಲೈ ರಾಮನೇ! ಮೋಸಹೋಗಲು ನಾನು ಸೀತೆಯಂತೆ ಸುಲಭಸಾಧ್ಯನಲ್ಲ. ನೀನು ನಿನ್ನ ಪೌರುಷವನ್ನು ಜನರಿಗೆ ತೋರಿಸಲು ಸೀತೆಯನ್ನು ಕಾಡಿಗೆ ಅನ್ಯಾಯವಾಗಿ ಓಡಿಸಿಬಿಟ್ಟೆ. ನಿನ್ನ ಬೂಟಾಟಿಕೆಯು ನನಗೆ ಗೊತ್ತಿದೆ.

೧೨೩. ವಾಲ್ಮೀಕಿಯಿಂದ ನಾನು ಕಲಿತಿರುವ ವಿದ್ಯೆಯನ್ನು ಈಗ ನೀನು ನೋಡು. ಹಾಗೆ ನನ್ನೊಡನೆ ನಿನಗೆ ಯುದ್ಧಮಾಡಲು ಆಗದಿದ್ದರೆ ಜಾನಕಿಯನ್ನೂ ವಾಲ್ಮೀಕಿಯನ್ನೂ ಶರಣುಹೊಂದು.

ತದ್ವಾಕ್ಯೈರ್ಭಿನ್ನಮನಸಾ ರಾಮಸ್ಸಾರ್ಪಂ ವಿಲೋಕ್ಯ ತತ್ ।
ಔತ್ವಸ್ತ್ರಂ ಸಸೃಜೇ ಘೋರಂ ತೇನ ತಚ್ಛಾಂತಿಮಾಪ ವೈ ॥ ೧೨೪ ॥

ಸಂದಧೇ ಸಾರಮೇಯಾಸ್ತ್ರಂ ಕುಶಸ್ತಂ ರಾಘವಂ ಪುನಃ ।
ರಾಮೋಽಪಿ ಮೌಸಲಾಸ್ತ್ರೇಣ ಸಾರಮೇಯಾನ್ಯವಾರಯತ್ ॥ ೧೨೫ ॥

ವಹ್ನ್ಯಸ್ತ್ರಂ ಸಸೃಜೇ ಘೋರಂ ಕುಶೋಽಪಿ ರಾಘವಂ ಜವಾತ್ ।
ನ್ಯವಾರಯಚ್ಚ ತದ್ರಾಮೋ ಮೇಘಾಸ್ತ್ರೇಣ ಸ ಲೀಲಯಾ ॥ ೧೨೬ ॥

ವಾಯವ್ಯಂ ಸಸೃಜೇ ರಾಮಂ ಜಾನಕೀಜಠರೋದ್ಭವಃ ।
ನಿವಾರಯಚ್ಚ ತದ್ರಾಮೋ ಪರ್ವತಾಸ್ತ್ರೇಣ ಲೀಲಯಾ ॥ ೧೨೭ ॥

---

೧೨೪. ಕುಶನ ಈ ವಾಗ್ಬಾಣದಿಂದ ರಾಮನು ಮನಸ್ಸಿನಲ್ಲಿ ನೊಂದವನಾಗಿ ಅವನು ತೊಟ್ಟಿದ್ದ ಸರ್ಪಾಸ್ತ್ರವನ್ನು ನೋಡಿದನು. ಅದರ ಶಾಂತಿಗೋಸ್ಕರವಾಗಿ ಮಾರ್ಜಾಲಾಸ್ತ್ರವನ್ನು ಬಿಟ್ಟು ಅದನ್ನು ಶಾಂತಿಪಡಿಸಿದನು.

೧೨೫. ಸರ್ಪಾಸ್ತ್ರವು ಶಾಂತವಾಗಲು ಕುಶನು ರಾಘವನಮೇಲೆ ಶುನಕಾಸ್ತ್ರವನ್ನು ಬಿಟ್ಟನು. ರಾಮನು ಮೌಸಲಾಸ್ತ್ರವನ್ನು ಬಿಟ್ಟು ಆ ಆ ಸಾರಮೇಯಾಸ್ತ್ರವನ್ನು ನಿವಾರಿಸಿದನು.

೧೨೬. ಅನಂತರ ಕುಶನು ರಾಮನಮೇಲೆ ಘೋರವಾದ ಆಗ್ನೇಯಾಸ್ತ್ರವನ್ನು ಬಿಟ್ಟನು. ರಾಮನು ಮೇಘಾಸ್ತ್ರವನ್ನು ಬಿಟ್ಟು ಅದನ್ನು ನಿವಾರಿಸಿದನು.

೧೨೭. ಅನಂತರ ಕುಶನು ರಾಮನಮೇಲೆ ವಾಯುವ್ಯಾಸ್ತ್ರವನ್ನು ಬಿಟ್ಟನು. ಅದನ್ನು ಕೂಡ ರಾಮನು ಪರ್ವತಾಸ್ತ್ರವನ್ನು ಬಿಟ್ಟು ಶಾಂತಿ ಹೊಂದಿಸಿದನು.

ವಜ್ರಾಸ್ತ್ರಂ ಸಸೃಜೇ ರಾಮಂ ಸೀತೇಯಃ ಪರಮಾದರಾತ್ ।
ಯಾಮ್ಯಾಸ್ತ್ರೇಣಾಥ ರಾಮೋಽಪಿ ವಜ್ರಾಸ್ತ್ರಂ ತನ್ನ್ಯವಾರಯತ್ ॥

ಬ್ರಹ್ಮಾಸ್ತ್ರಂ ಸಸೃಜೇ ರಾಮಂ ಸೀತೇಯಃ ಪರಮಾದರಾತ್ ।
ಹಾಹಾಕಾರಸ್ತದಾ ಚಾಸೀದ್ರಾಘವಸ್ಯಾಧ್ವರಾಂಗಣೇ ॥ ೧೨೯ ॥

ನ್ಯವಾರಯತ್ತದ್ಬ್ರಹ್ಮಾಸ್ತ್ರಂ ವೈಷ್ಣವೇನ ರಘೂತ್ತಮಃ ।
ತತೋ ರಾಮಂ ಕುಶಸ್ತೀಕ್ಷ್ಣಾನ್ನಾರಾಚಾಂಶ್ಛತಶಃ ಪುನಃ ॥ ೧೩೦ ॥

ಮುಮೋಚ ರಾಘವಶ್ಚಾಪಿ ಮಾರ್ಗಣಾಂಶ್ಛತಶಃ ಕುಶಂ ।
ಏವಂ ತತ್ತುಮುಲಂ ಯುದ್ಧಂ ಬಭೂವ ಪ್ರಹರಂ ತಯೋಃ ॥ ೧೩೧ ॥

ತದಾಸೀತ್ಕೌತುಕಂ ರಾಮಕುಶಯೋರ್ಯುಧ್ಯತೋರ್ಮಹತ್ ।
ರಾಮಚಾಪವಿನಿರ್ಮುಕ್ತಾ ಗತಾ ಯೇ ಯೇ ಪತತ್ರಿಣಃ ॥ ೧೩೨ ॥

---

೧೨೮. ಮತ್ತೆ ಕುಶನು ರಾಮನಮೇಲೆ ವಜ್ರಾಸ್ತ್ರವನ್ನು ಬಿಟ್ಟನು. ಯಮಾಸ್ತ್ರವನ್ನು ರಾಮನು ಬಿಟ್ಟು ಅದನ್ನು ಶಾಂತಿಪಡಿಸಿದನು.

೧೨೯. ಅನಂತರ ಕುಶನು ರಾಮನಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟನು. ಇದನ್ನು ನೋಡಿ ಆ ಯಾಗಮಂಟಪದಲ್ಲಿ ಆಗ ಬಹುವಾಗಿ ಹಾಹಾಕಾರವೆದ್ದಿತು.

೧೩೦. ಶ್ರೀರಾಮನು ತನ್ನ ವೈಷ್ಣವಾಸ್ತ್ರದಿಂದ ಆ ಬ್ರಹ್ಮಾಸ್ತ್ರವನ್ನು ಶಾಂತಿಪಡಿಸಿದನು. ಅನಂತರವೂ ಕುಶನು ರಾಮನಮೇಲೆ ಅನೇಕವಾದ ಬಾಣಗಳನ್ನು ಬಿಟ್ಟನು.

೧೩೧. ರಾಮನೂ ಕೂಡ ಕುಶನಮೇಲೆ ಅನೇಕವಾದ ಬಾಣವನ್ನು ಬಿಟ್ಟನು. ಹೀಗೆ ಒಬ್ಬರಿಗೊಬ್ಬರು ಬಾಣಗಳನ್ನು ಬಿಡುತ್ತ ತುಮುಲಯುದ್ಧವನ್ನು ಮಾಡಿದರು.

೧೩೨–೧೩೪. ರಾಮಕುಶರು ಹೀಗೆ ಯುದ್ಧಮಾಡುತ್ತಿರಲು ಬಹು ಆಶ್ಚರ್ಯವುಂಟಾಯಿತು. ರಾಮನು ಧನುಸ್ಸಿನಿಂದ ಬಿಟ್ಟ ಬಾಣಗಳೆಲ್ಲವೂ ಕುಶನ

ತೇ ತೇ ಕುಶಸ್ಯೋತ್ತಮಾಂಗೋಪರಿಷ್ಟಾದ್ಧರಣೀ ತಲೇ ।
ಪತಂತಿ ಸ್ಮ ತಥಾ ಯೇ ಯೇ ಕುಶಚಾಪವಿನಿರ್ಗತಾಃ ॥ ೧೩೩ ॥

ಶರಾಸ್ತೇ ರಾಮಚಂದ್ರಸ್ಯ ಪತಂತಿ ಸ್ಮ ಪದಾಂತಿಕೇ ।
ತದ್ದೃಷ್ಟ್ವಾ ಕೌತುಕಂ ರಾಮೋ ವಿಸ್ಮಯಾವಿಷ್ಟಮಾನಸಃ ॥ ೧೩೪ ॥

ಆಜ್ಞಾಪಯತ್ಸ್ವಸಚಿವಂ ಗಚ್ಛ ವಾಲ್ಮೀಕಿಸನ್ನಿಧಿಂ ।
ಪೃಚ್ಛಸ್ವ ತಂ ನಮಸ್ಕೃತ್ಯ ಕೌ ತೇ ಶಿಷ್ಯಾವಿಮೌ ಬಲೀ ॥ ೧೩೫ ॥

ತತೋ ಜ್ಞಾತ್ವಾನಯೋರ್ಘಾತೇ ಕರಿಷ್ಯಾಮಿ ಮತಿಂ ಕ್ಷಣಾತ್ ।
ತಥೇತಿ ರಾಮವಚನಾತ್ಸ ಮಂತ್ರೀ ರಥಮಾಸ್ಥಿತಃ ॥ ೧೩೬ ॥

ಕ್ರೋಶದ್ವಯಾಂತರೇಣೈವ ಸವ್ಯಂ ಕೃತ್ವಾ ಕುಶಂ ಲವಂ ।
ದೃಷ್ಟ್ವಾ ನತ್ವಾಥ ವಾಲ್ಮೀಕಿಂ ರಾಮವಾಕ್ಯಂ ನ್ಯವೇದಯತ್ ॥ ೧೩೭ ॥

ತಲೆಯಮೇಲಿನಿಂದ ಹೋಗಿ ನೆಲದಮೇಲೆ ಬೀಳುತ್ತಿದ್ದುವು. ಕುಶನು ಬಿಟ್ಟ ಬಾಣಗಳೂ ರಾಮಚಂದ್ರನ ಪಾದಪದ್ಮಗಳಲ್ಲಿ ಬೀಳುತ್ತಿದ್ದುವು. ಇದನ್ನು ನೋಡಿ ರಾಮನಿಗೆ ಮನಸ್ಸಿನಲ್ಲಿ ಬಹುವಾಗಿ ಆಶ್ಚರ್ಯವಾಯಿತು.

೧೩೫. ಆಗ ರಾಮನು ತನ್ನ ಮಂತ್ರಿಯನ್ನು ಕರೆದು ಎಲೈ ಮಂತ್ರಿಯೇ! ನೀನು ವಾಲ್ಮೀಕಿಯ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಬಲಿಷ್ಠರಾದ ಈ ನಿನ್ನ ಶಿಷ್ಯರು ಯಾರು ? ಎಂದು ಕೇಳು. ಎಂದು ಆಜ್ಞಾಪಿಸಿದನು.

೧೩೬. ಅವರಾರೆಂಬುದನ್ನು ತಿಳಿದು ಅವರನ್ನು ಕೊಲ್ಲುವುದರಲ್ಲಿ ಕ್ಷಣಕಾಲದಲ್ಲಿಯೇ ಉಪಾಯವನ್ನು ಯೋಚಿಸುತ್ತೇನೆ. ಎನ್ನಲು ಮಂತ್ರಿಯು ಹಾಗೆಯೇ ಆಗಲೆಂದು ಹೇಳಿ ಕ್ಷಣಕಾಲದಲ್ಲಿ ರಥದಲ್ಲಿ ಕುಳಿತನು.

೧೩೭. ಈ ಮಂತ್ರಿಯು ಲವಕುಶರನ್ನು ಬಲಕ್ಕೆ ಬಿಟ್ಟುಕೊಂಡು ಎರಡು ಕ್ರೋಶಗಳ ದೂರದಲ್ಲಿರುವ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ವಾಲ್ಮೀಕಿಯನ್ನು ನೋಡಿ ನಮಸ್ಕರಿಸಿ ರಾಮನ ಮಾತನ್ನು ವಿಜ್ಞಾಪಿಸಿದನು.

ಮುನಿಃ ಪ್ರಾಹ ಮಂತ್ರಿಣಂ ತ್ವಂ ವದ ರಾಮಾಯ ಮೇ ವಚಃ ।
ಸಭಾಮಧ್ಯೇ ಗಾಯನಸ್ಯ ಕಾಲೇ ಶ್ವೋ ವಿದಿತಂ ತವ ॥ ೧೩೮ ॥

ಭವಿಷ್ಯತಿ ಸಮಸ್ತಂ ಹಿ ವೃತ್ತಂ ಬಾಲಕಯೋಶ್ಶುಭಂ ।
ತತೋ ಮಂತ್ರಿರ್ಮುನೇರ್ವಾಕ್ಯಂ ರಾಘವಾಯ ನ್ಯವೇದಯತ್ ॥೧೩೯॥

ಕುಶಂ ಲವಂ ಸಮಾಹೂಯ ವಾಲ್ಮೀಕಿರಪಿ ತೌ ಮುದಾ ।
ಸಮಾಲಿಂಗ್ಯ ಕಥಾಭಿಸ್ತಾಂ ನಿನಾಯ ರಜನೀಂ ಸುಖಂ ॥ ೧೪೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಜನ್ಮಕಾಂಡೇ ಕುಶಲವಯೋಃ ಪರಾಕ್ರಮ ವರ್ಣನಂ ನಾಮ ಸಪ್ತಮಸ್ಸರ್ಗಸ್ಸಮಾಪ್ತಃ

---

೧೩೮. ಆಗ ಆ ಮುನಿಯು ಮಂತ್ರಿಯನ್ನು ಕುರಿತು ಎಲೈ ರಾಮನೆ ! ನಾಳೆಯದಿನ ಸಭೆಯ ಮಧ್ಯದಲ್ಲಿ ಗಾಯನ ಕಾಲದಲ್ಲಿ ಆ ಹುಡುಗರಾರೆಂಬುದು ತಿಳಿಯುತ್ತದೆ. ಎಂದು ಹೇಳು. ಎಂದನು.

೧೩೯. ಈ ಮಂತ್ರಿಯು ಈ ರೀತಿಯಾಗಿ ವಾಲ್ಮೀಕಿಮುನಿಯು ಹೇಳಿದುದನ್ನು ಕೇಳಿ ಹಿಂದಿರುಗಿ ಹೋಗಿ ಅಂತೆಯೇ ಶ್ರೀರಾಮನಿಗೆ ವಿಜ್ಞಾಪಿಸಿದನು.

೧೪೦. ಇತ್ತ ವಾಲ್ಮೀಕಿಯು ಕುಶನನ್ನೂ, ಲವನನ್ನೂ ಕರೆಸಿ ಸಂತೋಷದಿಂದ ಅವರನ್ನು ಆಲಿಂಗಿಸಿಕೊಂಡು ವಿಧ ವಿಧವಾದ ಕಥೆಗಳನ್ನು ಹೇಳುತ್ತ ಆ ರಾತ್ರಿಯೆಲ್ಲವನ್ನೂ ಸುಖವಾಗಿ ಕಳೆದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಕುಶಲವರ ಪರಾಕ್ರಮ ವರ್ಣನವೆಂಬ ಏಳನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

॥ ಏಳನೆಯ ಸರ್ಗದ ಸಾರಾಂಶವು ॥

ಹೀಗಿರುತ್ತಿರಲು ಶ್ರೀರಾಮನು ಕೊನೆಯದಾದ ಅಶ್ವಮೇಧಯಾಗವನ್ನು ಪ್ರಾರಂಭಿಸಿ ಕುದುರೆಯನ್ನು ಬಿಟ್ಟನು. ಅದನ್ನು ರಕ್ಷಿಸಲು ಶತ್ರುಘ್ನನು ಹೊರಟನು. ಆ ಕುದುರೆಯು ಎಲ್ಲ ಕಡೆಯನ್ನೂ ಸುತ್ತಿಕೊಂಡು ಯಜ್ಞಮಂಟಪಕ್ಕೆ ಹಿಂದಿರುಗಿ ಬರುತ್ತಿದ್ದಿತು.

ಇತ್ತ ವಾಲ್ಮೀಕಿಯೂ ಕೂಡ ಶಿಷ್ಯರೊಡನೆಯೂ ಲವಕುಶರೊಡನೆಯೂ ಸೀತೆಯೊಡನೆಯೂ ರಾಮನ ಆಹ್ವಾನದಂತೆ ಯಜ್ಞಮಂಟಪಕ್ಕೆ ಬಂದು ಆರುಮೈಲಿಗಳ ದೂರದಲ್ಲಿ ಒಂದು ಪರ್ಣಶಾಲೆಯನ್ನು ಮಾಡಿಕೊಂಡಿದ್ದನು. ವಾಲ್ಮೀಕಿಯು ಲವಕುಶರಿಗೆ ತಾನು ಹೇಳಿಕೊಟ್ಟಿರುವ ರಾಮಾಯಣವನ್ನು ಕೇಳಿದವರ ಬಳಿಯಲ್ಲೆಲ್ಲಾ ಹಾಡಬೇಕೆಂದೂ ಅವರಿಂದ ಏನೊಂದನ್ನೂ ತೆಗೆದು ಕೊಳ್ಳಕೂಡದೆಂದೂ ಹೇಳಿದನು. ಅವರು ಅಂತೆಯೇ ಎಲ್ಲ ಕಡೆಯಲ್ಲಿಯೂ ಮುನಿಗಳ ವೇಷದಲ್ಲಿಯೇ ಹಾಡುತ್ತಿದ್ದರು. ಇದು ರಾಮನ ಕಿವಿಗೂ ಬೀಳಲು ಅವನೂ ತನ್ನ ಬಳಿಗೆ ಕರೆಸಿ ಎಲ್ಲರೊಡನೆ ಕೂಡಿಕೊಂಡು ಕೇಳಿದನು. ಅಂದು ಹೊತ್ತಾದುದರಿಂದ ಪೂರ್ತಿಯಾಗಿ ಕೇಳಲು ಸಾಧ್ಯವಾಗದೆ ಮಾರನೆಯದಿನ ಹೇಳುವಂತೆ ಹೇಳಿಕಳುಹಿಸಿದನು. ಆಗ ಅವರಿಗೆ ಬಹುವಾದ ಧನವನ್ನೂ ವಸ್ತ್ರಾಭರಣಗಳನ್ನೂ ಬಹುಮಾನವನ್ನಾಗಿ ಕೊಡಲು ಅವರು ಅದನ್ನು ತೆಗೆದು ಕೊಳ್ಳಲಿಲ್ಲ. ಹಿಂದಿರುಗಿ ವಾಲ್ಮೀಕಿಯ ಬಿಡಾರಕ್ಕೆ ಹೊರಟುಹೋದರು. ಕುಶನು ಇಲ್ಲಿ ನಡೆದುದನ್ನೆಲ್ಲಾ ಸೀತೆಗೂ ವಾಲ್ಮೀಕಿಗೂ ತಿಳಿಸಿ ಸ್ನಾನಕ್ಕೋಸ್ಕರ ಗಂಗೆಗೆ ಹೊರಟುಹೋದನು. ಲವನು ಅಲ್ಲಿಯೇ ಋಷಿಗಳ ಮಕ್ಕಳೊಡನೆ

ಆಟವಾಡುತ್ತಿದ್ದನು. ಈ ಸಮಯದಲ್ಲಿ ಯಾಗದ ಕುದುರೆಯು ಎಲ್ಲಾ ಕಡೆಯನ್ನೂ ಸುತ್ತಿಕೊಂಡು ಆ ದಾರಿಯಲ್ಲಿ ಯಾಗಮಂಟಕ್ಕೆ ಹೋಗುತ್ತಿದ್ದಿತು. ಆಗ ಲವನು ಆ ಕುದುರೆಯನ್ನು ಹಿಡಿದು ಒಂದು ಮರಕ್ಕೆ ಕಟ್ಟಿದನು. ಶತ್ರುಘ್ನನು ಇದನ್ನು ನೋಡಿ ಹುಡುಗಾಟಕ್ಕೆ ಮಾಡಿರುವ ಕೆಲಸವೆಂದು ತಿಳಿದು ಆಳುಗಳನ್ನು ಅದನ್ನು ಬಿಡಿಸಲು ಕಳುಹಿಸಿದನು.

ಆ ಆಳುಗಳು ಬಂದುದನ್ನು ನೋಡಿ ಲವನು ಒಂದು ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಅದಕ್ಕೆ ವಾಯುವ್ಯಾಸ್ತ್ರವನ್ನು ಮಂತ್ರಿಸಿಬಿಟ್ಟನು. ಇದರಿಂದ ಆ ಶತ್ರುಘ್ನನೊಡನೆ ಸೈನ್ಯವೆಲ್ಲವೂ ಆಕಾಶದಲ್ಲಿ ಹಾರಾಡಲು ಮೊದಲಿಟ್ಟುವು. ಇದನ್ನು ಶ್ರೀರಾಮನು ತಿಳಿದು ತನ್ನ ಬಳಿಯಲ್ಲಿದ್ದ ಕಪಿವೀರರೇ ಮುಂತಾದವರನ್ನು ಯುದ್ಧಕ್ಕೆ ಕಳುಹಿಸಿದನು.

ಲವನು ಇವರನ್ನು ನೋಡಿ ಮೋಹನಾಸ್ತ್ರವನ್ನು ಬಿಟ್ಟು ಅವರಿಗೆ ಜ್ಞಾನ ತಪ್ಪುವಂತೆಮಾಡಿ ಸುಮಂತ್ರ, ಭರತರನ್ನು ಕಂಕುಳಲ್ಲಿ ಇರುಕಿಕೊಂಡು ಹನುಮಂತ ಸುಗ್ರೀವರನ್ನೂ ಕೈಯ್ಯಲ್ಲಿ ಹಿಡಿದುಕೊಂಡು ಪರ್ಣಶಾಲೆಗೆ ಹೋಗಿ ಅವರನ್ನು ಸೀತೆಗೆ ತೋರಿಸಿದನು. ಸೀತೆಯು ಅವರನ್ನು ಬಿಡಿಸಿದಳು.

ರಾಮನು ಇದನ್ನು ಕೇಳಿ ಲಕ್ಷ್ಮಣನನ್ನು ಕಳುಹಿಸಲು ಲವನು ಆ ಲಕ್ಷ್ಮಣನನ್ನು ಹೀಯಾಳಿಸಿ ಅವನ ಜೊತೆಯಲ್ಲಿ ಬಂದಿದ್ದವರಮೇಲೆ ಬಾಣವನ್ನು ಬಿಟ್ಟು ಅವರು ಯಾಗಮಂಟಪದಲ್ಲಿ ಬೀಳುವಂತೆ ಮಾಡಿದನು. ಮತ್ತು ಲಕ್ಷ್ಮಣನೊಡನೆ ಯುದ್ಧಮಾಡಲು ನಿಂತನು. ಲಕ್ಷ್ಮಣನ ಬಾಣಗಳೆಲ್ಲಾ ಆ ಲವನಲ್ಲಿ ವ್ಯರ್ಥವಾಗಲು ಕೊನೆಗೆ ಅವನಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟನು. ಇದರಿಂದ ಲವನು ನಿಶ್ಚೇಷ್ಟಿತನಾಗಲು ಲಕ್ಷ್ಮಣನು ಕುದುರೆಯನ್ನೂ ಆ ಲವನನ್ನೂ ರಾಮನ ಬಳಿಗೆ ಕೊಂಡು ಹೋದನು.

ರಾಮನು ಇವನ ದೇಹದಲ್ಲಿ ಸ್ವಲ್ಪವೂ ಗಾಯವಿಲ್ಲದಿರುವುದನ್ನೂ ಇವನ ಪರಾಕ್ರಮವನ್ನೂ ನೋಡಿ ಇವನನ್ನು ಕೊಲ್ಲಲು ನೀನು ಸಾಯುವುದಕ್ಕೆ

ಉಪಾಯವೇನೆಂಬುದನ್ನು ಆ ಲವನನ್ನೇ ಕೇಳಿದನು. ಅದಕ್ಕೆ ಅವನು ಅವರನ್ನು ವಂಚಿಸಿ ನನ್ನಮೇಲೆ ನೀರನ್ನು ಸುರಿದರೆ ನಾನು ಸಾಯುತ್ತೇನೆಂದನು. ವಾಸ್ತವದಲ್ಲಿ ಇವನಮೇಲೆ ನೀರನ್ನು ಸುರಿದಷ್ಟೂ ಪೌರುಷವು ಹೆಚ್ಚುತ್ತಿದ್ದಿತು.

ರಾಮನು ಅಂತೆಯೇ ಮಾಡಿಸಿದನು. ಇದರಿಂದ ಲವನು ಬಹುವಾಗಿ ಬೆಳೆಯುತ್ತ ಬಲಿಷ್ಠನಾಗುತ್ತಿರಲು ಇದನ್ನು ಕಂಡ ಲಕ್ಷ್ಮಣನು ಸುಳ್ಳೆಂದು ತಿಳಿದು ಲವನನ್ನು ಕೇಳಲು ದೀಪವು ಆರಿಹೋಗುವಾಗ ಹೆಚ್ಚುವಂತೆ ನಾನೂ ಕೊನೆಗಾಲ ದಲ್ಲಿ ಹೆಚ್ಚಿ ಕೊನೆಗಾಣುವೆನೆಂದನು. ಇಷ್ಟುವೇಳೆಗೆ ಬ್ರಹ್ಮಾಸ್ತ್ರವೂ ಬಿಟ್ಟುಬಿಟ್ಟಿತು.

ಸ್ನಾನಕ್ಕೆ ಹೋಗಿದ್ದ ಅವನು ಜನಗಳು ಬಹುವಾಗಿ ನೀರನ್ನು ತೆಗೆದು ಕೊಂಡು ಹೋಗುತ್ತಿದ್ದುದನ್ನು ನೋಡಿ ಅವರನ್ನು ಕೇಳಿ ವಿಷಯವನ್ನು ತಿಳಿದು ಕೊಂಡು ಲವನನ್ನು ಬಿಡಿಸಲು ಆಶ್ರಮಕ್ಕೆ ಹೋಗಿ ಧನುರ್ಬಾಣಗಳಿಂದ ಸಿದ್ಧನಾಗಿ ಹೊರಟನು. ಕುಶನು ಯುದ್ಧಕ್ಕೆ ಬಂದುದನ್ನು ನೋಡಿ ಲಕ್ಷ್ಮಣನು ಯುದ್ಧಕ್ಕೆ ಹೊರಟನು. ಲವನು ಅವನಮೇಲೆ ಗರುಡಾಸ್ತ್ರವನ್ನು ಬಿಟ್ಟು ಕೆಡವಿದನು. ಇದನ್ನು ನೋಡಿ ರಾಮನು ದೂರದಿಂದಲೇ ಆ ಗರುಡಾಸ್ತ್ರವನ್ನು ಶಾಂತಿಮಾಡಿದನು. ಅವರಿಬ್ಬರಿಗೂ ಅಸ್ತ್ರಗಳ ಯುದ್ಧವು ನಡೆಯುತ್ತ ಕೊನೆಗೆ ಕುಶನು ರಾಮನಮೇಲೆ ಬ್ರಹ್ಮಾಸ್ತ್ರವನ್ನು ಹೂಡಿದನು. ಅದನ್ನೂ ರಾಮನು ನಿವಾರಿಸಿದನು. ಈ ಸಮಯದಲ್ಲಿ ರಾಮನು ತಾನು ಬಿಡುತ್ತಿದ್ದ ಬಾಣಗಳು ಕುಶನ ತಲೆಯಮೇಲಿನಿಂದ ಹೊರಕ್ಕೂ ಅವನು ಬಿಡುತ್ತಿರುವ ಬಾಣಗಳು ತನ್ನ ಪಾದಗಳಮೇಲೆಯೂ ಬೀಳುತ್ತಿದ್ದುದನ್ನು ನೋಡಿ ಇದನ್ನು ತಿಳಿಯಲು ವಾಲ್ಮೀಕಿಯ ಬಳಿಗೆ ತನ್ನ ಮಂತ್ರಿಯನ್ನು ಕಳುಹಿಸಿದನು. ಮಂತ್ರಿಯು ರಾಮನ ಮಾತನ್ನು ವಾಲ್ಮೀಕಿಗೆ ಹೇಳಲು ಅವನು ನಾಳೆ ಸಭೆಯ ಮಧ್ಯದಲ್ಲಿ ಗಾನಕಾಲದಲ್ಲಿ ಎಲ್ಲವೂ ವಿಶದವಾಗುವುದೆಂದು ಹೇಳು ಎಂದು ಹೇಳಿ ಕಳುಹಿಸಿದನು.

ವಾಲ್ಮೀಕಿಯೂ ಕೂಡ ಆ ಇಬ್ಬರು ಹುಡುಗರನ್ನೂ ಹಿಂದಕ್ಕೆ ಕರಸಿಕೊಂಡು ವಿವಿಧವಾದ ಕಥೆಗಳನ್ನು ಹೇಳುತ್ತ ಆ ರಾತ್ರಿಯನ್ನು ಕಳೆದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ಅಷ್ಟಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥ ಪ್ರಭಾತೇ ರಾಮೇಣ ಸಮಾಹೂತಾವುಭೌ ಶಿಶೂ ।
ನತ್ವಾ ಮುನಿಂ ಮಾತರಂ ಚ ಸಭಾಯಾಂ ಜಗ್ಮತುರ್ಮುದಾ ॥ ೧ ॥

ವಾಲ್ಮೀಕೇರಾಜ್ಞಯಾ ಬಾಲೌ ಜಟಾಕೃಷ್ಣಾಜಿನಾಂಬರೌ ।
ಜನ್ಮಕಾಂಡಂ ತ್ವೇಕಮೇವ ಜಗತುಸ್ತೌ ಪಿತುಃ ಪುರಃ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಎಂಟನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ಅನಂತರ ಬೆಳಗಾಗುತ್ತಲೂ ರಾಮನು ಆ ಇಬ್ಬರು ಬಾಲಕರನ್ನೂ ಕರೆಸಿದನು. ಆ ಬಾಲಕರು ವಾಲ್ಮೀಕಿಗೂ ಸೀತೆಗೂ ನಮಸ್ಕರಿಸಿ ಸಂತೋಷದಿಂದ ಆ ಸಭೆಗೆ ಹೋದರು.

೨. ಅವರಿಬ್ಬರೂ ಆ ವಾಲ್ಮೀಕಿಯ ಅಪ್ಪಣೆಯಂತೆ ಜಟೆ ಕೃಷ್ಣಾಜಿನಗಳನ್ನು ಧರಿಸಿಕೊಂಡು ರಾಮನ ಸಭೆಗೆ ಬಂದು ಅಲ್ಲಿ ಜನ್ಮಕಾಂಡ ಒಂದನ್ನೇ ಹಾಡಿದರು.

ಜನ್ಯೈಃ ಶ್ರುತ್ವಾ ಸ್ವಚರಿತಂ ರಾಮೋಽಭೂದತಿವಿಸ್ಮಿತಃ |
ಆಸನ್ ಜನಾಶ್ಚಾಪಿ ಸರ್ವೇ ವಿಸ್ಮಯಾವಿಷ್ಟಮಾನಸಾಃ || ೩ ||

ಜ್ಞಾತ್ವಾ ಸೀತಾಕುಮಾರೌ ತೌ ಸಂತೋಷಂ ಪರಮಂ ಯಯುಃ |
ಏತಸ್ಮಿನ್ನಂತರೇ ಸರ್ವೇ ಲವವಾಯ್ವಸ್ತ್ರಪೀಡಿತಾಃ || ೪ ||

ಶತ್ರುಘ್ನಾದ್ಯಾ ಯಯುಸ್ತತ್ರ ಯಾನಸ್ಥಾಶ್ಚ ಸ್ವಜೀವಿನಃ |
ಅಂಗದಾದ್ಯಾಃ ಪಾರ್ಥಿವಾಶ್ಚ ಮೋಹನಾಸ್ತ್ರೈಕಜೀವಿತಾಃ || ೫ ||

ಯಯುಸ್ಸವಾನರಾಸ್ಸರ್ವೇ ಲಕ್ಷ್ಮಣೋಽಪಿ ಯಯಾವರುಕ್ |
ಸರ್ವೇ ನತ್ವಾ ರಾಮಚಂದ್ರಂ ತಸ್ಥುಸ್ತಸ್ಯಾಂತಿಕೇ ಮುದಾ || ೬ ||

ಅಥ ಸಂಮಂತ್ರ್ಯ ರಾಮೋಽಪಿ ತೌ ವಿಸೃಜ್ಯಾದರೇಣ ಹಿ |
ರಾಕ್ಷಸೇಂದ್ರಂ ಲಕ್ಷ್ಮಣಂ ಚ ಶತ್ರುಘ್ನಂ ಮಕರಧ್ವಜಂ || ೭ ||

---

೩. ಅಲ್ಲಿರತಕ್ಕ ಜನಗಳೊಡನೆ ರಾಮನು ತನ್ನ ಚರಿತ್ರೆಯನ್ನು ಕೇಳಿ ಬಹುವಾಗಿ ಆಶ್ಚರ್ಯಪಟ್ಟನು. ಅಲ್ಲಿದ್ದ ಜನಗಳೂ ಕೂಡ ಅದನ್ನು ಕೇಳಿ ಬಹುವಾಗಿ ಆಶ್ಚರ್ಯಪಟ್ಟರು.

೪–೬. ಅವರೆಲ್ಲರೂ ಕೂಡ ಈ ಮಕ್ಕಳು ಸೀತೆಯ ಮಕ್ಕಳೆಂಬುದನ್ನು ತಿಳಿದು ಬಹುವಾಗಿ ಸಂತೋಷಪಟ್ಟರು. ಇಷ್ಟರೊಳಗೆ ಆ ಲವನ ವಾಯ ವ್ಯಾಸ್ತ್ರದಿಂದ ತೊಂದರೆಪಟ್ಟಿದ್ದ ಶತ್ರುಘ್ನನೇ ಮುಂತಾದವರು ಅಲ್ಲಿಗೆ ಬಂದರು. ಮೋಹನಾಸ್ತ್ರಕ್ಕೆ ಒಳಗಾಗಿದ್ದ ಅಂಗದನೇ ಮುಂತಾದ ರಾಜರೂ ಅಲ್ಲಿಗೆ ಬಂದರು. ಹನುಮಂತನೇ ಮುಂತಾದ ಕಪಿಗಳೂ ಗಾಯಗೊಳ್ಳದಿದ್ದ ಲಕ್ಷ್ಮಣನೂ ಅಲ್ಲಿಗೆ ಬಂದನು. ಬಂದವರೆಲ್ಲರೂ ರಾಮಚಂದ್ರನಿಗೆ ನಮಸ್ಕರಿಸಿ ಆ ಸಭೆಯಲ್ಲಿ ಕುಳಿತರು.

೭–೮. ಅನಂತರ ರಾಮನು ಯೋಚಿಸಿ ಆ ಹುಡುಗರನ್ನು ಕಳುಹಿಸಿ ಬಿಟ್ಟನು. ರಾಕ್ಷಸೇಂದ್ರನಾದ ವಿಭೀಷಣನನ್ನೂ ಲಕ್ಷ್ಮಣ ಶತ್ರುಘ್ನರನ್ನೂ,

ಅಂಗದಂ ಚ ಸುಷೇಣಂ ಜಾಂಬವಂತಂ ವಚೋಽಬ್ರವೀತ್ ।
ಆನಯಧ್ವಂ ಮುನಿವರಂ ಸಸೀತಂ ದೇವಸಮ್ಮಿತಂ ॥ ೮ ॥

ಅದ್ಯಾಸ್ತು ಪರ್ಷದಾಂ ಮಧ್ಯೇ ಪ್ರತ್ಯಯೋ ನೈ ಸಭಾಂಗಣೇ ।
ಗಂಗಾಯಾ ದಕ್ಷಿಣೇ ತೀರೇ ಸಭಾ ಕಾರ್ಯಾಽಽಯುತಾ ಶುಭಾ ॥ ೯ ॥

ಕರೋತು ಶಪಥಂ ಸೀತಾ ಮಮಾಗ್ರೇ ಜಾಹ್ನವೀತಟೇ ।
ಮುನೀಶ್ವರಾದ್ಯಾಸ್ಸರ್ವೇ ತಾಂ. ಜಾನಂತು ಗತಕಲ್ಮಷಾಂ ॥ ೧೦ ॥

ತಥಾ ಮಮಾಪಿ ವಾಲ್ಮೀಕೇಶ್ಶುದ್ಧಿಂ ಜಾನಂತು ವೇಗತಃ ।
ಇತಿ ತದ್ವಚನಂ ಶ್ರುತ್ವಾ ಲಕ್ಷ್ಮಣಾದ್ಯಾ ಮುನಿಂ ಗತಾಃ ॥ ೧೧ ॥

ಮಕರಧ್ವಜನನ್ನೂ ಅಂಗದ ಸುಷೇಣರನ್ನೂ, ಜಾಂಬುವಂತನನ್ನೂ ಸೇರಿಸಿ ಅವರೊಡನೆ ಇಂತೆಂದನು. ಅಯ್ಯಾ! ನೀವೆಲ್ಲರೂ ಹೋಗಿ ದೇವತೆಗಳಿಗೆ ಸಮಾನನಾದ ಆ ವಾಲ್ಮೀಕಿಯನ್ನೂ ಸೀತೆಯನ್ನೂ ಕರೆದುಕೊಂಡು ಬನ್ನಿರಿ.

೯. ಈದಿನ ಸಭೆಯ ಮಧ್ಯದಲ್ಲಿ ಸೀತೆಯು ತನ್ನ ಪಾತಿವ್ರತ್ಯದ ವಿಷಯದಲ್ಲಿ ನಮಗೆ ನಂಬಿಕೆಯನ್ನುಂಟುಮಾಡಲಿ. ಆದ್ದರಿಂದ ಈ ಗಂಗೆಯ ದಕ್ಷಿಣ ದಡದಲ್ಲಿ ದೊಡ್ಡದಾಗಿಯೂ, ರಮ್ಯವಾಗಿಯೂ ಇರುವಂತೆ ಸಭೆಯನ್ನು ಸೇರಿಸಬೇಕು.

೧೦. ಈ ಗಂಗಾನದಿಯ ದಡದಲ್ಲಿ ಸೀತೆಯು ನನ್ನ ಎದುರಿನಲ್ಲಿ ತನ್ನ ಪಾತಿವ್ರತ್ಯ ಪ್ರಮಾಣವನ್ನು ತೋರಿಸುವಳು. ಮುನೀಶ್ವರರೇ ಮೊದಲಾದವರೆಲ್ಲರೂ ಅವಳು ಪಾಪರಹಿತಳೆಂಬುದನ್ನು ತಿಳಿಯಲಿ.

೧೧. ಅದೇ ರೀತಿಯಾಗಿ ಎಲ್ಲರೂ ನನ್ನ ಮತ್ತು ವಾಲ್ಮೀಕಿಯ ವಿಷಯದಲ್ಲಿಯೂ ಪಾರಿಶುದ್ಧ್ಯವನ್ನು ತಿಳಿದುಕೊಳ್ಳಲಿ. ಎನ್ನಲು ರಾಜನ ಈ ಮಾತನ್ನು ಕೇಳಿ ಲಕ್ಷ್ಮಣನೇ ಮುಂತಾದವರು ಆ ವಾಲ್ಮೀಕಿಯ ಬಳಿಗೆ ಹೋದರು.

ಊಚುರ್ಯಥೋಕ್ತಂ ರಾಮೇಣ ವಾಲ್ಮೀಕಿಂ ಲಕ್ಷ್ಮಣಾದಿಕಾಃ ।
ರಾಮಸ್ಯ ಹೃದ್ಗತಂ ಸರ್ವಂ ಜ್ಞಾತ್ವಾ ವಾಲ್ಮೀಕಿರಬ್ರವೀತ್ ॥ ೧೨ ॥

ಸಮರ್ಚಿತಾನ್ ಸುಮಂತ್ರಾದ್ಯಾನ್ ಲಕ್ಷ್ಮಣಾಯ ಸಮರ್ಪ್ಯ ಚ ।
ಯುಷ್ಮಾಭಿಃ ಕಥನೀಯಂ ಮದ್ವಾಕ್ಯಂ ಶ್ರೀರಾಘವಂ ಪ್ರತಿ ॥ ೧೩ ॥

ಶ್ವಃ ಕರಿಷ್ಯತಿ ವೈ ಸೀತಾ ಶಪಥಂ ಜನಸಂಸದಿ ।
ಯೋಷಿತಾಂ ಪರಮೋ ದೇವಃ ಪತಿರೇಕೋ ನ ಚಾಪರಃ ॥ ೧೪ ॥

ಪತಿಂ ವಿನಾ ಗತಿಃ ಕಾನ್ಯಾ ನಾರ್ಯಾ ಚಾಸ್ತಿ ಜಗತ್ತ್ರಯೇ ।
ಲಕ್ಷ್ಮಣಾದ್ಯಾಸ್ತತಸ್ಸರ್ವೇ ರಾಮಮಾಗತ್ಯ ತೇ ಪುನಃ ॥ ೧೫ ॥

---

೧೨. ಅಲ್ಲಿಗೆ ಹೋಗಿ ಆ ವಾಲ್ಮೀಕಿಗೆ ನಮಸ್ಕರಿಸಿ ಲಕ್ಷ್ಮಣಾದಿಗಳು ವಾಲ್ಮೀಕಿಗೆ ರಾಮನು ಹೇಳಿದುದನ್ನೆಲ್ಲಾ ಹೇಳಿದರು. ಆಗ ವಾಲ್ಮೀಕಿಯು ರಾಮನ ಮನಸ್ಸಿನಲ್ಲಿರುವುದನ್ನೆಲ್ಲಾ ತಿಳಿದುಕೊಂಡು ಇಂತೆಂದು ಹೇಳಿದನು.

೧೩. ಅನಂತರ ಸುಮಂತ್ರ ಮುಂತಾದವರೆಲ್ಲರನ್ನೂ ಆ ಋಷಿಯು ಗೌರವಿಸಿ ಲಕ್ಷ್ಮಣನಿಗೆ ಅರ್ಘ್ಯಾದಿಗಳನ್ನು ಕೊಟ್ಟು ಆ ಲಕ್ಷ್ಮಣನನ್ನು ಕುರಿತು ನೀವೆಲ್ಲರೂ ರಾಮನನ್ನು ಕುರಿತು ನಾನು ಇಂತೆಂದು ಹೇಳಿದೆನೆಂದು ಆತನಿಗೆ ಹೇಳಿರಿ. ಎಂದನು.

೧೪. ಸೀತೆಯು ನಾಳೆಯದಿನ ಸಭೆಯ ಮಧ್ಯದಲ್ಲಿ ತನ್ನ ಪಾತಿವ್ರತ್ಯದ ಪ್ರಮಾಣವನ್ನು ಮಾಡುತ್ತಾಳೆ. ಹೆಂಗಸರಿಗೆ ಉತ್ತಮೋತ್ತಮವಾದ ದೇವರು ಗಂಡನೇ ಹೊರತು ಮತ್ತೊಂದಿಲ್ಲ.

೧೫–೧೬. ಮೂರುಲೋಕದಲ್ಲಿಯೂ ಕೂಡ ಹೆಂಡತಿಗೆ ಗಂಡನನ್ನು ಬಿಟ್ಟರೆ ಮತ್ತ್ಯಾರಿರುವರು ? ಯಾರೂ ಇರುವುದಿಲ್ಲ. ಎಂದು ಹೇಳಲು ಅನಂತರ

ಸುಮಂತ್ರಾದೀಂಶ್ಚತುರ್ವೀರಾನ್ರಾಘವಾಯ ಸಮರ್ಪ್ಯ ಚ ।
ವಾಲ್ಮೀಕೇರ್ವಚನಂ ಹರ್ಷಾದೂಚುಸ್ತಂ ರಘುನಾಯಕಂ ॥ ೧೬ ॥

ವಾಲ್ಮೀಕಿವಚನಂ ಶ್ರುತ್ವಾ ತುತೋಷ ರಾಘವೋಪಿ ಚ ।
ಸುಮಂತ್ರಂ ಭರತಂ ವಾಯುಪುತ್ರಂ ವಾನರರಾಜಕಂ ॥ ೧೭ ॥

ಸಮಾಲಿಂಗ್ಯ ಚತುರ್ಭ್ಯಸ್ಸ ಪುನರ್ಜಾತಾನಮನ್ಯತ ।
ಸೀತಯಾ ಪಾಲಿತಾಸ್ಸರ್ವೇ ವಯಂ ಲವಜಿತಾಸ್ತ್ವಿತಿ ॥ ೧೮ ॥

ಕಥಯಾಮಾಸುಃ ಶ್ರೀರಾಮಂ ಸುಮಂತ್ರಾದ್ಯಾಸ್ಸವಿಸ್ತರಂ ।
ದ್ವಿತೀಯೇ ದಿವಸೇ ಕೃತ್ವಾ ಸಭಾಂ ಶ್ರೇಷ್ಠಾಂ ಮನೋರಮಾಂ ॥ ೧೯ ॥

ಲಕ್ಷ್ಮಣನೇ ಮುಂತಾದವರೆಲ್ಲರೂ ರಾಮನ ಬಳಿಗೆ ಬಂದು ಸುಮಂತ್ರನೇ ಮುಂತಾದ ನಾಲ್ಕುಜನ ವೀರರನ್ನು ರಾಮನಿಗೆ ಒಪ್ಪಿಸಿ ವಾಲ್ಮೀಕಿಯು ಹೇಳಿದ ಮಾತನ್ನು ಲಕ್ಷ್ಮಣನು ಆ ರಾಮನಿಗೆ ಹೇಳಿದನು.

೧೭–೧೮. ವಾಲ್ಮೀಕಿಯ ಮಾತನ್ನು ಕೇಳಿ ರಾಮನು ಸಂತೋಷ ಗೊಂಡನು. ಸುಮಂತ್ರ, ಭರತ, ಹನುಮಂತ, ಸುಗ್ರೀವ ಇವರನ್ನೂ ಆಲಂಗಿಸಿ ಕೊಂಡು ಅವರು ತೊಂದರೆಯಿಂದ ಪಾರಾದುದನ್ನು ನೋಡಿ ಅವರನ್ನು ಮತ್ತೆ ಹುಟ್ಟಿದವರನ್ನಾಗಿ ತಿಳಿದನು. ಅವರೆಲ್ಲರೂ ಕೂಡ ನಮ್ಮನ್ನು ಲವನು ಸೋಲಿಸಿ ಸೀತೆಯ ಬಳಿಗೆ ಕರೆದುಕೊಂಡು ಹೋದಮೇಲೆ ಆ ಸೀತೆಯು ಇವರು ನಮ್ಮ ಲವನಿಂದ ಜಿತರಾದರಲ್ಲ! ಎಂದು ನಮ್ಮೆಲ್ಲರನ್ನೂ ಕಾಪಾಡಿದಳು. ಎಂದು ಹೇಳಿದರು.

೧೯. ಅವರೆಲ್ಲರೂ ಹೀಗೆ ಹೇಳಿದುದನ್ನು ಶ್ರೀರಾಮನು ವಿಸ್ತಾರವಾಗಿ ಕೇಳಿದನು. ಅನಂತರ ಮಾರನೆಯದಿನ ರಾಮನು ದೊಡ್ಡದಾದ ಒಂದು ಸಭೆಯನ್ನು ಸೇರಿಸಿದನು.

ಸರ್ವಾಂಸ್ತಸ್ಯಾಂ ಸಮಾಹೂಯ ರಾಮೋ ವಾಕ್ಯಮಥಾಬ್ರವೀತ್ ।
ಮುನಯಃ ಪಾರ್ಥಿವಾಸ್ಸರ್ವೇ ಶೃಣುತ ಸ್ವಸ್ಥಮಾನಸಾಃ ॥ ೨೦ ॥

ಸೀತಾಯಾಶ್ಶಪಥಂ ಲೋಕಾ ವಿಜಾನಂತ್ವಶುಭಂ ಶುಭಂ ।
ಇತ್ಯುಕ್ತ್ವಾ ರಾಘವೇಣಾಥ ಲೋಕಾಸ್ಸೀತಾದಿದೃಕ್ಷವಃ ॥ ೨೧ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಶ್ಶೂದ್ರಾಶ್ಚೈವ ಸಹಸ್ರಶಃ ।
ಸಮಾನರಾಸ್ಸಮಾಜಗ್ಮುಸ್ತಂ ದಿವ್ಯಂ ದ್ರಷ್ಟುಮುದ್ಯತಾಃ ॥ ೨೨ ॥

ತತೋ ಮುನಿವರಸ್ತೂರ್ಣಂ ಸಸೀತಸ್ಸಮುಪಾಗತಃ ।
ಅಗ್ರತಸ್ಥಂ ಮುನಿಂ ಕೃತ್ವಾ ಯಾಂತೀ ಕಿಂಚಿದವಾಙ್ಮುಖೀ ॥ ೨೩ ॥

---

೨೦. ಪ್ರಜೆಗಳು, ಪಟ್ಟಣಿಗರು, ಅಧಿಕಾರಿಗಳು ಎಲ್ಲರನ್ನೂ ಆ ಸಭೆಗೆ ಕರೆಯಿಸಿ ರಾಮನು ಅವರನ್ನು ಕುರಿತು ಮುನಿಗಳೂ, ರಾಜರುಗಳೂ, ಮತ್ತು ಇತರರೂ ಎಲ್ಲರೂ ಕೂಡ ಸ್ವಸ್ಥವಾದ ಮನಸ್ಸಿನಿಂದ ಕೇಳಿರಿ.

೨೧. ಇಲ್ಲಿ ಸೀತೆಯು ಮಾಡತಕ್ಕ ಪ್ರಮಾಣಗಳು ಒಳ್ಳೆಯದೇ ! ಕೆಟ್ಟದ್ದೇ? ಎಂಬುದನ್ನು ತಿಳಿಯಿರಿ. ಎಂದನು. ರಾಮನು ಹೀಗೆ ಹೇಳುತ್ತಲೂ ಎಲ್ಲರೂ ಸೀತೆಯು ಏನುಮಾಡುವಳೆಂದು ಕುತೂಹಲರಾಗಿ ನೋಡುತ್ತಿದ್ದರು.

೨೨. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಇವರೆಲ್ಲರೂ ಸಾವಿರಗಟ್ಟಲೆಯಲ್ಲಿ ಬಂದು ಸೇರಿದರು. ಅನೇಕವಾದ ಕಪಿಗಳೂ ಕೂಡ ಆ ಸೀತೆಯ ದಿವ್ಯಪ್ರಮಾಣವನ್ನು ನೋಡಲು ಕುತೂಹಲರಾಗಿ ಬಂದು ಸೇರಿದರು.

೨೩-೨೪. ಇತ್ತ ವಾಲ್ಮೀಕಿಯು ಸೀತೆಯೊಡನೆ ಬೇಗನೆ ಬಂದು ಸೇರಿದನು. ಆ ಸೀತೆಯು ಮುನಿಯನ್ನು ಮುಂದುಮಾಡಿಕೊಂಡು ತಾನು

ಕೃತಾಂಜಲಿರ್ಮುದಾ ಸೀತಾ ಶನೈರ್ಯಜ್ಞಂ ವಿವೇಶ ತಂ ।
ದೃಷ್ಟ್ವಾ ಲಕ್ಷ್ಮೀಮಿವಾಯಾಂತೀಂ ಶ್ರೀವಿಷ್ಣುಮನುಯಾಯಿನೀಂ॥ ೨೪ ॥

ವಾಲ್ಮೀಕೇಃ ಪೃಷ್ಠತಸ್ಸೀತಾಂ ಸಾಧುವಾದೋ ಮಹಾನಭೂತ್ ।
ತದಾ ಮಧ್ಯೇ ಜನೌಘಸ್ಯ ಪ್ರವಿಶ್ಯ ಮುನಿಪುಂಗವಃ ॥ ೨೫ ॥

ಸೀತಾಸಹಾಯೋ ವಾಲ್ಮೀಕಿಸ್ತದಾ ರಾಘವಮಬ್ರವೀತ್ ।
ಇಯಂ ದಾಶರಥೇ ಸೀತಾ ಸುವೃತ್ತಾ ಧರ್ಮಚಾರಿಣೀ ॥ ೨೬ ॥

ತ್ವಯಾ ಪಾಪಾತ್ಪುರಾ ತ್ಯಕ್ತಾ ಮಮಾಶ್ರಮಸಮೀಪತಃ ।
ಲೋಕಾಪವಾದಭೀತೇನ ಯಮುನಾದಕ್ಷಿಣೇ ತಟೇ ॥ ೨೭ ॥

ಹಿಂದೆ ತಲೆಯನ್ನು ಸ್ವಲ್ಪಬಗ್ಗಿಸಿಕೊಂಡು ಕೈಮುಗಿದುಕೊಂಡು ಮೆಲ್ಲಗೆ ಯಜ್ಞ ಮಂಟಪಕ್ಕೆ ಬಂದಳು.

೨೫. ಜನರೆಲ್ಲರೂ ವಿಷ್ಣುವನ್ನು ಅನುಸರಿಸಿಕೊಂಡು ಬರುತ್ತಿರುವ ಲಕ್ಷ್ಮಿಯಂತೆ ವಾಲ್ಮೀಕಿಯನ್ನು ಆ ಸೀತೆಯು ಅನುಸರಿಸಿ ಬರುವುದನ್ನು ನೋಡಿದರು. ಆಗ ಅವರೆಲ್ಲರೂ ಸಾಧು ಸಾಧು ಎಂಬುದಾಗಿ ಕೂಗಿಕೊಂಡರು. ಆಗ ಆ ಮುನಿಯು ಆ ಜನರ ಮಧ್ಯದಲ್ಲಿ ಸೀತೆಯನ್ನು ಕರೆದುಕೊಂಡು ಬಂದು ನಿಂತುಕೊಂಡನು.

೨೬. ಸೀತೆಯನ್ನು ಜೊತೆಯಲ್ಲಿ ನಿಲ್ಲಿಸಿಕೊಂಡು ರಾಮನನ್ನು ಕುರಿತು ಇಂತೆಂದು ಹೇಳಿದನು. ಎಲೈ ದಾಶರಥಿಯೇ ! ಈ ಸೀತೆಯು ಒಳ್ಳೆಯ ನಡತೆಯುಳ್ಳವಳು. ಧರ್ಮವನ್ನೇ ಅನುಸರಿಸಿಕೊಂಡು ನಡೆಯುತ್ತಿರುವವಳು.

೨೭ ನೀನು ಈಕೆಯನ್ನು ಲೋಕಾಪವಾದದ ಭೀತಿಯಿಂದ ಪಾಪಿನಿಯೆಂದು ಗಂಗೆಯ ದಕ್ಷಿಣದಡದಲ್ಲಿರುವ ನನ್ನ ಆಶ್ರಮದ ಹತ್ತಿರ ಬಿಟ್ಟು ಬಿಟ್ಟೆ.

ಪ್ರತ್ಯಯಂ ದಾಸ್ಯತೇ ಸಾದ್ಯ ತದನುಜ್ಞಾತುಮರ್ಹಸಿ ।
ಇಮೌ ತು ಸೀತಾತನಯೌ ಕುಶಸ್ತ್ವತ್ತೋ ಲವೋ ಮಯಾ ॥ ೨೮ ॥

ಲವೈರ್ವಿನಿರ್ಮಿತಸ್ಸೀತಾಭಯಾತ್ತ್ರವ್ಯಗ್ರಚೇತಸಾ ।
ಸುತಾವಿಮೌ ತೇ ದುರ್ಧರ್ಷೌ ತಥ್ಯಮೇತದ್ಬ್ರವೀಮಿ ತೇ ॥ ೨೯ ॥

ಪ್ರಚೇತಸೋಽಹಂ ದಶಮಃ ಪುತ್ರೋ ರಘುಕುಲೋದ್ವಹ ।
ಅನೃತಂ ನ ಸ್ಮರಾಮ್ಯುಕ್ತಂ ಯಥೇಮೌ ತವ ಪುತ್ರಕೌ ॥ ೩೦ ॥

ಬಹೂನ್ವರ್ಷಗಣಾನ್ ಸಮ್ಯಕ್ ತಪಶ್ಚರ್ಯಾ ಮಯಾ ಕೃತಾ ।
ನೋಪಾಶ್ನಿಯಾಂ ಫಲಂ ತಸ್ಯಾ ದುಷ್ಟೇಯಂ ಯದಿ ಮೈಥಿಲೀ ॥ ೩೧ ॥

---

೨೮. ಆದರೆ ಆಕೆಯು ಈಗ ತಾನು ಪಾಪಿನಿಯಲ್ಲವೆಂದು ಪ್ರಮಾಣವನ್ನು ಮಾಡುತ್ತಾಳೆ. ನಂಬಿಕೆಯನ್ನೂ ಹುಟ್ಟಿಸುತ್ತಾಳೆ. ನೀನು ಅದಕ್ಕೆ ಅಪ್ಪಣೆಯನ್ನು ಕೊಡಬೇಕು. ನಿನ್ನ ಅಪ್ಪಣೆಯಾದರೆ ಹಾಗೆಮಾಡಲು ಆಗಬಹುದು.

೨೯. ಇವರಿಬ್ಬರು ಬಾಲಕರೂ ಸೀತೆಯ ಮಕ್ಕಳು. ಕುಶನು ನಿನ್ನಿಂದ ಉತ್ಪನ್ನನಾದವನು. ಕುಶನು ಒಂದು ಕಾಲದಲ್ಲಿ ತೊಟ್ಟಿಲಲ್ಲಿ ಇಲ್ಲದಿರುವುದನ್ನು ನೋಡಿ ಸೀತೆಯ ಶಾಪದ ಹೆದರಿಕೆಯಿಂದ ಲವವೆಂಬ ಧಾನ್ಯದಿಂದ ಈ ಲವನನ್ನು ನಾನು ನಿರ್ಮಿಸಿದೆನು. ಶೂರರಾದ ಈ ಇಬ್ಬರು ಮಕ್ಕಳೂ ನಿನ್ನವರೇ. ಇದು ಸತ್ಯವೆಂದು ನಾನು ಹೇಳುತ್ತೇನೆ.

೩೦. ಎಲೈ ರಾಮನೇ ! ಈ ಮಕ್ಕಳು ನಿನಗೆ ಮಕ್ಕಳಾಗಿರುವಂತೆಯೇ ನಾನೂ ಕೂಡ ವರುಣನಿಗೆ ಹತ್ತನೆಯ ಮಗನು. ಇದುವರೆವಿಗೂ ನಾನು ಸುಳ್ಳನ್ನು ಹೇಳಿಲ್ಲ. ಹೇಳಿದ ಜ್ಞಾಪಕವೂ ಇರುವುದಿಲ್ಲ. ಇವರು ಖಂಡಿತವಾಗಿಯೂ ನಿನ್ನ ಮಕ್ಕಳು.

೩೧. ನಾನು ಅನೇಕ ವರ್ಷಗಳು ಬಹು ಚೆನ್ನಾಗಿ ಕಷ್ಟಪಟ್ಟು ತಪಸ್ಸನ್ನು ಮಾಡಿರುವೆನು. ಈ ಜಾನಕಿಯು ದುಷ್ಟಳಾದರೆ ಆ ತಪಸ್ಸುಗಳ ಫಲವು ನನಗೆ ಬರದಿರಲಿ.

ಇತ್ಯುಕ್ತ್ವಾ ರಾಘವಸ್ಯಾಂಕೇ ದಕ್ಷಿಣೇ ಸ್ಥಾಪ್ಯ ತಂ ಕುಶಂ ।
ಲವಂ ವಿನ್ಯಸ್ಯ ವಾಮಾಂಕೇ ತಸ್ಥೌ ರಾಮಾಗ್ರತೋ ಮುನಿಃ ॥ ೩೨ ॥

ರಾಮೋಽಪಿ ತೌ ಸಮಾಲಿಂಗ್ಯ ಮೂರ್ಧ್ನ್ಯವಘ್ರಾಯ ಸಾದರಂ ।
ಲವಸ್ಯ ಮಸ್ತಕೇ ಹಸ್ತಂ ಸಂಸ್ಥಾಪ್ಯ ಜಗದೀಶ್ವರಃ ॥ ೩೩ ॥

ಅತಿಹ್ರಸ್ವತರಂ ಬಾಲಂ ಪೂರ್ವವತ್ಸೋಽಕರೋಚ್ಚ ತಂ ।
ತತೋ ರಾಮೋಽಪಿ ತಾಂ ಸೀತಾಂ ದೃಷ್ಟ್ವಾ ಬಾಹುದ್ವಯಾನ್ವಿತಾಂ ॥೩೪॥

ಅಜ್ಞಾತ ಇವ ಸಂಪ್ರಾಹ ಲಕ್ಷ್ಮಣಂ ಪುರತಃ ಸ್ಥಿತಂ ।
ತ್ವಯಾ ಭುಜಸ್ಸಮಾನೀತಸ್ಸೀತಾಯಾ ಮಾಂ ಪ್ರದರ್ಶಿತುಂ ॥ ೩೫ ॥

---

೩೨. ಎಂಬುದಾಗಿ ಹೇಳಿ ಆ ಮುನಿಯು ಕುಶನನ್ನು ರಾಮನ ಬಲದ ತೊಡೆಯಮೇಲೆ ಕುಳ್ಳಿರಿಸಿ ಲವನನ್ನು ಎಡಗಡೆಯ ತೊಡೆಯಮೇಲೆಯೂ ಕುಳ್ಳಿರಿಸಿದನು. ತಾನು ರಾಮನ ಎದುರಿಗೆ ನಿಂತುಕೊಂಡನು.

೩೩. ರಾಮನೂ ಕೂಡ ಆ ಬಾಲಕರ ತಲೆಯನ್ನು ಮೂಸಿನೋಡಿ ಆಲಂಗಿಸಿಕೊಂಡನು. ಮತ್ತು ಆ ಲವನ ತಲೆಯಮೇಲೆ ಕೈಯಿಟ್ಟುಕೊಂಡನು. ಆ ಮಗನು ನೀರುಹಾಕುವುದರಿಂದ ಬೆಳೆದಿದ್ದುದನ್ನು ಕಡಿಮೆಮಾಡಿ ಚಿಕ್ಕವ ನಾಗುವಂತೆಯೂ ಬಾಲನಂತೆ ಬಾಲಕನನ್ನಾಗಿಯೂ ಮಾಡಿದನು.

೩೪–೩೫. ರಾಮನು ಸೀತೆಯನ್ನು ನೋಡಿದನು. ಎರಡು ತೋಳುಗಳೂ ಇದ್ದುದು ಕಂಡುಬಂದಿತು. ಆಗ ತಾನು ಏನನ್ನೂ ತಿಳಿಯದವನಂತೆ ತನ್ನ ಮುಂದೆ ನಿಂತಿರುವ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ನೀನು ನಾನು ಹೇಳಿದ್ದಂತೆ ಸೀತೆಯ ಭುಜವನ್ನು ಕತ್ತರಿಸಿ ತಂದು ನನಗೆ ತೋರಿಸಿದೆಯಷ್ಟೆ !

ಪುರಾ ತಮಾನಯಸ್ವಾದ್ಯ ಚೇದಸ್ತಿ ರಕ್ಷಿತಸ್ತ್ವಯಾ ।
ತಥೇತ್ಯುಕ್ತ್ವಾ ಲಕ್ಷ್ಮಣೋಽಪಿ ಪೇಟಿಕಾನಿಹಿತಂ ಭುಜಂ ॥ ೩೬ ॥

ಸೀತಾಯಾಃ ಪುರತೋ ರಾಮಂ ದರ್ಶಯಾಮಾಸ ಸಾದರಂ ।
ಸೀತಾಭುಜೋಪಮಂ ದೃಷ್ಟ್ವಾ ಭುಜಂ ಮಾಂಸಾದಿಭಿರ್ಯುತಂ ॥ ೩೭ ॥

ಪಂಚವರ್ಷಾಂತರೇ ಕಾಲೇ ಹ್ಯಾಸನ್ ಸರ್ವೇಽತಿವಿಸ್ಮಿತಾಃ ।
ಏತಸ್ಮಿನ್ನಂತರೇ ತತ್ರ ಪಶ್ಯತ್ಸು ಸಕಲೇಷ್ವಪಿ ॥ ೩೮ ॥

ಭುಜಸ್ಸಗುಪ್ತತಾಂ ಪ್ರಾಪ್ತೋ ವಿಶ್ವಕರ್ಮೋದ್ಭವಃ ಕ್ಷಣಾತ್ ।
ತದ್ದೃಷ್ಟ್ವಾ ಕೌತುಕಂ ಲೋಕಾ ಅಭೂವನ್ನತಿವಿಸ್ಮಿತಾಃ ॥ ೩೯ ॥

ರಾಮೋಽಪಿ ವಿಸ್ಮಿತಃ ಪ್ರಾಹ ವಾಲ್ಮೀಕಿಂ ಪ್ರಣಿಪತ್ಯ ಚ ।
ಏವಮೇವ ಮಹಾಪ್ರಾಜ್ಞ ಯದುಕ್ತಂ ಮಾಂ ತ್ವಯಾಧುನಾ ॥ ೪೦ ॥

೩೬–೩೭. ಆ ಹಿಂದೆ ತಂದ ಕೈಯ್ಯನ್ನು ನೀನು ರಕ್ಷಣೆಮಾಡಿ ಇಟ್ಟಿದ್ದರೆ ಅದನ್ನು ಇಲ್ಲಿಗೆ ತೆಗೆದುಕೊಂಡು ಬಾ. ಎಂದು ಆ ರಾಮನು ಹೇಳಲು ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಪೆಟ್ಟಿಗೆಯಲ್ಲಿ ಇಟ್ಟಿದ್ದ ಆ ಸೀತೆಯ ಭುಜವನ್ನು ಸೀತೆಯ ಎದುರಿಗೆ ರಾಮನಿಗೆ ತೋರಿಸಿದನು.

೩೮–೩೯. ಆಗ ಅಲ್ಲಿದ್ದವರೆಲ್ಲರೂ ಐದು ವರ್ಷಗಳಾದರೂ ಸೀತೆಯ ಭುಜದಂತೆಯೇ ಮಾಂಸದಿಂದ ತುಂಬಿಕೊಂಡು ಇರುವ ಅದನ್ನು ನೋಡಿ ಆಶ್ಚರ್ಯಗೊಂಡರು. ಎಲ್ಲರೂ ನೋಡುತ್ತಿರಲು ಇಷ್ಟರಲ್ಲಿಯೇ ವಿಶ್ವಕರ್ಮನಿಂದ ನಿರ್ಮಿತವಾದ ಆ ತೋಳು ಕ್ಷಣಕಾಲದಲ್ಲಿಯೇ ಅಂತರ್ಧಾನವಾಯಿತು. ಅದನ್ನು ನೋಡಿ ಅಲ್ಲಿದ್ದ ಜನರೆಲ್ಲರೂ ಬಹುವಾಗಿ ಆಶ್ಚರ್ಯಗೊಂಡರು.

೪೦ ಆಗ ಶ್ರೀರಾಮನೂ ಆಶ್ಚರ್ಯಗೊಂಡು ವಾಲ್ಮೀಕಿಗೆ ನಮಸ್ಕರಿಸಿ ಎಲೈ ಮುನಿಯೇ ! ನೀನು ಹೇಳಿದುದು ಸರಿ. ಅದು ಸತ್ಯವಾದುದು.

ಪ್ರತ್ಯಯೋ ಜನತೋ ಮಹ್ಯಂ ತವ ವಾಕ್ಯೈರಕಿಲ್ಬಿಷೈಃ ।
ಲಂಕಾಯಾಮಪಿ ದೃಷ್ಟೋ ಮೇ ವೈದೇಹ್ಯಾಃ ಪ್ರತ್ಯಯೋ ಮಹಾನ್ ॥ ೪೧ ॥

ದೇವಾನಾಂ ಪುರತಸ್ತೇನ ಮಂದಿರಂ ಸಂಪ್ರವೇಶಿತಾ ।
ಸೇಯಂ ಲೋಕಭಯಾದ್ಬ್ರಹ್ಮನ್ನಪಾಪಾಪಿ ಸತೀ ಪುರಾ ॥ ೪೨ ॥

ಸೀತಾ ಮಯಾ ಪರಿತ್ಯಕ್ತಾ ತದ್ಭವಾನ್ ಕ್ಷಂತುಮರ್ಹಸಿ ।
ಮತ್ತೋ ಜಾತೋಽಸ್ತಿ ಜಾನಾಮಿ ಕುಶೋಽಯಂ ಚ ಲವಸ್ತ್ವಯಾ ॥ ೪೩ ॥

ಲವೈರ್ಭ್ರಾಂತ್ಯಾ ಕೃತೋ ವೇದ್ಮಿ ಸೀತಾಶಾಪಭಯಾನ್ಮುನೇ ।
ತಥಾಪಿ ಲೋಕಾನ್ ಸಕಲಾನ್ ದ್ರಷ್ಟುಂ ಸೀತಾತ್ರ ಪ್ರತ್ಯಯಂ ॥ ೪೪ ॥

ಕರೋತು ಶಪಥಂ ಚಾಪಿ ಸಭಾಯಾಂ ತವ ಸನ್ನಿಧೌ ।
ಶುದ್ಧಾಯಾಂ ಜಗತೀಮಧ್ಯೇ ಸೀತಾಮಂಗೀಕರೋಮ್ಯಹಂ ॥ ೪೫ ॥

---

೪೧. ನಿರ್ದುಷ್ಟವಾದ ನಿನ್ನ ಈ ಮಾತುಗಳಿಂದಲೇ ನನಗೆ ನಂಬಿಕೆಯುಂಟಾಯಿತು. ಲಂಕೆಯಲ್ಲಿಯೂ ಕೂಡ ಈ ವೈದೇಹಿಯು ತನ್ನ ಪಾತಿವ್ರತ್ಯದ ಪ್ರಮಾಣವನ್ನು ತೋರಿಸಿದಳು. ಅದನ್ನೂ ನೋಡಿದ್ದೆನು.

೪೨-೪೩. ಅದನ್ನು ತೋರಿಸಿದಾಗ ದೇವತೆಗಳೆಲ್ಲರೂ ಇದ್ದರು. ಆದ್ದರಿಂದಲೇ ಮನೆಗೆ ಸೇರಿಸಿಕೊಂಡೆನು. ಈಗಲಾದರೋ ಲೋಕಾಪವಾದ ಭಯದಿಂದ ಈ ಸೀತೆಯು ಪಾಪಿನಿಯಲ್ಲದಿದ್ದರೂ ಬಿಟ್ಟು ಬಿಟ್ಟೆನು. ಅದನ್ನು ನೀನು ಕ್ಷಮಿಸು. ಈ ಕುಶನು ನನ್ನಿಂದಲೂ, ಲವನು ನಿನ್ನಿಂದಲೂ ಉತ್ಪನ್ನರಾದುದನ್ನೂ ಬಲ್ಲೆನು.

೪೪-೪೫. ಸೀತೆಯ ಶಾಪದ ಭಯದಿಂದಲೂ ಭ್ರಾಂತಿಯಿಂದಲೂ ಲವನನ್ನು ಲವವೆಂಬ ಧಾನ್ಯದಿಂದ ನೀನು ಮಾಡಿದೆ ಎಂಬುದನ್ನೂ ಬಲ್ಲೆನು. ಆದರೂ ಕೂಡ ಜನರೆಲ್ಲರೂ ನೋಡಿ ಈಕೆಯನ್ನೂ ನನ್ನನ್ನೂ ನಂಬುವುದಕ್ಕೋಸ್ಕರ ಶಪಥವನ್ನು ಮಾಡಿ ಪ್ರಮಾಣವನ್ನು ತೋರಿಸಲಿ. ಈ ಸಭೆಯಲ್ಲಿ ನಿನ್ನ ಎದುರಿಗೆ ನಂಬಿಕೆಯು ಬರಲಿ. ಜನರೆಲ್ಲರೂ ಶುದ್ಧಳೆಂದು ಒಪ್ಪಿದಮೇಲೆ ಈಕೆಯನ್ನು ನಾನು ಅಂಗೀಕರಿಸುತ್ತೇನೆ.

ತದಾ ತಚ್ಛಪಥಂ ದ್ರಷ್ಟುಮಾರ್ಸ ಲೋಕಾಸ್ಸಮುತ್ಸುಕಾಃ ।
ಸಭಾಯಾಂ ಜಾನಕೀ ಚಾಥ ತಥಾ ಕೌಶೇಯವಾಸಿನೀ ॥ ೪೬ ॥

ಉದಙ್ಮುಖೀ ಹ್ಯಧೋದೃಷ್ಟಿಃ ಪ್ರಾಂಜಲಿರ್ವಾಕ್ಯಮಬ್ರವೀತ್ ।
ರಾಮಾದನ್ಯಮಹಂ ಚೇದ್ಧಿ ಮನಸಾಪಿ ನ ಚಿಂತಯೇ ॥ ೪೭ ॥

ತರ್ಹಿ ಮೇ ಧರಣೀ ದೇವೀ ವಿವರಂ ದಾತುಮರ್ಹಸಿ ।
ಏವಂ ಶಪಂತ್ಯಾಸ್ಸೀತಾಯಾಃ ಪ್ರಾದುರಾಸೀನ್ಮಹಾದ್ಭುತಂ ॥ ೪೮ ॥

ಭೂತಲಾದ್ದಿವ್ಯಮತ್ಯರ್ಥಂ ಸಿಂಹಾಸನಮನುತ್ತಮಂ ।
ಭುವೋ ವಿವರಮಾರ್ಗೇಣ ಸಮಾನೀತಂ ಮನೋರಮಂ ॥ ೪೯ ॥

---

೪೬. ರಾಮನು ಹೀಗೆಂದು ಹೇಳಲು ಜನರೆಲ್ಲರೂ ಆ ಸೀತೆಯು ತೋರಿಸತಕ್ಕ ಪ್ರಮಾಣವನ್ನು ನೋಡಲು ಆತುರರಾದರು. ಜಾನಕಿಯು ಪಟ್ಟೆಯ ಬಟ್ಟೆಯನ್ನುಟ್ಟು ಆ ಸಭೆಯ ಮಧ್ಯದಲ್ಲಿ ಉತ್ತರಮುಖವಾಗಿ ನಿಂತುಕೊಂಡು ನೆಲವನ್ನು ನೋಡುತ್ತ ಕೈಮುಗಿದುಕೊಂಡು ಇಂತೆಂದಳು..

೪೭. ರಾಮನಿಗಿಂತಲೂ ಬೇರೆಯಾದವನನ್ನು ನಾನು ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲ. ಅಷ್ಟು ಪಾರಿಶುದ್ಧ್ಯದಿಂದ ನಿಜವಾಗಿ ನಾನಿದ್ದರೆ ಈ ಭೂದೇವಿಯು ಒಳಗೆಹೋಗಲು ನನಗೆ ಬಿರುಕುಬಿಟ್ಟು ಜಾಗವನ್ನು ಕೊಡಲಿ.

೪೮. ಸೀತೆಯು ಹೀಗೆ ಪ್ರಮಾಣಮಾಡಿ ಹೇಳುತ್ತಿರಲಾಗಿ ಮಹತ್ತರವಾದ ಅದ್ಭುತವಾದ ಒಂದು ಕೆಲಸವು ನಡೆಯಿತು.

೪೯. ಒಡನೆಯೇ ಭೂಮಿಯಲ್ಲಿ ಒಂದು ಬಿರುಕುಬಿಟ್ಟಿತು. ಅದು ಪಾತಾಳಲೋಕದಿಂದ ಬರುವವರಿಗೆ ದಾರಿಯಂತೆ ಇದ್ದಿತು. ಅದರೊಳಗಿನಿಂದ ಒಂದು ಉತ್ತಮವಾದ ಸಿಂಹಾಸನವು ಮೇಲಕ್ಕೆ ಬಂದಿತು.

ನಾಗೇಂದ್ರೈಧ್ರಿಯಮಾಣಂ ತದ್ದಿವ್ಯದೇಹೈ ರವಿಪ್ರಭಂ ।
ಭೂದೇವೀ ಜಾನಕೀಂ ದೋರ್ಭ್ಯಾಂ ಧೃತ್ವಾ ದುಹಿತರಂ ನಿಜಾಂ ॥ ೫೦ ॥

ಸ್ವಾಗತಾಸೀತಿ ತಾಮುಕ್ತ್ವಾಽಽಸನೇ ಸಾ ಸನ್ಯವೇಶಯತ್ ।
ವಸ್ತ್ರಾಲಂಕಾರಸ್ರಗ್ಗಂಧಸುಗಂಧೈಃ ಪೂಜ್ಯ ಮೈಥಿಲೀಂ ॥ ೫೧ ॥

ಸಮಾಲಿಂಗ್ಯಾಥ ಭೂದೇವೀ ವೀಜಯಾಮಾಸ ಸಾದರಂ ।
ತದಾ ಶನೈಶ್ಶನೈರ್ಭೂಮ್ಯಾಂ ಗುಪ್ತಂ ಸಿಂಹಾಸನಂ ತ್ವಭೂತ್ ॥ ೫೨ ॥

ಸಿಂಹಾಸನಸ್ಥಾಂ ವೈದೇಹೀಂ ಪ್ರವಿಶಂತೀಂ ರಸಾತಲಂ ।
ದೃಷ್ಟ್ವಾಽಽಕಾಶಸ್ಥಿತಾ ದೇವಾಃ ಸ್ತ್ರಿಯಸ್ಸರ್ವಾಸ್ತು ಸಂಭ್ರಮಾತ್ ॥ ೫೩ ॥

---

೫೦. ಆದನ್ನು ಉತ್ತಮವಾದ ಸರ್ಪಗಳು ಹೊತ್ತುಕೊಂಡಿದ್ದುವು. ಆ ಸರ್ಪಗಳು ಬಹು ದಿವ್ಯವಾದ ದೇಹವುಳ್ಳವರಾಗಿದ್ದರು. ಆ ಸಿಂಹಾಸನವು ಸೂರ್ಯನ ಕಾಂತಿಯಂತೆ ಕಾಂತಿಯನ್ನು ಬೀರುತ್ತ ಬೆಳಗುತ್ತಿದ್ದಿತು. ಅದರ ಜೊತೆಯಲ್ಲಿ ಭೂದೇವಿಯೂ ಬಂದಳು.

೫೧. ಆ ಭೂದೇವಿಯು ಸೀತೆಯನ್ನು ತೋಳುಗಳಿಂದ ಅಪ್ಪಿಕೊಂಡು ಅಮ್ಮ ಮಗಳೇ ! ನಿನಗೆ ಸ್ವಾಗತವೇ ! ಎಂದು ಕೇಳಿ ತಾನು ತೆಗೆಸಿಕೊಂಡು ಬಂದಿದ್ದ ಆ ಸಿಂಹಾಸನದಲ್ಲಿ ಕೂರಿಸಿಕೊಂಡಳು. ಮತ್ತು ಅವಳಿಗೆ ವಸ್ತ್ರಗಳನ್ನು ಕೊಟ್ಟು ಹೂ ಗಂಧಗಳನ್ನೂ ಕೊಟ್ಟು ಗೌರವಿಸಿದಳು.

೫೨ ಮತ್ತೆ ಅವಳನ್ನು ಆಲಂಗಿಸಿಕೊಂಡು ಚಾಮರದಿಂದ ಬೀಸುತ್ತಿದ್ದಳು. ಆನಂತರ ಆ ಸಿಂಹಾಸನವು ಆ ಸೀತೆ ಭೂದೇವಿಯರೊಡನೆ ಭೂಮಿಯೊಳಕ್ಕೆ ಇಳಿಯುತ್ತ ಮರೆಯಾಗುತ್ತ ಬಂದಿತು.

೫೩-೫೪. ಈ ಸೀತೆಯು ಸಿಂಹಾಸನದಲ್ಲಿ ಕುಳಿತು ಮೆಲ್ಲ ಮೆಲ್ಲಗೆ ತಾಯಿಯೊಡನೆ ಪಾತಾಳಕ್ಕೆ ಹೋಗುತ್ತಿದ್ದುದನ್ನು ಎಲ್ಲರೂ ನೋಡುತ್ತ

ನಿರಂತರಾಭಿರ್ವೈದೇಹೀಂ ವವರ್ಷುಃ ಪುಷ್ಪವೃಷ್ಟಿಭಿಃ ।
ಸಾಧುವಾದಶ್ಚ ಸುಮಹಾನ್ ಬಭೂವ ಸುರಕೀರ್ತಿತಃ ॥ ೫೮ ॥

ಅಂತರಿಕ್ಷೇ ಚ ಭೂಮೌ ಚ ಸರ್ವಂ ಸ್ಥಾವರಜಂಗಮಂ ।
ತದಾ ಬಭೂವ ಚಕಿತಂ ಸೀತಾಶಪಥದರ್ಶನಾತ್ ॥ ೫೫ ॥

ಊಚುಸ್ತೇ ಬಹುಧಾ ವಾಚೋ ವಾನರಾಶ್ಚ ನರಾಧಿಪಾಃ ।
ಕೇಚಿಚ್ಚಿಂತಾಪರಾಃ ಕೇಚಿದಾಸನ್ ಧ್ಯಾನಪರಾಯಣಾಃ ॥ ೫೬ ॥

ಕೇಚಿದ್ರಾಮಂ ನಿರೀಕ್ಷಂತಃ ಕೇಚಿತ್ಸೀತಾಮಚೇತಸಃ ।
ಮುಹೂರ್ತಮಾತ್ರಂ ತತ್ಸರ್ವಂ ತೂಷ್ಣೀಂ ಭೂತಮಚೇತನಂ ॥ ೫೭ ॥

ಅಂತರಿಕ್ಷದಲ್ಲಿದ್ದ ದೇವತೆಗಳೂ ಅವರ ಹೆಂಗಸರೂ ಬಹು ಸಂತೋಷದಿಂದ ಆ ವೈದೇಹಿಯಮೇಲೆ ಹೂಮಳೆಯನ್ನು ಸುರಿಸಿದರು. ಮತ್ತು ಆ ದೇವತೆಗಳೆಲ್ಲರೂ ಸಾಧು ಸಾಧು ಎನ್ನುತ್ತಿದ್ದರು.

೫೫. ಅಂತರಿಕ್ಷದಲ್ಲಿಯೂ, ಭೂಮಿಯಲ್ಲಿಯೂ ಇದ್ದ ಎಲ್ಲಾ ಚರಾಚರ ವಸ್ತುಗಳೂ ಸೀತೆಯ ಈ ಪ್ರಮಾಣವನ್ನು ನೋಡಿ ಬಹು ಆಶ್ಚರ್ಯಗೊಂಡುವು.

೫೬–೫೭. ಆಗ ಕಪಿಗಳೂ ರಾಜರೂ ಇತರರೂ ಕೂಡ ಒಬ್ಬರಿಗೊಬ್ಬರು ಅನೇಕ ಪ್ರಕಾರವಾಗಿ ಮಾತುಗಳನ್ನಾಡುತ್ತಿದ್ದರು. ಕೆಲವರು ದುಃಖಸತೊಡಗಿದರು. ಕೆಲವರು ಧ್ಯಾನಪರವಶರಾದರು. ಕೆಲವರು ಆ ರಾಮನನ್ನೇ ನೋಡುತ್ತಿದ್ದರು. ಕೆಲವರು ಬುದ್ಧಿಭ್ರಮೆ ಬಂದು ಸೀತೆಯ ಕಡೆಗೆ ನೋಡುತ್ತಿದ್ದರು. ಸ್ವಲ್ಪಕಾಲ ಮಾತ್ರ ಅಲ್ಲಿರುವುದೆಲ್ಲ ಜ್ಞಾನಾಜ್ಞಾನ ಶೂನ್ಯವಾದಂತೆ ನಿಶ್ಶಬ್ದವಾಗಿ ಇದ್ದುವು.

ಪ್ರವಿಶಂತೀಂ ಭುವಂ ಸೀತಾಂ ದೃಷ್ಟ್ವಾ ಸಂಮೋಹಿತಂ ಜಗತ್ ।
ಏತಸ್ಮಿನ್ನಂತರೇ ರಾಮಃ ಪ್ರವಿಶಂತೀಂ ಚ ಭೂತಲೇ ॥ ೫೮ ॥

ವಿದೇಹಜಾಂ ತದಾ ಸ್ಪೃಷ್ಟ್ವಾ ವಾಮಹಸ್ತೇನ ಸಂಭ್ರಮಾತ್ ।
ತಾಂ ದಧಾರ ಕರೇಣಾದೌ ಧೃತ್ವಾ ಹಸ್ತೇನ ವೈ ಭುವಂ ॥ ೫೯ ॥

ತತಸ್ತಾಂ ಪ್ರಾರ್ಥಯಾಮಾಸ ಭುವಂ ಸ ರಘುನಂದನಃ ॥ ೬೦ ॥

॥ ಶ್ರೀರಾಮಚಂದ್ರ ಉವಾಚ ॥

ದೇವಿ ತ್ವಂ ಸರ್ವಲೋಕಾನಾಂ ನಿವಾಸಸ್ಥಾನಮುತ್ತಮಂ ।
ಆಸೀಃ ಲೋಕೈಕಮಾತಾ ತ್ವಂ ಮಹಾನೀರೋರ್ಧ್ವತಸ್ಸದಾ ॥ ೬೧ ॥

ವರ್ತಸೇ ಪುಣ್ಯರೂಪಾ ತ್ವಂ ವಸುದಾ ಸಕಲಾನ್ ಜನಾನ್ ।
ಸ್ವಜಾತರಾದೌಷಧೀಸ್ತ್ವಂ ಕರೋಷಿ ವಿಶ್ವತೃಪ್ತಿದಾಃ ॥ ೬೨ ॥

೫೮-೬೦. ಸೀತೆಯು ಪಾತಾಳಕ್ಕೆ ಹೋಗುವುದನ್ನು ನೋಡಿ ಜಗತ್ತೇ ಜ್ಞಾನವಿಲ್ಲದಂತೆ ನಿಶ್ಚೇಷ್ಟಿತವಾಯಿತು. ಆ ಸಮಯದಲ್ಲಿ ಸೀತೆಯು ಪಾತಾಳಕ್ಕೆ ಹೋಗುತ್ತಿದ್ದುದನ್ನು ಶ್ರೀರಾಮನು ನೋಡಿ ಎಡಗೈಯ್ಯಲ್ಲಿ ಸೀತೆಯನ್ನೂ ಬಲಗೈಯ್ಯಲ್ಲಿ ಭೂದೇವಿಯನ್ನೂ ಹಿಡಿದುಕೊಂಡು ಆ ಭೂದೇವಿಯನ್ನು ಕುರಿತು ಇಂತೆಂದು ಪ್ರಾರ್ಥಿಸಿದನು.

೬೧. ಶ್ರೀರಾಮಚಂದ್ರನು ಹೇಳಿದನು-ಎಲೈ ದೇವಿಯೇ ! ನೀನು ಎಲ್ಲಾ ಲೋಕಗಳಿಗೂ ಉತ್ತಮವಾದ ನಿವಾಸಸ್ಥಾನವು. ನೀನು ಲೋಕಕ್ಕೆಲ್ಲಾ ಮುಖ್ಯವಾದ ತಾಯಿಯು. ಮೇಲುಗಡೆಯಲ್ಲಿ ಪ್ರಾಣಿಗಳಿಗೆ ಮುಖ್ಯವಾದ ನೀರನ್ನು ಉಳ್ಳವಳಾಗಿದ್ದೀಯೆ.

೬೨. ನೀನು ಪುಣ್ಯರೂಪಳು. ನೀನು ಎಲ್ಲರಿಗೂ ಸುವರ್ಣವನ್ನು ಕೊಡುತ್ತೀಯೆ. ನಿನ್ನ ಹೊಟ್ಟೆಯಲ್ಲಿಯೇ ಔಷಧಿಗಳನ್ನು ಇಟ್ಟುಕೊಂಡು ಎಲ್ಲರನ್ನೂ ಕಾಪಾಡುತ್ತಿದ್ದೀಯೆ. ಪ್ರಪಂಚಕ್ಕೆ ಯಾವಾಗಲೂ ತೃಪ್ತಿಯನ್ನು ಉಂಟುಮಾಡುತ್ತೀಯೆ.

ತ್ವಂ ದುರ್ಗಾ ತ್ವಂ ಸ್ವರಾ ಲಕ್ಷ್ಮೀರ್ಮಮ ವಿಷ್ಣೋಃ ಪ್ರಿಯಾ ಶುಭಾ ।
ತ್ವಮೇವಾದ್ಯಾತ್ರ ಮೇ ಶಕ್ತಿರ್ನಿರ್ಮಿತಾಸಿ ಮಯೈವ ಹಿ ॥ ೬೩ ॥

ನಿಜೋದರಾದ್ದದಾಸಿ ತ್ವಂ ಧಾತೂನ್ನಿತ್ಯಾ ಜನಾನ್ ಸದಾ ।
ಕ್ಷಮಾಯುಕ್ತಾ ತ್ವಮೇವಾಸಿ ಸೂಕ್ತಾಸೂಕ್ತಾದಿಕರ್ಮಸು ॥ ೬೪ ॥

ಜಾನಕೀ ತವ ಕನ್ಯೇಯಂ ಶ್ವಶ್ರೂಸ್ತ್ವಂ ಮೇಧುನಾ ತ್ವಿಹ ।
ಕನ್ಯಾದಾನಂ ಕುರು ಮುದಾ ತ್ವಯಾ ಪೂರ್ವಂ ಕೃತಂ ನ ಹಿ ॥
ಪ್ರಸೀದ ದೇವಿ ನೋ ಚೇನ್ಮೇ ತ್ವಯಿ ಕ್ರೋಧೋ ಭವಿಷ್ಯತಿ ॥ ೬೫ ॥

॥ ರಾಮದಾಸ ಉವಾಚ ॥

ಇತಿ ಸಂಪ್ರಾರ್ಥಿತಾ ಚಾಪಿ ರಾಘವೇಣ ಮಹಾತ್ಮನಾ ॥ ೬೬ ॥

---

೬೩. ನೀನೇ ದುರ್ಗೆಯು. ನೀನೇ ಸ್ವರ್ಗದ ಲಕ್ಷ್ಮೀದೇವಿಯು. ನೀನು ಮಹಾವಿಷ್ಣುವಿಗೆ ಪ್ರೀತಿಪಾತ್ರಳು. ಶುಭಳು. ನೀನೇ ಆದಿಶಕ್ತಿಯು. ನೀನೇ ನನ್ನ ಶಕ್ತಿಯೂ ಆಗಿದ್ದೀಯೆ. ನಾನೇ ನಿನ್ನನ್ನು ನಿರ್ಮಾಣಮಾಡಿದ್ದೇನೆ.

೬೪. ನೀನು ನಿನ್ನ ಹೊಟ್ಟೆಯಿಂದಲೇ ಧಾತುಗಳನ್ನೆಲ್ಲಾ ಜನಗಳಿಗೆ ಯಾವಾಗಲೂ ಕೊಡುತ್ತೀಯೆ. ನೀನು ಬಹುವಾದ ಕ್ಷಮಾವಂತಳು. ನೀನೇ ವೇದಸೂತ್ರದ ಕರ್ಮದಲ್ಲಿಯೂ, ಇತರ ಶಾಸ್ತ್ರಕರ್ಮದಲ್ಲಿಯೂ ಕ್ಷಮೆಯನ್ನು ತೋರಿಸಿದ್ದೀಯೆ.

೬೫. ಈ ಜಾನಕಿಯು ನಿನ್ನ ಮಗಳು. ಆದ್ದರಿಂದ ಈಗ ನನಗೆ ನೀನು ಅತ್ತೆಯಾಗಿದ್ದೀಯೆ. ಈಗಲಾದರೂ ನೀನು ನನಗೆ ಕನ್ಯಾದಾನವನ್ನು ಮಾಡು. ಪೂರ್ವದಲ್ಲಿಯಾದರೋ ನೀನು ಕನ್ಯಾದಾನ ಮಾಡಲಿಲ್ಲ. ಎಲೈ ದೇವಿಯೇ! ನನ್ನ ಈ ವಿಷಯದಲ್ಲಿ ನೀನು ಪ್ರಸನ್ನಳಾಗು. ಇಲ್ಲದಿದ್ದರೆ ನನಗೆ ನಿನ್ನಮೇಲೆ ಕೋಪಬರುವುದು.

೬೬. ರಾಮದಾಸನು ಹೇಳಿದನು–ಮಹಾತ್ಮನಾದ ರಾಮನು ಭೂದೇವಿಯನ್ನು ಕುರಿತು ಇಂತೆಂದು ಪ್ರಾರ್ಥಿಸಿದನು.

ನಾರೀ ಕಾಠಿನ್ಯಭಾವಾತ್ಸಾ ನಾಶೃಣೋದ್ರಾಘವೇರಿತಂ |
ಶನೈಶ್ಶನೈರಥಸ್ಸೀತಾಸಹಿತಾ ಸಾ ಜಗಾಮ ಹಿ ॥ ೬೭ ॥

ತಾಂ ಗಚ್ಛಂತೀಂ ಪುನರ್ದೃಷ್ಟ್ವಾ ಭುವಂ ರಾಮೋ ಧೃತಾಮಪಿ |
ಬಭೂವ ಕ್ರೋಧತಾಮ್ರಾಕ್ಷಸ್ತದಾ ಲಕ್ಷ್ಮಣಮಬ್ರವೀತ್ ॥ ೬೮ ॥

ಚಾಪಮಾನಯ ಸೌಮಿತ್ರೇ ಶಿಕ್ಷಯೇಹಂ ಭುವಂ ತ್ವಿಮಾಂ |
ಮತ್ಕ್ಷುರೋಪಮಬಾಣೇನ ವಸುಧೇಯಂ ವಿದೇಹಜಾಂ ॥ ೬೯ ॥

ಮಾಮದ್ಯ ದಾಸ್ಯತಿ ಕ್ಷಿಪ್ರಮಸ್ಯಾ ಘಾತಂ ನ ರೋಚಯೇ |
ತತೋಽಸೌ ಲಕ್ಷ್ಮಣಾನೀತಂ ಕರೇ ಕೋದಂಡಮುತ್ತಮಂ ॥ ೭೦ ॥

---

೬೭. ಹೆಂಗಸಿನ ಸ್ವಭಾವವು ಬಹು ಕಠಿಣವಾದುದು ಎಂದು ಲೋಕ ಪ್ರಸಿದ್ಧವಾಗಿದೆ. ಆ ರೀತಿಯಾದ ಸ್ವಭಾವದಿಂದ ಆಕೆಯು ರಾಮನು ಹೇಳಿದುದನ್ನು ಕೇಳಿಯೂ ಗಮನಿಸಲಿಲ್ಲ. ತಿರಸ್ಕಾರ ಬುದ್ಧಿಯಿಂದ ಮೆಲ್ಲ ಮೆಲ್ಲಗೆ ಸೀತೆಯೊಡನೆ ಪಾತಾಳಲೋಕಕ್ಕೇ ಹೋಗುತ್ತಿದ್ದಳು.

೬೮. ರಾಮನು ತಾನು ಆ ಭೂಮಿಯನ್ನೂ ಸೀತೆಯನ್ನೂ ಹಿಡಿದು ಕೊಂಡು ಪ್ರಾರ್ಥಿಸಿಕೊಳ್ಳುತ್ತಿದ್ದರೂ ಆ ಭೂದೇವಿಯು ನಿಲ್ಲದೆ ಪಾತಾಳಕ್ಕೆ ಹೋಗುತ್ತಿದ್ದುದನ್ನು ನೋಡಿ ಬಹುವಾಗಿ ಕೋಪಿಸಿಕೊಂಡು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಒಡನೆಯೇ ಲಕ್ಷ್ಮಣನನ್ನು ಕರೆದು ಇಂತೆಂದನು.

೬೯. ಎಲೈ ಸೌಮಿತ್ರಿಯೇ ! ಧನುಸ್ಸನ್ನು ತೆಗೆದುಕೊಂಡು ಬಾ. ಈ ಭೂಮಿಯನ್ನು ನಾನು ಶಿಕ್ಷಿಸುತ್ತೇನೆ. ನನ್ನ ಹರಿತವಾದ ಬಾಣದ ಏಟಿನಿಂದ ಆ ಭೂಮಿಯು ಜಾನಕಿಯನ್ನು ನನಗೆ ಬೇಗನೆ ಕೊಡುವಂತೆ ಮಾಡುತ್ತೇನೆ. ಈ ಸೀತೆಯು ಹೊರಟು ಹೋಗುವುದು ನನಗೆ ಇಷ್ಟವಿಲ್ಲ.

೭೦-೭೧ ಈ ಭೂಮಿಯನ್ನು ಶಿಕ್ಷಿಸುವುದೂ ನನಗೆ ಇಷ್ಟವಿಲ್ಲ. ಆದರೆ ವಿಧಿಯಿಲ್ಲವಾಗಿದೆ. ಹೀಗೆ ಹೇಳುತ್ತಲೂ ಆ ಲಕ್ಷ್ಮಣನು ಧನುಸ್ಸನ್ನು ತಂದು

ಧೃತ್ವಾ ಜ್ಯಾರೋಪಣಂ ಕೃತ್ವಾ ಶರಸಂಧಾನಮಾತನೋತ್ ।
ತದಾ ವವೌ ಮಹಾನ್ವಾಯುಶ್ಚುಕ್ಷುಭೇ ಲವಣಾರ್ಣವಃ ॥ ೭೧ ॥

ತಾರಾ ನಿಪೇತುರ್ಧರಣೀ ಬಭೂವುಸ್ಸರಜಾ ದಿಶಃ ।
ಚಕಂಪೇ ಧರಣೀ ಚಾಪಿ ತ್ರಾಹೀತಿ ವದತೀ ಮುಹುಃ ॥ ೭೨ ॥

ಕರಾಭ್ಯಾಂ ಜಾನಕೀಂ ಧೃತ್ವಾ ರಾಮಸ್ಯಾಂಕೇ ನ್ಯವೇಶಯತ್ ।
ಸ್ವಯಂ ಶ್ರೀರಾಮಪದಯೋಶ್ಶಿರಸಾ ನಮನಂ ವ್ಯಧಾತ್ ॥ ೭೩ ॥

ತದಾ ಖೇ ದೇವವಾದ್ಯಾನಿ ನೇದುಃ ಕುಸುಮವೃಷ್ಟಿಭಿಃ ।
ವವರ್ಷುರ್ಜಾನಕೀಂ ರಾಮಂ ದೇವಸಂಘಾ ಮುದಾನ್ವಿತಾಃ ॥ ೭೪ ॥

ರಾಮನಿಗೆ ಕೊಟ್ಟನು. ಅದನ್ನು ಕೈಯ್ಯಲ್ಲಿ ಹಿಡಿದುಕೊಂಡು ಬೀವನ್ನು ಎತ್ತಿಕಟ್ಟಿ ಬಾಣವನ್ನು ಹೂಡಿದನು. ಆಗ ಬಿರುಗಾಳಿಯೆದ್ದಿತು. ಸಮುದ್ರವು ಅಲ್ಲೋಲಕಲ್ಲೋಲವಾಯಿತು.

೭೨. ನಕ್ಷತ್ರಗಳು ಅಂತರಿಕ್ಷದಿಂದ ಭೂಮಿಯಮೇಲೆ ಬಿದ್ದುವು. ದಿಕ್ಕೆಲ್ಲವೂ ಧೂಳಿನಿಂದ ತುಂಬಿಕೊಂಡಿತು. ಭೂಮಿಯೂ ಕೂಡ ನಡುಗಿದಳು. ಅಲ್ಲದೆ ತ್ರಾಹಿ, ತ್ರಾಹಿ (ಕಾಪಾಡು ಕಾಪಾಡು) ಎಂದು ಆ ರಾಮನನ್ನು ಕುರಿತು ಹೇಳುತ್ತಿದ್ದಳು.

೭೩. ಮತ್ತು ಒಡನೆಯೇ ಕೈಗಳಿಂದ ಆ ಸೀತೆಯನ್ನು ಹಿಡಿದು ಎತ್ತಿಕೊಂಡು ರಾಮನ ತೊಡೆಯಮೇಲೆ ಕೂರಿಸಿದಳು. ಅನಂತರ ತಾನು ಆ ರಾಮನ ಪಾದಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿದಳು.

೭೪. ಆಗ ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದುವು. ದೇವತೆಗಳೆಲ್ಲರೂ ಸಂತೋಷದಿಂದ ಜಾನಕಿಯಮೇಲೆಯೂ ರಾಮನಮೇಲೆಯೂ ಹೂಮಳೆಯನ್ನು ಸುರಿಸಿದರು.

ತತೋ ರಾಮೋಽಪಿ ತಾಂ ದೃಷ್ಟ್ವಾ ಪದಯೋರ್ನಮತೀಂ ಭುವಂ |
ಸ್ವಕ್ರೋಧಂ ಶಾಂತಮಕರೋತ್ಕರಾಭ್ಯಾಂ ಚಾಪಮಾರ್ಗಣೌ || ೭೫ ||

ವಿಸೃಜ್ಯ ಸ್ಥಾಪಯಾಮಾಸ ಸ್ವಕರೇಣಾವನಿಂ ಪ್ರಭುಃ |
ತತಸ್ಸಾ ರಾಘವಂ ನತ್ವಾ ಪ್ರಸಾದ್ಯ ಚ ಪುನಃ ಪುನಃ || ೭೬ ||

ದತ್ವಾ ವಿದೇಹಕನ್ಯಾಯೈ ತತ್ಸಿಂಹಾಸನಮುತ್ತಮಂ |
ಸೀತಾಂ ಸ್ತುತ್ವಾಥ ತಾಂ ಪೃಷ್ಟ್ವಾ ತಯಾ ಸಂಪೂಜಿತಾಪಿ ಚ || ೭೭ ||

ಆಮಂತ್ರ್ಯ ರಾಘವಂ ಪೃಥ್ವೀ ಕ್ಷಣಾದಂತರ್ಹಿತಾಽಭವತ್ |
ತದಾ ಸೀತಾಂ ಜನಾಸ್ಸರ್ವೇ ಪುನರ್ಜಾತಾಂ ತು ಮೇನಿರೇ || ೭೮ ||

---

೭೫. ಆಗ ರಾಮನು ತನ್ನ ಪಾದಗಳಲ್ಲಿ ನಮಸ್ಕರಿಸುತ್ತಿರುವ ಭೂದೇವಿಯನ್ನು ನೋಡಿ ಒಡನೆಯೇ ತನ್ನ ಕೋಪವನ್ನು ಅಡಗಿಸಿಕೊಂಡು ಶಾಂತಿಯನ್ನು ಹೊಂದಿದನು. ಕೈಯ್ಯಲ್ಲಿದ್ದ ಧನುರ್ಬಾಣಗಳನ್ನು ಒಂದುಕಡೆ ಗಿಟ್ಟನು.

೭೬. ಆ ಭೂದೇವಿಯನ್ನು ಕೈಯ್ಯಲ್ಲಿ ಹಿಡಿದು ಎತ್ತಿಕೂರಿಸಿದನು. ಅನಂತರ ಆ ಭೂಮಿಯು ರಾಮನಿಗೆ ಮತ್ತೆ ಮತ್ತೆ ನಮಸ್ಕರಿಸಿ ಮತ್ತೆ ಮತ್ತೆ ಪ್ರಸನ್ನನನ್ನಾಗಿ ಮಾಡಿಕೊಂಡಳು.

೭೭-೭೮. ತಾನು ತಂದಿದ್ದ ಆ ಸಿಂಹಾಸನವನ್ನು ಆ ಸೀತೆಗೇ ಕೊಟ್ಟು ಬಿಟ್ಟಳು. ಅನಂತರ ಆ ಸೀತೆಯನ್ನು ಅನೇಕ ಬಗೆಯಾಗಿ ಸ್ತುತಿಸಿ ಅವಳಿಗೆ ಹೋಗಿ ಬರುತ್ತೇನೆಂದು ಹೇಳಿ, ಅವಳ ಅಪ್ಪಣೆಯನ್ನೂ ಅವಳಿಂದ ಗೌರವವನ್ನೂ ಹೊಂದಿ, ರಾಮನಿಗೂ ಹೋಗುತ್ತೇನೆಂದು ಹೇಳಿ ಒಡನೆಯೇ ಅಂತರ್ಧಾನಳಾದಳು. ಆಗ ಜನರೆಲ್ಲರೂ ಸೀತೆಯನ್ನು ಮತ್ತೆ ಹುಟ್ಟಿಬಂದಂತೆ ತಿಳಿದರು.

ಜಯಶಬ್ದೈಃ ಪ್ರಣೇಮುಸ್ತಾಂ ಚಕ್ರುಃ ಪೂಜಾಂ ಪೃಥಕ್ ಪೃಥಕ್ ।
ದದೌ ದಾನಾನ್ಯನೇಕಾನಿ ತದಾ ರಾಮೋ ಮುದಾನ್ವಿತಃ ॥ ೭೯ ॥

ನವವಾದ್ಯನಿನಾದಾಶ್ಚ ಸಂಬಭೂವುಸ್ಸಮಂತತಃ ।
ನನೃತುರ್ವಾರನಾರ್ಯಶ್ಚ ತುಷ್ಟುವುರ್ವಂದಿಮಾಗಧಾಃ ॥ ೮೦ ॥

ಸೀತಾಯಾಶ್ಶಪಥೋ ಯತ್ರ ಜಾಹ್ನವ್ಯಾ ದಕ್ಷಿಣೇ ತಟೇ ।
ಸೀತಾಕುಂಡಮಿತಿಖ್ಯಾತಂ ತತ್ರ ತೀರ್ಥಂ ಬಭೂವ ತತ್ ॥ ೮೧ ॥

ಪಪಾತಾಶ್ರುಜಲಂ ಪುಣ್ಯಂ ಸಂತಪ್ತಮನಲೋಪಮಂ ।
ಆಸೀದದ್ಯಾಪಿ ತತ್ತೀರ್ಥೇ ಶೀತೋಷ್ಣಶ್ವಾಸಕಾರಣಾತ್ ॥ ೮೨ ॥

ತದತ್ರ ಜಾನಕೀಕುಂಡಂ ಸ್ಮರಣಾದ್ಭಯನಾಶನಂ ।
ಪತ್ಯುರಾಯುಷ್ಯವೃದ್ಧ್ಯರ್ಥಂ ಸ್ತ್ರೀಭಿಸ್ಸೇವ್ಯಂ ಸದಾ ಭುವಿ ॥ ೮೩ ॥

---

೭೯. ಅಲ್ಲದೆ ಆ ಜನರು ಜಯ ಜಯ ಎಂದು ಕೂಗಿದರು. ನಮಸ್ಕರಿಸಿದರು. ಬೇರೆ ಬೇರೆಯಾಗಿ ಪೂಜಿಸಿದರು. ಆಗ ಶ್ರೀರಾಮನು ಸಂತೋಷದಿಂದ ಅನೇಕವಾದ ದಾನಗಳನ್ನು ಕೊಟ್ಟನು.

೮೦-೮೧. ಎಲ್ಲಾ ಕಡೆಯಲ್ಲಿಯೂ ವಾದ್ಯಗಳು ಮೊಳಗಿದುವು. ಸೂಳೆಯರು ಕುಣಿಯುತ್ತಿದ್ದರು. ಹೊಗಳುಭಟರು ಹೊಗಳುತ್ತಿದ್ದರು. ಆ ಜಾಹ್ನವಿಯ ದಕ್ಷಿಣದಡದಲ್ಲಿ ಸೀತೆಯು ಪ್ರಮಾಣಮಾಡಿದ ಜಾಗದಲ್ಲಿ ಸೀತಾಕುಂಡವೆಂದು ಬಹು ಉತ್ತಮವಾದ ತೀರ್ಥವೂ ಆಯಿತು.

೮೨. ಆ ಜಾಗದಲ್ಲಿ ಸೀತೆಯು ದುಃಖಪಟ್ಟು ಬಿಸಿಯಾದ ಕಣ್ಣೀರನ್ನು ಸುರಿಸಿದಳು. ಸೀತೆಯ ಆ ಕಣ್ಣೀರು ಬಿಸಿಯಾಗಿದ್ದುದರಿಂದ ಈಗಲೂ ಕೂಡ ಆ ಕುಂಡದಲ್ಲಿ ನೀರು ಬಿಸಿ ಬಿಸಿಯಾಗಿಯೇ ಇರುವುದು

೮೩. ಈ ಜಾನಕಿಯ ಕುಂಡವನ್ನು ಸ್ಮರಿಸುವುದರಿಂದಲೇ ಭಯಗಳೆಲ್ಲವೂ ಹೋಗುತ್ತವೆ. ಇದನ್ನು ಹೆಂಗಸರು ಸೇವಿಸಿದರೆ ಅವರ ಗಂಡಂದಿರಿಗೆ ಆಯುಸ್ಸು ವೃದ್ಧಿಯೂ ಆಗುತ್ತದೆ. ಆದ್ದರಿಂದ ಅವರು ಸೇವಿಸಬೇಕು.

ತತಸ್ಸೀತಾಯುತೋ ರಾಮಃ ಪುತ್ರಾಭ್ಯಾಂ ಸಹಿತೋ ಮುದಾ |
ವಸ್ತ್ರಾಲಂಕಾರಯುಕ್ತಾಭ್ಯಾಂ ಸ್ನಾನಂ ಹ್ಯವಭೃತಾಹ್ವಯಂ || ೮೪ ||

ಚಕಾರ ಕಥಿತೋತ್ಸಾಹೈಃ ಪೂರ್ವವಚ್ಚ ಸವಿಸ್ತರಂ |
ಅಥ ಯಜ್ಞಶತಂ ಪೂರ್ಣಮೇವಂ ಕೃತ್ವಾ ರಘೂತ್ತಮಃ || ೮೫ ||

ಜಾತಕರ್ಮಾದಿಸಂಸ್ಕಾರಾನ್ ಲವಸ್ಯ ವಿಧಿನಾಕರೋತ್ |
ಚಕಾರ ನಾನಾದಾನಾನಿ ದೇವಾನ್ ಸಂಪೂಜ್ಯ ಭಕ್ತಿತಃ || ೮೬ ||

ತತೋ ಮುನೀಶ್ವರಾನ್ ಪೂಜ್ಯ ಪೂಜಯಾಮಾಸ ಪಾರ್ಥಿವಾನ್ |
ಜನಕಂ ಚ ಸುಮೇಧಾಂ ಚ ಪೂಜಯಾಮಾಸ ರಾಘವಃ || ೮೭ ||

---

೮೪. ಅನಂತರ ರಾಮನು ಸೀತೆಯನ್ನೂ ಮಕ್ಕಳನ್ನೂ ಕರೆದು ಸೇರಿಸಿಕೊಂಡು ಅವರಿಗೆ ವಸ್ತ್ರಅಲಂಕಾರಗಳನ್ನು ಕೊಟ್ಟು ಅವರೊಡನೆ ಅವಭೃತ ಸ್ನಾನವನ್ನು ಮಾಡಿದನು.

೮೫. ಹಿಂದೆ ಹೇಳಿದುದಕ್ಕಿಂತಲೂ ಇನ್ನೂ ಸ್ವಲ್ಪಹೆಚ್ಚು ವಿಜೃಂಭಣೆಯಿಂದ ಆ ಅವಭೃತಸ್ನಾನವನ್ನು ನೆರವೇರಿಸಿದನು. ಈ ರೀತಿಯಾಗಿ ರಾಮನು ಆ ಯಜ್ಞವನ್ನು ಮಾಡಿ ನೂರನೆಯ ಯಾಗವನ್ನೂ ಪೂರ್ತಿಮಾಡಿಕೊಂಡನು.

೮೬. ಅನಂತರ ಲವನಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ಮಾಡಿದನು. ದೇವತೆಗಳನ್ನು ಪೂಜಿಸಿ ಶಕ್ತಿಗನುಗುಣವಾಗಿ ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಕೊಟ್ಟನು.

೮೭. ಅನಂತರ ಮುನಿಗಳನ್ನು ಪೂಜಿಸಿದನು. ಅವರನ್ನು ಪೂಜಿಸಿದ ಮೇಲೆ ರಾಜರನ್ನು ಪೂಜಿಸಿದನು. ಅನಂತರ ಜನಕನನ್ನೂ ಸುಮೇಧೆಯನ್ನೂ ಪೂಜಿಸಿದನು.

ವಿಸಸರ್ಜ ಋಷೀನ್ ಸರ್ವಾನ್ ಋತ್ವಿಜೋ ಯೇ ಸಮಾಗತಾಃ ।
ದ್ವಿಜಾದ್ಯಾಸ್ತಾನ್ ಧನಾದ್ಯೈಶ್ಚ ತೋಷಯಾಮಾಸ ಸಾದರಂ ॥ ೮೮ ॥

ತತೋ ವಿಸೃಜ್ಯ ವಿಪ್ರಾಂಶ್ಚ ಪಾರ್ಥಿವೈಸ್ಸಹ ರಾಘವಃ ।
ಕುಮಾರಾಭ್ಯಾಂ ಸೀತಯಾ ಚ ಬಂಧುಭಿಶ್ಚಾಗಮತ್ಪುರೀಂ ॥ ೮೯ ॥

ನೀರಾಜಿತಃ ಪುರಸ್ತ್ರೀಭಿರ್ವಾರಣಸ್ಥೋ ರಘೂತ್ತಮಃ ।
ಸೀತಯಾ ತನಯಾಭ್ಯಾಂ ಚ ಯಯೌ ನಿಜಗೃಹಂ ಪ್ರತಿ ॥ ೯೦ ॥

ತದಾ ಮಹೋತ್ಸವಶ್ಚಾಸೀದಯೋಧ್ಯಾಯಾಂ ಸಮಂತತಃ ।
ಚಿರಕಾಲೇನ ವೈದೇಹ್ಯಾ ದರ್ಶನಂ ಚ ಜನೈಃ ಕೃತಂ ॥ ೯೧ ॥

---

೮೮. ಋತ್ವಿಕ್ಕುಗಳಾಗಿದ್ದ ಋಷಿಗಳನ್ನು ವಿಸರ್ಜಿಸಿದನು. ಅವರಿಗೂ ಇನ್ನೂ ಉಳಿದ ಬ್ರಾಹ್ಮಣರಿಗೂ ಧನವನ್ನೂ ಕೊಟ್ಟು ಆದರದಿಂದ ಸತ್ಕರಿಸಿದನು.

೮೯. ಅನಂತರ ರಾಮನು ಆ ರಾಜರನ್ನೂ ಬ್ರಾಹ್ಮಣರನ್ನೂ ಕಳುಹಿಸಿ ಆಮೇಲೆ ಮಕ್ಕಳೊಡನೆಯೂ ಹೆಂಡತಿಯೊಡನೆಯೂ ತಮ್ಮಂದಿರೊಡನೆಯೂ ಪಟ್ಟಣಕ್ಕೆ ಹೋದನು.

೯೦. ಮಕ್ಕಳನ್ನೂ ಹೆಂಡತಿಯನ್ನೂ ಆನೆಯಮೇಲೆ ಕೂರಿಸಿಕೊಂಡು ತಾನೂ ಕುಳಿತುಕೊಂಡು ಪಟ್ಟಣದಲ್ಲಿ ಮೆರವಣಿಗೆ ಹೊರಟನು. ಆ ಪಟ್ಟಣದಲ್ಲಿನ ಪಟ್ಟಣಿಗರು ಅಲ್ಲಲ್ಲಿಯೇ ಆರತಿಯನ್ನು ಎತ್ತುತ್ತಿದ್ದರು. ಈರೀತಿಯಾಗಿ ಮಕ್ಕಳೊಡನೆಯೂ ಹೆಂಡತಿಯೊಡನೆಯೂ ಮನೆಗೆ ಹೋದನು.

೯೧. ಆಗ ಅಯೋಧ್ಯೆಯಲ್ಲೆಲ್ಲಾ ಹೆಚ್ಚಾಗಿ ಮಹೋತ್ಸವವು ನಡೆಯಿತು. ಜನಗಳು ಬಹುಕಾಲವಾದಮೇಲೆ ಈ ವೈದೇಹಿಯ ದರ್ಶನವನ್ನು ಮಾಡಿದರು.

ತತೋ ನೃಪಾದಿಕಾನ್ ಪೂಜ್ಯ ವಿಸಸರ್ಜ ರಘೂದ್ವಹಃ ।
ಜನಕಂ ಚ ಸುಮೇಧಾಂ ಚ ದದಾವಾಜ್ಞಾಂ ನಿಜಾಂ ಪುರೀಂ ॥ ೯೨ ॥

ತತಸ್ಸೀತಾಯುತೋ ರಾಮಃ ಪುತ್ರಾಭ್ಯಾಂ ಬಂಧುಭಿಸ್ಸಹ ।
ಪೂರ್ವವತ್ಸಸುಖಂ ರೇಮೇ ಚಿರಕಾಲಂ ರಘೂದ್ವಹಃ ॥ ೯೩ ॥

ರಾಮೇಣ ಸೀತಯಾ ಸಾರ್ಧಂ ಸಹಸ್ರಾಣಿ ತ್ರಯೋದಶ ।
ವರ್ಷಾಣ್ಯತ್ರ ಕೃತಂ ರಾಜ್ಯಂ ಕಸ್ಮಿನ್ ಕಾಲೇ ದ್ವಿಜೋತ್ತಮ ॥ ೯೪ ॥

ಏಕಾದಶಸಹಸ್ರಾಣಿ ವತ್ಸರಾಣಿ ಮಹಾಂತಿ ಚ ।
ತಥೈಕಾದಶವರ್ಷಾಣಿ ಮಾಸಾ ಏಕಾದಶೈವ ತು ॥ ೯೫ ॥

ದಿನಾನ್ಯೇಕಾದಶೈವಾತ್ರ ರಾಮೇಣ ಸೀತಯಾ ಸಹ ।
ಅಯೋಧ್ಯಾಯಾಂ ಕೃತಂ ರಾಜ್ಯಂ ಕಸ್ಮಿನ್ ಕಾಲೇ ದ್ವಿಜೋತ್ತಮ ॥ ೯೬ ॥

---

೯೨. ಊರಿಗೆ ಹೋದಮೇಲೆ ನಾನಾದೇಶಗಳಿಂದ ಬಂದಿದ್ದ ರಾಜರನ್ನು ಗೌರವಿಸಿ ಕಳುಹಿಸಿದನು. ಜನಕನಿಗೂ ಸುಮೇಧೆಗೂ ತಮ್ಮ ಪಟ್ಟಣಕ್ಕೆ ಹೋಗುವಂತೆ ಆಜ್ಞೆಮಾಡಿದನು.

೯೩. ಅನಂತರ ರಾಮನು ಸೀತೆಯೊಡನೆಯೂ, ಮಕ್ಕಳೊಡನೆಯೂ, ತಮ್ಮಂದಿರೊಡನೆಯೂ ಮೊದಲಿನಂತೆಯೇ ಬಹುಕಾಲದವರೆಗೂ ಸುಖವನ್ನು ಅನುಭವಿಸುತ್ತಲಿದ್ದನು.

೯೪–೯೬. ರಾಮನು ಸೀತೆಯೊಡನೆ ಒಂದು ಕಲ್ಪದಲ್ಲಿ ಹದಿಮೂರುಸಾವಿರ ವರ್ಷಗಳು ರಾಜ್ಯವಾಳಿದನು. ಮತ್ತೊಂದುಕಲ್ಪದಲ್ಲಿ ಹನ್ನೊಂದುಸಾವಿರ ವರ್ಷಗಳವರೆವಿಗೆ ರಾಜ್ಯವಾಳಿದನು. ಇನ್ನೊಂದು ಕಲ್ಪದಲ್ಲಿ ಹನ್ನೊಂದು ಸಾವಿರದ ಹನ್ನೊಂದು ವರ್ಷಗಳೂ, ಹನ್ನೊಂದು ತಿಂಗಳೂ, ಹನ್ನೊಂದು ದಿನವೂ ಆ ರಾಮನು ಸೀತೆಯೊಡನೆ ರಾಜ್ಯವಾಳಿದನು.

ಏಕಾದಶಸಹಸ್ರಾಣಿ ಚೈಕಾದಶದಿನಾನಿ ಚ ।
ಸಪ್ತದ್ವೀಪವತೀಪಾಲೋ ರಾಮೋಭೂತ್ಕಲ್ಪಭೇದತಃ ॥ ೯೭ ॥

ದಶವರ್ಷ ಸಹಸ್ರಾಣಿ ದಶವರ್ಷಶತಾನಿ ಚ ।
ರಾಮೇಣ ಸೀತಯಾ ರಾಜ್ಯಂ ಕಸ್ಮಿನ್ ಕಾಲೇ ಕೃತಂ ದ್ವಿಜ ॥ ೯೮ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಜನ್ಮಕಾಂಡೇ ಜಾನಕೀಗ್ರಹಣಂ
ನಾಮ ಅಷ್ಟಮಸ್ಸರ್ಗಸ್ಸಮಾಪ್ತಃ

---

೯೭. ಕಲ್ಪಾಂತರದಲ್ಲಿ ಹನ್ನೊಂದುಸಾವಿರ ವರ್ಷವೂ ಹನ್ನೊಂದುದಿನವೂ ಸೀತೆಯೊಡನೆ ರಾಜ್ಯವಾಳಿದನು. ಈರೀತಿಯಾಗಿ ರಾಮನು ರಾಜ್ಯವನ್ನಾಳಿದುದು ಕಲ್ಪಭೇದಗಳಿಂದೆಂದು ತಿಳಿಯಬೇಕು.

೯೮. ಮತ್ತೊಂದುಕಲ್ಪದಲ್ಲಿ ರಾಮನು ಹನ್ನೊಂದುಸಾವಿರವರ್ಷಗಳವರೆಗೆ ಸೀತೆಯೊಡನೆ ರಾಜ್ಯವಾಳಿದನೆಂದು ಹೇಳುತ್ತಾರೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಜಾನಕೀಗ್ರಹಣ
ಎಂಬ ಎಂಟನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ
॥ ಎಂಟನೆಯ ಸರ್ಗದ ಸಾರಾಂಶವು ॥

ಬೆಳಗಾದಮೇಲೆ ರಾಮನು ಲವಕುಶರನ್ನು ಕರೆಸಿದನು. ಅವರು ಜನ್ಮಕಾಂಡವನ್ನು ಆದಿನ ಹಾಡಿದರು. ಇದರಿಂದ ಎಲ್ಲರಿಗೂ ಈ ಹುಡುಗರು ಸೀತೆಯ ಮಕ್ಕಳೆಂಬುದು ತಿಳಿಯಿತು. ರಾಮನಿಗೂ ಸಂತೋಷವಾಯಿತು.

ಇಷ್ಟರವೇಳೆಗೆ ಲವನ ಬಾಣದಿಂದ ತೊಂದರೆಪಟ್ಟಿದ್ದ ಲಕ್ಷ್ಮಣಾದಿಗಳು ಅಲ್ಲಿಗೆ ಬಂದು ರಾಮನಿಗೆ ನಮಸ್ಕರಿಸಿದರು. ರಾಮನು ಗಾನವನ್ನು ಅಷ್ಟಕ್ಕೇ ನಿಲ್ಲಿಸುವಂತೆ ಹೇಳಿ ಲಕ್ಷ್ಮಣನನ್ನೂ ಅವನ ಜೊತೆಯಲ್ಲಿ ಕೆಲವರು ಮುಖ್ಯಸ್ಥರನ್ನೂ ಕರೆದು ವಾಲ್ಮೀಕಿಯನ್ನೂ ಸೀತೆಯನ್ನೂ ಕರೆದುಕೊಂಡು ಬರುವಂತೆ ಕಳುಹಿಸಿದನು. ಅವರು ಹೋಗಿ ವಾಲ್ಮೀಕಿಯನ್ನು ಕರೆಯಲು ಆತನು ನಾಳೆ ಬರುವಂತೆಯೂ ಆಗಲೇ ಸೀತೆಯೂ ಬಂದು ತನ್ನ ನಿಜಸ್ವಭಾವವನ್ನು ತೋರಿಸುವಳೆಂದೂ ಹೇಳಿಕಳುಹಿಸಿದನು.

ಆ ಗಂಗೆಯ ದಡದಲ್ಲಿ ಮಾರನೆಯ ದಿನಕ್ಕೆ ದೊಡ್ಡ ಸಭೆಯು ಏರ್ಪಟ್ಟಿತು. ಎಲ್ಲರೂ ಬಂದು ಸೇರಿದರು. ರಾಮನು ಸೀತೆಯು ತನ್ನ ಪಾತಿವ್ರತ್ಯದ ವಿಷಯದಲ್ಲಿ ಪ್ರಮಾಣಮಾಡುವಳೆಂದೂ ಅದನ್ನು ಎಲ್ಲರೂ ನೋಡಬೇಕೆಂದೂ ಹೇಳಿದನು. ಆಗ ವಾಲ್ಮೀಕಿಯು ಸೀತೆಯನ್ನು ಅಲ್ಲಿಗೆ ಕರೆತಂದನು. ಆಗ ವಾಲ್ಮೀಕಿಯು ರಾಮನನ್ನು ಕುರಿತು “ ಎಲೈ ರಾಮನೆ! ಈ ಸೀತೆಯು ಪತಿವ್ರತೆಯು. ಧರ್ಮವನ್ನು ಬಿಟ್ಟು ಸ್ವಲ್ಪವೂ ನಡೆಯುವವಳಲ್ಲ. ಲೋಕಾಪವಾದದ ಹೆದರಿಕೆಯಿಂದ ನನ್ನ ಆಶ್ರಮದ ಹತ್ತಿರದಲ್ಲಿ ಈಕೆಯನ್ನು ಬಿಟ್ಟುಬಿಟ್ಟೆ. ಅನಂತರ ಈಕೆಯು

ನನ್ನ ಆಶ್ರಮಕ್ಕೆ ಬಂದಳು ಇವಳು ಪವಿತ್ರಳು. ಈಗ ತನ್ನ ಪ್ರಮಾಣದಿಂದ ತನ್ನ ಯೋಗ್ಯತೆಯನ್ನು ತೋರಿಸುವಳು ಈ ಲವಕುಶರಿಬ್ಬರೂ ಸೀತೆಯ ಮಕ್ಕಳು. ಕುಶನು ನಿನ್ನಿಂದ ಜನಿಸಿದವನು. ಲವನನ್ನು ನಾನು ನನ್ನ ತಪೋ ಶಕ್ತಿಯಿಂದ ನಿರ್ಮಿಸಿದೆನು. ನಾನು ಸುಳ್ಳನ್ನು ಹೇಳುವುದಿಲ್ಲ. ಸುಳ್ಳನ್ನು ಹೇಳಿದ ಜ್ಞಾಪಕವೂ ಕೂಡ ನನಗಿಲ್ಲ. ಬಹುವರ್ಷಗಳವರೆಗೂ ತಪಸ್ಸನ್ನು ಮಾಡಿರುವೆನು. ನಾನು ಸುಳ್ಳು ಹೇಳಿದರೆ ಈ ತಪಸ್ಸಿನ ಫಲವು ನನಗೆ ಬಾರದೆ ಹೋಗಲಿ." ಎಂದು ಹೇಳಿ ಆ ಮಕ್ಕಳನ್ನು ರಾಮನ ತೊಡೆಯಮೇಲೆ ಕೂರಿಸಿದನು. ರಾಮನು ಲವನ ತಲೆಯಮೇಲೆ ಕೈಯ್ಯನ್ನಿಟ್ಟು ಅವನ ಉದ್ದವನ್ನು ಕಡಿಮೆಮಾಡಿ ಮಗು ವಂತೆ ಮಾಡಿದನು.

ರಾಮನು ಎದುರಿಗೆ ನಿಂತಿರುವ ಸೀತೆಯನ್ನು ನೋಡಿದನು ಆಕೆಗೆ ಎರಡು ಕೈಗಳೂ ಇದ್ದುವು. ಏನೂ ತಿಳಿಯದವನಂತೆ ಲಕ್ಷ್ಮಣನನ್ನು ಕರೆದು ಎಲೈ ಲಕ್ಷ್ಮಣನೇ! ನೀನು ಸೀತೆಯ ಕೈಯ್ಯನ್ನು ನನಗೆ ತೋರಿಸಲು ತಂದೆಯಲ್ಲ! ಅದನ್ನು ತೆಗೆದುಕೊಂಡು ಬಾ. ಎನ್ನಲು ಅವನು ತಂದು ತೋರಿಸಿದನು. ಅದನ್ನು ಎಲ್ಲರೂ ನೋಡಿದರು. ಅವರೆದುರಿಗೇ ಅದು ಅದೃಶ್ಯವಾಯಿತು.

ಆಗ ರಾಮನು ವಾಲ್ಮೀಕಿಗೆ ನಮಸ್ಕರಿಸಿ ಎಲೈ ಮುನಿವರ್ಯನೆ! ನಿನ್ನ ಮಾತಿನಿಂದಲೇ ನನಗೆ ನಂಬಿಕೆಯು ಬಂದಿತು. ಇದೂ ಅಲ್ಲದೆ ಲಂಕೆಯಲ್ಲಿಯೂ ಕೂಡ ಆಕೆಯ ವಿಷಯವನ್ನು ತಿಳಿದಿದ್ದೇನೆ. ಆದರೆ ಈ ಜನಗಳ ಹೆದರಿಕೆಯಿಂದ ಪತಿವ್ರತೆಯಾಗಿದ್ದರೂ ಈಕೆಯನ್ನು ನಾನು ಬಿಡಬೇಕಾಯಿತು. ಇದನ್ನು ಕ್ಷಮಿಸು ಕುಶನು ನನ್ನಿಂದ ಜನಿಸಿದನೆಂದೂ ಲವನು ನಿನ್ನಿಂದ ನಿರ್ಮಿತನೆಂದೂ ತಿಳಿದಿರುವೆನು. ಆದರೂ ಈ ಜನಗಳಿಗೆ ನಂಬಿಕೆಯು ಬರುವುದಕ್ಕೆ ಸೀತೆಯು ತನ್ನ ಪ್ರಮಾಣವನ್ನು ಮಾಡಲಿ. ಇವರ ಮಧ್ಯದಲ್ಲಿ ಶುದ್ಧಳೆಂದು ತಿಳಿದರೆ ಆಗ ಈಕೆಯನ್ನು ಅಂಗೀಕರಿಸುತ್ತೇನೆ. ಎಂದನು.

ಎಲ್ಲರೂ ಆ ಸೀತೆಯ ಕಡೆಗೆ ನೋಡಲು ಮೊದಲಿಟ್ಟರು. ಆಗ ಸೀತೆಯು ಉತ್ತರಮುಖವಾಗಿ ನಿಂತು ಕೈಮುಗಿದುಕೊಂಡು " ನಾನು ರಾಮನನ್ನು ಹೊರ

ತಾಗಿ ಬೇರೆಯವರನ್ನು ಮನಸ್ಸಿನಿಂದಲೂ ಯೋಚಿಸದಿದ್ದರೆ ಈ ಭೂಮಿಯು ನನಗೆ ಒಳಗೆ ಹೋಗಲು ಬಿರುಕುಬಿಟ್ಟು ಜಾಗವನ್ನು ಕೊಡಲಿ '' ಎಂದಳು.

ಸೀತೆಯು ಹೀಗೆ ಹೇಳಿದೊಡನೆಯೇ ಭೂಮಿಯು ಬಿರುಕುಬಿಟ್ಟಿತು. ನಾಗೇಂದ್ರರು ಹೊತ್ತುಕೊಂಡಿದ್ದ ಒಂದು ಸಿಂಹಾಸನವು ಆ ಬಿರುಕಿನಿಂದ ಬಂದಿತು. ಭೂದೇವಿಯು ಆಕೆಯನ್ನು ಎತ್ತಿ ಅದರಲ್ಲಿ ಕೂರಿಸಿಕೊಂಡಳು.

ಅನಂತರ ಆ ಸಿಂಹಾಸನವು ಒಳಕ್ಕೆ ಹೋಗುತ್ತ ಬಂದಿತು. ಎಲ್ಲರೂ '' ಸಾಧು ಸಾಧು '' ಎನ್ನುತ್ತಿದ್ದರು ಆಗ ರಾಮನು ಆಕೆಯು ಹೋಗದಂತೆ ಹಿಡಿದುಕೊಂಡನು. ಮತ್ತು ಭೂಮಿಯನ್ನು ಈ ಸೀತೆಯನ್ನು ಬಿಟ್ಟುಕೊಡುವಂತೆ ಕೇಳಿಕೊಂಡನು. ಆದರೂ ಆಕೆಯು ಸ್ತ್ರೀಸ್ವಭಾವವಾದ ಕಾಠಿಣ್ಯದಿಂದ ಕೇಳಲಿಲ್ಲ. ಆಗ ಲಕ್ಷ್ಮಣನಿಂದ ಧನುಸ್ಸನ್ನು ತರಿಸಿ ಆ ಭೂದೇವಿಯನ್ನು ಹೊಡೆಯಲು ಮನಸ್ಸುಮಾಡಿದನು. ಇದರಿಂದ ಹೆದರಿದ ಆಕೆಯು ಸೀತೆಯನ್ನು ತಂದುಕೊಟ್ಟಳು. ಆಗ ಎಲ್ಲರೂ ಪುಷ್ಪವೃಷ್ಟಿಯನ್ನು ಸುರಿಸಿದರು.

ಅನಂತರ ಶ್ರೀರಾಮನು ಸೀತೆಯೊಡನೆ ಯಜ್ಞವನ್ನು ಪೂರ್ತಿಗೊಳಿಸಿದನು. ಹೆಂಡತಿ ಮಕ್ಕಳೊಡನೆಯೂ, ತಮ್ಮಂದಿರೊಡನೆಯೂ ಮನೆಗೆ ವಿಜೃಂಭಣೆಯಿಂದ ಹೋದನು. ಮನೆಯಲ್ಲಿ ಹೊರಗಿನವರಾದ ಎಲ್ಲರಿಗೂ ಗೌರವಿಸಿ ಅವರವರ ದೇಶಕ್ಕೆ ಕಳುಹಿಸಿದನು. ಅನಂತರ ಎಲ್ಲರೊಡನೆಯೂ ಬಹುಕಾಲ ರಾಜ್ಯಭಾರ ಮಾಡುತ್ತ ಸುಖವಾಗಿದ್ದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಜನ್ಮಕಾಂಡೇ

॥ ನವಮಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ಅಥೋರ್ಮಿಲಾಮಾಂಡವೀ ಚ ಶ್ರುತಕೀರ್ತಿಸ್ಸಹೈವ ತಾಃ ।
ಬಭೂವುರಂತರಾತ್ಕಿಂಚಿದಂತರ್ವತ್ನ್ಯೋ ಮಹೋದರಾಃ ॥ ೧ ॥

ತಾಸಾಂ ಚಕಾರ ಸೀತಾ ಸಾ ಕೌತುಕಾನಿ ಚ ಸಾದರಂ ।
ತಾಸಾಂ ಪುಂಸವನಾದೀನಿ ವಿವಿಧಾನಿ ರಘೂತ್ತಮಃ ॥ ೨ ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ

ಒಂಭತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಅನಂತರ ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರು ಸ್ವಲ್ಪ ಸ್ವಲ್ಪ ಹೆಚ್ಚುಕಡಿಮೆಯ ದಿನಗಳಲ್ಲಿಯೇ ಗರ್ಭಿಣಿಯರಾದರು. ಅದರಿಂದ ಅವರ ಗರ್ಭವು ದೊಡ್ಡದಾಗುತ್ತಾ ಬಂದಿತು.

೨. ಸೀತೆಯು ಅವರೆಲ್ಲರಿಗೂ ಬಹುವಾದ ಉತ್ಸವವನ್ನು ಮಾಡಿದಳು. ರಾಮನು ಅವರೆಲ್ಲರಿಗೂ ಕ್ರಮವಾಗಿ ಪುಂಸವನಾದಿಗಳನ್ನು ಮಾಡಿದನು.

ಆಹೂಯ ಪತ್ನ್ಯೈ ಜನಕಂ ಕಾರಯಾಮಾಸ ಬಂಧುಭಿಃ ।
ದೋಹದಾನ್ಪೂರಯಾಮಾಸುಸ್ತಾಸಾಂ ಪೌರಸುಹೃತ್ ಸ್ತ್ರಿಯಃ ॥ ೩ ॥

ತಾಸಾಂ ಸರ್ವಾಣಿ ಸಮುತ್ಸಾಹಾನೇವಂ ಕೃತ್ವಾ ರಘೂತ್ತಮಃ ।
ವಸ್ತ್ರಾಲಂಕಾರಭೂಷಾಭಿಸ್ತೋಷಯಾಮಾಸ ಸಾದರಂ ॥ ೪ ॥

ಅಥೋರ್ಮಿಲಾ ಸಾ ತನಯಂ ಸುಷುವೇ ಪರಮೋದಯಂ ।
ತತಸ್ಸಾ ಮಾಂಡವೀ ಪುತ್ರಂ ಸುಷುವೇ ಪರಮೇ ದಿನೇ ॥ ೫ ॥

ತತಸ್ಸಾಶ್ರುತಕೀರ್ತಿಶ್ಚ ಸುಷುವೇ ಯಮಲೌ ಸುತೌ ।
ಕಾಲಾಂತರೇಣೋರ್ಮಿಲಾಯಾ ದ್ವಿತೀಯಸ್ತನಯೋಽಭವತ್ ॥ ೬ ॥

ತಥಾಪರಸ್ತುಮಾಂಡವ್ಯಾಃ ಪುತ್ರಃ ಕಾಲಾಂತರಾದಭೂತ್ ।
ಜಾತಕರ್ಮಾದಿಸಂಸ್ಕಾರಾಂಸ್ತೇಷಾಂ ರಾಮಃ ಪೃಥಕ್ ಪೃಥಕ್ ॥ ೭ ॥

---

೩. ಆ ಕಾಲದಲ್ಲಿ ಅವರವರ ತಾಯಿತಂದೆಗಳನ್ನೂ, ಜನಕ, ಸುಮೇಧೆಯರನ್ನೂ ಕರೆಸಿದ್ದನು. ಪಟ್ಟಣಿಗರೂ, ಸ್ನೇಹಿತೆಯರೂ ಅವರವರ ಬಯಕೆಗಳನ್ನು ನೆರವೇರಿಸಿದರು.

೪. ಈ ರೀತಿಯಾಗಿ ಅವರಿಗೆ ಆಗಬೇಕಾದ ಉತ್ಸವಗಳನ್ನು ರಾಮನು ನೆರವೇರಿಸಿದನು. ಮತ್ತು ವಸ್ತ್ರ, ಅಲಂಕಾರ, ಒಡವೆ ಮುಂತಾದುವುಗಳಿಂದಲೂ ಅವರನ್ನು ಸಂತೋಷಪಡಿಸಿದನು.

೫–೭. ಊರ್ಮಿಳೆಯು ಉತ್ತಮೋತ್ತಮನಾದ ಒಂದು ಗಂಡುಮಗನನ್ನು ಹೆತ್ತಳು. ಮಾಂಡವಿಯೂ ಕೂಡ ಶುಭದಿನದಲ್ಲಿ ಗಂಡುಮಗುವನ್ನು ಹೆತ್ತಳು. ಶ್ರುತಕೀರ್ತಿಯೂ ಅವಳಿಜವಳಿ ಗಂಡುಮಕ್ಕಳನ್ನು ಹೆತ್ತಳು. ಕೆಲವುಕಾಲದ ಮೇಲೆ ಊರ್ಮಿಳೆಗೆ ಎರಡನೆಯ ಗಂಡುಮಗುವೂ ಹುಟ್ಟಿತು ಕೆಲವುಕಾಲದ ಮೇಲೆ ಮಾಂಡವಿಗೂ ಮತ್ತೊಂದು ಗಂಡುಮಗುವಾಯಿತು. ಅವರೆಲ್ಲರಿಗೂ ರಾಮನು ಜಾತಕರ್ಮ ನಾಮಕರಣಗಳನ್ನು ಬೇರೆ ಬೇರೆಯಾಗಿ ಮಾಡಿಸಿದನು.

ಚಕಾರ ಗುರುಣಾ ವಿಪ್ರೈರ್ವಹೋತ್ಸಾಹೈರ್ಯಥಾ ವಿಧಿ ।
ಲಕ್ಷ್ಮಣಸ್ಯಾಂಗದೋ ಜ್ಯೇಷ್ಠಶ್ಚಿತ್ರಕೇತುಃ ಪರಃ ಸ್ಮೃತಃ ॥ ೮ ॥

ಮಾಂಡವ್ಯಾಃ ಪುಷ್ಕರೋ ಜ್ಯೇಷ್ಠಃ ಕನಿಷ್ಠಸ್ತಕ್ಷನಾಮಕಃ ।
ಶ್ರುತಕೀರ್ತ್ಯಾಸ್ಸುಬಾಹುಶ್ಚ ಯೂಪಕೇತುಃ ಪರಃ ಸ್ಮೃತಃ ॥ ೯ ॥

ಏವಂ ಕೃತಾನಿ ನಾಮಾನಿ ಗುರುಣಾ ವಿಧಿಪೂರ್ವಕಂ ।
ಏತೇಂತರೇಣ ಸಂಜಾತಾಃ ಕಾಲೇ ಕಾಲೇ ಕ್ರಮೇಣ ಚ ॥ ೧೦ ॥

ತೇಽತ್ರೈಕತ್ರ ಮಯಾ ಪ್ರೋಕ್ತಾಸ್ಸಂಕ್ಷೇಪೇಣಾಂಗ ತ್ವತ್ಪುರಃ ।
ಸರ್ವೇಷಾಂ ಜನ್ಮಕಾಲೇಷು ಸುರಾಸ್ಸರ್ವೇ ಮುದಾನ್ವಿತಾಃ ॥ ೧೧ ॥

ವಾದಯಾಮಾಸುರ್ವಾದ್ಯಾನಿ ವವರ್ಷುಃ ಪುಷ್ಪವೃಷ್ಟಿಭಿಃ ।
ಮಾತೃಭಿಃ ಪಿತೃಭಿರ್ಯುಕ್ತಾನ್ ಬಾಲಕಾನ್ ಸೂರ್ಯಸನ್ನಿಭಾನ್ ॥ ೧೨ ॥

---

೮. ಇವೆಲ್ಲವನ್ನೂ ಕೂಡ ಆ ಗುರುವಾದ ವಸಿಷ್ಠನಿಂದಲೇ ಮಾಡಿಸಿದನು. ಲಕ್ಷ್ಮಣನ ಹಿರಿಯಮಗನಿಗೆ ಅಂಗದನೆಂದೂ, ಎರಡನೆಯವನಿಗೆ ಚಿತ್ರಕೇತುವೆಂದೂ ಹೆಸರಿಟ್ಟನು.

೯. ಮಾಂಡವಿಯ ಹಿರಿಯಮಗನಿಗೆ ಪುಷ್ಕರನೆಂದೂ, ಎರಡನೆಯವನಿಗೆ ತಕ್ಷನೆಂದೂ ಹೆಸರಿಟ್ಟನು. ಶ್ರುತಕೀರ್ತಿಯ ಹಿರಿಯಮಗನಿಗೆ ಸುಬಾಹುವೆಂದೂ ಎರಡನೆಯವನಿಗೆ ಯೂಪಕೇತುವೆಂದೂ ಹೆಸರಿಟ್ಟನು.

೧೦. ಗುರುವು ಅವರೆಲ್ಲರಿಗೂ ಈ ರೀತಿಯಾಗಿ ನಾಮಕರಣಗಳನ್ನು ಮಾಡಿದನು. ಇವರೆಲ್ಲರೂ ಒಬ್ಬರಿಗೊಬ್ಬರು ತಮಗೆ ಯೋಗ್ಯವಾದ ಕಾಲವ್ಯವಧಾನದಿಂದ ಹುಟ್ಟಿದರು.

೧೧–೧೩. ಎಲೈ ಶಿಷ್ಯನೇ ! ಈ ರಾಮನ ತಮ್ಮನಮಕ್ಕಳ ವಿಷಯವನ್ನು ಸಂಕ್ಷೇಪವಾಗಿ ಒಂದೇ ಜಾಗದಲ್ಲಿ ಹೇಳಿದೆನು. ಈ ಮಕ್ಕಳ ಜನ್ಮಕಾಲದಲ್ಲಿಯೂ ಕೂಡ ದೇವತೆಗಳು ದೇವದುಂದುಭಿಯನ್ನು ಬಡಿದರು. ಹೂಮಳೆಯನ್ನು ಸುರಿಸಿದರು. ತಾಯಿತಂದೆಗಳನ್ನೂ ಮಕ್ಕಳನ್ನೂ ಕೂರಿಸಿ ರಾಮನು ಅರಮನೆ

ರಾಜದ್ವಾರಿ ಮಹಾನಾಸೀದುತ್ಸವಶ್ಚ ನೃಪಾಜ್ಞಯಾ ।
ನಿನೇದುರ್ನವವಾದ್ಯಾನಿ ನನೃತುಶ್ಚಾಪ್ಸರೋಗಣಾಃ ॥ ೧೩ ॥

ನಾದಯಂತಿ ಸ್ಮ ತೂರ್ಯಾಣಿ ತುಷ್ಟುವುರ್ವಂದಿಮಾಗಧಾಃ ।
ನಗರೀಂ ಶೋಭಯಾಮಾಸುಃ ಪತಾಕಾಧ್ವಜತೋರಣೈಃ ॥ ೧೪ ॥

ಸುಹೃದಃ ಪಾರ್ಥಿವಾಸ್ಸರ್ವೇ ರಾಮಾದೀನಾಂ ಚ ಪೂಜನಂ ।
ವಸ್ತ್ರೈರಾಭರಣಾದ್ಯೈಶ್ಚ ಚಕ್ರಿರೇ ತೇ ಪೃಥಕ್ ಪೃಥಕ್ ॥ ೧೫ ॥

ದದುರ್ದಾನಾನಿ ವಿಪ್ರೇಭ್ಯೋ ರಾಮಾದ್ಯಾ ಬಂಧವಶ್ಚ ತೇ ।
ಬ್ರಾಹ್ಮಣಾನ್ ಭೋಜಯಾಮಾಸುಶ್ಶ್ರಾದ್ಧಾನಿ ಚಕ್ರುರಾದರಾತ್ ॥ ೧೬ ॥

ಏವಮಷ್ಟಕುಮಾರಾಸ್ತೇ ರಾಮಾದೀನಾಂ ಮನೋರಮಾಃ ।
ವವೃಧುಶ್ಚಂದ್ರವದನಾ ಮಾತೃಭಿರ್ಲಾಲಿತಾಸ್ಸುಖಂ ॥ ೧೭ ॥

ಯಲ್ಲಿ ಬಹು ದೊಡ್ಡದೊಡ್ಡ ಉತ್ಸವಗಳನ್ನು ಮಾಡಿಸಿದನು. ಆಗ ಉತ್ತಮವಾದ ವಾದ್ಯಗಳು ಮೊಳಗಿದುವು. ನರ್ತಕಿಯರು ಕುಣಿದರು.

೧೪. ವಾದ್ಯಗಳನ್ನೆಲ್ಲಾ ಬಾರಿಸುತ್ತಾ ಬಂದರು ಹೊಗಳುಭಟರು ಹೊಗಳಿದರು ಪತಾಕೆ, ಧ್ವಜತೋರಣಗಳಿಂದ ಪಟ್ಟಣವನ್ನೆಲ್ಲಾ ಅಲಂಕರಿಸಿದ್ದರು.

೧೫. ರಾಮನ ಸ್ನೇಹಿತರು, ರಾಜರುಗಳು, ಎಲ್ಲರೂ ಕೂಡ ಆ ಕಾಲದಲ್ಲಿ ವಸ್ತ್ರ, ಆಭರಣ ಮುಂತಾದುವುಗಳಿಂದ ಅವರೆಲ್ಲರನ್ನೂ ಬೇರೆ ಬೇರೆಯಾಗಿ ಗೌರವಿಸಿದರು.

೧೬. ರಾಮನೂ ಅವನ ತಮ್ಮಂದಿರೂ ಬ್ರಾಹ್ಮಣರಿಗೆ ಬೇರೆ ಬೇರೆಯಾಗಿ ದಾನಗಳನ್ನು ಕೊಟ್ಟರು. ನಾಂದೀಶ್ರಾದ್ಧವನ್ನು ಮಾಡಿ ಬ್ರಾಹ್ಮಣರಿಗೆ ಬಹುವಾಗಿ ಭೋಜನಮಾಡಿಸಿದರು.

೧೭. ಈ ರೀತಿಯಾಗಿ ರಾಮನಿಗೂ ಅವನ ತಮ್ಮಂದಿರಿಗೂ ಸೇರಿ ಎಂಟುಜನ ಮಕ್ಕಳಾದರು. ಎಲ್ಲರೂ ಸುಂದರರು. ಚಂದ್ರನಂತೆ ಮುಖವುಳ್ಳವರು. ಅವರು ತಾಯಿಯರಿಂದ ಪೋಷಿತರಾಗಿ ಬೆಳೆಯುತ್ತ ಬಂದರು.

ಶೃಂಖಲಾಬದ್ಧರುಕ್ಮಾದಿನಿರ್ಮಿತೇಷು ವರೇಷು ಚ ।
ಪ್ರೇಂಖೇಷು ಹಿ ಕುಮಾರಾಸ್ತೇ ವಿರೇಜೂ ರುಕ್ಮಭೂಷಿತಾಃ ॥ ೧೮ ॥

ಫಾಲೇ ಸ್ವರ್ಣಮಯಾಶ್ವತ್ಥಪರ್ಣಾನ್ಯತಿ ಮಹಾಂತಿ ಚ ।
ಮುಕ್ತಾಫಲಾವಲಂಬೀನಿ ಶೋಭಯಂತಿ ಸ್ಮ ಬಾಲಕಾನ್ ॥ ೧೯ ॥

ಕಂಠೇ ರತ್ನಮಣಿವ್ರಾತಮಧ್ಯದ್ವೀಪಿನಖಾಂಚಿತಾಃ ।
ಕರ್ಣಯೋಃ ಸ್ವರ್ಣಸಂಪನ್ನರತ್ನಾರ್ಜುನಸುತಾಲುಕಾಃ ॥ ೨೦ ॥

ಸಿಂಜಾನಮಣಿಮಂಜೀರಕಟಿಸೂತ್ರಾಂಗದೈರ್ಯುತಾಃ ।
ಸ್ಮಿತವಕ್ತ್ರಾಲ್ಪದಶನಾ ಇಂದ್ರನೀಲಮಣಿಪ್ರಭಾಃ ॥ ೨೧ ॥

---

೧೮. ಸರಪಣಿಯಿಂದ ಕಟ್ಟಿದ ಉತ್ತಮವಾದ ಚಿನ್ನದ ತೊಟ್ಟಿಲುಗಳಲ್ಲಿ ಆ ಮಕ್ಕಳು ಚಿನ್ನದ ಒಡವೆಗಳನ್ನು ಹಾಕಿಕೊಂಡು ಪ್ರಕಾಶಿಸುತ್ತಿದ್ದರು.

೧೯. ಆ ಮಕ್ಕಳ ಹಣೆಗೆ ಚಿನ್ನದಲ್ಲಿ ಅರಳಿ ಎಲೆಗಳನ್ನು ಮಾಡಿಸಿ ಕಟ್ಟಿದ್ದರು. ಅವು ದೊಡ್ಡ ದೊಡ್ಡವಾಗಿದ್ದುವು. ಅವುಗಳ ಅಂಚಿಗೆ ಮುತ್ತುಗಳನ್ನೂ ಪೋಣಿಸಿದ್ದರು. ಇದು ಆ ಬಾಲಕರಿಗೆ ಅಲಂಕಾರವಾಗಿದ್ದಿತು.

೨೦. ಕತ್ತಿಗೆ ರತ್ನದಮಣಿಗಳ ಹಾರವನ್ನು ಹಾಕಿದ್ದರು ಆ ಹಾರಗಳ ಮಧ್ಯದಲ್ಲಿ ರಕ್ಷಾರ್ಥವಾಗಿ ಹುಲಿಯ ಉಗುರುಗಳನ್ನು ಸೇರಿಸಿ ಪೋಣಿಸಿದ್ದರು. ಕಿವಿಗಳಿಗೆ ಮುತ್ತಿನ ಮಣಿಯನ್ನು ಚಿನ್ನದಲ್ಲಿ ಕಟ್ಟಿ ರತ್ನಗಳನ್ನೂ ಸೇರಿಸಿ ಕರ್ಣಕುಂಡಲವನ್ನು ಮಾಡಿ ಹಾಕಿದ್ದರು.

೨೧. ನಡುವಿಗೆ ಗೆಜ್ಜೆಯಿಂದ ಕೂಡಿದ ಉಡಿದಾರವನ್ನು ಹಾಕಿದ್ದರು. ಭುಜಗಳಿಗೆ ಭುಜಕೀರ್ತಿಗಳನ್ನು ಹಾಕಿದ್ದರು. ಹಲ್ಲುಗಳು ಸ್ವಲ್ಪ ಸ್ವಲ್ಪವಾಗಿ ಬರುತ್ತಲಿದ್ದುವು ಅವರು ಇಂದ್ರನೀಲಮಣಿಯ ಬಣ್ಣಕ್ಕಿದ್ದರು.

ಅಂಗಣೇ ರಿಂಗಮಾಣಾಶ್ಚ ಸಂಸ್ಕಾರೈಸ್ಸಂಸ್ಕೃತಾಶ್ಶುಭಾಃ ।
ತೇ ಪಿತ್ರೋ ರಂಜಯಾಮಾಸುರ್ಮಾತ್ರ್ಯಾಶ್ಚಾಪಿ ವಿಶೇಷತಃ ॥ ೨೨ ॥

ನಾನಾಶಿಶುಕ್ರೀಡನಕೈಶ್ಚೇಷ್ಟಿತೈರ್ಮುಖಚುಂಬನೈಃ ।
ಬಾಲಕೃತ್ರಿಮಯುದ್ಧೈಶ್ಚ ಗಮನೈರ್ಮಧುರೇರಿತೈಃ ॥ ೨೩ ॥

ತತಸ್ತೇ ಬಾಲಕಾಸ್ಸರ್ವೇ ವಸ್ತ್ರಾಲಂಕಾರಭೂಷಿತಾಃ ।
ಸಭಾಯಾಂ ರಾಘವಂ ನತ್ವಾ ತಸ್ಥುಸ್ಸಿಂಹಾಸನೋಪರಿ ॥ ೨೪ ॥

ಏಕದಾ ರಾಘವಃ ಪ್ರಾಹ ವಸಿಷ್ಠಂ ಸದಸಿ ಸ್ಥಿತಂ ।
ಅವಲೋಕಯ ಬಾಲಾನಾಂ ತ್ವಂ ಚಿಹ್ನಾನಿ ಯಥಾಕ್ರಮಂ ॥ ೨೫ ॥

---

೨೨. ಅವರಿಗೆ ಆಗಬೇಕಾದ ಸಂಸ್ಕಾರಗಳೆಲ್ಲವನ್ನೂ ಮಾಡಿದ್ದರು. ಇಂತಹ ಮಕ್ಕಳು ಅಂಗಳದಲ್ಲಿ ಈಜುತ್ತ ತೆವಳುತ್ತ ಅಂಬೆಗಾಲಿಡುತ್ತ ತಾಯಿ ತಂದೆಗಳಿಗೆ ಸಂತೋಷಪಡಿಸುತ್ತಿದ್ದರು.

೨೩. ಮಕ್ಕಳಾಡತಕ್ಕ ಅನೇಕ ಬಗೆಯಾದ ಆಟಗಳಿಂದಲೂ, ಮುತ್ತು ಮುಂತಾದುವುಗಳನ್ನು ಕೊಡುವುದರಿಂದಲೂ, ಬಾಲರು ಮಾಡತಕ್ಕ ಹುಡುಗಾಟದ ಜಗಳದಿಂದಲೂ, ಕೋಪಿಸಿಕೊಂಡು ಓಡಿಹೋಗುವುದರಿಂದಲೂ, ಅವರು ತಮ್ಮನ್ನು ನೋಡಿದವರನ್ನು ಸಂತೋಷಪಡಿಸುತ್ತಿದ್ದರು.

೨೪. ಆ ಮಕ್ಕಳೆಲ್ಲರೂ ವಸ್ತ್ರಗಳಿಂದಲೂ, ಒಡವೆಗಳಿಂದಲೂ ಅಲಂಕೃತರಾಗಿ ಸಭೆಗೆ ಹೋಗಿ ರಾಮನಿಗೆ ನಮಸ್ಕರಿಸಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿದ್ದರು.

೨೫. ಹೀಗಿರಲು ಒಂದುಸಾರಿ ರಾಜಸಭೆಯಲ್ಲಿ ವಸಿಷ್ಠನು ಕುಳಿತಿರಲು ಅವನನ್ನು ನೋಡಿ ಶ್ರೀರಾಮನು ಎಲೈ ಗುರುವೇ! ಈ ಬಾಲಕರ ಚಿಹ್ನೆಗಳನ್ನು ನೀನು ಕ್ರಮವಾಗಿ ನೋಡು ಎಂಬುದಾಗಿ ಹೇಳಿದನು.

ತಚ್ಛ್ರುತ್ವಾ ರಾಮವಚನಂ ವಸಿಷ್ಠೋ ಭೂಸುರೈಸ್ಸಹ ।
ಆದೌ ಕುಶಂ ಸಮಾಹೂಯ ದೃಷ್ಟ್ವಾ ರಾಮಂ ವಚೋಽಬ್ರವೀತ್ ॥ ೨೬ ॥

॥ ವಸಿಷ್ಠ ಉವಾಚ ॥

ಪಂಚಸೂಕ್ಷ್ಮಃ ಪಂಚದೀರ್ಘಃ ಸಪ್ತರಕ್ತಃ ಷಡುನ್ನತಃ ।
ತ್ರಿಪೃಥುರ್ಲಘುಗಂಭೀರೋ ದ್ವಾತ್ರಿಂಶಲ್ಲಕ್ಷಣಸ್ತ್ವಯಂ ॥ ೨೭ ॥

ಪಂಚದೀರ್ಘಾಣಿ ಶಸ್ತಾನಿ ಯಥಾ ದೀರ್ಘಾಯುಷೋಽಸ್ಯ ಚ ।
ಭುಜೌ ನೇತ್ರೇ ಹನುರ್ಜಾನೂ ನಾಸಾ ಚ ತನಯಸ್ಯ ತೇ ॥ ೨೮ ॥

ಗ್ರೀವಾಜಂಘಾಮೇಹನೈಶ್ಚ ತ್ರಿಭಿರ್ಹ್ರಸ್ವೋಽಯಮೀಡಿತಃ ।
ಸ್ವರೇಣ ಸತ್ತ್ವನಾಭಿಭ್ಯಾಂ ತ್ರಿಗಂಭೀರಶ್ಶುಭಃ ॥ ೨೯ ॥

---

೨೬. ವಸಿಷ್ಠನು ರಾಮನ ಈ ಮಾತನ್ನು ಕೇಳಿ ಸಾಮುದ್ರಿಕೆಯನ್ನು ಬಲ್ಲ ಬ್ರಾಹ್ಮಣರನ್ನು ಹತ್ತಿರ ಸಹಾಯಕ್ಕೆ ಕೂರಿಸಿಕೊಂಡು ಮೊದಲು ಕುಶನನ್ನು ಕರೆದು ಅವನ ಲಕ್ಷಣಗಳನ್ನು ನೋಡಿ ರಾಮನನ್ನು ಕುರಿತು ಇಂತೆಂದನು.

೨೭. ವಸಿಷ್ಠನು ಹೇಳಿದನು–ಐದು ಸೂಕ್ಷ್ಮವಾಗಿಯೂ ಐದು ದೀರ್ಘವಾಗಿಯೂ, ಏಳು ಕೆಂಪಗೂ, ಆರು ಎತ್ತರವಾಗಿಯೂ, ಮೂರು ದಪ್ಪವಾಗಿಯೂ, ಮೂರು ಲಘುವಾಗಿಯೂ, ಮೂರು ಗಂಭೀರವಾಗಿಯೂ ಇರಬೇಕು. ಈರೀತಿಯಾದ ಮೂವತ್ತೆರಡು ಲಕ್ಷಣಗಳೂ ಇವನಿಗಿವೆ.

೨೮. ಐದು ದೀರ್ಘವಾಗಿರುವುದರಿಂದ ಇವನಿಗೆ ದೀರ್ಘಾಯುಸ್ಸು ಇರುವುದು. ಆ ಐದು ಯಾವುವೆಂದರೆ ಎರಡು ಭುಜಗಳು, ಎರಡು ಕಣ್ಣುಗಳು, ಕಪೋಲ, ಮೊಣಕಾಲು, ಮೂಗು ಇವೈದು.

೨೯. ಕತ್ತು, ಕುಂಡೆ, ಮೇಹನ ಇವು ಮೂರು ಇವನಿಗೆ ಹ್ರಸ್ವವಾಗಿವೆ. ಸ್ವರ, ಬಲ, ಹೊಕ್ಕಳು ಇವು ಮೂರು ಗಂಭೀರವಾಗಿವೆ. ಇದು ಶುಭಕರವು.

ತ್ವಕ್ಕೇಶಾಂಗುಳಿದಶನಾಃ ಪರ್ವಾಣ್ಯಂಗುಳಿಜಾನ್ಯಪಿ ।
ತಥಾಸ್ಯ ಪಂಚ ಸೂಕ್ಷ್ಮಾಣಿ ಸೂಚಯಂತಿ ವರಾಂ ಶ್ರಿಯಂ ॥ ೩೦ ॥

ಪಾಣ್ಯಂಘ್ರಿತಲನೇತ್ರಾಂತೇ ತಾಲುಜಿಹ್ವಾಧರೋಷ್ಠಕಂ ।
ಸಪ್ತಾರುಣಂ ಚ ಸನಖಮಸ್ತಿ ರಾಜ್ಯಸುಖಪ್ರದಂ ॥ ೩೧ ॥

ವಕ್ಷಃ ಕುಕ್ಷ್ಯಾಲಿಕಸ್ಕಂಧಕರವಕ್ತ್ರಷಡುನ್ನತಂ ।
ತಥಾತ್ರ ದೃಶ್ಯತೇ ಬಾಲೇ ಮಹದೈಶ್ವರ್ಯಭೋಗಭಾಕ್ ॥ ೩೨ ॥

ಲಲಾಟಕಟಿವಕ್ಷೋಭಿಸ್ತ್ರಿವಿಸ್ತೀರ್ಣೋ ಯಥಾಹ್ಯಸೌ ।
ಸರ್ವತೇಜೋಮಹೈಶ್ವರ್ಯಂ ತಥಾ ಪ್ರಾಪ್ಸ್ಯತಿ ನಾನ್ಯಥಾ ॥ ೩೩ ॥

---

೩೦ ಚರ್ಮ, ಕೂದಲು, ಬೆರಳು, ಹಲ್ಲು, ಬೆರಳಿನ ಗಿಣ್ಣು ಇವೈದು ಸೂಕ್ಷ್ಮವಾಗಿರುವುದರಿಂದ ಉತ್ತಮವಾದ ಶ್ರೀಮಂತನೆಂಬುದನ್ನು ಸೂಚಿಸುತ್ತವೆ.

೩೧. ಹಸ್ತಗಳ ತಲ, ಪಾದಗಳ ತಲ, ಕಡೆಗಣ್ಣು, ಗಂಟಲು, ನಾಲಿಗೆ, ಕೆಳದುಟಿ, ಉಗುರುಗಳು ಇವೇಳು ಕೆಂಪಗಿವೆ. ಇಂತಹ ಲಕ್ಷಣಗಳುಳ್ಳವನಿಗೆ ರಾಜ್ಯವು ಸುಖವನ್ನು ಕೊಡುತ್ತದೆ.

೩೨. ಎದೆ, ಹೊಟ್ಟೆ, ಅಲಿಕೆ, ಭುಜಶಿರಸ್ಸು, ಕೈ, ಮುಖ ಇವು ಆರು ಎತ್ತರವಾಗಿವೆ. ಇವು ಇವನು ಮಹದೈಶ್ವರ್ಯವನ್ನು ಹೊಂದುವನೆಂಬುದನ್ನು ಸೂಚಿಸುತ್ತವೆ. ಮತ್ತು ಭೋಗಿಯೆಂಬುದನ್ನೂ ತೋರಿಸುತ್ತವೆ.

೩೩. ಹಣೆ, ನಡು, ಎದೆ ಇವು ವಿಸ್ತಾರವಾಗಿ ಅಗಲವಾಗಿವೆ. ಇವನು ಎಲ್ಲರಿಗಿಂತ ಶೂರನಾಗಿ ಮಹದೈಶ್ವರ್ಯವನ್ನು ಹೊಂದಿಯೇ ಹೊಂದುತ್ತಾನೆಂದು ತಿಳಿಸುತ್ತವೆ.

ಅಚ್ಛಿನ್ನಾ ತರ್ಜನೀಂ ಪ್ರಾಪ್ಯ ತಥಾ ರೇಖಾಸ್ಯ ದೃಶ್ಯತೇ ।
ಕನಿಷ್ಠಾ ಪೃಷ್ಠನಿರ್ಯಾತಾ ದೀರ್ಘಾಯುಷ್ಯಂ ಯಥಾ ಭವೇತ್ ॥ ೩೪ ॥

ಕಮಠೀ ಪೃಷ್ಠಕಠಿನಾವಕರ್ಮಕರಣೌ ಕರೌ ।
ರಾಜ್ಯಹೇತೂ ಶಿಶೋರಸ್ಯ ಪಾದೌ ಚಾಧ್ವನಿ ಕೋಮಲೌ ॥ ೩೫ ॥

ಪಾದೌ ಸಮಾಂಸಲೌ ರಕ್ತೌ ಸಮೌ ಸೂಕ್ಷ್ಮೌ ಸುಶೋಭನೌ ।
ಸಮಾಂಗುಲ್ಯೌ ಸ್ವದೇಹೇನ ಸ್ನಿಗ್ಧಾವೈಶ್ವರ್ಯಸೂಚಕೌ ॥ ೩೬ ॥

ಸ್ವಲ್ಪಾಭಿಃ ಕರರೇಖಾಭಿಶ್ಚಾರಕ್ತಾಭಿಸ್ಸದಾ ಸುಖೀ ।
ಲಿಂಗೇನ ಕೃಶಹ್ರಸ್ವೇನ ರಾಜರಾಜೋ ಭವಿಷ್ಯತಿ ॥ ೩೭ ॥

---

೩೪. ಕಿರುಬೆರಳಿನ ಮೂಲದಿಂದ ಹಿಡಿದು ಎರಡನೇ ಬೆರಳಿನ ಬುಡದ ವರೆಗೂ ಒಂದು ರೇಖೆಯು ಮಧ್ಯಮದಲ್ಲಿ ಭಿನ್ನವಾಗದೆ ಇರುವುದು. ಇದು ಈ ಬಾಲಕನಿಗೆ ದೀರ್ಘಾಯುಷ್ಯವನ್ನು ತೋರಿಸುತ್ತದೆ.

೩೫–೩೬. ಕೈಗಳಿಂದ ಕೆಲಸಮಾಡದಿದ್ದರೂ ಈತನ ಕೈಗಳು ಆಮೆಯ ಓಟೆಯಂತೆ ಕಠಿನವಾಗಿವೆ. ಈ ಮಗುವಿನ ಕಾಲುಗಳು. ಕೋಮಲವಾಗಿವೆ. ಮಾಂಸದಿಂದ ಕೂಡಿ ದಪ್ಪವಾಗಿವೆ. ಸೂಕ್ಷ್ಮವಾಗಿಯೂ ಮನೋಹರವಾಗಿಯೂ ಇವೆ. ದೇಹಕ್ಕೆ ಸರಿಯಾದ ಬೆರಳುಗಳಿವೆ. ಇವು ಐಶ್ವರ್ಯ ಸೂಚಕವಾಗಿವೆ.

೩೭. ಕೈಯ್ಯಲ್ಲಿ ಸ್ವಲ್ಪವೇ ರೇಖೆಗಳಿವೆ. ಅವು ಕೆಂಪಗಿವೆ. ಇವು ಈತನು ಸುಖಿಯೆಂಬುದನ್ನು ಸೂಚಿಸುತ್ತವೆ. ಈತನ ಲಿಂಗವು (ಮೂತ್ರವನ್ನು ಹುಯ್ಯುವ ಜಾಗವು) ಸಣ್ಣಗೂ ಚಿಕ್ಕದಾಗಿಯೂ ಇದೆ. ಇದು ಈತನು ಚಕ್ರವರ್ತಿಯಾಗುವ ನೆಂಬುದನ್ನು ತಿಳಿಸುತ್ತದೆ.

ಉತ್ಕಟಾಸನಗುಲ್ಫಸ್ಫಿಜ್ಞಾಭಿರಸ್ಯಾಪಿ ವರ್ತುಲಾ ।
ದಕ್ಷಿಣಾವರ್ತಮರುಣಂ ಮಹದೈಶ್ವರ್ಯಸೂಚಕಂ ॥ ೩೮ ॥

ಧಾರೈಕಾ ಮೂತ್ರಯತ್ಯಸ್ಮಿ ದಕ್ಷಿಣಾವರ್ತನೀ ಯದಿ ।
ಗಂಧಶ್ಚ ಮೀನಮಧುನೋರ್ಯದಿ ವೀರ್ಯೇ ತದಾ ನೃಪಃ ॥ ೩೯ ॥

ವಿಸ್ತೀರ್ಣೌ ಮಾಂಸಲೌ ಸ್ನಿಗ್ಧೌ ಭುಜಾವಸ್ಯ ಸುಖೋಚಿತೌ ।
ವಾಮಾವರ್ತೌ ಸುಪ್ರಲಂಬೌ ದೋಷೌ ಭೂರಕ್ಷಣೋಚಿತೌ ॥ ೪೦ ॥

ಶ್ರೀವತ್ಸವಜ್ರಚಕ್ರಾಬ್ಜಮತ್ಸ್ಯಕೋದಂಡದಂಡಭೃತ್ ।
ತಥಾಸ್ಯ ಕರಗಾ ರೇಖಾ ಯಥಾ ಸ್ಯಾತ್ರಿದಿವಸ್ಪತಿಃ ॥ ೪೧ ॥

---

೩೮. ಕುಂಡೆಗಳು, ಹಿಮ್ಮಡಿ, ಹಿಮ್ಮಂಡಿ, (ಮೀನುಕಂಡ) ಹೊಕ್ಕಳು ಇವು ವರ್ತುಲಾಕಾರವಾಗಿವೆ. ಅಂದರೆ ದುಂಡಗಿವೆ. ಹೊಕ್ಕಳು ಬಲಗಡೆಗೆ ಸುತ್ತಿಕೊಂಡು ಕೆಂಪಗಿದೆ. ಇವೆಲ್ಲವೂ ಮಹದೈಶ್ವರ್ಯ ಸೂಚಕವು.

೩೯. ಮೂತ್ರವನ್ನು ಬಿಡುವಾಗ ಆ ಮೂತ್ರವು ಒಂದೇ ಧಾರೆಯಾಗಿ ಬೀಳುತ್ತ ಬಲಗಡೆಗೆ ಸುತ್ತುತ್ತಿದ್ದರೂ, ಅವನ ವೀರ್ಯವು ಮೀನಿನ ಅಥವಾ ಜೇನುತುಪ್ಪದ ವಾಸನೆಯಿದ್ದರೂ ಆಗ ಅವು ಈತನು ರಾಜನಾಗುವನು ಎಂಬುದನ್ನು ಸೂಚಿಸುತ್ತವೆ.

೪೦. ಇವನ ಭುಜಗಳು ವಿಸ್ತಾರವಾಗಿಯೂ ಮಾಂಸದಿಂದ ಕೂಡಿಯೂ ಇದ್ದುಕೊಂಡು ಅವು ಇವನು ಸುಖಿಯೆಂಬುದನ್ನು ಸೂಚಿಸುತ್ತವೆ ಇವನ ತೋಳುಗಳು ಬಲಗಡೆಗೆ ತಿರುಗಿದಂತಿದ್ದು ಉದ್ದವಾಗಿ ಇರುವುದರಿಂದ ಇವು ಈತನು ಭೂರಕ್ಷಣೆಯನ್ನು ಮಾಡುವನು ಎಂಬುದನ್ನು ಸೂಚಿಸುತ್ತವೆ.

೪೧ ಈತನ ಕೈಯ್ಯಲ್ಲಿ ಶ್ರೀವತ್ಸ, ವಜ್ರ, ಚಕ್ರ, ಶಂಖ, ಕಮಲ, ಮತ್ಸ್ಯ, ಧನಸ್ಸು, ದಂಡರೂಪವಾದ ರೇಖೆಗಳಿವೆ. ಇವು ಈತನು ಮೂರು ಲೋಕಕ್ಕೂ ಒಡೆಯನಾಗುವನು ಎಂಬುದನ್ನು ಸೂಚಿಸುತ್ತವೆ.

ದ್ವಾತ್ರಿಂಶದ್ದಶನಶ್ಚಾಯಂ ವರಕಂಬುಶಿರೋಧರಃ ।
ಕ್ರೌಂಚದುಂದುಭಿಹಂಸಾಭ್ರಸ್ವರಸ್ಸರ್ವೇಶ್ವರಾಧಿಕಃ ॥ ೪೨ ॥

ಮಧುಪಿಂಗಲನೇತ್ರೋಽಸೌ ನೈನಂ ಶ್ರೀಸ್ತ್ಯಜತಿ ಕ್ವಚಿತ್ ।
ಪಂಚರೇಖಾಲಲಾಟಸ್ತು ತಥಾ ಸಿಂಹೋದರಶ್ಶುಭಃ ॥ ೪೩ ॥

ಊರ್ಧ್ವಂ ರೇಖಾಂಕಿತಪದೋ ನಿಶ್ವಸನ್ಪದ್ಮಗಂಧವಾನ್ ।
ಅಚ್ಛಿದ್ರಪಾಣಿಸ್ಸುನಸೋ ಮಹಾಲಕ್ಷಣವಾನಯಂ ॥ ೪೪ ॥

ಏವಂ ಕುಶಂ ನಿರೀಕ್ಷ್ಯಾಥ ಸರ್ವಾನ್ ದೃಷ್ಟ್ವಾ ಕ್ರಮೇಣ ಸಃ ।
ಲವಾದೀನಾಂ ಸುಚಿಹ್ನಾನಿ ಪೂರ್ವವತ್ಪ್ರಾಹ ರಾಘವಂ ॥ ೪೫ ॥

---

೪೨. ಇವನಿಗೆ ಮೂವತ್ತೆರಡು ಹಲ್ಲುಗಳಿವೆ. ಉತ್ತಮವಾದ ಶಂಖದಂತೆ ಕತ್ತುಯಿದೆ. ಕ್ರೌಂಚಪಕ್ಷಿ, ದುಂದುಭಿ (ರಮಡೋಲು) ಹಂಸ, ಮೇಘ, ಇವುಗಳ ನಾದಕ್ಕೆ ಸಮವಾಗಿ ಈತನ ಧ್ವನಿಯ ನಾದವಿರುವುದು. ಇವು ಈತನು ಸರ್ವೇಶ್ವರನಿಗಿಂತಲೂ ಮೇಲಿನವನು ಎಂಬುದನ್ನು ಸೂಚಿಸುತ್ತವೆ.

೪೩. ಜೇನುತುಪ್ಪದಂತೆ ಪಿಂಗಳವರ್ಣದ ಕಣ್ಣುಗಳನ್ನು ಹೊಂದಿರುವನು. ಆದ್ದರಿಂದ ಇವನನ್ನು ಸಂಪತ್ತು ಬಿಡುವುದೇ ಇಲ್ಲ. ಹಣೆಯಲ್ಲಿ ಐದುರೇಖೆಗಳಿವೆ ಹೊಟ್ಟೆಯು ಸಿಂಹದ ಹೊಟ್ಟೆಯಂತೆ ಸಣ್ಣಗಿದೆ. ಇದು ಶುಭವಾದುದು.

೪೪. ಕಾಲಿನಲ್ಲಿನ ರೇಖೆಗಳು ಮೇಲುಮುಖಕ್ಕೆ ಬಂದಿವೆ. ಉಸುರು ಬಿಟ್ಟರೆ ಕಮಲದ ವಾಸನೆಯು ಬರುತ್ತದೆ. ಕೈಬೆರಳುಗಳು ಸಂದುಬಿಡದಂತಿವೆ. ಮೂಗು ಬಹು ರಮ್ಯವಾಗಿದೆ. ಇದರಿಂದ ಈತನು ಮಹಾ ಲಕ್ಷಣಗಳುಳ್ಳವನೆಂದು ತೋರಿಸುತ್ತವೆ.

೪೫. ಈ ರೀತಿಯಾಗಿ ಗುರುವಾದ ವಸಿಷ್ಠನು ಕುಶನ ಲಕ್ಷಣಗಳನ್ನೆಲ್ಲಾ ಕ್ರಮವಾಗಿ ನೋಡಿ ಹೇಳಿದನು. ಅದರಂತೆಯೇ ಲವನೇ ಮುಂತಾದ ಮಕ್ಕಳ ಲಕ್ಷಣಗಳನ್ನೂ ನೋಡಿ ಹೇಳಿದನು.

ತತಃ ಪ್ರೀತಮನಾ ರಾಮಃ ಪೂಜಯಾಮಾಸ ತಂ ಗುರುಂ ।
ವಸ್ತ್ರೈರಾಭರಣೈಶ್ಚೈವ ಯಯೌ ಹರ್ಷಾತ್ತತೋ ಗೃಹಂ ॥ ೪೬ ॥

ಏತಸ್ಮಿನ್ನಂತರೇ ಸೀತಾ ಭೂಮಿಚತ್ತ್ವರಾಸನೇ ।
ಸಂಸ್ಥಿತಾ ಚಾಪರೈರ್ದಿವ್ಯೈರ್ದಾಸೀಭಿಃ ಪರಿವೀಜಿತಾ ॥ ೪೭ ॥

ಸಖೀಭಿಸ್ಸೇವಿತಾ ರಮ್ಯಾ ಧೃತಾಧೋಂಕೋಪಬರ್ಹಣಾ ।
ಮುಕುರೇ ಸ್ವಂ ನಿರೀಕ್ಷಂತೀ ಮುಖಂ ಚಂದ್ರನಿಭಂ ವರಂ ॥ ೪೮ ॥

ರಾಮಸ್ಯಾಗಮನಂ ಶ್ರುತ್ವಾ ಸಂಚಚಾಲಾಸನಾಜ್ಜವಾತ್ ।
ತತೋ ದದರ್ಶ ಶ್ರೀರಾಮಂ ಬಾಲಕೈಃ ಪರಿವೇಷ್ಟಿತಂ ॥ ೪೯ ॥

---

೪೬. ಇದನ್ನು ಕೇಳಿ ರಾಮನು ಬಹು ಸಂತೋಷಗೊಂಡವನಾಗಿ ಆ ಗುರುವನ್ನು ವಸ್ತ್ರ, ಆಭರಣ, ಮುಂತಾದುವುಗಳಿಂದ ಗೌರವಿಸಿ ಪೂಜಿಸಿದನು. ಅನಂತರ ಸಭೆಯಿಂದ ಮನೆಗೆ ಹೊರಟು ಹೋದನು.

೪೭. ಈ ಮಧ್ಯದಲ್ಲಿ ಇತ್ತ ಸೀತೆಯು ಭೂದೇವಿಯು ಕೊಟ್ಟ ಸಿಂಹಾಸನದಲ್ಲಿ ಕುಳಿತುಕೊಂಡು ತನ್ನ ಉತ್ತಮರಾದ ದಾಸಿಯರಿಂದ ಸೇವೆಯನ್ನು ತೆಗೆದುಕೊಳ್ಳುತ್ತಲಿದ್ದಳು.

೪೮. ತಾನು ಒರಗುದಿಂಬುಗಳನ್ನು ಒರಗಿ ಕೂತುಕೊಂಡು ಜೋಲಾಡುತ್ತಿರುವ ಕುಚ್ಚನ್ನು ಹಿಡಿದುಕೊಂಡು ಎದುರಿಗಿರುವ ನಿಲುಗನ್ನಡಿಯಲ್ಲಿ ತನ್ನ ಆಕಾರವನ್ನು ನೋಡಿಕೊಳ್ಳುತ್ತ ದಾಸಿಯರಿಂದ ಸೇವೆಯನ್ನು ತೆಗೆದುಕೊಳ್ಳುತ್ತಲಿದ್ದಳು.

೪೯. ರಾಮನು ಬಂದುದನ್ನು ಕೇಳಿ ಒಡನೆಯೇ ಸಿಂಹಾಸನದಿಂದ ಆಕೆಯು ಮೇಲಕ್ಕೆದ್ದಳು. ಅನಂತರ ಬಾಲಕರೊಡನೆ ಕೂಡಿಕೊಂಡು ಬಂದಿರುವ ಆ ಶ್ರೀರಾಮನನ್ನು ನೋಡಿದಳು.

ಸ್ವಕಟ್ಯಾಂ ಯೂಪಕೇತುಂ ಚ ದಧಾನಮುವರಂ ಶಿಶುಂ ।
ತಥೈವ ದಕ್ಷಿಣೇ ಹಸ್ತೇ ದಧಾನಂ ಚಾಂಗದಂ ಶುಭಂ ॥ ೫೦ ॥

ಕುಶಂ ಲವಂ ಪುರಸ್ಕೃತ್ಯ ಸಮಾಯಾಂತಂ ಶನೈಶ್ಶನೈಃ ।
ತತ್ಪೃಷ್ಠೇ ಸಾ ದದರ್ಶಾಥ ಲಕ್ಷ್ಮಣಂ ಬಾಲಕಾನ್ವಿತಂ ॥ ೫೧ ॥

ತಕ್ಷಂ ಕಟ್ಯಾಂ ಪುಷ್ಕರಂ ಚ ದಧಾನಂ ದಕ್ಷಿಣೇ ಕರೇ ।
ತತ್ಪೃಷ್ಠೇ ಭರತಂ ಸೀತಾ ದದರ್ಶ ಮುದಿತಾನನಾ ॥ ೫೨ ॥

ಚಿತ್ರಕೇತುಂ ಶಿಶುಂ ಕಟ್ಯಾಂ ದಧಾನಂ ರುಕ್ಮಮಂಡಿತಂ ।
ತಥೈವ ದಕ್ಷಿಣೇ ಹಸ್ತೇ ಸುಬಾಹುಂ ಪಂಕಜೇಕ್ಷಣಂ ॥ ೫೩ ॥

---

೫೦. ಆ ರಾಮನು ಸಣ್ಣಮಗುವಾದ ಯೂಪಕೇತುವನ್ನು ನಡುವಿನಮೇಲೆ ಎತ್ತಿಕೊಂಡಿದ್ದನು. ಅದಕ್ಕಿಂತಲೂ ಸ್ವಲ್ಪದೊಡ್ಡದಾದ ಅಂಗದನನ್ನು ಕೈಯ್ಯಲ್ಲಿ ಹಿಡಿದುಕೊಂಡಿದ್ದನು.

೫೧. ಕುಶಲವರನ್ನು ಮುಂದೆ ಬಿಟ್ಟುಕೊಂಡಿದ್ದನು. ಆ ರಾಮನ ಹಿಂದೆ ಮಕ್ಕಳಿಂದ ಕೂಡಿಕೊಂಡು ಲಕ್ಷ್ಮಣನು ಬರುತ್ತಿದ್ದನು. ಇಂತಹ ರಾಮನು ಬರುತ್ತಿರುವುದನ್ನು ನೋಡಿದಳು.

೫೨. ಆ ಲಕ್ಷ್ಮಣನು ತಕ್ಷನೆಂಬ ಮಗುವನ್ನು ನಡುವಿನಮೇಲೆ ಎತ್ತಿಕೊಂಡು ಪುಷ್ಕರನನ್ನು ಬಲಗೈಯ್ಯಲ್ಲಿಯೂ ಹಿಡಿದಿದ್ದನು ಆ ಲಕ್ಷ್ಮಣನ ಹಿಂದೆ ಭರತನು ಬರುತ್ತಿದ್ದನು.

೫೩. ಆ ಭರತನು ಚಿತ್ರಕೇತುವೆಂಬ ಮಗುವನ್ನು ನಡುವಿನಮೇಲೆ ಎತ್ತಿಕೊಂಡು ಸುಬಾಹುವೆಂಬ ಮಗುವನ್ನು ಬಲಗೈಯ್ಯಲ್ಲಿಯೂ ಹಿಡಿದಿದ್ದನು.

ತತ್ಪೃಷ್ಠೇ ಸಾ ದದರ್ಶಾಥ ಶತ್ರುಘ್ನಂ ಜನಕಾತ್ಮಜಾ ।
ರಾಮಶಸ್ತ್ರಾಣಿ ಬಿಭ್ರಂತಂ ಸಮಾಯಾಂತಂ ಶನೈಶ್ಶನೈಃ ॥ ೫೪ ॥

ಏವಂ ಸಾ ರಾಘವಂ ದೃಷ್ಟ್ವಾ ಸೀತಾ ಪ್ರತ್ಯುಜ್ಜಗಾಮ ತಂ ।
ಶಿಂಜನ್ಮಂಜೀರರಶನಾ ಪೀತಕೌಶೇಯಧಾರಿಣೀ ॥ ೫೫ ॥

ಕರಾಭ್ಯಾಂ ಪುರತೋ ಯಾಂತಂ ಲವಂ ಧೃತ್ವಾ ಚುಚುಂಬ ಸಾ ।
ನಿಧಾಯ ತಂ ಲವಂ ಕಟ್ಯಾಂ ಧೃತ್ವಾ ಹಸ್ತೇನ ತಂ ಕುಶಂ ॥ ೫೬ ॥

ಯಯೌ ಶನೈಸ್ಸಾ ರಾಮೇಣ ವದತೀ ಸ್ವಸ್ಥಲಂ ಪುನಃ ।
ಸಖೀಭಿರ್ವೇಷ್ಟಿತಾ ಸೀತಾ ರಂಜಯಾಮಾಸ ರಾಘವಂ ॥ ೫೭ ॥

---

೫೪. ಆ ಭರತನ ಹಿಂದೆ ಶತ್ರುಘ್ನನು ಬರುತ್ತಿದ್ದನು. ಆ ಶತ್ರುಘ್ನನು ರಾಮನ ಶಸ್ತ್ರಗಳನ್ನು ಹಿಡಿದುಕೊಂಡು ಮೆಲ್ಲ ಮೆಲ್ಲಗೆ ಬರುತ್ತಿದ್ದನು.

೫೫. ಈ ರೀಗಿಯಾಗಿ ಬರುತ್ತಿದ್ದ ರಾಮನನ್ನು ಸೀತೆಯು ಎದುರುಗೊಂಡಳು. ಆಕೆಯು ಪಟ್ಟೆಬಟ್ಟೆಯನ್ನುಟ್ಟು ಝುಲ, ಝುಲ, ಎನ್ನುವ ಒಡ್ಯಾಣವನ್ನೂ ಹಾಕಿಕೊಂಡಿದ್ದಳು.

೫೬. ಮುಂದುಗಡೆಯಲ್ಲಿ ಬರುತ್ತಿದ್ದ ಲವನನ್ನು ಕೈಯ್ಯಿಂದ ಹಿಡಿದುಕೊಂಡು ಆ ಸೀತೆಯು ಮುತ್ತಿಕ್ಕಿದಳು. ಮತ್ತು ಆಕೆಯು ಲವನನ್ನು ಸೊಂಟದ ಮೇಲಕ್ಕೆತ್ತಿಕೊಂಡು ಕುಶನನ್ನು ಕೈಯ್ಯಲ್ಲಿ ಹಿಡಿದುಕೊಂಡಳು.

೫೭. ಆಕೆಯು ಆ ರಾಮನೊಡನೆ ಮಾತನಾಡುತ್ತ ಮತ್ತೆ ತನ್ನ ಜಾಗಕ್ಕೆ ಹೋದಳು. ಅಲ್ಲಿ ಸಖಿಯರು ಅವಳನ್ನು ಸುತ್ತುವರಿದುಕೊಂಡರು. ಈ ರೀತಿಯಾಗಿ ಆಕೆಯು ರಾಮನನ್ನು ಸಂತೋಷಪಡಿಸಿದಳು.

ಅಥ ರಾಮೋಽಪಿ ಸೀತಾಯಾಃ ಸ್ಥಿತ್ವಾ ಸಿಂಹಾಸನೋಪರಿ ।
ಅಂಕಯೋಃ ಪುರತಶ್ಚಾಪಿ ಬಾಲಕಾನ್ಸಂಸ್ಥಿತಾಂಶ್ಚ ಸಃ ॥ ೫೮ ॥

ಸೀತಾಯೈ ದರ್ಶಯನ್ ಪ್ರೀತ್ಯಾ ಲಾಲಯಾಮಾಸ ಸಾದರಂ ।
ಸೀತಾಯೈ ರಾಘವಃ ಪ್ರಾಹ ಸಭಾಯಾಂ ಗುರುಣಾ ಪುರಾ ॥ ೫೯ ॥

ಯಾನ್ಯುಕ್ತಾನಿ ಸುಚಿಹ್ನಾನಿ ಶಿಶೂನಾಂ ತಾನಿ ವಿಸ್ತರಾತ್ ।
ಶ್ರುತ್ವಾ ರಾಮಮುಖಾತ್ತಾನಿ ಸೀತಾ ತೋಷಂ ಪರಂ ಯಯೌ ॥ ೬೦ ॥

ರಾಘವಃ ಪ್ರಾಹ ವೈದೇಹೀಮೂರ್ಮಿಲಾಪರಿವೀಜಿತಾಂ ।
ಸೀತೇಂಗದಂ ಚಿತ್ರಕೇತುಂ ಲಕ್ಷ್ಮಣಾಂಕೇ ನ್ಯವೇಶಯ ॥ ೬೧ ॥

---

೫೮. ಅನಂತರ ರಾಮನೂ ಅಲ್ಲಿಗೆ ಹೋಗಿ ಆ ಸೀತೆಯ ಸಿಂಹಾಸನದ ಮೇಲೆ ಕುಳಿತುಕೊಂಡನು. ಕೆಲವು ಬಾಲಕರು ತೊಡೆಯಮೇಲೆ ಕುಳಿತುಕೊಂಡರು. ಕೆಲವು ಬಾಲಕರು ಎದುರಿಗೆ ನಿಂತಿದ್ದರು.

೫೯. ಆ ಮಕ್ಕಳೆಲ್ಲವನ್ನೂ ಆಡಿಸುತ್ತ ಸೀತೆಗೆ ಆಸೆಯಿಂದ ತೋರಿಸುತ್ತ ಗುರುವು ಹಿಂದೆ ಸಭೆಯಲ್ಲಿ ಆ ಬಾಲಕರ ವಿಷಯದಲ್ಲಿ ಹೇಳಿದುದನ್ನೆಲ್ಲಾ ವಿಸ್ತಾರವಾಗಿ ಹೇಳಿದನು.

೬೦. ವಸಿಷ್ಠನು ಆ ಮಕ್ಕಳಿಗೆ ಯಾವ ಯಾವ ಲಕ್ಷ್ಮಣಗಳನ್ನು ಎಲ್ಲೆಲ್ಲಿ ಹೇಳಿದ್ದನೋ ಅವೆಲ್ಲವನ್ನೂ ರಾಮನು ವಿಸ್ತಾರವಾಗಿ ತೋರಿಸಿದನು. ಆ ರಾಮನ ಬಾಯಿಂದ ಅದೆಲ್ಲವನ್ನೂ ಕೇಳಿ ಸೀತೆಯು ಬಹು ಸಂತೋಷಪಟ್ಟಳು.

೬೧. ಆಗ ಸೀತೆಗೆ ಊರ್ಮಿಳೆಯು ಚಾಮರವನ್ನು ಹಾಕುತ್ತಿದ್ದಳು. ರಾಮನು ಸೀತೆಯನ್ನು ಕುರಿತು ಎಲೈ ವೈದೇಹಿಯೇ! ಈ ಅಂಗದನನ್ನೂ ಚಿತ್ರಕೇತುವನ್ನೂ ಲಕ್ಷ್ಮಣನ ತೊಡೆಯಮೇಲೆ ಕೂರಿಸು. ಎಂದನು.

ತದ್ರಾಮವಚನಂ ಶ್ರುತ್ವಾ ಸೀತಾ ಶೀಘ್ರಂ ಶಿಶೂ ಯಯೌ ।
ತಾವದುತ್ಥಾಯ ಸೌಮಿತ್ರಿರ್ಲಜ್ಜಯಾ ಗಂತುಮುದ್ಯತಃ ॥ ೬೨ ॥

ತಂ ಗಂತುಕಾಮಂ ರಾಮೋಽಪಿ ದೃಷ್ಟ್ವಾ ತಾಂ ಮಾಂಡವೀಂ ತಥಾ ।
ಶ್ರುತಕೀರ್ತಿಂ ಕಂಜನೇತ್ರ ಸಂಜ್ಞಯಾ ಚೋದಯತ್ತದಾ ॥ ೬೩ ॥

ತಾಭ್ಯಾಂ ಧೃತೋಽಥ ಸೌಮಿತ್ರಿಃ ಸ್ಮಿತಾಸ್ಯಾಭ್ಯಾಮುಪಾವಿಶತ್ ।
ತಾವತ್ತದಂಕಯೋಸ್ಸೀತಾ ತತ್ಪುತ್ರೌ ಸನ್ನ್ಯವೇಶಯತ್ ॥ ೬೪ ॥

ತದ್ವಚ್ಚ ಭರತಸ್ಯಾಂಕೇ ನ್ಯವೇಶ್ಯ ತಕ್ಷ ಪುಷ್ಕರೌ ।
ಶತ್ರುಘ್ನಾಂಕೇ ಸುಬಾಹುಂ ಚ ಯೂಪಕೇತುಂ ನ್ಯವೇಶಯತ್ ॥ ೬೫ ॥

---

೬೨. ರಾಮನ ಈ ಮಾತನ್ನು ಕೇಳಿ ಸೀತೆಯು ಆ ಶಿಶುಗಳ ಹತ್ತಿರಕ್ಕೆ ಅವನ್ನು ಎತ್ತಿಕೊಂಡು ಬರಲು ಹೋದಳು. ಅಷ್ಟರೊಳಗೆ ಈ ಲಕ್ಷ್ಮಣನು ನಾಚಿಕೆಯಿಂದ ಎದ್ದು ಹೊರಟು ಹೋಗುವುದಕ್ಕೆ ಪ್ರಯತ್ನ ಪಟ್ಟನು.

೬೩. ಲಕ್ಷ್ಮಣನು ಹೊರಡಲು ಪ್ರಯತ್ನಿಸಿದುದನ್ನು ನೋಡಿ ರಾಮನು ಆ ಲಕ್ಷ್ಮಣನನ್ನು ಹೋಗದಂತೆ ತಡೆಯುವ ಹಾಗೆ ಮಾಂಡವಿ, ಶ್ರುತಕೀರ್ತಿಯರಿಗೆ ಕಣ್ಣು ಸಂಜ್ಞೆಯನ್ನು ಮಾಡಿದನು.

೬೪. ಅವರಿಬ್ಬರೂ ನಗುತ್ತ ಆತನನ್ನು ತಡೆದುಕೊಳ್ಳಲು ಆಗ ಲಕ್ಷ್ಮಣನು ಕುಳಿತುಕೊಂಡನು. ಆಗ ಸೀತೆಯು ಆ ಲಕ್ಷ್ಮಣನ ಮಕ್ಕಳನ್ನು ಅವನ ತೊಡೆಯ ಮೇಲೆ ಕೂರಿಸಿದಳು.

೬೫. ಅದೇ ರೀತಿಯಾಗಿ ಭರತನ ತೊಡೆಯಮೇಲೆ ಅವನ ಮಕ್ಕಳಾದ ತಕ್ಷಕ, ಪುಷ್ಕರರನ್ನೂ ಕೂರಿಸಿದಳು. ಶತ್ರುಘ್ನನ ತೊಡೆಯಮೇಲೆಯೂ ಅವನ ಮಕ್ಕಳಾದ ಸುಬಾಹು, ಯೂಪಕೇತುಗಳನ್ನೂ ಕೂರಿಸಿದಳು

ತತಸ್ಸೀತಾಂ ಪುನಃ ಪ್ರಾಹ ಸ್ಮಿತಾಸ್ಯಸ್ಸ ರಘೂದ್ವಹಃ ।
ವೀಜಯಂತೂರ್ಮಿಲಾದ್ಯಾಶ್ಚ ಸ್ವಂ ಸ್ವಂ ಸ್ವಾಮಿನಮಾದರಾತ್ ॥ ೬೬ ॥

ತತಸ್ತಾ ದುದ್ರುವುಸ್ಸರ್ವಾಸ್ಸಖೀಭಿರ್ಲಜ್ಜಿತಾ ಧೃತಾಃ ।
ವ್ಯಜನೈರ್ವೀಜಯಾಮಾಸುಃ ಸ್ವಂ ಸ್ವಂ ಕಾಂತಂ ಸುಲಜ್ಜಿತಾಃ ॥ ೬೭ ॥

ಏವಂ ನಾನಾಕೌತುಕಾನಿ ಭೋಜನಾಸನಕರ್ಮಸು ।
ಕಾರಯಾಮಾಸ ವೈದೇಹ್ಯಾ ಬಂಧ್ವಾದೀನಾಂ ರಘೂದ್ವಹಃ ॥ ೬೮ ॥

ಅಥ ರಾಮೋ ವಸಿಷ್ಠಂ ಸ ಏಕದಾ ವಾಕ್ಯಮಬ್ರವೀತ್ ।
ಕುಶಸ್ಯಾಥ ಲವಸ್ಯಾಪಿ ವ್ರತಬಂಧೋ ವಿಧೀಯತಾಂ ॥ ೬೯ ॥

---

೬೬. ಅನಂತರ ರಾಮನು ಮತ್ತೆ ನಗುತ್ತ ಸೀತೆಯನ್ನು ಕುರಿತು ಊರ್ಮಿಳೆಯೇ ಮುಂತಾದವರು ಅವರವರ ಗಂಡಂದಿರನ್ನು ಚಾಮರದಿಂದ ಬೀಸಲಿ ಹಾಗೆ ಹೇಳೆಂದು ಸೀತೆಗೆ ಹೇಳಿದನು.

೬೭. ಆಗ ಅವರೆಲ್ಲರೂ ಲಜ್ಜೆಯಿಂದ ಓಡಿಹೋಗುತ್ತಿದ್ದರು. ಸೀತೆಯು ಸಖಿಯರಿಗೆ ಹೇಳಿ ಅವರನ್ನು ಹಿಡಿದು ನಿಲ್ಲಿಸಿದಳು. ಆಗ ಅವರೆಲ್ಲರೂ ಬೀಸಣಿಗೆಯನ್ನು ತೆಗೆದುಕೊಂಡು ತಮ್ಮ ತಮ್ಮ ಗಂಡಂದಿರನ್ನು ಬೀಸುತ್ತಿದ್ದರು.

೬೮. ಇದೇ ರೀತಿಯಾಗಿ ರಾಮನು ಊಟಮಾಡುವಾಗಲೂ ಕುಳಿತು ಕೊಳ್ಳುವಾಗಲೂ, ಉಳಿದ ಕೆಲಸಗಳನ್ನು ಮಾಡುವಾಗಲೂ ವೈದೇಹಿಯನ್ನೂ ತಮ್ಮಂದಿರನ್ನೂ ಹಾಸ್ಯ ಮುಂತಾದುವುಗಳನ್ನು ಮಾಡುತ್ತ ಸಂತೋಷ ದಿಂದಿದ್ದನು.

೬೯. ಹೀಗಿರುತ್ತಿರಲು ಒಂದುಸಾರಿ ವಸಿಷ್ಠನನ್ನು ಕುರಿತು ರಾಮನು ಕುಶನಿಗೂ, ಲವನಿಗೂ, ಉಪನಯನವನ್ನು ಮಾಡಬೇಕು. ಎಂದು ಹೇಳಿದನು. ಅದಕ್ಕೆ ಗುರುವು ಹಾಗೆಯೇ ಆಗಲಿ ಎಂದನು.

ತಥೇತಿ ಗುರುಣಾ ಪ್ರೋಕ್ತಸ್ತತೋ ರಾಮಶ್ಶುಭೇ ದಿನೇ |
ಗಣಕಾನ್ ಸ ಸಮಾಹೂಯ ಮಂತ್ರಯಾಮಾಸ ಸಾದರಂ ॥ ೭೦ ॥

ಕುಶಾಯ ಪಂಚಮಂ ವರ್ಷಂ ಕಿಂಚಿನ್ನ್ಯೂನಂ ಲವಾಯ ಚ |
ಜ್ಞಾತ್ವಾ ತೇ ಗಣಕಾಸ್ಸರ್ವೇ ಗುರುಶುಕ್ರಾದಿಕಂ ಬಲಂ ॥ ೭೧ ॥

ದೃಷ್ಟ್ವಾ ಪಂಚಾಂಗಪಟ್ಟೇಷು ರಾಘವಂ ವಾಕ್ಯಮಬ್ರುವನ್ |
ಬ್ರಾಹ್ಮಣಸ್ಯಾಷ್ಟಮೇ ಪ್ರೋಕ್ತೋ ದ್ವಾದಶೇ ಕ್ಷತ್ರಿಯಸ್ಯ ಚ ॥ ೭೨ ॥

ವೈಶ್ಯಸ್ಯ ಷೋಡಶೇ ವರ್ಷೇ ವ್ರತಬಂಧೋ ಮುನೀಶ್ವರೈಃ |
ಜನ್ಮಾತ್ ಷಷ್ಠೇ ತಥಾ ಗರ್ಭಾತ್ಸಪ್ತಮೇಽಬ್ದೇನೃಪಸ್ಯ ಚ ॥ ೭೩ ॥

---

೭೦. ಅನಂತರ ರಾಮನು ಒಂದು ಶುಭದಿನದಲ್ಲಿ ಜೋಯಿಸರನ್ನು ಕರೆಸಿ ಅವರೊಡನೆ ಉಪನಯನ ಲಗ್ನವನ್ನು ಕುರಿತು ಆಲೋಚಿಸಿದನು.

೭೧. ಕುಶನಿಗೆ ಐದನೆಯ ವರ್ಷವು ತುಂಬುತ್ತಿದ್ದಿತು. ಲವನಿಗೆ ಸ್ವಲ್ಪಕಡಿಮೆಯಾಗಿದ್ದಿತು. ಆ ಜೋಯಿಸರು ಅದನ್ನು ತಿಳಿದುಕೊಂಡು ಗುರುಬಲ ಶುಕ್ರಬಲಗಳನ್ನು ನೋಡಿದರು.

೭೨. ಇದೆಲ್ಲವನ್ನೂ ಆ ಪಂಚಾಂಗಪಟ್ಟಿಯಲ್ಲಿ ಆ ಜೋಯಿಸರು ನೋಡಿಕೊಂಡರು. ಅನಂತರ ರಾಮನನ್ನು ಕುರಿತು ಇಂತೆಂದರು. ಎಲೈ ರಾಮನೆ! ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿಯೂ ಕ್ಷತ್ರಿಯನಿಗೆ ಹನ್ನೆರಡನೆಯ ವರ್ಷದಲ್ಲಿಯೂ ಉಪನಯನವ್ರತವು ಹೇಳಲ್ಪಟ್ಟಿದೆ.

೭೩. ವೈಶ್ಯನಿಗೆ ಹದಿನಾರನೆಯ ವರ್ಷದಲ್ಲಿ ಆ ಉಪನಯನವ್ರತವು ಹೇಳಲ್ಪಟ್ಟಿದೆ. ಅಲ್ಲದೆ ಹುಟ್ಟಿದಂದಿನಿಂದ ಮೊದಲುಗೊಂಡು ಆರನೆಯ ವರ್ಷದಲ್ಲಿಯೂ ಗರ್ಭದಿಂದ ಮೊದಲುಗೊಂಡು ಏಳನೆಯ ವರ್ಷದಲ್ಲಿಯೂ ಕೂಡ ಕ್ಷತ್ರಿಯರಿಗೆ ಉಪನಯನವು ಹೇಳಲ್ಪಟ್ಟಿದೆ.

ವ್ರತಬಂಧೋ ವಿಧಾತವ್ಯೋ ಯತ್ನತಶ್ಚ ಬಲಾರ್ಥಿನಃ |
ಬ್ರಹ್ಮವರ್ಚಸಕಾಮಸ್ಯ ಕಾರ್ಯಂ ವಿಪ್ರಸ್ಯ ಪಂಚಮೇ || ೭೪ ||

ರಾಜ್ಞೋ ಬಲಾರ್ಥಿನಷ್ಷಷ್ಠೇ ವೈಶ್ಯಸ್ಯಾರ್ಥಾರ್ಥಿನೋಷ್ಟಮೇ |
ವಿದ್ವದ್ಭಿಶ್ಚೋಪನಯನಮೇವಂ ಶಾಸ್ತ್ರೇಷು ನಿರ್ಣಯಃ || ೭೫ ||

ಅತೋ ಗರ್ಭಾಚ್ಚ ಷಷ್ಠೇಬ್ದೇ ಪುತ್ರಯೋಸ್ತ್ವಂ ರಘೂತ್ತಮ |
ಸುಖಂ ಕುರೂಪನಯನಂ ಮುಹೂರ್ತಂ ಶ್ರುಣು ಸಾದರಂ || ೭೬ ||

ಅದ್ಯಾರಭ್ಯಪಂಚದಶದಿನೇ ದತ್ತಂ ಕುಶಾಯ ಹಿ |
ಪಕ್ಷಾಂತರೇಣ ತಂ ಶ್ರುತ್ವಾ ಮುಹೂರ್ತಂ ರಘುನಂದನಃ || ೭೭ ||

---

೭೪. ಹಾಗೆ ಆರು ಅಥವಾ ಏಳನೆಯ ವರ್ಷದಲ್ಲಿ ಉಪನಯನವನ್ನು ಕ್ಷತ್ರಿಯರು ಮಾಡಿದರೆ ಅವರಿಗೆ ಬಲವು ಹೆಚ್ಚುತ್ತದೆ. ಬ್ರಾಹ್ಮಣರು ಐದನೆಯ ವರ್ಷದಲ್ಲಿ ಉಪನಯನವನ್ನು ಮಾಡಿದರೆ ಅವನಿಗೆ ಬ್ರಹ್ಮವರ್ಚಸ್ಸು ಹೆಚ್ಚುತ್ತದೆ.

೭೫. ರಾಜನು ಆರನೆಯ ವರ್ಷದಲ್ಲಿ ಉಪನಯನನನ್ನು ಮಾಡಿದರೆ ಬಲವೂ ವೈಶ್ಯನು ಎಂಟನೆಯ ವರ್ಷದಲ್ಲಿ ಉಪನಯನವನ್ನು ಮಾಡಿದರೆ ಹಣವೂ ಕೂಡ ಹೆಚ್ಚುತ್ತದೆ. ಎಂಬುದಾಗಿ ಉಪನಯನ ಕಾಲವನ್ನು ವಿದ್ವಾಂಸರು ಶಾಸ್ತ್ರದಲ್ಲಿ ನಿಷ್ಕರ್ಷೆಮಾಡಿರುತ್ತಾರೆ.

೭೬. ಆದ್ದರಿಂದ ಎಲೈ ರಾಮನೇ ! ಗರ್ಭದಿಂದ ಆರನೆಯ ವರ್ಷವು ನಿನ್ನ ಮಕ್ಕಳಿಗೆ ನಡೆಯುತ್ತಿದೆ. ಈಗ ನೀನು ಸುಖವಾಗಿ ಉಪನಯನವನ್ನು ಮಾಡು. ಅದಕ್ಕೆ ಯೋಗ್ಯವಾದ ಮುಹೂರ್ತವನ್ನು ಹೇಳುತ್ತೇವೆ. ಮನಸ್ಸಿಟ್ಟು ಕೇಳು.

೭೭. ಇಂದಿಗೆ ಹದಿನೈದನೆಯ ದಿನಕ್ಕೆ ಕುಶನಿಗೆ ಉಪನಯನಕಾಲದ ಲಗ್ನವನ್ನಿಟ್ಟದ್ದೇವೆ ! ಎಂದರು. ಇಂತೆಂದು ಆ ಜೋತಿಷ್ಕರು ಹೇಳಲು ಒಂದು ಪಕ್ಷದಕಾಲದಲ್ಲಿಯೇ ಮೂಹೂರ್ತವು ಇರುವುದನ್ನು ರಾಮನು ಕೇಳಿದನು.

ಗಣಕರ್ಾ ಧನವಸ್ತ್ರಾದ್ಯೈಃ ಪೂಜ್ಯ ಲಕ್ಷ್ಮಣಮಬ್ರವೀತ್ ।
ಆಕಾರಣೀಯಾ ರಾಜಾನಸ್ಸುಹೃದಶ್ಚ ಮುನೀಶ್ವರಾಃ ॥ ೭೮ ॥

ಸಾಂತಃ ಪುರಾಸ್ಸಪೌರಾಶ್ಚ ಸ್ವ ಸ್ವಜಾನಪದೈಸ್ಸಹ ।
ಶೃಂಗಾರಣೀಯಾಽಯೋಧ್ಯೇಯಂ ಪರಿಖಾಸ್ಸಪ್ತ ಸಾದರಂ ॥ ೭೯ ॥

ಶೋಧನೀಯಾಸ್ತಥಾ ಸೌಧಸಮೂಹಾಶ್ಚ ತಥಾ ಶುಭಾಃ ।
ದತ್ವಾ ಚಿತ್ರಾಣಿ ಲೇಖ್ಯಾನಿ ಪ್ರಾಸಾದೇಷು ಸಮಂತತಃ ॥ ೮೦ ॥

ದೇವಾಲಯೇಷು ಸರ್ವೇಷು ಸುಧಾ ದೇಯಾ ಮನೋರಮಾ ।
ಲೇಖನೀಯಾನಿ ಚಿತ್ರಾಣಿ ಸ್ಥಾಪ್ಯಂತಾಂ ಬಲಯಃ ಪೃಥಕ್ ॥ ೮೧ ॥

ಬಂಧನೀಯಾಃ ಪತಾಕಾಶ್ಚ ರೋಪಣೀಯಾ ಧ್ವಜಾ ಅಪಿ ।
ಸಮಂತತಸ್ತೋರಣಾನಿ ಬಂಧನೀಯಾನಿ ಲಕ್ಷ್ಮಣ ॥ ೮೨ ॥

---

೭೮. ಅನಂತರ ಆ ಜೋತಿಷ್ಕರಿಗೆ ಧನವಸ್ತ್ರಗಳನ್ನು ಕೊಟ್ಟು ಗೌರವಿಸಿ ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ! ರಾಜರನ್ನೂ ಸ್ನೇಹಿತರನ್ನೂ ಮುನೀಶ್ವರರನ್ನೂ ಈ ಉತ್ಸವಕ್ಕೆ ಕರೆಸಬೇಕು.

೭೯. ಆ ರಾಜರು ಅಂತಃಪುರದ ಜನರೊಂದಿಗೆ ಬರಬೇಕು. ಪಟ್ಟಣಿಗರೂ, ದೇಶದ ಮುಖ್ಯರೂ, ಬರಬೇಕು. ಅಯೋಧ್ಯೆಯನ್ನೆಲ್ಲಾ ಶೃಂಗರಿಸಬೇಕು. ಏಳು ಅಗಳುಗಳನ್ನು ಶೋಧಿಸಬೇಕು. ಕೋಟೆಗಳಿಗೆ ಸುಣ್ಣವನ್ನು ಬಳಿಸಬೇಕು.

೮೦–೮೧. ಮನೆಗಳ ಒಳಗೆಲ್ಲಾ ಚಿತ್ರವನ್ನು ಬರೆಸಬೇಕು. ಮಹಡಿಗಳಿಗೂ ದೇವಾಲಯಗಳಿಗೂ ಸುಣ್ಣವನ್ನು ಬಳಿಸಬೇಕು. ಅಲ್ಲಿಯೂ ಚಿತ್ರಗಳನ್ನು ಬರೆಸಬೇಕು. ಎಲ್ಲದರಲ್ಲಿಯೂ ಬೇರೆ ಬೇರೆಯಾಗಿ ಪೂಜಾದ್ರವ್ಯಗಳನ್ನಿಡಬೇಕು.

೮೨. ಪತಾಕೆಗಳನ್ನು ಎಲ್ಲಾ ಕಡೆಯಲ್ಲಿಯೂ ಕಟ್ಟಿಸಬೇಕು. ಧ್ವಜಗಳನ್ನು ಎತ್ತಿ ನಿಲ್ಲಿಸಬೇಕು. ಊರಿನಲ್ಲಿ ಎಲ್ಲಾ ಕಡೆಯಲ್ಲಿಯೂ ತೋರಣಗಳನ್ನು ಕಟ್ಟಿಸಬೇಕು.

ವೇದ್ಯಃ ಕಾರ್ಯಾ ರುಕ್ಮಮಯ್ಯೋ ಬಂಧನೀಯಾಶ್ಚ ಮಂಟಪಾಃ ।
ಶೃಂಗಾರಣೀಯಾ ಹಸ್ತ್ಯಶ್ವ ಶಿಬಿಕಾಶ್ಚ ಸಹಸ್ರಶಃ ॥ ೮೩ ॥

ಅನ್ಯಚ್ಚಾಪಿ ಯಥಾಯೋಗ್ಯಂ ಯದ್ಯಜ್ಜಾನಾಸಿ ಲಕ್ಷ್ಮಣ ।
ತತ್ತತ್ಕುರುಷ್ವ ಯನ್ನೋಕ್ತಂ ಮಯಾ ತವ ರಘೂತ್ತಮ ॥ ೮೪ ॥

ತದ್ರಾಮವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ಲಕ್ಷ್ಮಣಃ ।
ತಥಾ ಚಕಾರ ತತ್ಸರ್ವಂ ಯಥಾ ರಾಮೇಣ ಶಿಕ್ಷಿತಃ ॥ ೮೫ ॥

ತತೋ ಮುಹೂರ್ತೇ ಶ್ರೀರಾಮಃ ಸ್ನಾನಮಭ್ಯಂಗಪೂರ್ವಕಂ ।
ಕೃತ್ವಾ ಕುಮಾರೈರ್ವೈದೇಹ್ಯಾ ಬಂಧುಸ್ತ್ರೀಭಿಶ್ಚ ಬಂಧುಭಿಃ ॥ ೮೬ ॥

---

೮೩. ಸುವರ್ಣದ ಜಗಲಿಗಳನ್ನು ಕಟ್ಟಿಸಬೇಕು. ಮಂಟಪಗಳನ್ನು ಕಟ್ಟಿಸಬೇಕು. ಆನೆ, ಕುದುರೆ, ರಥ, ಪಲ್ಲಕ್ಕಿಗಳನ್ನೆಲ್ಲಾ ಅಲಂಕರಿಸಬೇಕು. ಅವು ಸಹಸ್ರಗಟ್ಟಲೆಯಲ್ಲಿ ಸಿದ್ಧವಾಗಿರಬೇಕು.

೮೪. ಎಲೈ ಲಕ್ಷ್ಮಣನೇ! ನಾನು ಹೇಳದಿದ್ದರೂ ಯಾವುವು ಎಲ್ಲೆಲ್ಲಿಗೆ ಬೇಕಾಗುವುವೋ ಅವುಗಳನ್ನು ಆಯಾಯ ಕಾಲಕ್ಕೂ ದೇಶಕ್ಕೂ ತಕ್ಕಂತೆ ಏರ್ಪಡಿಸು. ನಾನು ಹೇಳದಿದ್ದರೂ ಯುಕ್ತವಾದುವನ್ನು ನಿನಗೆ ತಿಳಿದಂತೆ ಮಾಡು.

೮೫. ರಾಮನು ಹೀಗೆನ್ನಲು ಆ ಮಾತನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ರಾಮನು ಹೇಳಿದಂತೆಯೇ ಎಲ್ಲವನ್ನೂ ಮಾಡಿಸಿದನು.

೮೬. ಅನಂತರ ಮುಹೂರ್ತಕಾಲವು ಒದಗಲು ರಾಮನು ಅಭ್ಯಂಜನ ಪೂರ್ವಕವಾದ ಸ್ನಾನವನ್ನು ಮಾಡಿದನು. ಮತ್ತು ಆ ಮಕ್ಕಳೂ, ವೈದೇಹಿಯೂ ಅಂತೆಯೇ ಅಭ್ಯಂಜನ ಸ್ನಾನವನ್ನು ಮಾಡಿದರು. ತಮ್ಮಂದಿರೂ, ತಮ್ಮಂದಿರ ಹೆಂಡತಿಯರೂ ಕೂಡ ಅಭ್ಯಂಜನಸ್ನಾನವನ್ನು ಮಾಡಿದರು.

ನಾನಾಲಂಕಾರವಸ್ತ್ರಾಣಿ ಪರಿಧಾಯಾಥ ತೈಸ್ಸಹ ।
ಪುಣ್ಯಾಹವಾಚನಂ ಚಕ್ರೇ ಗುರುಂ ಪೂಜ್ಯ ಋಷೀಶ್ವರಾನ್ ॥ ೮೭ ॥

ನಾಂದೀಶ್ರಾದ್ಧಾದಿಕಂ ಕೃತ್ವಾ ಪ್ರತಿಷ್ಠಾಂ ದೇವಕಸ್ಯ ಚ ।
ಚಕಾರ ಮಂಗಲೈಸ್ತೂರ್ಯನಾದ್ಯೈಸ್ಸೀತಾಸಮನ್ವಿತಃ ॥ ೮೮ ॥

ತತೋ ಯಯುಃ ಕೋಟಿಶಸ್ತೇ ಪಾರ್ಥಿವಾಶ್ಚ ಮುನೀಶ್ವರಾಃ ।
ಸಪ್ತದ್ವೀಪಾಂತರಸ್ಥಾಶ್ಚ ಸಾವರೋಧಾಸ್ಸವಾಹನಾಃ ॥ ೮೯ ॥

ತೈಸ್ಸಾಯೋಧ್ಯಾ ತದಾ ವ್ಯಾಪ್ತಾ ವಿರೇಜೇ ನಿತರಾಂ ತದಾ ।
ತತೋ ಮುಹೂರ್ತದಿವಸೇ ವಸಿಷ್ಠೋ ಬ್ರಾಹ್ಮಣೈರ್ಯುತಃ ॥ ೯೦ ॥

ರಾಮಸ್ಯಾಥ ಕುಶಸ್ಯಾಥ ಮಧ್ಯೇ ಧೃತ್ವಾ ವರಂ ಪಟಂ ।
ಉವಾಚ ಮಂಗಲಾನ್ಯೇವ ಸುಸ್ವರೈರ್ಮಧುರಾಕ್ಷರೈಃ ॥ ೯೧ ॥

---

೮೭. ತಾನೂ, ಅವರೂ ಅಲಂಕಾರವನ್ನು ಮಾಡಿಕೊಂಡರು. ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡರು. ಗುರುವನ್ನೂ, ಋಷಿಗಳನ್ನೂ, ಪೂಜಿಸಿ ಪುಣ್ಯಾಹವಾಚನವನ್ನು ಮಾಡಿದರು.

೮೮. ಸೀತೆಯೊಡಗೂಡಿ ನಾಂದೀಶ್ರಾದ್ಧವನ್ನು ಮಾಡಿ ಮನೆದೇವರ ಪ್ರತಿಷ್ಠೆಯನ್ನು ಮಾಡಿದನು. ಮಂಗಳವಾದ್ಯಗಳು ಉದ್ಘೋಷಿಸುತ್ತಿದ್ದುವು.

೮೯. ರಾಮನು ಎಲ್ಲರಿಗೂ ನಿರೂಪವನ್ನು ಕಳುಹಿಸಲು ಸಪ್ತದ್ವೀಪದ ಒಳಗಿರತಕ್ಕ ರಾಜರೆಲ್ಲರೂ ಕೋಟಿಗಟ್ಟಲೆಯಲ್ಲಿ ಅಂತಃಪುರದವರೊಡನೆಯೂ ಮಿತ್ರರೊಡನೆಯೂ, ಮಿತ್ರಪರಿವಾರದೊಡನೆಯೂ ಆ ಅಯೋಧ್ಯೆಗೆ ಬಂದರು.

೯೦–೯೧. ಅವರೆಲ್ಲರೂ ಬರಲು ಅಯೋಧ್ಯೆಯು ಬಹುವಾಗಿ ಮನೋಹರವಾಯಿತು. ಮುಹೂರ್ತದ ಕಾಲವು ಬರಲು ವಸಿಷ್ಠನು ಬ್ರಾಹ್ಮಣರೊಡನೆ ರಾಮನಿಗೂ, ಕುಶನಿಗೂ, ಮಧ್ಯದಲ್ಲಿ ತೆರೆಪಟವನ್ನು ಹಿಡಿದು ಸುಸ್ವರದಿಂದಲೂ ಮಧುರಾಕ್ಷರದಿಂದಲೂ ಮಂಗಳಾಷ್ಟಕವನ್ನು ಹೇಳಿದನು.

ಧ್ಯಾತ್ವಾ ಶ್ರೀಗಣನಾಯಕಂ ವಿಧಿಸುತಾಂ ಶಂಭುಂ ವಿಧಿಂ ಮಾಧವಂ
ಲಕ್ಷ್ಮೀಂ ಶೈಲಸುತಾಂ ವಿಧೇಸ್ತುದಯಿತಾ ಮಿಂದ್ರಂ ಸುರಾಸ್ತ್ರಾನ್ ಗ್ರಹಾನ್।
ಪುಣ್ಯಾನ್ ಸ್ಥಾವರನಿಮ್ನಗಾಶ್ಚ ಸುಮುನೀನ್ ಸ್ವೀಯಾಂ ಕುಲಸ್ವಾಂಬಿಕಾಂ
ತಾತಂ ಮಾತರಮಾದರೇಣ ವಟವೇ ಭೂಯಾತ್ಸದಾ ಮಂಗಳಂ ॥ ೯೨ ॥

ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರಬಲಂ ತದೇವ।
ವಿದ್ಯಾಬಲಂ ದೈವಬಲಂ ತದೇವ ಸೀತಾಪತೇರ್ಯತ್ ಸ್ಮರಣಂ ವಿಧೇಯಂ ॥

ಇತಿ ನಾನಾಮಂಗಲಾದ್ಯೈಸ್ತೂರ್ಯಘೋಷೈರ್ಮನೋಹರೈಃ।
ಓಂಕಾರಘೋಷೈಸ್ಸಗುರುರ್ಮವೋಚಾಂತಃಪಟಂ ತದಾ ॥ ೯೪ ॥

---

೯೨. ಗಣಪತಿ, ಸಾವಿತ್ರಿದೇವಿ, ಶಂಕರ, ಬ್ರಹ್ಮ, ವಿಷ್ಣು, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಇಂದ್ರ, ದೇವತೆಗಳು, ಗ್ರಹಗಳು, ಪುಣ್ಯಾತ್ಮರು, ಸ್ಥಾವರಗಳು ನದಿಗಳು, ಮುನಿಗಳು, ತನ್ನ ಕುಲದೇವರು, ತಾಯಿ, ತಂದೆ, ಇವರೆಲ್ಲರನ್ನೂ ಧ್ಯಾನಿಸಿಕೊಂಡು ಇವರೆಲ್ಲರೂ ಕೂಡ ಈ ವಟುವಿಗೆ ಯಾವಾಗಲೂ ಮಂಗಳ ವನ್ನುಂಟುಮಾಡಲಿ. ಎಂದು ಪ್ರಾರ್ಥಿಸಿದನು.

೯೩. ಸೀತಾಪತಿಯನ್ನು (ಲಕ್ಷ್ಮೀಪತಿಯನ್ನು) ಯಾವಾಗ ಸ್ಮರಿಸುತ್ತೇವೆಯೋ ಅದೇನೇ ಒಳ್ಳೆಯ ಲಗ್ನವು. ಅದೇನೇ ಸುದಿನವು ತಾರಾಬಲ ಚಂದ್ರ ಬಲಗಳೂ ಅದೇನೆ. ವಿದ್ಯಾಬಲವೂ ದೈವಬಲವೂ ಅದೇನೇ ಆಗಿರುವುದು.

೯೪. ಇವೇ ಮೊದಲಾದ ಬಗೆ ಬಗೆಯ ಮಂಗಳಶ್ಲೋಕಗಳಿಂದಲೂ, ಮನೋಹರವಾದ ವಾದ್ಯಗಳಿಂದಲೂ, ಓಂಕಾರ ಘೋಷಗಳಿಂದಲೂ, ಧ್ವನಿಮಾಡುತ್ತ ಆ ಗುರುವು ಅವರಿಬ್ಬರ ಮಧ್ಯದ ಅಂತರಪಟವನ್ನು ತೆಗೆದನು.

ತತಸ್ತಂ ರಾಘವಸ್ಯಾಂಕೇ ನಿವೇಶ್ಯ ಹವನಾದಿಕಂ ।
ವಿಧಿಂ ಕೃತ್ವಾಥ ಕೌಪೀನಂ ದಂಡಂ ಚಾಥ ಕಮಂಡಲುಂ ॥ ೯೫ ॥

ಬಧ್ವಾದೌ ರುಕ್ಮಜಾಂ ಮೌಂಜೀಂ ಬಬಂಧೈಣಾಜಿನಂ ತದಾ ।
ತತಃ ಕುಶಾಯ ಸ ಗುರುರ್ಗಾಯತ್ರೀಮುಪದಿಷ್ಟವಾನ್ ॥ ೯೬ ॥

ಬ್ರಹ್ಮಚರ್ಯವ್ರತಾದೀನಿ ಸ ಕುಶಾಯೋಪದಿಷ್ಟವಾನ್ ।
ಕೃತ್ವೋಕ್ತವಿಧಿನಾ ಶೌಚಂ ಕುರ್ಯಾದಾಚಮನಂ ತಥಾ ॥ ೯೭ ॥

ದಂತಾನ್ ಜಿಹ್ವಾನ್ ವಿಶೋಧ್ಯಾಥ ಕೃತ್ವಾ ಮಲವಿಶೋಧನಂ ।
ಸ್ನಾತ್ವಾಂಬುದೈವತೈರ್ಮಂತ್ರೈಃ ಪ್ರಾಣಾಯಾಮಮ್ಯ ಯತ್ನತಃ ॥ ೯೮ ॥

---

೯೫. ಅನಂತರ ಆ ಮಗುವನ್ನು ರಾಮನ ತೊಡೆಯಮೇಲೆ ಕುಳ್ಳಿರಿಸಿ ಹೋಮಹವನಗಳನ್ನು ಮಾಡಿದನು. ಮತ್ತು ಆ ವಟುವಿಗೆ ಕೌಪೀನವನ್ನು ಕಟ್ಟಿ ಕಮಂಡಲವನ್ನು ಕೊಟ್ಟನು.

೯೬. ಮೊದಲು ಚಿನ್ನದ ಮೌಂಜಿಯುದಾರವನ್ನು ಕಟ್ಟಿದನು. ಅನಂತರ ಹುಲ್ಲಿಯ ಚರ್ಮವನ್ನು ಕಟ್ಟಿದನು. ಅನಂತರ ಗುರುವು ಕುಶನಿಗೆ ಗಾಯತ್ರಿಯನ್ನು ಉಪದೇಶಿಸಿದನು.

೯೭. ಬ್ರಹ್ಮಚರ್ಯದಲ್ಲಿರುವಾಗ ಮಾಡಬೇಕಾದ ವ್ರತಗಳನ್ನು ಆ ಕುಶನಿಗೆ ಉಪದೇಶಿಸಿದನು. ಶಾಸ್ತ್ರರೀತಿಯಲ್ಲಿ ಶೌಚವನ್ನು ಮಾಡಿಸಿ ಅನಂತ ಆಚಮನವನ್ನು ಮಾಡಬೇಕು.

೯೮. ಹಲ್ಲನ್ನುಜ್ಜಿಕೊಂಡು ನಾಲಗೆಯನ್ನು ತಿಕ್ಕಿ ಅನಂತರ ಮಲವಿಸರ್ಜನೆಯನ್ನು ಮಾಡಬೇಕು. ಅನಂತರ ಶೌಚವನ್ನು ಮಾಡಿಕೊಂಡು ವರುಣದೇವತಾಕವಾದ ಮಂತ್ರಗಳನ್ನು ಹೇಳಿಕೊಂಡು ಸ್ನಾನವನ್ನು ಮಾಡಿ ಅನಂತರ ಪ್ರಾಣಾಯಾಮವನ್ನು ಮಾಡಬೇಕು.

ಉಪಸ್ಥಾನಂ ರವೇಃ ಕೃತ್ವಾ ಸಂಧ್ಯಯೋರುಭಯೋರಪಿ ।
ಅಗ್ನಿಕಾರ್ಯಂ ತತಃ ಕೃತ್ವಾ ಬ್ರಾಹ್ಮಣಾನಭಿವಾದಯೇತ್ ॥ ೯೯ ॥

ಬ್ರುವನ್ನಮುಕಗೋತ್ರೋಽಹಮಭಿವಾದಯ ಇತ್ಯಪಿ ।
ಧಾರಯನ್ಮೇಖಲಾಂ ದಂಡೋಪವೀತಾಜಿನಮೇವ ಚ ॥ ೧೦೦ ॥

ಅನಿಂದ್ಯೇಷು ಚರೇದ್ಭೈಕ್ಷ್ಯಂ ಬ್ರಾಹ್ಮಣೇಷ್ವಾತ್ಮವೃತ್ತಯೇ ।
ವಾಗ್ಯತೋ ಗುರ್ವನುಜ್ಞಾತೋ ಭುಂಜೀತಾನ್ನಮಕುತ್ಸಯನ್ ॥ ೧೦೧ ॥

ಏಕಾನ್ನಂ ಚ ಸಮಶ್ನೀಯಾತ್ ಶ್ರಾದ್ಧೇಶ್ನೀಯಾತ್ತಥಾಪದಿ ।
ದ್ವಿವಾರಂ ನೈವ ಭುಂಜೀತ ದಿವಾ ಕ್ವಾಪಿ ದ್ವಿಜೋತ್ತಮಃ ॥ ೧೦೨ ॥

---

೯೯. ಅನಂತರ ಸೂರ್ಯೋಪಸ್ಥಾನವನ್ನು ಮಾಡಬೇಕು. ಈ ಉಪಸ್ಥಾನವನ್ನು ಸಾಯಂಕಾಲ, ಪ್ರಾತಃಕಾಲಗಳ ಸಂಧ್ಯೆಗಳೆರಡರಲ್ಲಿಯೂ ಮಾಡಬೇಕು ಅನಂತರ ಅಗ್ನಿಕಾರ್ಯವನ್ನು ಮಾಡಬೇಕು. ಅನಂತರದಲ್ಲಿ ಬ್ರಾಹ್ಮಣರಿಗೆ ನಮಸ್ಕರಿಸಬೇಕು.

೧೦೦. ನಾನು ಇಂತಹ ಗೋತ್ರದವನು ನಿನಗೆ ಅಭಿವಾದನವನ್ನು ಮಾಡುತ್ತೇನೆ ಎಂದು ಹೇಳಬೇಕು. ಮೌಂಜಿ, ದಂಡುಕೋಲು, ಉಪವೀತ (ಜನಿವಾರ) ಕೃಷ್ಣಾಜಿನ ಇವನ್ನು ಯಾವಾಗಲೂ ಧರಿಸಿರಬೇಕು.

೧೦೧. ನಿಂದೆಯನ್ನು ಹೊಂದದಿರುವ ಬ್ರಾಹ್ಮಣರಲ್ಲಿ ತನ್ನ ಹೊಟ್ಟೆಯನ್ನು ತುಂಬಿಕೊಳ್ಳಲು ಭಿಕ್ಷೆಯನ್ನು ಮಾಡಬೇಕು. ಅದನ್ನು ಗುರುವಿಗೆ ಒಪ್ಪಿಸಿ ಅನಂತರ ಆ ಗುರುವಿನ ಒಪ್ಪಿಗೆಯನ್ನು ಹೊಂದಿ ಮಾತನಾಡದೆ ಊಟಮಾಡಬೇಕು.

೧೦೨. ಆಪತ್ಕಾಲದಲ್ಲಿಯೂ ಶ್ರಾದ್ಧದಲ್ಲಿಯೂ ಒಬ್ಬನ ಅನ್ನವನ್ನೇ ಭೋಜನವನ್ನು ಮಾಡಬಹುದು. ಬ್ರಾಹ್ಮಣನಾದವನು ಹಗಲಿನಲ್ಲಿ ಎರಡಾವರ್ತಿಯಾನಾಗಲೂ ಊಟಮಾಡಲೇ ಕೂಡದು.

ಸಾಯಂಪ್ರಾತರ್ದ್ವಿಜೋಶ್ನೀಯಾದಗ್ನಿಹೋತ್ರವಿಧಾನವಿತ್ ।
ಮಧು ಮಾಂಸಂ ಪ್ರಾಣಿಹಿಂಸಾಂ ಭಾಸ್ಕರಾಲೋಕನಂ ಜಲೇ ॥ ೧೦೩ ॥

ಸ್ತ್ರಿಯಂ ಪರ್ಯುಷಿತೋಚ್ಛಿಷ್ಟೇ ಪರಿವಾದಂ ವಿವರ್ಜಯೇತ್ ।
ಯಥೇಷ್ಟಚೇಷ್ಟೋ ನ ಭವೇದ್ಗುರೋರ್ನಯನಗೋಚರೇ ॥ ೧೦೪ ॥

ನ ನಾಮ ಪರಿಗೃಹ್ಣೀಯಾತ್ಪರೋಕ್ಷೇಪ್ಯವಿಶೇಷಣಂ ।
ಗುರುನಿಂದಾ ಭವೇದ್ಯತ್ರ ಪರಿವಾದಸ್ತು ಯತ್ರ ಚ ॥ ೧೦೫ ॥

ಶ್ರುತೀ ಪಿಧಾಯ ಸ್ಥಾತವ್ಯಂ ಯಾತವ್ಯಂ ವಾ ತತೋನ್ಯತಃ ।
ನ ಮಾತ್ರಾ ನ ಪಿತುಃ ಸ್ವಸ್ರಾ ನ ಸ್ವಸ್ರೈಕಾಂತಶೀಲತಾ ॥ ೧೦೬ ॥

---

೧೦೩. ಅಗ್ನಿಹೋತ್ರದ ಕ್ರಮದಲ್ಲಿ ಸಾಯಂಕಾಲದಲ್ಲಿಯೂ, ಪ್ರಾತಃಕಾಲದಲ್ಲಿಯೂ ಊಟಮಾಡಬೇಕು. ಜೇನು, ಮಾಂಸಗಳನ್ನು ತಿನ್ನಕೂಡದು. ಪ್ರಾಣಿಹಿಂಸೆಯನ್ನು ಮಾಡಬಾರದು. ನೀರಿನಲ್ಲಿ ಸೂರ್ಯನನ್ನು ನೋಡಕೂಡದು.

೧೦೪. ಹೆಂಗಸಿನ ಸಹವಾಸವನ್ನು ಮಾಡಕೂಡದು. ಹಳಸಿದ ಅನ್ನವನ್ನು (ತಂಗಳನ್ನವನ್ನು) ತಿನ್ನಕೂಡದು. ಅಪವಾದದ ಮಾತನ್ನಾಡಕೂಡದು. ಎಂಜಲನ್ನು ತಿನ್ನಕೂಡದು. ಗುರುವಿನ ಎದುರಿನಲ್ಲಿ ತನಗೆ ಇಷ್ಟಬಂದಂತೆ ಚೇಷ್ಟೆಗಳನ್ನು ಮಾಡಕೂಡದು.

೧೦೫-೧೦೬. ಪ್ರತ್ಯಕ್ಷ, ಪರೋಕ್ಷಗಳಲ್ಲಿಯೂ ಕೂಡ ಗುರುವಿನ ಹೆಸರನ್ನು ಹೇಳಬಾರದು. ಹೇಳಬೇಕಾಗಿ ಬಂದಲ್ಲಿ ಉತ್ತಮವಾದ ವಿಶೇಷಣವನ್ನು ಸೇರಿಸಿ ಹೇಳಬೇಕು. ಎಲ್ಲಿ ಗುರುವಿನ ನಿಂದೆಯಾಗಲಿ, ಅವನಿಗೆ ಅಪವಾದವಾಗಲಿ ನಡೆಯುತ್ತಿರುವುದೋ ಅಲ್ಲಿ ಅವನು ಕಿವಿಗಳನ್ನು ಮುಚ್ಚಿಕೊಂಡಿರಬೇಕು. ಇಲ್ಲವೇ ಬೇರೆಕಡೆಗಾದರೂ ಹೋಗಬೇಕು. ತಾಯಿಯೊಡನೆಯಾಗಲಿ, ಸೋದರತ್ತೆಯೊಡನೆಯಾಗಲಿ, ಅಕ್ಕತಂಗಿಯರೊಡನೆಯಾಗಲಿ, ಏಕಾಂತದಲ್ಲಿ ಮಾತನಾಡಬಾರದು. ಅವರುಗಳೊಡನೆ ಒಬ್ಬೊಬ್ಬನೇ ಇರಲೂಬಾರದು.

ಬಲವಂತೀಂದ್ರಿಯಾಣ್ಯತ್ರ ಮೋಹಯಂತ್ಯತಿಕೋವಿದಾನ್ ।
ಏವಮಾದೀನ್ಯನೇಕಾನಿ ಬ್ರಹ್ಮಚಾರಿವ್ರತಾನಿ ಹಿ ॥ ೧೦೭ ॥

ತಸ್ಮೈ ಗುರುಶ್ಚೋಪದಿಶ್ಯ ದದೌ ದಾನಾನ್ಯನೇಕಶಃ ।
ಭೋಜಯಾಮಾಸ ತಂ ಮಾತ್ರಾ ಸಹ ನಾನೋತ್ಸವೈಸ್ತದಾ ॥ ೧೦೮ ॥

ಕಾರಯಿತ್ವಾಥ ಪಾಲಾಶಪೂಜನಂ ವಿಧಿಪೂರ್ವಕಂ ।
ತೇನಾಽಪಿ ಕುಶಬಾಲೇನ ದೇವಕಸ್ಯ ವಿಸರ್ಜನಂ ॥ ೧೦೯ ॥

ಚಕಾರ ರಾಘವೇಣೈವ ಸೀತಯಾ ಸ ಗುರುಸ್ತದಾ ।
ತತೋ ರಾಮೋ ನೃಪತಿಭಿರ್ಜನಕೇನಾಪಿ ಪೂಜಿತಃ ॥ ೧೧೦ ॥

---

೧೦೭. ಇಂದ್ರಿಯಗಳು ಬಹು ಬಲಿಷ್ಠವಾದುವು. ಬಹು ಬುದ್ಧಿವಂತರನ್ನೂ ಕೂಡ ಮೋಸಪಡಿಸಿ ಇತರರನ್ನು ಮೋಹಿಸುವಂತೆ ಅವು ಮಾಡುತ್ತವೆ. ಇವೇ ಮೊದಲಾದ ಅನೇಕ ವ್ರತಗಳು ಬ್ರಹ್ಮಚಾರಿಗೆ ಹೇಳಲ್ಪಟ್ಟಿವೆ. ಎಂದು ಉಪದೇಶಿಸಿದನು.

೧೦೮. ಗುರುವು ಆ ಕುಶನಿಗೆ ಈ ರೀತಿಯಾಗಿ ಉಪದೇಶಿಸಿ ಅನಂತರ ಅನೇಕ ದಾನಗಳನ್ನು ಕೊಟ್ಟನು. ಅನಂತರ ತಾಯಿಯೊಡನೆ ಚೌಲಪಂಕ್ತಿಯ ಭೋಜನವನ್ನು ಮಾಡಿಸಿದನು.

೧೦೯–೧೧೦. ಅನಂತರ ಅನೇಕ ಉತ್ಸವಗಳೊಡನೆ ಶಾಸ್ತ್ರದಲ್ಲಿ ಹೇಳಿರುವಂತೆ ಪಾಲಾಶಪೂಜೆಯನ್ನು ಮಾಡಿಸಿದನು. ಅನಂತರ ಆ ಸೀತೆ, ರಾಮು, ಕುಶ ಇವರ ಕೈಯ್ಯಿಂದ ಮನೆದೇವರ ವಿಸರ್ಜನೆಯನ್ನು ಮಾಡಿಸಿದನು. ಅನಂತರ ರಾಮನನ್ನು ಜನಕನೂ, ರಾಜರುಗಳೂ ಗೌರವಿಸಿದರು.

ಚಕಾರ ಧನವಸ್ತ್ರಾದ್ಯೈಸ್ತುಷ್ಟಾನ್ವಿಪ್ರಾನ್ನೃಪಾದಿಕಾನ್ ।
ಆಚಾಂಡಾಲಾಂಸ್ತದಾ ರಾಮಸ್ತೋಷಯಾಮಾಸ ಸಾದರಂ ॥ ೧೧೧ ॥

ಏವಂ ನಾನಾಸಮುತ್ಸಾಹೈರ್ಮಾಸಮೇಕಂ ನಿನಾಯ ಸಃ ।
ರಾಮೋ ವಿಸರ್ಜಯಾಮಾಸ ತತಸ್ತಾನ್ಪಾರ್ಥಿವಾದಿಕಾನ್ ॥ ೧೧೨ ॥

ಏವಂ ವರ್ಷಾಂತರಾದ್ರಾಮೋ ವ್ರತಬಂಧಂ ಲವಸ್ಯ ಚ ।
ಚಕಾರ ಪೂರ್ವವದ್ಧರ್ಷಾತ್ಸಮಾಹೂಯ ನೃಪಾದಿಕಾನ್ ॥ ೧೧೩ ॥

ತತಸ್ತೌ ಬಾಲಕೌ ರಮ್ಯೌ ವೇದಾಧ್ಯಯನಮುತ್ತಮಂ ।
ಚಕ್ರತುರ್ಗುರುಸಾನ್ನಿಧ್ಯೇ ವಿಧಿವದ್ಬುದ್ಧಿಸತ್ತಮೌ ॥ ೧೧೪ ॥

---

೧೧೧. ರಾಮನು ಧನಕನಕಗಳಿಂದಲೂ, ವಸ್ತ್ರಗಳಿಂದಲೂ, ವಿಪ್ರರನ್ನೂ, ರಾಜರನ್ನೂ ಸಂತೋಷಪಡಿಸಿದನು. ಆ ಕುಶನ ಉಪನಯನದಲ್ಲಿ ಶ್ರೀರಾಮನು ಉತ್ತಮಜಾತಿಯಿಂದ ಮೊದಲುಮಾಡಿಕೊಂಡು ನೀಚಜಾತಿಯವರೆಗೂ ಎಲ್ಲರನ್ನೂ ಊಟ ಉಡುಗೊರೆಗಳಿಂದ ತೃಪ್ತಿಪಡಿಸಿದನು.

೧೧೨. ಆ ರಾಮನು ಅಲ್ಲಿಗೆ ಬಂದಿದ್ದವರು ಎಲ್ಲವನ್ನೂ ಇಟ್ಟುಕೊಂಡು ಅನೇಕ ಬಗೆಯಾದ ಉತ್ಸವಗಳನ್ನು ಮಾಡುತ್ತ ಒಂದು ತಿಂಗಳವರೆಗೂ ಒಬ್ಬರನ್ನೂ ಕಳುಹಿಸಲಿಲ್ಲ. ಆನಂತರ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಅವರವರ ಸ್ಥಳಗಳಿಗೆ ಕಳುಹಿಸಿದನು.

೧೧೩. ಒಂದುವರ್ಷವಾದಮೇಲೆ ರಾಮನು ಲವನಿಗೂ ಇದೇ ರೀತಿಯಾಗಿ ಉಪನಯನವನ್ನು ಮಾಡಿದನು. ಆಗಲೂ ಕೂಡ ಹಿಂದಿನಂತೆಯೇ ಎಲ್ಲರನ್ನೂ ಕರೆಸಿದ್ದನು.

೧೧೪. ಅನಂತರ ಆ ರಮ್ಯರಾದ ಬಾಲಕರು ಉತ್ತಮವಾದ ವೇದಾಧ್ಯಯನವನ್ನು ಮಾಡಿದರು. ವಸಿಷ್ಠನೇ ಅವರಿಗೆ ಗುರುವಾಗಿದ್ದನು. ಈ ಬಾಲಕರೂ ಕೂಡ ಬಹು ಬುದ್ಧಿವಂತರಾಗಿದ್ದರು.

ಏವಂ ತೇಷಾಂ ತು ಬಾಲಾನಾಂ ಸರ್ವೇಷಾಂ ರಘುನಂದನಃ ।
ವ್ರತಬಂಧವಿಧಾನಾನಿ ಯಥಾಕಾಲೇ ಮಹೋತ್ಸವೈಃ ॥ ೧೧೫ ॥

ಚಕಾರ ಗುರುಣಾ ವಿಪ್ರೈಸ್ಸಮಾಹೂಯ ನೃಪಾದಿಕಾನ್ ।
ವಿಶೇಷೈರ್ನಿಜಪುತ್ರಾಭ್ಯಾಂ ಚಕಾರ ಸಮಹೋತ್ಸವೈಃ ॥ ೧೧೬ ॥

ಅಕರೋದಧಿಕಂ ಕಿಂಚಿನ್ನ ನ್ಯೂನಮಕರೋದ್ವಿಭುಃ ।
ತತಸ್ತೇ ಬಾಲಕಾಸ್ಸರ್ವೇ ಬ್ರಹ್ಮಚರ್ಯಂ ವ್ರತಸ್ಥಿತಾಃ ॥ ೧೧೭ ॥

ಚಕ್ರುಸ್ತೇ ಗುರುಸಾನ್ನಿಧ್ಯೇ ವೇದಾಧ್ಯಯನಮುತ್ತಮಂ ।
ಅಥ ರಾಮೋಽಪಿ ವೈದೇಹ್ಯಾ ಬಾಲಕೈಃ ಪರಿವಾರಿತಃ ॥ ೧೧೮ ॥

---

೧೧೫. ಇದೇ ರೀತಿಯಾಗಿ ರಾಮನು ತಮ್ಮಂದಿರ ಮಕ್ಕಳಿಗೂ ಆಯಾ ಕಾಲದಲ್ಲಿ ಉಪನಯನವನ್ನು ಬಹು ಉತ್ಸವದಿಂದ ಮಾಡಿದನು.

೧೧೬. ಆಗಲೂ ಕೂಡ ಎಲ್ಲಾ ರಾಜರೂ, ಇತರರೂ ಬಂದಿದ್ದರು. ತನ್ನ ಮಕ್ಕಳಿಗೆ ಮಾಡಿದ ವಿಜೃಂಭಣೆಗಳಿಗಿಂತಲೂ ಅತಿಶಯವಾದ ವಿಜೃಂಭಣೆಯಿಂದ ಆ ಉಪನಯನವನ್ನು ಮಾಡಿದನು.

೧೧೭. ಒಂದಕ್ಕಿಂತಲೂ ಮತ್ತೊಂದರಲ್ಲಿ ವೈಭವವು ಹೆಚ್ಚು ಹೆಚ್ಚಾಗಿ ಆಗುತ್ತಿದ್ದಿತೇ ಹೊರತು ಕಡಿಮೆಯಾಗಿ ಆಗುತ್ತಿರಲಿಲ್ಲ. ಅನಂತರ ಆ ಬಾಲಕರೆಲ್ಲರೂ ಬ್ರಹ್ಮಚರ್ಯದ ವ್ರತದಲ್ಲಿ ಇದ್ದುಕೊಂಡು ಅದನ್ನು ಆಚರಿಸುತ್ತಲಿದ್ದರು.

೧೧೮–೧೧೯. ಎಲ್ಲರೂ ಗುರುವಿನ ಬಳಿಯಲ್ಲಿದ್ದುಕೊಂಡು ವೇದಾಧ್ಯಯನವನ್ನು ಮಾಡುತ್ತಿದ್ದರು. ರಾಮನೂ ಕೂಡ ಆ ಸೀತೆಯಿಂದಲೂ, ಕುಶಲವರಿಂದಲೂ ಕೂಡಿಕೊಂಡು ಸ್ಕಂದಗಣಪರಿಂದ ಕೂಡಿಕೊಂಡು

ವಿರೇಜೇ ಸ್ಕಂದಗಣಪಾದಿಭಿರ್ದೇವ್ಯಾ ಯಥಾ ಶಿವಃ ।
ಅಥ ತೇ ಬಾಲಕಾಸ್ಸರ್ವೇ ಕೃತ್ವಾಧ್ಯಯನಮುತ್ತಮಂ ॥ ೧೧೯ ॥

ವೇದಾದೀನಾಂ ಗುರುಮುಖಾಲ್ಲಬ್ಧ್ವಾಜ್ಞಾಂ ಸ್ವಗುರೋಸ್ತತಃ ।
ಜಗ್ಮುಸ್ತೀರ್ಥಾನಿ ವೈ ಕರ್ತುಂ ಸೇನಯಾ ಗುರುಮಂತ್ರಿಭಿಃ ॥ ೧೨೦ ॥

ಪೃಥಿವ್ಯಾಂ ಭಾರತೇ ಖಂಡೇ ಯಾನಿ ತೀರ್ಥಾನಿ ತಾನಿ ತೇ ।
ಕೃತ್ವಾ ಸಮಾಯಯುಃ ಪಂಚಮಾಸೈಸ್ಸ್ವನಗರೀಂ ಶನೈಃ ॥ ೧೨೧ ॥

ಬಾಲಾನ್ ಸಮಾಗತಾನ್ ಶ್ರುತ್ವಾ ಶೋಭಯಿತ್ವಾ ನಿಜಾಂ ಪುರೀಂ ।
ಪ್ರತ್ಯುಜ್ಜಗಾಮ ಸೌಮಿತ್ರಿಃ ಪುರಸ್ಕೃತ್ಯಾಥ ವಾರಣಂ ॥ ೧೨೨ ॥

ಪಾರ್ವತಿಯಿಂದ ವಿರಾಜಿಸುವ ಶಿವನಂತೆ ಪ್ರಕಾಶಿಸಿದನು. ಕೊನೆಗೆ ಸ್ವಲ್ಪಕಾಲದಲ್ಲಿಯೇ ಈ ಬಾಲಕರೆಲ್ಲರೂ ವೇದಾಧ್ಯಯನವನ್ನು ಮಾಡಿ ಮುಗಿಸಿದರು.

೧೨೦. ಅಂತೆಯೇ ಶಾಸ್ತ್ರಾಧ್ಯಯನವನ್ನೂ ಮಾಡಿದರು. ಎಲ್ಲವೂ ಗುರುಮುಖದಿಂದ ಸಾಂಗವಾಗಿ ನೆರವೇರಿತು. ಅನಂತರ ಗುರುವಿನ ಅಪ್ಪಣೆಯನ್ನು ಪಡೆದು ತೀರ್ಥಯಾತ್ರೆಯನ್ನು ಮಾಡಲು ಸೇನೆಯೊಡನೆಯೂ, ಗುರುವಿನೊಡನೆಯೂ, ಮಂತ್ರಿಗಳೊಡನೆಯೂ ಹೊರಟರು.

೧೨೧. ಈ ಭೂಮಿಯಲ್ಲಿ ಭರತಖಂಡದಲ್ಲಿ ಎಷ್ಟು ತೀರ್ಥಗಳಿವೆಯೋ ಅವೆಲ್ಲಕ್ಕೂ ಹೋಗಿ ಐದುತಿಂಗಳಿನಲ್ಲಿ ಮತ್ತೆ ತಮ್ಮ ಪಟ್ಟಣಕ್ಕೆ ಬಂದರು.

೧೨೨. ರಾಮನು ಬಾಲರೆಲ್ಲರೂ ತೀರ್ಥಯಾತ್ರೆಯಿಂದ ಪಟ್ಟಣಕ್ಕೆ ಬಂದರೆಂದು ತಿಳಿದು ಪಟ್ಟಣವನ್ನೆಲ್ಲಾ ಅಲಂಕರಿಸಿದನು. ಸೌಮಿತ್ರಿಯು ಆನೆಯ ಮೇಲೆ ಕುಳಿತುಕೊಂಡು ಅವರನ್ನು ಎದುರುಗೊಂಡನು.

ತೇ ದೃಷ್ಟ್ವಾ ಲಕ್ಷ್ಮಣಂ ನೇಮುಸ್ತೇ ತೇನಾಲಿಂಗಿತಾ ಅಪಿ ।
ನಾನೋತ್ಸವೈರ್ಯಯುರ್ಬಾಲಾ ಅಯೋಧ್ಯಾಯಾಂ ಗೃಹಂ ಪ್ರತಿ॥ ೧೨೩ ॥

ಮಾರ್ಗೇ ಮಾರ್ಗೇ ಪುರಸ್ತ್ರೀಭಿಃ ಸೌಧಸ್ಥಾಭಿಸ್ತು ವರ್ಷಿತಾಃ ।
ವೃಷ್ಟಿಭಿಃ ಕುಸುಮಾದೀನಾಂ ದೀಪೈರ್ನೀರಾಜಿತಾ ಅಪಿ ॥ ೧೨೪ ॥

ತತಸ್ತೇ ಬಾಲಕಾಸ್ಸರ್ವೇ ಸಭಾಯಾಂ ರಘುನಂದನಂ ।
ನೇಮುಸ್ತೇನಾಲಿಂಗಿತಾಶ್ಚ ಯಯುಸ್ಸೀತಾಗೃಹಂ ತತಃ ॥ ೧೨೫ ॥

ಏತಸ್ಮಿನ್ನಂತರೇ ಸೀತೋರ್ಮಿಲಾ ಸಾ ಮಾಂಡವೀ ತಥಾ ।
ಶ್ರುತಕೀರ್ತಿಶ್ಚ ವೇಗೇನ ಚಕ್ರುರ್ನೀರಾಜನಂ ಪೃಥಕ್ ॥ ೧೨೬ ॥

---

೧೨೩. ಅವರು ಆ ಸೌಮಿತ್ರಿಯನ್ನು ನೋಡಿ ಅವನಿಗೆ ನಮಸ್ಕರಿಸಿದರು. ಲಕ್ಷ್ಮಣನೂ ಕೂಡ ಅವರನ್ನು ಆಲಿಂಗಿಸಿಕೊಂಡನು. ಅನಂತರ ಆ ಬಾಲಕರು ಬಹುವಾದ ವಿಜೃಂಭಣೆಯಿಂದ ಪಟ್ಟಣದಲ್ಲಿರುವ ಮನೆಗೆ ಹೋದರು.

೧೨೪. ಪಟ್ಟಣದ ಸ್ತ್ರೀಯರು ಮಹಡಿಯಮೇಲಿದ್ದುಕೊಂಡು ಅಲ್ಲಲ್ಲಿಯೇ ಹೂವನ್ನೆರಚುತ್ತಿದ್ದರು. ಅಲ್ಲದೆ ದೀಪಗಳನ್ನಿಟ್ಟು ಆರತಿಯನ್ನು ಎತ್ತುತ್ತಿದ್ದರು.

೧೨೫. ಈ ರೀತಿಯಾಗಿ ಉತ್ಸವದಿಂದ ಅರಮನೆಯಲ್ಲಿರುವ ಸಭಾ ಮಂಟಪಕ್ಕೆ ಹೋದರು. ಅಲ್ಲಿ ಕುಳಿತಿರುವ ಶ್ರೀರಾಮನಿಗೆ ಎಲ್ಲರೂ ನಮಸ್ಕರಿಸಿದರು. ರಾಮನು ಅವರೆಲ್ಲರನ್ನೂ ಆಲಿಂಗಿಸಿಕೊಂಡನು. ಅನಂತರ ಅವರೆಲ್ಲರೂ ಸೀತೆಯ ಮನೆಗೆ ಹೋದರು.

೧೨೬. ಅವರು ಬರುತ್ತಿರುವುದನ್ನು ನೋಡಿ ಸೀತೆ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರು ಆ ಮಕ್ಕಳಿಗೆ ಬಹು ಸಡಗರದಿಂದಲೂ ವಿಜೃಂಭಣೆಯಿಂದಲೂ ಆರತಿಯನ್ನು ಎತ್ತಿದರು.

ದಧ್ಯೋದನಭವೈರ್ದೀಪೈಃ ಪಕ್ವಾನ್ನೈಸ್ತೈಲಪಾಚಿತೈಃ |
ಸರ್ಷಪೈರ್ಲವಣೈರ್ಮಾಷೈಃ ತೋಯಕುಂಭೈಶ್ಚ ಸಾದರಂ ॥ ೧೨೭ ॥

ತತಸ್ತೇ ಬಾಲಕಾಸ್ಸರ್ವೇ ನೇಮುಸ್ಸೀತಾಂ ಪೃಥಕ್ ಪೃಥಕ್ ।
ತತೋ ನೇಮುಸ್ಸ್ವಮಾತೃಶ್ಚ ಪೂರ್ವಂ ನತ್ವಾ ಪಿತಾಮಹೀಃ ॥ ೧೨೮ ॥

ತತಸ್ತೇ ಬಾಲಕಾಸ್ಸರ್ವೇ ದದುರ್ದಾನಾನ್ಯನೇಕಶಃ |
ಬ್ರಾಹ್ಮಣಾನ್ ಭೋಜಯಾಮಾಸುಃ ಕೋಟಿಶಸ್ತೇ ಪೃಥಕ್ ಪೃಥಕ್॥೧೨೯॥

ಏವಂ ನಾನೋತ್ಸವಾಸ್ತತ್ರ ಬಭೂವೂ ರಾಮಸದ್ಮನಿ |
ಅಥ ತೇ ಬಾಲಕಾಸ್ಸರ್ವೇ ಸ್ಯಂದನಾದಿಷು ಸಂಸ್ಥಿತಾಃ. ॥ ೧೩೦ ॥

---

೧೨೭. ಮೊಸರನ್ನವನ್ನು ನಿವಾಳಿಸಿಹಾಕಿದರು. ದಧ್ಯೋದನದಲ್ಲಿ ದೀಪವನ್ನು ಇಟ್ಟುಕೊಂಡು ಆರತಿಯನ್ನು ಎತ್ತಿದರು. ಪಕ್ವಾನ್ನ, ಎಣ್ಣೆಯಿಂದ ಕೂಡಿಸಿದ ಅನ್ನ, ಸಾಸುವೆ, ಉಪ್ಪು, ಉದ್ದು, ನೀರನ್ನು ತುಂಬಿರುವ ಚೊಂಬು ಇವುಗಳಿಂದಲೂ ನಿವಾಳಿಸಿ ಆರತಿಯನ್ನು ಮಾಡಿದರು.

೧೨೮. ಅನಂತರ ಆ ಬಾಲಕರೆಲ್ಲರೂ ಬೇರೆ ಬೇರೆಯಾಗಿ ಸೀತೆಗೆ ನಮಸ್ಕಾರವನ್ನು ಮಾಡಿದರು. ಅನಂತರ ಅವರೆಲ್ಲರೂ ಅಜ್ಜಿಯರಿಗೆ ನಮಸ್ಕರಿಸಿ ಅನಂತರ ತಮ್ಮ ತಮ್ಮ ತಾಯಿಯರಿಗೂ ನಮಸ್ಕರಿಸಿದರು.

೧೨೯. ಅನಂತರ ಆ ಹುಡುಗರೆಲ್ಲರೂ ಬಹುವಾಗಿ ದಾನಗಳನ್ನು ಕೊಟ್ಟರು. ಕೋಟಿಗಟ್ಟಲೆಯಲ್ಲಿ ಒಬ್ಬೊಬ್ಬರೂ ಬೇರೆ ಬೇರೆಯಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದರು.

೧೩೦. ಈ ರೀತಿಯಾಗಿ ಆ ರಾಮನ ಅರಮನೆಯಲ್ಲಿ ಅನೇಕವಾಗಿ ಬಗೆ ಬಗೆಯಾದ ಉತ್ಸವಗಳು ಆಗುತ್ತಲೇ ಇದ್ದುವು. ಬಾಲಕರೂ ಬಹು ಸಂತೋಷದಿಂದಿದ್ದರು. ಅವರೆಲ್ಲರೂ ಉತ್ತಮವಾದ ರಥದಮೇಲೆ ಕುಳಿತು ಕೊಳ್ಳುತ್ತಿದ್ದರು.

ದಿವ್ಯವಸ್ತ್ರಾಣಿ ಚಿತ್ರಾಣಿ ಪರಿಧಾಯ ಸಮಂತತಃ ।
ಅಯೋಧ್ಯಾ ರಾಜಮಾರ್ಗೇಷು ಹಟ್ಟೇಷು ಚ ಚತುಷ್ಪಥೇ ॥ ೧೩೧ ॥

ಆರಾಮೋಪವನಾರಣ್ಯವಾಟಿಕಾಸು ನದೀತಟೇ ।
ಗಮನಾಗಮನೇ ಚಕ್ರುಸ್ಸೇನಯಾ ಮಂತ್ರಿಬಾಲಕೈಃ ॥ ೧೩೨ ॥

ಏವಂ ಸಾಕೇತನಗರೇ ಬಾಲಕೈಸ್ಸೀತಯಾ ಸುಖಂ ।
ರೇಮೇ ಸ ಬಂಧುಭಿರ್ಯುಕ್ತಶ್ಚಿರಂ ರಾಜಾ ರಘೂದ್ವಹಃ ॥ ೧೩೩ ॥

ಏವಂ ಶಿಷ್ಯ ಮಯಾ ಪ್ರೋಕ್ತಂ ಜನ್ಮಕಾಂಡಮಿದಂ ತವ ।
ಕುಶಾದೀನಾಂ ಚ ಜನ್ಮಾನಿ ವರ್ಣಿತಾನ್ಯತ್ರ ವಿಸ್ತರಾತ್ ॥ ೧೩೪ ॥

ರಮ್ಯಂ ಪವಿತ್ರಮಾನಂದದಾಯಕಂ ಚ ಮನೋಹರಂ ।
ಪುತ್ರಪೌತ್ರಪ್ರದಂ ಜನ್ಮಕಾಂಡಮೇತತ್ಸುಖಾವಹಂ ॥ ೧೩೫ ॥

೧೩೧–೧೩೨. ದಿವ್ಯವಸ್ತ್ರಗಳನ್ನು ಧರಿಸಿಕೊಂಡು ಅಯೋಧ್ಯೆಯ ರಾಜ ಮಾರ್ಗಗಳಲ್ಲಿಯೂ, ಅಂಗಡಿ ಬೀದಿಗಳಲ್ಲಿಯೂ, ಚೌಕಗಳಲ್ಲಿಯೂ ತೋಟ ಗಳಲ್ಲಿಯೂ, ಉಪವನಗಳಲ್ಲಿಯೂ ಅರಣ್ಯಗಳಲ್ಲಿಯೂ, ವನಗಳಲ್ಲಿಯೂ, ಮಂತ್ರಿಗಳ ಮಕ್ಕಳೊಡನೆಯೂ, ಸೇನೆಯೊಡನೆಯೂ ಓಡಾಡುತ್ತಿದ್ದರು.

೧೩೩. ಈ ರೀತಿಯಾಗಿ ಆ ರಘುಕುಲೋತ್ತಮನಾದ ರಾಮನು ಬಾಲಕ ರೊಡನೆಯೂ, ಸೀತೆಯೊಡನೆಯೂ, ತಮ್ಮಂದಿರೊಡನೆಯೂ ಅಯೋಧ್ಯೆಯಲ್ಲಿ ಬಹುಕಾಲದವರೆಗೆ ಸುಖವಾಗಿದ್ದನು.

೧೩೪. ಎಲೈ ಶಿಷ್ಯನೇ! ಈ ರೀತಿಯಾದ ಜನ್ಮಕಾಂಡವನ್ನು ನಿನಗೆ ಹೇಳಿದ್ದೇನೆ. ಕುಶನೇ ಮೊದಲಾದ ಬಾಲಕರ ಜನ್ಮವೃತ್ತಾಂತವು ಈ ಕಾಂಡದಲ್ಲಿ ವಿಸ್ತಾರವಾಗಿ ಹೇಳಿರುವುದು.

೧೩೫. ಈ ಜನ್ಮಕಾಂಡವು ರಮ್ಯವಾದುದು. ಪವಿತ್ರವಾದುದು. ಆನಂದ ವನ್ನು ಕೊಡುವುದು. ಮನೋಹರವಾಗಿರುವುದು. ಮಕ್ಕಳು ಮೊಮ್ಮಕ್ಕಳನ್ನು ಕೊಡುತ್ತದೆ. ಸುಖಕರವಾದುದು.

ಜನ್ಮಕಾಂಡಮಿದಂ ಪುಣ್ಯಂ ಯೇ ಶೃಣ್ವಂತಿ ನರೋತ್ತಮಾಃ ।
ತೇಷಾಂ ಪುತ್ರೈಶ್ಚ ಪೌತ್ರೈಶ್ಚ ವಿಯೋಗೋ ನ ಭವಿಷ್ಯತಿ ॥ ೧೩೬ ॥

ಜನ್ಮಕಾಂಡಮಿದಂ ಪುಣ್ಯಂ ಯೇ ವೈ ಶೃಣ್ವಂತಿ ಮಾನವಾಃ ।
ತೇಷಾಂ ಸ್ತ್ರೀಣಾಂ ವಿಯೋಗೋ ಹಿ ನ ಕದಾಪ್ಯತ್ರ ಜಾಯತೇ ॥ ೧೩೭ ॥

ಜನ್ಮಕಾಂಡಮಿದಂ ಪುಣ್ಯಂ ಯಾಃ ಶೃಣ್ವಂತ್ಯತ್ರ ವೈ ಸ್ತ್ರಿಯಃ ।
ಸ್ವಭರ್ತೃಭಿರ್ವಿಯೋಗಂ ತಾ ನ ಗಚ್ಛಂತಿ ಯಥಾ ರಮಾ ॥ ೧೩೮ ॥

ಗ್ರಾಮಂ ದೇಶಾಂತರಂ ತೀರ್ಥಂ ಯೇ ಗತಾಶ್ಚ ಚಿರಂ ನರಾಃ ।
ತೇಷಾಮಾಗಮನಾರ್ಥಂ ಹಿ ಜನ್ಮಕಾಂಡಂ ಪಠೇದಿದಂ ॥ ೧೩೯ ॥

---

೧೩೬. ಪುಣ್ಯಕರವಾದ ಈ ಜನ್ಮಕಾಂಡವನ್ನು ಯಾರು ಕೇಳುತ್ತಾರೆಯೋ ಅವರಿಗೆ ಪುತ್ರರಿಂದಲೂ, ಪೌತ್ರರಿಂದಲೂ ಯಾವಾಗಲೂ ವಿಯೋಗವು ಉಂಟಾಗುವುದೇ ಇಲ್ಲವು.

೧೩೭. ಈ ಜನ್ಮಕಾಂಡವನ್ನು ಯಾರು ಭಕ್ತಿಯಿಂದ ಕೇಳುವರೋ ಅವರು ತಮ್ಮ ಹೆಂಡತಿಯರೊಡನೆ ವಿಯೋಗವನ್ನು ಹೊಂದುವುದೇ ಇಲ್ಲವು.

೧೩೮. ಪುಣ್ಯಕರವಾದ ಈ ಜನ್ಮಕಾಂಡವನ್ನು ಯಾವ ಹೆಂಗಸು ಕೇಳುತ್ತಾಳೆಯೋ ಅವಳಿಗೆ ತನ್ನ ಗಂಡನೊಡನೆ ವಿಯೋಗವು ಉಂಟಾಗುವುದಿಲ್ಲ.

೧೩೯. ಯಾರು ತೀರ್ಥಕ್ಕಾಗಲಿ, ಪರಸ್ಥಳಕ್ಕಾಗಲಿ, ಹೋಗಿ ಬಹು ಕಾಲವಾದರೂ ಹಿಂದಿರುಗಿ ಬಾರದಿರುವರೋ ಅವರು ಬರಬೇಕಾದರೆ ಈ ಜನ್ಮಕಾಂಡವನ್ನು ಓದಬೇಕು. ಆ ರೀತಿಯಾಗಿ ಓದಿದರೆ ಅವರು ಬೇಗನೆ ಹಿಂದಿರುಗಿ ಬರುತ್ತಾರೆ.

ಯೇಷಾಂ ಭಾವೀನಿ ಕಾರ್ಯಾಣಿ ಲಬ್ಧುಂ ತ್ವರಯತೇ ಮನಃ ।
ತೈರ್ನರೈಃ ಪಠನೀಯಂ ನೈ ಜನ್ಮಕಾಂಡಂ ದಿನೇ ದಿನೇ ॥ ೧೪೦ ॥

ಪೂರ್ವೇ ದಿನೇ ಚೈಕವಾರಂ ದ್ವಿವಾರಂ ಚಾಪರೇ ದಿನೇ ।
ಏವಂ ನವದಿನಂ ವೃದ್ಧಿಸ್ತಥೈಕೇನ ಕ್ಷಯೋಽಪಿ ಹಿ ॥ ೧೪೧ ॥

ಕಾರ್ಯೋ ನರೈಃ ಸ್ವಸ್ಥಚಿತ್ತೈಸ್ತೇಷಾಂ ಕಾರ್ಯಂ ಭವಿಷ್ಯತಿ ।
ವರ್ಷಮೇಕಂ ಪಠೇದೇವಮಪುತ್ರೋಽಪಿ ಲಭೇತ್ಸುತಂ ॥ ೧೪೨ ॥

ಪುತ್ರಾರ್ಥೀ ಪ್ರಾಪ್ನುಯಾತ್ಪುತ್ರಂ ಧನಾರ್ಥೀ ಧನಮಾಪ್ನುಯಾತ್ ।
ಇಷ್ಟಾನ್ ಕಾಮಾಂಶ್ಚ ಕಾಮ್ಯಾರ್ಥೀ ಜನ್ಮಕಾಂಡಶ್ರವಾಲ್ಲಭೇತ್ ॥ ೧೪೩ ॥

---

೧೪೦ ಯಾರಾದರೂ, ಯಾವ ಕೆಲಸವನ್ನಾದರೂ ಸಾಧಿಸಿ ಸಿದ್ಧಿಸಿಕೊಳ್ಳ ಬೇಕಾದರೆ ಅವರು ಜನ್ಮಕಾಂಡವನ್ನು ಪ್ರತಿದಿನದಲ್ಲಿಯೂ ಓದುತ್ತಿರಬೇಕು.

೧೪೧-೧೪೨. ಹಾಗೆ ಓದುವಾಗ ಮೊದಲನೆಯದಿನ ಒಂದುಬಾರಿಯೂ, ಎರಡನೆಯದಿನ ಎರಡುಬಾರಿಯೂ, ಮೂರನೆಯದಿನ ಮೂರುಬಾರಿಯೂ ಈ ರೀತಿಯಾಗಿ ಒಂಭತ್ತುದಿನಗಳವರೆಗೆ ವೃದ್ಧಿಯನ್ನು ಮಾಡಿಕೊಂಡು ಓದುತ್ತಿರಬೇಕು. ಅದೇ ರೀತಿಯಲ್ಲಿ ಹತ್ತನೆಯದಿನ ಎಂಟುಬಾರಿ ಹನ್ನೊಂದನೆಯದಿನ ಏಳುಬಾರಿ ಈ ರೀತಿಯಾಗಿ ಕಡಿಮೆಮಾಡಿಕೊಳ್ಳುತ್ತ ಓದುತ್ತ ಬರಬೇಕು. ಸ್ವಸ್ಥಚಿತ್ತದಿಂದ ಈ ರೀತಿಯಾಗಿ ಆಚರಿಸಿದರೆ ಅವರ ಕೆಲಸವು ಕೈಗೂಡುತ್ತದೆ. ಒಂದುವರ್ಷದವರೆಗೆ ನಿತ್ಯವೂ ಓದುತ್ತ ಬಂದರೆ ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತವೆ.

೧೪೩. ಪುತ್ರಾರ್ಥಿಯು ಪುತ್ರನನ್ನೂ, ಧನಾರ್ಥಿಯು ಧನವನ್ನೂ ಹೊಂದುತ್ತಾರೆ. ಅಲ್ಲದೆ ಯಾವ ಯಾವ ಭಾವನೆಯಿಂದ ಯಾವ ಯಾವನು ಓದುತ್ತಾನೆಯೋ ಆ ಇಷ್ಟಗಳನ್ನು ಅವನು ಹೊಂದುತ್ತಾನೆ. ಶ್ರವಣಮಾಡುವವನೂ ಕೂಡ ಅದೇ ರೀತಿಯಾಗಿ ಫಲವನ್ನು ಹೊಂದುತ್ತಾನೆ.

ಆನಂದರಾಮಾಯಣಮಧ್ಯಸಂಸ್ಥಂ
ಶ್ರೀಜನ್ಮಕಾಂಡಂ ತನಯಪ್ರದಂ ಚ ।
ಪಾರಾಯಣಂ ಸಂಶ್ರವಣಂ ತಥಾ ವಾ
ಕರೋತಿ ಯೋ ವಾ ಸ ಲಭೇತ್ಸುಪುತ್ರಂ ॥ ೧೪೪ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಜನ್ಮಕಾಂಡೇ ಕುಶಲವಾದೀನಾಂ ಜನ್ಮಕಥನ ವ್ರತ ಬಂಧ ವಿಸ್ತಾರೋ ನಾಮ ನವಮಸ್ಸರ್ಗಸ್ಸಮಾಪ್ತಃ

---

೧೪೪. ಆನಂದರಾಮಾಯಣದ ಮಧ್ಯದಲ್ಲಿರುವ ಈ ಜನ್ಮಕಾಂಡವು ಮಕ್ಕಳನ್ನು ಕೊಡುತ್ತದೆ. ಯಾವನು ಇದನ್ನು ಪಾರಾಯಣಮಾಡುವನೋ ಅಥವಾ ಯಾವನು ಭಕ್ತಿಯಿಂದ ಕೇಳುವನೋ ಅವನು ಖಂಡಿತವಾಗಿಯೂ ಸುಪುತ್ರನನ್ನು ಹೊಂದುತ್ತಾನೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ ಕುಶಲವರ ಜನ್ಮಕಥನ, ವ್ರತಬಂಧವಿಸ್ತಾರವೆಂಬ ಒಂಭತ್ತನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಜನ್ಮಕಾಂಡದಲ್ಲಿ
॥ ಒಂಭತ್ತನೆಯ ಸರ್ಗದ ಸಾರಾಂಶವು ॥

ಶ್ರೀರಾಮನ ತಮ್ಮಂದಿರ ಹೆಂಡತಿಯರೂ ಗರ್ಭಿಣಿಯರಾದರು. ಸೀತೆಯು ಅವರಿಗೆ ಅನೇಕ ಉತ್ಸವಗಳನ್ನು ಮಾಡಿದಳು. ಅವರ ಬಯಕೆಗಳನ್ನೂ ಪೂರ್ಣ ಗೊಳಿಸಿದಳು. ಹೆತ್ತಮೇಲೆ ಜಾತಕರ್ಮ ನಾಮಕರಣಗಳು ಸಾಂಗವಾಗಿ ನೆರ ವೇರಿದುವು. ಇವರು ಕಾಲಾಂತರದಲ್ಲಿ ಮತ್ತೆ ಗರ್ಭಿಣಿಯರಾಗಿ ಹೆತ್ತರು. ಒಬ್ಬೊಬ್ಬರಿಗೆ ಇಬ್ಬಿಬ್ಬರು ಗಂಡುಮಕ್ಕಳಾದರು. ಇವರು ಬಾಲಭಾವದಿಂದ ತಮ್ಮ ತಮ್ಮ ತಾಯಿತಂದೆಯರನ್ನು ಬಹುವಾಗಿ ಆನಂದಗೊಳಿಸುತ್ತಿದ್ದರು.

ಒಂದುಸಾರಿ ಸಭೆಯಲ್ಲಿ ಕುಳಿತಿರುವಾಗ ರಾಮನ ಅಪೇಕ್ಷೆಯಂತೆ ವಸಿಷ್ಠನು ಕುಶನ ಸಾಮುದ್ರಿಕೆಯನ್ನು ನೋಡಿ ಅವನು ಸುಖಿಯೂ, ಚಕ್ರವರ್ತಿಯೂ ಆಗುವನೆಂದು ತಿಳಿಸಿದನು. ಮತ್ತು ಉಳಿದವರಿಗೂ ಸಾಮುದ್ರಿಕೆಯನ್ನು ಯಥಾ ಯೋಗ್ಯವಾಗಿ ಹೇಳಿದನು.

ಶ್ರೀರಾಮನು ತಾನು ತಮ್ಮಂದಿರೊಡನೆಯೂ, ಆ ಮಕ್ಕಳೊಡನೆಯೂ ಸುಖಪಡುತ್ತ ಅವರನ್ನು ಸುಖಪಡಿಸುತ್ತ ಹಾಸ್ಯಾದಿಗಳಿಂದ ಸಂತೋಷಪಡಿಸುತ್ತ ಆನಂದದಿಂದಿದ್ದನು.

ವಸಿಷ್ಠನ ಅಪ್ಪಣೆಯಂತೆ ಕುಶನಿಗೆ ಮೊದಲು ಮುಂಜಿಯನ್ನು ಮಾಡಿ ಎಲ್ಲರನ್ನೂ ಕರೆಸಿ ಅವರಿಗೆ ಬಹುವಾಗಿ ದಾನಮಾನಗಳನ್ನು ಮಾಡಿದನು. ಕೆಲವು ಕಾಲದಮೇಲೆ ಲವನಿಗೂ ಆಯಾ ಕಾಲಗಳಲ್ಲಿ ತಮ್ಮಂದಿರ ಮಕ್ಕಳಿಗೂ

ಮುಂಜಿಯನ್ನು ಮಾಡಿದನು. ಎಲ್ಲರೂ ವಸಿಷ್ಠನ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡತೊಡಗಿದರು.

ವಿದ್ಯೆಯೆಲ್ಲವೂ ಮುಗಿದಮೇಲೆ ಗುರುವಿಗೆ ಗುರುದಕ್ಷಿಣೆಯನ್ನು ಕೊಟ್ಟು ತೀರ್ಥಯಾತ್ರೆಗಳನ್ನು ಮಾಡಿಕೊಂಡು ವಿಜೃಂಭಣೆಯಿಂದ ಪಟ್ಟಣಕ್ಕೆ ಹಿಂದಿರುಗಿ ಬಂದರು.

ಅನಂತರ ರಾಮನು ಎಲ್ಲರೊಡನೆಯೂ ಸರಸಸಲ್ಲಾಪಗಳಿಂದಲೂ ಆಟ ಪಾಟಗಳಿಂದಲೂ ವಿನೋದಿಸುತ್ತ ಸುಖವಾಗಿದ್ದನು.

ಶ್ರೀಮದಾನಂದರಾಮಾಯಣೇ ಜನ್ಮಕಾಂಡಃ ಪಂಚಮಃ

ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ಐದನೆಯದಾದ ಜನ್ಮಕಾಂಡವು

ಮುಗಿದುದು

ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ
ಪ್ರೊಪ್ರೈಟರ್ ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. ತಾ|| 24-10-47

600